ಬೀದರ ಜಿಲ್ಲೆಯ ಬೇಡ ಬುಡಕಟ್ಟು: ಒಂದು ಅರ್ಥಶಾಸ್ತ್ರೀಯ ಅಧ್ಯಯನ

ಪಿಎಚ್.ಡಿ. ಪದವಿಗಾಗಿ
ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಮಹಾಪ್ರಬಂಧ

ಸಂಶೋಧಕ
ಸುಚಿತಾನಂದ ಕೆ. ಮಲ್ಕಾಪೂರೆ

ಮಾರ್ಗದರ್ಶಕರು
ಡಾ. ಕೆ. ಎಂ. ಮೈತ್ರಿ
ಪ್ರವಾಚಕರು
ಬುಡಕಟ್ಟು ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ ಹಂಪಿ
ವಿದ್ಯಾರಣ್ಯ-೫೮೩ ೨೭೬

ಬುಡಕಟ್ಟು ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ ಹಂಪಿ
ವಿದ್ಯಾರಣ್ಯ-೫೮೩ ೨೭೬

ಅಕ್ಟೋಬರ-೨೦೦೧

249

[illegible]

ಪಿಎಚ್.ಡಿ. ಪದವಿಗಾಗಿ
ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಮಹಾಪ್ರಬಂಧ

ಸಂಶೋಧಕಿ
ಮಹಾಲಕ್ಷ್ಮಿ ಕೆ. ಮಲ್ಲಾಪುರ

Dr. K.M. METRY B.A., M.A., Ph.D.
Professor
Department of Tribal Studies
Kannada University, Hampi
Vidyaranya - 583 276

ಮಾರ್ಗದರ್ಶಕರು
ಡಾ. ಕೆ. ಎಂ. ಮೇತ್ರಿ
ಪ್ರಾಧ್ಯಾಪಕರು
ಬುಡಕಟ್ಟು ಅಧ್ಯಯನ ವಿಭಾಗ
ಬುಡಕಟ್ಟು ವಿಜ್ಞಾನಗಳ ನಿಕಾಯ,
ಕನ್ನಡ ವಿಶ್ವವಿದ್ಯಾಲಯ ಹಂಪಿ
ವಿದ್ಯಾರಣ್ಯ-೫೮೩ ೨೭೬.

ಬುಡಕಟ್ಟು ಅಧ್ಯಯನ ವಿಭಾಗ
ಬುಡಕಟ್ಟು ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ ಹಂಪಿ
ವಿದ್ಯಾರಣ್ಯ-೫೮೩ ೨೭೬.

ಡಿಸೆಂಬರ್-೨೦೦೧

ಬೀದರ ಜಿಲ್ಲೆಯ ಬೇಡ ಬುಡಕಟ್ಟು: ಒಂದು ಅರ್ಥಶಾಸ್ತ್ರೀಯ ಅಧ್ಯಯನ

ಪಿಎಚ್.ಡಿ. ಪದವಿಗಾಗಿ
ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಮಹಾಪ್ರಬಂಧ

ಸಂಶೋಧಕ
ಸುಚಿತಾನಂದ ಕೆ. ಮಲ್ಕಾಪೂರೆ

ಮಾರ್ಗದರ್ಶಕರು
ಡಾ. ಕೆ. ಎಂ. ಮೈತ್ರಿ
ಪ್ರವಾಚಕರು
ಬುಡಕಟ್ಟು ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ ಹಂಪಿ
ವಿದ್ಯಾರಣ್ಯ-೫೮೩ ೨೭೬

ಬುಡಕಟ್ಟು ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ ಹಂಪಿ
ವಿದ್ಯಾರಣ್ಯ-೫೮೩ ೨೭೬

ಅಕ್ಟೋಬರ-೨೦೦೧

ಮಾರ್ಗದರ್ಶಕರ ಪ್ರಮಾಣ ಪತ್ರ

ಶ್ರೀ ಸುಚಿತಾನಂದ ಕೆ. ಮಲ್ಕಾಪುರೆ ಅವರು **"ಬೀದರ ಜಿಲ್ಲೆಯ ಬೇಡ ಬುಡಕಟ್ಟು: ಒಂದು ಅರ್ಥಶಾಸ್ತ್ರೀಯ ಅಧ್ಯಯನ"** ಎಂಬ ಮಹಾಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಗೊಳಿಸಿದ್ದಾರೆ. ಇದು ಅವರು ಸ್ವತಃ ಕ್ಷೇತ್ರಕಾರ್ಯ ಕೈಗೊಂಡು ಸಂಗ್ರಹಿಸಿದ ಸಂಶೋಧನ ಸಾಮಗ್ರಿಯ ಆಧಾರದ ಮೇಲೆ ರಚಿತವಾಗಿದೆ. ಇದನ್ನು ಈ ಮೊದಲು ಭಾಗಶಃ ಆಗಲಿ, ಪೂರ್ಣವಾಗಿಯಾಗಲಿ ಬೇರಾವುದೇ ಡಿಪ್ಲೋಮಾ ಅಥವಾ ಪದವಿಗಾಗಿ ಒಪ್ಪಿಸಿಲ್ಲ. ಈ ಮಹಾಪ್ರಬಂಧವನ್ನು ಪಿಎಚ್.ಡಿ. ಪದವಿ ತೀರ್ಪುಗಾರರ ಸಮಿತಿಯ ಅವಗಾಹನೆ ಮತ್ತು ತೀರ್ಪಿಗಾಗಿ ಒಪ್ಪಿಸಿಕೊಳ್ಳಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಮಾರ್ಗದರ್ಶಕರು

ಡಾ|| ಕೆ. ಎಂ. ಮೈತ್ರಿ
ಪ್ರವಾಚಕರು ಮತ್ತು ಮಾರ್ಗದರ್ಶಕರು
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ ಹಂಪಿ
ವಿದ್ಯಾರಣ್ಯ-೫೮೩ ೨೭೬

ಸಂಶೋಧಕರ ಪ್ರಮಾಣ ಪತ್ರ

“ಬೀದರ ಜಿಲ್ಲೆಯ ಬೇಡ ಬುಡಕಟ್ಟು: ಒಂದು ಅರ್ಥಶಾಸ್ತ್ರೀಯ ಅಧ್ಯಯನ” ಎಂಬ ಶೀರ್ಷಿಕೆಯ ಈ ಮಹಾಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲು ಡಾ. ಕೆ. ಎಂ. ಮೈತ್ರಿ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಈ ಮಹಾಪ್ರಬಂಧವನ್ನು ಅಥವಾ ಇದರ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿ ಇಲ್ಲವೆ ಇತರೆ ಉದ್ದೇಶಗಳಿಗೆ ಬಳಸಿಕೊಂಡಿಲ್ಲ ಎಂದು ಪ್ರಮಾಣೀಕರಿಸುತ್ತೇನೆ.

ದಿನಾಂಕ: ೩೧-೧೦-೨೦೦೧
ಸ್ಥಳ: ವಿದ್ಯಾರಣ್ಯ

ಸುಚಿತಾನಂದ ಕೆ. ಮಲ್ಕಾಪುರೆ
ಸಂಶೋಧನ ವಿದ್ಯಾರ್ಥಿ
ಬುಡಕಟ್ಟು ಅಧ್ಯಯನ ವಿಭಾಗ,
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬

ಕೃತಜ್ಞತೆಗಳು

ಕನ್ನಡ ವಿಶ್ವವಿದ್ಯಾಲಯದಲ್ಲಿ ಪಿಎಚ್.ಡಿ. ಅಧ್ಯಯನಕ್ಕೆ ಅವಕಾಶ ಕಲ್ಪಿಸಿಕೊಟ್ಟ ಹಿಂದಿನ ಕುಲಪತಿಗಳಾಗಿದ್ದ ಡಾ. ಎಂ. ಎಂ. ಕಲಬುರ್ಗಿ ಅವರಿಗೆ ಹಾಗೂ ಇಂದಿನ ಕುಲಪತಿಗಳಾದ ಡಾ. ಎಚ್.ಜೆ. ಲಕ್ಕಪ್ಪಗೌಡ ಅವರಿಗೆ, ಕುಲಸಚಿವರಾದ ಡಾ. ಕೆ.ವಿ. ನಾರಾಯಣ, ಅಧ್ಯಯನಾಂಗದ ನಿರ್ದೇಶಕರು, ಬುಡಕಟ್ಟು ಅಧ್ಯಯನ ಮುಖ್ಯಸ್ಥರಾದ ಪ್ರೊ. ಹಿ.ಚಿ. ಬೋರಲಿಂಗಯ್ಯ ಮತ್ತು ಬುಡಕಟ್ಟು ಅಧ್ಯಯನ ವಿಭಾಗದ ಎಲ್ಲ ಸಿಬ್ಬಂದಿಯವರಿಗೆ.

ಅಧ್ಯಯನದ ಪ್ರಾರಂಭದಿಂದ ಅಂತ್ಯದವರೆಗೆ ಸಕಾಲಿಕ ಸಲಹೆಗಳು, ನಿರಂತರ ಉತ್ತೇಜನ ನೀಡುವುದರೊಂದಿಗೆ ಮಹಾಪ್ರಬಂಧ ರೂಪುಗೊಳ್ಳುವಲ್ಲಿ ಮಾರ್ಗದರ್ಶನ ನೀಡಿದ ಗುರುಗಳಾದ ಡಾ. ಕೆ.ಎಂ. ಮೈತ್ರಿ ಹಾಗೂ ಅವರ ಶ್ರೀಮತಿ ದಾಕ್ಷಾಯಣಿ ಮೈತ್ರಿ ಅವರಿಗೆ.

ಪ್ರೀತಿಯಿಂದ ಸಾಕಿ ಸಲುಹಿದ್ದಲ್ಲದೆ, ಶಿಕ್ಷಣ ಕೊಡಿಸಿ ಬೆಳಕಿಗೆ ಬರಲು ಕಾರಣೀಕೃತರಾದ ಪೂಜ್ಯ ಮಾತೋಶ್ರೀ ಪಾರಭತಿಯವರಿಗೆ ಹಾಗೂ ಈ ಅಧ್ಯಯನ ಕೈಕೊಂಡು ಮಹಾಪ್ರಬಂಧ ಮುಗಿಸುವುದಕ್ಕೆ ಮುಖ್ಯ ಕಾರಣೀಕೃತರಾದ ಅಣ್ಣಂದಿರಾದರೂ, ತಂದೆಯಂತೆ ಪ್ರೀತಿಯಿಂದ ಬೆಳೆಸಿ ಸದಾ ನನ್ನ ಏಳಿಗೆ ಬಯಸುವ ಬಾಬುರಾವ ಮತ್ತು ಈಶ್ವರ ಮಲ್ಕಾಪುರೆ ಅವರಿಗೆ, ಸೋದರಿ ಶ್ರೀಮತಿ ಅನಿತಾ ಮತ್ತು ಭಾವನವರಾದ ಪರಮೇಶ್ವರ ಅವರಿಗೆ.

ಕ್ಷೇತ್ರಕಾರ್ಯದಲ್ಲಿ ಸಹಕಾರ ನೀಡಿದ ಗೆಳೆಯರಾದ ವೈಜನಾಥ ಪೂಜಾರಿ, ಶಿವರಾಜಯ್ಯ ಸ್ವಾಮಿ, ವಿಷ್ಣು ಮಾನೆ, ಅನಿಲ ಪದ್ಮೆ, ಬರಗಲಿ, ಬುಡಕಟ್ಟು ಬಂಧುಗಳಾದ ಡಾ. ಅಮರನಾಥ, ಶ್ರೀಮಂತಪ್ಪ ಕುನಾಳೆ, ಬಕ್ಕಪ್ಪಾ, ವೆಂಕಟ, ಬಾಲಾಜಿ, ಅನಿಲ ಬೊಸಲೆ, ಶಿವಾಜ ಬೋಗಿಲೆ, ಸತೀಶ, ಹಿತವಂತ, ರಮೇಶ, ಚಂದ್ರಕಾಂತ, ತಿಪ್ಪಣ್ಣಾ, ಶ್ರೀಶೈಲ ಜಾಟಿ, ಬಸವರಾಜ, ದತ್ತು, ಶ್ರೀಮತಿ ಶೋಭಾ, ಶರಣಬಸಪ್ಪ ಹತೆ, ಹಾಗೂ ಗೊಂಡ ಬುಡಕಟ್ಟಿನ ಯುವ ನಾಯಕರಾದ ನಾರಾಯಣ ರಾಂಪೂರೆ, ಬಂಡೆಪ್ಪಾ ಮೇತ್ರೆ, ಅಮೃತ ಹುಲಗುತ್ತಿ ಅವರಿಗೆ.

ಮಾಧ್ಯಮಿಕ ಸಂಪನ್ಮೂಲ ಕ್ರೋಢೀಕರಣಕ್ಕೆ ನೆರವಾದ ಡಾ. ಮಲ್ಲಿಕಾ ಘಂಟಿ, ಪ್ರೊ. ಜೋಗನ್ ಶಂಕರ್, ಬಸವರಾಜ ಧೂಳವಗೋಳ, ಡಾ. ಅಮಲಪ್ಪ ಹೊಸಮನಿ, ಪ್ರೊ. ಲಕ್ಷ್ಮಣ್ ತೆಲಗಾವಿ, ಪ್ರೊ. ಪಿ.ಕೆ. ಖಂಡೋಬಾ, ಡಾ. ಡಿ.ಬಿ. ನಾಯಕ, ಡಾ. ಎನ್.ಬಿ. ಬುಳ್ಳಾ, ಡಾ. ಅಶೋಕ ಕುಮಾರ ರಂಜೇರಿ, ಪ್ರದೀಪ ಹಡಲಗಿ, ಬಸಣ್ಣಾ ಡಿಗ್ಗಿ, ಗುಲಬರ್ಗಾ ವಿಶ್ವವಿದ್ಯಾಲಯದ ಉಪಗ್ರಂಥಪಾಲಕರಾದ ಎಮ್.ಟಿ. ಕಟ್ಟಿಮನಿ ಹಾಗೂ ಖೇಮಣ್ಣಾ ಅಲ್ದಿ, ಶಂಕರೆಪ್ಪಾ, ರಾಮಯ್ಯ, ಬಸವರಾಜ, ಶ್ರೀಮತಿ ಮಹಾದೇವಿ ಬಾಬಶೆಟ್ಟಿ, ಪ್ರಗತಿ ವರದಿಯನ್ನು ಗಣಕಕ್ಕೆ ಅಳವಡಿಸಿದ ಗೆಳೆಯರಾದ ಕಾಶಿನಾಥ ಪೂಜಾರಿ, ಈರಣ್ಣ ಹುಮನಾಬಾದ, ಶ್ರೀನಿವಾಸ ಕುಲಕರ್ಣಿ, ಅಶೋಕ ಕುಲಕರ್ಣಿ ಅವರಿಗೆ.

ಪ್ರಬಂಧ ರೂಪುಗೊಳ್ಳುವಲ್ಲಿ ಅಮೂಲ್ಯ ಸಲಹೆ-ಸೂಚನೆಗಳನ್ನು ನೀಡಿದ ಗುರುಗಳಾದ ಪ್ರೊ. ಎಂ.ಎಸ್. ಕಲ್ಲೂರ, ಡಾ. ಬಿ.ಎನ್. ನಿಂಬೂರ, ಡಾ. ಸಿ.ಕೆ. ದೇಗಾಂವಕರ್, ಡಾ. ವಾಸುದೇವ ಸೇಡಂ, ಪ್ರೊ. ಎಂ.ಎಸ್. ಮದುಗುಣಕಿ, ಸಿ.ಬಿ. ಪ್ರತಾಪುರೆ, ಶಂಕರ ಗೌರೆ, ಡಾ. ಬಂಡೆಪ್ಪಾ ಕಾಳಗಿ, ಕಲ್ಯಾಣರಾವ ಪಾಟೀಲ, ಎಲ್.ಎಚ್. ಹೂಗಾರ, ಬಸವರಾಜ ಇವಳೆ, ವೆಂಕಟ ಜಲಸಿಂಗೆ ಹಾಗೂ ಸಹ ಸಂಶೋಧಕರಾದ ಶ್ರೀಮತಿ ಹೇಮಲತಾ ವಡ್ಡೆ, ಚನ್ನಮಲ್ಲಪ್ಪ ಜುಬೇರ, ಸುಧೀರ ಪುಲೆ, ಬಂಡಯ್ಯ ಸ್ವಾಮಿ ಅವರಿಗೆ.

[illegible]

ಗೆಳೆಯರಾದ ಅನಿಲ ಬಿರಾದಾರ, ಗಿರೀಶ ಕಲೋಳ್ಳಿ, ರಾಜೇಂದ್ರ ಅತ್ರೆ, ಬಸವರಾಜ ಸ್ವಾಮಿ, ದಶರಥ ಮೇತ್ರೆ, ಶಿವರಾಜ ರಂಜೇರಿ, ಮನೋಹರ ರಾಸೂರೆ, ಗೌರಿಶಂಕರ, ವೆಂಕಟಗಿರಿ ದಳವಾಯಿ, ಕಲ್ಯಾಣಿ ಸಾವಳಗಿ, ಸುಭಾಷ್ ಸಂಗೋಳಗಿ, ಪದ್ಮರಾಜ ರಾಸಣಗಿ, ಶೌಕತ ಅಲಿ ಆಲೂರ, ಶಾಂತಪ್ಪ ಡಂಬಳ, ಕೆ. ವೆಂಕಟೇಶ, ದಯಾನಂದ, ಶಿವಕುಮಾರ, ಶರಣಪ್ಪಾ ತಮ್ಮಗೊಂಡ, ವಿಠಲ ಬರಗಾಲಿ ಅವರಿಗೆ.

ಗುಲಬರ್ಗಾ ವಿಶ್ವವಿದ್ಯಾಲಯದ ಸಹದ್ಯೋಗಿಗಳು ಮತ್ತು ಆತ್ಮೀಯ ಹಿರಿಯರಾದ ಡಾ. ಪಿ.ಬಿ. ಸಂತಪ್ಪನವರ್, ಡಾ. ಆರ್. ಡಿ. ಮಠದ್, ಡಾ. ಎಸ್.ಎಂ. ಗಡ್ಡದ, ಡಾ. ಎಸ್. ಎಚ್. ಕೌಂಟೆ, ಪ್ರೊ. ವಾಯ್.ಎಫ್. ನೀಲಗುಂದ, ಎಂ. ಮಾಣಿಕಪ್ಪ, ಮಾಳಪ್ಪ ಉದನೂರ, ಶಿವಶರಣಪ್ಪ ಯಲಗೊಂಡ, ಬಿ.ಎನ್. ಪಾಟೀಲ, ವಾಯ್.ಡಿ. ಜಗ್ಗಲರ್, ಅಶೋಕ ಹೊನಕೇರಿ, ದೇವಪ್ಪಾ ಮೇಟಿ, ದೇವಿಂದ್ರಪ್ಪ ತೇಲ್ಕರ, ಸಿದ್ದಪ್ಪಾ ಎಲ್., ಶ್ರೀಮಂತ ಸಾವಳಗಿ, ಅಶೋಕ ಜಗ್ಗಲಮಡ್ಡಿ, ಗೊಂಡ ರಾಜಪ್ಪಾ, ದೇವಿಂದ್ರಪ್ಪಾ ಪೂಜಾರಿ, ಮಾರುತಿ ಪಾಟೀಲ, ಕಲ್ಲಪ್ಪಾ, ಸೂರ್ಯಕಾಂತ, ಈರಣ್ಣಾ ಜಮಾದಾರ, ಮಲ್ಲಿಕಾರ್ಜುನ ಎಸ್., ಎಚ್. ಟಿ. ಸಂಗನ್, ಶಂಕರ ವೈದ್ಯ, ನರಸಪ್ಪ ತಂಬುರಿ, ಜಯರಾಜ ಮಾಣಿಕ, ಸಿ.ಎ. ಪಾಟೀಲ, ಮಾಣಕಪ್ಪ ಧನಗರ, ಹಣಮಂತ ಕವಾಸ, ಕಂಬಳಿ, ಭೀಮಶಂಕರ, ರಾಧೆಶ್ಯಾಮ ಮತ್ತು ಬಾಬುರಾವ ಸೂರ್ಯನೋರ, ಅವರಿಗೆ.

ಬೇಟಿಯಾದಾಗಲ್ಲೆಲ್ಲ ಪಿಎಚ್.ಡಿ. ಬೇಗ ಮುಗಿಸಿ ಎಂದು ಹುರಿದುಂಬಿಸುತ್ತಿದ್ದ ಹಿರಿಯರು ಹಾಗೂ ಆತ್ಮೀಯರಾದ ಪ್ರೊ. ಯಮನಪ್ಪಾ ಹುಜರತಿ, ಡಾ. ವ್ಹಿ.ಜಿ. ಪಾಟೀಲ, ಡಾ. ಪಾಂಡರಂಗ ಪೂಜಾರಿ, ಡಾ. ಅಮರೇಶ ಕೊಳ್ಳುರ, ಖಂಡೋಜಿ, ಯಶವಂತ ಹರಸೂರ, ಅಣ್ಣೆಪ್ಪಾ ಝುಬಾಡೆ, ಆಯ್. ಬಳಿತಕರ್, ಸೈಬಣ್ಣಾ ಪೂಜಾರಿ, ದೇವಿಂದ್ರಪ್ಪಾ ಕಾಳಗಿ, ಡಿ.ಬಿ. ಪಾಟೀಲ, ಬಸವರಾಜ ಪಾಟೀಲ ಕೊಂಕಲ, ಕೆ. ಪ್ರಧಾನಿ, ಲಕ್ಷ್ಮಣರಾವ ಪೋಲಿಸ ಪಾಟೀಲ, ವಸಂತಕುಮಾರ ಬನ್ನೂರಕರ್, ಶಿವಮಾಳಪ್ಪಾ, ಸಿದ್ದಣ್ಣಾ ವಡಗೇರ, ಮಲ್ಲಿಕಾರ್ಜುನ ಭಂಕೂರ, ಎಸ್.ಎಸ್. ಕಂಠಿಕರ್ ಮತ್ತು ಎನ್.ಬಿ. ತೊಂಟಾಪುರ ಅವರಿಗೆ.

ಬಡವರ ಬಂಧುಗಳು ಮತ್ತು ಧೀಮಂತ ನಾಯಕರಾದ ಬಿ. ನಾರಾಯಣರಾವ್, ಅಮೃತರಾವ್ ಚಿಮಕೋಡೆ ಹಾಗೂ ಬೀದರ ಜಿಲ್ಲಾ ಪಂಚಾಯತ ಅಧ್ಯಕ್ಷರಾದ ರಾಜಕುಮಾರ ಮೇತ್ರೆ ಅವರಿಗೆ.

ಅಧ್ಯಯನದುದ್ದಕ್ಕೂ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಸಹಕರಿಸಿದ ವಿಶ್ವವಿದ್ಯಾಲಯದ ಎಲ್ಲ ಸಿಬ್ಬಂದಿ ವರ್ಗಕ್ಕೆ ಮತ್ತು ಮುಖ್ಯ ಗ್ರಂಥಪಾಲಕರಾದ ಪ್ರೊ. ಜೆ. ಆರ್. ರಾಮಮೂರ್ತಿ ಅವರಿಗೆ.

ಈ ಮಹಾಪ್ರಬಂಧವನ್ನು ಅಂದವಾಗಿ ಗಣಕಯಂತ್ರದಲ್ಲಿ ಸಂಯೋಜಿಸಿದ ಕು. ಶರಣಕುಮಾರ ನ. ತಂಗಾ ಅವರಿಗೆ.

ದಿನಾಂಕ: ೩೧-೧೦-೨೦೦೧
ಸ್ಥಳ: ವಿದ್ಯಾರಣ್ಯ

ಸುಚಿತಾನಂದ ಕೆ. ಮಲ್ಕಾಪುರೆ
ಸಂಶೋಧನ ವಿದ್ಯಾರ್ಥಿ

ಪರಿವಿಡಿ

ಕೋಷ್ಠಕಗಳು

ಅಧ್ಯಾಯ-೧
ಸಂಶೋಧನೆಯ ವಿನ್ಯಾಸ ಮತ್ತು ವಿಧಾನ
(RESEARCH DESIGN AND METHODOLOGY)

೧.೧. ಪ್ರಸ್ತಾವನೆ (Introduction)

ಯಾವುದೇ ಬುಡಕಟ್ಟು ಜನಾಂಗದವರ ಸಾಮಾಜಿಕ ಅಥವಾ ಆರ್ಥಿಕ ವಿಶ್ಲೇಷಣೆಯನ್ನು ಮಾಡುವ ಮುನ್ನ 'ಬುಡಕಟ್ಟು' ಎಂಬ ಪರಿಭಾವನೆ (Concept)ಯನ್ನು ಅರ್ಥೈಸುವುದು ಅತ್ಯವಶ್ಯಕ. ಈ ಪರಿಭಾವನೆಯ ವ್ಯಾಖ್ಯಾನವನ್ನು (Definition) ಹಲವಾರು ಪರಿಣಿತರು ತಮ್ಮದೆ ಆದ ರೀತಿಯಲ್ಲಿ ಮಾಡಿರುತ್ತಾರೆ. ಹೊಸ ಎನ್‌ಸೈಕ್ಲೊಪಿಡಿಯಾ ಆಫ್ ಬ್ರಿಟಾನಿಕಾದ ಪ್ರಕಾರ 'ಬುಡಕಟ್ಟು' ಎಂದರೆ "ಒಂದೇ ತರನಾದ ಭಾಷೆಯನ್ನು ಮಾತನಾಡುವ, ಒಂದೇ ರೀತಿಯ ಸಾಮಾಜಿಕ ರಚನೆಯ ಕಾಯ್ದೆಗಳನ್ನು ಹೊಂದಿರುವ ಮತ್ತು ಒಂದು ಸಾರ್ವತ್ರಿಕ ಉದ್ದೇಶಕ್ಕಾಗಿ ಕೆಲಸ ಮಾಡುವ" ಜನಾಂಗ[೧]. ಮಜುಮದಾರ ಅವರು ಬುಡಕಟ್ಟನ್ನು ಈ ರೀತಿಯಾಗಿ ವ್ಯಾಖ್ಯಾನಿಸಿದ್ದಾರೆ[೨]. "ಪ್ರಾದೇಶಿಕ ಸಹಸಂಬಂಧ ಪಡೆದಿರುವ ಒಳಬಾಂಧವ್ಯ ವಿವಾಹ ಸಂಬಂಧವಿರುವ ಕರ್ತವ್ಯಗಳ ವಿಶೇಷೀಕರಣವಿರದ, ಬುಡಕಟ್ಟಿನ ಅಧಿಕಾರಿಗಳಿಂದ - ಇದು ಅನುವಂಶಿಕವಾಗಿರಬಹುದು ಅಥವಾ ಇಲ್ಲದಿರಬಹುದು. ಆಳ್ವಿಕೆಗೊಳಗಾಗಿರುವ ಭಾಷೆ ಅಥವಾ ಉಪಭಾಷೆಯಿಂದ ಒಂದಾಗಿರುವ ಬುಡಕಟ್ಟುಗಳು ಅಥವಾ ಜಾತಿಗಳಿಂದ ಸಾಮಾಜಿಕ ಅಂತರವನ್ನು ಗುರುತಿಸುವಂಥ; ಆದರೆ ಜಾತಿ ರಚನೆಯ ಪ್ರಸಂಗದಲ್ಲಿ ಯಾವುದೇ ಕಳಂಕಭಾವನೆ ಹೊಂದಿರದಂಥ: ಬುಡಕಟ್ಟು ಪರಂಪರೆಗಳು, ನಂಬಿಕೆಗಳು ಹಾಗೂ ಪದ್ಧತಿಗಳನ್ನು ಅನುಸರಿಸುವಂಥ ಇತರ ಮೂಲಗಳಿಂದ ಬರುವ ಭಾವನೆಗಳನ್ನು ದೇಶೀಕರಣ ಮಾಡಿಕೊಳ್ಳುವಂತಹ ಉದಾರ ಭಾವನೆಗಳನ್ನು ಹೊಂದಿರುವಂಥ; ಇವೆಲ್ಲಕ್ಕಿಂತ ಜನಾಂಗಿಕ ಹಾಗೂ ಪ್ರಾದೇಶಿಕ ಏಕತೆಯ ಸಮರೂಪತೆಯ ಬಗ್ಗೆ ಪ್ರಜ್ಞಾವಂತವಾಗಿರುವ ಸಾಮಾಜಿಕ ಗುಂಪೇ ಒಂದು ಬುಡಕಟ್ಟು.

"ಒಂದು ನಿರ್ದಿಷ್ಟ ಪ್ರದೇಶದಲ್ಲಿ ವಾಸಿಸುವ ಅಥವಾ ಅದನ್ನು ತನ್ನದೆಂದು ಹೇಳಿಕೊಳ್ಳುವಂತಹ, ರಾಜಕೀಯವಾಗಿ ಅಥವಾ ಸಾಮಾಜಿಕವಾಗಿ ಹೊಂದಿಕೊಂಡಿರುವ ಮತ್ತು ಸ್ವಯಂ ಆಡಳಿತವುಳ್ಳ ಗುಂಪೇ ಬುಡಕಟ್ಟು" ಎಂದು ಲಂಡನ್ನಿನ ರಾಯಲ್ ಆಂಥ್ರೋಪಲಾಜಿಕಲ್ ಇನ್‌ಸ್ಟಿಟ್ಯೂಟ್ ವ್ಯಾಖ್ಯಾನಿಸುತ್ತದೆ[೩]. ಸಂಕ್ಷಿಪ್ತದಲ್ಲಿ ಡಬ್ಲ್ಯೂ. ಹೆಚ್. ಪೆರಿ[೪] ಅವರು ಸ್ವಾರಸ್ಯಕರವಾಗಿ "ಒಂದು ಸ್ಥಳದಲ್ಲಿ ನೆಲೆಸಿಕೊಂಡು ಒಂದೇ ಭಾಷೆಯನ್ನಾಡುವ ಜನಸಮೂಹವನ್ನು ಆದಿವಾಸಿ ಸಮೂಹ" ಎಂದು ಕರೆದಿದ್ದಾರೆ.

ಮೇಲಿನ ವ್ಯಾಖ್ಯೆಗಳಿಂದ ನಮಗೆ ಕಂಡುಬರುವುದೇನೆಂದರೆ, ಬುಡಕಟ್ಟಿನ ಜನಾಂಗ ಒಂದು ಪ್ರದೇಶದಲ್ಲಿರುವ ಜನಾಂಗ; ಒಂದೇ ತೆರನಾದ ಪರಂಪರೆಗಳು, ನಂಬಿಕೆಗಳು ಹಾಗೂ ಪದ್ಧತಿಗಳನ್ನು ಅನುಸರಿಸುವ ಗುಂಪು ಇದು. ಒಟ್ಟಿನಲ್ಲಿ ನಿಸರ್ಗದ ಮಡಿಲಲ್ಲಿ ಇರುವವರು, ಪ್ರಕೃತಿಜನ್ಯ ಉತ್ಪನ್ನಗಳನ್ನೂ ಭಕ್ಷಿಸುವವರು ಮತ್ತು ತಮ್ಮದೆ ಆದ ಒಂದು ವಿಶಿಷ್ಠ ರೀತಿಯ ಸಾಮಾಜಿಕ ಜೀವನ ವಿಧಾನದಿಂದ ಬದುಕನ್ನು ಸಾಗಿಸುವವರು ಹಾಗೂ ಒಂದು ಸಾರ್ವತ್ರಿಕ ಉದ್ದೇಶವನ್ನು ಸಾಧಿಸಲು ಕೂಡಿ ಕೆಲಸ ಮಾಡುವ ಒಂದು ಜನಾಂಗಕ್ಕೆ ಬುಡಕಟ್ಟು ಜನಾಂಗ ಎನ್ನಬಹುದು.

೧.೨. ವಿಷಯ ನಿರೂಪಣೆ (Statement of the Problem)

ಕ್ರಿ. ಪೂ. ೫೦೦ ರಿಂದ ಪ್ರಸ್ತುತದವರೆಗಿನ ಕಾಲವನ್ನು ಆಧುನಿಕ ಕಾಲವೆಂದು ಕರೆಯಲಾಗುತ್ತದೆ. ಈ ಕಾಲದಲ್ಲಿಯೇ ಮಾನವ ಆರ್ಥಿಕವಾಗಿ ವಿಕಾಸಗೊಳ್ಳಲು ಪ್ರಯತ್ನ ಮಾಡಿದ್ದಾನೆ. ಕೃಷಿ, ಕೈಗಾರಿಕೆ ಮತ್ತು ಸಾರಿಗೆ ವ್ಯವಸ್ಥೆಗಳು ಜಗತಿನಾದ್ಯಂತ ಬೆಳೆಯುತ್ತಲಿವೆ ಮೊಟ್ಟಮೊದಲು ಗ್ರೇಟ್ ಬ್ರಿಟನಿನಲ್ಲಿ ಕೈಗಾರಿಕಾ ಕ್ರಾಂತಿ ಉಂಟಾಯಿತು. ತದನಂತರ ಐರೋಪ್ಯ ಖಂಡದ ಇತರ ದೇಶಗಳು ಉದ್ದಿಮೆ ಕ್ರಾಂತಿಯನ್ನು ಅನುಭವಿಸಿದವು. ಈ ದೇಶಗಳ ಔದ್ಯೋಗಿಕ ಕ್ರಾಂತಿ ಅಲ್ಲಿನ ಜನರ ಉದ್ಯೋಗಾವಕಾಶಗಳನ್ನು ಗಮನಾರ್ಹವಾಗಿ ಹೆಚ್ಚಿಸಿ ಅವರ ತಲಾ ಆದಾಯವನ್ನು ಕ್ರಮೇಣವಾಗಿ ಗಮನಾರ್ಹವಾಗಿ ವೃದ್ಧಿಪಡಿಸಿದವು. ಹೀಗಾಗಿ ಈ ದೇಶಗಳ ಜನರು ಆರ್ಥಿಕವಾಗಿ ಮುಂದೆ ಬಂದರು ಅಥವಾ ಶ್ರೀಮಂತರಾದರು.

ಭಾರತವು ಆಗಸ್ಟ್ ೧೯೪೭ರಲ್ಲಿ ಸ್ವಾತಂತ್ರ್ಯವನ್ನು ಪಡೆಯಿತು. ದೇಶದ ಆರ್ಥಿಕಾಭಿವೃದ್ಧಿಗಾಗಿ ಪಂಚವಾರ್ಷಿಕ ಯೋಜನೆಗಳು ೧೯೫೧ರಲ್ಲಿ ಪ್ರಾರಂಭಗೊಂಡವು. ಈಗಾಗಲೇ ನಾವು ೯ ಪಂಚವಾರ್ಷಿಕ ಯೋಜನೆಗಳನ್ನು ಮುಗಿಸಿರುತ್ತೇವೆ ಮತ್ತು ೧೦ನೇ ಪಂಚವಾರ್ಷಿಕ ಯೋಜನೆ ಇಷ್ಟರಲ್ಲಿಯೇ ಪ್ರಾರಂಭವಾಗಲಿದೆ. ಬ್ರಿಟಿಷರು ಭಾರತವನ್ನು ಬಿಟ್ಟು ಹೋದಾಗ ನಮ್ಮ ಆರ್ಥಿಕ ವ್ಯವಸ್ಥೆ ಅತ್ಯಂತ ಹಿಂದುಳಿದ್ದಿತು.

ಒಂದು ಆರ್ಥಿಕ ವ್ಯವಸ್ಥೆಯ ಮೂರು ರಂಗಗಳಾದ, ಪ್ರಥಮ ರಂಗ, ಕೃಷಿ ವಲಯ ಬಹಳ ಹಿಂದುಳಿದಿತ್ತು. ದ್ವಿತೀಯ ರಂಗ ಅಂದರೆ ಉದ್ದಿಮೆಗಳ ಬೆಳವಣಿಗೆ ಇರಲೇ ಇಲ್ಲ. ತೃತೀಯ ರಂಗದ ಸಾರಿಗೆ, ಸಂಪರ್ಕ, ಶಿಕ್ಷಣ ಬ್ಯಾಂಕಿಂಗ್ ವ್ಯವಸ್ಥೆ ಆಗ ತಾನೆ ಬೆಳೆಯಲು ಪ್ರಾರಂಭಿಸಿತ್ತು. ಈ ಮೂರು ರಂಗಗಳನ್ನು ಅಭಿವೃದ್ಧಿಪಡಿಸಿ ಭಾರತೀಯರಿಗೆ ಹೆಚ್ಚಿನ ಉದ್ಯೋಗಾವಕಾಶಗಳನ್ನು ನೀಡಿ ಅವರ ತಲಾ

ಆದಾಯವನ್ನು ಹೆಚ್ಚಿಸುವ ಪ್ರಯತ್ನ ಪಂಚವಾರ್ಷಿಕ ಯೋಜನೆಗಳ ಮೂಲಕ ೧೯೫೧ ರಿಂದ ಪ್ರಾರಂಭವಾಯಿತು.

ಭಾರತವು ವಿವಿಧ ಧರ್ಮ, ಜಾತಿ ಮತ್ತು ಬುಡಕಟ್ಟು ಸಮುದಾಯಗಳನ್ನುಳ್ಳ ಒಂದು ದೊಡ್ಡ ದೇಶ. ಮೇಲಾಗಿ ಈ ದೇಶ ಬುಡಕಟ್ಟು ಜನಾಂಗಗಳ ಒಂದು ನಿಸರ್ಗದತ್ತ ವಾಸಸ್ಥಳವಾಗಿದೆ[೫]. ಆದುದರಿಂದಲೇ ಭಾರತದಲ್ಲಿ ೪೨೭ ಬುಡಕಟ್ಟುಗಳನ್ನು ಗುರುತಿಸಲ್ಪಟ್ಟಿವೆ[೬]. ೧೯೯೧ರ ಜನಗಣತಿಯ ಪ್ರಕಾರ ಇದ್ದ ಬುಡಕಟ್ಟು ಜನಾಂಗಗಳ ಜನಸಂಖ್ಯೆಯನ್ನು ಕೋಷ್ಟಕ-೧ ನೀಡುತ್ತದೆ.

ಕೋಷ್ಟಕ-೧.೧: ಬೀದರ ಜಿಲ್ಲೆಯ ತಾಲೂಕುವಾರು ಬುಡಕಟ್ಟು ಜನಸಂಖ್ಯೆ (೧೯೯೧)

ತಾಲೂಕುಗಳು	**ಬುಡಕಟ್ಟು ಜನಸಂಖ್ಯೆ**	**ಜಿಲ್ಲೆಯ ಒಟ್ಟು ಜನಸಂಖ್ಯೆ (ಶೇಕಡಾ ಪ್ರಮಾಣ)**
ಔರಾದ (ಬ)	೧೨,೪೫೭	೫.೯೩
ಬಸವಕಲ್ಯಾಣ	೨೫,೮೪೨	೧೦.೪೯
ಭಾಲ್ಕಿ	೧೨,೭೨೫	೫.೭೧
ಬೀದರ	೨೧,೯೪೨	೬.೬೨
ಹುಮನಾಬಾದ	೩೧,೨೪೯	೧೨.೭೫
ಬೀದರ ಜಿಲ್ಲೆ	೧,೦೪,೨೧೫	೮.೩೦

ಕೃಪೆ ಭಾರತ ಜನಗಣತಿ ೧೯೯೧, ಸರಣಿ ೧೧, ಕರ್ನಾಟಕ: ಪ.ಜಾ., ಪ. ಪಂಗಡಗಳ ಅಂತಿಮ ಒಟ್ಟು ಜನಸಂಖ್ಯೆ. ಪುಟ. ೧೨-೧೩

ಪಂಚವಾರ್ಷಿಕ ಯೋಜನೆಗಳು ಈ ಬುಡಕಟ್ಟು ಜನಾಂಗದ ಜನರಿಗೆ ಆರ್ಥಿಕವಾಗಿ ನೆರವು ನೀಡುವಲ್ಲಿ ಇಂದಿಗೂ ಸಂಪೂರ್ಣ ಯಶಸ್ವಿಯಾಗಿಲ್ಲ. ವಿವಿಧ ಪಂಚವಾರ್ಷಿಕ ಯೋಜನೆಗಳಿಂದ ಮುಂದುವರಿದ ಜಾತಿ (Forward caste) ಜನ ಸಾಕಷ್ಟು ಆರ್ಥಿಕ ಪ್ರಯೋಜನ ಪಡೆದುಕೊಂಡು ಶ್ರೀಮಂತರಾಗಿದ್ದಾರೆ. ಇದಲ್ಲದೆ ಇವರೆಲ್ಲರೂ ಹಿಂದುಳಿದ ಮತ್ತು ಬುಡಕಟ್ಟು ಸಮುದಾಯಕ್ಕೆ ಒದಗಬೇಕಾಗಿದ್ದ ಸವಲತ್ತುಗಳನ್ನು ಸಹ ಅವರಿಗೆ ಹೋಗಗೊಡದೇ ತಾವೇ ಅನುಭವಿಸಿದ್ದಾರೆ ಮತ್ತು ಇಂದಿಗೂ ಅನುಭವಿಸುತ್ತಿದ್ದಾರೆ. ಆದುದರಿಂದ, ಈ ಜನರು ಆರ್ಥಿಕವಾಗಿ ಇನ್ನೂ ಹಿಂದುಳಿದಿರುತ್ತಾರೆ.

ಕರ್ನಾಟಕವು ಭಾರತದಂತೆ ಹಲವಾರು ಬುಡಕಟ್ಟು ಸಮುದಾಯಗಳನ್ನು ಹೊಂದಿದೆ ಈ ಸಮುದಾಯಗಳ ಜನರು ರಾಜ್ಯದ ಹಲವಾರು ಜಿಲ್ಲೆಗಳಲ್ಲಿ ಅಂದರೆ ಮೈಸೂರು, ಕೊಡಗು, ರಾಯಚೂರ,

ಚಿಕ್ಕಮಂಗಳೂರು, ಬಳ್ಳಾರಿ, ದಕ್ಷಿಣ ಕನ್ನಡ, ಚಿತ್ರದುರ್ಗ, ಗುಲಬರ್ಗಾ, ಬೀದರ ಮುಂತಾದ ಜಿಲ್ಲೆಗಳಲ್ಲಿ ವಾಸಿಸಿರುತ್ತಾರೆ. ೧೯೮೧ರ ಜನಗಣತಿಯ ಪ್ರಕಾರ ಬೀದರ ಜಿಲ್ಲೆಯಲ್ಲಿ ಒಟ್ಟು ೧೯ ಬುಡಕಟ್ಟುಗಳನ್ನು ಗುರುತಿಸಲಾಗಿತ್ತು ಮತ್ತು ಇವರ ಜನಸಂಖ್ಯೆ ೧೯೯೧ರ ಜನಗಣತಿಯ ಪ್ರಕಾರ ೧೦೪,೨೧೫ ಇತ್ತು[2] (ವಿವರಗಳಿಗೆ ಕೋಷ್ಠಕ-೧.೨ ನೋಡಿ). ಈ ಜಿಲ್ಲೆಯಲ್ಲಿ ಬುಡಕಟ್ಟು ಸಮುದಾಯಗಳು ಹಲವಾರು ಇವೆ ಇವುಗಳಲ್ಲಿ ಬೇಡ ಸಮುದಾಯ ಒಂದಾಗಿರುತ್ತದೆ. ಬೀದರ ಜಿಲ್ಲೆಯ ಬಸವಕಲ್ಯಾಣ, ಹುಮನಾಬಾದ, ಭಾಲ್ಕಿ ಮತ್ತು ಬೀದರ ಇವುಗಳಲ್ಲಿ ಬೇಡ ಬುಡಕಟ್ಟಿನವರು ವಾಸವಾಗಿರುತ್ತಾರೆ.

ಕೋಷ್ಠಕ-೧.೨ ೧೯೯೧ರ ಜನಗಣತಿಯ ಪ್ರಕಾರ ರಾಜ್ಯವಾರು ಪರಿಶಿಷ್ಟ ಪಂಗಡಗಳ ಪಟ್ಟಿ ಮತ್ತು ಅಕ್ಷರಸ್ಥರ ಮಟ್ಟ

ಕ್ರಮ ಸಂಖ್ಯೆ	ರಾಜ್ಯ/ಕೇಂದ್ರಾಡಳಿತ ಪ್ರದೇಶಗಳು	ಪರಿಶಿಷ್ಟ ಪಂಗಡಗಳು	ಒಟ್ಟು ಜನಸಂಖ್ಯೆಯಲ್ಲಿ ಪ.ಪಂ.ದ ಜನಸಂಖ್ಯೆ ಶೇಕಡಾವಾರು	ಅಕ್ಷರಸ್ಥರ ಶೇಕಡಾ
	ಭಾರತ ರಾಜ್ಯಗಳು	೬,೭೭,೫೮,೩೮೦	೮.೦೮	೨೯.೬೦
೧.	ಆಂದ್ರಪ್ರದೇಶ	೪೧,೯೯,೪೮೧	೬.೩೧	೧೭.೧೭
೨.	ಅರುಣಾಚಲ ಪ್ರದೇಶ	೫,೫೦,೩೫೧	೬೩.೫೮	೩೪.೪೫
೩.	ಆಸ್ಸಾಮ	೨೮,೭೪,೪೪೧	೧೨,೮೨	೧೯.೧೬
೪.	ಬೀಹಾರ	೬೬,೧೬,೯೧೪	೭.೬೬	೨೬.೭೮
೫.	ಗೋವಾ	೩೭೬	೦.೦೩	
೬.	ಗುಜರಾತ	೬೧,೬೧,೭೭೫	೧೪.೯೨	೩೬.೪೫
೭.	ಹರಿಯಾಣ	–	-	-
೮.	ಹಿಮಾಚಲ ಪ್ರದೇಶ	೨,೧೮,೩೪೯	೪.೨೨	೪೭.೦೯
೯.	ಜಮ್ಮು ಮತ್ತು ಕಾಶ್ಮೀರ	-	-	-
೧೦.	ಕರ್ನಾಟಕ	೧೯,೧೫,೬೯೧	೪.೨೬	೩೬.೦೧
೧೧.	ಕೇರಳ	೩,೨೦,೯೬೭	೧.೧೦	೫೭.೨೨
೧೨.	ಮಧ್ಯ ಪ್ರದೇಶ	೧,೫೩,೯೯,೦೩೪	೨೩.೨೭	೨೧.೫೪
೧೩.	ಮಹಾರಾಷ್ಟ್ರ	೭೩,೧೮,೨೮೧	೯.೨೭	೩೬.೭೯
೧೪.	ಮಣಿಪುರ	೬,೩೨,೧೭೩	೩೪.೪೦	೫೩.೬೩
೧೫.	ಮೇಘಾಲಯ	೧೫,೧೭,೯೨೭	೮೫.೫೨	೪೬.೭೧
೧೬.	ಮಿಜೋರಾಂ	೬,೫೩,೫೬೫	೯೪.೭೮	೮೨.೭೫

೧೭.	ನಾಗಾಲ್ಯಾಂಡ	೧೦,೬೦,೮೨೨	೮೭.೭೬	೬೦.೫೯
೧೮.	ಒರಿಸ್ಸಾ	೭೦,೩೨,೨೧೪	೨೨.೨೧	೨೨.೩೧
೧೯.	ಪಂಜಾಬ	–	–	–
೨೦.	ರಾಜಸ್ಥಾನ	೫೪,೭೪,೮೮೧	೧೨.೪೪	೧೯.೪೪
೨೧.	ಸಿಕ್ಕಿಮ	೯೦,೯೦೧	೨೨.೪೧	೫೯.೦೧
೨೨.	ತಮಿಳನಾಡು	೫,೭೪,೧೯೪	೧.೦೩	೨೭.೮೯
೨೩.	ತ್ರಿಪುರ	೮,೫೩,೩೪೫	೩೦.೯೪	೪೦.೩೭
೨೪.	ಉತ್ತರ ಪ್ರದೇಶ	೨,೮೭,೯೦೧	೦.೨೧	೩೫.೭೦
೨೫.	ಪಶ್ಚಿಮ ಬಂಗಾಳ	೩೮,೦೮,೭೬೦	೫.೫೯	೨೭.೭೮
	ಕೇಂದ್ರಾಡಳಿತ ಪ್ರದೇಶಗಳು			
೧.	ಅಂಡಮಾನ ಮತ್ತು ನಿಕೋಬಾರ	೨೬,೭೭೦	೯.೬೧	೫೬.೬೨
೨.	ಚಂಡಿಗ್ರಹ	–	–	–
೩.	ದಾದರ ಮತ್ತು ನಗರ ಹವೇಲಿ	೧,೦೯,೩೮೦	೭೮.೯೮	೨೬.೨೧
೪.	ದಮನ್ ಮತ್ತು ದಿಯೋ	೧೧,೭೨೪	೧೧.೭೬	೫೨.೭೦
೫.	ದಿಲ್ಲಿ	–	–	–
೬.	ಲಕ್ಷದ್ವೀಪ	೪೮,೧೬೩	೯೨.೩೧	೬೦.೫೮
೭.	ಪಾಂಡಿಚ್ಚೆರಿ	–	–	–

ಅಖಿಲ ಭಾರತದ ಒಟ್ಟು (ಜಮ್ಮು ಮತ್ತು ಕಾಶ್ಮೀರ ರಹಿತ) ೮೩೮೫.೮೪ ಲಕ್ಷ.
ಮೂಲ: ೧೯೯೧ರ ಜನಗಣತಿಯ ಪ್ರಕಾರ

ಇವರ ಬಗೆಗೆ ಇಲ್ಲಿಯವರೆಗೆ ಇತ್ತ ಸಾಮಾಜಿಕ, ಸಾಂಸ್ಕೃತಿಕವಾಗಿಯಾಗಲಿ ಅಥವಾ ಅತ್ತ ಆರ್ಥಿಕವಾಗಿಯಾಗಲಿ ಯಾರು ಅಧ್ಯಯನ ಕೈಕೊಂಡಿಲ್ಲ. ೨೧ನೇ ಶತಮಾನದಲ್ಲಿ ಮಾನವನ ಆರ್ಥಿಕ ಪ್ರಗತಿಗೆ ತುಲಾನಾತ್ಮಕವಾಗಿ ಅಧ್ಯಯನಿಸಲು ಹೆಚ್ಚು ಒತ್ತು ಕೊಡಬೇಕಾಗಿದೆ. ಅರ್ಥಶಾಸ್ತ್ರೀಯ ವಿದ್ಯಾರ್ಥಿಯಾದ ನಾನು ಈ ಸಮುದಾಯದ ಆರ್ಥಿಕ ಪರಿಸ್ಥಿತಿ ಮತ್ತು ಪ್ರಗತಿ ಇದರ ಬಗ್ಗೆ ಸವಿಸ್ತಾರವಾಗಿ ಅಧ್ಯಯನ ಕೈಕೊಳ್ಳಲು ಇಲ್ಲಿ ಶ್ರಮಿಸಿದ್ದೇನೆ.

೧.೩. ಅಧ್ಯಯನದ ಅವಶ್ಯಕತೆ (Justification of the Study)

ಮೇಲೆ ವಿವರಿಸಿದಂತೆ, ಬೀದರ ಜಿಲ್ಲೆಯ ಬೇಡ ಸಮುದಾಯದ ಆರ್ಥಿಕ ಪರಿಸ್ಥಿತಿಯ ಬಗ್ಗೆ ಇಲ್ಲಿಯವರೆಗೆ ಯಾವ ಅಧ್ಯಯನವು ನಡೆದಿರುವುದಿಲ್ಲ. ಇಂದಿನ ಪರಿಸ್ಥಿತಿಯಲ್ಲಿ ಒಂದು ಸಮುದಾಯಕ್ಕೆ ಸ್ಥಾನಮಾನ ಬರುವುದು ಅದರ ಆರ್ಥಿಕಾಭಿವೃದ್ಧಿಯಿಂದ ಮಾತ್ರ ಎಂದರೆ ತಪ್ಪಾಗಲಾರದು. "ದುಡಿದ್ದವನೇ ದೊಡ್ಡಪ್ಪ" ಎಂಬ ಲೋಕರೂಢಿ ಮಾತು ಇಂದು ಹೆಚ್ಚು ಪ್ರಸ್ತುತ. ಶ್ರೀಮಂತರಿಗೆ ಸಮಾಜದಲ್ಲಿ ಸ್ಥಾನಮಾನ, ಬಡವರಿಗಲ್ಲ, ಅದಕ್ಕೊಸ್ಕರವೇ ಕಡಿಮೆ ಸರಾಸರಿ ಆದಾಯ, ಆದಾಯದಲ್ಲಿ

ಹಂಚುವಿಕೆಯಲ್ಲಿಯನ ಅಸಮಾನತೆ ಮತ್ತು ಮೇಲು ಕೀಳೆಂಬ ಸಾಮಾಜಿಕ ವಿಭಜನೆ ಇವೆಲ್ಲವುಗಳು ಒಂದಕ್ಕೊಂದು ಪರಸ್ಪರ ಸಂಬಂಧವನ್ನು ಹೊಂದಿರುತ್ತವೆ. ಕಡಿಮೆ ಆದಾಯಗಳ ಮಟ್ಟಗಳನ್ನು ಹೊಂದಿರುವ ಜನ ಸಾಮಾಜಿಕವಾಗಿ ಮೇಲಿನ ದರ್ಜೆಯನ್ನು ಪಡೆಯುವುದು ಸಾಧ್ಯವಿಲ್ಲ. ಸಾಮಾಜಿಕ ಮೇಲು-ಕೀಳು ಆರ್ಥಿಕ ಮೇಲು-ಕೀಳುಗಳಿಂದ ಉಂಟಾಗುತ್ತದೆ ಎಂದು ಪ್ರೊಫೆಸರ್ ಗುನ್ನಾಡ ಮಿರಡಲ್‌ರು ತಮ್ಮ ಸುಪ್ರಸಿದ್ಧ ಗ್ರಂಥವಾದ 'ಏಷಿಯನ್ ಡ್ರಾಮಾ'[5]ದಲ್ಲಿ ಅಭಿಪ್ರಾಯ ಪಟ್ಟಿರುತ್ತಾರೆ. ಬೇಡ ಸಮುದಾಯದವರು ಆರ್ಥಿಕವಾಗಿ ಹಿಂದುಳಿದಿರುವುದರಿಂದ ಇವರಿಗೆ ಸಮಾಜದಲ್ಲಿನ ಸ್ಥಾನ ಕಡಿಮೆಯಾಗಿದೆ. ಮೇಲಾಗಿ ಒಬ್ಬ ವ್ಯಕ್ತಿ ಅಥವಾ ಒಂದು ಸಮುದಾಯ ತನ್ನಲ್ಲಿ ಹುದುಗಿರುವ ಎಲ್ಲ ಸಾಮರ್ಥ್ಯಗಳನ್ನು ಸರಿಯಾಗಿ ಉಪಯೋಗಿಸಿಕೊಳ್ಳಲು ಒಬ್ಬ ವ್ಯಕ್ತಿ ಆ ಸಮುದಾಯ ಹಸಿವಿನಿಂದ ನರಳಬಾರದು. ಆಹಾರದ ಜೊತೆಗೆ ವ್ಯಕ್ತಿಗಳಿಗೆ ಸುಖಕರ ವಸ್ತುಗಳ (Comforts) ಮತ್ತು ವಿಲಾಸೀಕರ ವಸ್ತುಗಳು (Luxuries) ಸಹ ಬೇಕು. ಭಾರತೀಯ ಪಂಚವಾರ್ಷಿಕ ಯೋಜನೆಗಳು ಇವೆಲ್ಲವುಗಳನ್ನು ಎಲ್ಲ ಸಮುದಾಯದ ಜನರಿಗೆ ತಕ್ಕಮಟ್ಟಿಗೆ ಒದಗಿಸಿಕೊಡಲು ಪ್ರಯತ್ನಿಸುತ್ತಿವೆ. ಬೀದರ ಜಿಲ್ಲೆಯ ಬೇಡ ಬುಡಕಟ್ಟಿನವರ ಆರ್ಥಿಕ ಪರಿಸ್ಥಿತಿಯನ್ನು ಕೂಲಂಕುಷವಾಗಿ ಕಂಡು ಕೊಳ್ಳುವುದು ನನ್ನಂಥಾ ಅರ್ಥಶಾಸ್ತ್ರದ ವಿದ್ಯಾರ್ಥಿಯೊಬ್ಬನ ಸಹಜ ಹಂಬಲ (ಜಿಜ್ಞಾಸೆ). ಆದುದರಿಂದ ಹಿಂದೆ ಕೈಕೊಳ್ಳಲಾರದಂತಹ ಬೇಡ ಸಮುದಾಯದವರ ಆರ್ಥಿಕ ಅಧ್ಯಯನವನ್ನು ಮಾಡುವ ಪ್ರಯತ್ನ ಇಲ್ಲಿ ಮಾಡಲಾಗಿದೆ.

ಬೇಡ ಸಮುದಾಯದ ಜನರು ಪಂಚವಾರ್ಷಿಕ ಯೋಜನೆಗಳಲ್ಲಿನ ಹಲವಾರು ಬಡತನ ನಿರ್ಮೂಲನಾ ಮತ್ತು ಉದ್ಯೋಗ ನೀಡಿಕೆಯ ಕಾರ್ಯಕ್ರಮಗಳಿಂದ ಎಷ್ಟರಮಟ್ಟಿಗೆ ಉಪಯೋಗವನ್ನು ಹೊಂದಿರುತ್ತಾರೆ ಎನ್ನುವ ಸತ್ಯವನ್ನು ಹೊರತಂದು ಮುಂದೆ ಕೈಕೊಳ್ಳಬೇಕಾದಂತಹ ಪ್ರಯತ್ನಗಳನ್ನು ಸಹ ಇಲ್ಲಿ ವಿವರಿಸುವುದು ಅವಶ್ಯಕವಾಗಿದೆ. ಇವರ ಆರ್ಥಿಕ ಆಶೋತ್ತರಗಳನ್ನು (expectations) ಕಂಡುಕೊಂಡು ಇವರ ಆರ್ಥಿಕಾಭಿವೃದ್ಧಿಗೆ ಮಾರ್ಗಸೂಚಿಗಳನ್ನು ನೀಡುವುದು ಅತ್ಯವಶ್ಯಕವಾದುದರಿಂದ ಇಂತಹ ಪ್ರಯಾಸವನ್ನು ಸಹ ಕೈಕೊಳ್ಳಲಾಗಿದೆ.

೧.೪ ಬುಡಕ್ಕಟ್ಟು ಸಾಹಿತ್ಯದ ಪರಾಮರ್ಶೆ (Review of Literature)

ರಾಷ್ಟ್ರ ಮತ್ತು ರಾಜ್ಯ ಮಟ್ಟದಲ್ಲಿ ಹಲವಾರು ಅಧ್ಯಯನಗಳು ಈಗಾಗಲೇ ನಡೆದಿವೆ. ಇವು ಪರಿಶಿಷ್ಠ ಜನಾಂಗಗಳ ಸಾಮಾಜಿಕ ಮತ್ತು ಸಾಂಸ್ಕೃತಿಕ ಅಧ್ಯಯನಗಳಾವೆ. ಈ ಅಧ್ಯಯನಗಳನ್ನು ಕೈಕೊಂಡ ವಿದೇಶಿಯರು ಈ ಬುಡಕಟ್ಟುಗಳ ಮೂಲ ಸಾಮಾಜಿಕ ಹಾಗೂ ಸಾಂಸ್ಕೃತಿಕ ಹಿನ್ನೆಲೆಯ ಬಗ್ಗೆ ಹೆಚ್ಚಾಗಿ ಅಭ್ಯಸಿಸಿದ್ದಾರೆ. ಅಪರೂಪಕ್ಕೆ ಇಲ್ಲೊಂದು ಅಲ್ಲೊಂದು ಅಧ್ಯಯನಗಳಲ್ಲಿ ಮಾತ್ರ ಈ ಜನಾಂಗಗಳ ಆರ್ಥಿಕ

ವಿಷಯಗಳ ಬಗೆಗೆ ಸ್ವಲ್ಪ ವಿವರಣೆ ಸಿಗುತ್ತದೆ. ಉದಾಹರಣೆಗೆ ಮೆಹತಾ ಬಿ.ಎಚ್. (೧೯೮೪)[೯], ಕಲ್ಲೂರ ಎಮ್.ಎಸ್. ಮತ್ತು ದೇಗಾಂವಕರ ಸಿ.ಕೆ. (೧೯೯೩)[೧೦], ದೇವಮಾನಿ (೧೯೯೩)[೧೧], ಪುನಾಲೇಕರ (೧೯೯೩)[೧೨], ವಸಂತ ತೆಲಕುಂಟ್ರೆ (೧೯೯೩)[೧೩], ಸುಮಿತ್ರಾ ಗೌವಯಿಕರ (೧೯೯೩)[೧೪], ಅಂಬೇವಾಡಿಕರ ಆರ್. ಎಮ್. (೧೯೯೩)[೧೫], ಗಂಗಾಧರ ಕೆ.ಎನ್. (೧೯೯೩)[೧೬], ಹನುಮಂತರಾಯಪ್ಪ ಪಿ. (೧೯೯೩)[೧೭], ಇವರೆಲ್ಲರು ಪರಿಶಿಷ್ಠರ ಆರ್ಥಿಕ ಅಂಶಗಳ ಅಧ್ಯಯನವನ್ನು ಮಾಡಿರುತ್ತಾರೆ. ಈ ಅಧ್ಯಯನಗಳು ಭಾರತ ದೇಶದ ಹಲವಾರು ರಾಜ್ಯಗಳಲ್ಲಿರುವ ವಿವಿಧ ಪರಿಶಿಷ್ಟರ ಆರ್ಥಿಕ ಸ್ಥಿತಿಗತಿಗಳನ್ನು ವಿವರಿಸುತ್ತವೆ ಮತ್ತು ಇವರನ್ನು ಆರ್ಥಿಕವಾಗಿ ಮುಂದೆ ತರಲು ಸಲಹೆಗಳನ್ನು ಸಹ ನೀಡುತ್ತವೆ.

ಸ್ವಾತಂತ್ರ್ಯದ ನಂತರ ಭಾರತೀಯ ಸಂಶೋಧನಕಾರರು ಇವರ ಬಗ್ಗೆ ಅಭ್ಯಸಿಸಿದರೂ ಇವರು ಸಹ ವಿದೇಶಿಯರನ್ನೇ ಅನುಸರಿಸಿ ಅವರ ಮೂಲ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಹಿನ್ನೆಲೆಯ ಬಗ್ಗೆ ಹೆಚ್ಚಾಗಿ ಅಭ್ಯಸಿಸಿ ಲೇಖನಗಳನ್ನು, ಗ್ರಂಥಗಳನ್ನು[೧೮] ಮತ್ತು ಮಹಾಪ್ರಬಂಧಗಳನ್ನು[೧೯] ಪ್ರಕಟಮಾಡಿದ್ದಾರೆ. ಅಪರೂಪಕ್ಕೆ ಒಟ್ಟಿನಲ್ಲಿ ಲೇಖಕರು ಮೊದಲಿನಿಂದಲೂ ತಮ್ಮ ಬುಡಕಟ್ಟು ಅಧ್ಯಯನಗಳಲ್ಲಿ ಅವರ ಮೂಲ, ಸಾಂಸ್ಕೃತಿಕ ಹಾಗೂ ಸಾಮಾಜಿಕ ಪರಿಸರವನ್ನೇ ಹೆಚ್ಚಾಗಿ ಅಭ್ಯಶಿಸಿರುತ್ತಾರೆ. ಥರ್ಸ್ಟನ್ಸ್ (೧೯೦೯)[೨೦], ರಾಯ (೧೯೧೨)[೨೧], ಎಡವರ್ಡ್ ಗೋರ್ಸ್ಮ್ಯಾನ (೧೯೨೩)[೨೨], ಅನಂತಕೃಷ್ಣ ಐಯರ್ (೧೯೩೫)[೨೩], ಮಜುಮದಾರ (೧೯೫೦-೫೬)[೨೪], ರಾಬರ್ಟ ಎಚ್. ಲೂಯಿ (೧೯೫೩)[೨೫], ದುಬೆ (೧೯೫೬ ಮತ್ತು ೧೯೬೨)[೨೬], ಶ್ರೀನಿವಾಸ ಎಮ್. ಎನ್. (೧೯೬೨)[೨೭], ಘೋಸ್ (೧೯೬೩ ಮತ್ತು ೭೦)[೨೮], ವಿಧ್ಯಾರ್ಥಿ (೧೯೬೬-೭೦)[೨೯], ಸಿನ್ಹ (೧೯೬೮)[೩೦], ಹೆಗ್ಗಡೆ ಎಲ್.ಕೆ. (೧೯೭೭)[೩೧], ಬಹದ್ದೂರ ಕೆ.ಪಿ. (೧೯೭೮)[೩೨], ಸಚ್ಚಿದಾನಂದ (೧೯೭೯)[೩೩], ಕೃಷ್ಣಯ್ಯ ಎಸ್.ಎ. (೧೯೮೭)[೩೪], ಐಯರ್ ಎಲ್.ಕೆ.ಎ. (೧೯೮೮)[೩೫], ಮೈತ್ರಿ ಕೆ.ಎಮ್. (೧೯೯೪)[೩೬], ರಾವ್ ರವೀಂದ್ರನಾಥ ವಾಯ್. (೧೯೯೫)[೩೭], ನಬಾಡಿ ಎ.ವ್ಹಿ. (೧೯೯೮)[೩೮].

ಹಲವಾರು ವಿದ್ವಾಂಸರು ಬುಡಕಟ್ಟು ಸಮುದಾಯಗಳ ಆರ್ಥಿಕ ಜೀವನದ ಬಗ್ಗೆ ಏಕೆ ಬರೆಯಲಿಲ್ಲ ಎಂಬುದಕ್ಕೆ ಒಂದು ಬಲವಾದ ಕಾರಣವಿದೆ. ಭಾರತದಲ್ಲಿ ಬುಡಕಟ್ಟುಗಳ ಆರ್ಥಿಕ ಪರಿಸ್ಥಿತಿ ಬ್ರಿಟಿಷರ ಆಳ್ವಿಕೆಗೆ ಮೊದಲು ಸರಿಯಾಗಿಯೇ ಇತ್ತು. ಏಕೆಂದರೆ, ಈ ಬುಡಕಟ್ಟುಗಳು ಸ್ವತಂತ್ರವಾಗಿದ್ದವು, ವಿಶೇಷತ: ಮುಸ್ಲಿಂರ ಹಲವಾರು ಶತಮಾನಗಳ ಆಳ್ವಿಕೆಯ ಕಾಲದಲ್ಲಿ ಬುಡಕಟ್ಟುಗಳು ಸ್ವತಂತ್ರವಾಗಿದ್ದನ್ನು ನಾವು ಇಲ್ಲಿ ಸ್ಮರಿಸಬಹುದು. ಬ್ರಿಟಿಷರು ಬಂದನಂತರ ಭಾರತದಾದ್ಯಂತ ಏಕರೀತಿಯ ಆಳ್ವಿಕೆಯ ಕ್ರಮ ಜಾರಿಗೆ ಬಂತು. ಕಾಲಕ್ರಮೇಣ ಕೈಗಾರಿಕಾ ಕ್ರಾಂತಿಯಿಂದಾಗಿ ಬ್ರಿಟಿಷರು ಭಾರತದಾದ್ಯಂತ ರೈಲ್ವೆ ಸಂಪರ್ಕ ಏರ್ಪಡಿಸಲು ರಸ್ತೆಗಳನ್ನು ಮಾಡಿಸಲು ಆರಂಭಿಸಿದರು. ಇದರಿಂದಾಗಿ ಕಾಡುಗಳನ್ನು ಕಡಿಯಬೇಕಾಯಿತು. ಸಂಪರ್ಕ

ಸಾಧನಗಳು ಹೆಚ್ಚಾದಂತೆಲ್ಲಾ ಪರ್ವತಾರಣ್ಯಗಳಲ್ಲಿ ವಾಸವಾಗಿದ್ದ ಬುಡಕಟ್ಟುಗಳ ಜನ ಅನಿವಾರ್ಯವಾಗಿ ಇತರ ಜನಗಳ ಸಂಪರ್ಕಕ್ಕೆ ಬರಬೇಕಾಯಿತು. ಈ ಮಧ್ಯೆ ಕ್ರಿಶ್ಚಿಯನ್ ಪಾದ್ರಿಗಳು ಬುಡಕಟ್ಟು ಜನರಿಗೆ ಕ್ರೈಸ್ತ ಧರ್ಮದ ಬೋಧನೆಯನ್ನು ಮಾಡುವುದರ ಮೂಲಕ ಅವರನ್ನು ತಮ್ಮ ಧರ್ಮಕ್ಕೆ ಪರಿವರ್ತಿಸಲು ಯತ್ನಿಸಿದರು. ಬುಡಕಟ್ಟುಗಳ ಕೆಲವು ಜನ ಕ್ರಿಶ್ಚಿಯನ್ನರಾಗಿ ಪರಿವರ್ತಿತರಾದುದು ಉಂಟು. ಆದರೆ ಭಾರತದ ಬುಡಕಟ್ಟುಗಳ ಮೇಲೆ ತೀವ್ರ ಪರಿಣಾಮ ಉಂಟಾಗಲು ಬ್ರಿಟಿಷರು ಈ ಬುಡಕಟ್ಟು ಜನರಿಗೆ ಸೇರಿದ ಪರ್ವತಾರಣ್ಯ ಪ್ರದೇಶಗಳನ್ನು ಇವರಿಂದ ಕಿತ್ತುಕೊಂಡಿದ್ದು ಕಾರಣವಾಯಿತು. ಇದರಿಂದಾಗಿ ಸ್ಥಳಾಂತರ ಬೇಸಾಯ ಮಾಡುತ್ತಿದ್ದ ಹಲವಾರು ಬುಡಕಟ್ಟುಗಳಿಗೆ ಭೂಮಿಯಿಲ್ಲದಂತಾಯಿತು. ಈ ಸಂದರ್ಭದಲ್ಲಿಯೇ ಬ್ರಿಟಿಷ್ ಜನ ಟೀ ತೋಟಗಳ ಒಡೆಯರಾದರು, ಗಣಿಗಳ ಮಾಲಿಕರಾದರು, ಇವುಗಳಲ್ಲಿ ಕೆಲಸ ಮಾಡಲು ಕೆಲಸಗಾರರು ಬೇಕಾದರು. ಭೂಮಿಯನ್ನು ಆ ವೇಳೆಗಾಗಲೇ ಕಳೆದುಕೊಂಡಿದ್ದ ಬುಡಕಟ್ಟು ಜನ ಟೀ ತೋಟಗಳಲ್ಲಿ ಗಣಿಗಳಲ್ಲಿ ಕೆಲಸಗಾರರಾಗಿ ಸೇರಿದರು[೩೯].

ಮೇಲೆ ವಿವರಿಸಿದಂತೆ, ಇಲ್ಲಿಯವರೆಗೆ ಕೈಕೊಂಡ ಅಧ್ಯಯನಗಳು ಹೆಚ್ಚಾಗಿ ಆರ್ಥಿಕ ಅಧ್ಯಯನಗಳಲ್ಲ ಬೀದರ ಜಿಲ್ಲೆಯ ಬೇಡ ಸಮುದಾಯದವರ ಆರ್ಥಿಕತೆಯ ಸಮಗ್ರ ಚಿತ್ರಣವನ್ನು ಇಲ್ಲಿಯವರೆಗೆ ಯಾವ ಅಧ್ಯಯನಗಳು ನಡೆದಿಲ್ಲ. ಇದೊಂದು 'ಸಂಶೋಧನೆ ಕೊರತೆ' (Research Gap). ಈ ಕೊರತೆಯನ್ನು ನೀಗಿಸಲು ಬೀದರ ಜಿಲ್ಲೆಯ ಬೇಡ ಸಮುದಾಯದ ಆರ್ಥಿಕ ವಿಶ್ಲೇಷಣೆಯನ್ನು ಮಾಡಲು ಪ್ರಮಾಣಿಕವಾಗಿ ಪ್ರಯತ್ನಿಸಲಾಗಿದೆ.

೧.೫. ಅಧ್ಯಯನ ಉದ್ದೇಶಗಳು (Objectives of the study)

ಅಧ್ಯಯನದ ಮೂರು ಪ್ರಮುಖ ಉದ್ದೇಶಗಳು ಇಂತಿವೆ:

೧. ಬೀದರ ಜಿಲ್ಲೆಯ ಬೇಡ ಜನಾಂಗದ ಆರ್ಥಿಕ ಪರಿಸ್ಥಿತಿಯನ್ನು ಅರ್ಥಶಾಸ್ತ್ರೀಯ ಹಿನ್ನೆಲೆಯಲ್ಲಿ ವಿಶ್ಲೇಷಣೆ ಮಾಡುವುದು.

೨. ಆರ್ಥಿಕ ಕುಂದುಕೊರತೆಗಳ ನಿರೂಪಣೆ.

೩. ಆರ್ಥಿಕವಾಗಿ ಈ ಸಮುದಾಯವನ್ನು ಮುಂದು ತರಲು ಯೋಗ್ಯ ಸಲಹೆಗಳನ್ನು ನೀಡುವುದು.

ಆರ್ಥಿಕ ಪರಿಸ್ಥಿತಿ ಅಧ್ಯಯನದ ಹಿನ್ನೆಲೆಯಾಗಿ ಇಲ್ಲಿ ಬೇಡ ಸಮುದಾಯದ ಸಾಮಾನ್ಯ ಲಕ್ಷಣಗಳ (General Features) ವಿವರಣೆಯನ್ನು ನೀಡಲಾಗಿದೆ. ಮೊದಲನೆಯ ಉದ್ದೇಶವನ್ನು ಸುದೀರ್ಘವಾಗಿ

ನಿರೂಪಿಸಲು ಹಲವಾರು ಉಪ-ಉದ್ದೇಶಗಳಲ್ಲಿ (Sub-objectives or Goals) ವಿಂಗಡಿಸಲಾಗಿದೆ. ಇವುಗಳು ಈ ಕೆಳಗಿನಂತಿವೆ.

೧. ಬುಡಕಟ್ಟಿನ ಕೃಷಿ ಅರ್ಥವ್ಯವಸ್ಥೆ

೨. ಬುಡಕಟ್ಟಿನ ಉದ್ದಿಮೆ ಹಾಗೂ ಸೇವಾ ಕ್ಷೇತ್ರದಲ್ಲಿನ ಭಾಗವಹಿಸುವಿಕೆ.

೩. ಬುಡಕಟ್ಟಿನ ಉಪಕಸುಬುಗಳ ಆರ್ಥಿಕತೆ

೪. ಬುಡಕಟ್ಟಿನ ಆದಾಯದ ಬಗೆಗಿನ ವಿವರಣೆ

೫. ಬುಡಕಟ್ಟಿನ ಉಪಭೋಗ ಬಗೆಗಿನ ವಿವರಣೆ

೬. ಬುಡಕಟ್ಟಿನ ಉಳಿತಾಯ ಬಗೆಗಿನ ವಿವರಣೆ

೭. ಬುಡಕಟ್ಟಿನವರಿಗೆ ಸರಕಾರಿ ಯೋಜನೆಗಳಿಂದಾದ ಪ್ರಯೋಜನಗಳು

೮. ಸರಕಾರದಿಂದ ಇಟ್ಟುಕೊಂಡಿರುವ ಆಶೋತ್ತರಗಳು.

ಊಹೆಗಳು

೧. ಬೇಡ ಸಮುದಾಯದವರ ಆರ್ಥಿಕ ಪರಿಸ್ಥಿತಿ ಇಂದಿಗೂ ಶೋಚನೀಯವಾಗಿದೆ ಮತ್ತು ಸರಕಾರದ ನೆರವಿನ ಯೋಜನೆಗಳಿಂದ ಅವರಿಗೆ ಅಷ್ಟೊಂದು ಪ್ರಯೋಜನವಾಗಿಲ್ಲ.

೨. ವಿವಿಧ ಗಾತ್ರಗಳ ಭೂ-ಹಿಡುವಳಿಗಳನ್ನುಳ್ಳ ರೈತರಲ್ಲಿ, ದೊಡ್ಡ ಗಾತ್ರದ ಭೂ-ಹಿಡುವಳಿಗಳ ರೈತರನ್ನು ಹೊರತು ಪಡಿಸಿ, ಉಳಿದ ಭೂ-ಹಿಡುವಳಿಗಳ ರೈತರೆಲ್ಲರ ಆರ್ಥಿಕ ಪರಿಸ್ಥಿತಿ ಸುಧಾರಿಸಿಲ್ಲ.

೩. ಅರ್ಥವ್ಯವಸ್ಥೆಯ ಔದ್ಯಮಿಕ ಮತ್ತು ತೃತೀಯ ರಂಗಗಳಲ್ಲಿ ಬೇಡ ಬುಡಕಟ್ಟಿನವರು ಭಾಗವಹಿಸುತ್ತಿಲ್ಲ.

೧.೬. ಪ್ರಸ್ತುತ ಅಧ್ಯಯನದ ವ್ಯಾಪ್ತಿ

ನಮ್ಮ ಅಧ್ಯಯನ ಬೀದರ ಜಿಲ್ಲೆಯ ಬೇಡ ಬುಡಕಟ್ಟಿಗೆ ಮಾತ್ರ ಸಿಮೀತಗೊಂಡಿದೆ ಇವರ ಆರ್ಥಿಕ ಪರಿಸ್ಥಿತಿ, ಸಮಸ್ಯೆಗಳು ಮತ್ತು ಪರಿಹಾರೋಪಾಯಗಳನ್ನು ಸವಿಸ್ತಾರವಾಗಿ ಅಧ್ಯಯನಿಸುವುದು ಈ ಅಧ್ಯಯನದ ವ್ಯಾಪ್ತಿಗೆ ಒಳಪಟ್ಟಿದೆ.

೧.೭. ಸಂಶೋಧನಾ ವಿಧಾನ (Methodology)

ಬೇಡ ಸಮುದಾಯದ ಆರ್ಥಿಕ ಪರಿಸ್ಥಿತಿಯನ್ನು ವಿಶ್ಲೇಷಿಸಲು “ವಿಷಯ ಅಧ್ಯಯನ ವಿಧಾನ” (Case study method)ವನ್ನು ಅನುಸರಿಸಲಾಗಿದೆ. ಬಸಾಜ ಮತ್ತು ಬಸಾಜ[೪೦] ಎನ್ನುವವರು ಈ ವಿಧಾನವನ್ನು “ಒಂದು ಜನಾಂಗ, ಒಂದು ವಿಷಯ ಅಥವಾ ಒಂದು ಸಂಸ್ಥೆಯ ಬಹು ಕಾಳಜಿಯ ಮತ್ತು

ಉತ್ಕೃಷ್ಠ ಅವಲೋಕನ" ಎಂದು ಮಾರ್ಮಿಕವಾಗಿ ವ್ಯಾಖ್ಯಾನಿಸಿದ್ದಾರೆ. ಬೀದರ ಜಿಲ್ಲೆಯ ಬೇಡ ಸಮುದಾಯದ ಆರ್ಥಿಕ ವಿಶ್ಲೇಷಣೆಗೆ ಈ ವಿಧಾನವೇ ಅತ್ಯುತ್ತಮ ವಿಧಾನವಾದುದರಿಂದ ಇದನ್ನೇ ಬಳಸಲಾಗಿದೆ (ಜೊತೆಗೆ).

೧.೮. ಸಮೀಕ್ಷೆ ವಿಧಾನ

ಬೀದರ ಜಿಲ್ಲೆಯ ಬೇಡ ಸಮುದಾಯದ ಸಮಗ್ರ ಆರ್ಥಿಕ ಅಧ್ಯಯನಕ್ಕಾಗಿ ಸಮೀಕ್ಷಾ ಪದ್ಧತಿಯ ವಿಧಾನ (Survey method)ವನ್ನು ಅಳವಡಿಸಿಕೊಳ್ಳಲಾಗಿದೆ. ಇವರ ಆರ್ಥಿಕ ಸಂಶೋಧನೆಗೆ ಸಂಬಂಧಿಸಿದಂತೆ ಒಂದು ಸವಿಸ್ತಾರವಾದ ಪ್ರಶ್ನಾವಳಿಗಳನ್ನು ತಯಾರಿಸಿ ಜಿಲ್ಲಾದ್ಯಂತ ಸಮೀಕ್ಷೆ ಮಾಡಲಾಗಿದೆ.

೧.೯. ಸಾರ್ವತ್ರಿಕ ಅಧ್ಯಯನ Universe of study

ಬೀದರ ಜಿಲ್ಲೆಯ ಬೇಡ ಬುಡಕಟ್ಟಿನ ಒಟ್ಟು ಜನಸಂಖ್ಯೆ ಪ್ರಸ್ತುತ ಸಮೀಕ್ಷೆಯ ಪ್ರಕಾರ ಈ ಕೆಳಗಿನ ಕೋಷ್ಟಕ ಮೂರರಂತಿದೆ. ಪ್ರಶ್ನಾವಳಿಯೊಂದಿಗೆ ಎಲ್ಲಾ ಕುಟುಂಬಗಳ ಸಮೀಕ್ಷೆಯನ್ನು ಅಮೂಲಾಗ್ರವಾಗಿ ಮಾಡಲಾಗಿದೆ. ಜಿಲ್ಲೆಯ ನಾಲ್ಕು ತಾಲೂಕುಗಳಲ್ಲಿ ವಿವಿಧ ಪರಿಣಿತರನ್ನು ಮತ್ತು ಸಮಸ್ಯೆಗಳನ್ನು ಪತ್ತೆ ಹಚ್ಚಿ ಪರಿಸ್ಥಿತಿ ಅಥವಾ ವಿಷಯ ಅಧ್ಯಯನದ ವಿಧಾನದಿಂದ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

ತಾಲೂಕು	ಹೋಬಳಿ	ಗ್ರಾಮ	ಕುಟುಂಬಗಳು	ಪುರುಷ	ಸ್ತ್ರೀಯರು	ಒಟ್ಟು
ಬಸವಕಲ್ಯಾಣ	೧. ಕೋಹಿನೂರ	೧. ಆಟ್ಟೂರ	೨	೧೦	೫	೧೫
		೨. ಆಲಗೂಡ	೮	೨೩	೨೧	೪೪
		೩. ಬಕ್ಕನಾಳ	೧೪	೫೪	೪೮	೧೦೨
		೪. ಬಟಗೇರಾ	೧೫	೪೪	೪೦	೮೪
		೫. ಬಟಗೇರಾ ವಾಡಿ	೫೬	೧೯೭	೧೬೪	೩೬೧
		೬. ಬೇಡರ ವಾಡಿ	೪೫	೧೩೦	೯೮	೨೨೮
		೭. ಚಿಟಗೊಟ್ಟಾ (ಬಿ)	೨	೮	೯	೧೭
		೮. ಗಡಲೇಗಾಂವ	೪	೨೯	೨೫	೫೪
		೯. ಹತ್ತರಗಾ	೧	೫	೬	೧೧
		೧೦. ಹೊನ್ನಳ್ಳಿ	೫	೧೪	೧೩	೨೭
		೧೧. ಕೋಹಿನೂರ	೩೦	೯೭	೮೫	೧೮೨
		೧೨. ಕೋಹಿನೂರ ವಾಡಿ	೧೧೨	೩೫೫	೩೪೭	೭೦೨
		೧೩. ಲಾಡವಂತಿ	೧೧	೪೩	೩೩	೭೬
		೧೪. ಲಾಡವಂತಿ ವಾಡಿ	೪೧	೧೨೯	೧೨೪	೨೫೩
		೧೫. ಮನ್ನಳ್ಳಿ	೨	೫	೫	೧೦

		೧೬. ರಾಮತೀರ್ಥ (ಡಿ)	೬	೨೦	೧೪	೩೪
		೧೭. ಶಿರ್ಗಾಪೂರ	೨೪	೭೪	೯೦	೧೬೪
		೧೮. ಸಿರೂರಿ	೫	೨೧	೧೬	೩೭
		ಒಟ್ಟು	೩೮೩	೧೨೫೮	೧೧೪೩	೨೪೦೧
	೨. ಮಠಳ	೧. ಆನಂದ ವಾಡಿ	೬೭	೧೯೫	೧೬೫	೩೬೦
		೨. ಚಂಡಕಾಪೂರ	೪೮	೧೧೩	೧೨೪	೨೩೭
		೩. ಗುಂಡುರ	೧೫	೪೨	೪೫	೮೭
		೪. ಘೊಟ್ಟಾಳ	೫೩	೧೫೧	೧೪೪	೨೯೫
		೫. ಘೊಟ್ಟಾಳ ವಾಡಿ	೧೦೯	೩೫೨	೩೨೬	೬೭೮
		೬. ಕಾಂಬಳೆ ವಾಡಿ	೩	೧೩	೯	೨೨
		೭. ಮದ್ದನೆ ವಾಡಿ	೪	೨೩	೧೯	೪೨
		೮. ಉಮ್ಮಾಪೂರ	೪	೧೨	೮	೨೦
		ಒಟ್ಟು	೩೦೩	೯೦೧	೮೪೦	೧೭೪೧
	೩. ಮುಡಬಿ	೧. ಗದಲೇಗಾಂವ	೩೦	೧೦೦	೧೦೦	೨೦೦
		೨. ಹತ್ಯಾಳ	೭	೧೯	೧೩	೩೨
		೩. ಕಲಖೋರಾ	೯೮	೩೫೫	೩೦೬	೬೬೧
		೪. ಖೇರ್ಡಾ ವಾಡಿ	೫೦	೧೬೯	೧೬೫	೩೩೪
		೫. ಯಳವಂತಿಗಿ	೨೪	೭೯	೬೪	೧೪೩
		ಒಟ್ಟು	೨೦೯	೭೨೨	೬೪೮	೧೩೭೦
	೪. ನಾರಾಯಣಪೂರ	೧. ಹುಲಗುತ್ತಿ	೧೧	೨೨	೧೭	೩೯
	೫. ರಾಜೇಶ್ವರ	೧. ಇಸ್ಲಾಂಪೂರ	೧	೪	೨	೬
		೨. ಹಣಮಂತ ವಾಡಿ	೧೩	೩೯	೩೫	೭೪
		೩. ಲಿಂಗದಳ್ಳಿ	೧೨	೪೧	೩೧	೭೨
		೪. ತಡೋಳ	೧		೩	೩
		ಒಟ್ಟು	೨೭	೮೪	೭೧	೧೫೫
	ಬಸವಕಲ್ಯಾಣ	ಮೊತ್ತ	೯೬೦	೨೯೯೦	೨೭೬೧	೫೬೧೯
೨. ಭಾಲ್ಕಿ	೧. ಕಟಕ ಚಿಂಚೋಳಿ	೧. ಕಣಜಿ	೧೮	೫೪	೪೫	೯೯
೩. ಬೀದರ	೧. ಬೀದರ	೧. ಬೀದರ ನಗರ	೨	೮	೬	೧೪
೪. ಹುಮನಾಬಾದ	೧. ಭೇಮಳ ಖೇಡ	೧. ಚಂಗಲೇರಾ	೧೪	೪೨	೪೮	೯೦
		೨.ಓಆಖಆಓಃಆಔಔಐ	೪	೧೮	೧೬	೩೪
		೩. ಉದುಮ್ನಳ್ಳಿ	೮	೩೪	೨೭	೬೧
		ಒಟ್ಟು	೨೬	೯೪	೯೧	೧೮೫
		ಒಟ್ಟು	೧೦೦೬	೩೧೪೬	೨೯೦೩	೫೯೧೭

ಮಾಹಿತಿ ಸಂಗ್ರಹಣೆ

ಕ್ಷೇತ್ರ ಕಾರ್ಯದಲ್ಲಿ ಮಾಹಿತಿ ಸಂಗ್ರಹಿಸಲಾಗಿದೆ. ಮಾಹಿತಿಯನ್ನು ಸಂಗ್ರಹಿಸುವಲ್ಲಿ 'ಸಹಭಾಗಿ' ಮತ್ತು ಅವಲೋಕನ ವಿಧಾನವನ್ನು ಬಳಸಲಾಗಿದೆ. ಸಂದರ್ಭೋಚಿತ ಧ್ವನಿ ಮುದ್ರಣ ಮತ್ತು ಛಾಯಾ ಚಿತ್ರಗಳನ್ನು ಸೆರೆ ಹಿಡಿಯಲಾಗಿದೆ. ಸಂಶೋಧನೆಯ ಪ್ರಾರಂಭದ ೬ ತಿಂಗಳು ಸಾಹಿತ್ಯದ ಪರಿವೀಕ್ಷಣೆಗೆ ಹಿಡಿದರೆ, ನಂತರದ ಮೂರು ತಿಂಗಳು ಪರೀಕ್ಷಾರ್ಥವಾಗಿ ಪ್ರಶ್ನಾವಳಿಯ ತಯಾರಿಕೆಗೆ ತಗುಲಿದೆ ೩ ತಿಂಗಳ ಕಾಲವನ್ನು ಕ್ಷೇತ್ರ ಕಾರ್ಯದಲ್ಲಿ ತೊಡಗಿಸಲಾಗಿದೆ.

ಅಂಕಿ-ಸಂಖ್ಯೆಗಳ ಸಂಗ್ರಹಣೆ (Data Processing)

ಕ್ಷೇತ್ರದಲ್ಲಿ ಸಂಗ್ರಹಿಸಿದ ಅಂಕಿ-ಸಂಖ್ಯೆಗಳನ್ನು ವರ್ಗೀಕರಣ ಮಾಡಿ ಅನೇಕ ಕೋಷ್ಠಕಗಳನ್ನು ಗಣಕ ಯಂತ್ರದ ನೆರವಿನಿಂದ ತಯಾರಿಸಲಾಗಿದೆ. ಸರಳ ಸಂಖ್ಯಾಶಾಸ್ತ್ರದ ವಿಧಾನಗಳಾದ ಶೇಕಡಾವಾರು (Percentage) ಇತ್ಯಾದಿಗಳಿಂದ ಮಾಹಿತಿಯನ್ನು ಸಂಸ್ಕರಣ ಮಾಡಲಾಗಿದೆ. ಅವಶ್ಯಕತೆಗೆ ತಕ್ಕಂತೆ ರೇಖಾಚಿತ್ರಗಳನ್ನು (Diagrams) ಗ್ರಾಫ್‌ಗಳನ್ನು ಹಾಗೂ ಚಾರ್ಟಗಳನ್ನು (Chart) ರಚಿಸಿಕೊಳ್ಳಲಾಗಿದೆ.

Source of Data

ಹಲವಾರು ಲೇಖನ, ಗ್ರಂಥ ಮತ್ತು ಮಹಾಪ್ರಬಂಧಗಳಿಂದ ಅಂಕಿ-ಸಂಖ್ಯೆಗಳನ್ನು ಆರಿಸಿಕೊಂಡು ಉಪಯೋಗ ಮಾಡಿದಲ್ಲದೆ, ಪ್ರಾಥಮಿಕ ಅಂಕಿ-ಸಂಖ್ಯೆಗಳನ್ನು (Primary Data) ವಿಪುಲವಾಗಿ ಉಪಯೋಗಿಸಿಕೊಳ್ಳಲಾಗಿದೆ. ಈ ಮಹಾಪ್ರಬಂಧದ ಪ್ರಮುಖ ಅಂಕಿ-ಸಂಖ್ಯೆಗಳ ಮೂಲ, ಪ್ರಾಥಮಿಕ ಮೂಲವಾಗಿದೆ. ಇಂಗ್ಲೀಷ್‌ನಲ್ಲಿ ಒಂದು ಗಾದೆ ಇದೆ i.e., 'seeing is believing' ಅಂದರೆ 'ನೋಡಿದಾಗ ಮಾತ್ರ ನಂಬುದು ಸಾಧ್ಯ'. ಸತಃ ಅವರ ಕೃಷಿ ಕಸುಬನ್ನು ಮತ್ತು ಇನ್ನಿತರ ಉಪ-ಕಸುಬನ್ನು ಸಹಭಾಗಿತ್ವ ವಿಧಾನದಿಂದ ಅರಿಯಲಾಗಿದೆ.

ವಕ್ತೃಗಳು ಮತ್ತು ಕ್ಷೇತ್ರಾನುಭವ (The Sample and field experience)

ವಾಸ್ತವ ಅಂಕಿ-ಸಂಖ್ಯೆಗಳನ್ನು ಸಂಗ್ರಹಿಸಲು ಕ್ಷೇತ್ರ ಕಾರ್ಯವನ್ನು ೧೯೯೯ರಿಂದ ಪ್ರಾರಂಭಿಸಿದೆ. ಒಂದು ತಿಂಗಳು ಕಾಲ ಎಡೆಬಿಡದೆ ಸಮುದಾಯದವರನ್ನು ಭೇಟಿಯಾಗಿ ಮಾಹಿತಿಯನ್ನು ಸಂಗ್ರಹಿಸಿದೆ. ಪ್ರಾರಂಭದಲ್ಲಿ ಅನೇಕ ಅಡತಡೆಗಳು ಸಂಶೋಧಕನಿಗೆ ಎದುರಾದವು, ಇದಕ್ಕೆ ಕಾರಣ ಈ ಜನರು ನಿರೀಕ್ಷರಿಗಳು, ಸಂಪ್ರದಾಯವಾದಿಗಳು ಮತ್ತು ತಕ್ಷಣವಾಗಿ ಹೊರಗಿನವರನ್ನು ನಂಬುವವರಿಲ್ಲ, ಇವರೊಂದಿಗೆ ನಾನು ಇವರ ಗುಡಿಸಲಿನಲ್ಲಿಯೇ ನಾಲ್ಕಾರು ದಿನಗಳು ವಾಸಮಾಡಿದ ನಂತರ ಆತ್ಮೀಯವಾಗಿ ಇವರು

ನನ್ನನ್ನು ಕಂಡರು ಮತ್ತು ಈ ರೀತಿಯ ಒಡನಾಟ ನನಗೆ ಮಾಹಿತಿ ಪಡೆಯುವಲ್ಲಿ ಅನುಕೂಲ ಮಾಡಿಕೊಟ್ಟಿತು. ಇವರ ಹಳ್ಳಿಗಳಿಗೆ ಹೋಗುವುದು ಬಹಳ ಪ್ರಯಾಸಕರ ಕಾರ್ಯ. ಕಾರಣ ಅನೇಕ ಕಡೆ ಬಸ್ಸುಗಳ ವ್ಯವಸ್ಥೆ ಮತ್ತು ರಸ್ತೆಗಳು ಇಲ್ಲದಿರುವುದು. ಕಾಲ್ನಡಿಗೆಯಿಂದಲೇ ಅವರುಗಳ ಗ್ರಾಮಕ್ಕೆ ತಲುಪುತ್ತಿದೆ. ಇವರ ವಸತಿ ಪ್ರದೇಶಗಳಿಗೆ ಹೋದಾಗ ಇವರು ಗುಡಿಸಲುಗಳಲ್ಲಿ ಇಲ್ಲದಿರುವ ಸಮಸ್ಯೆಯನ್ನು ಹಲವೊಮ್ಮೆ ಎದುರಿಸಿದೆ.

ನನ್ನ ಮೊದಲನೆಯ ಭೇಟಿಯಲ್ಲಿಯೇ ಸಮುದಾಯದವರಿಗೆ ನನ್ನ ಸಂದರ್ಶನದ ಕಾರಣವನ್ನು ಅವರಿಗೆ ಮನದಟ್ಟಾಗಿಸಲು ನನಗೆ ಸಾಧ್ಯವಾಗಲಿಲ್ಲ. ನಾನು ಒಂದು ಮಹಾಪ್ರಬಂಧವನ್ನು ಬರೆಯುತ್ತಿದ್ದೇನೆ ಇದೊಂದು ಶೈಕ್ಷಣಿಕ ಕೆಲಸ (Academic work) ಎಂದು ಅವರಿಗೆ ಹೇಳಿದಾಗ, ನಮಗೆ ಇದರಿಂದ ಏನು ಪ್ರಯೋಜನ ಎಂದು ಕೆಲವರು ಕೇಳಿದ್ದಾರೆ. ಒಟ್ಟಾರೆ ಒಂದೊಂದು ತಿಂಗಳು ಇವರ ವಸತಿ ತಾಣಗಳನ್ನು ಸಂದರ್ಶಿಸಿ ಇವರನ್ನು ಪದೇ ಪದೇ ಭೇಟಿ ಮಾಡಿದಾಗ ನನ್ನ ಸಂದರ್ಶನದ ಕಾರಣ ಇವರಿಗೆ ಮನವಟ್ಟಾಯಿತು, ಮತ್ತು ಕ್ರಮೇಣವಾಗಿ ನನ್ನ ಕೆಲಸದ ಬಗ್ಗೆ ಇವರಲ್ಲಿ ವಿಶ್ವಾಸ ಮತ್ತು ತೀವ್ರ ಆಸಕ್ತಿ ಮೂಡಿದವು. ಪ್ರಾರಂಭದ ಭೇಟಿಗಳಲ್ಲಿ ನಾನು ಎದುರಿಸಿದ್ದು ಇವರುಗಳ ಸಮಸ್ಯೆಗಳ ಸರಮಾಲೆ, ನಂತರ ನನ್ನ ಜೊತೆಗಿನ ಟೇಪ್ ರಿಕಾರ್ಡರ್ ಮತ್ತು ಕ್ಯಾಮರಾಗಳು ಸಮುದಾಯದವರ ಸ್ನೇಹ ಸಂಪರ್ಕಕ್ಕೆ ನೆರವಾದವು.

ಸಾಕಷ್ಟು ಕಷ್ಟಗಳನ್ನು ಅನುಭವಿಸಿದರೂ ಸಮೀಕ್ಷೆ ಮುಗಿದಾಗ ನನಗೆ ತುಂಬಾ ಸಮಾಧಾನವಾಯಿತು. ಸಮುದಾಯದವರಿಂದ ನೈಜ ಸಂಗತಿಗಳನ್ನು ಕಂಡುಕೊಂಡಿರುವುದೇ ನನ್ನ ಸಮಾಧಾನಕ್ಕೆ ಮೂಲ ಕಾರಣ.

೧.೧೦. ಅಧ್ಯಯನದ ಮಿತಿಗಳು (Limitations of the Study)

೧. ನಿರೀಕ್ಷರಿಗಳಿಂದ ಮಾಹಿತಿ ಪಡೆಯುವುದು ಬಹು ಕಷ್ಟದ ಕೆಲಸ. ಆದುದರಿಂದ ಸಂಗ್ರಹಿಸಿದ ಮಾಹಿತಿಯನ್ನು ಸತ್ಯಕ್ಕೆ ಸಮೀಪವಾಗಿದೆಯಂದು ತಿಳಿದುಕೊಳ್ಳಬಹುದು.

೨. ಬೀದರ ಜಿಲ್ಲೆಯ ಇನ್ನಿತರ ಪರಿಶಿಷ್ಟ ವರ್ಗದವರನ್ನು ಇಲ್ಲಿ ಅಭ್ಯಾಸ ಮಾಡಲಾಗಿಲ್ಲ.

೩. ಬೇಡ ಸಮುದಾಯದ ಆರ್ಥಿಕ ವ್ಯವಸ್ಥೆ ಒಂದು ಸರಳ ಆರ್ಥಿಕ ವ್ಯವಸ್ಥೆ, ಉದ್ದಿಮೆ ಹಾಗೂ ಸೇವಾ ಕ್ಷೇತ್ರದ ಇವರ ಆರ್ಥಿಕ ಚಟುವಟಿಕೆಗಳ ಬಗೆಗೆ ಸಾಕಷ್ಟು ಮಾಹಿತಿ ನೀಡಲಾಗಿಲ್ಲ.

೧.೧೧. ಮಹಾಪ್ರಬಂಧದ ಅಧ್ಯಾಯಗಳು

ಈ ಮಹಾಪ್ರಬಂಧವು ಈ ಕೆಳಗಿನ ಆರು ಅಧ್ಯಾಯಗಳನ್ನು ಒಳಗೊಂಡಿರುತ್ತದೆ ಮೊದಲನೆಯ ಅಧ್ಯಾಯವು ಸಂಶೋಧನೆಯ ವಿನ್ಯಾಸ ಮತ್ತು ವಿಧಾನವನ್ನು ವಿವರಿಸುತ್ತದೆ. ಅಧ್ಯಯನದ ಅವಶ್ಯಕತೆ, ಮಹತ್ವ, ಲಭ್ಯವಿರುವ ಮಾಹಿತಿಯ (Literature) ವಿಮರ್ಶೆ, ಉದ್ದೇಶಗಳು, ಅಂಕಿ-ಸಂಖ್ಯೆಗಳ ಸಂಗ್ರಹ ಮಾಹಿತಿ, ಅಂಕಿ-ಸಂಖ್ಯೆಗಳ ಸಂಸ್ಕರಣೆ ಮುಂತಾದ ಹಲವಾರು ವಿಷಯಗಳನ್ನು ಇದರಲ್ಲಿ ಚರ್ಚಿಸಲಾಗಿದೆ. ಎರಡನೆಯ ಅಧ್ಯಾಯವು ಕರ್ನಾಟಕ ರಾಜ್ಯದ ಬೇಡ ಸಮುದಾಯದ ಐತಿಹಾಸಿಕ ಬೆಳವಣಿಗೆ ಕುರಿತ ವಿವರಗಳು ಇರುತ್ತವೆ. ಇದರಲ್ಲಿ ಐತಿಹಾಸಿಕ ಮಾಹಿತಿಯನ್ನು ನೀಡಲಾಗಿದೆ.

ಮೂರನೆಯ ಅಧ್ಯಾಯವು ಬೇಡ ಸಮುದಾಯದ ಸವಿಸ್ತಾರ ಆರ್ಥಿಕ ವಿಶ್ಲೇಷಣೆ ಹಿನ್ನೆಲೆಯಂತೆ ಈ ಸಮುದಾಯವು ವಾಸವಾಗಿರುವ ಬೀದರ ಜಿಲ್ಲೆಯ ಆರ್ಥಿಕ ಸ್ಥಾನಮಾನವನ್ನು ವಿವರಿಸುತ್ತದೆ. ಇದಲ್ಲದೆ, ಸಮುದಾಯದ ಮಾದರಿ ಕುಟುಂಬಗಳ (Sample Household) ಸಾಮಾಜಿಕ ರೂಪರೇಷಗಳನ್ನು ಇಲ್ಲಿ ವಿವರಿಸಲಾಗಿದೆ. ಕುಟುಂಬದ ಗಾತ್ರ, ಕುಟುಂಬದಲ್ಲಿನ ಚಿಕ್ಕಮಕ್ಕಳ ಹಾಗೂ ವಯಸ್ಕರ ಸಂಖ್ಯೆ, ಸಾಕ್ಷರತೆಯ ಮಟ್ಟ, ಕುಟುಂಬ ಇತ್ಯಾದಿ ವಿಷಯಗಳ ಬಗೆಗಿನ ಚಿತ್ರಣವನ್ನು ಕೋಷ್ಠಕಗಳ ನೆರವಿನಿಂದ ಮಂಡಿಸಲಾಗಿದೆ.

ನಾಲ್ಕನೇ ಅಧ್ಯಾಯ ಈ ಮಹಾಪ್ರಬಂಧದ ಜೀವಾಳ ಮೂರನೆಯ ಅಧ್ಯಾಯದಲ್ಲಿ ಬೇಡ ಸಮುದಾಯದವರ ಕೃಷಿ ಅರ್ಥವ್ಯವಸ್ಥೆಯ ಬಗ್ಗೆ ವಿವರವಾದ ಚಿತ್ರಣವನ್ನು ನೀಡಲಾಗಿದೆ ಇದಲ್ಲದೆ, ಅವರ ಉದ್ದಿಮೆಯ ಹಾಗೂ ಸೇವಾ ಕ್ಷೇತ್ರಗಳಲ್ಲಿನ ಭಾಗವಹಿಸುವಿಕೆಯನ್ನು ನಿರೂಪಿಸಲಾಗಿದೆ. ಮುಂದುವರೆದು, ಈ ಜನರ ಉಪಕಸುಬುಗಳ ಆರ್ಥಿಕತೆಯ ಬಗೆಗೆ ಹೇಳಲಾಗಿದೆ.

ಐದನೆಯ ಅಧ್ಯಾಯವು ಆಯ್ದ ನಮೂನೆಯ ಜನರ ಆದಾಯದ, ಉಪಭೋಗದ ಮತ್ತು ಉಳಿತಾಯಗಳ ವಿವರಣೆಯನ್ನು ಕೊಡುತ್ತದೆ. ಸರಕಾರಿ ಯೋಜನೆಗಳಿಂದ ಉಂಟಾದ ಪ್ರಯೋಜನಗಳ ಬಗೆಗೂ ಮಾಹಿತಿಯನ್ನು ನೀಡಲಾಗಿದೆ. ಕೊನೆಯಲ್ಲಿ ಸಮುದಾಯದವರ ಆರ್ಥಿಕ ಆಶೋತ್ತರಗಳ ಕಲ್ಪನೆಯನ್ನು ವಿವರಿಸಲಾಗಿದೆ. ಆರ್ಥಿಕವಾಗಿ ಈ ಸಮುದಾಯವನ್ನು ಮುಂದೆ ತರಲು ಸಲಹೆಗಳನ್ನು ಕೊನೆಯಲ್ಲಿ ಕೊಡಲಾಗಿದೆ.

ಆರನೇ ಮತ್ತು ಕೊನೆಯ ಅಧ್ಯಾಯವು ಮಹಾಪ್ರಬಂಧದ ಸಾರಾಂಶ ಹಾಗೂ ನಿರ್ಣಯಗಳನ್ನು ಒಳಗೊಂಡಿರುತ್ತದೆ. ಸಂಶೋಧನಾಕಾರರು ಭವಿಷ್ಯದಲ್ಲಿ ಮಾಡಬಹುದಾದ ಮುಂದುವರೆದ ಸಂಶೋಧನೆ (Areas of further research)ಯ ಬಗೆಗೆ ಹೇಳಲಾಗಿದೆ.

೧.೧೨ ಪ್ರಸ್ತುತ ಸಂಶೋಧನಾಧ್ಯಯನದ ಮಹತ್ವ

ಬೇಡ ಸಮುದಾಯದ ಆರ್ಥಿಕ ಪರಿಸ್ಥಿತಿಯನ್ನು ಆಳವಾಗಿ ಅಭ್ಯಾಸ ಮಾಡುವಲ್ಲಿಯೇ ಪ್ರಪ್ರಥಮ ಪ್ರಯತ್ನವಿದು. ಆದುದರಿಂದ ಈ ಸಂಶೋಧನಾಧ್ಯಯನ ಅತೀ ಮಹತ್ವದಾಗಿದೆ. ಇಲ್ಲಿ ಸಂಗ್ರಹಿಸುವ ಆರ್ಥಿಕ ಅಂಕಿ ಸಂಖ್ಯೆಗಳು ಇನ್ನು ಮುಂದೆ ಸಂಶೋಧನೆ ಮಾಡುವವರಿಗೆ ಉಪಯುಕ್ತವಾಗಬಲ್ಲವು. ಈ ಮಹಾಪ್ರಬಂಧದಲ್ಲಿ ವಿಶ್ಲೇಷಿಸಲಾದ ಆರ್ಥಿಕ ಅಂಕಿ-ಸಂಖ್ಯೆಗಳು ಬೇರೆ ಬುಡಕಟ್ಟಿನವರ ಆರ್ಥಿಕ ಪರಿಸ್ಥಿತಿಯನ್ನು ಕಂಡುಕೊಳ್ಳುವಲ್ಲಿಯೂ ನೆರವಾಗುತ್ತವೆ. ಇದೊಂದು ಪ್ರಾಮಾಣಿಕವಾದ ಪ್ರಯತ್ನವಷ್ಟೆ.

೧.೧೩. ಭವಿಷ್ಯದಲ್ಲಿ ಸಂಶೋಧನಾಕಾರರು ಮಾಡಬಹುದಾದ ಸಂಶೋಧನೆಯ ಕ್ಷೇತ್ರಗಳು

(Ares for Research in future)

ಇದು ಸಂಶೋಧನಾಕಾರರು ಭವಿಷ್ಯದಲ್ಲಿ ಮಾಡಬಹುದಾದ ಮುಂದುವರೆದ ಸಂಶೋಧನೆ. ಇದು ಬೇಡ ಸಮುದಾಯದವರ ಆರ್ಥಿಕ ವಿಶ್ಲೇಷಣೆಯ ಪ್ರಪ್ರಥಮ ಪ್ರಯತ್ನ. ಇನ್ನು ಮುಂದೆ ಸಂಶೋಧನೆಕಾರರು ಎರಡು ಬೇರೆ ಅವಧಿಗಳಲ್ಲಿ (Two different periods) ಅಂಕಿ-ಸಂಖ್ಯೆಗಳನ್ನು ಸಂಗ್ರಹಿಸಿ ಈ ಜನಾಂಗದವರ ಆರ್ಥಿಕ ಪರಿಸ್ಥಿತಿಯನ್ನು ಅನ್ಯ ಬುಡಕಟ್ಟುಗಳೊಂದಿಗೆ ತುಲನಾತ್ಮಿಕ ಅಧ್ಯಯನವನ್ನಾಗಿ ಕೈಕೊಳ್ಳಬಹುದು.

ಆಕರ ಗ್ರಂಥಗಳು

1. New Encyclopedia Britanic (Vol. X, 115).

2. Majumdar D.N., 'A Tribe in Transition: A study in culture pattern (London: Longmans Green and Co., 1937).

3. Royal Anthropoligical Institute '*Notes and quaries on Anthropology*' 1954, Page. 66.

4. W.H. Perry, D.K. Mohan Rao 'Tribal Development in Andhra Pradesh, Problem, performance and prospects (Hydrabad Book Unique, 1999) p. 1.

5. D.K. Mohan Rao, *Tribal Development in Andhra Pradesh Problems, Performance and Prospects* (Hyderabad Book Links Corporation 1999) pp. 1.

೬. ಮೇತ್ರಿ ಕೆ.ಎಂ. (೧೯೯೭) 'ಬೀದರ ಜಿಲ್ಲಾ ದರ್ಶನ' ಕನ್ನಡ ಸಾಹಿತ್ಯ ಪರಿಷತ್ತು, ಬೀದರ, ಪು. ೧೧೮-೧೨೫.

7. Ibid, , pp. 118-125.

8. Gunnar Myrdal, *Asian Drama – An Enquiry into the poverty of nations*, Penguin Publishers, 1968, pp. 1702.

9. B.H. Mehta: *Gonds of the Central Indian Highlouds*, Vol. II, Concept Publishing Company, New Delhi, 1984.

10. Kallur, M.S. and Dagaonkar C.K. (1993) "Developmental Problems of Schedule Tribes in Karnataka" A paper presented at the *Ist Annual Conference Indian Association for Research and Action on Social Justice*, 24th to 26th Marh, 1993 Organised by Department of Economics, Marathwada University, Aurangabad, *Proceedings of the Conference.*

11. Devayani (1993) "Tribals Educational Constraints" "Developmental Problems of Schedule Tribes in Karnataka" A paper presented at the *Ist Annual Conference Indian Association for Research and Action on Social Justice*, 24th to 26th Marh, 1993 Organised by Department of Economics, Marathwada University, Aurangabad, *Proceedings of the Conference.*

12. Punelekar (1993) "Towards understanding class structure and its linkage with educational situation: A case study of landless Tribals From South Gujarat Region" "Developmental Problems of Schedule Tribes in Karnataka" A paper presented at the *Ist Annual Conference Indian Association for Research and Action on Social Justice*, 24th to 26th Marh, 1993 Organised by Department of Economics, Marathwada University, Aurangabad, *Proceedings of the Conference.*

13. Vasant (1993) "Synonyms of sub-castes and conditions of Burud" "Developmental Problems of Schedule Tribes in Karnataka" A paper presented at the *Ist Annual Conference Indian Association for Research and Action on Social Justice*, 24th to 26th Marh, 1993 Organised by Department of Economics, Marathwada University, Aurangabad, *Proceedings of the Conference*.

14. Sumitra (1993) "Special Issues in Development of Women SC/ST/OBC", "Developmental Problems of Schedule Tribes in Karnataka" A paper presented at the *Ist Annual Conference Indian Association for Research and Action on Social Justice*, 24th to 26th Marh, 1993 Organised by Department of Economics, Marathwada University, Aurangabad, *Proceedings of the Conference*.

15. Ambewadikar R.M. (1993) Integrated Rural Deveopment by Disintegrated and inequable society" "Developmental Problems of Schedule Tribes in Karnataka" A paper presented at the *Ist Annual Conference Indian Association for Research and Action on Social Justice*, 24th to 26th Marh, 1993 Organised by Department of Economics, Marathwada University, Aurangabad, *Proceedings of the Conference*.

16. Ganghadar K.N. (1994) "Role of voluntary organisation in Tribal Development", M.Phil. Thesis (unpublished), Bangalore University, Bangalore.

17. Hanumantha Rayappa (1993) "Issues in Tribal Development" Journal of Rural Development, Vo. 12(2), pp. 123-144.

೧೮.ಲಕ್ಕಪ್ಪ ಗೌಡ ಎಚ್.ಜೆ. (ಸಂಪಾದನೆ) ಕರ್ನಾಟಕದ ಬುಡಕಟ್ಟುಗಳು (ಸಂಪುಟ ೧) ಕರ್ನಾಟಕ ಜನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು, ೧೯೯೮.

೧೯.ಮೈತ್ರಿ ಕೆ.ಎಮ್. 'ಬೀದರ ಜಿಲ್ಲೆಯ ಗೊಂಡ ಆದಿವಾಸಿ ಸಮುದಾಯ: ಒಂದು ಸಮಾಜಶಾಸ್ತ್ರೀಯ ಅಧ್ಯಯನ' ೧೯೯೪, ಮೈಸೂರ ವಿಶ್ವವಿದ್ಯಾಲಯ ಮೈಸೂರು.

20. Thurston S.C., Edgar and Rangachari, K. *Castes and Tribes of South India*, Vol. VII (Madras: Government Press, 1909).

21. Roy, S.C. 'The Munda their country' (Calcutta: City Bar Agency, 1912).

22. Edward Gorce Man, *The Nicobar Islands and Their People,* 1923.

23. Ananthkrishna Iyer, *The Mysore Tribes and Caste*, Vol. 1, 1935.

24. Majumdar, D.N., The Affirs of a Tribes: A study in Tribal Dynamics (Lucknow: Universal Publishers Ltd., 1950).

25. Robert H. Lowie, *Primitive Society*, 1953.

26. Dubey S.C., Indian village, London: Routledge and Kegan Paul, 1959.

27. Srinivas, M.N. (1962) (Re-Printed) Religion and Society among coorgs of South India, London; J.K. Publishers.

28. Bose Nirmal Kumar, Fifty years of Science in Indian Progress of Anthropology and Archaeology (Calcutta: Indian Science Congress Association, 1963).

29. Vidyarthi L.P. Appied Anthropology in India, Allahabad; Kitab Mohal, 1968.

30. Sinha, Tribes of India, 1968.

31. Heggade L.K. *Songs of Gonda Tribe*, 1977.

32. Bhadur, K.P., *Casts, Tribes and culture of India: Karnataka, Kerala; and Tamil Nadu*, New Delhi: Ess and Ess Publication, 1978.

33. Sachidananda, *The Changing Munda*, New Delhi; Concept Publishing Co., 1979.

34. Krishnyya S.A. *Holi Festival of Kudubis*, Prasanga, RRC No. 14, April, Udti., 1987.

35. Iyer, L.K. A. *The Mysore Tribes and Caste*, Delhi, Mittal Publications, 1988.

೩೬.ಮೈತ್ರಿ ಕೆ.ಎಮ್. 'ಬೀದರ ಜಿಲ್ಲೆಯ ಗೊಂಡ ಆದಿವಾಸಿ ಸಮುದಾಯ: ಒಂದು ಸಮಾಜಶಾಸ್ತ್ರೀಯ ಅಧ್ಯಯನ' ೧೯೯೪, ಮೈಸೂರ ವಿಶ್ವವಿದ್ಯಾಲಯ ಮೈಸೂರು.

37. Rao, Ravindranath, Y. Social Change Among the Tribals: A case study of Kuduris of Dakshina Kannda Dept. of Sociology, Mangalore University, 1995, (Unpublished Ph.D. Thesis).

38. A.V. Nabadi, "Koregaru", in *Karnataka Budakattugalu. A Collection of research articles pertaining to the tribes of Karnataka*, Chief Editor: Prof. H.J. Lakkappa Gowda, Karnataka Janapada and Yakshagana, Academy, Bangalore, 1998, pp. 268-321.

೩೯.ಶಂಕರ ನಾರಾಯಣ ತೀ. ನಂ. 'ಕಾಡುಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆಗಳು'(ಮೈಸೂರು: ಮೈಸೂರು ವಿಶ್ವವಿದ್ಯಾಲಯ, ಪ್ರಸಾರಾಂಗ, ೧೯೮೨).

40. Bicsay and Biesay: quoted in Bajpai, S.R. *Methods of social survey and Research*, Kitob Bhar, Kanpur, Seventh Books.

ಅಧ್ಯಾಯ-೨

ಬೀದರ ಜಿಲ್ಲೆಯ ಪಕ್ಷಿ ನೋಟ

(A BIRD'S EYE VIEW OF BIDAR DISTRICT)

ಬೀದರ ಜಿಲ್ಲೆಯ ಚಿತ್ರಣ

Profile of Bidar district

ಬೇಡ ಸಮುದಾಯದ ಆರ್ಥಿಕ ಪರಿಸ್ಥಿತಿ ಮತ್ತು ಪ್ರಗತಿಯನ್ನು ತಿಳಿಯುವುವಲ್ಲಿ ಜಿಲ್ಲೆಯ ಹಾಗೂ ಈ ಸಮುದಾಯ ವಾಸಿಸುತ್ತಿರುವ ನಾಲ್ಕು ತಾಲೂಕುಗಳ ಭೌಗೋಳಿಕ ಪರಿಸರದ ಜ್ಞಾನ ಅತ್ಯವಶ್ಯಕ. ಆದುದರಿಂದ ಈ ಕೆಳಗೆ ಇವೆರಡರ ಬಗ್ಗೆ ಸವಿಸ್ತಾರವಾಗಿ ವಿವರಣೆಯನ್ನು ನೀಡಲಾಗಿದೆ.

ಬೀದರ ಜಿಲ್ಲೆಯ ಭೌಗೋಳಿಕ ಲಕ್ಷಣಗಳು

ಬೀದರ ಜಿಲ್ಲೆಯು ೧೭° ೩೫' ಹಾಗೂ ೧೮°೨೫' ಉತ್ತರ ಅಕ್ಷಾಂಶ ಮತ್ತು ೭೬° ೪೨' ಹಾಗೂ ೭೭° ೩೯' ಪೂರ್ವ ರೇಖಾಂಶಗಳ ನಡುವೆ ಗುರುತಿಸಲಾಗುತ್ತದೆ. ಈ ಜಿಲ್ಲೆಯ ಉದ್ದ ಪೂರ್ವದಿಂದ ಪಶ್ಚಿಮದ ಕಡೆ ೯೩.೪ ಕಿಲೋಮೀಟರ ಇದ್ದರೆ, ಈಶಾನ್ಯದಿಂದ ನೈಋತ್ಯದ ಕಡೆಗೆ ೧೧೫.೨ ಕಿಲೋಮೀಟರ ಉದ್ದವಿದೆ[1]. ಈ ಜಿಲ್ಲೆಯು ಕರ್ನಾಟಕದ ಒಂದು ತುದಿಯಲ್ಲಿದ್ದು ಪೂರ್ವಕ್ಕೆ ಈ ಹೈದ್ರಾಬಾದ ಕರ್ನಾಟಕ ಪ್ರದೇಶವನ್ನು ರಾಜ್ಯದ ಇತರ ಪ್ರದೇಶಗಳಿಗೆ ಹೋಲಿಸಿದಾಗ, ಶೈಕ್ಷಣಿಕವಾಗಿ ಮತ್ತು ಆರ್ಥಿಕವಾಗಿ ಬಹಳಷ್ಟು ಹಿಂದುಳಿದಿರುತ್ತದೆ. ಪ್ರಾದೇಶಿಕ ಅಭಿವೃದ್ಧಿಯಲ್ಲಿನ ಅಸಮಾನತೆಯನ್ನು ತೊಡೆದುಹಾಕಲು ರಾಜ್ಯ ಸರಕಾರ ೨೦೦೧ರಲ್ಲಿ ಡಾ. ನಂಜುಂಡಪ್ಪನವರ ನೇತೃತ್ವದಲ್ಲಿ ಒಂದು ಸಮಿತಿಯನ್ನು ಸ್ಥಾಪಿಸಿದೆ. ಇದು ಆಂಧ್ರಪ್ರದೇಶದ ನಿಜಾಮಬಾದ ಮತ್ತು ಮೇದಕ್ ಜಿಲ್ಲೆಗಳನ್ನು ಹೊಂದಿಕೊಂಡಿದೆ. ಉತ್ತರ ಮತ್ತು ಪಶ್ಚಿಮ ಭಾಗಗಳಲ್ಲಿ ಮಹಾರಾಷ್ಟ್ರದ ನಾಂದೇಡ ಮತ್ತು ಉಸ್ಮಾನಾಬಾದ ಜಿಲ್ಲೆಗಳಿವೆ. ದಕ್ಷಿಣಕ್ಕೆ ಕರ್ನಾಟಕದ ಗುಲಬರ್ಗಾ ಜಿಲ್ಲೆಯ ಆಳಂದ, ಗುಲಬರ್ಗಾ ಮತ್ತು ಚಿಂಚೋಳಿ ತಾಲುಕುಗಳಿವೆ[2]. ಇದು ಕರ್ನಾಟಕದ ಉತ್ತರ ದಿಕ್ಕಿನ ಕೊನೆಯ ಜಿಲ್ಲೆ (ಭೂಪಟ ೨.೧ ನೋಡಿ). ಇದರ ವಿಸ್ತೀರ್ಣ ೫,೪೪೮ ಚದರ ಕಿಲೋಮೀಟರಗಳು. ಬೀದರ ಜಿಲ್ಲೆಯು ಹೈದ್ರಾಬಾದ ಕರ್ನಾಟಕ ಪ್ರದೇಶದ (Hyderabad Karnataka Region)ದ ಐದು ಜಿಲ್ಲೆಗಳಲ್ಲಿ ಒಂದಾಗಿರುತ್ತದೆ. ಈ ಪ್ರದೇಶದ ಇತರ ಜಿಲ್ಲೆಗಳು ಗುಲಬರ್ಗಾ, ರಾಯಚೂರು, ಬಳ್ಳಾರಿ ಮತ್ತು ಕೊಪ್ಪಳಗಳಾಗಿವೆ. ಇದೊಂದು ಆರ್ಥಿಕವಾಗಿ ಹಿಂದುಳಿದ ಪ್ರದೇಶ, ಮೇಲಾಗಿ ಈ ಪ್ರದೇಶದ ಇತರ ಜಿಲ್ಲೆಗಳ, ಪ್ರಗತಿಯನ್ನು ನೋಡಿದಾಗ, ಬೀದರ ಜಿಲ್ಲೆ ತುಲನಾತ್ಮಕವಾಗಿ ಅಭಿವೃದ್ಧಿಯಲ್ಲಿ ಕೊನೆಯ ಜಿಲ್ಲೆಯಾಗಿದೆ[3].

ಬೀದರ ಹೆಸರಿನ ಮೂಲ

`ಬೀದರ' ಹೆಸರಿನ ಮೂಲವು ಮಹಾಭಾರತದ ಕಾಲಕ್ಕೆ ಸಂಬಂಧಿಸಿರುತ್ತದೆ ಎಂದು ಕೆಲವು ಪಂಡಿತರ ಅಭಿಪ್ರಾಯವಾಗಿದೆ[v]. ಈ ವಿಷಯ ಏನೇ ಇರಲಿ, 'ಬೀದರೂರು' ಅಂದರೆ ಬಿದರು + ಊರು ಎಂದು ಈ ಜಿಲ್ಲೆ ಇತ್ತೀಚಿನ ವರ್ಷಗಳಲ್ಲಿ ಬೀದರ ಎಂದು ಪ್ರಸಿದ್ಧಿಯಾಗಿದೆ.

ಆಡಳಿತಾತ್ಮಕ ವಿಭಾಗಗಳು

ಬೀದರ ಜಿಲ್ಲೆಯು ಎರಡು ಕಂದಾಯ ಉಪವಿಭಾಗಗಳನ್ನು ಅಂದರೆ, ಬೀದರ ಮತ್ತು ಬಸವಕಲ್ಯಾಣ ಎಂಬುವನ್ನು ಹೊಂದಿರುತ್ತದೆ. ಬೀದರ ಉಪ ಕಂದಾಯದಲ್ಲಿ ಔರಾದ ಮತ್ತು ಬೀದರ ತಾಲೂಕುಗಳು ಬರುತ್ತವೆ ಮತ್ತು ಬಸವಕಲ್ಯಾಣ ಉಪ ಕಂದಾಯ ವಿಭಾಗದಲ್ಲಿ ಬಸವಕಲ್ಯಾಣ, ಭಾಲ್ಕಿ ಮತ್ತು ಹುಮನಾಬಾದ ಈ ತಾಲೂಕುಗಳು ಇರುತ್ತವೆ. ಜಿಲ್ಲೆಯು ಹೊಂದಿರುವ ತಾಲೂಕುಗಳು ಮತ್ತು ಅವುಗಳ ಭೌಗೋಳಿಕ ವಿಸ್ತೀರ್ಣ, ಹೋಬಳಿಗಳು, ಜನ ವಸತಿ ಇರುವ ಊರುಗಳು, ಜನ ವಸತಿ ಇಲ್ಲದ ಊರುಗಳು, ಗ್ರಾಮ ಪಂಚಾಯತಗಳು, ಪುರ-ನಗರ ಸಭೆಗಳು, ಪಟ್ಟಣ ಪಂಚಾಯತ: ನಗರ ಸಮುದಾಯಗಳು ಇವುಗಳ ಬಗ್ಗೆ ವಿವರಗಳು ಕೋಷ್ಟಕ ೨.೧ ರಲ್ಲಿ ಲಭ್ಯವಾಗಿವೆ.

ಕೋಷ್ಠಕ-೨.೧ ಪುರ-ನಗರ ಸಭೆ ಇತ್ಯಾದಿಗಳ ವಿವರ

ಗ್ರಾಮಗಳು (೧೯೯೧ರ ಜನಗಣತಿ ಪ್ರಕಾರ)								ವಿದ್ಯುಚ್ಛಕ್ತಿ ಒದಗಿಸಿ (೯೮-೯೯)	
...ಕ್ರಮ ...ಸಂಖ್ಯೆ	ತಾಲ್ಲೂಕು	ಹೊಬಳಿ-ಗಳು	ಜನವಸತಿ ಇರುವ	ಜನವಸತಿ ಇಲ್ಲದ	ಗ್ರಾಮ ಪಂಚಾಯತ -ಗಳು	ಪುರಃ ನಗರ ಸಭೆಗಳು (೧೯೯೧ರ ಗಣತಿ)	ಪಟ್ಟಣ ಪಂಚಾಯತಃ ನಗರ ಸಮುದಾಯಗಳು (೧೯೯೮-೯೮)	ಉಪಗ್ರಾಮ-ಗಳು (ತಾಂಡಾಃಹರಿ ಜನಬಸ್ತಿಗಳು)	ಒಟ್ಟು ನೀರವಾರಿ ಪಂಪು ಸೆಟ್ಟುಗಳು
	ಔರಾದ	೬	೧೪೯	-	೩೮	-	೧	೪	೩೬೭೪
	ಬಸವಕಲ್ಯಾಣ	೬	೧೧೩	೧	೩೫	೧	-	೧೧	೮೪೫೦
	ಭಾಲ್ಕಿ	೬	೧೨೧	೧	೩೫	೧	-	೬	೫೩೬೩
	ಬೀದರ	೬	೧೨೮	೧೯	೩೩	೧	-	೧೭	೧೦೩೭೫
	ಹುಮನಾಬಾದ	೬	೮೪	೩	೩೩	೨	-	೧೩	೧೧೫೪೮
	ಜಿಲ್ಲಾ ಮೊತ್ತ	೩೦	೫೯೫	೨೪	೧೭೪	೫	೧	೧೫೧	೩೯೪೧೦

ಮೂಲ: ಬೀದರ ಜಿಲ್ಲೆಯ ಅಂಕಿ ಅಂಶಗಳ ನೋಟ, ೧೯೯೮-೯೯.

ಹವಾಮಾನ (Climate)

ಬೀದರ ಜಿಲ್ಲೆಯು ವರ್ಷಂಪ್ರತಿ ಒಣ ಹವೆಯನ್ನು ಹೊಂದಿರುತ್ತದೆ. ಜಿಲ್ಲೆಯಲ್ಲಿ ಬೇಸಿಗೆಯು ಪೆಬ್ರುವರಿ ಮಧ್ಯದಿಂದ ಪ್ರಾರಂಭವಾಗಿ ಜೂನ್ ತಿಂಗಳ ಮೊದಲನೆಯ ವಾರದವರೆಗೆ ಮುಂದುವರೆಯುತ್ತದೆ.

ಇದಾದ ಮೇಲೆ ನೈಋತ್ಯ ಮಳೆಗಾಳಿ ಪ್ರಾರಂಭವಾಗಿ ಸೆಪ್ಟೆಂಬರ್ ತಿಂಗಳ ಕೊನೆಯವರೆಗೆ ಮಳೆ ಬರುತ್ತಿರುತ್ತದೆ. ಚಳಿಗಾಲ ಡಿಸೆಂಬರ್ ತಿಂಗಳಿನಿಂದ ಪ್ರಾರಂಭವಾಗಿ ಪೆಬ್ರುವರಿ ತಿಂಗಳ ಮಧ್ಯಕ್ಕೆ ಮುಗಿಯುತ್ತದೆ".

ಮಳೆಯ ಪ್ರಮಾಣ:

ಬೀದರ ಜಿಲ್ಲೆಯ ಸರಾಸರಿ ವಾರ್ಷಿಕ ಮಳೆ ಪ್ರಮಾಣ ಸುಮಾರ ೯೦೭.೫ ಮಿಲಿ ಮೀಟರಗಳು (೩೫.೭೫ ಇಂಚು, Inch) ಮಳೆಯ ಪ್ರಮಾಣದ ಬಗೆಗಿನ ವಿವರಗಳು ಕೋಷ್ಠಕ ೨.೨ ರಲ್ಲಿ ಇವೆ.

ಕೋಷ್ಠಕ-೨.೨ ಮಳೆಯ ಪ್ರಮಾಣ

ಕ್ರಮ ಸಂಖ್ಯೆ	ತಾಲ್ಲೂಕು	ವೃಷ್ಠಿ ಮಾಪಕ ಕೇಂದ್ರಗಳು		ವಾಡಿಕೆ ಮಳೆ (ಮೀ. ಮೀ.) (೧೯೦೦-೭೦)	ವಾಸ್ತವಿಕ ಮಳೆ (ಮೀ. ಮೀ)	ಮಳೆಯಾದ ದಿನಗಳು (ಸರಾಸರಿ)
		ಕಾರ್ಯಾನಿರ್ವಹಿಸುತ್ತಿರುವ	ಸ್ಥಗಿತಗೊಂಡಿರುವ			
೧	ಔರಾದ	೬	೧	೮೪೦	೧೧೫೬	೫೩
೨	ಬಸವಕಲ್ಯಾಣ	೬	೨	೬೭೪	೧೦೩೧	೫೩
೩	ಭಾಲ್ಕಿ	೬	೬	೯೩೯	೧೦೪೯	೫೬
೪	ಬೀದರ	೧೦	-	೯೪೦	೧೦೦೭	೫೫
೫	ಹುಮನಾಬಾದ	೭	೪	೮೪೧	೯೮೮	೬೦
	ಜಿಲ್ಲಾ ಮೊತ್ತ	೩೫	೧೩	೮೯೦	೧೦೪೬	೫೫

ಮೂಲ: ಬೀದರ ಜಿಲ್ಲೆಯ ಅಂಕಿ ಅಂಶಗಳ ನೋಟ, ೧೯೯೮-೯೯.

ಜನಸಂಖ್ಯೆ

೧೯೯೧ರ ಜನಗಣತಿಯ ಪ್ರಕಾರ ಜಿಲ್ಲೆಯ ಒಟ್ಟು ಜನಸಂಖ್ಯೆ ೧೨,೫೫,೭೯೯ ಇದ್ದು ಜನಸಾಂದ್ರಂತೆ ೨೩೧ ಪ್ರತಿ ಚದರ ಕಿಲೋ ಮೀಟರಿಗಿರುವುದು. ೨.೩ ಕೋಷ್ಠಕವು ಜಿಲ್ಲೆಯ ಜನಸಂಖ್ಯೆಯ ವಿವರಗಳನ್ನು ನೀಡುತ್ತದೆ.

ಕೋಷ್ಠಕ-೨.೩ ಜಿಲ್ಲೆಯ ಜನಸಂಖ್ಯೆಯ ವಿವರ

ಕ್ರಮ ಸಂಖ್ಯೆ	ತಾಲ್ಲೂಕು	ವಿಸ್ತೀರ್ಣ (ಚದರ ಕಿ.ಮೀ. ಗಳಲ್ಲಿ)	ಒಟ್ಟು ಜನಸಂಖ್ಯೆ	ಗಂಡಸರು	ಹೆಂಗಸರು	ಗ್ರಾಮೀಣ	ನಗರ
೧	ಔರಾದ	೧೨೨೪	೨೧೦೦೪೦	೧೦೬೯೨೬	೧೦೩೧೧೪	೨೧೦೦೪೦	-
೨	ಬಸವಕಲ್ಯಾಣ	೧೨೦೬	೨೪೬೩೪೦	೧೨೪೯೬೯	೧೨೧೩೭೧	೨೦೩೫೯೨	೪೨೭೪೮
೩	ಭಾಲ್ಕಿ	೧೧೧೭	೨೨೨೯೧೮	೧೧೪೦೩೮	೧೦೮೮೮೦	೧೯೬೦೪೨	೨೬೮೭೬
೪	ಬೀದರ	೯೨೬	೩೩೧೪೫೨	೧೭೨೩೬೧	೧೫೯೦೯೧	೧೯೯೦೪೪	೧೩೨೪೦೮
೫	ಹುಮನಾಬಾದ	೯೮೫	೨೪೫೦೪೯	೧೨೪೮೯೮	೧೨೦೧೫೧	೨೦೧೩೭೮	೪೩೬೭೧
	ಜಿಲ್ಲಾ ಮೊತ್ತ	೫೪೫೮	೧೨೫೫೭೯೯	೬೪೩೧೯೨	೬೧೨೬೦೭	೧೦೧೦೦೯೬	೨೪೫೭೦೩

ಮೂಲ: ಬೀದರ ಜಿಲ್ಲೆಯ ಅಂಕಿ ಅಂಶಗಳ ನೋಟ, ೧೯೯೮-೯೯.

ಪರಿಶಿಷ್ಟ ಜಾತಿ: ಪಂಗಡ ಜನಸಂಖ್ಯೆ

ಜಿಲ್ಲೆಯ ೫ ತಾಲೂಕುಗಳಲ್ಲಿ ಪರಿಶಿಷ್ಟ ಜಾತಿ ಹಾಗೂ ಪಂಗಡದವರು ವಾಸವಾಗಿರುತ್ತಾರೆ. ಅವರ ಒಟ್ಟು ಜನಸಂಖ್ಯೆ ೧೯೯೧ರ ಜನಗಣತಿಯ ಪ್ರಕಾರ ೨೬೦೦೩೩ ಹಾಗೂ ೧,೦೪,೨೧೫ ಇರುತ್ತದೆ. ೨.೪ ಕೋಷ್ಠಕವು ಪರಿಶಿಷ್ಟ ಜಾತಿ: ಪಂಗಡದ ಜನಸಂಖ್ಯೆಯನ್ನು ತಾಲೂಕವಾರು ನೀಡುತ್ತದೆ.

ಕೋಷ್ಠಕ-೨.೪ ಜಿಲ್ಲೆಯ ಪರಿಶಿಷ್ಟ ಜಾತಿ: ಪಂಗಡದ ಜನಸಂಖ್ಯೆ

ಕ್ರಮ ಸಂಖ್ಯೆ	ತಾಲೂಕು	ಪರಿಶಿಷ್ಟ ಜಾತಿ	ಪರಿಶಿಷ್ಟ ಪಂಗಡ	ಕೆಲಸಗಾರರು (ಅಲ್ಪಾವಧಿ ಕೆಲಸಗಾರರು ಸೇರಿ)	ಕೆಲಸಗಾರ-ರಲ್ಲದವರು	ಜನಸಾಂದ್ರತೆ (ಪ್ರತಿ ಚದರ ಕಿ.ಮೀ.ಗೆ)	ಜನಸಂಖ್ಯೆ ದಶಕದ ಬೆಳವಣಿಗೆ ಪ್ರಮಾಣ ಶೇ. (೧೯೮೧-೯೧)	ಲಿಂಗ ಪ್ರಮಾಣ
೧	ಔರಾದ	೫೬೩೪೬	೧೨೪೫೭	೯೨೨೯೧	೧೧೭೭೪೯	೧೭೨	೨೦.೮೫	೯೬೪
೨	ಬಸವಕಲ್ಯಾಣ	೫೨೦೭೬	೨೫೮೪೨	೧೦೫೯೪೨	೧೪೦೩೯೮	೨೦೪	೨೩.೦೫	೯೭೧
೩	ಭಾಲ್ಕಿ	೪೭೨೬೦	೧೨೭೨೫	೮೯೬೧೮	೧೩೩೨೯೫	೧೯೯	೨೨.೩೧	೯೫೫
೪	ಬೀದರ	೫೧೩೩೯	೨೧೯೪೨	೧೧೫೯೦೧	೨೧೫೫೫೧	೩೫೮	೩೩.೭೦	೯೨೩
೫	ಹುಮನಾಬಾದ	೫೩೦೧೨	೩೧೨೪೯	೯೬೮೮೭	೧೪೮೧೬೨	೨೪೯	೨೭.೯೨	೯೬೨
	ಜಿಲ್ಲಾ ಮೊತ್ತ	೨೬೦೦೩೩	೧೦೪೨೧೫	೫೦೦೬೩೯	೭೫೫೧೫೫	೨೩೧	೨೬.೧೨	೯೫೨

ಮೂಲ: ಬೀದರ ಜಿಲ್ಲೆಯ ಅಂಕಿ ಅಂಶಗಳ ನೋಟ, ೧೯೯೮-೯೯.

ಕೃಷಿ

ಬೀದರ ಜಿಲ್ಲೆಯು ಪ್ರಮುಖವಾಗಿ ಕೃಷಿ ಜಿಲ್ಲೆ. ಇಲ್ಲಿ ಬಹುಸಂಖ್ಯಾತರು ಕೃಷಿಯನ್ನೇ ಅವಲಂಬಿಸಿರುತ್ತಾರೆ. ಜಿಲ್ಲೆಯ ಔದ್ಯಮಿಕ ಪ್ರಗತಿ ಹೇಳಿಕೊಳ್ಳುವಂತಹದೇನಿಲ್ಲ. ಆದುದರಿಂದ ಜಿಲ್ಲೆಯ ಕೃಷಿಯ ಬಗ್ಗೆ ವಿಸ್ತಾರವಾಗಿ ಹೇಳುವುದು ಸಾಂಪ್ರದಾಯಿಕವಾಗಿದ್ದು, ರೈತರು ಹಳೆಯ ಕೃಷಿಯ ಉಪಕರಣಗಳನ್ನು ಉಪಯೋಗಿಸುತ್ತಾರೆ.

ನೀರಾವರಿ

ಜಿಲ್ಲೆಯ ನೀರಾವರಿ ಪ್ರಮಾಣ ಕೇವಲ ೯.೮೦ ಇರುತ್ತದೆ. ಕಾಲುವೆ, ಕೆರೆ, ಬಾವಿ, ಕೊಳವೆ ಬಾವಿ ಮತ್ತು ಇತರೆ - ಇವೇ ನೀರಾವರಿ ಮೂಲಗಳಾಗಿವೆ ಮತ್ತು ನೀರಾವರಿಯಾದ ನಿವ್ವಳ ಪ್ರದೇಶ ೧೯೯೮-೯೯ರಲ್ಲಿ ೩೭,೧೫೫ ಹೆಕ್ಟೇರು ಆಗಿತ್ತು. ತಾಲೂಕಾವಾರು ನೀರಾವರಿ ಮೂಲಗಳ ವಿವರವನ್ನು ಕೋಷ್ಠಕ ೨.೫ ನೀಡುತ್ತದೆ. ಪ್ರಮುಖ ನೀರಾವರಿಯ ಮೂಲಗಳು ಬಾವಿ ಮತ್ತು ಕೊಳವೆ ಬಾವಿಗಳು. ಕಾಲುವೆ ನೀರಾವರಿಯ ಕ್ಷೇತ್ರ ಕೇವಲ ೧೧೪ ಹೆಕ್ಟೇರು ಭೂಮಿ ಮಾತ್ರ ನೀರಾವರಿ ಯೋಜನೆಗಳಲ್ಲಿ, ಕಾರಂಜಾ ಯೋಜನೆ ಮತ್ತಿತರ ಯೋಜನೆಗಳು ಸಾಕಷ್ಟು ಪ್ರಮಾಣದಲ್ಲಿ ರೈತರ ಭೂಮಿಗೆ ನೀರು ಒದಗಿಸುವಲ್ಲಿ ಅಷ್ಟೊಂದು ಯಶಸ್ವಿಯಾಗಿಲ್ಲ.

ಕೋಷ್ಠಕ-೨.೫ ತಾಲುಕಾವಾರು ನೀರಾವರಿ ಮೂಲಗಳು

ಕ್ರಮ ಸಂಖ್ಯೆ	ತಾಲ್ಲೂಕು	ಕಾಲುವೆ	ಕರೆ	ಬಾವಿ	ಕೊಳವೆ ಬಾವಿ	ಇತರೆ	ಒಟ್ಟು
೧	ಔರಾದ	-	೩೫೫	೧೩೪೯	೨೧೩	೭೫೫	೨೬೭೨
೨	ಬಸವಕಲ್ಯಾಣ	೧೧೪	-	೬೨೦೬	೮೫೭	-	೭೧೭೭
೩	ಭಾಲ್ಕಿ	-	೪೦೦	೩೧೦೧	೧೦೦	-	೩೬೦೧
೪	ಬೀದರ	-	೨೩೮	೬೨೮೦	೪೯೦೬	೪೩೭	೧೧೮೬೧
೫	ಹುಮನಾಬಾದ	-	೧೨೧	೬೪೭೧	೫೨೫೨	-	೧೧೮೪೪
	ಜಿಲ್ಲಾ ಮೊತ್ತ	೧೧೪	೧೧೧೪	೨೩೪೦೭	೧೧೩೨೮	೧೧೯೨	೩೭೧೫೫

ಮೂಲ: ಬೀದರ ಜಿಲ್ಲೆಯ ಅಂಕಿ ಅಂಶಗಳ ನೋಟ, ೧೯೯೮-೯೯.

ಕಾರಂಜಾ ನೀರಾವರಿ ಯೋಜನೆ

ಇದೊಂದು ಪ್ರಮುಖ ನೀರಾವರಿ ಯೋಜನೆ ಮತ್ತು ಬೀದರ, ಭಾಲ್ಕಿ, ಹುಮನಾಬಾದ ತಾಲುಕುಗಳ ೮೮,೦೦೦ ಎಕರೆ ಭೂಮಿಯ ಕೃಷಿಗೆ ನೀರನ್ನು ಒದಗಿಸುವ ಸಾಮರ್ಥ್ಯವನ್ನು ಹೊಂದಿರುತ್ತದೆ. ೧೯೭೩ರಲ್ಲಿ ಯೋಜನೆ ನಿರ್ಮಾಣ ಕಾರ್ಯ ಆರಂಭಗೊಂಡರೂ, ಸರಕಾರದ ನಿರ್ಲಕ್ಷ್ಯದಿಂದ ಇದರ ಪ್ರಗತಿ ಇಂದಿಗೂ ಸಮಾಧಾನಕಾರಿಯಾಗಿರುವುದಿಲ್ಲ[೬]. (ವಿವರಗಳಿಗಾಗಿ ಕೋಷ್ಠಕ ೨.೬ ನೋಡಿ).

ಕೋಷ್ಠಕ-೨.೬ ಕಾರಂಜಾ ನೀರಾವರಿ ಯೋಜನಾ ಪ್ರಗತಿ

ಪ್ರಾರಂಭದ ವರ್ಷ	ಯೋಜನೆಯ ನೀರಾವರಿ ಸಾಮರ್ಥ್ಯ (ಸಂಪೂರ್ಣ) (ಹೆಕ್ಟೇರುಗಳು)	೧೯೯೬ರ ವರೆಗೆ ಪಡೆಯಲಾದ ನೀರಾವರಿ ಸಾಮರ್ಥ್ಯ (ಹೆಕ್ಟೇರುಗಳು)
೧೯೭೩	೪೪೯೭೨	೪೨೫೦ (ಶೇ. ೯.೫)

ಮೂಲ: ಕರ್ನಾಟಕ ಬೃಹತ್ ಮತ್ತು ಮಧ್ಯಮ ನೀರಾವರಿ ಯೋಜನೆಗಳು, ಕರ್ನಾಟಕ ಸರಕಾರ, ೧೯೯೬

ಅರಣ್ಯಗಳು

ಒಂದು ಕಾಲದಲ್ಲಿ ಬೀದರ ಜಿಲ್ಲೆ ದಟ್ಟ ಅರಣ್ಯ ಸಂಪತ್ತಿನ ನಾಡಾಗಿತ್ತು. ಇತಿಹಾಸದ ದಾಖಲೆಯ ಪ್ರಕಾರ ಬಹುಮನಿ ರಾಜ್ಯ ಮನೆತನದ ೯ನೇ ರಾಜ ಅಹಮದ್ ಷಾ ವಲಿ ಬೀದರ ಪರಿಸರದಿಂದ ಆಕರ್ಷಿತನಾಗಿ ತನ್ನ ರಾಜಧಾನಿಯನ್ನು ಕಲ್ಬುರ್ಗಿಯಿಂದ ಬೀದರಿಗೆ ಸ್ಥಳಾಂತರಿಸಿದ ಎಂಬ ಐತಿಹ್ಯವಿದೆ[೭]. ೧೩೦೦ನೇ ಇಸವಿಯಿಂದ ಆಗಾಗ ಬರುತ್ತಿರುವ ಬರಗಾಲ, ರಾಜರುಗಳ ಮಧ್ಯ ನಡೆದ ಯುದ್ಧಗಳು, ಪ್ರಾಣಿ ಹಾಗೂ ಮನುಷ್ಯರ ಸತತ ದಾಳಿ ಮುಂತಾದವುಗಳಿಂದ ಅರಣ್ಯ ಸಂಪತ್ತು ಕಾಲಕ್ರಮೇಣ ನಾಶವಾಗಿ ಹೋಗಿದೆ. ಇಂದು ಜಿಲ್ಲೆಯ ಅರಣ್ಯ ಪ್ರದೇಶ ಶೇಕಡಾ ೪.೬೩ಗೆ ಇಳಿದಿದೆ. (ವಿವರಗಳಿಗೆ ಕೋಷ್ಟಕ ೨.೭ ನೋಡಿ).

ಕೋಷ್ಟಕ-೨.೭ ಜಿಲ್ಲೆಯ ಅರಣ್ಯ ಪ್ರದೇಶದ ವಿವರ

ಕ್ರಮ ಸಂಖ್ಯೆ	ತಾಲ್ಲೂಕು	ಭೌಗೋಳಿಕ ವಿಸ್ತೀರ್ಣ (ಹೆಕ್ಟರ)	ಅರಣ್ಯ (ಹೆಕ್ಟರ)
೧	ಔರಾದ	೧೨೧೬೨೨	೨೩೧೧
೨	ಬಸವಕಲ್ಯಾಣ	೧೧೯೪೩೮	೭೧೪೩
೩	ಭಾಲ್ಕಿ	೧೦೯೨೫೯	೨೫೮೪
೪	ಬೀದರ	೯೨೨೦೩	೪೬೫೫
೫	ಹುಮನಾಬಾದ	೯೯೨೪೩	೮೩೯೯
	ಜಿಲ್ಲಾ ಮೊತ್ತ	೫೪೧೭೬೫	೨೫೦೯೨

ಮೂಲ: ಬೀದರ ಜಿಲ್ಲೆಯ ಅಂಕಿ ಅಂಶಗಳ ನೋಟ, ೧೯೯೮-೯೯.

ಒಂದು ಪ್ರದೇಶದ ಒಟ್ಟು ಭೂ ವಿಸ್ತೀರ್ಣದಲ್ಲಿ ೩ನೇ ಒಂದು ಭಾಗವಾದರೂ ಅರಣ್ಯ ಪ್ರದೇಶವಾಗಿರಬೇಕೆಂಬ ಅಭಿಪ್ರಾಯವನ್ನು ಭಾರತ ಸರ್ಕಾರಕದ ರಾಷ್ಟ್ರೀಯ ನೀತಿಯ ನಿರ್ಣಯವು ೧೯೫೨ರಲ್ಲಿಯೇ ಹೇಳಿದೆ[೮]. ಜಿಲ್ಲೆಯಲ್ಲಿ ಶುಷ್ಕ ವಾತಾವರಣದ ಉಷ್ಣವಲಯದ ವಾಯುಗುಣವಿರುತ್ತದೆ. ಆದುದರಿಂದ ಅರಣ್ಯ ಪ್ರದೇಶವನ್ನು ಹೆಚ್ಚಿಸುವುದು ಬಹಳ ಕಷ್ಟದ ಕೆಲಸ.

ರಾಜ್ಯ ಸರಕಾರ ಅರಣ್ಯ ಅಭಿವೃದ್ಧಿ ಪಡಿಸುವ ಯೋಜನೆಗಳನ್ನು ಬೀದರ ಮತ್ತು ಹುಮನಾಬಾದ ತಾಲೂಕಿನ ಕೆಲವು ಗ್ರಾಮಗಳಲ್ಲಿ ಪ್ರಾರಂಭಿಸಿದೆ. ಬೀದರನಲ್ಲಿ ಅರಣ್ಯ ಸಂರಕ್ಷಣೆಯ ಬಗ್ಗೆ ಶಿಕ್ಷಣ ನೀಡಲಾಗುತ್ತಿರುವ ಈ ತರಬೇತಿ ಶಾಲೆಯಿದೆ. ೧೯೯೫ರಿಂದ ಇತ್ತೀಚೆಗೆ ಅರಣೀಕರಣಕ್ಕೆ ಸಂಬಂಧಿಸಿದಂತೆ ಹೊಸ ಯೋಜನೆಗಳನ್ನು ರಾಜ್ಯ ಸರಕಾರ ಬೀದರ ಜಿಲ್ಲೆಯಲ್ಲಿಯೂ ಪ್ರಾರಂಭಿಸಿದೆ. ಈ ಅರಣ್ಯವಲ್ಲದ ಪ್ರದೇಶದಲ್ಲೂ ಅರಣ್ಯ ಬೆಳೆಸುವ ಕಾರ್ಯಕ್ರಮಕ್ಕೆ 'ಸಾಮಾಜಿಕ ಅರಣ್ಯ' ಎಂದು ಕರೆಯಲಾಗುತ್ತದೆ. ಬೇಡ

ಸಮುದಾಯ ತಮ್ಮ ಉಪಜೀವನಕ್ಕಾಗಿ ಅರಣ್ಯವನ್ನು ಅವಲಂಭಿಸಿರುವುದರಿಂದ, ಅರಣ್ಯ ಬೆಳೆಸುವ ಕಾರ್ಯಕ್ರಮಗಳು ಈ ಸಮುದಾಯದವರಿಗೆ ಸ್ವಲ್ಪ ಮಟ್ಟಿಗೆ ಆರ್ಥಿಕವಾಗಿ ಒಳಿತನ್ನು ಉಂಟು ಮಾಡುತ್ತದೆ.

ವ್ಯವಸಾಯ ಕ್ಷೇತ್ರ

ಕೃಷಿಯೇ ಮುಖ್ಯವಾಗಿರುವ ಬೀದರ ಜಿಲ್ಲೆಯ ವ್ಯವಸಾಯ ಕ್ಷೇತ್ರ ಒಟ್ಟು ಭೌಗೋಳಿಕ ವಿಸ್ತೀರ್ಣದೊಂದಿಗೆ ಹೋಲಿಸಿದಾಗ ಗಮನಾರ್ಹವಾಗಿದೆಯಂದರೆ ತಪ್ಪಾಗಲಾರದು. ಉದಾಹರಣೆಗೆ ಜಿಲ್ಲೆಯ ಒಟ್ಟು ಭೌಗೋಳಿಕ ವಿಸ್ತೀರ್ಣ ೫,೪೧,೭೬೫ ಹೇಕ್ಟೇರ್ಸ್ ಮತ್ತು ಬಿತ್ತನೆಯಾಗಿರುವ ಪ್ರದೇಶದ ಚಿತ್ರಣ ೩,೭೦,೪೧೧ ಹೆಕ್ಟೇರ್ಸ್ (ಶೇಕಡಾ ೭೦). ಕೋಷ್ಠಕ ೨.೮ ಜಿಲ್ಲೆಯ ವ್ಯವಸಾಯದ ತಾಲೂಕುವಾರು ವಿವರವನ್ನು ನೀಡುತ್ತದೆ.

ಕೋಷ್ಠಕ-೨.೮ ಜಿಲ್ಲೆಯ ವ್ಯವಸಾಯ ಕ್ಷೇತ್ರ

ಕ್ರಮ ಸಂಖ್ಯೆ	ತಾಲ್ಲೂಕು	ಬಿತ್ತನೆಯಾಗಿರುವ ಪ್ರದೇಶ (೧೯೯೮-೯೯)		
		ನಿವ್ವಳ	ಒಂದಕ್ಕಿಂತ ಹೆಚ್ಚು ಬಾರಿ	ಒಟ್ಟು ಬಿತ್ತನೆಯಾದ ಪ್ರದೇಶ
೧	ಔರಾದ	೯೨೦೦೯	೧೯೪೭೩	೧೧೧೪೮೨
೨	ಬಸಕಲ್ಯಾಣ	೮೭೧೨೪	೧೧೯೭೪	೯೯೦೯೮
೩	ಭಾಲ್ಕಿ	೮೩೫೧೧	೨೮೨೧೭	೧೧೧೭೨೮
೪	ಬೀದರ	೫೬೨೭೬	೮೯೪೪	೬೫೨೨೦
೫	ಹುಮನಾಬಾದ	೬೦೫೨೧	೧೫೪೭೭	೭೫೯೯೮
	ಜಿಲ್ಲಾ ಮೊತ್ತ	೩೭೯೪೪೧	೮೪೦೮೫	೪೬೩೫೨೬

ಮೂಲ: ಬೀದರ ಜಿಲ್ಲೆಯ ಅಂಕಿ ಅಂಶಗಳ ನೋಟ, ೧೯೯೮-೯೯.

ಭೂ-ಹಿಡುವಳಿಗಳು (Size of Land holdings)

ಜಿಲ್ಲೆಯ ಭೂ ಹಿಡುವಳಿಗಳು ೧೯೯೦-೯೧ರ ಗಣತಿಯ ಪ್ರಕಾರ ಹೆಚ್ಚಾಗಿ ಸಣ್ಣ ಮತ್ತು ಅತಿಸಣ್ಣ ಪ್ರಮಾಣದಾಗಿರುತ್ತವೆ. ಜಿಲ್ಲೆಯು ಕೃಷಿಯಲ್ಲಿ ಹಿಂದುಳಿದಿರಲು ಇದೊಂದು ಪ್ರಬಲವಾದ ಕಾರಣವಾಗಿರುತ್ತದೆ. ಕೋಷ್ಠಕ ೨.೯ ಜಿಲ್ಲೆಯ ಭೂ-ಹಿಡುವಳಿಗಳ ವಿವರವನ್ನು ನೀಡುತ್ತದೆ. ನಾವು ಅಭ್ಯಾಸ ಮಾಡಲಿರುವ ಬೇಡ ಸಮುದಾಯದವರ ಭೂ ಹಿಡುವಳಿಗಳ ಗಾತ್ರವು ಅತಿ ಸಣ್ಣ ಮತ್ತು ಸಣ್ಣದಾಗಿರುವುದರಿಂದ, ಬೇಡ ಈ ಜನರ ಕೃಷಿ ಪ್ರಗತಿಯೂ ಆಗಿರುವುದಿಲ್ಲ.

ಕೋಷ್ಟಕ-೨.೯ ಭೂಹಿಡುವಳಿಗಳು ಮತ್ತು ವಿಸ್ತೀರ್ಣ (ಹೆ) ೧೯೯೦-೯೧ರ ಗಣತಿ

ಕ್ರಮ ಸಂಖ್ಯೆ	ತಾಲ್ಲೂಕು	ಅತೀ ಸಣ್ಣ (೧ ಹೆ, ಗೂ) ಕಡಿಮೆ		ಸಣ್ಣ (೧-೨ ಹೆ)		ಅರೆ ಮಧ್ಯಮ (೨-೪ ಹೆ)		ಮಧ್ಯಮ (೪-೧೦ ಹೆ)		ದೊಡ್ಡ (೧೦ ಹೆ. ಗೂ) ಹೆಚ್ಚು		ಒಟ್ಟು	
		ಹಿಡುವಳಿಗಳ ಸಂಖ್ಯೆ	ವಿಸ್ತೀರ್ಣ	ಸಂಖ್ಯೆ	ವಿಸ್ತೀರ್ಣ	ಸಂಖ್ಯೆ	ವಿಸ್ತೀರ್ಣ	ಸಂಖ್ಯೆ	ವಿಸ್ತೀರ್ಣ	ಸಂಖ್ಯೆ	ವಿಸ್ತೀರ್ಣ	ಸಂಖ್ಯೆ	ವಿಸ್ತೀರ್ಣ
೧	ಔರಾದ	೨೫೯೩	೧೭೭೨	೧೨೨೮೭	೧೮೬೩೬	೧೦೯೧೪	೨೯೭೬೪	೬೪೪೭	೩೯೪೪೧	೧೬೭೮	೨೩೭೬೫	೩೩೯೪೯	೧೧೩೩೭೮
೨	ಬಸವಕಲ್ಯಾಣ	೪೧೨೭	೨೬೮೬	೧೩೧೮೧	೧೯೪೭೬	೧೧೪೭೩	೩೧೨೫೦	೫೬೯೦	೩೪೩೨೪	೧೧೮೫	೧೬೪೨೮	೩೫೫೬೫೬	೧೦೪೧೬೪
೩	ಭಾಲ್ಕಿ	೪೬೮೧	೩೦೬೭	೧೪೫೬೦	೨೧೩೯೯	೧೧೬೮೪	೩೨೨೯೭	೫೨೪೬	೩೦೯೬೯	೯೭೫	೧೩೩೫೪	೩೭೧೪೬	೧೦೧೦೮೬
೪	ಬೀದರ	೬೦೫೩	೩೫೬೯	೧೧೦೩೩	೧೬೧೨೨	೭೮೪೦	೨೧೧೪೧	೩೧೮೦	೧೮೭೦೫	೭೧೫	೯೮೭೫	೨೮೮೨೧	೬೯೪೧೨
೫	ಹುಮನಾಬಾದ	೪೬೦೦	೩೧೦೧	೧೨೪೨೫	೧೮೫೨೪	೯೦೧೮	೨೪೩೪೩	೩೭೩೬	೨೨೦೨೭	೬೭೬	೯೫೨೬	೩೦೪೫೫	೭೭೫೨
	ಜಿಲ್ಲಾ ಮೊತ್ತ	೨೨೦೫೪	೧೪೧೯೫	೬೩೪೮೬	೯೪೧೫೭	೫೦೯೨೯	೧೩೭೮೭೯೫	೨೪೩೨೯	೧೪೫೪೬೬	೫೨೨೯	೭೨೯೪೮	೧೬೬೦೨೭	೪೬೫೫೬೧

ಮೂಲ: ಬೀದರ ಜಿಲ್ಲೆಯ ಅಂಕಿ ಅಂಶಗಳ ನೋಟ, ೧೯೯೮-೯೯.

ಮುಖ್ಯ ಬೆಳೆಗಳು

ಭತ್ತ, ಜೋಳ, ಸಜ್ಜೆ, ಗೋದಿ, ಕಡಲೆ, ತೊಗರಿ, ಹೆಸರು, ಉದ್ದು, ನೆಲಗಡಲೆ, ಬೆಳೆಗಳು. ಜೋಳ ಜಿಲ್ಲೆಯ ಮುಖ್ಯ ಆಹಾರ ಬೆಳೆ. ಕೋಷ್ಠಕ ೨.೧೦ ಜಿಲ್ಲೆಯ ಮುಖ್ಯ ಬೆಳೆಗಳ ವಿಸ್ತೀರ್ಣವನ್ನು ನೀಡುತ್ತದೆ. ಆಹಾರ ಬೆಳೆಗಳಲ್ಲಿ ಇತ್ತೀಚೆಗೆ ಮುಸುಕಿನ ಜೋಳವನ್ನು ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿ ಬೆಳೆಯಲಾಗುತ್ತದೆ. ೧೯೯೯ರಿಂದ ಇಚೇಗೆ ಹೈಬ್ರಿಡ್ ಜೋಳವನ್ನು ಸಹ ರೈತರು ಹೆಚ್ಚಾಗಿ ಬೆಳೆಸಲು ಆರಂಭಿಸಿದ್ದಾರೆ. ಪ್ರಾರಂಭದಲ್ಲಿ ಹೈಬ್ರೀಡ್ ಜೋಳವನ್ನು ಬಹಳ ಕನಿಷ್ಠ ಎಂದು ತಿಳಿದು, ಭೂಮಿಯಲ್ಲಿನ ಎಲ್ಲ ಸತ್ವವನ್ನು ಹೀರುವುದೆಂದು ಭಾವಿಸಿ ಮತ್ತು ಆರೋಗ್ಯಕ್ಕೆ ಒಳ್ಳೆಯದಲ್ಲ ಎಂದು ತಿಳಿದು ರೈತರು ಇದನ್ನು ಹೆಚ್ಚಾಗಿ ಬೆಳೆಯುತ್ತಿರಲಿಲ್ಲ, ಕಾಲಕ್ರಮೇಣ ಇದರ ಹೆಚ್ಚಿನ ಇಳುವರಿ ಹಾಗೂ ಶೀಘ್ರ ಬೆಳವಣಿಗೆಯಿಂದಾಗಿ ಇಂದು ಇದನ್ನು ಜಿಲ್ಲೆಯಾದ್ಯಂತ ಬೆಳೆಸಲಾಗುತ್ತದೆ. ಈ ಬೆಳೆ ಕಡಿಮೆ ಭೂ-ಸತ್ವವಿರುವ ಭೂಮಿಯಲ್ಲಿಯೂ ಬೆಳೆಯಬಹುದಾಗಿರುವುದರಿಂದ ಇದರ ಜನಪ್ರೀಯತೆ ಕ್ರಮೇಣ ಹೆಚ್ಚುತ್ತಿದೆ. ಇತ್ತೀಚೆಗೆ ಭತ್ತವನ್ನು ಸಹ ಎಲ್ಲ ತಾಲೂಕುಗಳಲ್ಲಿ ಬೆಳೆಯಲಾಗುತ್ತದೆ. ಭತ್ತ ಒಂದು ಅಧಿಕ ಮೌಲ್ಯದ ಆಹಾರ ಬೆಳೆ. ಬಸವಕಲ್ಯಾಣ ತಾಲೂಕು ಭತ್ತ ಬೆಳೆಯುವ ತಾಲೂಕುಗಳಲ್ಲಿ ಮುಂಚೂಣಿಯಲ್ಲಿರುತ್ತದೆ. ಇತ್ತೀಚಿನ ವರ್ಷಗಳಲ್ಲಿ ತರಕಾರಿ ಬೆಳೆಗಳಾದ ಇರುಳ್ಳಿ, ಬೆಳ್ಳುಳಿ, ಗಜ್ಜರಿ, ಮೆಣಸಿನಕಾಯಿ, ಮುಳ್ಳ ಬದನೆಕಾಯಿ, ಸರಕಾರಿ ಬದನೆಕಾಯಿ, ಬೆಂಡಿಕಾಯಿ, ಮೂಲಂಗಿ, ಆಲೂಗಡ್ಡೆ, ಟಮಾಟೊ, ತರಕಾರಿ, ಸೊಪ್ಪು ಇತ್ಯಾದಿಗಳನ್ನು ಜಿಲ್ಲೆಯಲ್ಲಿ ತುಂಬಾ ಬೆಳೆಯಲಾಗುತ್ತದೆ.

ಕೋಷ್ಠಕ-೨.೧೦ ಜಿಲ್ಲೆಯ ಮುಖ್ಯ ಬೆಳೆಗಳು

ಕ್ರಮ ಸಂಖ್ಯೆ	ತಾಲ್ಲೂಕು	ಭತ್ತ	ಜೋಳ	ಸಜ್ಜೆ	ಗೋಧಿ	ಮುಸುಕಿನ ಜೋಳ	ಉಪತೃಣ ಬೆಳೆಗಳು	ಒಟ್ಟು ಎಕದಳ ಧಾನ್ಯಗಳು	ಕಡಲೆ	ತೊಗರೆ	ದ್ವಿದಳ ಧಾನ್ಯಗಳು	ಒಟ್ಟು ದ್ವಿದಳ ಧಾನ್ಯಗಳು	ನೆಲ-ಗಡಲೆ	ಕಬ್ಬು	ಹತ್ತಿ	ಇತರ ಬೆಳೆಗಳು
೧	ಔರಾದ	೧೫೪೬	೩೦೫೪೩	೧೪೩	೧೭೨೦	೦೯	೫೬	೩೪೦೧೭	೧೧೧೨೭	೧೩೧೭೮	೩೭೧೧೩	೬೧೪೧೮	೫೦೧	೮೪೧	೩೩೮೧	೧೧೩೨೪
೨	ಬಸವಕಲ್ಯಾಣ	೨೭೭೫	೨೨೭೦೩	೧೦೫೮೩	೨೩೩೬	೧೫೧	೪೮೨	೩೯೦೩೦	೬೯೯೮	೧೨೦೦೮	೧೬೪೧೨	೩೫೪೧೮	೧೫೩೯	೩೬೩೧	-	೧೯೪೮೦
೩	ಭಾಲ್ಕಿ	೧೦೪೧	೨೪೯೮೮	೧೧೯	೮೭೯	೪೨	೧೨	೨೭೦೮೧	೧೪೭೯೩	೧೨೭೭೯	೪೫೬೯೮	೭೩೨೭೦	೪೦೨	೨೭೯೮	೧೬೦	೮೦೧೭
೪	ಬೀದರ	೧೯೪೬	೧೭೪೮೦	೩೧೩	೧೪೮೭	೬೩	೩೮	೨೧೩೨೭	೫೧೬೧	೫೮೯೦೩	೧೭೭೮೪	೨೮೮೩೮	೨೧೧	೮೪೨೯	೪೯	೬೩೬೬
೫	ಹುಮನಾಬಾದ	೨೨೭೯	೨೦೦೭೪	೨೮೩೬	೧೭೦೬	೪೧	೫೩೦	೨೭೪೬೬	೩೬೫೨	೧೦೪೯೬	೧೩೯೮೬	೨೮೧೩೪	೧೧೧೪	೮೮೧೯	೨೬	೧೦೪೩೯
	ಜಿಲ್ಲಾ ಮೊತ್ತ	೯೫೮೭	೧೧೫೭೮೮	೧೩೯೯೪	೮೧೨೮	೩೦೬	೧೧೮	೧೪೮೯೨೧	೪೧೭೩೧	೫೪೩೫೪	೧೩೦೯೯೩	೨೨೭೦೭೮	೩೭೬೭	೨೪೫೧೮	೩೬೧೬	೫೫೬೨೬

ಮೂಲ: ಬೀದರ ಜಿಲ್ಲೆಯ ಅಂಕಿ ಅಂಶಗಳ ನೋಟ, ೧೯೯೮-೯೯.

ಆಹಾರ ಧಾನ್ಯಗಳು, ದ್ವಿದಳ ಧಾನ್ಯಗಳು ಹಾಗೂ ಹಣದ ಬೆಳೆಗಳು (Cash crops):

ಕೃಷಿ ಬೆಳೆಗಳನ್ನು ನಾವು ಆಹಾರ ಬೆಳೆಗಳು ಮತ್ತು ವಾಣಿಜ್ಯ ಬೆಳೆಗಳೆಂದು ಸ್ಥೂಲವಾಗಿ ವಿಭಜಿಸಬಹುದು. ದ್ವಿದಳ ಧಾನ್ಯಗಳನ್ನು ಆಹಾರ ಬೆಳೆಗಳಲ್ಲಿಯೇ ಕೂಡಿಸಿಕೊಳ್ಳಲಾಗುತ್ತದೆ. ವ್ಯವಸಾಯಕ್ಕಿರುವ ಭೂಮಿ ಶೇಕಡಾ ೯೦ ಭಾಗದಲ್ಲಿ ಆಹಾರ ಬೆಳೆಗಳನ್ನು ಮತ್ತು ಶೇಕಡಾ ೧೦ ಭಾಗದಲ್ಲಿ ವಾಣಿಜ್ಯ ಬೆಳೆಗಳನ್ನು ಬೆಳೆಯಲಾಗುತ್ತದೆ. ಕೋಷ್ಟಕ ೨.೧೧ ಆಹಾರ ಮತ್ತು ಆಹಾರೇತರ ಬೆಳೆಗಳ ಮಾಹಿತಿಯನ್ನು ನೀಡುತ್ತದೆ. ಜಿಲ್ಲೆಯಲ್ಲಿ ವಾಣಿಜ್ಯ ಬೆಳೆಗಳಿಗೆ ಹೆಚ್ಚಿನ ಪ್ರಾಧಾನ್ಯತೆ ಸಿಕ್ಕಿಲ್ಲ. ಆದರೆ, ಇಂದು ವ್ಯವಸಾಯಗಾರರ ಗಮನ ಈ ಕಡೆ ಹೆಚ್ಚಾಗಿ ತೊಡಗಿದೆ.

ಕೋಷ್ಟಕ-೨.೧೧ ಆಹಾರ ಮತ್ತು ವಾಣಿಜ್ಯ ಬೆಳೆಗಳು (ಶೇಕಡಾವಾರು) (೧೯೯೮-೯೯)

ಒಟ್ಟು ಆಹಾರ ಧಾನ್ಯಗಳು (ಏಕದಳ ಹಾಗೂ ದ್ವಿದಳ ಧಾನ್ಯಗಳು) ಹೆಕ್ಟೇರುಗಳಲ್ಲಿ	ಒಟ್ಟು ವಾಣಿಜ್ಯ/ಹಣದ ಬೆಳೆಗಳು (ನೆಲೆಗಡಲೆ ಕಬ್ಬು ಮತ್ತು ಹತ್ತಿ) ಹೆಕ್ಟೇರುಗಳಲ್ಲಿ	ಒಟ್ಟು ಬಿತ್ತನೆಯಾದ ಕ್ಷೇತ್ರ ಹೆಕ್ಟೇರುಗಳು
೩,೭೫,೯೯ (೯೦.೦೦%)	೩೧,೯೦೧ (೧೦.೦೦%)	೪,೦೭,೯೦೦ (೧೦೦.೦೦%)

ಮೂಲ: ಬೀದರ ಜಿಲ್ಲೆಯ ಅಂಕಿ ಅಂಶಗಳ ನೋಟ, ೧೯೯೮-೯೯.

ರೈತರಿಗೆ ಹೆಚ್ಚಿನ ಆದಾಯವನ್ನು ಕೊಡುವ ರೇಷ್ಮೆ ಬೇಸಾಯ ಜಿಲ್ಲೆಯಲ್ಲಿ ಅಷ್ಟೊಂದು ಪ್ರಮುಖವಾಗಿಲ್ಲ. ಆದರೂ, ರೇಷ್ಮೆ ಬೇಸಾಯವನ್ನು ಜನಪ್ರೀಯಗೊಳಿಸಲು ರೇಷ್ಮೆ ಇಲಾಖೆ ಪರಿಶ್ರಮಪಡುತ್ತಿದೆ. ಕೋಷ್ಟಕ ೨.೧೨ ರೇಷ್ಮೆ ಬೇಸಾಯದ ವಿವರವನ್ನು ನೀಡುತ್ತದೆ.

ಕೋಷ್ಟಕ-೨.೧೨ ರೇಷ್ಮೆ ಬೇಸಾಯ ೧೯೯೮-೯೯

ಕ್ರಮ ಸಂಖ್ಯೆ	ತಾಲ್ಲೂಕು	ಹಿಪ್ಪನೇರಳೆ ಕ್ಷೇತ್ರ (ಹೆ)	ಚಾಕಿ ಸಾಕಾಣಿಕೆ ಕೇಂದ್ರಗಳು	ಗೂಡು ಉತ್ಪಾದನೆ (ಟನಗಳಲ್ಲಿ)
೧	ಔರಾದ	೫೧	೪	೭.೩೮೧
೨	ಬಸವಕಲ್ಯಾಣ	೪೮	೪	೪.೨೪೩
೩	ಭಾಲ್ಕಿ	೨೫	೪	೨.೨೪೪
೪	ಬೀದರ	೪೧	೩	೫.೩೭೪
೫	ಹುಮನಾಬಾದ	೪೫	೪	೪.೯೯೪
	ಜಿಲ್ಲಾ ಮೊತ್ತ	೨೧೦	೧೯	೨೪.೨೩೬

ಮೂಲ: ಬೀದರ ಜಿಲ್ಲೆಯ ಅಂಕಿ ಅಂಶಗಳ ನೋಟ, ೧೯೯೮-೯೯.

ಜಿಲ್ಲೆಯ ಪಶು ಸಂಪತ್ತು

ಕೃಷಿ ಪ್ರಧಾನವಾಗಿರುವ ಜಿಲ್ಲೆಯಾದ ಬೀದರನಲ್ಲಿ ಪಶು ಸಂಗೋಪನೆಗೆ ಸಾಕಷ್ಟು ಅವಕಾಶವಿದೆ. ಕೋಷ್ಠಕ ೨.೧೩ ಪಶುಪಾಲನೆಯ ವಿವರವನ್ನು ನೀಡುತ್ತದೆ. ಜಿಲ್ಲೆಯ ಮುಖ್ಯ ಜಾನುವಾರುಗಳು, ದನ-ಕರುಗಳು, ಎಮ್ಮೆಗಳು, ಕುರಿಗಳು, ಆಡುಗಳು, ಕೋಳಿಗಳು, ಹಂದಿಗಳು ಮತ್ತು ನಾಯಿಗಳು ಇವೆ. ಜಿಲ್ಲೆಯಲ್ಲಿ ಹೆಚ್ಚಾಗಿ ಕಂಡುಬರುವ ಮತ್ತು ಜನಪ್ರೀಯವಾಗಿರುವ ದನಗಳ ತಳಿಯೇ 'ದೇವಣಿ' ತಳಿ[೧೧]. ಈ ತಳಿಯ ಎತ್ತುಗಳು ಹೆಚ್ಚಾಗಿ ಔರಾದ ತಾಲೂಕಿನಲ್ಲಿವೆ. ದೇವಣಿ ತಳಿಯ ಹಸುಗಳು ನೀಡುವ ಹಾಲಿನ ಪ್ರಮಾಣ ಇತರ ತಳಿಗಳಿಗಿಂತ ಅಧಿಕವಾಗಿರುತ್ತದೆ. ಕೋಳಿಗಳಲ್ಲಿ ದೇಶಿಯ ತಳಿಯ ಕೋಳಿಗಳೇ ಹೆಚ್ಚಾಗಿವೆ ಮತ್ತು ಉತ್ತಮ ತಳಿಯ ಕೋಳಿಗಳು ಹುಮನಾಬಾದ ಕೈಗಾರಿಕಾ ಕ್ಷೇತ್ರದಲ್ಲಿ ಮಾತ್ರ ಕಂಡುಬರುತ್ತವೆ. ಒಟ್ಟಿನಲ್ಲಿ ಸ್ಥಳೀಯ ದನಕರುಗಳು ಮತ್ತು ಇನ್ನಿತರ ಪ್ರಾಣಿಗಳು ಹೆಚ್ಚಾಗಿವೆ ಹೊರತು ಮಿಶ್ರ ತಳಿಯ ದನಕರುಗಳು ಮತ್ತು ಪ್ರಾಣಿಗಳು ಅಲ್ಲ.

ಕೋಷ್ಠಕ-೨.೧೩ ಜಿಲ್ಲೆಯ ಪಶು ಸಂಪತ್ತು

ಕ್ರಮ ಸಂಖ್ಯೆ	ತಾಲ್ಲೂಕು	ದನ	ಎಮ್ಮೆ	ಕುರಿ	ಆಡು (ಮೇಕೆ)	ಹಂದಿ	ನಾಯಿ	ಇತರೆ ಜಾನುವಾರು	ಒಟ್ಟು ಜಾನು ವಾರುಗಳು	ಕೋಳಿ (ಕುಕ್ಕುಟ)
	ಔರಾದ	೬೨೨೭೮	೩೫೬೦೭	೧೪೦೨೩	೨೬೩೪೮	-	೩೧೬೧	೧೫೦೪	೧೪೨೯೨೧	೧೨೬೭೨
	ಬಸವಕಲ್ಯಾಣ	೨೦೮೦೯	೨೮೨೦೪	೧೭೧೧೦	೨೮೯೬೫	೪೪೧೨	೬೮೬೭	೨೧೩	೧೫೬೫೮೦	೩೯೧೩೩
	ಭಾಲ್ಕಿ	೫೨೭೨೩	೨೯೧೭೬	೧೦೦೧೫	೨೧೩೪೧	೨೨೭೯	೫೪೯೯	೫೫೩	೧೨೧೫೮೬	೧೯೫೦೨
	ಬೀದರ	೩೮೮೯೧	೩೫೬೦೭	೧೪೦೨೩	೨೬೩೪೮	೨೭೩೬	೭೨೧೩	೨೭೯	೧೨೫೦೯೭	೩೭೦೭೯
	ಜಿಲ್ಲಾ ಮೊತ್ತ	೨೭೭೫೧೯	೧೫೬೪೧೬	೭೧೫೭೯	೧೩೦೯೦೫	೧೨೧೯೫	೨೮೫೧೮	೨೬೯೪	೨೭೯೮೨೬	೫೩೯೪೯೦

ಮೂಲ: ಬೀದರ ಜಿಲ್ಲೆಯ ಅಂಕಿ ಅಂಶಗಳ ನೋಟ, ೧೯೯೮-೯೯.

ಪಶು ವೈದ್ಯ ಸೇವಾ ಸೌಲಭ್ಯಗಳು

ಜಿಲ್ಲೆಯಲ್ಲಿ ಪಶು ವೈದ್ಯ ಸೇವಾ ಸಂಸ್ಥೆಗಳು ಅಸ್ತಿತ್ವದಲ್ಲಿವೆ. (ಕೋಷ್ಠಕ ೨.೧೪ ನೋಡಿ) ಜಿಲ್ಲೆಯ ಪಶು ಸಂಪತ್ತಿಗೆ ಹೋಲಿಸಿದಾಗ ಪಶು ವೈದ್ಯ ಸೇವಾ ಕೇಂದ್ರಗಳು ಕಡಿಮೆ ಪ್ರಮಾಣದಲ್ಲಿವೆ ಎಂದು ಹೇಳಬಹುದು. ಇತ್ತೀಚಿನ ವರ್ಷಗಳಲ್ಲಿ ಹೈನುಗಾರಿಕೆ ಅಭಿವೃದ್ಧಿಯಾಗುತ್ತಿದೆ. ಹಾಲಿನ ಉತ್ಪಾದಕ ಸಹಕಾರ ಸಂಘಗಳು ಅಷ್ಟೊಂದು ತೃಪ್ತಿಕರವಾಗಿ ಕಾರ್ಯವನ್ನು ಮಾಡುತ್ತಿಲ್ಲ. ಕರ್ನಾಟಕ ಹಾಲು ಒಕ್ಕೂಟ (K.M.F.) ಹೈನುಗಾರಿಕೆಯ ಅಭಿವೃದ್ಧಿಗಾಗಿ ಗುಲಬರ್ಗಾ ಮತ್ತು ಬೀದರ ಜಿಲ್ಲೆಯನ್ನು ಒಂದು ಘಟಕ (unit)ವನ್ನಾಗಿ

ಮಾಡಿಕೊಂಡಿದೆ. ಬೀದರ ಜಿಲ್ಲೆಯ ಗುಲಬರ್ಗಾ ಜಿಲ್ಲೆಗಿಂತಲೂ ಹಾಲಿನ ಉತ್ಪಾದನೆಯಲ್ಲಿ ಮುಂದಿದೆ[೧೧]. ಇಲ್ಲಿನ ಹಾಲಿನ ಸಹಕಾರಿ ಸಂಘಗಳು ಸಹ ಒಳ್ಳೆಯ ರೀತಿಯಿಂದ ಕೆಲಸ ಮಾಡುತ್ತಿವೆ. ಆದಕಾರಣ, ಮುಂಬರುವ ವರ್ಷಗಳಲ್ಲಿ ಬೀದರ ಜಿಲ್ಲೆ ಈ ದಿಶೆಯಲ್ಲಿ ಹೆಚ್ಚು ಪರಿಣಾಮಕಾರಿಯಾಗಿ ಕಾರ್ಯ ಕೈಗೊಳ್ಳುವ ಭರವಸೆ ಇದೆ.

ಕೋಷ್ಟಕ-೨.೧೪ ಪಶು ವೈದ್ಯ ಆಸ್ಪತ್ರೆಗಳು ಇತ್ಯಾದಿ

ಕ್ರಮ ಸಂಖ್ಯೆ	ತಾಲ್ಲೂಕು	ಪಶುವೈದ್ಯ ಆಸ್ಪತ್ರೆಗಳು	ಪಶು ಚಿಕಿತ್ಸಾಲಯಗಳು	ಪ್ರಾಥಮಿಕ ಪಶುವೈದ್ಯ ಕೇಂದ್ರಗಳು	ಸಂಚಾರಿಪಶು ಚಿಕಿತ್ಸಾಲಯಗಳು	ಕೃತಕ ಗರ್ಭಧಾರಣೆ ಕೇಂದ್ರಗಳು ಹಾಗೂ ತರಬೇತಿ ಕೇಂದ್ರಗಳು	ಇತರೆ ಕೇಂದ್ರಗಳು	ಒಟ್ಟು ಪಶುವೈದ್ಯ ಶಾಲೆಗಳು	ಹಿಡಿದ ಮೀನುಗಳು (ಟನ್‌ಗಳಲ್ಲಿ)	ಆದಾಯ (ಲಕ್ಷ ರೂ. ಗಳಲ್ಲಿ)
೧	ಔರಾದ	೧	೪	೧೨	೧	-	-	೧೮	೩೫೭	೩೬
೨	ಬಸವಕಲ್ಯಾಣ	೧	೫	೮	೧	-	-	೧೫	೧೫೧	೧೫
೩	ಭಾಲ್ಕಿ	೧	೬	೧೪	೧	-	-	೨೨	೪೬೪	೪೬
೪	ಬೀದರ	೧	೫	೯	೧	೫	೫	೨೬	೬೩೫	೬೪
೫	ಹುಮನಾಬಾದ	೧	೮	೧೦	೧	೫	-	೨೫	೨೩	೦೨
	ಜಿಲ್ಲಾ ಮೊತ್ತ	೫	೨೮	೫೩	೫	೧೦	೫	೧೦೬	೧೬೩೦	೧೬೩

ಮೂಲ: ಬೀದರ ಜಿಲ್ಲೆಯ ಅಂಕಿ ಅಂಶಗಳ ನೋಟ, ೧೯೯೮-೯೯.

ಕೈಗಾರಿಕೆಗಳು

೧೯೮೦ರಲ್ಲಿ ಬೀದರ ಜಿಲ್ಲೆಯು ಕೈಗಾರಿಕೆರಹಿತ (zero Industry) ಕ್ಷೇತ್ರವಾಗಿತ್ತು. ಆದುದರಿಂದಲೇ ಕೇಂದ್ರ ಸರಕಾರ ೧೯೮೨ರಲ್ಲಿ ಜಿಲ್ಲೆಯನ್ನು ಕೈಗಾರಿಕಾರಹಿತ ಜಿಲ್ಲೆಯೆಂದು ಘೋಷಿಸಿತ್ತು. ಇದರಿಂದಾಗಿ ಸರಕಾರವು ಜಿಲ್ಲೆಯಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸುವವರಿಗೆ ವಿಶೇಷ ಧನಸಹಾಯ ನೀಡಲು ತೊಡಗಿತ್ತು[೧೨]. ತತ್ಪರಿಣಾಮವಾಗಿ ಜಿಲ್ಲೆಯಲ್ಲಿ ೧೯೮೦ ಹಾಗೂ ೯೦ರ ದಶಕಗಳಲ್ಲಿ ಹಲವಾರು ಕೈಗಾರಿಕೆಗಳು ಸ್ಥಾಪಿಸಲ್ಪಟ್ಟವು.

ಎಣ್ಣೆ ಮೀಲ್‌ಗಳು, ದಾಲ (ಬೆಳೆ) ಮಿಲ್ಲುಗಳು, ಇಂಜೀನಿಯರಿಂಗ್ ಕಾಮಗಾರಿಗಳಾದ ಸಣ್ಣ ಪ್ರಮಾಣದ ಕೈಗಾರಿಕೆಗಳು, ಹತ್ತಿ ಬೀಜ ಬೇರ್ಪಡಿಸುವ ಮಿಲ್ಲುಗಳು, ಪ್ಲಾಸ್ಟಕ್ ಕೈಗಾರಿಕೆ, ಸಾಬೂನು ತಯಾರಿಕೆ, ಲೋಹದ ಪಾತ್ರೆಗಳು, ಐಸ್‌ಕ್ರೀಂ ತಯಾರಿಕೆ ಮುಂತಾದವುಗಳು ಪ್ರಾರಂಭವಾದವು ಮತ್ತು ಅಭಿವೃದ್ಧಿ ಹೊಂದಿದವು. ಸಕ್ಕರೆ ಉದ್ದಿಮೆ ಜಿಲ್ಲೆಯ ದೊಡ್ಡ ಕೈಗಾರಿಕೆ. ಬೀದರ, ಹುಮನಾಬಾದ ಹಾಗೂ ಬಸವಕಲ್ಯಾಣ ತಾಲೂಕಗಳು ಕಬ್ಬಿನ ಬೆಳೆಗಳಿಗೆ ಹೆಸರುವಾಸಿಯಾಗಿವೆ. ಇದರಿಂದಾಗಿ ಬೀದರ ತಾಲೂಕಿನಲ್ಲಿ ಖಾಸಗಿ ಕ್ಷೇತ್ರದಲ್ಲಿ ೩ ಸಕ್ಕರೆ ಕಾರ್ಖಾನೆಗಳು ಹಾಗೂ ಬಸವಕಲ್ಯಾಣ ತಾಲೂಕಿನಲ್ಲಿ ಎರಡು ಖಾನಸಾರಿ ಸಕ್ಕರೆ ಕಾರ್ಖಾನೆಗಳು ಕಾರ್ಯಾಚರಣೆಯಲ್ಲಿವೆ. ಬೀದರ ವಸ್ತುಗಳ ತಯಾರಿಕೆಗೆ ತವರುಮನೆ ಬೀದರ ಜಿಲ್ಲೆಯಲ್ಲಿ ಸಕ್ಕರೆ ಕಾರ್ಖಾನೆಗಳಿರುವುದರಿಂದ ಮಧ್ಯ ಸಾರಾಯಿ ತಯಾರಿಸುವ ಕಾರ್ಖಾನೆಗಳು ಸಹ ಜಿಲ್ಲೆಯಲ್ಲಿ ಸ್ಥಾಪಿತವಾಗಿವೆ. ಕೋಷ್ಠಕ ೨.೧೫ ತಾಲೂಕುವಾರು ಕೈಗಾರಿಕೆಗಳ ವಿವರವನ್ನು ನೀಡುತ್ತದೆ.

ಕೋಷ್ಠಕ-೨.೧೫ ತಾಲೂಕುವಾರು ಕೈಗಾರಿಕೆಗಳ ವಿವರಗಳು

ಕ್ರಮ ಸಂಖ್ಯೆ	ತಾಲ್ಲೂಕು	ಬಟ್ಟೆ	ರಾಸಾಯನಿಕ	ಇಂಜನೀಯರಿಂಗ್	ಇತರೆ
೧	ಔರಾದ	೧	-	-	-
೨	ಬಸವಕಲ್ಯಾಣ	-	-	೧	೩
೩	ಭಾಲ್ಕಿ	-	-	೧	೬
೪	ಬೀದರ	೧	೩೧	೬	೩೨
೫	ಹುಮನಾಬಾದ	-	೬	೧	೭
	ಜಿಲ್ಲಾ ಮೊತ್ತ	೨	೩೭	೯	೪೮

ಮೂಲ: ಬೀದರ ಜಿಲ್ಲೆಯ ಅಂಕಿ ಅಂಶಗಳ ನೋಟ, ೧೯೯೮-೯೯.

ಬದರಿ ವಸ್ತುಗಳ ಕೈಗಾರಿಕೆ

ಜಿಲ್ಲೆ ಬದರಿ ವಸ್ತುಗಳ ಉತ್ಪಾದನೆಗೆ ಭಾರತದಲ್ಲಿ ಅಲ್ಲದೆ, ವಿದೇಶಗಳಲ್ಲಿ ಹೆಸರುವಾಸಿಯಾಗಿದೆ. ಬಹುಮನಿ ಸುಲ್ತಾನರ ಕಾಲದಲ್ಲಿ ದೊರೆ ಅಹಮದ್ ಷಾ ವಲಿ ಬಹಮನಿ 'ರಂಗಿನ ಮಹಲ್' ಮತ್ತು ಇತರ ಕಲಾತ್ಮಕ ಕಟ್ಟಡಗಳನ್ನು ಕಟ್ಟಿಸಲು ಇರಾನದಿಂದ ಕುಶಲ ಕೆಲಸಗಾರರನ್ನು ಕರೆಸಿಕೊಂಡ. ಇವರಲ್ಲಿ ಅಬ್ದುಲ್ ಬಿನ್ ಕೈಸರ್ ಎನ್ನುವವ ಚಿನ್ನ ಮತ್ತು ಬೆಳ್ಳಿಯ ಕಸುರಿ ಕೆಲಸ ಮಾಡುವವದರಲ್ಲಿ ನಿಷ್ಣಾತನಾಗಿದ್ದ. ಇವನಿಂದ 'ಬಿದ್ರಿ ಕಲೆ' ಉಗಮವಾಯಿತು. ಮುಂದೆ ಈತ ಬೀದರಿನ ಮಹ್ಮದ್ ಗವಾನನ 'ಮದರಗಾ ಶಿಕ್ಷಣಾ'ಲಯದಲ್ಲಿ ಈ ಕಲೆಯನ್ನು ಮುಂದುವರೆಸುವ ಸಲುವಾಗಿ ಹೊಸ ಶಿಷ್ಯರನ್ನು ತಯಾರು ಮಾಡಿದ. ಇದರಿಂದಾಗಿ ಬದರಿ ಕುಶಲ ಕಲೆ ಜನಪ್ರಿಯತೆಯನ್ನು ಪಡೆಯಿತು ಮತ್ತು ಇಂದು ಈ ಕಲೆ ಸಾಕಷ್ಟು ಬೆಳೆದಿದೆ. ೧೭೫ಕ್ಕೂ ಹೆಚ್ಚು ಬಗೆಯ ವಿವಿಧ ಬಿದ್ರಿ ವಸ್ತುಗಳು ಬೀದರದಲ್ಲಿ ತಯಾರಾಗುತ್ತವೆ, ಎಂಬುದು ಈ ಕಲೆಯ ಬೆಳವಣಿಗೆಯನ್ನು ಎತ್ತಿ ತೋರಿಸುತ್ತದೆ. ಈ ಕಲೆಯನ್ನು ಮತ್ತಷ್ಟು ಬೆಳೆಸಲು ಮತ್ತು ಜನಪ್ರೀಯತೆಗೊಳಿಸಲು ಬದರಿ ಸಣ್ಣ ಕೈಗಾರಿಕೆಗಳ ಸಂಘ ಎಂಬ ಸಂಸ್ಥೆಯನ್ನು ೧೯೭೩ರಿಂದ ಬೆಳೆಸಿಕೊಂಡು ಬರಲಾಗಿದೆ. ಈ ಸಂಸ್ಥೆಯು ಬದರಿ ವಸ್ತುಗಳ ಪರದೇಶ ರಫ್ತುವಿಗೆ ಮತ್ತು ಇವುಗಳನ್ನು ಹಲವಾರು ನಗರಗಳಿಗೆ ಪ್ರದರ್ಶನ ಮಾಡಲು ನೆರವಾಗುತ್ತಲ್ಲಿದೆ. ರಾಜ್ಯ ವಾಣಿಜ್ಯ ಮತ್ತು ಕೈಗಾರಿಕಾ ನಿರ್ದೇಶನಾಲಯವು ಬಿದ್ರಿ ಕುಶಲ ಕೆಲಸಗಾರರ ಅವಶ್ಯಕತೆಯನ್ನು ಪೂರೈಸುವ ಒಂದು ಕೇಂದ್ರವನ್ನು ಬೀದರನಲ್ಲಿವೆ ಮತ್ತು ಇವುಗಳಲ್ಲಿ ನಾವೆಲ್ಟಿ ಬಿದ್ರಿ ವರ್ಕ್ಸ್, ಭಾರತ ಬಿದ್ರಿ ವರ್ಕ್ಸ್, ತುಂಬಾ ಜನಪ್ರಿಯವಾಗಿವೆ. ಈ ಮಳಿಗೆಗಳು ಪ್ರತಿವರ್ಷ ಡಿಸೆಂಬರ್ ತಿಂಗಳಲ್ಲಿ ಬಿದ್ರಿ ವಸ್ತುಗಳ ಪ್ರದರ್ಶನವನ್ನು ಏರ್ಪಡಿಸುತ್ತವೆ. ಕೋಷ್ಠಕ ೨.೧೬ ಬಿದ್ರಿ ವಸ್ತು ಘಟಕಗಳ ಬೆಳವಣಿಗೆಯ ಮೇಲೆ ಬೆಳಕನ್ನು ಚೆಲ್ಲುತ್ತದೆ.

ದೆಹಲಿ, ನಾಗಪುರ, ಭುವನೇಶ್ವರ, ಪುನಾ, ಬೆಂಗಳೂರು, ಕಲ್ಕತ್ತಾ, ಮುಂಬಯಿ ಮುಂತಾದ ಕಡೆಗಳಲ್ಲಿ ಬಿದ್ರಿ ಕಲೆಯ ಪ್ರದರ್ಶನ ಆಗಾಗ್ಗೆ ಏರ್ಪಾಡು ಆಗುತ್ತಿರುತ್ತದೆ. ಹೊರದೇಶಗಳಾದ ಅಮೇರಿಕ, ಇಟಲಿ, ಇರಾನ, ಸೌದಿ ಅರೇಬಿಯಾ ಮುಂತಾದ ದೇಶಗಳಿಗೆ ಬಿದ್ರಿ ವಸ್ತುಗಳು ರಫ್ತಾಗುತ್ತಿವೆ[೧].

ಕೋಷ್ಠಕ-೨.೧೬ ಬಿದ್ರಿ ವಸ್ತು ಹಾಗೂ ಘಟಕಗಳ ವಿವರ

ಕ್ರಮ ಸಂಖ್ಯೆ	ವಿವರ	ಘಟಕಗಳ ಸಂಖ್ಯೆ	ಕುಶಲ ಕರ್ಮಿಗಳ ಸಂಖ್ಯೆ
೧	ಬಿದ್ರಿ ವಸ್ತುಗಳು	೨೫	೧೧೦

ಮೂಲ: ಬೀದರ ಜಿಲ್ಲೆಯ ಅಂಕಿ ಅಂಶಗಳ ನೋಟ, ೧೯೯೮-೯೯.

ಮೂಲ: ಉಪನಿರ್ದೇಶಕರು, ಕೈಗಾರಿಕಾ ಮತ್ತು ವಾಣಿಜ್ಯ ವಿಭಾಗ, ಬೀದರ

ಜಿಲ್ಲೆಯ ಸಣ್ಣ ಕೈಗಾರಿಕಾ ಘಟಕಗಳು

ಸಣ್ಣ ಕೈಗಾರಿಕಾ ಘಟಕಗಳನ್ನು ಹೆಚ್ಚಾಗಿ ಸ್ಥಾಪಿಸುವಲ್ಲಿ ಜಿಲ್ಲೆ ಸಾಕಷ್ಟು ಯಶಸ್ಸನ್ನು ೧೯೯೦ರ ದಶಕದಲ್ಲಿ ಸಾಧಿಸಿದೆ. ಕರ್ನಾಟಕ ರಾಜ್ಯ ಹಣಕಾಸು ನಿಗಮ (Karnataka State Finance Co-operation) ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸಲು ಹಲವಾರು ವ್ಯಕ್ತಿಗಳಿಗೆ ಸಾಲ ನೀಡುವಲ್ಲಿ ಇತರ ಹಣಕಾಸಿನ ಸಂಸ್ಥೆಗಳಿಗಿಂತ ಮುಂದಿದೆ. ಜಿಲ್ಲಾ ಕೈಗಾರಿಕಾ ಕೇಂದ್ರ, (District Industries Centre) ಜಿಲ್ಲೆಯಲ್ಲಿ ಸಣ್ಣ ಪ್ರಮಾಣದ ಉದ್ದಿಮೆಗಳನ್ನು ಸ್ಥಾಪಿಸುವಲ್ಲಿ ಬಹಳ ಪರಿಣಾಮಕಾರಿಯಾಗಿ ಕೆಲಸ ಮಾಡಿದೆ. ಆದುದರಿಂದಲೇ ೧೯೮೩-೯೨ರ ಅವಧಿಯಲ್ಲಿ ಜಿಲ್ಲೆಯ ಇಂತಹ ಘಟಕಗಳು ೧೫೭೭ರಿಂದ ೨೩೩ಕ್ಕೆ ಏರಿವೆ[೧೪]. ಕೋಷ್ಟಕ ೨.೧೭ ಸಣ್ಣ ಪ್ರಮಾಣದ ಘಟಕಗಳ ಹೂಟಿ (Investment) ಮತ್ತು ಉದ್ಯೋಗ (Employment) ವಿವರವನ್ನು ನೀಡುತ್ತದೆ.

ಜಿಲ್ಲೆಯಲ್ಲಿ ಮಧ್ಯಮ ಪ್ರಮಾಣದ ಘಟಕಗಳು ಹಾಗೂ ಬೃಹತ್ತಾಕಾರದ ಕೈಗಾರಿಕೆಗಳು ಅಷ್ಟೊಂದು ಸಂಖ್ಯೆಯಲ್ಲಿಲ್ಲ. ಮಧ್ಯಮ ಪ್ರಮಾಣದ ಘಟಕಗಳನ್ನು ಬೆಳೆಸಲು ನೆರೆ ರಾಜ್ಯವಾದ ಆಂಧ್ರ ಪ್ರದೇಶದಿಂದ ಬಂದ ಉದ್ದಿಮೆದಾರರು, ಕೇವಲ ಕೇಂದ್ರ ಮತ್ತು ರಾಜ್ಯ ಸರಕಾರದಿಂದ ಸಹಾಯ ಧನವನ್ನು ನುಂಗಿ ಅವುಗಳನ್ನು ಸ್ಥಾಪಿಸದೆ ಅರ್ಧಕ್ಕೆ ಬಿಟ್ಟು ಹೋಗಿರುವ ಪ್ರಕರಣಗಳು ಇವೆ. ಇದ್ದ ಬೃಹತ್ತಾಕಾರದ ಕೈಗಾರಿಕೆಗಳ ಮಾಲಿಕರು ನೆರೆ ರಾಜ್ಯದವರಾಗಿದ್ದಾರೆ; ಅವುಗಳಿಗೆ ಬೇಕಾಗುವ ಖಚ್ಚಾ ವಸ್ತುಗಳು ಲಭ್ಯ ಇಲ್ಲದಿರುವುದರಿಂದ ಅವುಗಳ ಪ್ರಗತಿ ತೃಪ್ತಿಕರವಾಗಿರುವುದಿಲ್ಲ.

ರಾಜ್ಯ ಸರಕಾರ ಉದ್ದಿಮೆಗಳ ಬೆಳವಣಿಗೆಗಾಗಿ ಕೊಳಾರ ಹಾಗೂ ನೌಬಾದ ಪ್ರದೇಶಗಳನ್ನು ಕೈಗಾರಿಕಾ ಪ್ರದೇಶವೆಂದು ಪರಿಗಣಿಸಿದೆ. ಇತ್ತೀಚೆಗೆ ಹುಮನಾಬಾದ ಹಾಗೂ ಬಸವಕಲ್ಯಾಣ ತಾಲೂಕುಗಳಲ್ಲಿ ಕೈಗಾರಿಕೆಗಳು ಸ್ಥಾಪಿತವಾಗುತ್ತಿವೆ. ಒಟ್ಟಿನಲ್ಲಿ, ೧೯೮೨ರಲ್ಲಿ 'ಕೈಗಾರಿಕಾ ರಹಿತ ಜಿಲ್ಲೆ' (No Industry District) ಆಗಿದ್ದ ಬೀದರ ಸರಕಾರದ ಕೇಂದ್ರ ಮತ್ತು ರಾಜ್ಯ ಸರಕಾರಗಳ ವಿಶೇಷ ಧನ ಸಹಾಯದಿಂದಾಗಿ ಇಂದು ೨,೫೦೦ ಕೈಗಾರಿಕೆಗಳ ಜಿಲ್ಲೆಯಾಗಿದೆ.

ಬ್ಯಾಂಕುಗಳು

ರೈತರಿಗೆ, ಉದ್ದಿಮೆದಾರರಿಗೆ ಹಾಗೂ ಮತ್ತಿತರರಿಗೆ ಅವರ ಆರ್ಥಿಕ ಪ್ರಗತಿಯಲ್ಲಿ ಬ್ಯಾಂಕುಗಳು ಮಸಾರ್ಹ ಪಾತ್ರ ವಹಿಸಬಲ್ಲವು. ಬೀದರ ಜಿಲ್ಲೆಯು ಒಂದು ಆರ್ಥಿಕವಾಗಿ ಹಿಂದುಳಿದ ಜಿಲ್ಲೆ. ದರಿಂದಾಗಿ ಈ ಜಿಲ್ಲೆಯಲ್ಲಿ ಬ್ಯಾಂಕುಗಳು ಮತ್ತಿತರ ಹಣದ ನೆರವು ನೀಡುವ ಸಂಸ್ಥೆಗಳು ಸಾಕಷ್ಟು

ಪ್ರಮಾಣದಲ್ಲಿರುವುದಿಲ್ಲ. ರೈತಾಪಿ ಜನರಿಗೆ ನೆರವು ನೀಡುವಲ್ಲಿ ಸಹಕಾರಿ ಬ್ಯಾಂಕುಗಳ ಕಾರ್ಯ ಅಷ್ಟೊಂದು ಸಮರ್ಪಕವಾಗಿರುವುದಿಲ್ಲ. ಜಿಲ್ಲೆಯಲ್ಲಿ ಮುಂದುವರಿದ ಜಾತಿಗಳ ಜನರು ಬೆಳೆ ಸಾಲಗಳನ್ನು ಪಡೆಯುವಲ್ಲಿ ಪರದಾಡುತ್ತಿರುವಾಗ, ಆರ್ಥಿಕವಾಗಿ ಅತ್ಯಂತ ಹಿಂದುಳಿದ ಬೇಡ ಸಮುದಾಯದ ರೈತರ ಸ್ಥಿತಿ ಶೋಚನೀಯವಾಗಿರುವದು ಸಹಜ. ಆದರೂ, ಜಿಲ್ಲೆಯಲ್ಲಿ ೫೭ ವಾಣಿಜ್ಯ ಬ್ಯಾಂಕುಗಳು ಮತ್ತು ೩೫ ಗ್ರಾಮೀಣ ಬ್ಯಾಂಕುಗಳು ಕಾರ್ಯ ನಿರ್ವಹಿಸುತ್ತಿವೆ. ಜಿಲ್ಲೆಯಲ್ಲಿಯ ತಾಲೂಕಾವಾರು ಬ್ಯಾಂಕುಗಳ ಸಂಖ್ಯೆ, ಅವುಗಳ ಠೇವಣಿ ಹಾಗೂ ಅವುಗಳು ನೀಡಿರುವ ಸಾಲದ ಮೊತ್ತವನ್ನು ಕೋಷ್ಠಕ ೨.೧೭ ವಿವರಿಸುತ್ತದೆ. ಜಿಲ್ಲೆಯಲ್ಲಿ ಅನೇಕ ಫೈನಾನ್ಸ್ ಕಾರ್ಪೋರೇಷನ್‌ಗಳು ಕಾರ್ಯ ನಿರ್ವಹಿಸುತ್ತಿವೆ. ಗ್ರಾಮೀಣ ಪ್ರದೇಶಗಳಲ್ಲಿ ಸ್ಥಳೀಯ ಸಾಹುಕಾರರೇ ಲೇವಾ ದೇವಿ ವ್ಯವಹಾರವನ್ನು ನೋಡಿಕೊಳ್ಳುತ್ತಿದ್ದಾರೆ. ಇವರ ಬಡ್ಡಿ ಹೆಚ್ಚಾಗಿದ್ದರೂ ತಕ್ಷಣವೇ ಏನಾದರೂ ಅಡವು ಇಟ್ಟುಕೊಂಡು ಹಣವನ್ನು ಸಾಲದ ರೂಪದಲ್ಲಿ ಕೊಡುತ್ತಾರೆ; ಇದರಿಂದಾಗಿ ಇವರ ಸಾಲಕ್ಕೆ ಬೇಡಿಕೆಯಿದೆ.

ಕೋಷ್ಠಕ-೨.೧೭ ಜಿಲ್ಲೆಯ ಬ್ಯಾಂಕ ಸಂಸ್ಥೆಗಳ ವಿವರ

ಮ ಖ್ಯೆ	ತಾಲ್ಲೂಕು	ವಾಣಿಜ್ಯ ಬ್ಯಾಂಕು-ಗಳು	ಗ್ರಾಮೀಣ ಬ್ಯಾಂಕು-ಗಳು	ಒಟ್ಟು ಬ್ಯಾಂಕು-ಗಳು	ಠೇವಣಿ (ಲಕ್ಷ ರೂ.)		ನೀಡಿರುವ ಸಾಲ (ಲಕ್ಷ ರೂ.)	
					ವಾಣಿಜ್ಯ ಬ್ಯಾಂಕು-ಗಳು	ಗ್ರಾಮೀಣ ಬ್ಯಾಂಕು-ಗಳು	ವಾಣಿಜ್ಯ ಬ್ಯಾಂಕು-ಗಳು	ಗ್ರಾಮೀಣ ಬ್ಯಾಂಕು-ಗಳು
	ಔರಾದ	೮	೬	೧೪	೨೩೧೭	೫೪೭	೪೩೪೨	೩೩೭
	ಬಸವಕಲ್ಯಾಣ	೯	೮	೧೭	೪೭೮೯	೧೦೨೨	೩೭೭೮	೮೬೫
	ಭಾಲ್ಕಿ	೧೨	೧೦	೨೨	೪೪೭೭	೯೨೮	೪೮೯೨	೬೧೯
	ಬೀದರ	೧೮	೫	೨೩	೨೨೧೬೮	೧೦೦೨	೧೧೯೯೧	೩೩೫
	ಹುಮನಾಬಾದ	೧೦	೬	೧೬	೫೮೯೫	೮೨೯	೯೯೬೧	೬೭೨
	ಜಿಲ್ಲಾ ಮೊತ್ತ	೫೭	೩೫	೯೨	೩೯೬೪೬	೪೨೩೮	೩೪೯೬೪	೨೮೨೮

ಮೂಲ: ಬೀದರ ಜಿಲ್ಲೆಯ ಅಂಕಿ ಅಂಶಗಳ ನೋಟ, ೧೯೯೮-೯೯.

ಕೃಷಿ ಉತ್ಪನ್ನ ಮಾರಾಟ

ರೈತ ತಾನು ಉತ್ಪಾದಿಸಿದ ವಸ್ತುಗಳನ್ನು ನ್ಯಾಯಯುತ ಬೆಲೆಗೆ ಮಾರಾಟ ಮಾಡುವ ವ್ಯವಸ್ಥೆಯನ್ನು ಹೊಂದಿರಬೇಕು. ಗ್ರಾಮೀಣ ವ್ಯಾಪಾರಿಗಳು, ಮತ್ತು ದಲ್ಲಾಳಿಗಳು ಮಧ್ಯವರ್ತಿಗಳ ಮೋಸದ ಹೊಟ್ಟೆಗೆ ಸೇರುತ್ತದೆ. ಇಂತಹ ಶೋಷಣೆಯನ್ನು ನಿಲ್ಲಿಸಲು ಮತ್ತು ರೈತರ ಉತ್ಪನ್ನಗಳಿಗೆ ಸ್ಪರ್ಧಾತಕ ಬೆಲೆಯು ದೊರಕುವಂತೆ ಪ್ರಯತ್ನಿಸಲು ಜಿಲ್ಲೆಯಲ್ಲಿ ಹಲವಾರು ಸಹಕಾರಿ ಮಾರುಕಟ್ಟೆ ಸಂಘಗಳು ಕೆಲಸ ಮಾಡುತ್ತಿವೆ.

ಇವಲ್ಲದೆ, ಜಿಲ್ಲೆಯಲ್ಲಿ ನಿಯಂತ್ರಿತ ಮಾರುಕಟ್ಟೆ (Regulated Market) ಸಂಸ್ಥೆಗಳು ಸಹ ಕಾರ್ಯ ನಿರ್ವಹಿಸುತ್ತಿವೆ (ಕೋಷ್ಠಕ ೨.೧೮ನ್ನು ನೋಡಿ).

ಕೋಷ್ಠಕ-೨.೧೮ ಜಿಲ್ಲೆಯ ನಿಯಂತ್ರಿತ ಮಾರುಕಟ್ಟೆ ಸಂಸ್ಥೆಗಳ ವಿವರ

ಕ್ರಮ ಸಂಖ್ಯೆ	ತಾಲೂಕು	ಕೃಷಿ ಸಹಕಾರ ಸಂಘಗಳಿಂದ ನೀಡಲ್ಪಟ್ಟ ಒಟ್ಟು ಸಾಲ (ಲಕ್ಷ ರೂ.)	ನಿಯಂತ್ರಿಕ ಮಾರುಕಟ್ಟೆ				
			ಮುಖ್ಯ	ಉಪ	ಒಟ್ಟು	ಒಟ್ಟು ವ್ಯವಹಾರದ ಮೌಲ್ಯ (ಲಕ್ಷ ರೂ.)	ಒಟ್ಟು ಧಾನ್ಯಗಳು (ಕ್ವಿಂಟಲಗಳಲ್ಲಿ)
೧	ಔರಾದ	೧೩೧೨	೧	೩	೪	೩೪೦	೨೪೬೩೦
೨	ಬಸವಕಲ್ಯಾಣ	೯೬೯	೧	೧	೨	೮೧೩	೭೮೯೭೨
೩	ಭಾಲ್ಕಿ	೧೩೭೪	೧	೧	೨	೧೧೩೦	೭೨೮೩೦
೪	ಬೀದರ	೧೫೩೧	೧	೧	೨	೭೩೦೫	೫೯೩೭೮೯
೫	ಹುಮನಾಬಾದ	೧೬೧೯	೧	೨	೩	೭೪	೯೬೦೮
	ಜಿಲ್ಲಾ ಮೊತ್ತ	೬೮೦೫	೫	೮	೧೩	೯೬೬೨	೭೭೯೮೨೯

ಮೂಲ: ಬೀದರ ಜಿಲ್ಲೆಯ ಅಂಕಿ ಅಂಶಗಳ ನೋಟ, ೧೯೯೮-೯೯.

ಇತ್ತೀಚಿನ ವರ್ಷಗಳಲ್ಲಿ ರೈತಾಪಿ ಜನರು ಈ ಮಾರುಕಟ್ಟೆಗಳಿಗೆ ಬಂದು ತಮ್ಮ ವಸ್ತುಗಳನ್ನು ಮಾರುವುದು ಹೆಚ್ಚಾಗಿದೆ. ಇದೊಂದು ಒಳ್ಳೆಯ ಬೆಳವಣಿಗೆ ಇಷ್ಟಾದರೂ ರೈತರು ಸುಗ್ಗಿಯ ಸಮಯದಲ್ಲಿ ತಮ್ಮ ಸಣ್ಣ ಪುಟ್ಟ ಸಾಲಗಳನ್ನು ಮತ್ತು ಇತರೆ ಹಣಕಾಸಿನ ತೊಂದರೆಯನ್ನು ಆದಷ್ಟು ಬೇಗನೆ ಪರಿಹರಿಸಿಕೊಳ್ಳಲು ತೀರಾ ಆತುರದಿಂದ ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡುವುದು ನಿಂತಿಲ್ಲ.

ಬೇಡ ಸಮುದಾಯದ ರೈತರು ಹೆಚ್ಚಾಗಿ ಅತಿ ಸಣ್ಣ ಮತ್ತು ಸಣ್ಣ ರೈತರಾಗಿದ್ದಾರೆ. ಇವರಲ್ಲಿ ಬಹುತೇಕ ಜನ ತಮ್ಮ ಹಣಕಾಸಿನ ತೊಂದರೆಗಳನ್ನು ಆದಷ್ಟು ಬೇಗನೆ ಪರಿಹರಿಸಿಕೊಳ್ಳಲು ಸಮೀಪವಿರುವ ವ್ಯಾಪಾರಿಗೆ ಕಡಿಮೆ ಬೆಲೆಯಲ್ಲಿ ತಮ್ಮ ಉತ್ಪನ್ನವನ್ನು ಮಾರಾಟ ಮಾಡುವರು. ಹೆಚ್ಚಿನ ಮಾಹಿತಿಯನ್ನು ಇವರ ಆರ್ಥಿಕ ಸಮೀಕ್ಷೆಯ ಅಧ್ಯಾಯದಲ್ಲಿ ಮುಂದೆ ನೀಡಲಾಗಿದೆ.

ಶಿಕ್ಷಣ

ಅಕ್ಷರ ಜ್ಞಾನ ಹೊಂದಿರುವ ವಿಷಯದಲ್ಲಿ ಬೀದರ ಜಿಲ್ಲೆ ಇಡೀ ರಾಜ್ಯದಲ್ಲಿಯೇ ಅತ್ಯಂತ ಹಿಂದುಳಿದ ಜಿಲ್ಲೆಯಾಗಿರುತ್ತದೆ. ಶಿಕ್ಷಣದಿಂದಲೇ ಒಬ್ಬ ವ್ಯಕ್ತಿ ದೇಶದ ಆರ್ಥಿಕ ಪ್ರಗತಿಯಲ್ಲಿ ಸಕ್ರಿಯವಾಗಿ ಭಾಗವಹಿಸಲು ಸಾಧ್ಯವಾಗುತ್ತದೆ. ಶಿಕ್ಷಣದಿಂದಲೇ ಒಬ್ಬನ ಕಾರ್ಯ ಸಾಮರ್ಥ್ಯ ಅಧಿಕಗೊಳ್ಳುತ್ತದೆ ಮತ್ತು ಆತ ಹೆಚ್ಚು ಹಣ ಗಳಿಸಬಲ್ಲ. ೧೯೯೧ರ ಜನಗಣತಿಯ ಪ್ರಕಾರ ಜಿಲ್ಲೆಯಲ್ಲಿ ಶೇಕಡಾ ೩೬.೪೪ ಜನಸಂಖ್ಯೆ ಅಕ್ಷರ ಜ್ಞಾನವುಳ್ಳವರಾಗಿದ್ದರು; ಶೇಕಡಾ ೪೭.೬೦ ಪುರುಷರು ಮತ್ತು ೨೪.೭೬ ಸ್ತ್ರೀಯರು ಅಕ್ಷರ ಜ್ಞಾನ ಹೊಂದಿದ್ದರು. ತಾಲೂಕುವಾರು ಸಾಕ್ಷರತೆಯ ಅಂಕಿ-ಅಂಶಗಳು ಕೋಷ್ಠಕ ೨.೧೯ರಲ್ಲಿ ಇವೆ. ತಾಲೂಕುವಾರು ಒಟ್ಟು ಸಾಕ್ಷರತೆಯ ಪ್ರಮಾಣವನ್ನು ವೀಕ್ಷಿಸಿದಾಗ, ಬೀದರ ತಾಲೂಕಿನಲ್ಲಿ ಅತೀ ಹೆಚ್ಚು ಮತ್ತು ಔರಾದ ತಾಲೂಕಿನಲ್ಲಿ ಅತಿ ಕಡಿಮೆ ಸಾಕ್ಷರತೆ ಇದೆಯೆಂಬುದನ್ನು ನಮಗೆ ಗೊತ್ತಾಗುತ್ತದೆ. ಗ್ರಾಮೀಣ ಸ್ತ್ರೀಯರ ಸಾಕ್ಷರತೆ (೧೯.೬೬) ನಗರ ಸ್ತ್ರೀಯರ ಹಾಗೂ ನಗರವಾಸಿ ಸ್ತ್ರೀಯರಲ್ಲಿ ಅತೀ ಹೆಚ್ಚು ಸಾಕ್ಷಕರು ಬೀದರ ಮತ್ತು ಅತಿ ಕಡಿಮೆ ಔರಾದ ತಾಲೂಕಗಳಲ್ಲಿದ್ದಾರೆ.

ಕೋಷ್ಠಕ-೨.೧೯ ಜಿಲ್ಲೆಯ ಪುರುಷ-ಸ್ತ್ರೀಯರ ಸಾಕ್ಷರತೆಯ ವಿವರ

ಕ್ರಮ ಸಂಖ್ಯೆ	ತಾಲ್ಲೂಕು	ಪುರುಷರಲ್ಲಿ	ಸ್ತ್ರೀಯರಲ್ಲಿ	ಒಟ್ಟು	ಗಂಡಸರು	ಹೆಂಗಸರು	ಒಟ್ಟು
೧	ಔರಾದ	೫೨.೮೮	೨೫.೪೮	೩೯.೫	೪೪೮೭೩	೨೦೭೬೧	೬೫೬೩೪
೨	ಬಸವಕಲ್ಯಾಣ	೫೭.೭೧	೨೭.೭೭	೪೨.೯೫	೫೭೬೨೩	೨೬೯೫೬	೮೪೫೭೯
೩	ಭಾಲ್ಕಿ	೬೧.೯೨	೩೦.೨೬	೪೬.೪೭	೫೬೪೩೯	೨೬೨೯೩	೮೨೭೩೨
೪	ಬೀದರ	೬೨.೯೧	೩೭.೯೨	೫೦.೯೬	೮೬೮೮೦	೪೮೦೧೩	೧೩೪೮೯೬
೫	ಹುಮನಾಬಾದ	೫೭.೧೦	೨೮.೦೭	೪೨.೮೭	೫೬೫೩೧	೨೬೬೯೨	೮೩೨೨೩
	ಜಿಲ್ಲಾ ಮೊತ್ತ	೫೮.೯೭	೩೦.೫೩	೪೫.೧೧	೩೦೨೩೪೬	೧೪೮೭೧೫	೪೫೧೦೬೧

ಮೂಲ: ಬೀದರ ಜಿಲ್ಲೆಯ ಅಂಕಿ ಅಂಶಗಳ ನೋಟ, ೧೯೯೮-೯೯.

ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ

ಇತ್ತೀಚಿನ ವರ್ಷಗಳಲ್ಲಿ ಪ್ರಾಥಮಿಕ ಶಾಲೆ ಮತ್ತು ಪ್ರೌಢ ಶಾಲೆಗಳ ಸಂಖ್ಯೆ ಮತ್ತು ಇವುಗಳಲ್ಲಿ ಅಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚುತ್ತಿದೆ. (ವಿವರಗಳಿಗೆ ಕೋಷ್ಠಕ ೨.೨೦ ನೋಡಿ) ಇಷ್ಟಾದರೂ, ಹೈದ್ರಾಬಾದ ಕರ್ನಾಟಕದ ಇತರ ಜಿಲ್ಲೆಗಳಿಗೆ ಹೋಲಿಸಿದಾಗ ಬೀದರ ಜಿಲ್ಲೆಯ ಪ್ರಾಥಮಿಕ ಶಾಲೆ ಮತ್ತು ಪ್ರೌಢ ಶಾಲೆಗಳ ಸಂಖ್ಯೆ ಕಡಿಮೆ ಪ್ರಮಾಣದಲ್ಲಿದೆ. ಜಿಲ್ಲೆಯ ಶಿಕ್ಷಣದ ಗುಣಮಟ್ಟವು ಸಹ ಕಡಿಮೆಯದಾಗಿದೆ.

ಕೋಷ್ಟಕ-೨.೨೦ ಜಿಲ್ಲೆಯ ಶಿಶುವಿವಾಹ, ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳು ಹಾಗೂ ಶಿಕ್ಷಣದ ವಿವರ

ಕ್ರಮ ಸಂಖ್ಯೆ	ತಾಲ್ಲೂಕು	ಶಿಶು ವಿಹಾರ		ಪ್ರಾಥಮಿಕ ಶಿಕ್ಷಣ		ಪ್ರೌಢ ಶಿಕ್ಷಣ (ಕಿರಿಯ ಕಾಲೇಜುಗಳಲ್ಲಿರುವ ಪ್ರೌಢ ಶಾಲೆಗಳು)	
		ಶಾಲೆಗಳು	ಮಕ್ಕಳು	ಶಾಲೆಗಳು	ವಿದ್ಯಾರ್ಥಿಗಳು	ಶಾಲೆಗಳು	ವಿದ್ಯಾರ್ಥಿಗಳು
೧	ಔರಾದ	೧೧	೫೦೫	೨೧೯	೫೮೫೮೮	೧೮	೨೩೫೪
೨	ಬಸವಕಲ್ಯಾಣ	೦೮	೬೩೪	೧೮೪	೩೯೦೬೬	೧೭	೨೭೩೪
೩	ಭಾಲ್ಕಿ	೧೧	೮೫೩	೧೮೨	೩೭೪೬೬	೧೮	೨೫೮೪
೪	ಬೀದರ	೧೫	೨೨೯೭	೧೭೨	೬೬೩೭೨	೧೪	೨೭೭೨
೫	ಹುಮನಾಬಾದ	೧೨	೭೪೫	೧೨೨	೪೩೧೮೩	೧೪	೩೩೭೫
	ಜಿಲ್ಲಾ ಮೊತ್ತ	೫೭	೫೦೩೪	೮೭೯	೨೪೪೬೭೫	೮೧	೧೩೮೧೯

ಮೂಲ: ಬೀದರ ಜಿಲ್ಲೆಯ ಅಂಕಿ ಅಂಶಗಳ ನೋಟ, ೧೯೯೮-೯೯.

ಸಾರಿಗೆ ಸಂಪರ್ಕ ವ್ಯವಸ್ಥೆ

ಸಾರಿಗೆ ಸಂಪರ್ಕ ವ್ಯವಸ್ಥೆಯನ್ನು ಹೊಂದುವುದರಲ್ಲಿ, ರಾಜ್ಯದ ಒಂದು ಅತಿ ಹಿಂದುಳಿದ ಜಿಲ್ಲೆಯೇ ಬೀದರ. ಉತ್ತಮವಾದ ರಸ್ತೆಗಳನ್ನು ಈ ಜಿಲ್ಲೆ ಅಷ್ಟಾಗಿ ಹೊಂದಿರುವುದಿಲ್ಲ. ಒಂದೇ ಒಂದು ಉತ್ತಮವಾದ ರಸ್ತೆಯೆಂದರೆ ರಾಷ್ಟ್ರೀಯ ಹೆದ್ದಾರಿ ೯ ಮತ್ತು ಅದರ ಉದ್ದ ೭೫ ಕಿಲೋಮೀಟರಗಳು ರಾಷ್ಟ್ರೀಯ ಹೆದ್ದಾರಿ, ರಾಜ್ಯ ಹೆದ್ದಾರಿ, ಜಿಲ್ಲೆಯ ಮುಖ್ಯ ರಸ್ತೆಗಳು ಮತ್ತು ಇತರ ರಸ್ತೆಗಳ ಉದ್ದಳತೆಯನ್ನು ಕೋಷ್ಟಕ ೨.೨೧ ನೀಡುತ್ತಿದೆ. ಜಿಲ್ಲಾ ಪರಿಷತ್ತು ಆಡಳಿತ ವ್ಯವಸ್ಥೆ ಜಾರಿಗೆ ಬಂದ ಮೇಲೆ, ಜಿಲ್ಲೆಯ ವಿವಿಧ ತಾಲೂಕುಗಳನ್ನು ಸಂಪರ್ಕಿಸುವ ಪ್ರಮುಖ ರಸ್ತೆಗಳು ನಿರ್ಮಾಣವಾಗಿವೆ ಮತ್ತು ಅನೇಕ ಸೇತುವೆಗಳನ್ನು ನಿರ್ಮಿಸಿ ಸಾರಿಗೆ ವ್ಯವಸ್ಥೆಯನ್ನು ತಕ್ಕಮಟ್ಟಿಗೆ ಸುಗಮಗೊಳಿಸಲಾಗಿದೆ. ಇತ್ತೀಚೆಗೆ ಅಸ್ತಿತ್ವದಲ್ಲಿ ಬಂದ ಕರ್ನಾಟಕ ಸರಕಾರದ 'ಹೈದ್ರಾಬಾದ ಕರ್ನಾಟಕ ಅಭಿವೃದ್ಧಿ ಮಂಡಳಿ' ಸಹ ರಸ್ತೆ ನಿರ್ಮಾಣ ಕಾರ್ಯ ಕೈಕೊಂಡಿದೆ ಮತ್ತು ಇನ್ನೂ ಕೈಕೊಳ್ಳುತ್ತಿದೆ. ರೈಲ್ವೆ ಸಾರಿಗೆ ಮುಖಾಂತರ ಬೀದರ ಜಿಲ್ಲೆಗೆ ಪ್ರಮುಖ ನಗರಗಳಾದ ಹೈದ್ರಾಬಾದ, ಬೆಂಗಳೂರು ಮುಂತಾದವುಗಳಿಂದ ಸಂಪರ್ಕ ಒದಗಿಸಲಾಗಿದೆ. ರೈಲ್ವೆ ಸಾರಿಗೆ ಪ್ರಗತಿಯನ್ನು ೨.೨೨ರಲ್ಲಿ ನೀಡಲಾಗಿದೆ.

ಕೋಷ್ಠಕ-೨.೨೧ ಜಿಲ್ಲೆಯ ರಸ್ತೆ ಮತ್ತು ರೈಲು ನಿಲ್ದಾಣಗಳ ವಿವರ

ಕ್ರಮ ಸಂಖ್ಯೆ	ತಾಲ್ಲೂಕು	ಬ್ರಾಡ್ ಗೇಜ್	ಮೀಟರ ಗೇಜ್	ನ್ಯಾರೋ ಗೇಜ್	ಒಟ್ಟು	ರೈಲ್ವೆ ನಿಲ್ದಾಣಗಳು
೧	ಔರಾದ	೨೪	–	–	೨೪	೧
೨	ಬಸವಕಲ್ಯಾಣ	–	–	–	–	–
೩	ಭಾಲ್ಕಿ	೩೪	–	–	೩೪	೬
೪	ಬೀದರ	೨೧	–	–	೨೧	೨
೫	ಹುಮನಾಬಾದ	–	–	–	–	–
	ಜಿಲ್ಲಾ ಮೊತ್ತ	೭೯	–	–	೭೯	೯

ಮೂಲ: ಬೀದರ ಜಿಲ್ಲೆಯ ಅಂಕಿ ಅಂಶಗಳ ನೋಟ, ೧೯೯೮-೯೯.

ಅಂಚೆ ಮತ್ತು ದೂರವಾಣಿ ವ್ಯವಸ್ಥೆ

ಟೆಲಿಗ್ರಾಫ್ ಮತ್ತು ದೂರವಾಣಿಗಳ ವ್ಯವಸ್ಥೆ ಜಿಲ್ಲೆಯಲೆಲ್ಲ ಪ್ರಮುಖ ಪಟ್ಟಣಗಳಿಗೆ ಮತ್ತು ಹಳ್ಳಿಗಳಿಗೆ ವಿಸ್ತರಿಸಲಾಗಿದೆ. ಎಲ್ಲ ತಾಲೂಕುಗಳಿಗೆ ಎಸ್.ಟಿ.ಡಿ. ಮತ್ತು ಆಯ್.ಎಸ್.ಡಿ. ಸೌಲಭ್ಯಗಳನ್ನು ಒದಗಿಸಲಾಗಿದೆ. ಅಂಚೆ ಕಚೇರಿಗಳು ಮತ್ತು ದೂರವಾಣಿ ವಿನಿಮಯ ಕೇಂದ್ರಗಳ ವಿವರವನ್ನು ಕೋಷ್ಠಕ ೨.೨೩ ನೀಡುತ್ತದೆ. ವಿಮಾನ ಚಾಲಕರ ಪ್ರಾಥಮಿಕ ತರಬೇತಿ ಕೇಂದ್ರಯೊಂದು ಬೀದರದಲ್ಲಿದೆ.

ಕೋಷ್ಠಕ-೨.೨೨ ಜಿಲ್ಲೆಯ ಅಂಚೆ ಮತ್ತು ದೂರವಾಣಿ ಸೌಕರ್ಯದ ವಿವರ

ಕ್ರಮ ಸಂಖ್ಯೆ	ತಾಲ್ಲೂಕು	ಅಂಚೆ ಕಛೇರಿಗಳು	ತಂತಿ ಸೌಲಭ್ಯ ಹೊಂದಿದ ಅಂಚೆ ಕಛೇರಿಗಳು	ದೂರವಾಣಿ ವಿನಿಮಯ ಕೇಂದ್ರಗಳು	ಬಳಕೆಯಲ್ಲಿರುವ ದೂರವಾಣಿಗಳು
೧	ಔರಾದ	೬೭	೧	೧೦	೧೨೩೨
೨	ಬಸವಕಲ್ಯಾಣ	೫೯	೧	೧೪	೨೫೨೬
೩	ಭಾಲ್ಕಿ	೫೭	೧	೧೫	೨೨೧೩
೪	ಬೀದರ	೫೮	೧	೧೦	೭೨೦೮
೫	ಹುಮನಾಬಾದ	೬೩	೨	೧೬	೩೨೦೬
	ಜಿಲ್ಲಾ ಮೊತ್ತ	೩೦೪	೬	೬೫	೧೬೩೮೫

ಮೂಲ: ಬೀದರ ಜಿಲ್ಲೆಯ ಅಂಕಿ ಅಂಶಗಳ ನೋಟ, ೧೯೯೮-೯೯.

ಜಿಲ್ಲೆಯ ವಾಹನಗಳು

ಜಿಲ್ಲೆಯಲ್ಲಿ ಇತ್ತೀಚೆಗೆ, ಕಾರು, ಜೀಪು, ಸರಕು ವಾಹನಗಳು, ಮೋಟಾರು ಸೈಕಲ್ಲುಗಳು ಮುಂತಾದವುಗಳ ಸಂಖ್ಯೆ ಹೆಚ್ಚಾಗುತ್ತಿದೆ. ಕೋಷ್ಟಕ ೨.೨೩ ಸಾರಿಗೆ ಸಂಪರ್ಕದ ಒಟ್ಟು ವಿವರಗಳನ್ನು ನೀಡುತ್ತದೆ.

ಕೋಷ್ಟಕ-೨.೨೩ ಜಿಲ್ಲೆಯ ವಾಹನಗಳ ವಿವರ

ಕ್ರಮ ಸಂಖ್ಯೆ	ತಾಲ್ಲೂಕು	(೩೧-೩-೧೯೯೯ ರಲ್ಲಿ ಇದ್ದಂತೆ)					
		ಮೋಟಾರು ಸೈಕಲಗಳು	ಕಾರುಗಳು	ಆಟೋ-ರಿಕ್ಷಾಗಳು	ಸರಕು ಸಾಗಿಸುವ ವಾಹನಗಳು	ಇತರ ವಾಹನಗಳು	ಒಟ್ಟು ವಾಹನಗಳು
೧	ಔರಾದ	೧೮೦೬	೩೪	೩	೧೪೦	೪೯೯	೨೪೮೨
೨	ಬಸವಕಲ್ಯಾಣ	೩೦೯೪	೪೮	೧೨೬	೧೦೫೪	೭೦೪	೫೦೨೬
೩	ಭಾಲ್ಕಿ	೨೨೩೩	೪೨	೭೦	೨೦೯	೯೮೯	೩೫೪೩
೪	ಬೀದರ	೧೪೬೧೮	೭೪೬	೪೯೯	೯೫೫	೨೩೮೦	೧೯೧೯೮
೫	ಹುಮನಾಬಾದ	೨೯೦೦	೪೪	೧೧೮	೩೩೭	೬೮೦	೪೦೭೯
	ಜಿಲ್ಲಾ ಮೊತ್ತ	೨೪೬೫೧	೯೧೪	೮೧೬	೨೬೯೫	೫೨೫೨	೩೪೩೨೮

ಮೂಲ: ಬೀದರ ಜಿಲ್ಲೆಯ ಅಂಕಿ ಅಂಶಗಳ ನೋಟ, ೧೯೯೮-೯೯.

ಇತ್ತೀಚೆಗೆ ಜಿಲ್ಲೆಯು ಹೊಂದಿರುವ ಸಾರಿಗೆ ಸಂಪರ್ಕದಲ್ಲಿ ಸ್ವಲ್ಪ ಹೆಚ್ಚಳ ಕಂಡು ಬಂದರೂ ಬೇಡ ಸಮುದಾಯ ವಾಸಿಸುತ್ತಿರುವ 'ವಾಡಿ'ಯಂತಹ ಪ್ರದೇಶಕ್ಕೆ ರಸ್ತೆ ವ್ಯವಸ್ಥೆ ಇಂದಿಗೂ ಇರುವುದಿಲ್ಲ.

ಆರೋಗ್ಯ

ಆರೋಗ್ಯವಂತ ಜನ ಒಂದು ಪ್ರದೇಶದ ಆಸ್ತಿ. ಕೃಷಿ ಕಾರ್ಮಿಕರು ಆರೋಗ್ಯವಂತರಾಗಿರದೇ ಇರುವದು ಅವರ ಕಡಿಮೆ ಉತ್ಪಾದಕತೆಗೆ (Low productivity) ಮೂಲ ಕಾರಣ. ರಾಜ್ಯ ಸರಕಾರ ಜಿಲ್ಲೆಯಲ್ಲಿ ಐದು ಸರಕಾರಿ ಆಸ್ಪತ್ರೆಗಳು ೩೦ ಪ್ರಾಥಮಿಕ ಆರೋಗ್ಯ ಘಟಕಗಳು, ಮುಂತಾದವುಗಳ ಉಸ್ತುವಾರಿಯನ್ನು ನೋಡಿಕೊಳ್ಳುತ್ತಿದೆ (ವಿವರಗಳಿಗೆ ಕೋಷ್ಟಕ ೨.೨೪ ನೋಡಿ) ಈ ಎಲ್ಲ ತರಹದ ಆಸ್ಪತ್ರೆಗಳು ಮತ್ತು ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿದ್ದರೂ ಆರೋಗ್ಯ ಇಲಾಖೆ ಜನರಿಗೆ ಆರೋಗ್ಯಕ್ಕೆ ಸಂಬಂಧಿಸಿದ ಸೇವೆಗಳನ್ನು (Health Service) ಕೊಡುವಲ್ಲಿ ಯಶಸ್ವಿಯಾಗಿಲ್ಲ. ಇಂದಿಗೂ, ತುರ್ತು ರೋಗಿಗಳನ್ನು ಹೈದ್ರಾಬಾದ ಅಥವಾ ಸೋಲಾಪುರ ಆಸ್ಪತ್ರೆಗಳಿಗೆ ಕಳುಹಿಸಲಾಗುತ್ತದೆ. ಗ್ರಾಮೀಣ

ಮಟ್ಟದಲ್ಲಿರುವ ಅನೇಕ ಪ್ರಾಥಮಿಕ ಆರೋಗ್ಯ ಘಟಕಗಳಾಗಲಿ ಅಥವಾ ಉಪ-ಕೇಂದ್ರಗಳಾಗಲಿ ಸರಿಯಾಗಿ ಕಾರ್ಯ ನಿರ್ವಹಿಸುತ್ತಿಲ್ಲ. ಬೇಡ ಸಮುದಾಯದ ಸುಮಾರು ಜನರಿಗೆ ಸರಕಾರದ ಆರೋಗ್ಯದ ಸವಲತ್ತುಗಳು (Health facilities) ಸುಮಾರು ಶೇಕಡಾ ೮೦ರವರೆಗೆ ಸಿಗುತ್ತಿಲ್ಲ. ಇದರಿಂದಾಗಿ ಇಂದಿಗೂ, ಈ ಸಮುದಾಯದ ಜನರು ತಮ್ಮ ಅನಾರೋಗ್ಯವನ್ನು ನಿವಾರಿಸಿಕೊಳ್ಳಲು, ದೇವರ ಹೆಸರಿನಲ್ಲಿ ಮುಡುಪು ಕಟ್ಟಿಡುವುದು, ದೇವರಿಗೆ ಕೋಳಿ ಮತ್ತು ಕುರಿಗಳನ್ನು ಅರ್ಪಿಸುವುದು ಉಂಟು. ಕುಟುಂಬ ಕಲ್ಯಾಣ ಯೋಜನೆಗಳಾದ ಅ) ಸಂತಾನಹರಣ ಶಸ್ತ್ರ ಚಿಕಿತ್ಸೆ, ಬ) ವಂಕಿ ಧಾರಣೆ, ಕ) ಗರ್ಭ ನಿರೋಧಕ ಗುಳಿಗೆಗಳ ಸೇವನೆ ಮುಂತಾದವುಗಳು ಬೇಡ ಸಮುದಾಯಕ್ಕೆ ಹೆಚ್ಚಾಗಿ ಮುಟ್ಟಿಲ್ಲ.

ಒಟ್ಟಿನಲ್ಲಿ ಆರ್ಥಿಕವಾಗಿ ಹಿಂದುಳಿದ ಜಿಲ್ಲೆಯಾದ ಬೀದರ ಜಿಲ್ಲೆ ಜನ ಸಮುದಾಯಕ್ಕೆ ನೆರವಾಗುವಲ್ಲಿ ತುಲನಾತ್ಮಕವಾಗಿ ಹಿಂದುಳಿದಿದೆ ವಿಷಯ ಹೀಗಿರುವಾಗ, ಬೇಡ ಸಮುದಾಯವನ್ನು ಸರಕಾರ ಮತ್ತು ಖಾಸಗಿ ಸಂಘ ಸಂಸ್ಥೆಗಳು ನಿರ್ಲಕ್ಷಿಸಿವೆ ಎಂದರೆ ಅತಿಶಯೋಕ್ತಿ ಏನಲ್ಲ.

ಕೋಷ್ಠಕ-೨.೨೪ ಸಾರ್ವಜನಿಕ ಆಸ್ಪತ್ರೆಗಳು ಮತ್ತು ಇತರ ಆರೋಗ್ಯ ಘಟಕಗಳು

ಕ್ರಮ ಸಂಖ್ಯೆ	ತಾಲ್ಲೂಕು	ಸರ್ಕಾರಿ ಆಸ್ಪತ್ರೆಗಳು		ಪ್ರಾಥಮಿಕ ಆರೋಗ್ಯ ಕೇಂದ್ರಗಳು		ಪ್ರಾಥಮಿಕ ಆರೋಗ್ಯ ಘಟಕಗಳು	ಉಪ ಕೇಂದ್ರಗಳು	ಕುಟುಂಬ ಕಲ್ಯಾಣ ಕೇಂದ್ರಗಳು (ಬಾಣಂತಿ ಸೇವಾ ಕೇಂದ್ರಗಳು ಸೇರಿ)	
		ಸಂಖ್ಯೆ	ಹಾಸಿಗೆಗಳು	ಸಂಖ್ಯೆ	ಹಾಸಿಗೆಗಳು	ಸಂಖ್ಯೆ	ಹಾಸಿಗೆಗಳು		
೧	ಔರಾದ	೧	೪೦	೮	೪೮	೩	೨೦	೫೬	೨
೨	ಬಸವಕಲ್ಯಾಣ	೧	೫೦	೧೦	೬೦	೨	–	೫೪	೧
೩	ಭಾಲ್ಕಿ	೧	೩೦	೮	೪೮	೩	–	೫೨	–
೪	ಬೀದರ	೧	೨೮೩	೮	೪೮	–	–	೫೫	೨
೫	ಹುಮನಾಬಾದ	೧	೭೦	೮	೪೮	೩	೧೦	೫೧	೧
	ಜಿಲ್ಲಾ ಮೊತ್ತ	೫	೪೭೩	೪೨	೨೫೨	೧೧	೩೦	೨೬೮	೬

ಮೂಲ: ಬೀದರ ಜಿಲ್ಲೆಯ ಅಂಕಿ ಅಂಶಗಳ ನೋಟ, ೧೯೯೮-೯೯.

ಸರಕಾರದ ಗಿರಿಜನ ಉಪಯೋಜನೆ Tribal Sub Plan

ಪರಿಶಿಷ್ಟ ವರ್ಗಗಳ ಜನರಿಗೆ ಶೈಕ್ಷಣಿಕವಾಗಿ ಮತ್ತು ಆರ್ಥಿಕವಾಗಿ ಮುಂದೆ ಬರುವಂತೆ ಮಾಡುವಲ್ಲಿ ಕರ್ನಾಟಕ ಸರಕಾರ ಹತ್ತು ಹಲವಾರು ಯೋಜನೆಗಳನ್ನು ೧೯೯೫ ರಿಂದ ಅನುಷ್ಠಾನದಲ್ಲಿ ತರುತ್ತಿದೆ. ಈ ಸಮುದಾಯದ ಜನರಿಗೆ ನೀಡುವ ಯೋಜನೆಗಳ ಸಮಗ್ರ ಚಿತ್ರಣಕ್ಕಾಗಿ ಹಾಗೂ ಈ ನಿಟ್ಟಿನಲ್ಲಿ ಕೈಕೊಳ್ಳುವ ಎಲ್ಲ ಕಾರ್ಯಕ್ರಮಗಳ ಸಮನ್ವಯತೆಗಾಗಿ ಕರ್ನಾಟಕ ಸರಕಾರ ಜನೆವರಿ, ೧೯೯೯ರಲ್ಲಿ ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶನಾಲಯವನ್ನು ದಾವಣಗೇರೆಯಲ್ಲಿ ಪ್ರಾರಂಭಿಸಿತ್ತು. ತದನಂತರ ಆಡಳಿತಾತ್ಮಕ ಕಾರಣಗಳಿಂದಾಗಿ ಈ ನಿರ್ದೇಶನಾಲಯವನ್ನು ದಾವಣಗೆರೆಯಿಂದ ಬೆಂಗಳೂರಿಗೆ ೨೦೦೦ ವರ್ಷದಲ್ಲಿ ಸ್ಥಳಾಂತರಿಸಲಾಯಿತು[೧೫].

೧. ನರ್ಸರಿ ಮತ್ತು ಮಹಿಳಾ ಕಲ್ಯಾಣ ಕೇಂದ್ರಗಳು

ಪರಿಶಿಷ್ಟ ವರ್ಗದವರ ಮಕ್ಕಳಿಗೆ ಚಿಕ್ಕ ವಯಸ್ಸಿನಲ್ಲಿಯೇ ಶಾಲೆಗೆ ಹೋಗುವ ಅಭ್ಯಾಸ ರೂಢಿಸಲು ಸರಕಾರ ಈ ಯೋಜನೆಯನ್ನು ರೂಪಿಸಿದೆ. ರಾಜ್ಯದಲ್ಲಿ ಇಂತಹ ೭೦ ನರ್ಸರಿ ಮತ್ತು ಮಹಿಳಾ ಕಲ್ಯಾಣ ಕೇಂದ್ರಗಳು ಇದ್ದು, ೩,೨೮೮ ಮಕ್ಕಳು ಇದರ ಪ್ರಯೋಜನವನ್ನು ಪಡೆಯುತ್ತಿದ್ದಾರೆ.

ಈ ಕೇಂದ್ರಗಳಲ್ಲಿ ಪ್ರಾಥಮಿಕ ಪೂರ್ವ ಶಿಕ್ಷಣದ ಜೊತೆಗೆ ವಾರದ ದಿನಗಳಲ್ಲಿ ಒಂದು ಮಗುವಿಗೆ ಒಂದು ದಿನಕ್ಕೆ ಒಂದು ರೂಪಾಯಿಯಂತೆ ಮಧ್ಯಾಹ್ನದ ಉಪಹಾರ ನೀಡಲಾಗುತ್ತದೆ. ಪ್ರತಿ ಮಗುವಿಗೆ ರೂಪಾಯಿ ೫೦ ರ ಮೌಲ್ಯದ ಸೋಪು, ತಲೆಗೆ ಎಣ್ಣೆ, ಸಮವಸ್ತ್ರ, ಕಲಿಕೆಯ ಸಲಕರಣೆಗಳು ಮುಂತಾದವನ್ನು ನೀಡಲಾಗುತ್ತದೆ. ಮೂರರಿಂದ ೫ ವರ್ಷ ವಯಸ್ಸಿನ ಗಂಡು ಅಥವಾ ಹೆಣ್ಣು ಮಕ್ಕಳು ಇಂತಹ ಕೇಂದ್ರದಲ್ಲಿ ಪ್ರವೇಶ ಪಡೆಯಲು ಅರ್ಹರಾಗಿರುತ್ತಾರೆ ಮತ್ತು ಪ್ರತಿ ಕೇಂದ್ರದಲ್ಲಿ ೫೦ ಮಕ್ಕಳಿಗೆ ಪ್ರವೇಶಾವಕಾಶ ಇರುತ್ತದೆ.

೨. ಆಶ್ರಮ ಶಾಲೆಗಳು

ಪರಿಶಿಷ್ಟ ಜನಾಂಗದ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಆಶ್ರಮ ಶಾಲೆಗಳನ್ನು ಸ್ಥಾಪಿಸಲಾಗಿದೆ. ರಾಜ್ಯದಲ್ಲಿ ಈವರೆಗೆ ೯೧ ಆಶ್ರಮ ಶಾಲೆಗಳಿದ್ದು ೫,೭೨೫ ವಿದ್ಯಾರ್ಥಿಗಳು ಇದರ ಪ್ರಯೋಜನ ಪಡೆಯುತ್ತಿದ್ದಾರೆ. ಈ ಶಾಲೆಗಳಲ್ಲಿ ಓದುವ ಮಕ್ಕಳಿಗೆ ಒಂದರಿಂದ ೪ ನೇಯ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಲು ಅವಕಾಶವಿದೆ. ಮಕ್ಕಳಿಗೆ ಪುಸ್ತಕ, ಭೋಜನ ಮತ್ತು ಉಡುಪುಗಳನ್ನು ಈ ಶಾಲೆಗಳಲ್ಲಿ ಪೂರೈಸಲಾಗುತ್ತಿದೆ.

ಮೆಟ್ರಿಕ ಪೂರ್ವ ವಿದ್ಯಾರ್ಥಿ ನಿಲಯ

ರಾಜ್ಯಾದ್ಯಂತ ೬೧ ಮೆಟ್ರಿಕ ಪೂರ್ವ ವಿದ್ಯಾರ್ಥಿ, ವಿದ್ಯಾರ್ಥಿನಿ ನಿಲಯಗಳಿದ್ದು ಇವುಗಳಲ್ಲಿ ಪ್ರತಿ ರ್ಷ ೨,೮೩೫ ವಿದ್ಯಾರ್ಥಿಗಳು ಇದರ ಪ್ರಯೋಜನ ಪಡೆದುಕೊಳ್ಳುತ್ತಿದ್ದಾರೆ.

ರತ ಸರ್ಕಾರದ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ

ಭಾರತ ಸರ್ಕಾರದ ನಿಬಂಧನೆಗಳ ಮೇರೆಗೆ ಕುಟುಂಬದ ವಾರ್ಷಿಕ ವರಮಾನ ೫೦,೯೨೦-೦೦ ರೂ. ೆಗೆ ಮೀರದ ಎಲ್ಲಾ ಅರ್ಹ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳು ವಿದ್ಯಾರ್ಥಿ ವೇತನ ಪಡೆಯಲು ರ್ಹರಾಗಿರುತ್ತಾರೆ. ಮೆಟ್ರಿಕ ನಂತರದ ವಿದ್ಯಾಭ್ಯಾಸಕ್ಕೆ ನೀಡಲಾಗುವ ಈ ವಿದ್ಯಾರ್ಥಿ ವೇತನವನ್ನು ಎರಡು ತಿಯಲ್ಲಿ ನೀಡಲಾಗುತ್ತಿದೆ. ವಿದ್ಯಾರ್ಥಿಗಳ ಕುಟುಂಬದ ವಾರ್ಷಿಕ ವರಮಾನ ೩೮,೨೨೦-೦೦ ರೂ. ಗಳಿಗೆ ೀರದಿದ್ದಲ್ಲಿ ಪೂರ್ಣ ವಿದ್ಯಾರ್ಥಿ ವೇತನವನ್ನು ಹಾಗೂ ವಾರ್ಷಿಕ ಆದಾಯ ೫೦,೯೨೦-೦೦ ರೂ. ಗಳಿಗೆ ೀರಿದ ವಿದ್ಯಾರ್ಥಿಗಳಿಗೆ ಅರ್ಧ ವಿದ್ಯಾರ್ಥಿ ವೇತನವನ್ನು ನೀಡಲಾಗುವುದು. ವಿದ್ಯಾರ್ಥಿ ವೇತನದ ಮೊತ್ತ ರೆ ಬೇರೆ ತರಗತಿಗಳಿಗೆ ಬೇರೆ ಬೇರೆಯಾಗಿದೆ. ತರಗತಿ, ವಿಷಯ ಹಾಗೂ ವಿದ್ಯಾರ್ಥಿ ವೇತನದ ೊತ್ತದ ವಿವರವನ್ನು ಕೋಷ್ಟಕ ೨.೨೫ರಲ್ಲಿ ನೀಡಲಾಗಿದೆ.

ಕೋಷ್ಟಕ-೨.೨೫ ವಿದ್ಯಾರ್ಥಿ ವೇತನ ದರಗಳು

ಂಪು	ಕೋರ್ಸ್	ವಿದ್ಯಾರ್ಥಿನಿಲಯ ವಾಸಿಗಳಲ್ಲದವರಿಗೆ ಮಾಹೆಯಾನ	ವಿದ್ಯಾರ್ಥಿನಿಲಯ ವಾಸಿಗಳಿಗೆ ಮಾಹೆಯಾನ
	ಪಿ.ಯು.ಸಿ.	೯೦-೦೦ ರೂ.	೧೫೦-೦೦ ರೂ.
	ಪದವಿ (ಬಿ.ಎ.,ಬಿ.ಎಸ್ಸಿ., ಬಿ.ಕಾಂ.)	೧೨೦-೦೦ ರೂ.	೨೩೦-೦೦ ರೂ.
	ಸ್ನಾತಕೋತ್ತರ (ಎಂ.ಎ., ಎಂ.ಕಾಂ.,)	೧೪೦-೦೦ ರೂ.	೨೯೦ ರೂ.
	ಸ್ನಾತಕೋತ್ತರ (ವಿಜ್ಞಾನ ವಿಷಯ)	೧೯೦-೦೦ ರೂ.	೨೯೦-೦೦ ರೂ.
	ವೈದಕೀಯ (ಎಂ.ಬಿ.ಬಿ.ಎಸ್.ಬಿ.ಎಸ್ಸಿ., ಎಮ್.ಜಿ. ಬಿ.ಡಿ.ಎಸ್.ಸಿ.)	೧೯೦-೦೦ ರೂ.	೪೨೫-೦೦ ರೂ.

ಲ: ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶನಾಲಯ, ಬೆಂಗಳೂರು, ೨೦೦೦, ಪುಟ-೬.

ಂಜೂರಾತಿ ವಿಧಾನ

ಈ ವಿದ್ಯಾರ್ಥಿ ವೇತನಕ್ಕೆ ಅರ್ಜಿಗಳನ್ನು ಎಲ್ಲಾ ಕಾಲೇಜುಗಳಲ್ಲೂ ನೀಡಲಾಗುತ್ತದೆ. ಇದನ್ನು ಭರ್ತಿ ಡಿ ಕಾಲೇಜು ಪ್ರಾಂಶುಪಾಲರ ಮೂಲಕ ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗಳಿಗೆ ಕಳುಹಿಸಬೇಕು.

ವಿದ್ಯಾರ್ಥಿ ವೇತನ ಮಂಜೂರಾದ ನಂತರ ಮಂಜೂರಾತಿ ಪಟ್ಟಿಯನ್ನು ಚೆಕ್ ಸಮೇತ ಸಂಬಂಧಪಟ್ಟ ಕಾಲೇಜುಗಳಿಗೆ ಕಳುಹಿಸಿ ಕೊಡಲಾಗುತ್ತದೆ.

ರಾಜ್ಯ ಮೆಟ್ರಿಕ್ ನಂತರ ವಿದ್ಯಾರ್ಥಿ ವೇತನ

ಭಾರತದ ಸರ್ಕಾರದ ವಿದ್ಯಾರ್ಥಿ ವೇತನಕ್ಕೆ ಅನರ್ಹರಾದ ಮತ್ತು ಪರಿಶಿಷ್ಟ ವರ್ಗಗಳ ಮೆಟ್ರಿಕ್ ನಂತರದ ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮುಂದುವರೆಸಲು ಅನುಕೂಲವಾಗುವಂತೆ ರಾಜ್ಯ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ ಮಂಜೂರು ಮಾಡಲಾಗುತ್ತದೆ.

ಅ. ವೈದ್ಯಕೀಯ ಹಾಗೂ ತಾಂತ್ರಿಕ ಪದವಿಗಳಲ್ಲಿ ಎರಡು ಬಾರಿ ಅನುತ್ತೀರ್ಣರಾದವರೂ ಸಹ ಇದಕ್ಕೆ ಅರ್ಹರಾಗಿರುತ್ತಾರೆ.

ಆ. ಇತರೆ ಸಾಮಾನ್ಯ ಪದವಿಗಳಲ್ಲಿ ಒಂದು ಬಾರಿ ಅನುತ್ತೀರ್ಣರಾದವರೂ ಇದಕ್ಕೆ ಅರ್ಹರು.

ಇ. ಒಂದೇ ಕುಟುಂಬದ ಇಬ್ಬರು ಮಕ್ಕಳು ವ್ಯಾಸಂಗ ಮಾಡುತ್ತಿದ್ದರೂ ಈ ವಿದ್ಯಾರ್ಥಿ ವೇತನ ಪಡೆಯಲು ಅರ್ಹರು.

ವಿದ್ಯಾರ್ಥಿ ವೇತನ ಮೊತ್ತ

ಅ. ವೈದ್ಯಕೀಯ, ತಾಂತ್ರಿಕ ತರಗತಿಗಳ ವಿದ್ಯಾರ್ಥಿಗಳಿಗೆ ಮಾಹೆಯಾನ ೭೫-೦೦ ರೂ. ಗಳಂತೆ ೧೦ ತಿಂಗಳಿಗೆ ೭೫೦-೦೦ ರೂ. ಗಳು.

ಆ. ಸ್ನಾತಕೋತ್ತರ ತರಗತಿಗಳಲ್ಲಿ ಅಭ್ಯಸಿಸುವವರಿಗೆ ತಿಂಗಳಿಗೆ ೫೦-೦೦ ರೂ. ಗಳಂತೆ ೧೦ ತಿಂಗಳಿಗೆ ೫೦೦-೦೦ ರೂ.ಗಳು.

ಇ. ಇತರೆ ಸಾಮಾನ್ಯ ಪದವಿ ತರಗತಿಗಳಲ್ಲಿ ಅಭ್ಯಸಿಸುವವರಿಗೆ ತಿಂಗಳಿಗೆ ४೦-೦೦ ರೂ. ಗಳಂತೆ ४೦ ತಿಂಗಳಿಗೆ ४೦೦-೦೦ ರೂ. ಗಳಂತೆ ವಿದ್ಯಾರ್ಥಿ ವೇತನ ನೀಡಲಾಗುತ್ತದೆ.

ಮಂಜೂರಾತಿ ವಿಧಾನ

ಪರಿಶಿಷ್ಟ ವರ್ಗಕ್ಕೆ ಸೇರಿದ ವಿದ್ಯಾರ್ಥಿಗಳು ತಾವು ವ್ಯಾಸಂಗ ಮಾಡುತ್ತಿರುವ ಕಾಲೇಜುಗಳಲ್ಲಿ ಅರ್ಜಿಯನ್ನು ಪಡೆದು ಭರ್ತಿ ಮಾಡಿ ಕಾಲೇಜು ಪ್ರಾಂಶುಪಾಲರ ಮೂಲಕ ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗಳಿಗೆ ಕಳುಹಿಸಬೇಕು. ಅದನ್ನು ಪರಿಶೀಲಿಸಿ ಅರ್ಹ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಮಂಜುರು ಮಾಡಿ ಅದರ ಪಟ್ಟಿ ಹಾಗೂ ಚೆಕ್‌ಗಳನ್ನು ಸಂಬಂಧಪಟ್ಟ ಕಾಲೇಜುಗಳಿಗೆ ಕಳುಹಿಸಲಾಗುತ್ತದೆ.

ನಗದು ಬಹುಮಾನ

ಪರಿಶಿಷ್ಟ ವರ್ಗಕ್ಕೆ ಸೇರಿದ ವಿದ್ಯಾರ್ಥಿಗಳು ಪಬ್ಲಿಕ್ ಪರೀಕ್ಷೆಗಳಲ್ಲಿ ಪ್ರಥಮ ಯತ್ನದಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದರೆ ಅಂತಹ ವಿದ್ಯಾರ್ಥಿಗಳಿಗೆ ನಗದು ಬಹುಮಾನ ನೀಡಲಾಗುತ್ತದೆ.

ಬಹುಮಾನದ ವಿವರ

೧.	ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳಿಗೆ	ರೂ. ೫೦೦-೦೦
೨.	೨ನೇ ಪಿ.ಯು.ಸಿ. ವಿದ್ಯಾರ್ಥಿಗಳಿಗೆ	ರೂ. ೭೫೦-೦೦
೩.	ಪದವಿ ತರಗತಿ ವಿದ್ಯಾರ್ಥಿಗಳಿಗೆ	ರೂ. ೧೦೦೦-೦೦
೪.	ಸ್ನಾತಕೋತ್ತರ ಪದವಿ	ರೂ. ೧೨೫೦-೦೦
೫.	ತಾಂತ್ರಿಕ ಪದವಿ	ರೂ. ೧೫೦೦-೦೦
೬.	ವೈದ್ಯಕೀಯ ಪದವಿ	ರೂ. ೧೫೦೦-೦೦
೭.	ವ್ಯವಸಾಯ ಮತ್ತು ಪಶು ವೈದ್ಯ	ರೂ. ೧೫೦೦-೦೦

ಮಂಜೂರಾತಿ ವಿಧಾನ

ಅ. ಈ ನಗದು ಬಹುಮಾನಕ್ಕಾಗಿ ಅರ್ಜಿ ಕರೆಯಲಾಗುತ್ತದೆ.

ಆ. ಸಂಸ್ಥೆಯ ಮುಖ್ಯಸ್ಥರ ಮೂಲಕ ಭರ್ತಿ ಮಾಡಿದ ಅರ್ಜಿಗಳನ್ನು ಅಂಕಪಟ್ಟಿಯ ಜೆರಾಕ್ಸ್ ಪ್ರತಿಗಳೊಂದಿಗೆ ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗಳಿಗೆ ಕಳುಹಿಸಬೇಕು. ಇದರೊಂದಿಗೆ ಜಾತಿ ಪ್ರಮಾಣ ಪತ್ರ ತಪ್ಪದೇ ಲಗತ್ತಿಸಬೇಕು.

ಇ. ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗಳು ಅರ್ಜಿ ಪರಿಶೀಲಿಸಿ ಸಂಬಂಧಪಟ್ಟ ಕಾಲೇಜುಗಳಿಗೆ ಬಹುಮಾನದ ಹಣ ಚೆಕ್ ಅನ್ನು ಕಳುಹಿಸುವರು.

ರ್‍ಯಾಂಕ್ ವಿದ್ಯಾರ್ಥಿಗಳಿಗೆ ನಗದು ಬಹುಮಾನ

ಎಸ್.ಎಸ್.ಎಲ್.ಸಿ., ಪಿ.ಯು.ಸಿ., ಪದವಿ ಮತ್ತು ಸ್ನಾತಕೋತ್ತರ ಪದವಿಗಳ ಸಾರ್ವತ್ರಿಕ ಪರೀಕ್ಷೆಗಳಲ್ಲಿ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳು ಅತ್ಯುತ್ತಮ ಅಂಕ ಪಡೆದು ಉತ್ತೀರ್ಣರಾಗುವಂತೆ ಪ್ರೋತ್ಸಾಹಿಸಲು ಮೇಲ್ಕಂಡ ಪರೀಕ್ಷೆಗಳಲ್ಲಿ ೧ ರಿಂದ ೧೦ ರ್‍ಯಾಂಕ ಪಡೆದ ಪ. ಪಂಗಡದ ವಿದ್ಯಾರ್ಥಿಗಳಿಗೆ ಹಾಗೂ ಸ್ನಾತಕೋತ್ತರ ಪದವಿಯಲ್ಲಿ ೧ ರಿಂದ ೩ನೇ ರ್‍ಯಾಂಕ್ ಪಡೆಯುವ ವಿದ್ಯಾರ್ಥಿಗಳಿಗೆ ೫೦೦೦-೦೦ ರೂಪಾಯಿಗಳ ಬಹುಮಾನ ನೀಡಲಾಗುತ್ತದೆ.

ಅರ್ಹತೆ

ಅ. ಅರ್ಜಿ ಸಲ್ಲಿಸುವ ವಿದ್ಯಾರ್ಥಿ ಪರಿಶಿಷ್ಟ ಪಂಗಡಕ್ಕೆ ಸೇರಿದವರಾಗಿರಬೇಕು.

ಆ. ಎಸ್.ಎಸ್.ಎಲ್.ಸಿ.ಯಿಂದ ಪದವಿವರೆಗಿನ ಯಾವುದೇ ಪರೀಕ್ಷೆಯಲ್ಲಿ ೧ ರಿಂದ ೧೦ ನೇ ರ್‍ಯಾಂಕ್ ಪಡೆದಿರಬೇಕು.

ಇ. ಸ್ನಾತಕೋತ್ತರ ಪದವಿಯಾದರೆ ೧ ರಿಂದ ಃನೇ ರ್‍ಯಾಂಕ್ ಪಡೆದಿರಬೇಕು.

ಮಂಜೂರಾತಿ ವಿಧಾನ

ಪರಿಶಿಷ್ಟ ಪಂಗಡದ ರ್‍ಯಾಂಕ್ ವಿಜೇತ ವಿದ್ಯಾರ್ಥಿಗಳು ಅರ್ಜಿಯನ್ನು ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗಳಿಗೆ ಸಲ್ಲಿಬೇಕು. ಅರ್ಜಿಯೊಂದಿಗೆ ಅಂಕ ಪಟ್ಟಿಯ ನಕಲು, ವಿದ್ಯಾಸಂಸ್ಥೆಯ ಮುಖ್ಯಸ್ಥರು ನೀಡಿದ ದೃಢೀಕರಣ ಪತ್ರ, ಜಾತಿ ಪ್ರಮಾಣ ಪತ್ರಗಳನ್ನು ಲಗತ್ತಿಸಬೇಕು. ಅವರು ನೀಡಿದ ಮಾಹಿತಿಗಳನ್ನು ಪರಿಶೀಲಿಸಿ ಸಮಾಜ ಕಲ್ಯಾಣ ಅಧಿಕಾರಿಗಳು ಮಂಜೂರಾತಿ ನೀಡಿದ ನಂತರ ಜಿಲ್ಲಾ ಮಟ್ಟದಲ್ಲಿ ಏರ್ಪಡಿಸುವ ಸಾರ್ವಜನಿಕ ಸಮಾರಂಭದಲ್ಲಿ ಬಹುಮಾನದ ಚೆಕ್‌ನ್ನು ನೀಡಲಾಗುತ್ತದೆ.

ಎಂ.ಫಿಲ್ ಮತ್ತು ಪಿಎಚ್.ಡಿ. ವಿದ್ಯಾರ್ಥಿಗಳಿಗೆ ಫೆಲೋಶಿಪ್

ರಾಜ್ಯದಲ್ಲಿ ಕೃಷಿ ವಿಶ್ವವಿದ್ಯಾಲಯಗಳಲ್ಲಿ ವಿವಿಧ ವಿಷಯಗಳಲ್ಲಿ ಸಂಶೋಧನೆಗೆ ತೊಡಗಿರುವ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ, ಸಂಶೋದನೆ, ಮಾಹತಿ ಸಂಗ್ರಹಣೆ ಮುಂತಾದವುಗಳಿಗೆ ಹೆಚ್ಚಿನ ವೆಚ್ಚ ಭರಿಸಬೇಕಾಗುತ್ತದೆ. ಆದ್ದರಿಂದ ಎಂ.ಫಿಲ್ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ೮೦೦೦-೦೦ ಮತ್ತು ಪಿಎಚ್.ಡಿ. ಮಾಡುತ್ತಿರುವ ವಿದ್ಯಾರ್ಥಿಗಳಿಗೆ ೧೦,೦೦೦೦-೦೦ ರೂಪಾಯಿಗಳನ್ನು ಸಮಾಜ ಕಲ್ಯಾಣ ಇಲಾಖೆ ವತಿಯಿಂದ ನೀಡಲಾಗುತ್ತಿದ್ದು ೨೦೦೦-೦೧ನೇ ಸಾಲಿನಿಂದ ಈ ಯೋಜನೆಯನ್ನು ಪರಿಶಿಷ್ಟ ವರ್ಗದ ಕಲ್ಯಾಣ ಇಲಾಖೆಯಿಂದ ಕಾರ್ಯಗತಗೊಳಿಸಲು ಉದ್ದೇಶಿಸಿದೆ.

ಪುಸ್ತಕ ಭಂಡಾರ

ವೈದ್ಯಕೀಯ, ತಾಂತ್ರಿಕ ಮತ್ತು ವೃತ್ತಿಪರ ವಿಷಯಗಳು, ಕೃಷಿ ವಿಜ್ಞಾನ, ಪಶು ವಿಜ್ಞಾನ ಕಾಲೇಜುಗಳಲ್ಲಿ ಅಭ್ಯಸಿಸುವ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ನಿಗದಿ ಪಡಿಸಿದ ಪಠ್ಯಪುಸ್ತಕ ಮತ್ತು ಇತರ ಉಪಯುಕ್ತ ಪುಸ್ತಕ ಕೊಳ್ಳಲು ಸಾಧ್ಯವಾಗುವುದಿಲ್ಲ. ಪ್ರಸ್ತುತ ಇರುವ ಗ್ರಂಥಾಲಯಗಳಲ್ಲಿ ಎಲ್ಲಾ ವಿದ್ಯಾರ್ಥಿಗಳಿಗೂ ಎಲ್ಲಾ ಬಗೆಯ ಪುಸ್ತಕಗಳು ದೊರೆಯುವುದು ಅಸಾಧ್ಯ. ಆದ್ದರಿಂದ ಇಂತಹ ಸಂಸ್ಥೆಗಳಲ್ಲಿ

ಪ್ರತ್ಯೇಕವಾಗಿ ಈ ವಿದ್ಯಾರ್ಥಿಗಳ ಉಪಯೋಗಕ್ಕಾಗಿ ಅಗತ್ಯವಾದ ಪುಸ್ತಕ ಖರೀದಿಸಿ ಬುಕ್ ಬ್ಯಾಂಕ್ ಅಥವಾ ಪುಸ್ತಕ ಭಂಡಾರ ತೆರೆಯಲಾಗುವುದು.

ಇದರಿಂದ ಬೇಕಾದ ಪುಸ್ತಕ ಪಡೆದು ಉಪಯೋಗಿಸಿಕೊಂಡು ನಂತರ ಬುಕ್ ಬ್ಯಾಂಕಿಗೆ ಅದನ್ನು ಹಿಂತಿರುಗಿಸಬೇಕು.

ಈ ಯೋಜನೆಯಲ್ಲಿ ಕೇಂದ್ರದ ಶೇ. ೫೦ ರಷ್ಟು ಸಹಭಾಗಿತ್ವ ಇದೆ. ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗಳು ವಿದ್ಯಾಸಂಸ್ಥೆಯ ಮುಖ್ಯಸ್ಥರನ್ನು ಸಂಪರ್ಕಿಸಿ ಅಲ್ಲಿ ವ್ಯಾಸಂಗ ಮಾಡುತ್ತಿರುವ ಪ. ವರ್ಗದ ವಿದ್ಯಾರ್ಥಿಗಳ ಪಟ್ಟಿ ತಯಾರಿಸುತ್ತಾರೆ. ನಂತರ ಪ್ರತಿ ಮೂರು ವಿದ್ಯಾರ್ಥಿಗಳಿಗೆ ಒಂದು ಸೆಟ್‌ನಂತೆ ಪುಸ್ತಕ ಖರೀದಿಸಿ ನೀಡುತ್ತಾರೆ.

ಈ ರೀತಿ ಕೊಡುವ ಪುಸ್ತಕಗಳ ಗರಿಷ್ಠ ಮಿತಿಯ ವಿವರ ಹೀಗಿದೆ

ಅ. ವೈದ್ಯಕೀಯ, ಹೋಮಿಯೋಪತಿ, ಅಲೋಪಿ ಮತ್ತು ಆಯುರ್ವೇದಿಕ್ (ಒಂದು ಸೆಟ್‌ಗೆ)	ರೂ. ೭,೫೦೦-೦೦
ಆ. ತಾಂತ್ರಿಕ (ಪ್ರತಿಸೆಟ್‌ಗೆ)	ರೂ. ೭,೫೦೦-೦೦
ಇ. ಪಶು ವಿಜ್ಞಾನ ವಿಷಯ	ರೂ. ೫,೦೦೦-೦೦
ಈ. ಕೃಷಿ ವಿಜ್ಞಾನ ವಿಷಯ	ರೂ. ೪,೫೦೦-೦೦
ಉ. ವೃತ್ತಿಪರ ವಿಷಯ	ರೂ. ೨,೪೦೦-೦೦

ಈ ಪುಸ್ತಕಗಳನ್ನು ಜೋಪಾನವಾಗಿ ಇಡಲು ಅಗತ್ಯವಾದ ಕಪಾಟನ್ನು ಖರೀದಿಸಲು ಸಹಾ ಈ ಯೋಜನೆಯಲ್ಲಿ ಅವಕಾಶ ಇದೆ. ಇದಕ್ಕಾಗಿ ಪ್ರತಿ ಕಪಾಟಿಗೆ ರೂ. ೨,೦೦೦-೦೦ ನೀಡಲಾಗುವುದು ಹಾಗೂ ಸಾಗಾಣಿಕೆ ವೆಚ್ಚ ೧೦೦-೦೦ ರೂ. ನೀಡಲಾಗುತ್ತದೆ.

ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಯರಿಗೆ ವಿದ್ಯಾರ್ಥಿ ವೇತನ

ಪ್ರೌಢಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ವರ್ಗದ ವಿದ್ಯಾರ್ಥಿನಿಯರ ಸಂಖ್ಯೆ ಗಮನಾರ್ಹವಾಗಿ ಕಡಿಮೆಯಾಗಿರುವುದರಿಂದ ಇನ್ನು ಮುಂದೆ ಈ ಹೆಣ್ಣು ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಪ್ರೌಢಶಾಲಾ ವಿದ್ಯಾಭ್ಯಾಸ ಮುಂದುವರೆಸುವಂತೆ ಉತ್ತೇಜಿಸಲು ಹೆಚ್ಚುವರಿಯಾಗಿ ಪ್ರತಿ ತಿಂಗಳು ೫೦೦-೦೦ ರೂ. ಗಳ ವಾರ್ಷಿಕ ವಿದ್ಯಾರ್ಥಿ ವೇತನ ನೀಡಲಾಗುತ್ತಿದೆ.

ಅಧ್ಯಯನ ಪ್ರವಾಸಕ್ಕೆ ನೆರವು

ತಾಂತ್ರಿಕ ಮತ್ತು ಇತರ ವೃತ್ತಿಪರ ವಿಷಯಗಳಲ್ಲಿ ಅಧ್ಯಯನ ಮಾಡುತ್ತಿರುವ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಪ್ರವಾಸ ಕಡ್ಡಾಯವಾಗಿದ್ದರೆ ಅಂತಹ ವಿದ್ಯಾರ್ಥಿಗೆ ಪ್ರವಾಸ ಕೈಗೊಳ್ಳುವುದು ಆರ್ಥಿಕವಾಗಿ ಕಷ್ಟವಾಗಬಹುದು. ಆದ್ದರಿಂದ ಈ ಯೋಜನೆಯಲ್ಲಿ ಪ್ರತಿ ವಿದ್ಯಾರ್ಥಿಗೆ ಅಧ್ಯಯನ ಪ್ರವಾಸ ವೆಚ್ಚವಾಗಿ ರೂ. ೧,೦೦೦-೦೦ ನೀಡಲಾಗುವುದು. ಪರಿಶಿಷ್ಟ ವರ್ಗಕ್ಕೆ ಸೇರಿದ ವಿದ್ಯಾರ್ಥಿಗಳು ತಮ್ಮ ಅಧ್ಯಯನ ಪ್ರವಾಸದ ವಿವರಗಳನ್ನು ವಿದ್ಯಾಸಂಸ್ಥೆಯ ಮುಖ್ಯಸ್ಥರ ಮೂಲಕ ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗಳಿಗೆ ಮಂಜೂರಾತಿಗಾಗಿ ಕಳುಹಿಸಬೇಕು.

ಪ್ರವಾಸದ ನಂತರ ಪ್ರವಾಸ ಕೈಗೊಂಡ ವಿದ್ಯಾರ್ಥಿಗಳು ಆ ಬಗ್ಗೆ ವಿದ್ಯಾಸಂಸ್ಥೆಯ ಮುಖ್ಯಸ್ಥರಿಂದ ದೃಢೀಕರಿಸಿದ ವೆಚ್ಚದ ಪಟ್ಟಿಯನ್ನು ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗೆ ಕಳುಹಿಸಬೇಕು. ಈ ವೆಚ್ಚ ೧೦೦೦-೦೦ ರೂ. ಮೀರಿರಬಾರದು.

ಎಸ್.ಎಸ್.ಎಲ್.ಸಿ. ಪರೀಕ್ಷೆಗಳಲ್ಲಿ ಪ. ಪಂಗಡಕ್ಕೆ ಸೇರಿದ ವಿದ್ಯಾರ್ಥಿಗಳು ಹೆಚ್ಚಿನ ಅಂಕ ಪಡೆದು ಉತ್ತಮ ಫಲಿತಾಂಶ ತರಲು ಅನುಕೂಲವಾಗುವಂತೆ ಪ್ರೌಢ ಶಾಲಾ ವಿದ್ಯಾರ್ಥಿಗಳಿಗೆ ಬೋಧನಾ ತರಗತಿಗಳನ್ನು ಏರ್ಪಡಿಸಲಾಗುತ್ತಿದೆ.

ಇದೇ ರೀತಿ ೭ನೇ ತರಗತಿಯ ವಿದ್ಯಾರ್ಥಿಗಳಿಗೂ ಈ ಬೋಧನಾ ಸೌಲಭ್ಯ ವಿಸ್ತರಿಸಲಾಗುವುದು. ಈ ಯೋಜನೆಯನ್ನ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯಿಂದ ಕಾರ್ಯಗತಗೊಳಿಸಲಾಗುತ್ತದೆ.

ತರಬೇತಿ

ಪರಿಶಿಷ್ಟ ವರ್ಗಗಳಿಗೆ ಸೇರಿದ ವಿದ್ಯಾವಂತ ನಿರುದ್ಯೋಗಿ ಯುವ ಜನರಿಗೆ ಉದ್ಯೋಗ, ಸ್ವಯಂ ಉದ್ಯೋಗ ಕೈಗೊಳ್ಳಲು ನೆರವಾಗುವಂತೆ ವಿವಿಧ ವಿಭಾಗಗಳಲ್ಲಿ ತರಬೇತಿಯನ್ನು ನೀಡಲಾಗುತ್ತಿದೆ.

ಬೆರಳಚ್ಚು ಮತ್ತು ಶೀಘ್ರಲಿಪಿ ತರಬೇತಿ

ಬೆರಳಚ್ಚು ಹಾಗೂ ಶೀಘ್ರಲಿಪಿಯಲ್ಲಿ ತರಬೇತಿ ಪಡೆಯಲು ಇಚ್ಛಿಸುವ ಪರಿಶಿಷ್ಟ ವರ್ಗಗಳಿಗೆ ಸೇರಿದಂತಹ ಅಭ್ಯರ್ಥಿಗಳಿಗೆ ಪರಿಶಿಷ್ಟ ವರ್ಗದ ಕಲ್ಯಾಣ ಇಲಾಖೆಯಿಂದ ಆರ್ಥಿಕ ನೆರವು ಒದಗಿಸಲಾಗುವುದು.

ವಿವರ

ಅ. ಬೆರಳಚ್ಚು ತರಬೇತಿಗೆ ಪ್ರತಿ ತಿಂಗಳು ರೂ. ೩೦-೦೦

ಆ. ಶೀಘ್ರಲಿಪಿ (ಎಸ್.ಎಸ್.ಎಲ್.ಸಿ. ಮಾಡಿದವರಿಗೆ) ರೂ. ೭೫-೦೦

ಇ. ಶೀಘ್ರಲಿಪಿ (ಪದವಿ ಓದಿದವರಿಗೆ) ರೂ. ೨೦೦-೦೦

ಇದಲ್ಲದೆ ನಿಗದಿತ ದರದಲ್ಲಿ ವಾಣಿಜ್ಯ ಸಂಸ್ಥೆಗಳಿಗೆ ತರಬೇತಿ ಶುಲ್ಕವನ್ನು ಸಹ ನೀಡಲಾಗುತ್ತದೆ.

ಅರ್ಹತೆ

ಅ. ಅಭ್ಯರ್ಥಿಯು ಪರಿಶಿಷ್ಟ ವರ್ಗಕ್ಕೆ ಸೇರಿದವನಾಗಿರಬೇಕು.

ಆ. ಶಾಲಾ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವವರು ಈ ತರಬೇತಿಗೆ ಅರ್ಹರಾಗಿರುವುದಿಲ್ಲ.

ಇ. ತರಬೇತಿ ಪಡೆಯಲಿಚ್ಛಿಸುವ ಅಭ್ಯರ್ಥಿಯು ೧೮ ವರ್ಷಕ್ಕೆ ಮೇಲ್ಪಟ್ಟು ೩೦ ವರ್ಷಕ್ಕೆ ಒಳಗಿರಬೇಕು.

ಈ. ಅಭ್ಯರ್ಥಿಯ ಪೋಷಕರ/ಪಾಲಕರ ವಾರ್ಷಿಕ ಆದಾಯ ೨೪,೦೦೦-೦೦ ರೂಪಾಯಿಗಳಿಗಿಂತ ಕಡಿಮೆ ಇರಬೇಕು.

ಕಾನೂನು ಪದವೀಧರರಿಗೆ ಶಿಷ್ಯ ವೇತನ

ಪರಿಶಿಷ್ಟ ಪಂಗಡಗಳಿಗೆ ಸೇರಿದ ಕಾನೂನು ಪದವೀಧರರಿಗೆ ನ್ಯಾಯಾಂಗ ಆಡಳಿತದಲ್ಲಿ ಹೆಚ್ಚು ಜ್ಞಾನ ಗಳಿಸಿಕೊಳ್ಳಲು ನೆರವಾಗುವಂತೆ ತರಬೇತಿ ನೀಡಲಾಗುತ್ತದೆ. ಈ ತರಬೇತಿಯ ಅವಧಿಯು ನಾಲ್ಕು ವರ್ಷದ್ದಾಗಿದೆ. ತರಬೇತಿಯ ಅವಧಿಯಲ್ಲಿ ತಿಂಗಳಿಗೆ ರೂ. ೧,೦೦೦-೦೦ ದಂತೆ ಶಿಷ್ಯ ವೇತನ ನೀಡಲಾಗುವುದು.

ಅರ್ಹತೆ

ಅ. ಈ ಶಿಷ್ಯವೇತನ ಪಡೆಯುವ ಅಭ್ಯರ್ಥಿ ಪರಿಶಿಷ್ಟ ಪಂಗಡಕ್ಕೆ ಸೇರಿದವನಾಗಿರಬೇಕು.

ಆ. ಕಾನೂನು ಪದವೀಧರರಾಗಿರಬೇಕು.

ಇ. ಪ್ರತಿ ವರ್ಷ ಆಯ್ಕೆ ಆದ ಅಭ್ಯರ್ಥಿಗಳಿಗೆ ಈ ನೆರವು ನೀಡಲಾಗುವುದು.

ಇ. ಜಿಲ್ಲಾಧಿಕಾರಿಗಳು, ಜಿಲ್ಲಾ ಮ್ಯಾಜಿಸ್ಟ್ರೇಟ್‌ರ ಅಧ್ಯಕ್ಷತೆಯಲ್ಲಿ ನೇಮಕಗೊಂಡ ಜಿಲ್ಲಾ ಮಟ್ಟದ ಸಮಿತಿ ಆಯ್ಕೆ ಮಾಡಿದ ಅಭ್ಯರ್ಥಿಗಳಿಗೆ ಈ ಸೌಲಭ್ಯ ದೊರೆಯುತ್ತದೆ.

ವಕೀಲರ ಸಂಘದ ಅಧ್ಯಕ್ಷರು, ಸರ್ಕಾರಿ ವಕೀಲರು, ಜಿಲ್ಲಾ ಕಾನೂನು ನೆರವು ಸಮಿತಿಯ ಕಾರ್ಯದರ್ಶಿಗಳು, ಜಿಲ್ಲಾ ಸರ್ಕಾರಿ ವಕೀಲರು ಹಾಗೂ ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗಳು ಈ ಆಯ್ಕೆ ಸಮಿತಿಯಲ್ಲಿ ಇರುತ್ತಾರೆ.

ಕಾನೂನು ಪದವೀಧರರಿಗೆ ಧನ ಸಹಾಯ

ಪರಿಶಿಷ್ಟ ಪಂಗಡಕ್ಕೆ ಸೇರಿದ ನಿರುದ್ಯೋಗಿ ಕಾನೂನು ಪದವೀಧರರು ಸ್ವತಂತ್ರವಾಗಿ ವಕೀಲಿ ವೃತ್ತಿಯನ್ನು ಕೈಗೊಳ್ಳಲು ಹಾಗೂ ವಕೀಲರ ಸಂಘದಲ್ಲಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಲು ಸಹಾಯವಾಗುವಂತೆ ೫೦೦೦-೦೦ ರೂ. ಗಳ ಧನ ಸಹಾಯವನ್ನು ನೀಡಲಾಗುತ್ತದೆ.

ಸ್ವಯಂ ಉದ್ಯೋಗ ತರಬೇತಿ ಕಾರ್ಯಕ್ರಮ

(ಮೋಟಾರು ವಾಹನ ತರಬೇತಿ)

ಪರಿಶಿಷ್ಟ ವರ್ಗಕ್ಕೆ ಸೇರಿದ ನಿರುದ್ಯೋಗಿ ಯುವ ಜನರು ಸ್ವಯಂ ಉದ್ಯೋಗ ಕೈಗೊಳ್ಳಲು ಅನುಕೂಲವಾಗುವಂತೆ ಜಿಲ್ಲಾ ವಲಯ ಯೋಜನೆಯಡಿಯಲ್ಲಿ ಲಘು ವಾಹನ ಚಾಲನೆ ಮತ್ತು ಆಟೋರಿಕ್ಷಾ ಚಾಲನೆಗಳಲ್ಲಿ ೧ ತಿಂಗಳ ತರಬೇತಿ ನೀಡಿ ನಂತರ ವಾಹನ ನಡೆಸಲು ಪರವಾನಗಿ ಸಹ ಒದಗಿಸಲಾಗುತ್ತದೆ.

ಹೊಲಿಗೆ, ಎಲೆಕ್ಟ್ರಾನಿಕ್ಸ್ ಮತ್ತು ಕಂಪ್ಯೂಟರ್ ಶಿಕ್ಷಣ ತರಗತಿಗಳಿಗೆ ಶಿಷ್ಯ ವೇತನ

ಈಗಿನ ಸ್ಪರ್ಧಾತ್ಮಕ ಯುಗದಲ್ಲಿ ಹೆಚ್ಚು ಹೆಚ್ಚು ತಾಂತ್ರಿಕತೆ ಬೆಳೆದಂತೆಲ್ಲಾ ಯುವ ಜನತೆ ತಂತ್ರಜ್ಞಾನದಲ್ಲಿ ಪರಿಣತಿ ಪಡೆದು ಆಯಾ ಕ್ಷೇತ್ರದಲ್ಲಿ ಉಪಯೋಗ ದೊರಕಿಸಿಕೊಳ್ಳಲು ಅನುಕೂಲವಾಗುವಂತೆ ಎಲೆಕ್ಟ್ರಾನಿಕ್ಸ್, ಕಂಪ್ಯೂಟರ್ ಕೋರ್ಸ್‌ಗಳಿಗೆ ಭಾರಿ ಬೇಡಿಕೆ ಇರುತ್ತದೆ. ಪರಿಶಿಷ್ಟ ಪಂಗದ ವಿದ್ಯಾರ್ಥಿಗಳು ಈ ಕೋರ್ಸ್ ಸೇರಲು ಹಾಗೂ ತಾಂತ್ರಿಕತೆಯಲ್ಲಿ ತರಬೇತಿ ಪಡೆಯಲು ನೆರವು ನೀಡಲಾಗುತ್ತಿದೆ.

ತರಬೇತಿಯ ಅವಧಿಯಲ್ಲಿ ಈ ತರಬೇತಿಗೆ ಆಯ್ಕೆಯಾದ ಪ್ರತಿ ಅಭ್ಯರ್ಥಿಗೆ ಪ್ರತಿ ತಿಂಗಳು ೫೦೦-೦೦ ರೂಪಾಯಿಗಳ ಶಿಷ್ಯ ವೇತನ ನೀಡಲಾಗುತ್ತದೆ ಹಾಗೂ ತರಬೇತಿ ನೀಡುವ ಸಂಸ್ಥೆಗೆ ತರಬೇತಿಗೆ ನಿಗದಿಪಡಿಸಿದ ಶುಲ್ಕವನ್ನು ಇಲಾಖೆಯೇ ತುಂಬುತ್ತದೆ.

ಈ ತರಬೇತಿಯು ೩ ತಿಂಗಳಿನಿಂದ ೧ ವರ್ಷದ ಅವಧಿಯದ್ದಾಗಿರುತ್ತದೆ.

೧೮ ರಿಂದ ೩೦ ವರ್ಷ ವಯೋಮಿತಿಯ ಪರಿಶಿಷ್ಟ ಪಂಗಡಗಳ ಯುವಕ ಯುವತಿಯರು ಈ ತರಬೇತಿಗೆ ಅರ್ಹರಾಗಿರುತ್ತಾರೆ.

ಹೆಚ್ಚಿನ ವಿವರಗಳಿಗೆ ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗಳನ್ನು ಸಂಪರ್ಕಿಸಿ ಮಾಹಿತಿ ಪಡೆಯಬಹುದಾಗಿದೆ.

ಪರಿಶಿಷ್ಟ ವರ್ಗದ ಪ್ರೌಢ ಶಾಲಾ ವಿದ್ಯಾರ್ಥಿಗಳಿಗೆ ವಿಶೇಷ ತರಬೇತಿ

ಪರಿಶಿಷ್ಟ ವರ್ಗದ ಪ್ರೌಢಶಾಲಾ ವಿದ್ಯಾರ್ಥಿಗಳು ಶೈಕ್ಷಣಿಕ ಮಟ್ಟವು ಇತರೇ ವರ್ಗಗಳ ವಿದ್ಯಾರ್ಥಿಗಳ ಶೈಕ್ಷಣಿಕ ಮಟ್ಟಕ್ಕೆ ಹೋಲಿಸಿದಾಗ ಅತಿ ಕಡಿಮೆ ಇರುವುದನ್ನು ಗಮನಿಸಿ ಅವರಿಗಾಗಿ ವಿಶೇಷ ಬೋಧನಾ ತರಬೇತಿ ಯೋಜನೆ ರೂಪಿಸಿದ್ದು ವಾರ್ಷಿಕ ಪರೀಕ್ಷೆಯ ಮುಂಚಿತವಾಗಿ ೩ ತಿಂಗಳ ಕಾಲ ತರಬೇತಿ ನೀಡಲಾಗುತ್ತದೆ. ಶಿಕ್ಷಣಇಲಾಖೆಯು ಅವರಿಗೆ ಸಹಯೋಗ ನೀಡಿ ಶಾಲೆಗಳಲ್ಲಿಯೇ ವಿಶೇಷ ಬೋಧನೆ ನೀಡಲಾಗುತ್ತದೆ.

ಸಾರ್ವಜನಿಕ ವಲಯ-ಉದ್ದಿಮೆಗಳಲ್ಲಿ ತರಬೇತಿ

ಪರಿಶಿಷ್ಟ ಪಂಗಡಕ್ಕೆ ಸೇರಿದ ನಿರುದ್ಯೋಗಿ ಯುವಕ, ಯವತಿಯರಿಗೆ ಸರ್ಕಾರಿ ಸ್ವಾಮ್ಯದ ಸಾರ್ವಜನಿಕ ಉದ್ದಿಮೆಗಳಲ್ಲಿ ವಿವಿಧ ಟ್ರೇಡ್‌ಗಳಲ್ಲಿ ತರಬೇತಿ ನೀಡಿ ಉದ್ಯೋಗಾವಕಾಶ ಒದಗಿಸಲು ಈ ಯೋಜನೆ ರೂಪಿಸಲಾಗಿದೆ.

೧. ಈ ತರಬೇತಿಯ ಅವಧಿಯು ೧ ವರ್ಷದಿಂದ ೩ ವರ್ಷದವರೆಗೆ ಆಗಿರುತ್ತದೆ.

೨. ತರಬೇತಿ ಅವಧಿಯಲ್ಲಿ ತರಬೇತಿಗೆ ಆಯ್ಕೆಯಾದ ಪ್ರತಿಯೊಬ್ಬ ಅಭ್ಯರ್ಥಿಗೆ ತಿಂಗಳೊಂದಕ್ಕೆ ೫೦೦-೦೦ ರೂಪಾಯಿಯಿಂದ ೭೫೦-೦೦ ರೂಪಾಯಿಗಳವರೆಗೆ ಶಿಷ್ಯವೇತನ ನೀಡಲಾಗುತ್ತದೆ.

೩. ತರಬೇತಿಗೆ ತಗಲುವ ವೆಚ್ಚವನ್ನು ಹಾಗೂ ತರಬೇತಿ ಶುಲ್ಕವನ್ನು ಸರ್ಕಾರವೇ ಭರಿಸುತ್ತದೆ.

ಗಿರಿಜನ ಉಪಯೋಜನೆ

ಪರಿಶಿಷ್ಟ ಪಂಗಡದವರ ಸರ್ವತೋಮುಖ ಅಭಿವೃದ್ಧಿಗಾಗಿ ಗಿರಿಜನ ಉಪಯೋಜನೆಯನ್ನು ರೂಪಿಸಲಾಗಿದೆ, ಸಮಾರು ೨೮ ಅಭಿವೃದ್ಧಿ ಇಲಾಖೆಗಳು/ನಿಗಮಗಳು/ಮಂಡಳಿಗಳು ತಮ್ಮ ಯೋಜನಾ ಆಯವ್ಯಯದಲ್ಲಿ ಶೇ. ೩ನ್ನು ಪರಿಶಿಷ್ಟ ಪಂಗಡದವರ ಅಭಿವೃದ್ಧಿಗಾಗಿ ಮೀಸಲಾಗಿಟ್ಟು ಬಡತನ ರೇಖೆ ಕೆಳಗಿರುವ ಸಮಾಜಿಕ ಸೌಲಭ್ಯಗಳನ್ನು ಒದಗಿಸುತ್ತಿವೆ. ಅಲ್ಲದೆ ಕುಡಿಯುವ ನೀರಿನ ಪೂರೈಕೆ, ವಿದ್ಯುದ್ಧೀಕರಣ,

ವೈದ್ಯಕೀಯ ಸೌಲಭ್ಯ, ವಸತಿ, ಸಂಪರ್ಕರಸ್ತೆ, ಮುಂತಾದ ಮೂಲಭೂತ ಸೌಕರ್ಯಗಳಿಗ ಆದ್ಯತೆ ನೀಡಲಾಗುತ್ತಿದೆ.

ಪರಿಶಿಷ್ಟ ಪಂಗಡದವರ ಅಭಿವೃದ್ಧಿಗೆ ಗಿರಿಜನ ಉಪಯೋಜನೆಯಡಿ ಅನುಷ್ಠಾನಗೊಳಿಸುತ್ತಿರುವ ಕೆಲವು ಮುಖ್ಯ ಕಾರ್ಯಕ್ರಮಗಳ ವಿವರ ಕೆಳಕಂಡಂತಿವೆ.

೧. ಕೃಷಿ ಇಲಾಖೆ

ಪರಿಶಿಷ್ಟ ಪಂಗಡದ ರೈತರಿಗೆ ಕೃಷಿ ಅಭಿವೃದ್ಧಿಗಾಗಿ ಕೃಷಿ ಇಲಾಖೆಯಿಂದ ಶೇಕಡಾ ೧೦೦ರ ಸಹಾಯಧನದಲ್ಲಿ ೨,೮೦೦/- ರೂ. ಬೆಲೆಯ ಕೃಷಿ ಉಪಕರಣಗಳು, ೨,೦೦೦/- ರೂ. ಬೆಲೆಯ ಸಸ್ಯ ಸಂರಕ್ಷಣಾ ಉಪಕರಣಗಳು ಮತ್ತು ದಾಸ್ತಾನು ಪೆಟ್ಟಿಗೆ, ಇತ್ಯಾದಿಗಳನ್ನು ಒದಗಿಸಲಾಗುತ್ತಿದೆ. ಅಲ್ಲದೆ ಪವರ್‌ಟಿಲ್ಲರ್ ಖರೀದಿಗೆ ಶೇಡಕಾ ೭೫ರ ಸಹಾಯಧನ ಗರಿಷ್ಠ ೫೦,೦೦೦/- ರೂ. ಯಂತ್ರ ಚಾಲಿತ ಸಸ್ಯ ಸಂರಕ್ಷಣೆ ಸಾಧನಗಳ ಖರೀದಿಗೆ ಶೇ. ೭೫ರ ಸಹಾಯಧನ ಗರಿಷ್ಠ ರೂ. ೨೫,೦೦೦/- ಕ್ಕೆ ಮಿತಿಗೊಳಿಸಿ ನೀಡಲಾಗುತ್ತಿದೆ. ನೀರಾವರಿ ಸೌಲಭ್ಯಕ್ಕಾಗಿ ತುಂತು ನೀರಾವರಿ ಘಟಕಗಳು, ಹನಿ ನೀರಾವರಿ ಸೆಟ್‌ಗಳು ಮತ್ತು ಎತ್ತುಗಾಡಿಗಳನ್ನು ಒದಗಿಸಲಾಗುತ್ತಿದೆ.

೨. ತೋಟಗಾರಿಕೆ

ತೋಟಗಾರಿಕೆ ಇಲಾಖೆಯ ವತಿಯಿಂದ ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಅರ್ಧ ಎಕರೆ ತೆಂಗಿನ ತೋಟ, ೧ ಎಕರೆ ಹಣ್ಣಿನ ತೋಟ, ಅರ್ಧ ಎಕರೆ ವಾಣಿಜ್ಯ ಬೆಳೆಯ ತೋಟ ಅಥವಾ ಕಾಲು ಎಕರೆ ಗುಲಾಬಿ ತೋಟವನ್ನು ನಿರ್ಮಾಣ ಮಾಡಿಕೊಡಲಾಗುತ್ತಿದೆ.

ಪ್ರತಿ ವರ್ಷಕ್ಕೆ ರೂ. ೨,೧೬೫ ರಿಂದ ರೂ. ೨,೭೦೦/- ವರೆಗೆ ವೆಚ್ಚ ಮಾಡಲಾಗುತ್ತಿದೆ. ಅಲ್ಲದೆ ಹಳೆಯ ತೋಟಗಳನ್ನು ಎರಡು ವರ್ಷಗಳ ವರೆಗೆ ಇಲಾಖೆಯು ಪಾಲನೆ ಮಾಡಿಕೊಡಬೇಕಾಗಿದೆ. ತೋಟಗಳ ಪಾಲನೆಗೆ ಮೊದಲನೆ ವರ್ಷದಲ್ಲಿ ರೂ. ೬೫೦ ಮತ್ತು ಎರಡನೆ ವರ್ಷದಲ್ಲಿ ರೂ. ೩೫೦/- ಗಳನ್ನು ನೀಡಲಾಗುತ್ತಿದೆ.

೩. ಮೀನುಗಾರಿಕೆ

ಪರಿಶಿಷ್ಟ ಪಂಗಡದ ಮೀನುಗಾರರಿಗೆ ಸ್ವಾವಲಂಬನೆ ಜೀವನ ನಡೆಸಲು ಸಹಕಾರಿಯಾಗುವಂತೆ ಮೀನುಗಾರಿಕೆಯಲ್ಲಿ ತರಬೇತಿ ನೀಡಲಾಗುತ್ತಿದೆ. ಇದಲ್ಲದೆ ಮೀನುಗಾರಿಕೆಗೆ ಬಲೆ, ಹರಿಗೋಲು ಮತ್ತಿತರ ಉಪಕರಣಗಳನ್ನು ರೂ. ೩,೦೦೦-೦೦ ಗಳ ವೆಚ್ಚ ಉಚಿತವಾಗಿ ವಿತರಿಸಲಾಗುತ್ತಿದೆ. ಇದಲ್ಲದೆ,

ಅ. ಕೆರೆಗಳಲ್ಲಿ ಮೀನು ಸಾಕಾಣಿಕೆಗೆ ಸಹಾಯಧನ.

ಆ. ಕೊಳದಲ್ಲಿ ಮೀನುಮರಿ ಸಾಕಾಣಿಕೆ ಸಹಾಯಧನ.

ಇ. ಮೀನುಗಾರ ಮಹಿಳೆಯರಿಗೆ ಆರ್ಥಿಕ ನೆರವು.

ಇತ್ಯಾದಿ ಸೌಲಭ್ಯಗಳನ್ನು ನೀಡಲಾಗುತ್ತಿದೆ.

೪. ಪಶು ಸಂಗೋಪನೆ

ಹೈನುಗಾರಿಕೆಯಲ್ಲಿ ಆಸಕ್ತಿ ಹೊಂದಿರುವ ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಪಶು ಸಂಗೋಪನೆ ಇಲಾಖೆಯ ವತಿಯಿಂದ ಹಾಲು ಕರೆಯುವ ಹಸು ಅಥವಾ ಎಮ್ಮೆ ಘಟಕ, ಕುರಿ ಘಟಕ ಮತ್ತು ಹಂದಿ ಘಟಕಗಳನ್ನು ಶೇಕಡಾ ೭೫ ಸಹಾಯಧನ ಹಾಗೂ ಶೇಕಡಾ ೨೫/- ರ ಸಾಲದ ನೆರವಿನಿಂದ ವಿತರಿಸಲಾಗುತ್ತಿದೆ.

ಅ. ಹಸು ಘಟಕದ ವೆಚ್ಚ ೧೭,೨೦೦ ರೂ. ಸಹಾಯ ಧನ, ೧೨, ೯೦೦ ರೂ.

ಆ. ಎಮ್ಮೆ ಘಟಕದ ವೆಚ್ಚ ೧೨,೨೦೦ ರೂ. ಸಹಾಯ ಧನ ೯,೧೫೦ ರೂ.

ಇ. ಕುರಿಘಟಕದ ವೆಚ್ಚ ೧೧,೨೦೦ ರೂ. ಸಹಾಯ ಧನ ೮,೪೦೦ ರೂ.

ಈ. ಹಂದಿ ಘಟಕದ ವೆಚ್ಚ ೭,೩೪೫ ರೂ. ಸಹಾಯ ಧನ ೫,೫೦೮ ರೂ.

ಮೇಲ್ಕಂಡ ಘಟಕ ವೆಚ್ಚವು ನಬಾರ್ಡ್‌ದರದ ಪ್ರಕಾರ ನಿಗದಿಯಾಗಿದ್ದು ನಬಾರ್ಡ್ ಘಟಕ ವೆಚ್ಚದಲ್ಲಿ ಬದಲಾವಣೆ ಮಾಡಿದಲ್ಲಿ ಪರಿಶಿಷ್ಟ ಪಂಗಡದವರಿಗೆ ದೊರೆಯುವ ಸಹಾಯಧನದಲ್ಲಿ ಮಾರ್ಪಾಡು ಉಂಟಾಗುತ್ತವೆ.

೫. ಅರಣ್ಯ ಇಲಾಖೆ

ಅರಣ್ಯ ಇಲಾಖೆಯ ವತಿಯಿಂದ ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಭದ್ರತಾ ನೆಡು ತೋಪು ನಿರ್ವಹಣೆಗಾಗಿ ಆರ್ಥಿಕ ಸಹಾಯ ನೀಡಲಾಗುತ್ತಿದೆ. ಅರ್ಧ ಹೆಕ್ಟೇರ್ ನಡುತೋಪಿನ ನಿರ್ವಹಣೆಗ ೨,೫೦೦ ರೂಪಾಯಿಗಳ ನೆರವು ನೀಡಲಾಗುತ್ತಿದೆ. ಪರಿಶಿಷ್ಟ ಪಂಗಡದ ಕರಕುಶಲ ಕಸುಬುದಾರರಿಗೆ ಬುಟ್ಟಿ ಹೆಣೆಯಲು ಮತ್ತಿತರ ಕರಕುಶಲ ಕೈಗಾರಿಕೆಗೆ ಬೇಕಾಗುವ ಬೆತ್ತ, ಬಿದಿರುಗಳನ್ನು ಉಚಿತವಾಗಿ ವಿತರಿಸಲಾಗುವುದು. ಪ್ರತಿ ಫಲಾನುಭವಿಗೆ ೨೦೦ ಬಿದಿರುಗಳು ಮತ್ತು ೫೦೦ ಬೆತ್ತಗಳನ್ನು ನೀಡಲಾಗುತ್ತಿವೆ. ಅಲ್ಲದೆ ಮನೆಗಳ ನಿರ್ಮಾಣಕ್ಕೆ ಬೇಕಾಗುವ ತೊಲೆ, ಕಿಟಕಿ, ಬಾಗಿಲುಗಳನ್ನು ರೂ. ೧೦,೦೦೦ ಗಳಿಗ ಒಳಪಟ್ಟು ಉಚಿತವಾಗಿ ಒದಗಿಸಲಾಗುತ್ತಿದೆ.

ಜೇನು ಕೃಷಿ ಕೈಗೊಳ್ಳುವ ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ರೂ. ೩೫೦ ರ ದರದಲ್ಲಿ ತಲಾ ೫ ರಂತೆ ಜೇನುಪೆಟ್ಟಿಗೆಗಳನ್ನು ಉಚಿತವಾಗಿ ನೀಡಿ ಜೇನು ಕೃಷಿಗೆ ಪ್ರೋತ್ಸಾಹ ನೀಡಲಾಗುತ್ತಿದೆ.

೬. ಗ್ರಾಮೀಣ ಮತ್ತು ಸಣ್ಣ ಕೈಗಾರಿಕೆ

ಅ. ಗ್ರಾಮೀಣ ಮತ್ತು ಸಣ್ಣ ಕೈಗಾರಿಕೆಗಳಲ್ಲಿ ಆಸಕ್ತಿ ಹೊಂದಿರುವ ಪರಿಶಿಷ್ಟ ಪಂಗಡದ ಯುವಕರಿಗೆ ಸ್ವಯಂ ಉದ್ಯೋಗ ಕೈಗೊಳ್ಳಲು ಸಹಕಾರಿಯಾಗುವಂತೆ, ಜೇನು ಕೃಷಿ, ಬಡಗಿತನ, ಬಿದಿರು ಮತ್ತು ಚಿತ್ರದ ವೃತ್ತಿಗಳಲ್ಲಿ ತರಬೇತಿ ನೀಡಲಾಗುತ್ತಿದೆ.

ಆ. ತರಬೇತಿಯ ಅವಧಿಯಲ್ಲಿ ಶಿಷ್ಯವೇತನ ನೀಡಲಾಗುತ್ತಿದೆ. ತರಬೇತಿಯ ನಂತರ ರೂ. ೨,೫೦೦ ರೂ. ಬೆಲೆ ಬಾಳುವ ಉಪಕರಣಗಳನ್ನು ಉಚಿತವಾಗಿ ಒದಗಿಸಿ ಸ್ವತಂತ್ರವಾಗಿ ವೃತ್ತಿ ಕೈಕೊಳ್ಳಲು ನೆರವು ನೀಡಲಾಗುತ್ತಿದೆ.

ಇ. ವಿಶ್ವ ಕಾರ್ಯಕ್ರಮದಡಿಯಲ್ಲಿ ವಿವಿಧ ವೃತ್ತಿಗಳನ್ನು ನಿರ್ವಹಿಸುವ ಗ್ರಾಮೀಣ ಪರಿಶಿಷ್ಟ ಪಂಗಡದ ನಿರುದ್ಯೋಗಿ ಯುವಕರಿಗೆ ಧನ ಸಹಾಯ ನೀಡಲಾಗುತ್ತಿದೆ.

ಈ. ಪರಿಶಿಷ್ಟ ಪಂಗಡದವರಿಗೆ ಗುಡಿಕೈಗಾರಿಕೆಗಳನ್ನು ಸ್ಥಾಪಿಸಲು 'ಲಿವಿಂಗ್' ಕಮ್ ವರ್ಕಶೆಡ್‌ಗಳನ್ನು ನಿರ್ಮಿಸಲು ವಿಶ್ವಯೋಜನೆಯಡಿ ಪ್ರತಿ ಘಟಕಕ್ಕೆ ೨೫,೦೦೦ ರೂ. ಗಳ ಸಹಾಯಧನವನ್ನು ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ವತಿಯಿಂದ ನೀಡಲಾಗುತ್ತಿದೆ.

೭. ರೇಷ್ಮೆ ಕೃಷಿ

ರೇಷ್ಮೆ ಕೃಷಿಯು ಒಂದು ಲಾಭದಾಯಕ ಆರ್ಥಿಕ ಚಟುವಟಿಕೆಯಾಗಿದ್ದು ಈ ವೃತ್ತಿಯನ್ನು ಅವಲಂಬಿಸಿರುವ ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ರೇಷ್ಮೆ ಕೃಷಿ ಕೈಗೊಳ್ಳಲು ವಿವಿಧ ಸವಲತ್ತುಗಳನ್ನು ನೀಡಲಾಗುತ್ತಿದೆ.

ಅ. ಹಿಪ್ಪು ನೇರಳೆ ಬೇಸಾಯಕ್ಕೆ ೨,೦೦೦ ರೂ. ವರೆಗೆ ಸಹಾಯ ಧನ.

ಆ. ನೀರಾವರಿ ಬಾವಿಗಳ ನಿರ್ಮಾಣಕ್ಕೆ ಆರ್ಥಿಕ ನೆರವು.

ಇ. ರೇರಿಂಗ್ ಹೌಸ್‌ಗಳ ನಿರ್ಮಾಣಕ್ಕೆ ಶೇಕಡಾ ೬೦ ರ ಸಹಾಯಧನ ಗರಿಷ್ಠ ೨೫,೦೦೦ ರೂ. ಗಳಿಗ ಒಳಪಟ್ಟು ನೀಡಲಾಗುವುದು.

ಈ. ಪ್ಯಾಕೇಜ್ ಆಫ್ ಬೆನಿಫಿಟ್ಸ್ ಯೋಜನೆ.

೮. ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದ ವತಿಯಿಂದ ಪರಿಶಿಷ್ಟ ಪಂಗಡದವರಿಗೆ ಕೆಳಕಂಡ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಅ. ಪರಿಶಿಷ್ಟ ವರ್ಗದ ಕಾಲೋನಿಗಳಿಗೆ ವಿದ್ಯುದ್ಧೀಕರಣ ಗೊಳಿಸಲು ಕಾಲೋನಿಯೊಂದಕ್ಕೆ ಸುಮಾರು ೪೦,೦೦೦ ರೂಪಾಯಿಗಳ ವೆಚ್ಚದಲ್ಲಿ ಕಾರ್ಯಕ್ರಮ ಜಾರಿಗೊಳಿಸುವುದು.

ಆ. ಪರಿಶಿಷ್ಟ ಪಂಗಡದವರ ನೀರಾವರಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವುದು.

ಇ. ಭಾಗ್ಯಜ್ಯೋತಿ ಯೋಜನೆಯಡಿ ಪರಿಶಿಷ್ಟ ಪಂಗಡದವರ ಮನೆಗಳಿಗೆ ವಿದ್ಯುತ್ ಸೌಲಭ್ಯ ಒದಗಿಸುವುದು.

೯. ಉದ್ಯೋಗ ಮತ್ತು ತರಬೇತಿ ಇಲಾಖೆ

ಉದ್ಯೋಗ ಮತ್ತು ತರಬೇತಿ ಇಲಾಖೆಯ ವತಿಯಿಂದ ಪರಿಶಿಷ್ಟ ಪಂಗಡದವರಿಗೆ ಬಡಗಿತನ, ಟೈಲರಿಂಗ್, ವೃತ್ತಿಗಳಲ್ಲಿ ತರಬೇತಿ ನೀಡಲಾಗುತ್ತಿದೆ. ತರಬೇತಿಯ ಅವಧಿಯಲ್ಲಿ ಪ್ರತಿ ಅಭ್ಯರ್ಥಿಗೆ ಮಾಹೆಯಾನ ೫೦೦ ರೂ. ರಂತೆ ಸಬ್‌ಸಿಸ್ಟನ್ ಅಲೋಯನ್ಸ್‌ನ್ನು ಪ್ರತಿ ಅಭ್ಯರ್ಥಿಯ ಪೋಷಕರಿಗೆ ನೀಡಲಾಗುತ್ತಿದೆ. ತರಬೇತಿಯ ನಂತರ ಟೂಲ್‌ಕಿಟ್, ಹೊಲಿಗೆ ಯಂತ್ರ ಮತ್ತು ಕಚ್ಚಾ ಸಾಮಗ್ರಿಗಳನ್ನು ಉಚಿತವಾಗಿ ನೀಡಲಾಗುತ್ತಿದೆ.

೧೦. ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿ ಗಿರಿಜನ ಉಪಯೋಜನೆಯಡಿ ಕೆಳಕಂಡ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಅ. ಗ್ರಾಮೀಣ ಪ್ರದೇಶಗಳಲ್ಲಿಯ ಪರಿಶಿಷ್ಟ ಪಂಗಡದ ಬಾಲಕಿಯರಿಗೆ ಹಾಜರಾತಿ ವಿದ್ಯಾರ್ಥಿವೇತನ.

ಆ. ಕಷ್ಟದಲ್ಲಿರುವ ಪರಿಶಿಷ್ಟ ಪಂಗಡ ಮಹಿಳೆಯರಿಗೆ ಸಹಾಯಧನ ನೀಡುವುದು.

ಇ. ಬಾಲ ಕಾರ್ಮಿಕರ ಪುನರ್ ವಸತಿಗೆ ಸಹಾಯಧನ.

ಈ. ವಿಧವೆಯವರಿಗೆ ಆರ್ಥಿಕ ಸೌಲಭ್ಯ ನೀಡಲು 'ನವಜೀವನ' ಕಾರ್ಯಕ್ರಮದಡಿ ಪರಿಶಿಷ್ಟ ವರ್ಗದ ಬಾಲಕಿಯರಿಗೆ ಸಹಾಯ ಒದಗಿಸುವುದು.

೧೧. ವಸತಿ ಇಲಾಖೆ

ವಸತಿ ಇಲಾಖೆಯು ಹಮ್ಮಿಕೊಂಡಿರುವ ಕೆಳಕಂಡ ಕಾರ್ಯಕ್ರಮಗಳಲ್ಲಿ ಪರಿಶಿಷ್ಟ ವರ್ಗದವರಿಗೆ ಶೇಕಡಾವಾರು ಗುರಿಯನ್ನು ನಿಗದಿಪಡಿಸಿಕೊಂಡು ಅನುಷ್ಠಾನಗೊಳಿಸುತ್ತಿದೆ.

ಅ. ನಗರ ಪ್ರದೇಶಗಳಲ್ಲಿ ಪರಿಶಿಷ್ಟ ವರ್ಗದವರಿಗೆ ಆಶ್ರಯ ನಿವೇಶನ ವಿತರಣೆ.

ಆ. ಗ್ರಾಮಾಂತರ ಪ್ರದೇಶಗಳಲ್ಲಿ ಪರಿಶಿಷ್ಟ ವರ್ಗದವರಿಗೆ ಆಶ್ರಯ ನಿವೇಶನ ವಿತರಣೆ.

ಇ. ಗ್ರಾಮಾಂತರ ಪ್ರದೇಶಗಳಲ್ಲಿ ಆಶ್ರಯ ವಸತಿ ಯೋಜನೆಯಡಿ ನಿರ್ಮಾಣವಾಗುವ ಮನೆಗಳಿಗೆ ಸಹಾಯಧನ ನೀಡುವುದು.

ಈ. ನೆರಳಿನ ಭಾಗ್ಯ ಯೋಜನೆಯಡಿ ತಲಾ ರೂ. ೫,೦೦೦ ವೆಚ್ಚದಲ್ಲಿ ಹುಲ್ಲಿನ ಛಾವಣಿಗಳನ್ನು ಬದಲಾಯಿಸಿ ಹೆಂಚಿನ ಛಾವಣಿಯನ್ನು ಒದಗಿಸುವುದು.

ಡಾ।। ಅಂಬೇಡ್ಕರ್ ವಸತಿ ಯೋಜನೆ

ಡಾ. ಅಂಬೇಡ್ಕರ್ ವಸತಿ ಯೋಜನೆಯಡಿ ಪರಿಶಿಷ್ಟ ಪಂಗಡದವರಿಗೆ ಘಟಕ ವೆಚ್ಚ ರೂ. ೨೦,೦೦೦ ದಂತೆ ಮನೆಗಳನ್ನು ನಿರ್ಮಾಣ ಮಾಡಲಾಗುತ್ತಿದ್ದು. ಇದರಲ್ಲಿ ರೂ. ೧೯,೦೦೦ ರೂ. ಗಳನ್ನು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯು ಸಹಾಯಧನವಾಗಿ ನೀಡುತ್ತಿದೆ. ಉಳಿದ ರೂ. ೧,೦೦೦ ರೂ. ಗಳನ್ನು ಗ್ರಾಮೀಣ ಅಭಿವೃದ್ಧಿ ಇಲಾಖೆಯು ನೀಡುತ್ತದೆ. ಈ ಯೋಜನೆಯು ೧೯೯೭-೯೮ನೇ ಸಾಲಿನಿಂದ ಜಾರಿಗೆ ಬಂದಿರುತ್ತದೆ. ೧೯೯೭-೯೮ನೇ ಸಾಲಿನಲ್ಲಿ ೪೦೦೦ ಮನೆಗಳು, ೧೯೯೮-೯೯ನೇ ಸಾಲಿನಲ್ಲಿ ೫೦೦೦ ಮನೆಗಳನ್ನು ನಿರ್ಮಾಣ ಮಾಡಲು ಇಲಾಖೆಯ ವತಿಯಿಂದ ರೂ. ೨೬.೬೦ ಕೋಟಿಗಳನ್ನು ನೀಡಲಾಗಿದೆ.

ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆಯಡಿಯಲ್ಲಿ ಪರಿಶಿಷ್ಟ ಪಂಗಡದವರ ಅಭಿವೃದ್ಧಿಗಾಗಿ ಆರ್ಥಿಕ ಸಹಾಯ, ಉದ್ಯೋಗ ಮತ್ತು ಜೀವನಮಟ್ಟವನ್ನು ಸುಧಾರಿಸಲು ಕೆಳಕಂಡ ಕಾರ್ಯಕ್ರಮಗಳ ಅಡಿಯಲ್ಲಿ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ.

ಅ. ಸ್ವರ್ಣ ಜಯಂತಿ ಶಹರಿ ರೋಜ್‌ಗಾರ್ ಯೋಜನೆ.

ಆ. ಇಂದಿರಾ ಆವಾಸ್ ಯೋಜನೆ.

ಇ. ಉದ್ಯೋಗ ಭರವಸೆ ಯೋಜನೆ.

ರಸ್ತೆ ಮತ್ತು ಸೇತುವೆ

ಲೋಕೋಪಯೋಗಿ ಇಲಾಖೆವತಿಯಿಂದ ಪರಿಶಿಷ್ಟ ವರ್ಗದ ಕಾಲೋನಿಗಳಿಗೆ ಸಂಪರ್ಕ ರಸ್ತೆ ಮತ್ತು ಸೇತುವೆಗಳನ್ನು ನಿರ್ಮಾಣ ಮಾಡುವ ಕಾರ್ಯಕ್ರಮವನ್ನು ಗಿರಿಜನ ಉಪಯೋಜನೆಯಡಿ ಜಿಲ್ಲಾ ವಲಯದಲ್ಲಿ ಕೈಗೊಳ್ಳಲಾಗುತ್ತಿದೆ.

ಗ್ರಾಮೀಣ ನೀರು ಪೂರೈಕೆ

ಗ್ರಾಮಾಂತರ ಪ್ರದೇಶಗಳಲ್ಲಿ ಪರಿಶಿಷ್ಟ ಪಂಗಡದ ಕಾಲೋಜಿನಗಳಿಗೆ ಕುಡಿಯುವ ನೀರು ವ್ಯವಸ್ಥೆಯನ್ನು ಗ್ರಾಮೀಣ ನೀರು ಪೂರೈಕೆ ಯೋಜನೆಯಡಿಯಲ್ಲಿ ಕೊಳವೆ ಬಾವಿಗಳು ಹಾಗೂ ಕಿರುವ ನೀರು ಸರಬರಾಜು ಯೋಜನೆಗಳ ಮೂಲಕ ಒದಗಿಸಲಾಗುತ್ತದೆ.

ಭೂ ಒಡೆತನ ಯೋಜನೆ

ಪರಿಶಿಷ್ಟ ವರ್ಗಗಳಿಗೆ ಸೇರಿದ ಬಹುಪಾಲು ಜನರು ಕೃಷಿ ಕಾರ್ಮಿಕರಾಗಿದ್ದು, ಇವರಿಗೆ ತನ್ನದೇ ಆದ ಜಮೀನನ್ನು ಹೊಂದಿ ವ್ಯವಸಾಯ ಮಾಡುವ ಉತ್ಕಟೇಚ್ಛೆ ಇರುವುದರಿಂದ, ನಿಗಮದ ವತಿಯಿಂದ ಪರಿಶಿಷ್ಟ ಜಾತಿ/ ಪರಿಶಿಷ್ಟ ವರ್ಗಕ್ಕೆ ಸೇರಿದಲ್ಲದ ಜನರಿಂದ ಭೂಮಿ ಖರೀದಿ ಪರಿಶಿಷ್ಟ ವರ್ಗದ ಅರ್ಹ ಪ.ಲಾನುಭವಿಗಳಿಗೆ ಹಂಚು ಯೋಜನೆಯನ್ನು ರೂಪಿಸಲಾಗಿದೆ. ಇದರ ಘಟಕ ವೆಚ್ಚ ೫೦,೦೦೦ ರೂ. ಗಳೆಂದು ನಿಗದಿಪಡಿಸಲಾಗಿದೆ. ಪ್ರತಿ ಕುಟುಂಬಕ್ಕೆ ಕನಿಷ್ಠ ೨ ಎಕರೆ ಖುಷ್ಕಿ ಅಥವಾ ಒಂದು ಎಕರೆ ತರಿ ಜಮೀನು ಒದಗಿಸಲಾಗುತ್ತಿದೆ. ಘಟಕ ವೆಚ್ಚದಲ್ಲಿ ಶೇ. ೫೦ ರಷ್ಟು ಸಹಾಯಧನ ಮತ್ತು ಉಳಿದ ಶೇ. ೫೦ ರಷ್ಟು ಮೊತ್ತವನ್ನು ವಿಶೇಷ ಸಾಲವೆಂದು ನೀಡುತ್ತಿದೆ. ಸಾಲವನ್ನು ೧೦ ವಾರ್ಷಿಕ ಸಮಕಂತುಗಳಲ್ಲಿ ಶೇಕಡಾ ೬ರ ವಾರ್ಷಿಕ ಬಡ್ಡಿಯೊಂದಿಗೆ ಮರು ಪಾವತಿ ಮಾಡಬೇಕಾಗಿರುತ್ತದೆ. ಈ ರೀತಿ ನೀಡುವ ಸಾಲವನ್ನು ನಿಗಮ, ರಾಷ್ಟ್ರೀಯ ಪ.ಜಾ.ಪ. ವರ್ಗಗಳ ಹಣಕಾಸು ಅಭಿವೃದ್ಧಿ ನಿಗಮದಿಂದ ಶೇ. ೪.೫ ಬಡ್ಡಿಯ ದರದಲ್ಲಿ ಸಾಲವಾಗಿ ಪಡೆದು, ಫಲಾನುಭವಿಗಳಿಗೆ ಶೇ. ೬ರ ಬಡ್ಡಿದರದಲ್ಲಿ ನೀಡುತ್ತಿದೆ.

ಈ ಯೋಜನೆಯನ್ನು ಉತ್ತರ ಕರ್ನಾಟಕದಲ್ಲಿ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲಾಗುತ್ತಿದೆ. ಉತ್ತರ ಕರ್ನಾಟಕದಲ್ಲಿ ಭೂಮಿ ಹೆಚ್ಚಿನ ಪ್ರಮಾಣದಲ್ಲಿ ದೊರೆಯುತ್ತಿದ್ದು, ಭೂ ಮಾಲೀಕರು ಮಾರಲು ಮುಂದೆ ಬರುತ್ತಿದ್ದಾರೆ. ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಆಯ್ಕೆ ಸಮಿತಿ ಇದ್ದು, ಉಪ ವಿಭಾಗಾಧಿಕಾರಿಗಳು ಪ್ರಧಾನ ಕೃಷಿ ಅಧಿಕಾರಗಳು ಮತ್ತು ನಿಗಮದ ಜಿಲ್ಲಾ ವ್ಯವಸ್ಥಾಪಕರು ಇತರೆ ಸದಸ್ಯರಾಗಿರುತ್ತಾರೆ. ಈ ಸಮಿತಿ ಪ್ರತಿ ಪ್ರಸ್ತಾವನೆಯನ್ನು ಪರಿಶೀಲಿಸಿ ಸ್ಥಳೀಯ ಮಾರಾಟ ದರ, ಭೂಲಕ್ಷಣ

ಮತ್ತು ಉಪ ನೋಂದಣಾ ಅಧಿಕಾರಿಗಳ ದರ ಇವುಗಳನ್ನು ಗಣನೆಗೆ ತೆಗೆದುಕೊಂಡು ಪ್ರತಿ ಎಕರೆಗೆ ದರ ನಿಗದಿ ಮಾಡಿ ಶಿಫಾರಸ್ತು ಮಾಡುತ್ತದೆ. ನಿಗಮ ಇದುವರೆವಿಗೆ ೧೬,೯೧೮.೫೬ ಎಕರೆ ಖುಷ್ಕಿ ಮತ್ತು ೩೧೦೩.೧೮ ಎಕರೆ ತರಿ ಜಮೀನನ್ನು ಖರೀದಿಸಿ ಪರಿಶಿಷ್ಟ ಜಾತಿ ಮತ್ತು ವರ್ಗಗಳಿಗೆ ಸೇರಿದ ಹೆಣ್ಣು ಮಕ್ಕಳ ಹೆಸರಿಗೆ ನೋಂದಣಿ ಮಾಡಿಸಿದೆ. ಹೆಣ್ಣು ಮಕ್ಕಳ ಹೆಸರಿಗೆ ನೋಂದಣಿ ಮಾಡಿಸುವುದರಿಂದ ಸೌಲಭ್ಯ ದುರುಪಯೋಗವಾಗುವುದನ್ನು ತಡೆಯಬಹುದಾಗಿದೆ.

ಸ್ವಯಂ ಉದ್ಯೋಗ ಯೋಜನೆ

ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಬಹಳಷ್ಟು ನಿರುದ್ಯೋಗಿ ಯುವಕರು ಉದ್ಯೋಗಕ್ಕಾಗಿ ಕಷ್ಟ ಪಡುತ್ತಿದ್ದಾರೆ. ಆದ್ದರಿಂದ ನಿಗಮ ಈ ರೀತಿಯ ನಿರುದ್ಯೋಗಿಗಳಿಗೆ ಸ್ವಂತ ಉದ್ಯೋಗ ಕಲ್ಪಿಸಲು ಯೋಜಿಸಿದೆ. ಈ ಯೋಜನೆಯನ್ನು ಬ್ಯಾಂಕುಗಳ ಮೂಲಕ ಅನುಷ್ಠಾನಗೊಳಿಸಲಾಗುತ್ತಿದೆ.

ಈ ಯೋಜನೆಯಲ್ಲಿ ಆಟೋರಿಕ್ಷಾ, ಹೈನುಗಾರಿಕೆ, ಸೈಕಲ್ ಷಾಪ್, ಪೆಟ್ಟಿಗೆ ಅಂಗಡಿ ಮುಂತಾದ ಉದ್ದೇಶಗಳಿಗೆ ಸಾಲ ನೀಡಲಾಗುವುದು. ಇದಕ್ಕಾಗಿ ಪ್ರತಿ ಘಟಕಕ್ಕೆ ೫,೦೦೦.೦೦ ರೂ. ಗಳ ಸಹಾಯಧನ ನೀಡಿ ಉಳಿದಂತೆ ೨೫,೦೦೦.೦೦ ರೂ. ಗಳವರೆಗೆ ಬ್ಯಾಂಕ್ ಸಾಲ ಒದಗಿಸಲು ಕ್ರಮ ಕೈಗೊಳ್ಳಲಾಗಿದೆ.

ಮೇಲಿನ ಯೋಜನೆಯಡಿ ಘಟಕ ವೆಚ್ಚ ೨೫,೦೦೦.೦೦ ರೂ. ಗಳಿಂದ ೩೫,೦೦೦.೦೦ ರೂ. ಗಳವರೆಗಿನ ಸಾಲಕ್ಕೆ ಶೇ ೨೫ ಭಾಗ ಅಂಚಿನ ಹಣ, ೫,೦೦೦.೦೦ ರೂ. ಗಳ ಸಹಾಯಧನ ಉಳಿದ ಮೊತ್ತ ಬ್ಯಾಂಕಿನಿಂದ ಸಾಲವಾಗಿರುತ್ತದೆ.

ಗಂಗಾ ಕಲ್ಯಾಣ ಯೋಜನೆ

ಸರ್ಕಾರ ದಿನಾಂಕ ೩-೧-೧೯೯೬ ರಿಂದ ಸಾಮೂಹಿಕ ನೀರಾವರಿ ಯೋಜನೆಯನ್ನು ಅನುಷ್ಠಾನಗೊಳಿಸಲು ನಿಗಮಕ್ಕೆ ವಹಿಸಿದೆ. ಈ ಯೋಜನೆಯಡಿ ಪರಿಶಿಷ್ಟ ವರ್ಗಕ್ಕೆ ಸೇರಿದ ಜನರ ೮ ರಿಂದ ೧೫ ಎಕರೆ ಇರುವ ಗುಂಪು ಜಮೀನಿಗೆ ನೀರಾವರಿ ಸೌಲಭ್ಯ ಕಲ್ಪಿಸಲು ಕಾರ್ಯಕ್ರಮ ರೂಪಿಸಿದೆ. ೮ ಎಕರೆ ವಿಸ್ತೀರ್ಣದ ಘಟಕಕ್ಕೆ ರೂ. ೨.೫೩ ಲಕ್ಷ ಹಾಗೂ ೧೫ ಘಟಕಕ್ಕೆ ೩.೫೮ ಲಕ್ಷ ರೂ. ವೆಚ್ಚವೆಂದು ನಿಗದಿಮಾಡಲಾಗಿದೆ.

ಈ ಯೋಜನೆಯಡಿ ಗುರುತಿಸಲಾಗುವ ಪ್ರತಿ ಘಟಕದಲ್ಲಿ ಒಳಗೊಳ್ಳುವ ಜಮೀನು ಒಂದೇ ಕಡೆ ಇರಬೇಕು. ಘಟಕಕ್ಕೆ ಅವಶ್ಯವಿರುವ ಕನಿಷ್ಟ ಎಕರೆ ಪ್ರದೇಶವಿಲ್ಲದಿದ್ದ ಪಕ್ಷದಲ್ಲಿ ಹೊಂದಿಕೊಂಡಂತೆ ಇರುವ ಇತರೆ ಹಿಂದುಳಿದ ವರ್ಗದ ಜಮೀನಿದ್ದಲ್ಲಿ ಘಟಕ ಪೂರ್ತಿಯಾಗುವ ದೃಷ್ಟಿಯಿಂದ, ನೀರಾವರಿ ಸೌಲಭ್ಯಕ್ಕೆ

ಅಳವಡಿಸಿಕೊಳ್ಳಲಾಗುವುದು ಮತ್ತು ಇಂತಹ ಇತರೆ ಜಮೀನಿಗೆ ಸಂಬಂಧಿಸಿದ ಖರ್ಚು ವೆಚ್ಚವನ್ನು ಹಿಂದುಳಿದ ವರ್ಗಗಳ ಇಲಾಖೆಯಿಂದ ಭರಿಸಿಕೊಳ್ಳಲಾಗುವುದು.

ಪಂಪ್‌ಸೆಟ್

ಪರಿಶಿಷ್ಟ ವಗಶಕ್ಕೆ ಸೇರಿದ ಸಣ್ಣ ಮತ್ತು ಅತಿಸಣ್ಣ ರೈತರು ತಮ್ಮ ಸ್ವಂತ ಖರ್ಚಿನಲ್ಲಿ ತೋಡು ಅಥವಾ ಕೊಳವೆಬಾವಿ ಕೊರೆಸಿಕೊಂಡಿದ್ದು,ಅಂತಹ ಬಾವಿಗೆ ಪಂಪುಸೆಟ್ ಅಳವಡಿಸಿಕೊಳ್ಳಲು ಆರ್ಥಿಕವಾಗಿ ದುರ್ಬಲವಾಗಿರುವ ಸಂದರ್ಭಗಳಲ್ಲಿ ಅಂತಹ ಫಲಾನುಭವಿಗಳಿಗೆ ನಿಗಮ ಉಚಿತ ಪಂಪುಸೆಟ್‌ಗಳನ್ನು ನೀಡಲು ಕಾರ್ಯಕ್ರಮ ರೂಪಿಸಿದೆ.

ಈ ಕಾರ್ಯಕ್ರಮದಡಿ ಸೌಲಭ್ಯ ಪಡೆಯಲು ಅರ್ಜಿದಾರರು, ಜಾತಿಪತ್ರ, ಆರ್.ಟಿ.ಸಿ., ವಂಶವೃಕ್ಷ, ಚಕ್ಕುಬಂದಿ, ನೀರಿನ ಇಳುವರಿ ಪ್ರಮಾಣ ಪತ್ರ, ಫೋಟೋ ಲಗತ್ತಿಸಿ ಅರ್ಜಿ ಸಲ್ಲಿಸಬೇಕು. ನೀರಿನ ಇಳುವರಿ ಪ್ರಮಾಣ ಪತ್ರದಲ್ಲಿ ಬಾವಿಯ ನೀರಿನ ಪ್ರಮಾಣ ಪ್ರತಿ ಗಂಟೆಗೆ ಕನಿಷ್ಠ ೧,೦೦೦ ಗ್ಯಾಲನ್‌ಗಳಿದ್ದು, ನೀರಾವರಿಗೆ ಯೋಗ್ಯವಿದ್ದಲ್ಲಿ ನಿಗಮ ಪಂಪುಸೆಟ್ ನೀಡುತ್ತದೆ. ಈ ಯೋಜನೆಯಡಿ ನೀಡುವ ಪಂಪುಸೆಟ್ಟಿನ ಬೆಲೆ ಲಭ್ಯವಿರುವ ಗರಿಷ್ಠ ಸಹಾಯಧನ ೩೦,೦೦೦-೦೦ ರೂ. ಗಳನ್ನು ಮೀರಿದಲ್ಲಿ ಫಲಾನುಭವಿಯೇ ಭರಿಸಬೇಕಾಗುತ್ತದೆ. ಈ ರೀತಿ ನೀಡಲಾಗುವ ಪಂಪುಸೆಟ್‌ಗಳನ್ನು ಫಲಾನುಭವಿ ಯಾವುದೇ ಸಂದರ್ಭದಲ್ಲಿ ಪರಭಾರೆ ಮಾಡಕೂಡದು.

ಸ್ವಯಂ ಸೇವಾ ಸಂಸ್ಥೆಗಳ ಪಾತ್ರ

ಸರ್ಕಾರವು ಪರಿಶಿಷ್ಟ ವರ್ಗದವರ ಅಭಿವೃದ್ಧಿಗೆ ಹಾಕಿಕೊಂಡಿರುವ ಹಲವಾರು ಅಭಿವೃದ್ಧಿ ಕಾರ್ಯಕ್ರಮಗಳ ಜತೆಗೆ ಪರಿಶಿಷ್ಟ ವರ್ಗದವರ ಅಭಿವೃದ್ಧಿಗಾಗಿ ಸೇವೆ ಸಲ್ಲಿಸುತ್ತಿರುವ ಸ್ವಯಂ ಸೇವಾ ಸಂಸ್ಥೆಗಳೂ ಕೂಡಾ ಹಲವಾರು ಕಾರ್ಯಕ್ರಮಗಳನ್ನು ಅಥವಾ ಯೋಜನೆಗಳನ್ನು ಅನುಷ್ಠಾನಗೊಳಿಸಲು ಕೇಂದ್ರ ಸರ್ಕಾರದ ಯೋಜನೆಯಡಿಯಲ್ಲಿ ಸಹಾಯಧನ ನೀಡಲು ಅವಕಾಶವಿರುತ್ತದೆ. ರಾಜ್ಯದಲ್ಲಿ ಪ್ರಮುಖವಾಗಿ ಚಾಮರಾಜನಗರ ಜಿಲ್ಲೆ, ಯಳಂದೂರ ತಾಲೂಕಿನ, ವಿವೇಕಾನಂದ ಗಿರಿಜನ ಕಲ್ಯಾಣ ಕೇಂದ್ರ, ಮೈಸೂರು ಜಿಲ್ಲೆ ಹೆಗ್ಗಡೆದೇವನ ಕೋಟೆ ತಾಲೂಕಿನ ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ ಸಂಸ್ಥೆ ಉಡುಪಿ ಜಿಲ್ಲೆಯ ಸ್ಫೂರ್ತಿ ಗ್ರಾಮೀಣ ಅಭಿವೃದ್ಧಿ ಮತ್ತು ತರಬೇತಿ ಸಂಸ್ಥೆ ಇತ್ಯಾದಿ ಸಂಸ್ಥೆಗಳು ಪರಿಶಿಷ್ಟ ವರ್ಗದವರ ಅಭಿವೃದ್ಧಿ ಕಾರ್ಯಕ್ರಮಗಳಿಗಾಗಿ ಈಗಾಗಲೇ ಸರ್ಕಾರದಿಂದ ಸಹಾಯಧನ ಪಡೆಯುತ್ತಿವೆ.

ಭಾರತ ಸರ್ಕಾರದ ಇತ್ತೀಚಿನ ಮಾರ್ಗಸೂಚಿಯ ಪ್ರಕಾರ, ಸುಮಾರು ೨೦ ಯೋಜನೆ ಅಥವಾ ಕಾರ್ಯಕ್ರಮಗಳಿಗೆ ಕೇಂದ್ರ ಸರ್ಕಾರದ ಸಹಾಯಧನ ಮಂಜೂರು ಮಾಡಲು ಅವಕಾಶ ಕಲ್ಪಿಸಲಾಗಿದೆ.

References

1. Bidar District, District Gazetter, Govt. of Karnataka, Bangalore, 1968, pp. 27.

2. Ibid, pp. 31.

3. Department of Economics and Statistics, Estimates of District Income of Karnataka, Government of Karnataka, Bangalore, 1994, pp. 70.

4. Bidar District, District Gazetter, op. cit., pp. 34.

5. Ibid, pp. 37.

6. ಕಲ್ಲೂರ ಎಮ್.ಎಸ್. ಹೈದರಾಬಾದ ಕರ್ನಾಟಕದಲ್ಲಿ ನೀರಾವರಿ ಹಿಂದೆ, ಇಂದು ಮತ್ತು ನಾಳೆ “ಕಾಯಕ ಸಿರಿ”, ಮಹಿಳಾ ಮಹಾವಿದ್ಯಾಲಯ, ಕೊಪ್ಪಳ, ೧೯೯೬ದ ಪು. ೧೨೨-೧೨೭.

೭. ಮೈತ್ರಿ ಕೆ.ಎಮ್. ’ಬೀದರ ಜಿಲ್ಲೆಯ ಗೊಂಡ ಆದಿವಾಸಿ ಸಮುದಾಯ: ಒಂದು ಸಮಾಜಶಾಸ್ತ್ರೀಯ ಅಧ್ಯಯನ’ ೧೯೯೪ ಪು. ೬೮.

8. Memorca, C.B., Agricultural problems of India, Kitab Mahal, 1995, pp. 239.

೯. ಮೈತ್ರಿ ಕೆ.ಎಮ್. ’ಬೀದರ ಜಿಲ್ಲೆಯ ಗೊಂಡ ಆದಿವಾಸಿ ಸಮುದಾಯ: ಒಂದು ಸಮಾಜಶಾಸ್ತ್ರೀಯ ಅಧ್ಯಯನ’ ೧೯೯೪ ಪು. ೭೬.

೧೦.ಮೈತ್ರಿ ಕೆ.ಎಮ್. ’ಬೀದರ ಜಿಲ್ಲೆಯ ಗೊಂಡ ಆದಿವಾಸಿ ಸಮುದಾಯ: ಒಂದು ಸಮಾಜಶಾಸ್ತ್ರೀಯ ಅಧ್ಯಯನ’ ೧೯೯೪ ಪು. ೭೨.

11. Sundar Murthy, V.S., “Impact of Liberalisation with reference to Dairy development activity of Hyderabad Karnatak Region” in National Seminar proceedings on Liberilisation and Backward Regions. The present and the future, Dept. of Economics, Gulbarga University, Gulbarga, 1997, pp. 63-65.

12. Devendrababu and Tippaih, “Zero Industry District”, SEDMI, 1987.

13. ರಾಜೇಂದ್ರ ಯರನಾಳೆ, “ವಿಶ್ವ ವಿಖ್ಯಾತ ಬಿದ್ರಿ ಕಲೆ”, ಪ್ರಸಾರಂಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, ೧೯೯೬, pp. 18.

14. Government of Karnataka, Dept. of Industries and Commerce, Bangalore, 1992.

15. ಶೈಕ್ಷಣಿಕ ನೆರವಿನ ಯೋಜನೆಗಳು: ಕರ್ನಾಟಕ ಸರಕಾರ, ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶನಾಲಯ, ಬೆಂಗಳೂರು, ೨೦೦೦ ಪು. ೧.

ಅಧ್ಯಾಯ - ೨

ಬೇಡ ಬುಡಕಟ್ಟಿನ ಪೌರಾಣಿಕ, ಐತಿಹಾಸಿಕ ಮತ್ತು ಸಾಮಾಜಿಕ ಹಿನ್ನೆಲೆ

ಪ್ರಸ್ತಾವನೆ

ಭಾರತವು ಹಲವಾರು ಬುಡಕಟ್ಟಿನ ಜನಾಂಗಗಳಿಗೆ ಒಂದು ನೈಸರ್ಗಿಕ ತವರುಮನೆ. ಒಂದೊಂದು ಜನಾಂಗದವರಿಗೂ ಅವರದೇ ಆದ ಐತಿಹಾಸಿಕ, ಚಾರಿತ್ರಿಕ ಸಾಮಾಜಿಕ ಹಿನ್ನಲೆಗಳನ್ನು ಕಾಣುತ್ತೇವೆ. ಅಂತಹ ಜಾತಿ ಜನಾಂಗಗಳಲ್ಲಿ. 'ನಾಯಕ ಜನಾಂಗದ ಚರಿತ್ರೆ' ಸುವರ್ಣಾಕ್ಷರಗಳಲ್ಲಿ ಬರೆದಿಡುವಂತಹದು[೧]. ಮಿನಿ (mini) ಭಾರತದಂತಿರುವ ಕರ್ನಾಟಕದಲ್ಲಿಯೂ ಹಲವಾರು ಬುಡಕಟ್ಟಿನ ಜನರು ನೂರಾರು ವರ್ಷಗಳಿಂದ ವಾಸಿಸುತ್ತಿದ್ದಾರೆ. ಭೂ-ವಿಜ್ಞಾನಿಗಳು ಜಗತ್ತಿನಲ್ಲಿಯೇ ಅತ್ಯಂತ ಪುರಾತನ ಎನಿಸಿದ ಭೂಮಿ ಎಂದರೆ ಕರ್ನಾಟಕ[೨]. ಇಂತಹ ಭೂಪ್ರದೇಶದಲ್ಲಿ ಬುಡಕಟ್ಟಿನ ಜನರು ವಾಸಿಸುತ್ತಿರುವುದು ಸಹಜವಾಗಿದೆ.

ಮಾನವ ಜನಾಂಗದ ಚರಿತ್ರೆ ತುಂಬಾ ದೀರ್ಘವಾದುದು, ಮಾನವ, ಮೂಲತಃ ಆದಿವಾಸಿ, ಬರುಬರುತ್ತಾ ಮಾನವನು ನಾಗರೀಕತೆಯನ್ನು ಬೆಳೆಸಿಕೊಂಡು ಇಂದಿನ ಸ್ಥಿತಿಗೆ ಬಂದಿದ್ದಾನೆ[೩]. ಆದರೂ, ಇಂದಿಗೂ ಕೆಲವರು ಆದಿವಾಸಿಗಳಾಗಿಯೇ ಇದ್ದಾರೆ. ಇವರುಗಳಿಗೆ ಆದಿವಾಸಿ ಜನಾಂಗಗಳೆಂದು ಕರೆಯಲಾಗುತ್ತದೆ. ಒಟ್ಟಿನಲ್ಲಿ ಭಾರತದ ದೇಶದಾದ್ಯಂತ ಇರುವ ಎಲ್ಲ ತರಹದ ಆದಿವಾಸಿಗಳ ಜನಸಂಖ್ಯೆ ಸುಮಾರು ೫ ಕೋಟಿಯಾಗಿರುತ್ತದೆ. ಈ ಆದಿವಾಸಿ ಪಂಗಡಗಳನ್ನು ಪರಿಶಿಷ್ಟ ವರ್ಗಗಳೆಂದು ಕರೆಯಲಾಗುತ್ತದೆ. ಈ ಪಂಗಡಗಳಲ್ಲಿ ವಿಭಿನ್ನ ವ್ಯತ್ಯಾಸಗಳಿದ್ದು ಅವು ಒಂದೇ ಮಟ್ಟದ ಸಂಸ್ಕೃತಿಯನ್ನು ಹೊಂದಿರುವುದಿಲ್ಲ. ಬುಡಕಟ್ಟು ಜನರ ಭಾಷೆಗಳ ಬಗ್ಗೆ ಹೇಳುವುದಾದರೆ, ಇವರುಗಳು ಪ್ರತ್ಯೇಕ ಭಾಷೆ ಹೊಂದಿರಬೇಕೆಂದು ಕೆಲವರು ಅಭಿಪ್ರಾಯ ಪಡುತ್ತಾರೆ. ಆದರೆ, ಎಲ್ಲ ಬುಡಕಟ್ಟುಗಳಿಗೆ ತನ್ನದೇಯಾದ ಭಾಷೆ ಇರುವುದಿಲ್ಲ. ಪ್ರತ್ಯೇಕವಾದ ಭಾಷೆಯಿರುವ ಬುಡಕಟ್ಟುಗಳಿರುವಂತೆಯೇ, ಪ್ರತ್ಯೇಕವಾದ ಭಾಷೆಯಿಲ್ಲದಿರುವ ಬುಡಕಟ್ಟುಗಳು ಸಹ ಭಾರತದಲ್ಲಿವೆ. ಕೆಲವು ಬುಡಕಟ್ಟುಗಳಿಗೆ ಸ್ವತಂತ್ರ ಭಾಷೆ ಇರುವುದಿಲ್ಲ. ತಾವು ವಾಸಿಸುವ ಪ್ರದೇಶದಲ್ಲಿ ಬಳಕೆಯಲ್ಲಿರುವ ಭಾಷೆಯ ಉಪಭಾಷೆ ಈ ಬುಡಕಟ್ಟುಗಳ ಭಾಷೆಯಾಗಿರುತ್ತದೆ. ಕೆಲ ಸಂದರ್ಭಗಳಲ್ಲಿ ಇವರುಗಳು ತಮ್ಮ ಸುತ್ತಮುತ್ತಲ ಇತರ ಜನಗಳ ಭಾಷೆಗಳನ್ನೇ ಬಳಸುವುದು ಉಂಟು. ಉದಾಹರಣೆಗೆ ಬೈಗಾ ಹಾಗೂ ಕೋಲ್ ಬುಡಕಟ್ಟಿನ ಜನ ಹಿಂದಿಯನ್ನೇ ತಮ್ಮ ಭಾಷೆಯನ್ನಾಗಿ ಬಳಸುತ್ತಾರೆ[೪].

ಕರ್ನಾಟಕದಲ್ಲಿ ಬುಡಕಟ್ಟುಗಳು

ಕರ್ನಾಟಕ ರಾಜ್ಯದಲ್ಲಿ ಹಲವಾರು ಬುಡಕಟ್ಟಿನ ಸಮುದಾಯದವರು ಜೀವನ ಮಾಡುತ್ತಿದ್ದಾರೆ. 'ಗೊಂಡರು', 'ಕೊರಗರು', 'ಸೋಲಿಗರು', 'ಗೌಡಾಲು', 'ಕುಡಿಯರು', 'ಮಲೆಕುಡಿಯರು', 'ಎರವರು',

'ಫಣಿಯರು', 'ಜೇನುಕುರುಬರು', 'ಕಾಡುಕುರುಬರು', 'ಬೇಡರು', 'ಮೇದರು', 'ಇರುಳರು', 'ಹಕ್ಕಿಪಕ್ಕಿಯರು', 'ರಾಜಗೊಂಡರು', 'ಟೋಕ್ರಿಕೋಳಿ', 'ಚಂಚು, ಚೆಂಚರು' ಮತ್ತು 'ಅಡವಿಚೆಂಚರು' ಎಂಬ ಬುಡಕಟ್ಟಿನ ಜನರು ವಾಸವಾಗಿರುತ್ತಾರೆ[೭].

ಕರ್ನಾಟಕದ ಹಲವಾರು ಬುಡಕಟ್ಟಿನ ಜನರಲ್ಲಿ 'ಬೇಡರು' ಪ್ರಮುಖರಾಗಿರುತ್ತಾರೆ. ಇವರು ರಾಜ್ಯದ ಎಲ್ಲ ಜಿಲ್ಲೆಗಳಲ್ಲಿಯೂ ವಾಸವಾಗಿದ್ದರೂ, ಗುಲಬರ್ಗಾ, ಧಾರವಾಡ, ಬಳ್ಳಾರಿ, ವಿಜಾಪೂರ, ಬೆಳಗಾಂವ, ಕೋಲಾರ, ಜಿಲ್ಲೆಗಳಲ್ಲಿ ಹೆಚ್ಚಾಗಿ ವಾಸವಾಗಿದ್ದಾರೆಂದು ಸಂಶೋಧಕರಾದ ಸೂರ್ಯನಾಥ ಯು. ಕಾಮತರು ತಮ್ಮ ಮಹಾಪ್ರಬಂಧದಲ್ಲಿ ಪ್ರತಿಪಾದಿಸಿದ್ದಾರೆ[೮]. ರಾಯಚೂರು ಜಿಲ್ಲೆಯಲ್ಲಿಯೂ ಬೇಡರು ವಾಸವಾಗಿದ್ದಾರೆ[೯]. ಬೀದರಿನ ಬೇಡರ ಈ ಅಧ್ಯಯನ, ಈ ಜಿಲ್ಲೆಯಲ್ಲಿಯೂ ಅವರು ಇದ್ದಾರೆಂದು ತೋರಿಸುತ್ತವೆ. ರಾಜ್ಯದಲ್ಲಿ ಅಲ್ಲದೆ, ಇತರ ರಾಜ್ಯಗಳಾದ ಆಂಧ್ರಪ್ರದೇಶ, ಮಹಾರಾಷ್ಟ್ರ, ರಾಜಸ್ತಾನ, ಗುಜರಾತ, ತಮಿಳುನಾಡು ಇತ್ಯಾದಿ ರಾಜ್ಯಗಳಲ್ಲಿ ಬೇಡರು ವಾಸವಾಗಿದ್ದಾರೆಂಬುದನ್ನು ತಿಳಿದುಬಂದಿದೆ[೧೦]. ಕರ್ನಾಟಕ ರಾಜ್ಯದಲ್ಲಿ ಇವರ ಜನಸಂಖ್ಯೆ ಸುಮಾರು ೬೦ ಲಕ್ಷ ಇರುತ್ತದೆ.

ಬೀದರ ಜಿಲ್ಲೆಯ ಬುಡಕಟ್ಟುಗಳು

ಬೀದರ ಜಿಲ್ಲೆಯಲ್ಲಿ ೧೯ ಬುಡಕಟ್ಟಿನ ಸಮುದಾಯದವರು ವಾಸ ಮಾಡುತ್ತಿದ್ದಾರೆ. ಗೊಂಡರು, ಕೋಯ (ಭಿನೆಕೋಯ, ರಾಜಕೋಯ ಸೇರಿ) ಕೋಳಿಘೋರ, ಕಾಡುಕುರುಬ, ಬಾರ್ಧಾ, ಮೇದ, ಕೊರಗ, ಪಾರ್ಧಿ (ಅಡವಿ ಚಿಂಚೇರ, ಫಾನ್ಸೆ ಪಾರಿಧಿ ಸೇರಿ) ಯರವ, ಗೌಡಲು, ಜೇನುಕುರುಬ, ಇರುಳಿಗ, ಚೆಂಚು, ಚೆಂಚವಾರ, ನಾಯಕ್ಡ-ನಾಯಕ, ಪಳ್ಳಿಯಾನ್, ಕಥೋಡಿ, ಬಾವಚ-ಬಾಮ್ಚ, ಚೋಧರಾ ಮತ್ತು ಕುರುಮನ್ಸ್ ಬುಡಕಟ್ಟುಗಳು ವಾಸಿಸುತ್ತವೆ[೧೧].

ಬುಡಕಟ್ಟಿನ ಜನರ ದೈಹಿಕ ಲಕ್ಷಣಗಳು:

ಹಲವಾರು ಪಂಡಿತರು ಇವರನ್ನು ದ್ರಾವಿಡರಿಗಿಂತಲೂ ಹಿಂದಿನವರು ಎಂದು ವರ್ಗೀಕರಣ ಮಾಡಿದ್ದಾರೆ[೧೨]. ಕರ್ನಾಟಕ ರಾಜ್ಯದಲ್ಲಿ ಬುಡಕಟ್ಟಿನ ಸಮುದಾಯವಿಲ್ಲದ, ಇನ್ನಿತರ ಜನರಾದ ಲಿಂಗಾಯತರು, ಬ್ರಾಹ್ಮಣರು, ಮುಸ್ಲಿಮರು, ಶೂದ್ರರು, ಕ್ರಿಶ್ಚಿಯನ್ನರು, ಜೈನರು ಮುಂತಾದವರು ವಾಸವಾಗಿರುತ್ತಾರೆ. ಬುಡಕಟ್ಟಿನ ಮತ್ತು ಇವರ ಮಧ್ಯ ಯಾವ ಸಾಮಾಜಿಕ ಕ್ಲೇಷಗಳು ಇರುವುದಿಲ್ಲ. ಹಾಗೂ ಎಲ್ಲ ಜನ ಶಾಂತಿಯಿಂದ ತಮ್ಮ ತಮ್ಮ ಕೆಲಸವನ್ನು ಮಾಡಿಕೊಂಡು ಬರುತ್ತಿದ್ದಾರೆ. ಕರ್ನಾಟಕ ರಾಜ್ಯದಂತೆ, ಬೀದರ ಜಿಲ್ಲೆಯಲ್ಲಿಯೂ ಸಹ ಈ ಸೌಹಾರ್ದಮಯ ವಾತಾವರಣ ಮೊದಲಿನಿಂದಲೂ ಮುಂದುರೆಯುತ್ತಾ ಬರುತ್ತಿದೆ.

"ಬೇಡ ಜನಾಂಗದ ಮೂಲ ವಾಲ್ಮೀಕಿ ಎಂದು ಹಲವಾರು ಸಂಶೋಧನಕಾರರ ಅನಿಸಿಕೆ. ಕಿರಾತರ ಯಜಮಾನನಾದ ಈತ ಕಾಮಕೇತು, ಲಕ್ಷ, ಮೀನ, ಮಲ್ಲರೆಂಬ ಇನ್ನಿತರ ಏಳು ಜನ ಮಕ್ಕಳ ನೇತೃತ್ವದಲ್ಲಿ ಏಳು ಪಡೆಗಳನ್ನು ರಚಿಸಿಕೊಂಡು ದರೋಡೆ ನಡೆಸುತ್ತಿದ್ದನು. ಮುಂದೆ ಕಾಡಿನಲ್ಲಿ ಕಾಲಾನಂತರ ಚದುರಿಹೋದ ಈ ಪಡೆಗಳು ಬೇಡರ ಜನಾಂಗದ ವಂಶ ವಿಕಾಸಕ್ಕೆ ನಾಂದಿ ಹಾಡಿದವು" ಎಂಬ ಒಂದು ಐತಿಹ್ಯವಿದೆ. ಅವರೀಗ ಅಲ್ಲಿಯ ಹೆಸರುಗಳಿಂದಲೇ ಇಂದು ದೇಶದಾದ್ಯಂತ ಮತ್ತು ಪರದೇಶಗಳಲ್ಲಿಯೂ ಗುರುತಿಸಲ್ಪಡುತ್ತಾರೆ ಎಂಬುದನ್ನು ಬಹು ಮಹತ್ವಪೂರ್ಣ ಅಂಗ. ಇದರ ಒಂದು ಪಟ್ಟಿಯನ್ನು ಈ ಕೆಳಗ ನೀಡಲಾಗಿದೆ[10].

ಪ್ರದೇಶ	ಬೇಡರ ಪರ್ಯಾಯ ಪದಗಳು
ತಮಿಳುನಾಡು	ನಾಯಕ್ಡಾ, ನಾಯಕ, ನಾಯ್ಕರ್, ವಾಲ್ಮೀಕಿ, ವೇಡನ್, ವೆತ್ತಲೆ, ನಾಯಕರ್, ವೇತುಕನ್, ಗೆಂಟು.
ಸಿಲೋನ್	ವೇಟನ್, ವೇಡುವಾಸ, ವೆದ್ದಾನ್, ವೇಟೆಕಾರನ್
ಉತ್ತರಪ್ರದೇಶ	ಜಾಟ್
ಪಂಜಾಬ	ಭಿಲ್, ಬಾಲಮೀಕಿ, ವಾಲ್ಮೀಕಿ ನಾಯಕಮಾಂಗ್
ಬಂಗಾಲ, ಬಿಹಾರ	ಸೇನ್
ಕೇರಳ್, ಮಲೇಶಿಯಾ	ನಾಯರ್
ಕಾಶ್ಮೀರ	ಖೋಗ್ರಾ
ಮಹಾರಾಷ್ಟ್ರ	ರಾಮೋಶಿ, ರಾಣವಾಸಿ
ಆಂಧ್ರಪ್ರದೇಶ	ಬೋವಿ, ಬೋಯಿ, ನಾಯನಿ, ದೊರೆಬಿಡ್ಡಲು, ಬೋಯಾಸು

(ಹೀಗೆ ವ್ಯಕ್ತಪಡಿಸಿರುವ ಹಲವು ಪ್ರದೇಶದಲ್ಲಿಯ ಬೇಡರ ಪದಗಳು ಅನೇಕ ದೃಷ್ಟಿಯಿಂದ ಗಮನಾರ್ಹವಾಗಿವೆ. ಮೂಲತಃ ಇವುಗಳನ್ನು ವಿವೇಚಿಸಿದ್ದು 'ಬೇಟೆಯಾಡುವ' ವೃತ್ತಿಯ ವಿಚಾರದಿಂದ ಎಂಬುದನ್ನು ನಾವು ಗಮನಿಸಬೇಕು. ಇಂದು ಇಲ್ಲಿಯ ಕೆಲವು ಪದಗಳು ಬೇರೊಂದು ಮತ ಜಾತಿಗಳನ್ನು ಸೂಚಿಸುತ್ತವೆ ಎಂಬುದನ್ನು ಸಹ ನಾವು ಮರೆಯುವಂತಿಲ್ಲವಾದರೂ ಮೂಲದಲ್ಲಿ ಇವೆಲ್ಲ ಒಂದೇ ಕರುಳು ಬಳ್ಳಿಯ ಕುಡಿಗಳಾಗಿದ್ದವೆಂಬುದನ್ನು ತಳ್ಳಿಹಾಕುವಂತಿಲ್ಲ.)

ಕರ್ನಾಟಕ ಮತ್ತು ಕೇರಳ ಪ್ರದೇಶಗಳಲ್ಲಿ ಬೇಡ, ಬ್ಯಾಡ, ಬ್ಯಾಡರು, ಬೇಡರು, ತಳವಾರ, ನಾಯಕ, ಕಿರಾತಕ, ಬಾರಿಕ, ಕನ್ನಯ್ಯ, ರಾಮೋಶಿ, ಬೈಡರ್ ಎಂಬ ವಿಭಿನ್ನ ಹೆಸರು ಬೇಡರಿಗೆ ಇರುತ್ತವೆ. ರಾಜ್ಯಸ್ತಾನದಲ್ಲಿ ಇವರು ಮಾಡುತ್ತಿರುವ ಕಸುಬನ್ನೇ ಆಧಾರವಾಗಿಟ್ಟುಕೊಂಡು ವಾಲಮೀಕಿ, ವಾಲ್ಮೀಕಿ, ಭಿಲ್ಲ ಮುಂತಾದ ಹೆಸರುಗಳಿಂದ ಪ್ರಸಿದ್ಧಿಯನ್ನು ಹೊಂದಿರುತ್ತಾರೆ[11]. ಬೇರೆ ಬೇರೆ ಪ್ರದೇಶಗಳಲ್ಲಿ ಬೇರೆ ಬೇರೆ ಹೆಸರಿನಿಂದ ಕರೆಸಿಕೊಳ್ಳುತ್ತಾ ಬಂದಿರುವ ಈ ಜನಾಂಗವು ಮೂಲದಲ್ಲಿ "ಬೇಡರು", "ನಾಯಕರು" ಎಂದೇ

ಪ್ರಖ್ಯಾತಿ ಪಡೆದವರಾಗಿದ್ದು, ಕಾಲ ಉರುಳಿದಂತೆ ಈ ಜನಾಂಗದವರನ್ನು ಮೇಲ್ವರ್ಗದ ಜನರು ತುಳಿತಕ್ಕೆ ಒಳಪಡಿಸುತ್ತಾ ಬಂದಿದ್ದರೂ ವಂಶಪಾರಂಪರ್ಯದಿಂದ ಬೆಳೆದು ಬಂದಿರುವ ಕೆಚ್ಚೆದೆಯ ಇವರ ಮನೋದಾರ್ಢ್ಯದಿಂದ ಧೈರ್ಯ ಶೌರ್ಯಾದಿ ಗುಣಗಳಿಂದ ಜ್ಞಾನ ಸಂಪತ್ತಿನಿಂದ ಆಡಳಿತ ದಕ್ಷತೆಯಿಂದ ಪ್ರತಿ ಕಾಲ ಕಾಲಕ್ಕೂ ಕೀರ್ತಿಗಳಿಸುತ್ತಾ ಇತಿಹಾಸದಲ್ಲಿ ಮಿಂಚಿದ್ದಾರೆ ಹಾಗೂ ಮಿಂಚುತ್ತಿದ್ದಾರೆ[೧]. ಕಲಿಯುಗದ ಆರಂಭಕ್ಕೆ ದಕ್ಷಿಣ ದೇಶದಲ್ಲಿ ಬೇಡರ ವಿನಹ ಬೇರೆ ಯಾವ ಜನಾಂಗವು ಇರಲಿಲ್ಲ. ಆನಂತರ ಉದಯಿಸಿದ ಮನೆತನಗಳಿಗೆಲ್ಲ ಬೇಡರೇ ಮೂಲರೆಂದು ಪ್ರತಿಪಾದಿಸುವ ಅನೇಕ ಉಹೆಯ ವಾದಗಳು ಈ ಸಮುದಾಯದವರ ಇರುವಿಕೆಯ ಮಹತ್ವವನ್ನು ಸ್ಪಷ್ಟವಾಗಿ ಹೇಳುತ್ತಿವೆ.

ಬೇಡರ ಮೂಲ

'ಬೇಡ' ಎನ್ನುವ ಶಬ್ದ "ವ್ಯಾಧ" ಎನ್ನುವ ಸಂಸ್ಕೃತ ಶಬ್ದದಿಂದ ಬಂದಿರುವುದೆಂದು ಮತ್ತು ಇದರರ್ಥ 'ಬೇಟೆ'ಯಾಡುವುದೆಂದು ಯಜುರ್ವೇದದಲ್ಲಿ ಹೇಳಲಾಗಿದೆ. (ಯಜುರ್ವೇದ: ೧೬-೧೭). ಕೆ. ಅಭಿಶೇಖರ ಬೇಡರು 'ವಾಲ್ಮೀಕಿ' ಅಥವಾ 'ನಾಯಕ' ರೆಂದು ಸಹ ಹೇಳಿರುತ್ತಾರೆ[೨]. ಸಾಮಾನ್ಯವಾಗಿ ಎಲ್ಲ ಬುಡಕಟ್ಟುಗಳಲ್ಲಿಯೂ ಪ್ರಪಂಚದ ಹುಟ್ಟನ್ನು ಕುರಿತು ಸ್ವಾರಸ್ಯಕರ ಕಥೆಗಳಿದ್ದು, ಆ ಪ್ರಪಂಚದ ಹುಟ್ಟಿನ ಆರಂಭಕ್ಕೆ ತಮ್ಮ ಬುಡಕಟ್ಟಿನ ಮೂಲ ಪುರುಷನೇ ಇದ್ದ ಎಂದು ಹೇಳಿಕೊಳ್ಳುತ್ತವೆ. ಅಂತೆಯೇ ವ್ಯಾಸಬೇಡ ಬುಡಕಟ್ಟಿನ ಮೂಲಪುರುಷನ ಹುಟ್ಟು ಬ್ರಹ್ಮ, ವಿಷ್ಣು, ಮಹೇಶ್ವರರಿಂದಲೇ ಆಯಿತು. ಈ ತ್ರಿಮೂರ್ತಿಗಳು ಪ್ರಪಂಚದ ಮೇಲೆ ಬರುತ್ತಿದ್ದರು. ಆಗ ಭೂಮಿಯ ಮೇಲೆ ಬರಿಯ ಅರಣ್ಯ ಇದ್ದಿತು. ನರಮನುಷ್ಯರ ಸುಳಿವು ಇರಲಿಲ್ಲ. ತ್ರಿಮೂರ್ತಿಗಳು ಪ್ರಪಂಚದ ಮೇಲೆ ಬರುತ್ತ ಮೊಳಕಾಲ್ಮೂರು ಬಳಿಯ ಬೊಮ್ಮಗೊಂಡನ ಕೆರೆಯ ಬಳಿ ಕಮರದ ಕಾನಿನಲ್ಲಿ ಬಂದು ಸರೋವರದ ಮುಂದೆ ಇಳಿದರು, ಆಗ ಬೆಳಗಾಗುತ್ತಲ್ಲಿತ್ತು. ಮೂರು ಜನವೂ ಮುಖಮಾರ್ಜನ ಮಾಡಿ ಬ್ರಹ್ಮ, ವಿಷ್ಣು, ಇಬ್ಬರೂ ಹಣೆಗೆ ನಾಮ ಇಟ್ಟುಕೊಂಡರು. ಹಾಗೆ ನಾಮವಿಡುವಾಗ ಅದರ ಶುದ್ಧಿಗೆ ಗೋವಿನ ಮೂತ್ರ ಬೇಕಾಯಿತು. ಆಗ ಬ್ರಹ್ಮ ಒಂದು ಒಂಟಿಕೊಂಬಿನ ಬಲ್ಲಾವನ್ನೂ ಪಂಪಾದಿ, ಎಂಬ ಬಸವನನ್ನೂ ಸೃಷ್ಟಿಸಿದ. ಗೋವಿನ ಮೂತ್ರದ ಒಂದು ಹನಿಯನ್ನು ತೆಗೆದು ಬ್ರಹ್ಮ ವಿಷ್ಣು ನಾಮವನ್ನು, ಮಹೇಶ್ವರನು ವಿಭೂತಿಯನ್ನು ಧರಿಸಿಕೊಂಡರು. ಮಹೇಶ್ವರನು ವಿಭೂತಿ ಧರಿಸುವಾಗ ವಿಭೂತಿಯ ಒಂದು ಧೂಳು ಬ್ರಹ್ಮನು ಸೃಷ್ಟಿಸಿದ ಒಂಟಿಕೊಂಬಿನ ಬಲ್ಲಾವಿನ ಕಾಲಗೊರಸಿನಲ್ಲಿ ಬಿದ್ದು ಅಲ್ಲಿ ಸಿಕ್ಕಿಹಾಕಿಕೊಂಡಿತು. ತ್ರಿಮೂರ್ತಿಗಳು ಆ ಸರೋವರವನ್ನು ಬಿಟ್ಟು ಹೋಗುವಾಗ ಅವರು ಸೃಷ್ಟಿಸಿದ ಒಂಟಿಕೊಂಬಿನ ಬಲ್ಲಾವನ್ನು ಪಂಪಾದಿ, ಬಸವನನ್ನು ನೋಡಿಕೊಳ್ಳುವರ್ಯಾರು ಎಂಬ ಯೋಚನೆ ಬರಲು, ಬ್ರಹ್ಮನು ಆ ಎರಡು ಜೀವರಾಶಿಗಳನ್ನು ಸಲುಹುವವನು ಅವುಗಳಿಂದಲೇ ಹುಟ್ಟುವನು. ಚಿಂತೆ

ಮಾಡಬೇಕಿಲ್ಲ ಎಂದ. ದಿನದಿನವೂ ಒಂಟಿಕೊಂಬಿನ ಬಲ್ಲಾವು ಪಂಪಾದ್ರಿ ಬಸವ ಕಾಡಿನಲ್ಲಿ ಮೇಯ್ದು ಸರೋವರದಲ್ಲಿ ನೀರು ಕುಡಿದುಕೊಂಡಿದ್ದವು. ಹೀಗಿರಲು ಬಲ್ಲಾವಿನ ಕಾಲಿನ ಗೊರಸಿನಲ್ಲಿ ಸಿಕ್ಕು ಹಾಕಿಕೊಂಡಿದ್ದ ವಿಭೂತಿಯ ಧೂಳು ಒಂಭತ್ತು ತಿಂಗಳು, ಒಂಭತ್ತು ದಿನ, ಒಂಭತ್ತು ಘಳಿಗೆಯಲ್ಲಿ ಬೆಳೆದು ಗರ್ಭ ಒಡೆದು ಗಂಡು ಶಿಶುವಿನ ಜನನವಾಯಿತು. ಅದು ಕೋಳದ ತಡಿಯಲ್ಲಿ ಅಳುತ್ತಿರಲು ಆ ದಿನವೇ ವಾಯೂಮಾರ್ಗದಲ್ಲಿ ಹೋಗುತ್ತಿದ್ದ ಶಿವಪಾರ್ವತಿಯರಿಗೆ ಕೇಳಿಸಿತು. ಪಾರ್ವತಿಯು ಬಂದು ಶಿಶುವಿನ ಹೊಕ್ಕುಳ್ಹುರಿ ಕುಯ್ದು ಹಣೆಗೆ ಸುಟಿಗೆ ಹಾಕಿ ಮಗುವನ್ನು ಕೋಳದ ತಡಿಯಲ್ಲೇ ಮಲಗಿಸಿ ಅದಕ್ಕೆ ಚೆಟ್ಲುಗೊಟ್ಲು ಮಲ್ಲನಾಯಕ ಎಂದು ಹೆಸರಿಟ್ಟಳು. ಆ ಮಗವು ಗಿಡಮರಗಳ ಮಧ್ಯದ ಕಾಡಿನಲ್ಲಿ ಹುಟ್ಟಿದುದರಿಂದ ಅದಕ್ಕೆ ಚೆಟ್ಲುಗೆಟ್ಲು ಮಲ್ಲನಾಯಕ ಎಂದು ಹೆಸರಾಯಿತು. ಮಲ್ಲನಾಯಕನು ಲಗ್ನವಾಗಿ 'ಚೆಂಚುಲಕ್ಷ್ಮೀ' ಎಂಬ ಒಂದು ಹೆಣ್ಣುಮಗುವನ್ನು ಪಡೆದನು. ದೇವತೆಯಾದ ನರಸಿಂಹನು ಈಕೆಯನ್ನು ವಿವಾಹವಾಗಿ ಸ್ವಲ್ಪಕಾಲ ಆಕೆಯೊಂದಿಗೆ ಸಂಸಾರ (ಮಾಡಿ) ಹೂಡಿ ದೇವಲೋಕಕ್ಕೆ ಹೋದನು. ಇವರಿಬ್ಬರಿಗೆ ಹುಟ್ಟಿದ ಮೂವರು ಮಕ್ಕಳೆ ಪದ್ದನಾಯಕ್, ಕೋರಿಮರಮಂಚನಾಯಕ ಹಾಗೂ ಕೋರಿಪಾಪನಾಯಕ ಇವರುಗಳೇ ಬೇಡ ನಾಯಕರ ಮೂಲ ಪುರುಷರು ಎಂದು ಭಾವಿಸಲಾಗಿದೆ[೧೪].

ಮೇಲಿನ ವಿವರಣೆ ಪುರಾಣದಾದರೆ, ಹಲವಾರು ಸಂಶೋಧನಕಾರರು ಬೇಡರ ಮೂಲದ ಬಗ್ಗೆ ವಿಭಿನ್ನ ಅಭಿಪ್ರಾಯಗಳನ್ನು ಇತ್ತಿದ್ದಾರೆ. ಭ. ಶಂಕರನಾರಾಯಣನವರ ಪ್ರಕಾರ "ಬೇಡರು ಊರು ಹೊರಗೆ ತಾತ್ಕಾಲಿಕವಾಗಿ ತಾವೇ ಕಟ್ಟಿಕೊಂಡ ಗುಡಿಸಲುಗಳಲ್ಲಿ ವಾಸವಾಗಿರುತ್ತಾರೆ. ಕಳ್ಳತನದ ವಸ್ತುಗಳನ್ನು ತೆಗೆದುಕೊಳ್ಳುತ್ತಾರೆ ಮತ್ತು ಈ ವ್ಯಾಪಾರ ವರ್ಷವಿಡೀ ಅವರು ಮಾಡುತ್ತಾರೆ' ಎಂದಿದ್ದಾರೆ[೧೫].

ಎಂ.ಬಿ.ಕೃಷ್ಣರಾವ ಮತ್ತು ಗ.ಸ.ಹಾಲಪ್ಪ ಇವರ ಪ್ರಕಾರ "ಬೇಡರು ಅನಾದಿ ಕಾಲದಿಂದಲೂ ತಮ್ಮ ಧೈರ್ಯ ಶೌರ್ಯಕ್ಕೆ ಮತ್ತು ಸ್ವಾಮಿ ನಿಷ್ಠೆಗೆ ಹೆಸರಾದವರು[೧೬]. 'ಎಡ್ಗರ್ ಥರಸ್ಟನ್'ರ ಪ್ರಕಾರ "ಬೇಡರು ಅಥವಾ ಬೇಟೆಗಾರರು ಟಿಪ್ಪುವಿನ ಕಾಲದಲ್ಲಿ ನೆಲೆಸಿದ್ದರು, ಅವನ ಸೈನ್ಯದಲ್ಲಿ ಸೈನಿಕರಾಗಿದ್ದರು ಮತ್ತು ಮೈಸೂರು ಕಾಡಿನಲ್ಲಿ ಹುಲಿಗಳನ್ನು ಯಶಸ್ವಿಯಾಗಿ ಬೇಟೆಯಾಡುತ್ತಿದ್ದರು" ಎಂಬ ಅಭಿಪ್ರಾಯ ಪಟ್ಟಿದ್ದಾರೆ[೧೭]. ಮುಂದುವರೆದು ಸೂರ್ಯನಾಥ ಯು. ಕಾಮತ್ ಅವರು "ಬೇಡ ಜನಾಂಗದವರ ಮೂಲ ಪುರುಷ ವಾಲ್ಮೀಕಿ ಮತ್ತು ಹಲವಾರು ಬೇಡರು ವಿಜಯನಗರ ದೊರೆಗಳ, ಹೈದರಾಲಿ ಮತ್ತು ಟಿಪ್ಪು ಸುಲ್ತಾನನ ಸೇನೆಗಳಲ್ಲಿ ಸೈನಿಕರಾಗಿ ಸೇವೆ ಸಲ್ಲಿಸುತ್ತಿದ್ದರೆಂದು ಹೇಳಿದ್ದಾರೆ[೧೮].

ಬೇಡರ ಬೆಳವಣಿಗೆ - ಪುರಾತನ ಕಾಲ

ಬೇಡ ನಾಯಕದಲ್ಲಿ ಕುಲ ಪಂಗಡಗಳು ಬಹಳ ತಮ್ಮ ಗುಂಪನ್ನು ಅವರುಗಳು ಅನೇಕ ಪಂಗಗುಗಳನ್ನಾಗಿ ವಿಂಗಡಿಸಿಕೊಂಡಿದ್ದಾರೆ. ಮ್ಯಾಸಬೇಡರು ತಮ್ಮನ್ನೂ ಒಮ್ಮೆ ಮ್ಯಾಸರೆಂದೂ, ಮತ್ತೊಮ್ಮೆ ಬೇಡರೆಂದೂ, ನಾಯಕ್ ಜನಾಂಗದವರೆಂದೂ ಕರೆದುಕೊಳ್ಳುವುದುಂಟು. ಮೂರು ಪದಗಳೂ ಈ ಜನಾಂಗವನ್ನು ಸೂಚಿಸುತ್ತವೆ. ಮ್ಯಾಸ ಪದಕ್ಕೆ ನಿಷ್ಪತ್ತಿಯಾಗಿ ತಾವು ಮ್ಯಾಸ ಮಹಾಕವಿಯ ಕುಲದವರೆಂದು ಹೇಳಿಕೊಳ್ಳುವುದು ಉಂಟು. ಅದಲ್ಲದೆ, ವಾಲ್ಮೀಕಿ ಬೇಡನಾಗಿದ್ದು ತಾವು ಬೇಡರಾಗಿರುವುದರಿಂದ ಅವನ ಗೋತ್ರದವರೆಂದೂ ಹೇಳಿಕೊಳ್ಳುವುದಿದೆ ಹಾಗೆ ನೋಡಿದರೆ ಪ್ರತಿಯೊಬ್ಬ ಪ್ರತಿಭಾವಂತ ಕವಿಯ ಹಿನ್ನೆಲೆಯಲ್ಲೂ ಒಂದೊಂದು ದಂತಕತೆ, ಪ್ರಚಲಿತವಿದೆ. ಅವೆಲ್ಲವೂ ಮೂಲದಲ್ಲಿ ಕವಿ ಏನೂ ತಿಳಿಯದ ಮುಗ್ಧನಾಗಿದ್ದಾನೆಂದೂ ತದನಂತರ ಯಾವುದೋ ಪ್ರಭಾವಕ್ಕೆ ಒಳಗಾಗಿ ಕಾವ್ಯರಚನಾ ಶಕ್ತಿಯನ್ನು ಪಡೆದನೆಂತಲೂ ಹೇಳುವಂತಿರುತ್ತದೆ. ಆದ್ದರಿಂದ ವಾಲ್ಮೀಕಿಯೂ ಬೇಡರ ಕುಲಕ್ಕೆ ಸೇರಿದ ಕವಿಯೆಂದೂ ಹೇಳಿಕೊಳ್ಳುವುದಕ್ಕೆ ಪರಂಪರೆಯಲ್ಲಿ ಬಂದ ಅದೊಂದು ದಂತಕಥೆ ಮಾತ್ರ ಆಧಾರವೇ ಹೊರತು ಮತ್ಯಾವ ಆಧಾರವೂ ಇರುವುದಿಲ್ಲ. ಒಟ್ಟಿನಲ್ಲಿ ಬೇಡನಾಯಕರು ವಾಲ್ಮೀಕಿ ಋಷಿಯೊಡನೆ ತಮ್ಮನ್ನೂ ಹೆಚ್ಚು ಸಮಿಕರಿಸಿಕೊಂಡಿರುವುದು ವ್ಯಾಪಕವಾಗಿ ಕಂಡುಬರುತ್ತದೆ[೨೦].

ಸಂಸ್ಕೃತದಲ್ಲಿ 'ಮಿವರ' ಎಂಬ ಪದವಿದೆ. ಅದಕ್ಕೆ ಸಂಸ್ಕೃತ ಅರ್ಥಕೋಶದ ಪ್ರಕಾರ hurtful, causing hurt, leader of an army ಅಲ್ಲದೆ ಗೌರವಾರ್ಥ, ಪೂಜ್ಯ, ಮಾನ್ಯ ಎಂಬ ಅರ್ಥಗಳಿವೆ[೨೧]. ಹಾಗೆಯೇ ತಮಿಳು ಅರ್ಥಕೋಶದಲ್ಲಿ 'ಮಿಚರನ್' ಎಂಬ ಪದವಿದ್ದು ಅದಕ್ಕೆ "That which is superior or great person" ಎಂಬ ಅರ್ಥವಿದೆ[೨೨]. ಅಲ್ಲದೆ 'ಮಿಸರ' ಎಂಬ ಪದ ಕುಮಾರರಾಮನ ಸಾಂಗತ್ಯದಲ್ಲಿ ಪ್ರಯೋಗವಾಗಿದೆ[೨೩]. ಆದರೆ ಈ ಮಿಸರ ಎಂಬ ಪದಕ್ಕೆ ಪ್ರತ್ಯೇಕವಾಗಿ ಅರ್ಥವಿವರಣೆ ಏನು ಎಂಬುದು ಕನ್ನಡ ಅರ್ಥಕೋಶಗಳಲ್ಲಿ ಸಿಗುವುದಿಲ್ಲ. ಕುಮಾರರಾಮನ ಬಾಲ್ಯವನ್ನು ವರ್ಣಿಸುವಾಗ ಕವಿ ಆತನನ್ನು 'ಮಿಸರ ಗಂಡ'ನೆಂದು ಎಂಬ ಅರ್ಥವನ್ನು ಕೊಡುವಂತಿದೆ. 'ಮಿಸರು' ಎಂಬ ಪದ ಪರಾಕ್ರಮಿ ಎಂಬ ಅರ್ಥವನ್ನು ಕೊಡುವುದಾದರೆ, ಮಿಸಬೇಡರು ಎಂದರೆ ಪರಾಕ್ರಮಿ ಬೇಡರು ಎಂದು ಕರೆದಂತೆ ಆಗುತ್ತದೆ. ಕಾಡಿನಲ್ಲಿ ನೆಲೆಸಿ ತಮ್ಮ ಮೂಲಧರ್ಮವಾದ ದುಷ್ಟ ಶಿಕ್ಷಣ, ಶಿಷ್ಟ ಪರಿಪಾಲನೆ ಕರ್ತವ್ಯ ನಿಷ್ಠೆಯಿಂದ ದುಷ್ಟಮೃಗಗಳಿಂದ ಸಾಧು ಸಂತರಿಗೆ ಆಗುತ್ತಿದ್ದ ತೊಂದರೆಯನ್ನು ತಪ್ಪಿಸುತ್ತ, ಜಗತ್ ಕಲ್ಯಾಣಕ್ಕಾಗಿ ಶ್ರಮಿಸುತ್ತಿದ್ದ ಋಷ್ಯಾಶ್ರಮಗಳನ್ನು ದುಷ್ಟರಿಂದ ರಕ್ಷಣೆ ಮಾಡಿಕೊಂಡು ಬಂದುದರಿಂದ ಜನನಾಯಕರಾಗಿದ್ದ ಅವರನ್ನು ಆಶ್ರಮವಾಸಿಗಳು "ನಾಯಕ" ನಾಮದಿಂದ ಕರೆದರು[೨೪].

ನಂತರದಲ್ಲಿ

ಬೇಡರ ಇನ್ನೊಂದು ನಾಮ 'ನಾಯಕ'ವಾಗಿದೆ. ಶಾಸನಗಳಲ್ಲಿಯೂ ಸಹ ಬೇಡ ನಾಯಕರೆಂದೇ ಉಲ್ಲೇಖಿಸಲಾಗಿದೆ. ಪುರಾಣಗಳಲ್ಲಿಯೂ ಬೇಡರ ಅಥವಾ ನಾಯಕರ ಕಥೆಗಳು ಅಲ್ಲಲ್ಲಿ ಬರುತ್ತವೆ. ಉನ್ನತ ಸಂಸ್ಕೃತಿಯ ಪ್ರತಿನಿಧಿಗಳಾದ ಋಷಿಗಳು ಅಷ್ಟೇ ಅಲ್ಲದೆ ಬೇಡರು ಸಹ ಅಂದಿನ ನಾಯಕ ಪುರುಷರಿಗೆ ಸಹಾಯ ಮಾಡಿದ್ದು ಕಥೆಗಳಲ್ಲಿ ನಿರೂಪಿತವಾಗಿದೆ. ಇದರಿಂದಾಗಿ, ಬೇಡರಲ್ಲಿ ಕೆಳವರ್ಗದವರಾದರೂ ಉನ್ನತ ಸಂಸ್ಕೃತಿಯನ್ನು ತೋರಿದಂತಹವರಾಗಿ ಶಬರಿ, ಏಕಲವ್ಯ, ಕಣ್ಣಪ್ಪ ಮುಂತಾದವರು ಪುರಾಣದ ಕಥೆಗಳಲ್ಲಿ ಕಾಣಿಸಿಕೊಳ್ಳುತ್ತಾರೆ. ಒಮ್ಮೊಮ್ಮೆ ಕಾಡಿನಲ್ಲಿ ತಪಸ್ಸುಗೆಯುವ ಭಕ್ತರನ್ನು ಪರೀಕ್ಷಿಸಲು ಶಿವನೇ ಬೇಡ ವೇಷವನ್ನು ತೊಟ್ಟು ಬರುವ ಕಥೆ ಮಹಾಭಾರತದಲ್ಲಿ ಬರುತ್ತದೆ. ಈ ಕಥೆಯಲ್ಲಿ ಅರ್ಜುನನು ಇಂದ್ರ ಕೀಲದೊಳಗೆ ತಪ್ಪಸ್ಸಿಗೆ ಕುತಾಗ ಈಶ್ವರ ತಾನು ಕಿರಾತ ವೇಷ ತೊಟ್ಟು, ಪಾರ್ವತಿಗೆ ಪುಳಿಂದಿ ವೇಷ ತೊಡಿಸಿ ತಪ್ಪಸ್ಸಿಗೆ ಕುಳಿತು ಅರ್ಜುನನ ಪರಾಕ್ರಮವನ್ನು ಪರೀಕ್ಷಿಸಲು ಬರುವನು. ಇದರಿಂದ ಗೊತ್ತಾಗುವ ಇನ್ನೊಂದು ಸಂಗತಿಯೇನೆಂದರೆ, ಮಹಾಭಾರತ ಕಾಲದಲ್ಲಿ ಬೇಡರು ಇದ್ದರು, ಅವರು ಪ್ರಾಣಿಗಳ ಬೇಟೆಯಲ್ಲಿ ಆಸಕ್ತಿವುಳ್ಳವರಾಗಿದ್ದರು ಎಂಬುದಾಗಿದೆ[೨೫].

ಬೇಡ ನಾಯಕ ಜನಾಂಗವು ಈ ಹಿಂದೆ ಬೇರೆ ಯಾವುದೇ ವೃತ್ತಿ ಮಾಡಿದುದಕ್ಕಿಂತ ಸೈನ್ಯದಲ್ಲಿ ಸೇರಿಕೊಂಡು ತಾವು ನೆಚ್ಚಿನ ದೊರೆಗಳ ಪರ ಯುದ್ಧ ಮಾಡುವುದು ಮತ್ತು ಪರಾಕ್ರಮ ತೋರುವುದು ಮುಖ್ಯವೆಂದು ನಂಬಿದರು ಎಂದು ಕಾಣಿಸುತ್ತದೆ. ಈಗಲೂ, ಚಿತ್ರದುರ್ಗ ಸುತ್ತಿನ ಬೇಡ ನಾಯಕ ಹಿರಿಯರು, ತಮ್ಮ ಹಿಂದಿನ ತಲೆಮಾರಿನವರು ವಿವಿಧ ಹಿಂದು ಮತ್ತು ಮುಸ್ಲಿಂ ದೊರೆಗಳ ಸೈನ್ಯದಲ್ಲಿ ಹೋರಾಡಿದ ವೀರರೆಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದಾರೆ. ಈ ಸಂದರ್ಭದಲ್ಲಿ ಕಪಟರಾಳ ಕೃಷ್ಣರಾವ ಅವರು ತಮ್ಮ ಕೃತಿ 'ಸುರಪುರ ಸಂಸ್ಥಾನದ ಇತಿಹಾಸ'ದಲ್ಲಿ ಬೇಡ ನಾಯಕರ ಯುದ್ಧ ಆಸಕ್ತಿಯ ಬಗೆಗೆ ಹೇಳುತ್ತಾ ಬಳ್ಳಾರಿ ಜಿಲ್ಲೆಯ ಗೆಜಟೀಯರ್‌ನಲ್ಲಿ ಬರುವ ಕೆಲವು ವಿಷಯವನ್ನು ಈ ರೀತಿ ಪ್ರಕಟಿಸಿದ್ದಾರೆ.

"ಆಂಧ್ರದ ಬೋಯಾ ಜನರಿಗೆ ಕನ್ನಡ ದೇಶದಲ್ಲಿ ಬೇಡರೆಂದು ಕರೆಯಲಾಗುತ್ತದೆ. ಸರ್ ಥಾಮಸ್ ಮನ್ರೋ ಕಾಲದಲ್ಲಿ ನಾಡೆಲ್ಲ ಈ ಪಾಳೆಯಗಾರರ ಹಿಡಿತದಲ್ಲೇ ಇತ್ತು. ಈ ಪಾಳೆಯಗಾರರರೆಲ್ಲರೂ ಬೇಡರೇ ಆಗಿದ್ದರು. ಅಜಂಕ್ಯವಾದ ಹೈದರಾಲಿಯ ಸೈನ್ಯವೂ ಇವರದೇ ಆಗಿತ್ತು..... ಅವರಂಗಜೇಬನ ಕಾಲದಲ್ಲಿ ಕರ್ನಾಟಕ ಪಾಯದಳವೆಂಬುದು ಇವರಿಗೇನು. ಗಲಿಚಲನೇ ಬಂಡಾಯದ ಸಂಗೊಳ್ಳಿರಾಯಣ್ಣ ಈ ಬೇಡರವನೆ. ಈ ಮೇಲಿನ ಸಂಕ್ಷಿಪ್ತ ವಿವರಗಳಿಂದ ತಿಳಿದುಬರುವುದೆಂದರೆ ವಿಜಯನಗರಕ್ಕಿಂತ ಪೂರ್ವ ಕ್ರಿ.ಶ. ಪತ್ತೊಂಭತ್ತನೇ ಶತಮಾನದವರೆಗೆ ಕರ್ನಾಟಕಾಂಧ್ರದಲ್ಲಿ ಸೈನಿಕ ವೃತ್ತಿಯಿಂದ ಜೀವನ ಸಾಗಿಸುತ್ತ

ಬಂದಿರುವವರೂ ಈ ಬೇಡರೇ. ಇವರಿಗೇನೇ ಕರ್ನಾಟಕ ಸೈನ್ಯವೆಂದೂ ಬೇಡರ ಪಡೆಯೆಂದೂ 'ಪ್ಯಾದಾಹಾಯಾ ಕರ್ನಾಟಕಿಯಾ' ಎಂಬ ಬೇರೆ ಬೇರೆ ಕಾಲಗಳಲ್ಲಿ ಕರೆಯಲಾಗಿದೆ. ಕಾಳಗದಲ್ಲಿ ಇವರ ಶೌರ್ಯಕ್ಕೆ ಎಡೆಯಿಲ್ಲ. ಇವರ ಸಾಹಸ ಅವರ್ಣನೀಯವಾದುದು. ಹತ್ತೊಂಭತ್ತನೇ ಶತಮಾನದಲ್ಲಿ ಇವರನ್ನು ಸೈನ್ಯದಲ್ಲಿ ಸೇರಿಸಿಕೊಳ್ಳಬಾರದೆಂದು ಸರಕಾರಿ ಹುಕುಮು ಹೊರಟಿದ್ದರಿಂದ ಇವರು ತಮ್ಮ ಕ್ಷಾತ್ರ ವೃತ್ತಿಯ ಉಪಜೀವನ ಸಾಧನೆಯಿಂದ ಎರವಾದರು. ಆದಾಗ್ಯೂ ಇಂದಿನವರೆಗೆ ಇವರು ತಮ್ಮ ಗಂಡು ಸ್ವಭಾವವನ್ನು ಕಳೆದುಕೊಂಡಿಲ್ಲ. ಬೇಟೆಗಾರರೆಂದು ಇವರು ಮೊದಲಿನಿಂದಲೂ ಪ್ರಸಿದ್ಧರು. ಬೇಡನೆಂದರೆ ಕಾಲಾಳು. ಗುಂಡಿನಗುರಿ ಹೊಡೆಯುವುದರಲ್ಲಿ ಎತ್ತಿದ ಕೈ ಇವರದು. ಕಾಲಮಹಿಮೆಯಿಂದ ಇವರು ಹಿಂದುಳಿದವರಾದರು[೨೬].

ಬೇಡ ನಾಯಕರು ಶೂರರಲ್ಲದೆ, ಸಮಾಜ ಸುಧಾರಕರು, ಸಂಗೀತಗಾರರು ಮತ್ತು ಹಾಡುಗಾರರು ಹೌದು. ಶ್ರೀ ಗೋಪಾಲ ನಾಯಕರು (ತಂಜಾವೂರು) ಜಗತ್‌ಪ್ರಸಿದ್ಧ ಸಂಗೀತಗಾರರಾಗಿ ಹೋಗಿದ್ದಾರೆ. ಶ್ರೀ. ಬಿ. ದೇವಿಂದ್ರಪ್ಪಾ (ಮೈಸೂರು) ದಕ್ಷಿಣ ಭಾರತದ ಪ್ರಖ್ಯಾತ ಹಾಡುಗಾರರಲ್ಲಿ ಒಬ್ಬರಾಗಿರುತ್ತಾರೆ. ಶ್ರೀ. ಪೆರಿಯರ್. E.V. ರಾಮಸ್ವಾಮಿ (Periar E.V. Ramaswami) ತಮಿಳುನಾಡಿನಲ್ಲಿ ಹಿಂದು ಧರ್ಮದ ಕೆಟ್ಟ ಸಂಪ್ರದಾಯಗಳ ವಿರುದ್ಧ ಸಿಡಿದೆದ್ದು ದ್ರಾವಿಡ ಮುನ್ನೇತ್ರ ಕಜಗಮ್ (Dravida munnetra Kazhagam) ಎಂಬ ಪಾರ್ಟಿಯೊಂದನ್ನು ಸಮಾಜದ ಕೆಳವರ್ಗದವರಿಗಾಗಿ ರಚಿಸಿ ಅವರನ್ನು ಮೇಲೆ ಎತ್ತುವಲ್ಲಿ ಸಫಲತೆಯನ್ನು ಕಂಡಿದ್ದಾರೆ. ಇವರು ಕೂಡ ನಾಯಕ ಸಮುದಾಯದವರಾಗಿದ್ದರು ಎನ್ನುವುದು ಗಮನಾರ್ಹ ಅಂಶವಾಗಿದೆ[೨೮].

ಕ್ರಿ.ಶ. ೧೨೩೭ ರ ಒಂದು ಶಾಸನದ ಪ್ರಕಾರ, (ಈ ಶಾಸನ ಚಿತ್ರದುರ್ಗ ಜಿಲ್ಲೆಯ ಹೊಳಲಕೆರೆ ತಾಲೂಕಿನ ಮಳಲಿ ಗ್ರಾಮದಲ್ಲಿ ಸಿಕ್ಕಿರುತ್ತದೆ). ಮಲೆಯನಾಯಕರು ಅಥವಾ ಬೇಡ ನಾಯಕರು ಬಹಳ ಶೂರರಾಗಿದ್ದರು ಎಂಬ ಮಾಹಿತಿ ದೊರೆಯುತ್ತದೆ. ಅಂದು ಬೇಡರು ಸುಸಂಘಟಿತರಾಗಿ ದೊಡ್ಡ ರಾಜರನ್ನೇ ಎದುರಿಸುತ್ತಿದ್ದರು. ಪರ್ವತ ಯುದ್ಧಗಳಲ್ಲಿ ನಿಷ್ಣಾತರಾಗಿದ್ದ ಇವರನ್ನು ಹಲವು ರಾಜರು ಒಲಿಸಿಕೊಂಡು ಯುದ್ಧದಲ್ಲಿ ಇವರ ಸಹಾಯವನ್ನು ಪಡೆಯುತ್ತಿದ್ದರು[೨೭].

ಕ್ರಿ.ಶ. ೧೧ ಮತ್ತು ೧೨ನೆಯ ಶತಮಾನದ ಶಿಲಾಶಾಸನಗಳಲ್ಲಿ ನಾಯಕ ಎಂಬ ಉಪನಾಮವು ಹೆಚ್ಚು ಹೆಚ್ಚಾಗಿ ಕಂಡುಬರುತ್ತದೆ. ಕರ್ನಾಟಕಕ್ಕೆ ಬರುವ ಮುನ್ನ ಬೇಡನಾಯಕರು ಉತ್ತರದಲ್ಲಿರಲಿಲ್ಲ. ಆಂಧ್ರದ ಗುಡ್ಡಗಾಡು ಪ್ರದೇಶವಾದ ಶ್ರೀಶೈಲದ ಕಡೆಯಿಂದ ಬಂದವರು ಎಂದು ನಿಖರವಾಗಿ ಹೇಳಬಹುದು. ಬೇಡ ನಾಯಕರು ಆಂಧ್ರದ ಗುಡ್ಡಗಾಡುಗಳನ್ನು ಬಿಟ್ಟು ದಕ್ಷಿಣ ಕಡೆ ಬರಲು ಕಾರಣ ಏನೆಂದರೆ, ಅವರು ಪಾಲನೆ

ಮಾಡುತ್ತಿದ್ದ ದನಕರುಗಳಿಗೆ ಮೇವು ನೀರು ಅಲ್ಲಿ ಇಲ್ಲದಿರುವುದು. ಇದಲ್ಲದೆ, ಉತ್ತರ ಭಾರತದಲ್ಲಿಯ ಮುಸ್ಲಿಂರ ದಾಳಿಯನ್ನು ತಡೆಯಲಾರದೆ ಇಲ್ಲಿಗೆ ಬಂದರು ಎಂದು ತಮಿಳಿನ ಕೃತಿಯೊಂದು ಹೇಳುತ್ತದೆ[೨೯].

ಕುಮಾರರಾಮ ಮತ್ತು ಅವನ ತಂದೆ ಕಂಪಿಲರಾಯ ವಿಜಯನಗರಕ್ಕೂ ಪೂರ್ವದ ಪಾಳೆಗಾರರಾಗಿ ಮುಸ್ಲಿಂ ದಾಳಿ ದಕ್ಷಿಣ ಭಾರತದ ಮೇಲಾಗುವದನ್ನು ಯಥಾ ಶಕ್ತಿ ತಡೆಯಲು ಪ್ರಯತ್ನಿಸಿ ಶಾಶ್ವತ ಸ್ಥಾನ ಪಡೆದ ಇತಿಹಾಸ ಪುರುಷರಾಗಿದ್ದಾರೆ. ಹೈದರಾಲಿ ಮತ್ತು ಟಿಪ್ಪು ಸುಲ್ತಾನನ ಸೈನ್ಯದಲ್ಲಿ ಬೇಡ ನಾಯಕರ ತುಕ್ಕಡಿಗಳ ಇದ್ದವೆಂಬ ಐತಿಹಾಸಿಕ ದಾಖಲೆವಿದೆ. ಇವರನ್ನು ಕರ್ನಾಟಕದ ರಜಪೂತರೆಂದು ೬ ಮತ್ತು ೭ನೇ ಶತಮಾನದಲ್ಲಿಯೇ ಕರೆಯಲಾಗುತ್ತಿತ್ತು[೩೦]. ಈ ನಾಯಕರು ರಾಜಮರ್ಯಾದೆಯಲ್ಲಿ ಬೇಟೆ ಆಡುವುದರಲ್ಲಿ ನಿಸ್ಸೀಮರಿದ್ದರು. ಇಟ್ಟ ಗುರಿ ತಪ್ಪದೆ ಹೊಡೆಯುವುದರಲ್ಲಿ ಪ್ರವೀಣರಾಗಿರುವುದರಿಂದ ಇವರನ್ನು 'ಗುರಿಕಾರ'ರೆಂದು ಕರೆಯುತ್ತಾರೆ.

ಹಿಂದಿನ ಶತಮಾನಗಳಲ್ಲಿ ಬೇಡರು ಬೇಟೆ ಮತ್ತು ಪಶುಪಾಲನೆಯನ್ನೇ ಮುಖ್ಯ ಕಸುಬುಗಳನ್ನಾಗಿಸಿಕೊಂಡಿದ್ದರು. ಬೇಟೆಯೇ ಪ್ರಮುಖ ಉದ್ಯೋಗವಾಗಿದ್ದ, ಬೇಡರು ದಾರಿ ಹೊಕರನ್ನು ದೋಚುವುದನ್ನು ಬಹುಶಃ ಜಗತ್ತು ಹೆಚ್ಚೆಚ್ಚು ವ್ಯವಹಾರಿಕವಾಗುತ್ತ ಬಂದಂತೆಲ್ಲ ಕಲಿತಿರಬೇಕು. ಅತ್ಯಂತ ಪ್ರಾಚೀನ ಕಾಲದಲ್ಲಿ ಮಾನವ ಬೇಟೆ ಜೀವನವನ್ನು ಕೈಗೊಂಡು ಒಂದು ಕಡೆ ನೆಲೆಯಾಗಿ ನಿಂತು ನಾಗರೀಕತೆಯ ಹಾದಿ ಹಿಡಿದಿದೆ. ಮೂಲಭೂತವಾಗಿ ಮುಗ್ಧರಾಗಿರುವ, ಪ್ರಾಮಾಣಿಕರಾಗಿರುವ ಬೇಡ ನಾಯಕರು ತಮ್ಮ ಹೋರಾಟ ಗುಣವನ್ನೇ ಉಪಯೋಗಿಸಿಕೊಂಡು ಸಣ್ಣಪುಟ್ಟ ಪಾಳೆಯಗಾರರಾಗಿ ಕರ್ನಾಟಕ ರಾಜಕೀಯ ಇತಿಹಾಸದಲ್ಲಿ ಕಾಣಿಸಿಕೊಂಡಿದ್ದಾರೆ[೩೧]. ವಿಜಯನಗರ ಸಾಮ್ರಾಜ್ಯ ಸ್ಥಾಪನೆಯ ಪೂರ್ವದಲ್ಲಿ ಪ್ರಭುತ್ವ ನಡೆಸಿದ ಮಹಮದೀಯರ ಹಾಗೂ ಪಾಳೆಗಾರರ ಪಡೆಗಳಲ್ಲಿ ಬೇಡರ ಪಡೆಗಳು ನೇಮಿಸಲ್ಪಟ್ಟಿದವು. ವಿಜಯನಗರ ಸಾಮ್ರಾಜ್ಯ ಸ್ಥಾಪಕರೂ ಬೇಡ ದೊರೆಗಳೇ ಆಗಿದ್ದರು. ಅಷ್ಟೇ ಏಕೆ ವಿಜಯನಗರ ಸಾಮ್ರಾಜ್ಯದಲ್ಲಿ ಸೈನ್ಯದ ಬಹುಭಾಗವು ಈ ಬೇಡರ ಕಾಲಾಳುಗಳ ಪಡೆಯಿಂದ ಕೂಡಿದ್ದಿತು. ವಿಜಯನಗರ ಸಾಮ್ರಾಜ್ಯದ ಅನಂತರವೂ ಪ್ರಾಮುಖ್ಯತೆಗೆ ಬಂದ ಅನೇಕ ಪಾಳೆಗಾರರ ವಿಸ್ತಾರವಾದ ರಾಜ್ಯಗಳು ಈ ಬೇಡ ನಾಯಕ ವೀರರಿಂದ ಸ್ಥಾಪನೆಯಾದವುಗಳಾಗಿವೆ[೩೨].

ಮುಸ್ಲಿಂ ಸಾಮ್ರಾಟರ ಮತ್ತು ಸರದಾರರ ರಾಜ್ಯದಾಹ ಮತ್ತು ರಾಕ್ಷಸೀಕೃತ್ಯವು ಮುಗಿಲಿಗೇರಿದಾಗ ಹಿಂದೂ ಧರ್ಮ ರಕ್ಷಣೆಗಾಗಿ ಈ ಜನಾಂಗದ ಯುವಕರನೇಕರು ಮನೆಮಠಗಳನ್ನು ಸರ್ವತ್ಯಾಗ ಮಾಡಿ ಯಾವಾಗಲೂ ಸ್ವಯಂಸೇವಕರಾಗಿ ಖಡ್ಗ ಹಿಡಿದು ಹಿಂದು ಮಹಿಳೆಯರ ಮತ್ತು ನಾಡಿನ ಮಾನರಕ್ಷಣೆಗಾಗಿ ಎಲ್ಲಂದರಲ್ಲಿ ತುರುಕರ ದಂಡಿನ ಮೇಲೆ ಬಿದ್ದು ತುಂಡರಿಸುತ್ತಿದ್ದರು. ಖಡ್ಗದಾರಿಗಳಾದ ನಾಯಕ ತರುಣರು

ಮದೋನ್ಮತ ಮುಸಲ್ಮಾನ ಪಾಳೆಯಗಳನ್ನು ಹೊಕ್ಕು ಸಿಕ್ಕಿಸಿಕ್ಕಿದವರ ರುಂಡ ಚಂಡಾಡುತ್ತಿರಲು ಭೀತಗೊಂಡ ಮುಸಲ್ಮಾನ ಸೈನಿಕರು ಇವರ ದರ್ಶನ ಮಾತ್ರದಿಂದಲೇ ಜರ್ಜರಿತರಾಗಿ 'ತಲ್ ವಾರ್' (ಖಡ್ಗ ಅಥವಾ ಕತ್ತಿ) ಎಂದು ಕೂಗುತ್ತಿದ್ದರು. ತಲವಾರ್ ಧಾರಿಯಾದ ವೀರನಾಯಕ ತರುಣರಿಗೆ ಸಂಶೋಧನಾ ರೂಪದಿಂದ ಅವರ ಭಾಷೆಯಲ್ಲಿ 'ತಲವಾರ್' ಎಂದು ಕೂಗುತ್ತಿದ್ದರು. ಇದರ ಪರಿಣಾಮವಾಗಿ ಮುಸಲ್ಮಾನ ದಾಳಿಯ ಕಾಲದಿಂದ ಈ ನಾಯಕ ಜನಾಂಗಕ್ಕೆ ಸಾಂಪ್ರದಾಯವಾಗಿ ರೂಪಾಂತರ ಹೊಂದಿದ 'ತಳವಾರ'ನೆಂಬ ಹೆಸರು ಬಂದಿರುತ್ತದೆ[೩೩].

ಬಸವಣ್ಣನ ನಾಯಕತ್ವದಲ್ಲಿ ಅಂದು ಉಂಟಾದ ಸಾಮಾಜಿಕ ಧಾರ್ಮಿಕ ಆಂದೋಲನದಲ್ಲಿ ಕೆಳಗಿನ ಜಾತಿಯ ಅಸಂಖ್ಯಾತ ಜನರು ಭಾಗವಹಿಸಿದರು. ಈ ಆಂದೋಲನ ಅಂದಿನ ಕರ್ನಾಟಕದಲ್ಲಿ ಬಸವಣ್ಣನವರಿಗಿಂತ ಕಿಂಚಿತ್ಪೂರ್ವದಲ್ಲಿಯೇ ಆರಂಭಗೊಂಡಿತ್ತೆಂದು ಕಾಣುತ್ತದೆ. ಅವರಿಗಿಂತ ಸ್ವಲ್ಪ ಹಿಂದೆ ಅಲ್ಲಲ್ಲಿ ಮಿನುಗುತ್ತಿದ್ದ ಕ್ರಾಂತಿಯ ಕಿಡಿಗಳು ಆಗಲೇ ಜನಮನವನ್ನು ಗೆದ್ದಿದ್ದರು. ಅವರಲ್ಲಿ ತೆಲಗು ಜೊಮ್ಮಯ್ಯನೂ ಒಬ್ಬ. ಈತ ಬೇಟೆಯಾಡಿ ತಂದ ಮಾಂಸವನ್ನು ಮಾರಿ ಜಂಗಮಾರಾಧನೆ ಮಾಡುತ್ತಿದ್ದನೆಂದೂ ಚಾಲುಕ್ಯ ದೊರೆ ಪೆರ್ಮಾಡಿರಾಯನಲ್ಲಿ ಮಂತ್ರಿಯಾಗಿದ್ದನೆಂದೂ ತಿಳಿದುಬಂದಿದೆ[೩೪].

ಬ್ರಿಟಿಷರ ಆಳ್ವಿಕೆಯಲ್ಲಿ ಬೇಡ ನಾಯಕರು ಅವರ ದುಷ್ಕೃತ್ಯಗಳನ್ನು ಸಹಿಸದೆ, ಅವರ ವಿರುದ್ಧ ಬಂಡಾಯ ಎದ್ದಿದ್ದಾರೆ. ೧೮೫೮ನೆಯ ಬಂಡಾಯದ ಸಂಗೋಳಿ ರಾಯಣ್ಣ ಬೇಡರವನೆ ಆಗಿದ. ಬ್ರಿಟಿಷರ ಆಳ್ವಿಕೆಯ ಕಾಲದಲ್ಲಿಯೇ ಅರಣ್ಯ ನಾಶದ ಕಾರ್ಯ ಆರಂಭವಾಯಿತು. ಒಂದು ಕಡೆ ಗ್ರಾಮಸ್ಥರು ಸಾಗುವಳಿ ಭೂಮಿಗಾಗಿ ಅರಣ್ಯವನ್ನು ಕಡಿದು ಒತ್ತರಿಸುತ್ತ ಬಂದರೆ ಬ್ರಿಟಿಷರು ಭಾರತದಾದ್ಯಂತ ಪ್ರಮುಖ ಪಟ್ಟಣಗಳಿಗೆ ಸಂಪರ್ಕ ಕಲ್ಪಿಸಿಕೊಳ್ಳಲು ರೈಲು, ರಸ್ತೆ, ಹಾಕುವ ಸಲುವಾಗಿ ಅರಣ್ಯಗಳನ್ನು ಕಡಿದರು. ಜತೆಗೆ ಭಾರತದಲ್ಲಿ ಕೈಗಾರಿಕೆಗಳೂ ಹೆಚ್ಚಿಕೊಳ್ಳತ್ತ ಹೋಗಲು, ಕಟ್ಟಡಗಳ ನಿರ್ಮಾಣ, ಕಾಗದದ ಕಾರ್ಖಾನೆ, ಕಛೇರಿಗಳಿಗೆ ಬೇಕಾದ ಪರಿಕರಗಳ ತಯಾರಿಕೆಗಾಗಿ ಹೇರಳ ಪ್ರಮಾಣದ ಮರಮುಟ್ಟುಬೇಕಾಯಿತು. ಅರಣ್ಯ ನಾಶವಾಗುತ್ತ ಬಂದಂತೆಲ್ಲ ಬುಡಕಟ್ಟು ಜನಾಂಗಗಳ ನೆರಳಿನಲ್ಲಿ ಮುಚಿಟ್ಟ ಜೀವನವನ್ನು ಬಿಸಿಲಿಗೆ ತೆರೆದಿಟ್ಟಂತಾಯಿತು. ಈ ಕಾರಣದಿಂದ ಹೊರಗಿನ ನಾಗರೀಕತೆ, ವಿಜ್ಞಾನದ ಪ್ರಭಾವವೂ ಸ್ವಲ್ಪ ಸ್ವಲ್ಪವಾಗಿ ಅರಣ್ಯ ಜನಾಂಗಗಳ ಜೀವನವನ್ನು ಪ್ರವೇಶಿಸಿತು. ನಾಗರೀಕತೆಯ ಆಗಮನದಿಂದ, ಅರಣ್ಯನಾಶದಿಂದ ಅಡವಿವಾಸಿಗಳು ಒಂದು ಬಗೆಯಲ್ಲಿ ಅನಾಥರಂತೆಯೇ ಆದರು[೩೫].

ಸುರಪುರದ ದೊರೆಯಾದ 'ವೆಂಕಟಪ್ಪ ನಾಯಕ'ರು ಬೇಡರ ಸೈನ್ಯದಿಂದಲೇ ಇತ್ತ ಬ್ರಿಟಿಷರನ್ನು ಅತ್ತ ಹೈದ್ರಾಬಾದ ನಿಜಾಮನನ್ನು ಕೆಲಕಾಲ ದೂರ ಇರುವಂತೆ ಮಾಡಿದುದು ಬೇಡರ ಶೌರ್ಯಕ್ಕೆ ಹೆಸರನ್ನು ತಂದಿರುತ್ತದೆ. ಬೇಡರ ಸೈನ್ಯವನ್ನು ಅಂದು 'ಸುರಪುರದ ಸೈನ್ಯ' ಎಂದು ಪ್ರಸಿದ್ಧಿ ಪಡೆದಿತ್ತು. ಹಲವಾರು ಬೇಡ ಸಮುದಾಯದವರು ರಾಜರುಗಳಾಗಿ ಕರ್ನಾಟಕದ ಚಿತ್ರದುರ್ಗವನ್ನು ಆಳಿದ ದಾಖಲೆಗಳಿವೆ ಉದಾಹರಣೆಗೆ ತಿಮ್ಮಣ್ಣಾ ನಾಯಕ (೧೫೬೨:೧೬೫೨), ಚಿಕ್ಕಣ್ಣ ನಾಯಕ (೧೬೭೬), ಭರ್ಮಪ್ಪ ನಾಯಕ (೧೬೮೯:೧೭೨೧), ಕಸ್ತೂರಿ ರಂಗಪ್ಪ ನಾಯಕ-II, ಮದಕರಿ ನಾಯಕ (೧೭೫೪), Harli Halt ಕುಟುಂಬ, ಮತ್ತಿನಾಡು ಕುಟುಂಬ ಮುಂತಾದವುಗಳು ಚಿತ್ರದುರ್ಗವನ್ನು ಆಳಿದವರಾಗಿರುತ್ತಾರೆ[೬೬].

ಚಿತ್ರದುರ್ಗದ ಇತಿಹಾಸದ ವಿವರಗಳು ಪಾಳೆಯಗಾರರ ಆಳ್ವಿಕೆಯಲ್ಲಿ ಸಾರುತ್ತದೆ. ಪಾಳೆಯಗಾರರು ಬೇರೆ ಯಾರು ಆಗಿರದೆ, ಬೇಡರ ನಾಯಕರಾಗಿದ್ದರು. ೧೪ನೇ ಶತಮಾನದ ಮಧ್ಯಭಾಗದಿಂದ ಆರಂಭವಾಗುವ ನಾಯಕ ವಂಶಸ್ಥರ ಆಳ್ವಿಕೆ ಇತಿಹಾಸದ ೧೮ನೆಯ ಶತಮಾನದ ಮಧ್ಯ ಭಾಗದವರೆಗೂ ಮುಂದುವರಿಯುತ್ತದೆ. ವಿಜಯನಗರ ಪತನ ಕಾಲದವರೆಗೂ ದುರ್ಗದ ನಾಯಕರು ವಿಜಯನಗರದ ಅರಸರಿಗೆ ಸಾಮಂತರಾಗಿದ್ದು, ತದನಂತರ ಸ್ವತಂತ್ರರಾಗಿ ಚಿತ್ರದುರ್ಗ ಸೀಮೆಯನ್ನು ಆಳಿದರು[೬೭].

ನಾಯಕರು ಚಿತ್ರದುರ್ಗವನ್ನಲ್ಲದೆ, ಕರ್ನಾಟಕದ ಇತರ ಪ್ರದೇಶಗಳನ್ನು ಆಳಿದ ದಾಖಲೆಗಳು ಇವೆ ಉದಾಹರಣೆಗೆ ಹರಪನಹಳ್ಳಿ. ಸಂಸ್ಥಾನವನ್ನು ರಂಗಣ್ಣ ನಾಯಕ (೧೫೯೨ ರಿಂದ ೧೬೧೬) ಧರ್ಮಾನಾಯಕ (೧೬೧೭ ರಿಂದ ೧೬೫೦), ಓಬ್ಬಣ್ಣ ನಾಯಕ (೧೬೫೧ ರಿಂದ ೧೬೫೫), ಮುಮ್ಮಡಿ ನಾಯಕ (೧೬೬೮ ರಿಂದ ೧೬೮೭), ಬಸವಂತ ನಾಯಕ (೧೬೮೮-೧೬೯೧), ಹಿರಿಯಮ್ಮಾಜಿ (೧೬೯೨-೧೭೧೧) ಮತ್ತು ಮಮ್ಮಡಿ ಬಸಪ್ಪ ನಾಯಕ (೧೭೧೨-೧೭೭೪) ಮುಂತಾದವರು ಸಮರ್ಥ ಸಂಸ್ಥಾನಿಕರೆಂದು ಪ್ರಸಿದ್ಧಿ ಹೊಂದಿದ್ದಾರೆ ಇದಲ್ಲದೆ, ಸೋಮಶೇಖರ ನಾಯಕ (೧೭೪೨-೧೭೬೬), ಅತ್ಯಂತ ಪ್ರವರ್ಧಮಾನ ಕಾಲದ ಆಳ್ವಿಕೆ ನಡೆಸಿ ಕೀರ್ತಿ ಪಡೆದಿದ್ದಾನೆ. ಹರಪನಹಳ್ಳಿ, ಹಡಗಲಿ, ನಾರಾಯಣ ದೇವರಕೆರೆ ಮತ್ತು ಕೊಪ್ಪಳದವರಿಗೆ, ದಕ್ಷಿಣದಲ್ಲಿ ಚಿತ್ರದುರ್ಗದವರೆಗೆ, ಪೂರ್ವದಲ್ಲಿ ಕೂಡ್ಲಿಗಿವರೆಗೆ ನಾಯಕರ ರಾಜ್ಯ ವಿಸ್ತಾರಗೊಂಡಿತ್ತು ಎನ್ನಲಾಗಿದೆ.

ಸ್ವಾತಂತ್ರ್ಯ ನಂತರದ ಬೇಡ ಬುಡಕಟ್ಟಿನ ಬೆಳವಣೆಗೆ

ತಮ್ಮದೇ ಆದ ಭವ್ಯ ಇತಿಹಾಸವನ್ನು ಹೊಂದಿರುವ ಬೇಡರು, ಸ್ವಾತಂತ್ರ್ಯ ಬಂದ ನಂತರ ಆದಿವಾಸಿಗಳಿಂದ ಡಿ-ನೋಟಿಫೈಡ (Denotified), ಬುಡಕಟ್ಟಿನವರಾದರು. ಈ ಪರಿವರ್ತನೆ ಬಾಂಬೆ ಸ್ಟೇಟ್‌ದಲ್ಲಿ (Bombay State) ಆಯಿತು. ೧೯೫೬ ರಲ್ಲಿ ರಾಜ್ಯ ಪುನರ್ ರಚನಾ ಆಯೋಗ (States

Reorganization Commission)ಯ ಪ್ರಕಾರ, ಭಾಷಾವಾರು ರಾಜ್ಯಗಳು ಉಗಮವಾದವು. ಮೈಸೂರು ರಾಜ್ಯವು ಹುಟ್ಟಿತ್ತು. ಆ ನಂತರ ಮೈಸೂರು ರಾಜ್ಯ ೧೯೭೩ರಲ್ಲಿ 'ಕರ್ನಾಟಕ ರಾಜ್ಯ' ಆಯಿತು. ಕರ್ನಾಟಕದ ಬೇಡ ಬುಡಕಟ್ಟಿನ ಜನರು ೧೯೯೧ ರ ವರೆಗೆ 'ಎ'(A) ಗುಂಪಿಗೆ ಸೇರಿದವರಾಗಿದ್ದರು. ನಂತರ ಇವರನ್ನು ಪರಿಶಿಷ್ಟ ವರ್ಗಕ್ಕೆ ಸೇರಿಸಲಾಯಿತು. ೧೯೭೫ರ ಐತಿಹಾಸಿಕ ಹಾವನೂರ ವರದಿಯ[೩೬] ಪ್ರಕಾರ, ಹಲವಾರು ಜಿಲ್ಲೆಗಳಲ್ಲಿರುವ ಬೇಡರನ್ನು ಈ ಕೆಳಗಿನ ರೀತಿಯಲ್ಲಿ ಪಟ್ಟಿ ಮಾಡಲಾಗಿದೆ. (ಬೇಡ ಅಥವಾ ಅದರ ಪರ್ಯಾಯ ಪದಗಳನ್ನು ಒಂದೇ ಒಂದು ಜಾತಿಯಲ್ಲಿ ಅಂದರೆ ಬೇಡ ಜಾತಿಯಲ್ಲಿ ಸೇರಿಸಲಾಗಿದೆ.

೧. ಮೈಸೂರು ಪ್ರದೇಶ:ವಾಲ್ಮೀಕಿ.

೨. ಕೊಡಗು ಪ್ರದೇಶ: ಬೇಡರು.

೩. ಮಂಗಳೂರು ಪ್ರದೇಶ: ಬೇಡರು, ಬೊಯ, ವೇದನ.

೪. ಬೆಳಗಾಂವ ಪ್ರದೇಶ: ಬೇಡ, ಬೇರಡ, ತಳವಾರ, ವಾಲ್ಮೀಕಿ, ನಾಯಕ ಮಕ್ಕಳು, ನಾಯಕವಾಡಿ, ರಾಮೋಶಿ.

೫. ಗುಲಬರ್ಗಾ ಪ್ರದೇಶ: ಬೇಡರ, ಬೆಂಡರ್.

ಕರ್ನಾಟಕ ಸರಕಾರ, ಎರಡನೇ ಹಿಂದುಳಿದ ವರ್ಗಗಳ ಆಯೋಗದ ವರದಿ, ಸಂಪೂಟ ೩ ರ ಪ್ರಕಾರ ಬೇಡ ಸಮುದಾಯದವರ ಉಪಜಾತಿಗಳನ್ನು ಈ ಕಳೆಗೆ ನೀಡಿದಂತೆ ಪಟ್ಟಿ ಮಾಡಲಾಗಿದೆ.

೧. ಬೇಡ

೨. ಬೇಡರ/ಬೇಡರು/ವೇದನ

೩. ಬ್ಯೇಡ /(Byeda) ಬ್ಯಾಡ (Byada)

೪. ಬೇರಡ/ಬೇರಡಾ (Berad/Berada)

೫. ಬೋಯ

೬. ಮೈಸೂರು-ನಾಯಕ

೭. ನಾಯಕ-ಮಕ್ಕಳು /ನಾಯಕ/ ನೈಯಿಕ

೮. ವಾಲ್ಮೀಕಿ-ಮಕ್ಕಳು/ವಾಲ್ಮೀಕಿ (Walmiki)/ ವಾಲ್ಮೀಕಿ (Valmiki)

೯. ಪಾಳೆಗಾರ್/ ಪಾಳೆಗಾರ

೧೦. ತಳವಾರ್/ತಳವರ್/ತಳವಾರ (Talwar/Talvar/Talvara)

೧೧. ಊರು - ನಾಯಕ

೧೨. ಹರಣ-ಸಿಕಾರಿ /ಚಿಗಾರಿ ಬೇಟೆಗಾರ[೪೦].

ಎಂ.ವ್ಹಿ. ಚಿತ್ರಲಿಂಗಯ್ಯ[೪೧]ನವರು ಬೇಡ ಸಮುದಾಯದಲ್ಲಿನ ಉಪಪಂಗಡಗಳನ್ನು ಈ ಕೆಳಗೆ ನೀಡಿದಂತೆ ಗುರುತಿಸಿದ್ದಾರೆ.

೧. ವಾಲ್ಮೀಕಿ

೨. ತಳವಾರ

೩. ನಾಯಕ-ಮಕ್ಕಳು

೪. ಪರಿವಾರ

೫. ನಾಯಕವಾಡಿ

೬. ಬೇರಡ

೭. ವೇದನ್

೮. ಬೋಯ

೯. ರಾಮೋಶಿ

ಎಂ.ಬಿ.ನಗ್ಗಿನಾಳರು[೪೨], ಇಂದು ಬೇಡರ ಒಳಗೆ ಪರ್ಯಾಯ ಪದಗಳು ಸರ್ವೇಸಾಮಾನ್ಯವಾಗಿವೆ ಎಂದಿದ್ದಾರೆ. ಆದರೆ, ಬೇಡರ ಮೂಲ ಅರ್ಥ ಬೇಟೆಯಾಡುವವ ಎಂದಾಗುತ್ತದೆ ಎನ್ನುತ್ತಾರೆ. ಎರಡನೇ ಗುಂಪಿನಲ್ಲಿ ಬರುವ ನಾಯಕ, ನಾಯಕ-ಮಕ್ಕಳು, ನಾಯಕವಾಡಿ ಮತ್ತು ಪಾಳೆಗಾರರು ಇವರು ಸೈನಿಕ ಜನಾಂಗಕ್ಕೆ ಸೇರಿದವರಾಗಿರುತ್ತಾರೆ. ಇವರುಗಳು ವಾಲ್ಮೀಕಿಯನ್ನು ತಮ್ಮ ಮೂಲ ಪುರುಷ ಎಂದು ಹೇಳಿಕೊಳ್ಳುತ್ತಾರೆ. ರಾಮೋಶಿ ಎಂಬ ಪದವು 'ರಾಮ' ನಿಂದ ಹಿಂದಿನ ಕಾಲದಿಂದಲೂ ಬಂದಿದೆ ಮತ್ತು ಇದು ಸಂಸ್ಕೃತ ಶಬ್ದವಾದ 'ರಾಮವಂಸಿಯಾ' (Ramavansheeya) ದಿಂದ ಬಂದಿದೆ ಮತ್ತು ಇದು ಮಹಾರಾಷ್ಟ್ರದಲ್ಲಿ ಹೆಚ್ಚು ಪ್ರಚಲಿತವಾಗಿದೆ. ತಳವಾರ, ಪರಿವಾರ ಮತ್ತು ಬೋಯ ಇವುಗಳು ಅವರ ಸೇವಾ ವೃತ್ತಿಯನ್ನು ತೋರಿಸುತ್ತದೆ. ತಳವಾರ ಎಂಬ ಶಬ್ದವು ತಳಕಾರ ಎಂಬ ಮೂಲ ಶಬ್ದದಿಂದ ಬಂದಿದೆ ಮತ್ತು ಇದರರ್ಥ 'ಪೋಲಿಸ್' ಆಗುತ್ತದೆ. ಪರಿಹಾರವೆಂದರೆ ರಾಜರ ಪರಿವಾರ ಎಂದರ್ಥವಾಗುತ್ತದೆ. ಈ ಬೇಡರು ಹಿಂದೆ ರಾಜರು ಯುದ್ಧಕ್ಕೆ ಪ್ರಾಣಿಗಳನ್ನು ಬೇಟೆಯಾಡಲು ಹೋದಾಗ, ಇವರನ್ನು ತಮ್ಮ ಜೊತೆಗೆ ಕರೆದುಕೊಂಡು ಹೋಗುತ್ತಿದ್ದರು. ಆದುದರಿಂದ, ಇವರಿಗೆ ಪರಿವಾರದವರು ಎಂಬ ಹೆಸರು ಬಂದಿದೆ.

ಬೇಡರ ವ್ಯಕ್ತಿತ್ವ

ಕರ್ನಾಟಕದ ಬುಡಕಟ್ಟಿನ ಜನರು ಬಹಳ ಪೂರ್ವದಿಂದಲೂ ಇಲ್ಲಿ ಬಂದು ನೆಲೆಸಿದವರಾಗಿರುತ್ತಾರೆ. ಇವರು ಅಷ್ಟು ಎತ್ತರದ ವ್ಯಕ್ತಿಗಳಲ್ಲ, ಉದ್ದವಾದ ತಲೆ, ಚಿಕ್ಕದಾದ ಮೂಗು ಮತ್ತು ಅಗಲವಾದ ಮೂಗಿನ ಹೊರಳೆಗಳನ್ನು ಉಳ್ಳವರಾಗಿದ್ದಾರೆ. ಬೇಡ ನಾಯಕರ ಮೈಬಣ್ಣ ಸಾಮಾನ್ಯವಾಗಿ ಕಪ್ಪು. ಉದ್ದ ಶರೀರ, ತಲೆಯ ಮೇಲೆ ಪೇಟ, ಬರಿಮೈಯ, ಹೆಗಲ ಮೇಲೆ ಒಂದು ಕಪ್ಪು ಕಂಬಳಿ. ಈ ಕಂಬಳಿ ಹಾಸಿಕೊಳ್ಳಲು, ಹೊದ್ದುಕೊಳ್ಳಲು ಬೇಕಾದರೆ ಒಂದು ಕಡೆ ಗುಪ್ಪೆ ಇಟ್ಟು ಕೂತುಕೊಳ್ಳಲು ಬರುವಂಥದ್ದು. ಮಳೆಗಾಲದಲ್ಲಿ ಹೊದ್ದುಕೊಂಡು ಮಲಗಿದರೂ ನೆನೆಯದಂತೆ ಬಿದ್ದ ಹನಿ ಅತ್ತ ಇತ್ತ ಸೋರಿ ಹೋಗಿಬಿಡುವಂಥ ಕಂಬಳಿ ಇದು. ನಡುವಿನಲ್ಲಿ ಒಂದು ಚಲ್ಲಣ, ಕೈಯಲ್ಲಿ ಒಂದು ಕೋಲು, ಹೆಂಗಸಾದರೆ ಬಿಳಿಯ ಸೀರೆ ಉಟ್ಟು ಅದರ ಸೆರಗನ್ನು ಹೆಗಲ ಬಳಿಸಿ ಎದೆ ಮುಚ್ಚಿಕೊಳ್ಳುವ ರೂಢಿಯದ್ದು, ರವಿಕೆ ತೊಡುವ ರೂಢಿ ಇವರಲ್ಲಿರಲಿಲ್ಲ. ಆದರೆ, ಈಗೀಗ ಬೇಡ ನಾಯಕ ಸಮಾಜ ಆಧುನಿಕತೆಗೆ ಹೊಂದಿಕೊಂಡು ಹಳೆಯ ಸ್ವರೂಪವನ್ನು ಬಿಟ್ಟು ಕೊಡುತ್ತಿರುವುದನ್ನು ಎಲ್ಲ ಕಡೆ ಗಮನಿಸಬಹುದಾಗಿದೆ[೪೩]. ಇದಲ್ಲದೆ, ಸುರಪುರ ಬೇಡನಾಯಕರ ವೇಷ ಭೂಷಣಗಳ ಬಗ್ಗೆ ಕಪಟರಾಳ ಕೃಷ್ಣರಾವ ಅವರು ವಿವರಣೆ ಕೊಡುತ್ತಾ ಹೀಗೆ ಹೇಳಿದ್ದಾರೆ. "ಈ ಜನರು ಸಾಮಾನ್ಯವಾಗಿ ಜಟ್ಟಿಗಳಂತೆ ಅಂಗಸಾಧನೆ ಅಂದರೆ ಗರಡಿ ಮಂತಾದ್ದನ್ನು ಮಾಡುವರು. ಬೇಟೆಯಾಡುವಾಗ ಅಥವಾ ಯುದ್ಧದ ಸಮಯದಲ್ಲಿ ತಲೆ ಮುಚ್ಚುವಂತೆ ತೊಗಲ ಟೊಪ್ಪಿಗೆ, ಕೈ ತೋಳುಗಳಲ್ಲದೆ ಜಾಕೀಟುಗಳನ್ನು ಧರಿಸುವರು. ಟೊಂಕಕ್ಕೆ ನಡುಕಟ್ಟನ್ನು ಸುತ್ತಿ ಅದರಲ್ಲಿ ಕಠಾರಿಯನ್ನು ಸಿಕ್ಕಿಸಿಕೊಳ್ಳುವರು. ಎಣ್ಣೆಯುಣಿಸಿದ ಕಾಲ್ಮರೆಯನ್ನು ಮೆಟ್ಟಿ ಮುಂಗೈ ಮೇಲೆ ಗಿಡುಗವನ್ನು ಕೂರಿಸಿಕೊಂಡು ಕೈಯಲ್ಲಿ ಗಾತ್ರವಾದ ಬಡಿಗೆಯನ್ನು ಹಿಡಿದಿರುವ ಬೇಟೆಗಾರನು ಅವರ ಹಿಂದೆ ಬರುತ್ತಿರುವ ಜೋಡು ನಾಯಿಗಳು ಇವೆಲ್ಲವೂ ಸಮಯಕ್ಕೆ ತಕ್ಕಂತೆ ಸುಂದರವಾಗಿ ಶೋಭಿಸುವವು[೪೪].

ಬೇಡ ನಾಯಕರು ಪರಿಶುದ್ಧರು, ಪಾನ ಮಾಡುವುದಿಲ್ಲ. ಈಚಲೂ ಚಾಪೆಯನ್ನು ಸಹ ಹಾಸಿ ಮಲುಗುವುದಿಲ್ಲ. ಇಂದಿಗೂ ನಾಯಕ ಜನಾಂಗದವರು ಪಾನ ಮಾಡದೆ ಇರುವುದು, ಈಚಲೂ ಚಾಪೆಯನ್ನು ಹಾಕಿ ಮಲಗದೆ ಇರುವುದು. ಮಾಂಸಹಾರಿಗಳಾದರು ಕೋಳಿಯನ್ನು ತಿನ್ನದಿರುವುದು ಇವರ ಆಚರಣೆ, ನಂಬಿಕೆಗಳ ನಿಷೇಧಗಳ ಅಂಗಗಳಾಗಿವೆ[೪೫]. ಇತ್ತೀಚಿನ ದಿನಗಳಲ್ಲಿ ಬೇಡ ನಾಯಕ ಸಮಾಜ ಆಧುನಿಕತೆಗೆ ಹೊಂದಿಕೊಂಡು ಹಳೆಯ ರೂಢಿಗಳನ್ನು ಬಿಟ್ಟುಕೊಡುತ್ತಿದೆ.

ಬೇಡ ಸಮುದಾಯದಲ್ಲಿ ಹಿಂದಿನ ಸಾತ್ವಿಕರು ದೇವರನ್ನು ಕೊಂಡಾಡುತ್ತಾ ಶಾಂತಿ ಸಂದೇಶವನ್ನು ಭಾರತಕ್ಕೆ ಅಷ್ಟೇ ಅಲ್ಲ, ಇಡೀ ಜಗತ್ತಿಗೆ ಸಾರಿದ್ದಾರೆ. ಶ್ರೀರಾಮನ ಭಕ್ತನಾಗಿ 'ರಾಮನಾಮ'ವನ್ನು

ಕೊಂಡಾಡುತ್ತಾ ವಾಲ್ಮೀಕಿ ಶಾಂತಿ ಸಂದೇಶವನ್ನು ಸಾರಿದುದು ಯಾರೂ ಮರೆಯುವಂತಿಲ್ಲ. ಶ್ರೀರಾಮಚಂದ್ರನಿಗೆ ತಾನು ತಿಂದ ಹಣ್ಣುಗಳನ್ನು ತಿನ್ನಿಸಿ ತೃಪ್ತಳಾಗಿ, ಶರೀರವನ್ನು ತ್ಯಜಿಸಿದ ಮಹಾಭಕ್ತೆ 'ಶಬರಿ', ಶ್ರೀರಾಮಚಂದ್ರನ ಪರಮ ಸ್ನೇಹಿತ ಬೇಡರ ದೊರೆ 'ಗುಹ' ಇವರು ಭಕ್ತಿಯ ಭುಗ್ಗೆಗಳಾದರೆ, ದ್ವಾಪರದ ಏಕಲವ್ಯ, ಧರ್ಮವ್ಯಾಧರೂ ಗುರುಹಿರಿಯರ ಭಕ್ತಿಯಲ್ಲಿ ಅಗ್ರಗಣ್ಯರು. ಕಲಿಯುಗದ ಬೇಡರ ಕಣ್ಣಪ್ಪ ಮೂಢಭಕ್ತಿಯ ಪ್ರತೀಕ[೪೬].

ಬೇಡರ ಕಣ್ಣಪ್ಪನ ಸ್ಮಾರಕವಾಗಿ ನೆಲೆ ನಿಂತಿರುವ ಮಹಾಕ್ಷೇತ್ರ ಕಾಳಹಸ್ತಿ ಮುಗ್ಧ ಕಣ್ಣಪ್ಪನ ಮೂಢ ಭಕ್ತಿಯನ್ನು ಇಂದಿಗೂ ಸಾರಿ ಹೇಳುತ್ತದೆ. ಮುಗ್ಧ ಕನ್ನಯ್ಯ ಮಳೆ ಬರುತ್ತಿರುವಾಗ ಲಿಂಗವು ನೆನೆಯುತ್ತಿದೆಯೆಲ್ಲ ಎಂದು ಚಿಂತೆ ಮಾಡಿ ಕಂಬಳಿ ಕೋರಿಯನ್ನು ತೆಗೆದು ಲಿಂಗಕ್ಕೆ ಹೊದಿಸಿ ಚಳಿಯಾಗದಂತೆ ಬಲವಾಗಿ ತಬ್ಬಿಕೊಂಡ, ಮಳೆಯು ನಿಂತಿತ್ತು. ಸ್ವಲ್ಪ ಹೊತ್ತಿನ ಮೇಲೆ ಕನ್ನಯ್ಯನು ನೋಡುತ್ತಿದ್ದಂತೆಯೇ ಲಿಂಗ ಎಡಗಣ್ಣಿನಿಂದ ನೀರು ಬಂದಿತು. ಈ ಮಳೆಯಿಂದಲೇ ಏನೋ ಆಯಿತ್ತೆಂದು, ವಸ್ತ್ರದಿಂದ ದೇವರ ಕಣ್ಣನ್ನು ಆತ ವರೆಸಿದ. ನೀರು ಸುರಿಯುವುದು ನಿಂತು ಅದರಿಂದ ರಕ್ತ ಹನಿಹನಿಯಾಗಿ ಬರತೊಡಗಿದಾಗ ಕನ್ನಯ್ಯನಿಗೆ ಗಾಬರಿಯಾಯಿತು. ಸ್ವಾಮಿಯ ಕಣ್ಣಿಗೆ ಬದಲಾಗಿ ತನ್ನ ಕಣ್ಣನ್ನು ಕೊಟ್ಟುಬಿಡುವೆ ಎಂದು ನಿರ್ಧರಿಸಿ, ಬೆನ್ನಿನ ಬತ್ತಳಿಕೆಯಿಂದ ಬಾಣ ತೆಗೆದು ಕನ್ನಯ್ಯನು ತನ್ನ ಎಡಗಣ್ಣನ್ನೂ ಮಿಟಿ ತೆಗೆದು ಲಿಂಗದ ಎಡಗಣ್ಣಿನ ಕಡೆಗೆ ಇಟ್ಟನು. ಹೀಗೆ ಮಾಡಿದ್ದರಿಂದ ದೇವರ ಎಡಗಣ್ಣಿನಿಂದ ರಕ್ತ ಸುರಿಯುವುದು ನಿಂತಿರಬಹುದೇ ಎಂದು ಕನ್ನಯ್ಯನು ಬಲಗಣ್ಣಿನಿಂದ ನೋಡಿದರೆ ಸ್ವಾಮಿಯ ಬಲಗಣ್ಣಿನಿಂದಲೂ ರಕ್ತ ಹರಿಯಲು ಆರಂಭವಾಯಿತು. ಆಗ ಕನ್ನಯ್ಯನು ದೃಢ ನಿರ್ಧಾರ ಮಾಡಿದವನಾಗಿ ತನ್ನ ಬಲಗಾಲಿನ ಹೆಬ್ಬೆರಳನ್ನು ಸ್ವಾಮಿಯ ಬಲಗಣ್ಣಿನ ಕಡೆಗಿಟ್ಟು ಅದೇ ಬಾಣದಿಂದ ತನ್ನ ಬಲಗಣ್ಣನ್ನು ಮೀಟಿ ಅಲ್ಲಿ ಇಟ್ಟುಬಿಟ್ಟ[೪೭].

ಬೇಡರ ವೃತ್ತಿ

ಬೇಡನಾಯಕರು ಹಿಂದಿನಿಂದಲೂ ಪಶುಪಾಲನೆ, ನಂತರ ಸೈನಿಕ ವೃತ್ತಿ ಮತ್ತು ತಳವಾರಿಕೆ ಮಾಡಿಕೊಂಡು ಬಂದಿದ್ದಾರೆ. ಈಗ ಆ ವೃತ್ತಿಗಳೆಲ್ಲವೂ ತಪ್ಪಿ ಅವರೆಲ್ಲರೂ ಬಹುಮಟ್ಟಿಗೆ ಸಣ್ಣ ಪ್ರಮಾಣದ ವ್ಯವಸಾಯದಲ್ಲಿ ತೊಡಗಿರುತ್ತಾರೆ. ಭೂಮಿಯಲ್ಲಿ ಬಾವಿ ತೊಡಿಸಿ, ಜೋಳ, ರಾಗಿ, ತೊಗರಿ, ಹುರಳಿ, ಸಜ್ಜೆ, ಅಲಸಂಧಿ, ನವಣೆ, ಎಳ್ಳು, ಸಾಸಿವೆ, ಅವರೆ, ಖುಷಬಿ, ಹತ್ತಿ, ಶೇಂಗಾ, ಕಬ್ಬು ಮುಂತಾದ ಆಹಾರ ಬೆಳೆ, ದ್ವಿದಳ ಧಾನ್ಯಗಳು ಮತ್ತು ವಾಣಿಜ್ಯ ಬೆಳೆಗಳನ್ನಲ್ಲದೆ, ಹೀರೆಕಾಯಿ, ಹಾಗಲಕಾಯಿ, ಮೆಣಸಿನಕಾಯಿ, ಕಲ್ಲಂಗಡಿ, ಇಂತಹ ತರಕಾರಿಗಳು ಬೆಳೆಗಳನ್ನು ತೆಗೆಯುವುದುಂಟು. ಕುರಿ ಮತ್ತು ಮೇಕೆ ಸಾಕಾಣಿಕೆಯಲ್ಲಿಯೂ ಬೇಡರು ನಿರತರಾಗಿರುತ್ತಾರೆ. ಒಂದು ಶ್ರೀಮಂತ ಕುಟುಂಬವು ೨,೦೦೦ದ ವರೆಗೆ ಕುರಿಗಳನ್ನು ಹೊಂದಿದರೆ, ಮತ್ತೊಂದು ಸಾಮಾನ್ಯ ಕುಟುಂಬವು ೧೦-೧೫ ರನ್ನಾದರೂ ಕುರಿಗಳನ್ನು ಹೊಂದಿರುತ್ತಾರೆ. ಬೇಡ ನಾಯಕರು

ಹಿಂದೆ ಅರಣ್ಯವಾಸಿಗಳಾಗಿದ್ದಾಗ, ಪಶುಪಾಲನೆಯನ್ನು ಮುಖ್ಯ ವೃತ್ತಿಯನ್ನಾಗಿ ಮಾಡಿಕೊಂಡಂತೆ, ಕುರಿ ಸಾಕಾಣಿಕೆಯನ್ನು ಸಹ ಇನ್ನೊಂದು ವೃತ್ತಿಯನ್ನಾಗಿ ಮಾಡಿಕೊಂಡು ಬಂದಿದ್ದಾರೆ.

ಅತಿ ಹೆಚ್ಚು ಸಂಖ್ಯೆಯಲ್ಲಿ ಕುರಿ ಸಾಕುವವರು ಅದರ ರಕ್ಷಣೆಗಾಗಿ ಆಳುಗಳನ್ನು ಇಟ್ಟುಕೊಂಡಿರುವವರಲ್ಲದೆ, ಸ್ವತಃ ತಾವೇ ಆಳಿನ ಜೊತೆಯಲ್ಲಿರುತ್ತಾರೆ. ಹೋದ ಕಡೆಯಲ್ಲಿ ಹೊಲ ಗದ್ದೆಗಳವರು ಯಾರಾದರೂ ಕುರಿ ಗೊಬ್ಬರವನ್ನು ಕೇಳಿದರೆ, ಇಡೀ ಮಂದಿಯನ್ನೇ ಅವರ ತೋಟದ ನಡುವೆ ಕೂಡಿಸಿಬಿಡುವರು. ಒಂದು ರಾತ್ರಿಯಲ್ಲಿ ಅವು ಹಾಕುವ ಹಿಕ್ಕಿ ಮತ್ತು ಗಂಜಲ ಭೂಮಿಗೆ ಉತ್ತಮ ಗೊಬ್ಬರವಾಗುತ್ತದೆ. ಹೀಗೆ ಕುರಿಗಳನ್ನು ಕೇಳಿದ ಕಡೆಯಲೆಲ್ಲ ಹಾಕಿಸುವುದು ಸಹ ಬೇಡರ ಒಂದು ಸಣ್ಣ ಸಂಪಾದನೆಯಾಗಿದೆ. ಬೇಡ ನಾಯಕರು ಹಿಂದಿನ ಶತಮಾನಗಳಲ್ಲಿ ಕುರಿ ಸಾಕಿದುದಕ್ಕಿಂತ ವ್ಯವಸಾಯ ಮಾಡಿದುದಕ್ಕಿಂತ ಕೇವಲ ಪಶುಪಾಲನೆ ಮಾಡಿದ್ದೆ ಹೆಚ್ಚು ಎಂಬುದನ್ನು ಈಗಲೂ ಸ್ಪಷ್ಟವಾಗಿರುವ ಸಂಗತಿ. ಇತ್ತೀಚಿನ ದಿನಗಳಲ್ಲಿ ಕುರಿ ಸಾಕಾಣಿಕೆಯನ್ನು ಜೀವನ ನಿರ್ವಹಣೆಗೆ ಒಂದು ಲಾಭದಾಯಕ ವೃತ್ತಿಯನ್ನಾಗಿ ಕೈಕೊಳ್ಳದೆ, ಪಶುಪಾಲನೆಯನ್ನು ಒಂದು ಧಾರ್ಮಿಕ ವೃತ್ತಿಯನ್ನಾಗಿ ಪರಿಗಣಿಸಿಕೊಂಡು ಬಂದಿರುವುದನ್ನು ನೋಡಬಹುದಾಗಿದೆ. ಆದರೆ ಸರಕಾರ ಪಶುಪಾಲನಾ ವೃತ್ತಿಯನ್ನು ಲಾಭದಾಯಕ ವೃತ್ತಿಯನ್ನಾಗಿ ಮಾಡಿಕೊಂಡು ಬರುವಂತೆ ಬೇಡ ಜನರಲ್ಲಿ ಪ್ರಯತ್ನ ಮಾಡಿರುತ್ತದೆ. ಈ ಪ್ರಯತ್ನ ಸಾಕಷ್ಟು ಯಶಸ್ವಿಯಾಗಿಲ್ಲ[೪೮].

ಇತ್ತೀಚಿನ ದಿನಗಳಲ್ಲಿ ಈ ಸಮುದಾಯದ ಕೆಲವು ಜನರು ಶಿಕ್ಷಣವನ್ನು ಹೊಂದಿ, ಕಚೇರಿಗಳಲ್ಲಿ ದುಡಿಯುತ್ತಿದ್ದಾರೆ. ಕೆಲ ವ್ಯಕ್ತಿಗಳು ಗಡಿ ರಕ್ಷಣಾ ಪಡೆಯನ್ನು ಸಹ ಸೇರಿರುತ್ತಾರೆ. ಇನ್ನೂ ಕೆಲವರು ಪೋಲಿಸರು ಮತ್ತು ಶಿಕ್ಷಕರಾಗಿರುತ್ತಾರೆ ಕೆಲವು ಕಡೆ ವ್ಯಾಪಾರಿಗಳಾಗಿಯೂ ಕಾರ್ಯ ನಿರ್ವಹಿಸುತ್ತಿದ್ದಾರೆ. ಇತ್ತೀಚಿಗೆ ಮೀಸಲಾತಿಯ ಲಾಭ ಪಡೆದು ಕೆಲವರು, ಗ್ರಾಮ ಪಂಚಾಯತ ಮತ್ತು ತಾಲೂಕಾ ಪಂಚಾಯತ ಸದಸ್ಯರಾಗಿರುತ್ತಾರೆ.

ವಸತಿ ವ್ಯವಸ್ಥೆ

ಒಂದು ಮ್ಯಾಸಬೇಡರ ಹಟ್ಟಿಯೆಂದರೆ ೫೦-೬೦ ಸಣ್ಣ ಸಣ್ಣ ಗುಡಿಸಲುಗಳ ಸಮೂಹವಾಗಿರುತ್ತದೆ. ಇವರ ಮನೆಗಳು ಸಣ್ಣವು ಇರುತ್ತವೆ. ಮನೆಯ ಒಳಗಡೆ ಗಾಳಿ ಬೆಳಕಿನ ವ್ಯವಸ್ಥೆ ಕಡಿಮೆ. ಮನೆಯ ಮೇಲೆ ಹಂಚು ಹೊದಿಸುವ ಅಭ್ಯಾಸವೂ ಇರುವುದಿಲ್ಲ. ಎಂಟು ಹತ್ತು ಅಡಿ ಎಬ್ಬಿಸಿದ ಗೋಡೆಯ ಮೇಲೆ ಈಚಲು,

ತೆಂಗು ಅಥವಾ ಇನ್ನಾವುದೇ ಮರದ ದಿಮ್ಮಿಗಳನ್ನು ಅಡ್ಡ ಹಾಸಿ ಅದರ ಮೇಲೆ ಅಪ್ಪರಿಕೆ, ಲಕ್ಕಿಬರಲು ಹಾಕಿ ಮಣ್ಣು ಮುಚ್ಚುವುದು. ಚೌಕಾಕಾರದ ಒಳ ಹಜಾರದಲ್ಲಿ ಅರ್ಧಭಾಗ ದನಕಟ್ಟುವ ಜಾಗವಾದರೆ ಇನ್ನರ್ಧ ಭಾಗ ವಾಸದ ಅನುಕೂಲಕ್ಕಾಗಿರುತ್ತದೆ. ಸಂಜೆಯಾದಲ್ಲಿ ದನಕರುಗಳೂ, ಜನಗಳೂ ಮನೆಯ ಒಳಭಾಗ ಸೇರಿ ದೊಡ್ಡದಾದ ಮುಂಬಾಗಿಲನ್ನು ಮುಚ್ಚಿದರೆ ಯಾವ ಕಡೆಯಿಂದಲೂ ಆ ಮನೆಗೆ ಪ್ರವೇಶ ಕಷ್ಟವೇ[೬೯].

ಬೇಡರ ಒಳಾಡಳಿತ ವ್ಯವಸ್ಥೆ

ಸಾಮಾನ್ಯವಾಗಿ ಊರ ಹೊರಗೆ ಹಟ್ಟಿ ಕಟ್ಟಿಕೊಂಡು ಜೀವನ ಸಾಗಿಸುವ ಬೇಡ ನಾಯಕರ ಬದುಕಿನ ಕ್ರಮ ಬುಡಕಟ್ಟಿನ ಎಲ್ಲ ಲಕ್ಷಣಗಳನ್ನು ಹೊಂದಿರುತ್ತದೆ. ಒಂದು ಹಟ್ಟಿಯಲ್ಲಿ ಎಲ್ಲ ಕುಟುಂಬಗಳೂ ಒಂದೇ ಎನ್ನುವಂತೆ ಇರುತ್ತವೆ. ಒಬ್ಬನಿಗೆ ಆದ ಗೌರವ, ಸನ್ಮಾನ ಅಥವಾ ಅವಮಾನ ಇಡೀ ಸಮೂಹಕ್ಕೆ ಆಯಿತೆಂಬಂತೆ ಭಾವಿಸುವುದುಂಟು. ಕುಟುಂಬದಲ್ಲಿಯು ಕೂಡ ಇದೇ ಒಗ್ಗಟ್ಟು ಸರ್ವೇ ಸಾಮಾನ್ಯವಾಗಿ ಕಂಡುಬರುತ್ತದೆ. ಮನೆಗೆ ಹಿರಿಯ-ತಂದೆಯೇ; ಪಿತೃಪ್ರಧಾನ ಕುಟುಂಬ ಇವರದು. ತಂದೆಯ ಆಸ್ತಿ ಹೋಗುವುದು ಗಂಡು ಮಕ್ಕಳಿಗೆ ಹೊರತು ಹೆಣ್ಣು ಮಕ್ಕಳಿಗಲ್ಲ.

ಬೇಡ ನಾಯಕ ಬುಡಕಟ್ಟಿನಲ್ಲಿ ಹೆಣ್ಣು ಮಕ್ಕಳನ್ನು ಪಡೆದವರು ಗಂಡನ್ನು ಹುಡುಕಿಕೊಂಡು ಹೋಗುವಂತಿಲ್ಲ. ಗಂಡಿನ ಕಡೆಯವರೆ ಹೆಣ್ಣುಗಳಿರುವ ಮನೆಯನ್ನು ಹುಡುಕಿಕೊಂಡು ಹೋಗುವುದು ಹೆಚ್ಚು[೭೦]. ಹಾಗೆ ಹೆಣ್ಣಿನ ಮನೆಗೆ ಹೋಗುವಾಗ ಅವರು ಒಸಗೆ ತೆಗೆದುಕೊಂಡು ಹೋಗುತ್ತಾರೆ. ಒಸಗೆ ಎಂದರೆ ಎಲೆ, ಅಡಿಕೆ, ಐದು ತೆಪ್ಪ ಬಾಳೆಹಣ್ಣು, ಐದು ಉತ್ತುತ್ತಿ, ಐದು ಕೊಬ್ಬರಿ, ಅರಿಷಿಣ ಕೊಂಬು, ಜೊತೆಗೆ ವಡಿ ಸಾಮಾನು, ಎರಡು ಕಾಯಿ ಮತ್ತು ಅಕ್ಕಿ. ಒಸಗೆ ಪುಟ್ಟಿಯನ್ನು ಗಂಡಿನವರು ತರುತ್ತಿದ್ದಂತೆಯೇ ಹೆಣ್ಣಿನ ಕಡೆಯ ಯಾರಾದರೂ ಆ ಪುಟ್ಟಿಯನ್ನು ಎತ್ತಿ ನೋಡುತ್ತಾರೆ. ಅದು ಭಾರದಲ್ಲಿ ಕಡಿಮೆಯಿದ್ದರೆ ಹೆಣ್ಣಿನವರಿಗೆ ಗಂಡಿನವರನ್ನು ಹಂಗಿಸುವ ಅಧಿಕಾರವಿರುತ್ತದೆ.

ಬೇಡ ನಾಯಕ ಸಮೂಹದಲ್ಲಿ ವರದಕ್ಷಿಣೆ ಪದ್ಧತಿ ಹೆಚ್ಚು ಕಡಿಮೆ ಇಲ್ಲ[೭೧]. ಬದಲಾಗಿ ಹೆಣ್ಣಿನವರಿಗೆ ಗಂಡಿನವರು ವಧುವಿನ ತೆರೆ ಕಟ್ಟಬೇಕು. ಈ ತೆರವೇನೂ ಹೆಚ್ಚಿರುವುದಿಲ್ಲ. ಹದಿನೈದು, ಮೂವತ್ತು, ಐವತ್ತು ರೂಪಾಯಿಗಳಷ್ಟಿರುತ್ತದೆ.

ಬೇಡ ನಾಯಕರು ಹೆಣ್ಣಿಗೆ ಕೊಟ್ಟಿರುವ ಅವಕಾಶ, ಸ್ಥಾನಮಾನಗಳು ವಿಶೇಷವಾದುದಾಗಿವೆ. ಹುಟ್ಟಿದ ಮಗು ಸಹಜವಾಗಿ ತಂದೆಯ ಕುಲಕ್ಕೆ ಸೇರುತ್ತದೆ. ಮುಂದುವರಿದ ಜಾತಿಯವರಾದ ಬ್ರಾಹ್ಮಣರು ಮತ್ತು

ಲಿಂಗಾಯತರು ಬೇಡರು ಹೆಣ್ಣಿಗೆ ಕೊಟ್ಟಿರುವ ಸ್ಥಾನಮಾನಗಳನ್ನು ತಮ್ಮ ಹೆಣ್ಣುಮಕ್ಕಳಿಗೆ ಕೊಟ್ಟಿಲ್ಲ. ಇದೊಂದು ಗಮನಾರ್ಹ ಸಂಗತಿಯಾಗಿದೆ.

ಮ್ಯಾಸಬೇಡರ ಕುಲಗಳು

ಬೇಡ ನಾಯಕರಲ್ಲಿ ಕುಲ ಪಂಗಡಗಳು ಬಹಳ. ತಮ್ಮ ಗುಂಪನ್ನು ಅವರು ಅನೇಕ ಬೆಡಗುಗಳನ್ನಾಗಿ ವಿಂಗಡಿಸಿಕೊಂಡಿದ್ದಾರೆ. ಆ ಒಂದೊಂದು ಬೆಡಗಿನ ಹುಟ್ಟಿಗೂ ಒಂದೊಂದು ಕಥೆಯಿರುವಂತೆ ತೋರುತ್ತದೆ. ಈ ಕಥೆಗಳು ನಿಜವಲ್ಲದಿದ್ದರೂ ಕಾಕತಾಳೀಯವಾಗಿ ಒಂದೊಂದು ಕುಲದ ಹೆಸರಿಗೂ ಹೊಂದಿಕೊಳ್ಳುತ್ತವೆ. ಕೆಲವು ಕುಲಗಳು ಅಣ್ಣತಮ್ಮಂದಿರ ಗುಂಪಿಗೆ ಸೇರಿದವು ಆಗಿರುವುದರಿಂದ ಆ ಗುಂಪುಗಳಲ್ಲಿ ಪರಸ್ಪರ ಹೆಣ್ಣು-ಗಂಡುಗಳ ಕೊಂಡು-ಕೊಳ್ಳುವಿಕೆಗಳು ಇರುವುದಿಲ್ಲ. ಹೆಣ್ಣು-ಗಂಡು ಸಂಬಂಧಕ್ಕೆ ಮ್ಯಾಸ ಬೇಡರು ತಮ್ಮ ತಮ್ಮಲ್ಲಿಯೇ ಬೇರೆ ಬೇರೆ ಬೆಡಗಿನವರನ್ನು ಹುಡುಕಿಕೊಂಡು ಹೋಗುತ್ತಾರೆ. ಸಾಮಾನ್ಯವಾಗಿ ಈ ಕುಲ ಅಥವಾ ಬೆಡಗುಗಳ ಕಲ್ಪನೆ ಬೇಡ ನಾಯಕರಂತೆಯೇ ಬೇರೆ ಬೇರೆಯ ಬುಡಕಟ್ಟುಗಳಲ್ಲಿಯೂ ಇದ್ದು, ಅಣ್ಣ-ತಮ್ಮಂದಿರು ಎನ್ನಿಸಿಕೊಳ್ಳುವ ಬೆಡಗುಗಳ ನಡುವೆ ವಿವಾಹ ಸಂಪರ್ಕ ಸಾಮಾನ್ಯವಾಗಿ ನಿಷೇಧವಾಗಿರುತ್ತದೆ.

ಮ್ಯಾಸಬೇಡರ ವಿವಿಧ ಹೆಸರಿನ ಕುಲಗಳು

ಸೂರ್ಯವಂಶದವರು

ಸೂರ್ಯವಂಶದಲ್ಲಿ ಮುಖ್ಯ ಬೆಡಗಾಗಿ ಬರುವವರು ಮಲ್ಲಿನಾಯಕರು. ಆ ಮಲ್ಲಿನಾಯಕರ ಪಂಗಡದಲ್ಲಿ ಉಪಬೆಡಗುಗಳು ಹೀಗೆ ಬರುತ್ತವೆ.

ಮಲ್ಲಿನಾಯಕರು:

೧. ವಡೇಲೋರು

೨. ಕಾಟಮಲ್ಲಿನಾಯಕನೋರು

೩. ಪದ್ದಾಳನಾಯಕನೋರು

೪. ಬಂಗಾರನೋರು

೫. ಓಬನಾಯಕನೋರು

೬. ಚಿನ್ನಕಾಟನೋರು

೭. ಪೇಯಿಲೋರು

೮. ಈಶ್ವರಲೋರು

೯. ಮೀಸಲೋರು

೧೦. ರಾಯಬಲ್ಲೋರು

೧೧. ಎನುಮಲೋರು

೧೨. ಪಲ್ಲೆವರು

ಈ ಮೇಲಿನ ಹನ್ನೆರಡು ಗುಂಪುಗಳೂ ಅಣ್ಣತಮ್ಮಂದಿರಾಗುವುದರಿಂದ ಇವರಲ್ಲಿ ಪರಸ್ಪರ ಕೊಳು ಕೊಡುಗೆ ಇಲ್ಲ.

ಮಲ್ಲಿನಾಯಕನ ಗುಂಪಿನಲ್ಲಿಯೇ ಇನ್ನೊಂದು ಗುಂಪು

ಯರಮಂಚಿನೋರದು:

೧. ಯರಮಂಚಿನಾಯಕರನವರು

೨. ಯರಗೋತ್ಲವರು

೩. ಯರಗಂಟ್ನಾಯಕ

೪. ಯರಗಾಟ್ಲವರು

೫. ವಡೇಲವರು

೬. ಸುರೇಪಾಕಲವರು

೭. ನಲಗೇತ್ಲವರು

೮. ಕದಿನವರು

೯. ಅಚ್ಚಪಲ್ಲೋರು

ಮೇಲಿನ ಒಂಭತ್ತು ಬೆಡಗಿನವರು ಅಣ್ಣತಮ್ಮಂದಿರು. ಕೊಳುಕೊಡುಗೆ ಸಂಬಂಧವಿರುವುದಿಲ್ಲ.

೧. ಎದ್ದಲವರು

೨. ಗುಡ್ಡದ ಎದ್ದಲವರು

೩. ಪೂವಲವರು

೪. ಪಟ್ಟೆಪಲ್ಲಲು

ಮೇಲಿನ ಎರಡು ಗುಂಪುಗಳು ಪರಸ್ಪರ ಅಣ್ಣತಮ್ಮಂದಿರವು. ಸಂಬಂಧವೇರ್ಪಡುವಂತಿಲ್ಲ.

ಚಂದ್ರವಂಶದ ಮಂದಲವರು

೧. ಕಾಮಗೇತಲವರು

೨. ಬುಲ್ಲಡಲು

೩. ಸಾಕೇಲವರು

೪. ಮಾಸೇಲೋರು

೫. ದ್ಯಾವರಲೋರು

೬. ಗಾದಪುಲೋರು

೭. ಬಿದ್ದಲೋರು

ಮೇಲೆ ಹೆಸರಿಸಿದ ಐದು ಬೆಡಗುಗಳು ಅಣ್ಣತಮ್ಮಂದಿರವು.

ಮಳೆಲೋರಲ್ಲಿ ಉಪಬೆಡಗುಗಳು

೧. ಕಾಲ್ವುಮಳೇಲೋರು

೨. ಮಾಕನಡುಕು ಮಳೇಲೋರು

೩. ಸೋಲುಮಳೇಲು

೪. ಮುದ್ಲಾಪುರ ಮಳೇಲು

೫. ಕವಲುಮಳೇಲು

೬. ಗುಡೇಕೋಟೆಮಳೇಲು

೭. ಚಿನಕುಮುತ್ತೀನಮಳೇಲು

ಮೇಲಿನ ಏಳು ಬೆಡಗುಗಳು ಅಣ್ಣತಮ್ಮಂದಿರವು.

ಬುಟಕಲೋರ ಉಪಬೆಡಗುಗಳು

೧. ಮಾರವ್ವ ಬುಟಕುಲು

೨. ಬೊಮ್ಮದೇವರ ಬುಟಕಲು

೩. ಮಾದೇಲಿಂಗನ ಬುಟಕಲು

೪. ನಲ್ಲೇದೇವರ ಬುಟಕಲು

೫. ಸಂಗೇವರ ಬುಟಕಲು

೬. ಸಿದ್ಧಪಲ್ಲಿ ಬುಟಕಲು

೭. ಕುರಿಹಟ್ಟಿ ಬುಟಕಲು

ಪಾಮುಡಲೋರ ಬೆಡಗುಗಳು

೧. ನಲ್ಲ ಪಾಮುಡಲೋರು

೨. ಪೂಜಾರಳ್ಳಿ ಪಾಮುಡಲೋರು

೩. ಯರ ಪಾಮುಡಲೋರು

೪. ಜರಕಡಲು

ಪಡ್ಲೆವರ ಬೆಡಗುಗಳು

೧. ತಾಯ್ತೋಣಿ ಪಡ್ಲೆವರು

೨. ಕೋನಸಾಗರ ಪಡ್ಲೆವರು

ಮೇಲಿನವಲ್ಲದೆ ಚಂದ್ರವಂಶಮಂದಲದವರ ಗುಂಪಿನಲ್ಲಿ ಕಂಡು ಬರುವ ಇನ್ನಿತರ ಉಪಬೆಡಗುಗಳು ಈ ಕೆಳಗಿನಂತಿವೆ:

೧. ಗೊಡಗುದಾಸರು

೨. ಮುಂಡಾಸುದಾಸರು

೩. ಬೋಡದಾಸರು

೪. ಗಗ್ರಿದಾಸರು

೫. ದಡ್ಡಿದಾಸರು

೬. ಮಚ್ಚೆಲೋರು

೭. ಕರಿನೋರು

೮. ಸುರೇಪಾಕಲು

೯. ಬೋಡಿಪಾಲಲು

೧೦. ಬದ್ದಲೋರು

೧೧. ಜಾಗನೋರು

೧೨. ಜನ್ನೆನೋರು

೧೩. ಅಜ್ಜಡಲೋರು

೧೪. ಜಗಗಡ್ಲೋರು

೧೫. ಬೋಸೆಲೋರು

೧೬. ಗಟ್ಟಿಮತ್ತೆಲೋರು

೧೭. ಮಾಸೇಲೋರು

೧೮. ಮುದಿಗೊಡ್ಲವರು

೧೯. ಬಿಜ್ಜಡಲು

೨೦. ಅಲಕೇರು

ಮೇಲೆ ಹೇಳಿದ ಬೇಡ ನಾಯಕರ ಕುಲಗಳನ್ನು ಗಮನಿಸಿದರೆ, ಬಹುಪಾಲು ಕುಲಗಳು ಪ್ರಾಣಿಗಳ ಹೆಸರಿನಲ್ಲಿ ಬರುತ್ತವೆ ಮತ್ತು ಇವುಗಳು ತೆಲುಗಿನಲ್ಲಿವೆ. ಇವು ಬುಡಕಟ್ಟಿನ ಕುಲ ಲಕ್ಷಣಗಳೇ ಆಗಿವೆ.

ಕಟ್ಟೆಮನೆ ನ್ಯಾಯ ತೀರ್ಮಾನಗಳು

ಬೇಡನಾಯಕರು ತಮ್ಮ ನಡುವಣ ಯಾವುದೇ ರೀತಿಯ ಜಗಳ, ವ್ಯಾಜ್ಯ, ನ್ಯಾಯಗಳನ್ನು ಇತರ ಬುಡಕಟ್ಟುಗಳಂತೆ ಅವರೇ ತೀರ್ಮಾನಿಸಿಕೊಳ್ಳುತ್ತಾರೆ. ಬುಡಕಟ್ಟು ಜನಾಂಗದವರು ಯಾರೇ ಆಗಲಿ ಅವರಿಗೆ ಒಗ್ಗಟ್ಟು ಅತ್ಯವಶ್ಯಕವಾಗಿತ್ತು. ಆದಿಮಾನವ ಸಮೂಹ ಗುಂಪು ಗುಂಪಾಗಿ ಬದುಕುತ್ತಿದ್ದಾಗ ಅವರಿಗೆ ಬೇರೊಂದು ಸಂಗತಿಯ ಭಯ ಇದ್ದೇ ಇರುತ್ತಿತ್ತು. ಆ ಭಯ ಪ್ರಾಣಿ ಸಮೂಹದಿಂದ, ಬೆಂಕಿ ಅಥವಾ ನೀರಿನಿಂದ ಇದ್ದಿರಬಹುದು. ಇದು ಬಿಟ್ಟರೆ ಇನ್ನೊಂದು ಬುಡಕಟ್ಟಿನವರೊಂದಿಗೆ ಬೇಟೆಯ ವಿಷಯದಲ್ಲಿಯೋ ಹೆಣ್ಣಿನ ವಿಷಯದಲ್ಲಿಯೋ ವೈಮನಸ್ಸು ಬಂದು ಹೊಡೆದಾಡುವ ಸಂದರ್ಭವಿರುತ್ತಿತ್ತು. ಇದಕ್ಕಾಗಿ ಒಂದೊಂದು ಬುಡಕಟ್ಟೂ ಸಾಕಷ್ಟು ಬಲಯುತವಾಗಿರಬೇಕಾಗುತ್ತಿತ್ತು. ಈ ಬಲ ಬರುತ್ತಿದ್ದುದು ಒಗ್ಗಟ್ಟಿನಿಂದಲೇ. ಈ ಒಗ್ಗಟ್ಟು ಬರುತ್ತಿದ್ದುದು ಸೌಹಾರ್ದತೆಯಿಂದ ಕೂಡ. ಒಂದು ವೇಳೆ ಬುಡಕಟ್ಟಿನ ಯಾವುದಾದರೂ ಮನೆತನದಲ್ಲಿ ಜಗಳ, ವ್ಯಾಜ್ಯವಾದರೆ ಅದು ಗುಂಪಿನಿಂದ ಹೊರಗೆ ಹೋಗುವಂತಿಲ್ಲ. ಅಲ್ಲೇ ತೀರ್ಮಾನವಾಗಿ ಬಿಡಬೇಕು. ಎಷ್ಟೇ ದೊಡ್ಡ ಜಗಳ ವ್ಯಾಜ್ಯವಾದರೂ, ಬೇರೆಲ್ಲೋ ಇದ್ದಿರಬಹುದಾದ ಅದೇ ಬುಡಕಟ್ಟಿನ ಯಜಮಾನರುಗಳಿಂದ ಆ ವ್ಯಾಜ್ಯ ತೀರ್ಮಾನವಾಗಲೇಬೇಕಿತ್ತು. ಅಲ್ಲದೆ ಬುಡಕಟ್ಟಿನ ಎಲ್ಲ ಸದಸ್ಯರೂ ಪಂಚಾಯ್ತಿ ದೈವದವರ ತೀರ್ಮಾನಗಳಿಗೆ ತಲೆಬಾಗಲೇಬೇಕಿತ್ತು. ಈ ನ್ಯಾಯವ್ಯವಸ್ಥೆ ಹೀಗೆ ಬುಡಕಟ್ಟುಗಳಲ್ಲಿ ಬಿಗಿ ಇದ್ದುದರಿಂದಲೇ ಒಂದೊಂದು ಹಟ್ಟಿ ಅಥವಾ ಗುಂಪುಗಳಲ್ಲಿ ಯಾವುದೇ ಜಗಳ, ಕದನ, ವೈಮನಸ್ಸು ಏರ್ಪಡುತ್ತಿದ್ದುದಕ್ಕೆ ಅವಕಾಶವಿರಲಿಲ್ಲ. ಇದಕ್ಕೆ ಬಲವಾಗಿ ಪ್ರತಿಯೊಂದು ಹಟ್ಟಿಯ ಜನಗಳ ನಡುವೆ ಹೆಚ್ಚು ಸೌಹಾರ್ದಯುತ ವಾತಾವರಣವಿರುವುದಕ್ಕೆ ಹೆಚ್ಚು ಸಹಾಯಕಾರಿಯಾಗುತ್ತಿತ್ತು. ಆದುದರಿಂದಲೇ ಇವತ್ತಿಗೂ ಯಾವುದಾದರು ಬುಡಕಟ್ಟಿಗೂ ಭೇಟಿಕೊಟ್ಟರೆ ಅಲ್ಲಿಯ ಎಲ್ಲ ಜನವೂ ಪರಸ್ಪರರನ್ನು ಅಣ್ಣನೆಂತಲೋ, ತಮ್ಮನೆಂತಲೋ, ದೊಡ್ಡಪ್ಪನೆಂತಲೋ, ಚಿಕ್ಕಪ್ಪನೆಂತಲೋ, ಅಜ್ಜನೆಂತಲೋ ಕರೆಯುವುದನ್ನು ನೋಡುತ್ತೇವೆ.

ಹೀಗೆ ಇಂಥ ಸಂಬಂಧದಿಂದ ಬುಡಕಟ್ಟು ಬಲಯುತವಾಗಿದ್ದರೂ ಆಗಾಗ್ಗೆ ಅಲ್ಲಿಯೂ ಪರಸ್ಪರ ಜಗಳ ಕಾದಾಟಗಳು ನಡೆಯುತ್ತಿದ್ದವು. ಜಗಳ ಸಣ್ಣ ಪುಟ್ಟವಾದರೆ ಆಯಾ ಹಟ್ಟಿಯ ಯಜಮಾನ ನಾಯಕನೇ ಪರಿಹರಿಸುತ್ತಾನೆ. ವ್ಯಾಜ್ಯ ದೊಡ್ಡ ಸ್ವರೂಪದ್ದಾದರೆ ಅದು ಕಟ್ಟೆಮನೆಗಳಿಗೆ ಹೋಗಬೇಕು. ಈ ಕಟ್ಟೆಮನೆಗಳು ಆರೇಳು ಹಟ್ಟಿಗಳಿಗೆ ಒಂದರಂತೆ ಇರುತ್ತಿದ್ದವು ಎಂದು ಕಾಣಿಸುತ್ತದೆ. ಇವು ಮುಖ್ಯವಾಗಿ ನ್ಯಾಯನಡೆಯುವ ಸ್ಥಳಗಳೇ ಆಗಿರುತ್ತಿದ್ದವು. ಅಲ್ಲಿ ನ್ಯಾಯ ತೀರ್ಮಾನಕ್ಕಾಗಿಯೇ ಬುಡಕಟ್ಟಿನ ಸದಸ್ಯರಿಂದ ನಿಯಮಿಸಲ್ಪಟ್ಟ ಗೌರವಿಸಲ್ಪಟ್ಟ ಯಜಮಾನರುಗಳಿರುತ್ತಿದ್ದರು. ಈ ಕಟ್ಟೆಮನೆಗಳು ಸಾಮಾನ್ಯವಾಗಿ ದೇವರುಗಳು ನೆಲೆಸಿದ ಗುಡಿಸಿಲ ಗುಡಿಯ ಮುಂಭಾಗದಲ್ಲಿರುತ್ತವೆ. ಒಂದು ದೊಡ್ಡ ಜಗುಲಿಯ ನಿರ್ಮಾಣವಾಗಿದ್ದು, ಅದರ ಮೇಲೆ ನೆರಳು ಕೊಡುವ ಮರಗಳಿರಬಹುದು. ಅಪರಾಧಿಗಳಿಗೆ ಒಂದು ವೇಳೆ ಕಟ್ಟೆಮನೆಯಲ್ಲಿ ಯಾರ ಭಯ ಇಲ್ಲದಿದ್ದರೂ ದೇವರ ಭಯ ಇದ್ದೇ ಇರುತ್ತಿತ್ತು. ಅಲ್ಲದೆ ನ್ಯಾಯ ಆರಂಭವಾಗುತ್ತಿದ್ದುದೂ ಕೂಡ ಸೂರ್ಯಚಂದ್ರರ ಹೆಸರಿನಿಂದಲೇ. ಬೇಡನಾಯಕರ ಕುಲದೇವತೆ ಮೊದಲೇ ಹೇಳಿದಂತೆ ಸೂರ್ಯ. ಗುಡಿಸಲೊಳಗಿನ ದೇವತೆಯು ಮುಂದೆ ಒಂದು ವೇಳೆ ಸುಳ್ಳು ಹೇಳಿದರೂ ಮೇಲೆ ಕಣ್ಣಿಗೆ ಕಂಡಂತೆ ಉರಿಯುತ್ತಿರುವ ಸೂರ್ಯನ ಮೇಲಂತೂ ಆಣೆಯಿಟ್ಟು ಸುಳ್ಳು ಹೇಳುವಂತಿರಲಿಲ್ಲ. ಹಾಗೆ ಸೂರ್ಯನನ್ನು ನೋಡಿ ಸುಳ್ಳು ಹೇಳಿದರೆ ಕುಲನಾಶವಾಗುವ ಸಾಧ್ಯತೆ ಬಹಳ ಇರುತ್ತಿತ್ತೆಂದೂ ಹಿರಿಯ ಬೇಡನಾಯಕ ವಕ್ತೃಗಳು ತಮ್ಮ ಬುಡಕಟ್ಟಿನ ನ್ಯಾಯ ಸಂಬಂಧದ ವಿವರಗಳನ್ನು ಕುರಿತು ನನಗೆ ಹೇಳಿರುತ್ತಾರೆ. ಹೀಗೆಯೇ ಹಿಂದಿನ ಕಾಲಕ್ಕೆ ಶಿಷ್ಟ ಸಮಾಜವಾದರೂ ಸಹ ಬುಡಕಟ್ಟಿನವರಂತೆ ತಮ್ಮ ಊರು ಪಟ್ಟಣಗಳೊಳಗಿನ ದೇವಾಲಯಗಳ ರಂಗಮಂಟಪಗಳನ್ನೇ ತಮ್ಮ ವ್ಯಾಜ್ಯ ತೀರ್ಮಾನಗಳಿಗಾಗಿ ಬಳಸಿಕೊಳ್ಳುತ್ತಿದ್ದರು.

ಚಿತ್ರದುರ್ಗ ಜಿಲ್ಲೆಯಲ್ಲಿ ವಾಸಿಸುವ ಮ್ಯಾಸಬೇಡರ ನಾಯಕರಿಗೆ ಹನ್ನೆರಡು ಕಟ್ಟೆಮನೆಗಳು ಮುಖ್ಯವಾದವು ಆಗಿವೆ. ಇವುಗಳು ಕ್ರಮವಾಗಿ ಕೆಳಗಿನಂತಿವೆ.

೧. ಗೋನೂರು - ಚಿತ್ರದುರ್ಗ ತಾಲ್ಲೂಕು

೨. ಕಾಮಗೇತನಹಳ್ಳಿ - ಜಗಳೂರು ತಾಲ್ಲೂಕು

೩. ಹಿರೇಹಳ್ಳಿ - ಚಳ್ಳಕೆರೆ ತಾಲ್ಲೂಕು

೪. ಅಡವಿಮಾರೇನಹಳ್ಳಿ - ಚಳ್ಳಕೆರೆ ತಾಲ್ಲೂಕು

೫. ಓಬೇನಳ್ಳಿ - ಚಳ್ಳಕೆರೆ ತಾಲ್ಲೂಕು

೬. ಮಲುವರಳ್ಳಿ - ಚಳ್ಳಕೆರೆ ತಾಲ್ಲೂಕು

೭. ಕೋನಸಾಗರ - ಮೊಳಕಲ್ಮೂರು ತಾಲ್ಲೂಕು

೮. ತಾಳೀಕೆರೆ - ಮಡಕಶಿರಾ ತಾಲ್ಲೂಕು, ಅನಂತಪುರ ಜಿಲ್ಲೆ, ಆಂಧ್ರಪ್ರದೇಶ.

೯. ಮುತ್ತಿಗಾರಳ್ಳಿ - ಮೊಳಕಾಲ್ಮೂರು ತಾಲ್ಲೂಕು

೧೦. ನಾಯಕನಹಟ್ಟಿ - ಚಳ್ಳಕೆರೆ ತಾಲ್ಲೂಕು

೧೧. ಹಿರೇಮಲ್ಲನ ಹೊಳೆ - ಚಳ್ಳಕೆರೆ ತಾಲ್ಲೂಕು

೧೨. ನನ್ನಿವಾಳ - ಚಳ್ಳಕೆರೆ ತಾಲ್ಲೂಕು.

ವಾರ್ಷಿಕ ಹಬ್ಬ ಆಚರಣೆಗಳು

ಅರಣ್ಯವೇ ಮನೆಗಳಾಗಿದ್ದ ಮ್ಯಾಸಬೇಡರಿಗೆ ಹಬ್ಬ ಹರಿದಿನಗಳು ಅಷ್ಟೊಂದು ಪ್ರಮುಖವಾಗಿ ಇರುವುದಿಲ್ಲ. ಒಂದೊಂದು ಹಟ್ಟಿಯವರು ಆಚರಿಸುವ ಊರೊಟ್ಟಿನ ಹಬ್ಬಕ್ಕಿಂತ ಅವರ ಜನಾಂಗದ ದೇವತೆಗಳ ಹೆಸರಿನಲ್ಲಿ ಆಚರಿಸುವ ಜಾತ್ರೆಗಳೇ ಅವರಿಗೆ ಹಬ್ಬದಂತೆ. ಹೀಗಾಗಿ ಅಲೆಮಾರಿಗಳಾಗಿದ್ದು ಅವರಲ್ಲಿ ದೀಪಾವಳಿ, ಯುಗಾದಿ, ವಿನಾಯಕ ಚೌತಿ ಇಂಥ ಹಬ್ಬಗಳ, ಆಚರಿಸಲ್ಪಡುತ್ತಿರಲಿಲ್ಲ ಎಂದು ಏಕ್ತ್ರಗಳಿಂದ ತಿಳಿದುಬರುತ್ತದೆ. ಹಟ್ಟಿಯೊಳಗಿನ ಬೇಡ ನಾಯಕರು ಗ್ರಾಮ ಪಟ್ಟಣಗಳ ನಾಗರೀಕತೆಯಿಂದಾಗಿ ಎಲ್ಲ ಪಂಗಡದವರು ಆಚರಿಸುವ ಹಬ್ಬಗಳನ್ನೇ ಅಭ್ಯಾಸ ಮಾಡಿಕೊಂಡಿದ್ದಾರೆ.

ಧಾರ್ಮಿಕ ಆಚರಣೆಗಳು ಮತ್ತು ದೇವರುಗಳು

ಮ್ಯಾಸಬೇಡರ ದೇವತೆಗಳ ಸಂಖ್ಯೆ ಪ್ರಮುಖವಾಗಿ ೧೨ ಆಗಿವೆ. ಈ ಹನ್ನೆರಡೂ ದೇವತೆಗಳನ್ನು ಇವರು ಪೆಟ್ಟಿಗೆ ದೇವತೆಗಳೆಂದು ಕರೆಯುತ್ತಾರೆ. ಈ ಪೆಟ್ಟಿಗೆಗಳು ಒಂದು ಅಡಿ ಉದ್ದ, ಅರ್ಧ ಅಡಿ ಅಗಲವಾಗಿದ್ದು ಅವುಗಳಲ್ಲಿ ಎರಡೆರಡು ಸಾಲಿಗ್ರಾಮಗಳಿರುತ್ತವೆ. ಮ್ಯಾಸಬೇಡರು ಈಗೀಗ ಹಟ್ಟಿಗಳಲ್ಲಿ ನೆಲೆನಿಂತು ವಾಸಮಾಡುವರಾಗಿದ್ದಾರೆ ಆದರೆ, ಅವರು ಪಶುಪಾಲಕರಾಗಿದ್ದ ಕಾಲಕ್ಕೆ ಅಡವಿಗಳಲ್ಲಿ ಪಶುಮಂದೆಗಾಗಿ ಹುಲ್ಲು, ನೀರು ಹುಡುಕಿಕೊಂಡು ಒಂದು ಕಡೆಯಿಂದ ಇನ್ನೊಂದು ಕಡೆಗೆ ನಿರಂತರವಾಗಿ ಸುತ್ತುತ್ತಲೇ ಇದ್ದರು. ಹಾಗೆ ಅಲೆದಾಡುವಾಗ ದೇವರ ಪೆಟ್ಟಿಗೆಗಳನ್ನೆಲ್ಲ, ತಾವು ವಾಸಮಾಡುತ್ತಿದ್ದ ಸಣ್ಣ ಪ್ರಮಾಣದ ಗುಡಿಸಲನ್ನು ಹೊತ್ತುಕೊಂಡು ಹೋಗುತ್ತಿದ್ದುದಾಗಿ ಅವರ ಬುಡಕಟ್ಟಿನ ಹಿರಿಯ ವ್ಯಕ್ತಿಗಳು ತಿಳಿಸುತ್ತಾರೆ. ಇದರಿಂದಾಗಿಯೇ ಬೇಡರು ಸಂಚಾರಕ್ಕೆ ಅನುಕೂಲವಾಗಲೆಂದು ಪೆಟ್ಟಿಗೆ ದೇವರುಗಳನ್ನು ಮಾಡಿಕೊಂಡರು.

ಮ್ಯಾಸಬೇಡರ ಹನ್ನೆರಡು ದೇವತೆಗಳು ಹೀಗೆ ಬರುತ್ತವೆ.

೧. ಮಾಕನಡುಕು ಓಬಳದೇವರು

ಮಾಕನಡುಕು, ಕೂಡ್ಲಿಗಿ ತಾಲ್ಲೂಕು, ಬಳ್ಳಾರಿ ಜಿಲ್ಲೆ.

೨. ಗೆದ್ದಲಗಟ್ಟೆ ಓಬಳದೇವರು

ಗೆದ್ದಲಗಟ್ಟೆ, ಕೂಡ್ಲಿಗಿ ತಾಲ್ಲೂಕು, ಬಳ್ಳಾರಿ ಜಿಲ್ಲೆ.

೩. ನಲ್ಲಜರುಗು ಓಬಳದೇವರು

ರುದ್ರಮ್ಮನಹಳ್ಳಿ, ಚಳ್ಳಕೆರೆ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ.

೪. ಗಾದ್ರಿಪಾಲನಾಯಕ ದೇವರು

ಬೊಮ್ಮಗೊಂಡನಕೆರೆ, ಮೊಳಕಾಲ್ಮೂರು, ಚಿತ್ರದುರ್ಗ ಜಿಲ್ಲೆ.

೫. ಸೂರಲಿಂಗೇಶ್ವರ ದೇವರು

ಕಾಮಗೇತನಹಳ್ಳಿ, ಜಗಳೂರು ತಾಲ್ಲೂಕು, ಚಿತ್ರದುರ್ಗ ಜಿಲ್ಲೆ.

೬. ರಾಜಲದೇವರು

ಮಲುವರಳ್ಳಿ, ಚಳ್ಳಕೆರೆ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ.

೭. ಬೋಸೇದೇವರು

ಬೋರೇದೇವರಹಟ್ಟಿ, ಚಳ್ಳಕೆರೆ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ.

೮. ಬೋಸೇದೇವರು

ಬೋರೇದೇವರಹಟ್ಟಿ, ಚಳ್ಳಕೆರೆ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ.

೯. ಚಿಂತಲಗುಟ್ಟ ಬೋರುವ

ಚಿಂತಲಗುಟ್ಟ, ಚಿತ್ರದುರ್ಗ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ.

೧೦.ಬಂಜಗೆರೆ ಓಬಳದೇವರು

ಥಳಕು, ಚಳ್ಳಕೆರೆ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ.

೧೧.ಕುರಿಹಟ್ಟಿ ಬೊಮ್ಮದೇವರು

ಕುರಿಹಟ್ಟಿ, ಕೂಡ್ಲಿಗಿ ತಾಲ್ಲೂಕು, ಬಳ್ಳಾರಿ ಜಿಲ್ಲೆ.

೧೨.ದಡ್ಡಿ ಸೂರನಾಯಕ

ಹಿರೇಹಳ್ಳಿ, ಚಳ್ಳಕೆರೆ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ.

ಮ್ಯಾಸಬೇಡರಲ್ಲಿ ಸ್ತ್ರೀ ರೂಪ ದೇವತೆಗಳಾದ ಆರಾಧನೆ ಕಡಿಮೆ ಅವರು ಪೂಜಿಸುವುದು ದೇವರಲ್ಲಿ ಮಾರಮ್ಮನವರು ಮಾತ್ರ. ಒಬ್ಬ ವೈಷ್ಣವ ದೇವತೆ, ಒಬ್ಬ ವೀರ ಇವರಿಬ್ಬರ ಹೆಸರಿನಲ್ಲಿ ಬೇಡ ನಾಯಕರು ಎರಡು ಮುಖ್ಯ ಜಾತ್ರೆಗಳನ್ನು ಆಚರಿಸುವರು. ಈ ಎರಡು ಜಾತ್ರೆಗಳು ಅರಣ್ಯ ಪ್ರದೇಶದಲ್ಲಿ ನಡೆಯುತ್ತವೆ ಇವರು ಈ ಜಾತ್ರೆಗಳನ್ನು ಅರಣ್ಯದಲ್ಲಿ ನಡೆಸುವ ಉದ್ದೇಶ, ಪ್ರಾಚೀನ ಕಾಲದಿಂದಲೂ ಇವರು ಅರಣ್ಯ ಸಂಚಾರಿಗಳಾಗಿಯೇ ಬದುಕಿಕೊಂಡು ಬಂದುದಾಗಿದೆ. ಆದರೆ, ಈಗ ಅವರು ಜಾತ್ರೆ ನಡೆಸುವ ಸ್ಥಳಗಳಲ್ಲಿ ಅರಣ್ಯಗಳು ಉಳಿದಿಲ್ಲ. ಜಾತ್ರೆಯಲ್ಲಿ ಒಂದು ಮುಖ್ಯ ಆಕರ್ಷಣೆ ಎಂದರೆ, ದಾಸರಿ ಬೆಡಗಿನ ಜನ ಬೆಂಕಿ ಹೊತ್ತಿದ ಪಂಜುಗಳನ್ನು ಬಾಯಲ್ಲಿ ನುಂಗಿ ಆರಿಸುವುದಾಗಿದೆ.

ಹಬ್ಬಗಳು

ಅರಣ್ಯ ವಾಸಿಗಳಾಗಿದ್ದ ಮ್ಯಾಸಬೇಡರಿಗೆ ಹಬ್ಬ ಹರಿದಿನಗಳು ಅಷ್ಟು ಪ್ರಮುಖವಾಗಿ ಕಾಣಿಸಿಲ್ಲ. ಒಂದೊಂದು ಹಟ್ಟಿಯವರು ಆಚರಿಸುವ ಒಟ್ಟು ಊರಿನ ಹಬ್ಬಕ್ಕಿಂತ, ಅವರ ಸಮುದಾಯದ ದೇವತೆಗಳ ಹೆಸರಿನಲ್ಲಿ ಆಚರಿಸುವ ಜಾತ್ರೆಗಳೇ ಅವರಿಗೆ ಹಬ್ಬವಾಗಿರುತ್ತವೆ. ಹೀಗಾಗಿ ಅಲೆಮಾರಿಗಳಾಗಿದ್ದ ಮ್ಯಾಸಬೇಡರರಲ್ಲಿ ವಿನಾಯಕಚೌತಿ, ಯುಗಾದಿ ಮುಂತಾದ ಹಬ್ಬಗಳು ಆಚರಿಸಲ್ಪಡುತ್ತಿಲ್ಲ, ಎಂದು ವಕ್ತಗಳಿಂದ ತಿಳಿದುಬರುತ್ತದೆ. ಇತ್ತೀಚಿಗೆ ಹಟ್ಟಿಯೊಳಗಿನ ಬೇಡ ನಾಯಕರು ಗ್ರಾಮ ಪಟ್ಟಣಗಳ ನಾಗರೀಕತೆಯಿಂದಾಗಿ ಎಲ್ಲ ಜಾತಿಯವರು ಆಚರಿಸುವ ಹಬ್ಬಗಳನ್ನೇ ತಾವು ಆಚರಿಸುತ್ತಿದ್ದರು. ಈ ವಿಷಯ ಏನೆವಿರಲಿ, ಹಿಂದಿನ ದಿನಗಳಲ್ಲಿ ಮ್ಯಾಸಬೇಡರಿಗೆ (೧) ಮುಂಗಾರಿ ಹಬ್ಬ, (೨) ಹಿರಿಯರ ಹಬ್ಬ ಮತ್ತು (೩) ನಾಗಪ್ಪನ ಪೂಜೆ ಇವು ಮುಖ್ಯವಾಗಿದ್ದವಂತೆ ಎಂದು ಆ ಸಮುದಾಯದ ಕೆಲವು ಹಿರಿಯ ವಕ್ತಗಳು ಹೇಳುತ್ತಾರೆ.

ಸುಗ್ಗಿಯ ಆಚರಣೆ

ಹೊಸ ಧಾನ್ಯ ಬಂದ ಸಂದರ್ಭದಲ್ಲಿ ಜಗಳೂರಿನ ಬೇಡ ನಾಯಕರು ಹಬ್ಬವನ್ನು ಕೆರೆಯ ದಂಡೆಯಲ್ಲಿ ಇರುವ ಪಾಪನಾಯಕನ ಗುಡಿಯಲ್ಲಿ ನೆರವೇರಿಸುವರು. ಫೆಬ್ರುವರಿ ತಿಂಗಳ ಹುಣ್ಣಿಮೆಯಂದು ಪ್ರತಿ ವರ್ಷ ಈ ಹಬ್ಬ ನಡೆಯುತ್ತದೆ. ಇದು ರಾತ್ರಿಯಲ್ಲಿ ನಡೆಯುವ ಹಬ್ಬ. ಹಗಲೆಲ್ಲ ಗುಡಿಯಲ್ಲಿ ಯಾವ ಚಟುವಟಿಕೆಯೂ ಇರುವುದಿಲ್ಲ. ಮೂರು-ನಾಲ್ಕು ಜನ ಹೆಂಗಸರು ಗುಡಿಯ ಹೊರ ಮತ್ತು ಒಳ ಅಂಗಳವನ್ನು ಸಾರಿಸಿ ಶುದ್ಧ ಮಾಡಿ ರಂಗೋಲಿ ಇಡುತ್ತಿರುವುದು ಮಾತ್ರ ಹಗಲು ಕೆಲಸವಿರುತ್ತದೆ. ರಾತ್ರಿಯಲ್ಲಿ ಗುಡಿಯ ಒಳಭಾಗದ ಅಂಗಳದಲ್ಲಿ ಹೆಂಗಸರು ಮತ್ತು ಗಂಡಸರು ಸೇರಿಕೊಂಡು ಒಲೆಯ ಕಲ್ಲು ಜೋಡಿಸಿ ಮೇಲೆ ದೊಡ್ಡ ದೊಡ್ಡ ಮಡಕೆ ಇಟ್ಟು ಹುರುಳಿ ಜೋಳವನ್ನು ಹಾಕಿ ಬೇಯಲು ಬಿಡುವರು. ರಾತ್ರಿ ಎರಡು

ಗಂಟೆಯಾದಂತೆಯೇ ಹಬ್ಬದ ಸಡಗರ ಸ್ವಲ್ಪ ಪ್ರಾರಂಭವಾಗಿ ಇಡೀ ರಾತ್ರಿ ಈ ಸಡಗರ ಮುಂದುವರೆಯುವುದು.

ಕ್ರೀಡೆಗಳು

ಪಶುಪಾಲನೆಯನ್ನು ಮತ್ತು ಬೇಟೆಯನ್ನು ಮುಖ್ಯ ವೃತ್ತಿಯನ್ನಾಗಿಸಿಕೊಂಡಿದ್ದ ಬೇಡ ನಾಯಕರು ಈಗಲೂ ತಮ್ಮ ದೇವತೆಗಳ ಮುಖ್ಯ ಉತ್ಸವಗಳು ಮುಗಿದ ಬಳಿಕ ಬೇಟೆಯಾಡುವ ಸಂಪ್ರದಾಯವನ್ನು ಇರಿಸಿಕೊಂಡಿದ್ದಾರೆ. ಹಿಂದೆ ಅರಣ್ಯವು ಸಮೃದ್ಧವಾಗಿದ್ದಾಗ ಅವರುಗಳು ಜಿಂಕೆ, ಸಾರಂಗ, ಹಂದಿ ಮುಂತಾದ ಪ್ರಾಣಿಗಳನ್ನು ಬೇಟೆಯಾಡಿ ಹೊತ್ತು ತರುತ್ತಿದ್ದರು. ಈಗ ಅರಣ್ಯ ನಾಶವಾಗಿರುವುದರಿಂದ ಅಲ್ಲೊಂದು ಇಲ್ಲೊಂದು ಮೊಲವನ್ನು ಬಿಟ್ಟರೆ ಬೇಡರಿಗೆ ಬೇಟೆಯಾಡಲು ಯಾವ ಪ್ರಾಣಿಯೂ ಇರುವುದಿಲ್ಲ. ಬೇಟೆಯಾಡಿ ಬಂದವರಿಗೆ ಹೆಂಗಸರು ಆರತಿಯನ್ನು ಎತ್ತಿ ಸ್ವಾಗತಿಸುವರು.

ಬೇಡ ನಾಯಕರು ಮತ್ತು ಕಾಡುಗೊಲ್ಲರ ಕೆಲವು ಕುಲಗಳವರು ಮಾಟ ಮಂತ್ರ ಬಲ್ಲವರಾಗಿರುವುದರಿಂದ, ಈ ಎರಡು ಬುಡಕಟ್ಟಿನ ಜನ ಒಮ್ಮೊಮ್ಮೆ ಮೋಡಿ ಆಟದ ಸ್ಪರ್ಧೆಯನ್ನು ಏರ್ಪಡಿಸಿ ಅದರಲ್ಲಿ ಸೋಲು ಗೆಲವು ಆದವರಿಗೆ ಬಹುಮಾನ ಇರಿಸಿಕೊಳ್ಳುವುದು ಉಂಟು. ಮೋಡಿಯ ದಿನ ಒಂದು ಮೈದಾನದಲ್ಲಿ ಜನ ಸೇರುವರು. ಮಧ್ಯ ಮೋಡಿ ಹಾಕುವವರು ರಚಿಸಿದ ಮಂಡಲ ಇರುತ್ತದೆ. ಮಂಡಲ ಎಂದರೆ ಅಕ್ಕಪಕ್ಕ ಮನೆಗಿಳಿಗಿರುವಂತೆಯೇ ಏಳು ಮನೆಗಳು ಅಂದರೆ ೧೪ ಮನೆಗಳಿರುತ್ತವೆ. ೧೪ನೆಯ ಮನೆಯ ಕಡೆ ಒಂದು ಸಣ್ಣ ಚಪ್ಪರವಿದ್ದು ಅದರ ಕೆಳಗಡೆ ಒಂದು ಪೀಠದ ಮೇಲೆ ಮಣ್ಣಿನಿಂದ ಮಾಡಿದ ದೇವತೆಯ ವಿಗ್ರಹ ಇರುತ್ತದೆ. ಈ ವಿಗ್ರಹದ ಕೆಳಗಡೆ ಪಂದ್ಯಕ್ಕೆ ಕಟ್ಟಿದ ಹಣ ಮೊಬಲಗನ್ನು (ಮೊತ್ತ) ಇಟ್ಟಿರುತ್ತಾರೆ. ಹದಿಮೂರು ಮಂಡಲಗಳನ್ನು ದಾಟಿ ಹದಿನಾಲ್ಕು ಮಂಡಲವನ್ನು ಮೋಡಿ ಎತ್ತುವವರು ಮುಟ್ಟಿದರೆ ಅವರು ಆ ಹಣವನ್ನು ಎತ್ತಿಕೊಳ್ಳಬಹುದು. ಅಲ್ಲಿಗೆ ಮೋಡಿ ಆಟ ಮುಗಿದಂತೆ. ಈ ಆಟ ಮುಗಿಯಲು ಒಂದು ದಿನ ಬೇಕಾಗುವುದು ಅಥವಾ ಇದು ಎರಡನೆಯ ದಿನ ಮಧ್ಯಾಹ್ನದವರೆಗೂ ಇದು ಮುಂದುವರೆಯಬಹುದು. ಆದರೆ, ಬುಡಕಟ್ಟುಗಳಲ್ಲಿ ಈಗೀಗ ಮಾಟ, ಮೋಡಿ ಮಂತ್ರದ ಪ್ರಭಾವ ಕಡಿಮೆಯಾಗಿ ಮೋಡಿ ಆಟ ಇಲ್ಲವಾಗುತ್ತಿದೆ ಎಂದು ವಕ್ತೃಗಳು ತಿಳಿಸಿರುತ್ತಾರೆ.

ಭಾಷೆ, ಗಾದೆ ಮತ್ತು ಒಗಟುಗಳು

ಬೇಡ ನಾಯಕರಲ್ಲಿ ಮತ್ತು ಕಾಡುಗೊಲ್ಲರಲ್ಲಿ ಊರುಬೇಡರು ಮತ್ತು ಊರುಗೊಲ್ಲರು ಎಂಬ ಗುಂಪುಗಳಿವೆ. ಕಾಡುಗೊಲ್ಲರು ಆಡುವ ಭಾಷೆ ಶುದ್ಧ ಕನ್ನಡವಾದರೆ, ಊರುಗೊಲ್ಲರು ಆಡುವುದು ತೆಲಗು

ಹಾಗೆಯೇ ಬೇಡ ನಾಯಕರು ತಾವು ಆಂಧ್ರದ ಕಡೆಯಿಂದ ಬಂದವರೆಂದು ತಮ್ಮ ತಮ್ಮ ಹಟ್ಟಿಗಳಲ್ಲಿ ತೆಲಗು ಭಾಷೆಯನ್ನು ಆಡುವರು. ಹೊರಗೆ ಉಳಿದ ಜನಾಂಗದವರೊಂದಿಗೆ ವ್ಯವಹರಿಸುವಾಗ ಕನ್ನಡ ಬಳಸುವರು. ಒಟ್ಟಿನಲ್ಲಿ ಎರಡು ಬುಡಕಟ್ಟಿನವರ ಜಾನಪದ ಸಾಹಿತ್ಯ ಪ್ರಚಲಿತವಿರುವುದು ಕನ್ನಡದಲ್ಲಿಯೇ ಇವರು ಆಡುವ ಭಾಷೆಯಲ್ಲಿ ವೈವಿಧ್ಯತೆಗಾಗಿ ಹಟ್ಟಿಯ ಜನರು ಬಳಸಬಹುದಾದ ಗಾದೆ, ಒಗಟುಗಳು ಈ ಜನರಿಗೆ ಪ್ರತ್ಯೇಕವಾಗಿಯೇನು ಇರುವುದಿಲ್ಲ. ಆದರೆ, ಅಪರೂಪಕೆಂಬಂತೆ ನಾಲ್ಕರು ಗಾದೆಗಳು ಬೇಡ ನಾಯಕರನ್ನು ಕುರಿತು ಪ್ರಯೋಗದಲ್ಲಿವೆ. ಕ್ಷೇತ್ರಕಾರ್ಯ ಸಂದರ್ಭದಲ್ಲಿ ಬೇಡನಾಯಕ ವಕ್ತೃಗಳೇ ಪ್ರಯೋಗಿಸಿದ ಕೆಲವು ಗಾದೆಗಳನ್ನು ಈ ಕೆಳಗೆ ಪ್ರಸ್ತಾಪಿಸಲಾಗಿದೆ.

೧. ಎತ್ತಿನ ಕಳ್ಳ ಹಗ್ಗ ಮರೆತಾನೆ

೨. ಬೇಡ ಕಳ್ಳ ಮಾದಿಗ ಸುಳ್ಳ

೩. ಬೆಲ್ಲದ ಹಂಗಿದ್ದರೂ ಬೇಡನನ್ನು ನಂಬಬಾರದು

೪. ಜಾಲಿ ಸಾಕಿದರೆ ಕಾಲಿಗೆ ಮೂಲ, ಬೇಡನನ್ನು ಸಾಕಿದರೆ ಜೀವಕ್ಕೆ ಮೂಲ

೫. ಕೂತ ಜಾಗದಲ್ಲಿ ಕುಂಡಿಗೆ ಗೆದ್ದಲು ಹಿಡಿದವು

೬. ಕೊಬ್ಬಿದ ಬೇಡ ಬೇಲಿಗೆ ಎಟ್ಟಿದ

೭. ರಾಸಿಗೆ ಮೇವಿಲ್ಲ, ಬೇಡನಿಗೆ ಮದ್ದಿಲ್ಲ

೮. ಹಚ್ಚಗಿದ್ದ ಕಡೆ ಉಂಡನು, ಬೆಚ್ಚಗಿದ್ದ ಕಡೆ ಮಲಗಿದನು

೯. ತೊಗಲು ಮುಕಳಿಯವ ಮುಗಿಲು ಸುದ್ದಿ ಏನು ಬಲ್ಲ

೧೦. ಕಟ್ಟಿದ ಮೋಡವ ಗಾಳಿಯೆದ್ದು ಕೆಡಿಸಿತು

೧೧. ನಡಕೊಂಡವರು ಪಡಕೊಂಡರು

೧೨. ಕುಲಕ್ಕೆ ಕುಲವೇ ಮೂಲ, ಕುಂಟೆತ್ತು ಹೊಲಕ್ಕೆ ಮೂಲ

೧೩. ಆಸೆಗೆ ಮಿತಿಯಿಲ್ಲ, ಭಿಕ್ಷುಕನಿಗೆ ನಾಚಿಕೆಯಿಲ್ಲ

೧೪. ಗುರುವಿಲ್ಲದ ಮಠ ಒಂದೆ ಹಿರಿಯರಿಲ್ಲದ ಮನೆ ಒಂದೆ

೧೫. ಗುರುವಿನ ನಂತರ ಗುಡ್ಡ

೧೬. ಮೊಡ್ಡು ದೊರೆಗೆ ಹೆಡ್ಡು ಪ್ರಧಾನಿ

೧೭. ಗತಿಯಿಲ್ಲದ ಮುಂಡೆ ಲತೂಡಿ ನೆಕ್ಕಿದಳು

೧೮. ಕಿವಿಗೆ ಗೂಟ ಕಣ್ಣಿಗೆ ಮುಳ್ಳು

೧೯. ಕೆಟ್ಟು ಹೋದವನಿಗೆ ನೆಂಟರಿಲ್ಲ, ಸಾಯುವವನಿಗೆ ದೇವರಿಲ್ಲ

೨೦. ಅಂತದೇ ಕಾಸು, ಅಂತದೇ ಕಡಲೆ

೨೧. ಕಾರೇ ಗಿಡದಲ್ಲಿ ಹೊಂಬಾಳೆ ಬಯಸಿದಂತೆ

೨೨. ಬರಿ ಮನೆಗೆ ಬಂದ ದಾಸಯ್ಯ ಬಾಗಿಲು ಬಡಿದು ಹೋದ

೨೩. ರೊಟ್ಟಿ ಯಾವ ಕಡೆ ಕಡಿದರೇನು

೨೪. ಹತಾರಿಲ್ಲದವನು ವತಾರೆಗೆ ಹೋದ

೨೫. ಎಲ್ಲ ಕಾಟಕ್ಕಿನ್ನ ಲೊಟಕೊಪ್ಪನ ಕಾಟ ದೊಡ್ಡದು.

ಬೀದರ ಜಿಲ್ಲೆಯ ಇತಿಹಾಸ (ವಕ್ತೃಗಳು ಹೇಳಿದಂತೆ)

ಬೀದರ ಜಿಲ್ಲೆಯ ಬೇಡ ವಕ್ತೃಗಳು ತಮ್ಮದೆಯಾದ ಇತಿಹಾಸವನ್ನು ನನ್ನ ಮುಂದೆ ವಿಸ್ತರವಾಗಿ ಹೇಳಿರುತ್ತಾರೆ. ಜಿಲ್ಲೆಯಲ್ಲಿ ಮೂಲತ: ಬೇಡರು ಹಿಂದೆ ವಾಸಿಸುತ್ತಿರಲಿಲ್ಲ. ಇಂದು ಜಿಲ್ಲೆಯಲ್ಲಿ ವಾಸವಾಗಿರುವ ಬೇಡ ಕುಟುಂಬಗಳು ಬೇರೆ ಬೇರೆ ಜಿಲ್ಲೆಗಳಿಂದ ವಲಸೆ ಬಂದಿರುತ್ತಾರೆ.

ಬೇಡ ಸಮುದಾಯವನ್ನು ರಾಜ್ಯ ಮಟ್ಟದಲ್ಲಿ ಒಂದೆಡೆ ಸೇರಿಸಲು ರಾಜನಹಳ್ಳಿಯ ಶ್ರೀ ವಾಲ್ಮೀಕಿ ಗುರುಪೀಠ ಬಹುವಾಗಿ ಪ್ರಯತ್ನಿಸುತ್ತಿದೆ; ಈ ಸಂಸ್ಥೆ ೧೯೯೮ ರಲ್ಲಿ ಸ್ಥಾಪಿಸಲಾಗಿದೆ. ಶೌರ್ಯ, ಸಾಹಸ, ತ್ಯಾಗ, ಮೊದಲಾದವುಗಳಿಂದ ಮೇರು ಆಗಿ ಮೆರೆದು ಇತಿಹಾಸ ನಿರ್ಮಿಸಿದ ಬೇಡ ಸಮುದಾಯದವರ ಸ್ಥಿತಿ ಇಂದು ಶೋಚನೀಯವಾಗಿದೆ. ಸರ್ವ ರಂಗಗಳಲ್ಲೂ ಹಿನ್ನಡೆ ಕಂಡ ಈ ಸಮಾಜ ಸರಕಾರದಿಂದ ಇದುವರೆಗೂ ತಿರಸ್ಕಾರ ಮತ್ತು ಕೀಳರಿಮೆಗೆ ಒಳಗಾಗಿದೆ. ಈ ಜನಾಂಗದವರಲ್ಲಿ ಪ್ರತಿಭೆ, ಪಾಂಡಿತ್ಯ ಮತ್ತು ಕುಶಲತೆಗೆ ಯಾವುದೂ ಕಡಿಮೆಯಿಲ್ಲ. ಆದರೆ, ಸರಿಯಾದ ಪ್ರೋತ್ಸಾಹ, ಪ್ರೇರಣೆ ಮತ್ತು ಮಾರ್ಗದರ್ಶನ ಇಲ್ಲದುದಕ್ಕೆ ಈ ಶೋಷಿತ ಸಮಾಜಕ್ಕೆ ಗ್ರಹಣ ಹಿಡಿದಿದೆ. ಇಂತಹ ವಿಷಮ ಪರಿಸ್ಥಿತಿಯಿಂದ ಜನಾಂಗದವರನ್ನು ಮೇಲೆತ್ತಲು ಶ್ರೀ ವಾಲ್ಮೀಕಿ ಗುರುಪೀಠ ಪ್ರಯತ್ನಿಸುತ್ತಿದೆ. ಈ ಗುರಪೀಠವು 'ವಾಲ್ಮೀಕಿ ಕಿರಣ' ಎಂಬ ವಾರಪತ್ರಿಕೆಯನ್ನು ಪ್ರಕಟಿಸುತ್ತಿದೆ. ಈ ಗುರುಪೀಠದ ಅಧ್ಯಕ್ಷರಾದ ಶ್ರೀ ಪುಣ್ಯಾನಂದ ಪುರಿ ಮಹಾಸ್ವಾಮಿಗಳವರು ಹೆಚ್ಚಿನ ಕಾರ್ಯಚಟುವಟಿಕೆಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ. ವಾಲ್ಮೀಕಿ ಕಿರಣದಲ್ಲಿ ಪ್ರಕಟಗೊಂಡ ಹಲವಾರು ಸಂಶೋಧನ ಲೇಖನಗಳು ಸಮುದಾಯದವರ ಹಿಂದಿನ ಭವ್ಯ ಪರಂಪರೆಯನ್ನು ವಿವರವಾಗಿ ಓದುಗರಿಗೆ ನೀಡುತ್ತವೆ. ಮುಂಬರುವ ದಿನಗಳಲ್ಲಿ ಇನ್ನೂ ಹೆಚ್ಚಿನ ಪ್ರಗತಿಯನ್ನು ನಾವು ಈ ಗುರಪೀಠದಿಂದ ಬಯಸುತ್ತೇವೆ. ಸಂಶೋಧಕರಿಗೆ ನೆರವಾಗಲು ಗುರಪೀಠವು ಹಣವನ್ನು ನೀಡುವುದು

ಅವಶ್ಯಕವಾಗಿದೆ. ಸರಕಾರವು ಸಹ ಈ ಗುರಪೀಠಕ್ಕೆ ಮಲತಾಯಿ ಧೋರಣೆ ತೋರದೆ, ಆರ್ಥಿಕ ನೆರವು ನೀಡಿ ತನ್ಮೂಲಕ ಈ ಸಮುದಾಯವನ್ನು ಮೇಲೆತ್ತುವುದು ಒಂದು ಸಾಮಾಜಿಕ ನ್ಯಾಯವು ಆಗಿದೆ.

ಮೇಲಿನ ಪರಿಚ್ಛೇದಗಳಲ್ಲಿ ನಾವು ಈಗಾಗಲೇ ಬೇಡ ಸಮುದಾಯದ ಇತಿಹಾಸ ಮತ್ತು ಬೇಡರ ವ್ಯಕ್ತಿತ್ವದ ಬಗ್ಗೆ ದೇಶೀಯ ಹಾಗೂ ರಾಜ್ಯ ಮಟ್ಟದಲ್ಲಿ ಸಿಗುವ ಆಕಾರ ಗ್ರಂಥಗಳ ನೆರವಿನಿಂದ ವಿವರಣೆಯನ್ನು ನೀಡಿದ್ದೇವೆ. ಇಲ್ಲಿ, ಬೀದರ ಜಿಲ್ಲೆಯ ಬೇಡರ ಇತಿಹಾಸವನ್ನು ವಕ್ತೃಗಳ ದೃಷ್ಠಿಯಿಂದ ವಿವರಿಸಲಾಗಿದೆ.

ವಲಸೆ ಬಂದ ಕಾಲ ಮತ್ತು ಆದರ ಮಾಹಿತಿ

ವಕ್ತೃಗಳು, ತಾವು ಮೂಲತಃ ಬೀದರಿನವರಲ್ಲ; ಬೇರೆ ಬೇರೆ ಕಡೆಯಿಂದ ಹಲವಾರು ಕಾರಣಗಳಿಂದಾಗಿ ಬೇರೆ ಬೇರೆ ಕಾಲಗಳಲ್ಲಿ ಬೀದರಿಗೆ ಬಂದಿದ್ದೇವೆ ಎನ್ನುತ್ತಾರೆ ಶ್ರೀ ನರಸಿಂಗರಾವ ತಂದೆ ರಾಮಾ ಬಿರಾದಾರ, ಊರು: ಆನಂದವಾಡಿ (ಜಾಜನ ಮುಗಳಿವಾಡಿ) ಇವರ ಪ್ರಕಾರ "ನಮ್ಮ ಹಿರಿಯರು ಆಳಂದ ತಾಲ್ಲೂಕಿನ ಕೊರಳವಾಡಿಗೆ ಸುರಪುರದಿಂದ ಸು. ೬೦೦ ವರ್ಷಗಳ ಹಿಂದೆ ಬಂದರು". ಆಗ, ಏಳು ದಿವಸ ಬ್ರಿಟಿಷರ ಮತ್ತು ಮುಸಂಡೆನಾಯಕರ ನಡುವೆ ಯುದ್ಧ (ಲಡಾಯಿ) ಆಯಿತು. ನಿಜಾಮನ ಫಿತೂರಿನ ನಿಮಿತ್ಯ ಈ ಲಡಾಯಿ ಜರುಗಿತು. ಈ ಲಡಾಯಿಯಲ್ಲಿ ಬೇಡರು ಸೋತು ಅಲ್ಲಿಂದ ಚೆಲ್ಲಾಪಿಲಿಯಾಗಿ ಕೆಲವರು ಬೀದರ ಜಿಲ್ಲೆಯ ಬಸವಕಲ್ಯಾಣ ತಾಲೂಕಿನ ಆನಂದವಾಡಿ ಗ್ರಾಮಕ್ಕೆ ನಾಲ್ಕು ಜನ ಅಣ್ಣತಮ್ಮಂದಿರು ಬಂದೆವು. ಈ ನಾಲ್ಕು ಜನರಲ್ಲಿ ಹಿರಿಯವನು ಆನಂದವಾಡಿಯಲ್ಲಿ ತಂಗಿದನು. ಉಳಿದವರು ಕೊರಳವಾಡಿ, ತಡಕಲವಾಡಿ ಮುಂತಾದ ಗ್ರಾಮ ಕಡೆ ವಲಸೆ ಬಂದೆವು" ಎನ್ನುತ್ತಾರೆ.

ಶ್ರೀ. ಮಸುಂದಪ್ಪಗೌಡ ತಂದೆ ಶಿವರಾಯ ಇವರ ಹೇಳಿಕೆಯ ಪ್ರಕಾರ, 'ಈಗಿರುವ ರಾಯಚೂರ ಜಿಲ್ಲೆಯಲ್ಲಿರುವ ದೇವದುರ್ಗ ಎಂಬ ಊರಿಂದ ಗುಲಬರ್ಗಾ ಜಿಲ್ಲೆಯ 'ಕಾಳಮದ್ದಿರಿಗಿ' ಎಂಬ ಗ್ರಾಮಕ್ಕೆ ಸುಮಾರು ೪೦೦ ವರ್ಷಗಳ ಹಿಂದೆಯೇ ಬಂದಿದ್ದೇವೆ. ಕೋಹಿನೂರ ವಾಡಿಗೆ 'ಮದರಸಾಬ' (ಕೋಹಿನೂರ ಪಾಡ)ನ ಸೀಮೆಯ ಲಡಾಯಿ (ಜಗಡ) ಸಂದರ್ಭದಲ್ಲಿ ಇಲ್ಲಿಗೆ ಬರಬೇಕಾಯಿತು. ಮೊದಲಿನಿಂದಲೂ ಅಂದರೆ ೧೯೪೮ರಿಂದಲೂ ನಮಗೆ 'ಗೌಡ'ರೆಂದು ಕರೆಯುತ್ತಾರೆ ಎನ್ನುತ್ತಾರೆ.

ಕೋಹಿನೂರ ಗ್ರಾಮದ ಶ್ರೀ ಸೈಬಣ್ಣ ತಂದೆ ಮಲಕಪ್ಪ ಇವರ ಹೇಳಿಕೆಯ ಪ್ರಕಾರ, "ಸುಮಾರು ೩೦೦ ವರ್ಷಗಳ ಹಿಂದೆ ದೇವದುರ್ಗದಿಂದ ಹುಮನಾಬಾದ ತಾಲೂಕಿನಲ್ಲಿರುವ 'ಚಾಂಗಲೇರಾ' ಗುಡ್ಡಕ್ಕೆ ೧೦೦ ಜನ ಬಂದೆವು. ಸುಮಾರು ೧೦ ವರ್ಷಗಳ ನಂತರ ಕೋಹಿನೂರ ಗೌಡ ಮತ್ತು ಕುಲಕರ್ಣಿಯವರು 'ಮದರಸಾಬ' (ಕೋಹಿನೂರ ಪಾಡ) ಎಂಬ ಊರಿನ ಸೀಮೆಯನ್ನು ದಾಳಿ ಮಾಡಿ ವಶಪಡಿಸಿಕೊಳ್ಳಲು

(ಕಬ್ಜ) ಇಲ್ಲಿಗೆ ಒಂದು ಒಂಪ್ಪದದ ಮೇರೆಗೆ ನಮ್ಮನ್ನು ಕರಕೊಂಡರು. ಈ ಸೀಮೆ 'ಕಬ್ಜ' ಮಾಡಿ ಗೌಡ ಮತ್ತು ಕುಲಕರ್ಣಿಯವರಿಗೆ ಒಪ್ಪಿಸಿದ ಮೇಲೆ ಕೋಹಿನೂರ ದಲ್ಲಿ ೨೦೦ ಎಕರೆ ಭೂಮಿಯನ್ನು ಮತ್ತು ಕೋಹಿನೂರ ವಾಡಿಯಲ್ಲಿ ೨೦೦ ಎಕರೆ ಭೂಮಿಯನ್ನು (ಒಟ್ಟು ೪೦೦ ಎಕರೆ ಭೂಮಿ) ನಮಗೆ 'ಇನಾಂ' ರೂಪದಲ್ಲಿ ಕೊಟ್ಟರು, ಅಂದಿನಿಂದ ಇಲ್ಲಿಯೇ ವಾಸಿಸುತ್ತಿದ್ದೇವೆ" ಎನ್ನುತ್ತಾರೆ.

ವೀರನಾಯಕರು

ಬೀದರ ಜಿಲ್ಲೆಯ ಬೇಡ ವಕ್ತೃಗಳಿಗೆ ಸಹ ತಮ್ಮ ಹಿಂದಿನ ಬೇಡ ನಾಯಕರ ವೀರತ್ವದ ಬಗ್ಗೆ ಸ್ಪಷ್ಟವಾದ ಕಲ್ಪನೆ ಇದೆ. ಶ್ರೀ. ಶ್ರೀಮಂತಪ್ಪ ತಂದೆ ಲಕ್ಷ್ಮಣ ಕುನಾಳೆ ಇವರು "ನಮ್ಮ ಹಿಂದಿನ ಜನ ಬಹಳ ಶೂರರಿದ್ದರು, ಔರಂಗಜೇಬ ಎಂಬ ಬಲಿಷ್ಠ ಮೊಗಲ ರಾಜನನ್ನು ಸೋಲಿಸಿದ ಶಿವಾಜಿಯ ಸೈನ್ಯದಲ್ಲಿ ಬೇಡರು ಇದ್ದುದೇ ಇದಕ್ಕೆ ಕಾರಣ" ಎಂದು ಅಭಿಪ್ರಾಯ ಪಡುತ್ತಾರೆ. ಇವರು, ಮುಂದುವರೆದು "ಒಮ್ಮೆ ಔರಂಗಜೇಬನ ಮಗಳು ತನ್ನ ತಂದೆಯನ್ನು ಪ್ರಶ್ನಿಸುತ್ತಾ ನೀನು ಶಿವಾಜಿಗೆ 'ಬೆಟ್ಟದ ಇಲಿ' (ಪಹಡಕಾ ಚುವ್ವಾ) ಎಂದು ಪದೇ ಪದೇ ಹೇಳುತ್ತಿದ್ದೀರಿ, ಹಾಗಾದರೆ, ಅಂತಹವನಿಂದ ಹೇಗೆ ಯುದ್ಧದಲ್ಲಿ ಸೋತಿ ಎಂದು ಕೇಳಿದಾಗ, ಶಿವಾಜಿಯ ಸೈನ್ಯದಲ್ಲಿ ಬೇಡ ಸಮುದಾಯದ ಸೈನಿಕರು ಬಹಳಷ್ಟು ಇದ್ದುದೇ ಇದಕ್ಕೆ ಕಾರಣ ಎಂದರಲ್ಲದೇ ಬೇಡರು ಎಂದರೆ, 'ಬೇ-ಡರ್' ಅಥವಾ ಯಾವುದಕ್ಕೂ ಅಂಜಲಾದವರು" ಇಂತಹವರು ಅವನ ಸೈನ್ಯದಲ್ಲಿ ಹೆಚ್ಚಾಗಿ ಇರುವುದರಿಂಲೇ ಯುದ್ಧದಲ್ಲಿ ಸೋಲನ್ನು ಅನುಭವಿಸಬೇಕಾಯಿತು ಎಂದು ಹೇಳುತ್ತಾನೆ. ಇದಲ್ಲದೇ "ಬ್ರಿಟಿಷರ ವಿರುದ್ಧ ದಂಗೆ ಎಬ್ಬಿಸಿದ ವೀರಪುರುಷ ಸಿಂಧೂರ ಲಕ್ಷ್ಮಣ ನಾಯಕ ಸಮುದಾಯದ ವ್ಯಕ್ತಿ, ಒನಕೆ ಒಬ್ಬವ್ವ ಬೇಡರ ಮಹಿಳೆ" ಎಂದು ಹೇಳುವರು.

ಶ್ರೀ. ಬಾಬರಾವ ತಂದೆ ಜಟಿಂಗ್ (೧೦೦ ವರ್ಷದವರು) ಬೆಟಗೇರಾವಾಡಿಯಲ್ಲಿ ಇವರ ಪ್ರಕಾರ "ನಮ್ಮವರು ಮೊದಲು ಸುರಪುರದಲ್ಲಿ ವಾಸಿಸುತ್ತಿದ್ದರು, ನಮ್ಮದು ರಾಜಮನೆತನ, ಸುಮಾರು ೭೦೦ ವರ್ಷಗಳ ಹಿಂದೆ ನಮ್ಮ ಅಜ್ಜಂದಿರಲ್ಲಿ ಒಬ್ಬರಾದ ನರಸಪ್ಪಾ ಮುತ್ತ್ಯಾ ಮತ್ತು ಗೌಡರ ನಡುವೆ ಅಂದು ಜಗಳವಾಯಿತು, ಆದುದರಿಂದ ಸುರಪುರದಿಂದ ಈ ಕಡೆ ಓಡಿ ಬರಬೇಕಾಯಿತು".

ಶ್ರೀ. ಆನಂದರಾವ ತಂದೆ ಹಣಮಂತಪ್ಪ ನಿವೃತ್ತ ಶಿಕ್ಷಕರು-ಇವರ ಪ್ರಕಾರ 'ಬೇಡರು ಸುಮಾರು ೩೦೦ ವರ್ಷಗಳ ಹಿಂದೆ ಸುರಪುರದಿಂದ ಈ ಕಡೆ ಬಂದಿರಬೇಕು' ಬೇಡರು ಯಾರಿಗೂ ಮತ್ತು ಎಂತಹ ಪರಿಸ್ಥಿತಿಯಲ್ಲೂ ಅಂಜುವವರಲ್ಲ (ಹೆದರುವುದಿಲ್ಲ). ಅತ್ಯಂತ ಕಠಿಣವಾದ ಮತ್ತು ಅಸಾಧ್ಯವೆನಿಸಿದ ಕಾರ್ಯಕ್ಕೆ ಮೇಲ್ಜಾತಿಯ ಜನ ಇವರನ್ನು ಆಗಾಗೆ ಉಪಯೋಗ ಮಾಡಿದ್ದುಂಟು. ನಮ್ಮ ಜನ ಭೂಮಿಯನ್ನು ಕಬ್ಜ (ಸ್ವಾಧೀನ ಪಡಿಸಿಕೊಳ್ಳುವುದಕ್ಕೆ) ಮಾಡುವಲ್ಲಿ ಹೆಸರುವಾಸಿಗಳಾಗಿದ್ದಾರೆ. ಇಲ್ಲಿನ ಗೌಡ-ಕುಲಕರ್ಣಿ ಮತ್ತು

ಪಾಟೀಲ-ಪಟವಾರಿ ಇವರೆಲ್ಲ ನಮ್ಮವರನ್ನು ಹಿಂದೆ ಇಂತಹ ಕೆಲಸಕ್ಕಾಗಿ ಧಾರಾಳವಾಗಿ ಉಪಯೋಗ ಮಾಡಿಕೊಂಡಿದ್ದಾರೆ" ಎನ್ನುತ್ತಾರೆ.

ವಕ್ತೃಗಳು ತಮ್ಮ ಜನಾಂಗದ ಹಿಂದಿನವರ ಮಹಾನ್ ವ್ಯಕ್ತಿತ್ವವನ್ನು ತಮ್ಮದೆಯಾದ ಆದ ಶೈಲಿಯಲ್ಲಿ ಹೇಳುತ್ತಾರೆ. ಶ್ರೀಮಂತಪ್ಪಾ ತಂದೆ ಲಕ್ಷ್ಮಣ ಕುನಾಳೆ ಇವರು ಹೇಳಿರುವಂತೆ "ಕಶಪ್ಪ ಕಂಬಾರ, ವಾಲ್ಮೀಕಿ ಬೇಡರವ, ಸೀತಾ ದ್ರಾವಿಡ ಇದ್ದಕಾರಣ, ಈಕೆಗೆ ರಾಣಿಮಾಡಬಾರದೆಂದು ಒಂದೇ ರಾಮನ ಜೊತೆಯಾಗಿ, ತದನಂತರ ರಾಮನು ಸೀತೆಯನ್ನು ಕಾಡಿಗೆ ಅಟ್ಟಿದಾಗ ಯಾವ ಬ್ರಾಹ್ಮಣ ಋಷಿಗಳು ಈಕೆಯನ್ನು ಆಶ್ರಯ ಕೊಡಲಿಲ್ಲ. ಮಹಾಋಷಿ ವಾಲ್ಮೀಕಿ ಆಶ್ರಯ ಕೊಟ್ಟು, ಆಕೆಯ ಮಕ್ಕಳಿಗೆ ರಾಮನನ್ನು ಸೋಲಿಸುವಷ್ಟು ವಿದ್ಯಾಭ್ಯಾಸ ಕೊಟ್ಟಿದ್ದು ಇಡೀ ಪ್ರಪಂಚಕ್ಕೆ ಗೊತ್ತಿದೆ. ವಶಿಷ್ಠ ಹೊಲೆಯನಿದ್ದರೂ ರಾಮನು ಅವನ ಹತ್ತಿರ ವಿದ್ಯಾ ಕಲಿತ್ತಿದ್ದನು. ಮೂಲತಃ ದ್ರಾವಿಡರಾದ ನಾವು ಬ್ರಿಟಿಷರು ಸೂಕ್ಷ್ಮವಾಗಿ ನೋಡಿ 'ಈ ದೇಶದ ಪ್ರೇಮಿಗಳು ಬೇಡರು" ಎಂದು ಹೇಳುತ್ತಾರೆ.

ಹಿರಿಯಣ್ಯಕನ ಮಗ ಏಕಲವ್ಯ ತನ್ನ ತಪ್ಪಸ್ಸಿನಿಂದ ವಿದ್ಯಾಭ್ಯಾಸ ಕಲಿತನು. ಅರ್ಜುನನಕ್ಕಿಂತ ಸಾವಿರ ಪಟ್ಟು ವೀರ ಇದ್ದನು ಏಕಲವ್ಯ. ದ್ರೋಣಾಚಾರ್ಯನು ಅರ್ಜುನನಿಗೆ ಹೇಳುತ್ತಾನೆ "ನಿನ್ನಷ್ಟು ಬಲಾಢ್ಯ ಈ ಜಗದಾಗ ಯಾರಿಲ್ಲೋ" ಎಂದು ನುಡಿದಿದ್ದನು. ಕಾಡಿನಲ್ಲಿ ಬೇಟೆಗೆ ಗುರು ಶಿಷ್ಯ ಇಬ್ಬರು ಹೋಗುವಾಗ, ಅಭ್ಯಾಸದಲ್ಲಿ ತಲೀನನಾಗಿದ್ದ ಏಕಲವ್ಯ ನಾಯಿಯ ಶಬ್ಧ ಕೇಳಿದ ಕೂಡಲೇ ನಾಯಿ ನಾಲಿಗೆಗೆ ಅವನು ಬಾಣ ಹೊಡೆದಿದ್ದನು. ಆವಾಗ, 'ಗುರು ನೀ ಅರ್ಜುನನಕ್ಕಿಂತ ಶ್ರೇಷ್ಠ ಈ ಜಗದ್ಯಾಗ, ಯಾರಿಲ್ಲ ಅಂತೀ ನನ್ನಕ್ಕಿಂತ ಮುಂದ ಹೋಗಿದ್ದಾನಲ್ಲ ಇಂವ". ಗುರು ದ್ರೋಣಾಚಾರ್ಯನಿಗೂ ಆಶ್ಚರ್ಯ, ಏಕಲವ್ಯನನ್ನು ಭೇಟಿಯಾಗಿ ಗುರು ಬೇಡಿದ್ದು ಕೊಡುತ್ತೀ ಎಂದು ದ್ರೋಣಾಚಾರ್ಯ ಕೇಳಿದಾಗ, ಕೊಡುತ್ತೀನಿ ಎಂದ. ಗುರುದಕ್ಷಿಣೆ ಹೆಬ್ಬೆಟ್ಟು ಕೊಡುತ್ತೀಯಾ ಅನ್ನುವಷ್ಟರಲ್ಲಿಯೇ 'ಹೆಬ್ಬೆಟ್ಟನ್ನು' ಕತ್ತರಿಸಿ ಕೊಟ್ಟನು.

ಗುರು ದ್ರೋಣಾಚಾರ್ಯರನ್ನು ಅರ್ಜುನನು ಏಕಲವ್ಯನ ಹೆಬ್ಬೆರಳು ಏಕೆ ಕತ್ತರಿಸಿಕೊಂಡಿದ್ದೀರಿ ಎಂದು ಕೇಳಿದರೂ ಏನೂ ಹೇಳಲಾರ. ದ್ರೋಣಾಚಾರ್ಯನು ನೀವು ಹೇಳಿಯೇ ಹೇಳಬೇಕು ಎಂದು ಒಂದು ದಿವಸ ಉಪವಾಸ ಇರುತ್ತಾನೆ. ಆವಾಗ ದ್ರೋಣಾಚಾರ್ಯ ಬಾಯಿ ಬಿಡುತ್ತಾನೆ. ನನಗೆ ಈ ಭೂಮಿ ಮೇಲೆ ನಿನ್ನನ್ನೇ ಶೂರನಾಗಿ ಮಾಡಬೇಕಿತ್ತು. ಆದರೆ, ಏಕಲವ್ಯನಷ್ಟು ಶೂರನು ಈ ಭೂಮಿ ಮೇಲೆ ಯಾರು ಇರಲಿಲ್ಲ. ನಿನ್ನಗಿಂತ ದುಪ್ಪಟ್ಟು ಶೂರನಿದ್ದನು. ಅದಕ್ಕಾಗಿಯೇ ಗುರುದಕ್ಷಿಣೆಯಾಗಿ ಅವನ ಹೆಬ್ಬೆರಳನ್ನು ಕತ್ತರಿಸಿಕೊಂಡೆ ಎಂದು ಹೇಳುತ್ತಾನೆ.

ಬೀದರ ಜಿಲ್ಲೆಯಲ್ಲಿನ ಬೇಡ ಜನರು ನಿಷ್ಟುರವಾದಿಗಳು, ಧೈರ್ಯವಾದಿಗಳು, ಸ್ವಾಭಿಮಾನಿಗಳು ಮತ್ತು ಸ್ವಾಮಿನಿಷ್ಠರು. ಪಾಟೀಲ-ಪಟವಾರಿ ಮತ್ತು ಮೇಲ್ಜಾತಿಯವರು ಇವರನ್ನು ಬಹಳ ದುರುಪಯೋಗ ತೆಗೆದುಕೊಂಡಿದ್ದಾರೆ ಎಂದು ವಕ್ತೃಗಳು ತಿಳಿಸುತ್ತಾರೆ.

ಸುರಪುರದಿಂದ ವಲಸೆ ಬಂದಾಗ ಈ ಗುಡ್ಡಗಾಡುಗಳಲ್ಲಿಯೇ ಯಾಕೆ ವಾಸವಾಗಿದ್ದಾರೆಂಬುದಕ್ಕೆ ಮುಖ್ಯ ಎರಡು ಕಾರಣಗಳು ವಕ್ತೃಗಳು ಹೇಳುತ್ತಾರೆ.

೧. ನಮ್ಮ ಸುರಪುರ ಹೇಗಿದೆಯೋ ಹಾಗೆಯೇ ಇಲ್ಲಿ ಕೂಡ ಗುಡ್ಡಗಾಡದ ನಡುವೆಯೇ ಇದ್ದರೆ ಚೆನ್ನಾಗಿ ಎಂಬ ಅಭಿಪ್ರಾಯ ಆನಂದವಾಡಿಯ ವಕ್ತೃನೊಬ್ಬ ಹೇಳುತ್ತಾನೆ.

೨. ಈ ಜನರಿಗೆ ಬೇಟೆಯಾಡುವುದಕ್ಕೆ ಮೊಲ ಎಳ್ಳಿ ಮುಂತಾದ ಪ್ರಾಣಿಗಳು ಸಿಗುತ್ತವೆ. ಅದಕ್ಕಾಗಿ ಎನ್ನುತ್ತಾರೆ ಮುಂದುವರಿದು ಮೇಲ್ವರ್ಗದವರ ಶೋಷಣೆಗೆ ಒಳಗಾಗಿರುವ ಕಾರಣ, ಮೇಲ್ಜಾತಿಯವರ ಮನೆಗಳು ಲೂಟಿ ಮಾಡುವುದು ಸ್ವಲ್ಪ ದಿನಗಳು ಈ ಕೆಲಸ ಮಾಡಿದ್ದಾರೆ. ಹೀಗಾಗಿ ಇವರು ವಾಸಿಸುವ ಸ್ಥಳಗಳು ಯಾರಿಗೂ ಗೊತ್ತಾಗಬಾರದೆಂದು ಗುಡ್ಡಾಗಾಡುಗಳಲ್ಲಿಯೇ ವಾಸ ಮಾಡಿರುತ್ತಾರೆ.

ಅದಕ್ಕಾಗಿಯೇ ಎಷ್ಟೋ ಗ್ರಾಮಗಳಿಗೆ ಇನ್ನೂ ರಸ್ತೆಯ ಸೌಕರ್ಯ ಇಲ್ಲದ್ದು ಎದ್ದು ಕಾಣುತ್ತದೆ. ಇವರ ಬಡತನ ಮತ್ತು ಶೋಷಣೆ ತಾಳಲಾರದೆ ಲೂಟಿ ಮಾಡುವುದಕ್ಕೆ ಕೈ ಹಾಕಿರುತ್ತಾರೆ ಎಂದು ವಕ್ತೃನೊಬ್ಬನ ಅಭಿಪ್ರಾಯ.

ಮಹಾದೇವನೇ ನಮ್ಮನ್ನು ಕಾಪಾಡುವನು, ಮಹಾದೇವನ ಬಿಟ್ಟು ಎಲ್ಲರೂ ನಮ್ಮನ್ನು ಶೋಷಣೆಯೇ ಮಾಡುತ್ತಾರೆ ಎನ್ನುತ್ತಾರೆ "ಕುಲದ ದೇವರು ಹೇಳುವನು ಕುಲಗೇಡಿ ಆಗುತ್ತಾನೆ. ನಮ್ಮ ನಿಸ್ವಾರ್ಥ ಮತ್ತು ಪರಮಭಕ್ತ ಕಣ್ಣಪ್ಪ ಬೇಡರವನು". ಕಣ್ಣಪನನ್ನು ಕುರಿತು ಕೋಹಿನೂರ ವಾಡಿಯಲ್ಲಿ ಒಬ್ಬ ವ್ಯಕ್ತಿ ಕಣ್ಣಪ್ಪನನ್ನು ಕುರಿತು ಒಂದು ಹಾಡು ಹಾಡುವರು. ಆ ಹಾಡು ಈ ಕೆಳಗಿನಂತಿದೆ.

ದುಡಿದವನಿಗೆ ದುಗುಣಿಯಾ ಸಿಗುತ್ತಾದ
ದುಡಿಲಾರದವನ ಜನ್ಮ ವ್ಯರ್ಥದಾ
ದುಡಿಯುವನ ಕಂಡು ಜನ ನಗುತ್ತಾದ
ದುಡಿಲಾರದವನಿಗೆ ಶೀರ ಬಾಗತ್ತಾದ
ದೀಪ ದೂಪ ಪತ್ರಿನಿಲ್ಲದೆ ಹೋಗಿ ದೇವರಿಗೆ ವರು ಬೇಡುತ್ತಾದ
    ದುಡಿದವನಿಗೆ ದುಗುಣಿಯಾ ಸಿಗುತ್ತಾದ
    ದುಡಿಲಾರದವನ ಜನ್ಮ ವ್ಯರ್ಥದಾ
ಬಿಡದೆ ಬ್ರಾಹ್ಮಣ ಪೂಜ್ಯಕ ಹೋಗತ್ತಿದಾ

ಬೇಡಕ ಕಣ್ಣಪ್ಪ ದರ್ಶನ ಮಾಡುತ್ತಿದಾ
ಸೊಸಿ ಗಂಧದ ಪೂಜ ಬ್ರಾಹ್ಮಣ ಮಾಡುತ್ತಿದಾ
ಮಾಂಸ ಕಣ್ಣಪ್ಪ ಒಯ್ದು ನೀಡುತ್ತಿದಾ
    ದುಡಿದವನಿಗೆ ದುಗುಣಿಯಾ ಸಿಗುತ್ತಾದ
    ದುಡಿಲಾರದವನ ಜನ್ಮ ವ್ಯರ್ಥದಾ
ಬಾರಿ ಬ್ರಾಹ್ಮಣ ಕಣ್ಣಪ್ಪಗ ಬಯ್ಯುತ್ತಿದಾ
ದೂರ ಸರಿ ರಂಡ್ಯಾದ ಅಂತ್ತಿದಾ
ಇಬ್ಬರ ಭಕ್ತಿ ದೇವರ ನೋಡಬೇಕಂದಿದ್ದಾ
ಅಬ್ಬಣಿಕಿ ಗುಡಿ ಬ್ಯಾರೆ ಮಾಡಿದಾ
    ದುಡಿದವನಿಗೆ ದುಗುಣಿಯಾ ಸಿಗುತ್ತಾದ
    ದುಡಿಲಾರದವನ ಜನ್ಮ ವ್ಯರ್ಥದಾ
ಗರ್ಜಣಿಯೊಳಗೆ ಗಡಗಡ ಅಂದಾ
ಕೂಡಲೆ ಬ್ರಾಹ್ಮಣ ಹೊರಗೆ ಬಂದಾ
ದೇವರ ಮೇಲೆ ಗುಡಿ ಬೀಳತದಾ ಅಂದಿದಾ
ಭಕ್ತಿ ಕಣ್ಣಪ್ಪ ತೆಕ್ಯಾಗ ಹಿಡಿದಿದಾ
    ದುಡಿದವನಿಗೆ ದುಗುಣಿಯಾ ಸಿಗುತ್ತಾದ
    ದುಡಿಲಾರದವನ ಜನ್ಮ ವ್ಯರ್ಥದಾ
ಏನು ಬೇಡತಿ ಬೇಡು ಅಂದಿದಾ
ಮನಸ್ಸಿಗೆ ಬಂದಿದ್ದು ನೀಡು ಅಂದಿದಾ
ಮೆರೆಯಿತಿ ಹೋಗು ಮೂರು ಲೋಕವಾ
ಹರಿಲಾರದಂತಹ ಪದವೇ ನೀಡಿದ
    ದುಡಿದವನಿಗೆ ದುಗುಣಿಯಾ ಸಿಗುತ್ತಾದ
    ದುಡಿಲಾರದವನ ಜನ್ಮ ವ್ಯರ್ಥದಾ
ಹೊನ್ನ ಕೋಹಿನೂರ ನಾಡಿಗೆ ಮುಂದಾ
ಚೆನ್ನವೀರನ ಗುಡಿ ಆದ ಚೆಂದ
ದಿನ ಸೇವೆ ಮಾಡಿದ ಕಂಡು ಈರಣ್ಣಗಾ
ಕಣ್ಣು ಸನ್ನೆಯಿಲ್ಲದ ಮಾತು ಹೇಳಿದ
    ದುಡಿದವನಿಗೆ ದುಗುಣಿಯಾ ಸಿಗುತ್ತಾದ
    ದುಡಿಲಾರದವನ ಜನ್ಮ ವ್ಯರ್ಥದಾ

ಈ ನಮೂದಿಸಿದ ಹಾಡಿನ ಸಾರಾಂಶವೇನೆಂದರೆ ಭಕ್ತಿಯ ಬಗ್ಗೆ ಭಾವನೆ ಚೆನ್ನಾಗಿ ಇಲ್ಲಿ ಮೂಡಿಬಂದಿದೆ ಎಂಬುದಾಗಿದೆ. ಇದರ ಒಳಅರ್ಥವೇನೆಂದರೆ, ಈ ಬುಡಕಟ್ಟಿನವರು ಮನಸಾರೆ ಭಕ್ತಿ ಮಾಡುತ್ತಾರೆ ವಿನಃ ಡಾಂಭಿಕತನದ ಭಕ್ತಿ ಇಲ್ಲ ಎಂಬುದನ್ನು ವ್ಯಕ್ತಪಡಿಸುತ್ತದೆ. ಆದುದರಿಂದ, ಪ್ರಪಂಚದ

ಯಾವುದೇ ಬುಡಕಟ್ಟಿನ ಸಮುದಾಯದವರನ್ನು ಯಾವುದೇ ಕಾರ್ಯ ವಿಷಯದಲ್ಲಿ ತೆಗೆದುಕೊಂಡರೆ ಅವರು ಮಾಡುವ ಕೆಲಸ ಮನಸ್ಸಿನಿಂದ, ಭಕ್ತಿಯಿಂದ, ಪ್ರಮಾಣಿಕತನದಿಂದ ಮತ್ತು ವಿಶ್ವಾಸಗಳಿಂದ ಮಾಡುತ್ತಾರೆ ಎಂಬ ಮಾತಿನಲ್ಲಿ ಸತ್ಯಾಂಶವಿದೆ.

ಒಟ್ಟಿನಲ್ಲಿ, ಕರ್ನಾಟಕದಲ್ಲಿ ಮಾತ್ರವಲ್ಲದೇ ಬೇಡ ಸಮುದಾಯ ಇಡೀ ಭಾರತದಲ್ಲಿ ವಾಸವಾಗಿದ್ದಾರೆ ಇದಲ್ಲದೇ ಇದೊಂದು ಆದಿಮ ಜನಾಂಗಗಳಲ್ಲಿ ಒಂದಾಗಿದೆ. ಈಗ ಇವರ ಪರಿಸ್ಥಿತಿ ಸರಿಯಾಗಿಲ್ಲ. ಶೈಕ್ಷಣಿಕವಾಗಿ ಹಿಂದುಳಿದಿರುವುದು ಇದಕ್ಕೆ ಒಂದು ಮೂಲಭೂತವಾದ ಕಾರಣವಾಗಿದೆ. ಮೇಲ್ಜಾತಿಯವರಿಂದ ಈ ಜನಾಂಗದವರನ್ನು ಮುಂದೆ ತರುವಲ್ಲಿ ರಾಷ್ಟ್ರ ಮತ್ತು ರಾಜ್ಯ ಸರಕಾರಗಳು ಸಹ ಅಷ್ಟೊಂದು ಯಶಸ್ವಿಯಾಗಿಲ್ಲ. ಸ್ವಾತಂತ್ರ್ಯ ಭಾರತ 'ಸಾಮಾಜಿಕ ನ್ಯಾಯ'ಕ್ಕೆ ಒತ್ತು ಕೊಟ್ಟಿರುವುದರಿಂದ ಈ ಜನಾಂಗದವರನ್ನು ಆರ್ಥಿಕವಾಗಿ ಮುಂದೆ ತರುವುದು ಅವರಿಗೆ 'ಸಾಮಾಜಿಕ ನ್ಯಾಯ' ದೊರಕಿಸುವಂತೆ ಮಾಡುವುದು ಪ್ರಜ್ಞಾವಂತ ಪ್ರಜೆಗಳ ಪ್ರಮುಖವಾದ ಕರ್ತವ್ಯವಾಗಿದೆ.

ಆಧಾರ ಗ್ರಂಥಗಳು

೧. ಹರ್ತಿಕೋಟೆ ವೀರೇಂದ್ರ, 'ನಾಯಕ ಜನಾಂಗದ ಪರಂಪರೆ', ವಾಲ್ಮೀಕ ಕಿರಣ, ಪು. ೨೭-೩೨.

೨. ಕೃಷ್ಣಮೂರ್ತಿ ಹನೂರು, ಮ್ಯಾಸ ಬೇಡರ ಸಂಸ್ಕೃತಿ, ೧೯೯೩, ಪು. ೭೮೫-೮೧೫.

೩. ಕರಿಶೆಟ್ಟಿ ರುದ್ರಪ್ಪ, ಮ್ಯಾಸಿನಾಯಕರು ಒಂದು ಜನಾಂಗೀಕ ಅಧ್ಯಯನ, ೧೯೮೨, ಅಧ್ಯಾಯ-೧, ಪು. ೧.

೪. ಕರಿಶೆಟ್ಟಿ ರುದ್ರಪ್ಪ, ಮ್ಯಾಸನಾಯಕರು ಒಂದು ಜನಾಂಗಿಕ ಅಧ್ಯಯನ, ೧೯೮೨, ಅಧ್ಯಾಯ-೧, ಪು. ೭-೮.

೫. ಲಕ್ಕಪ್ಪಗೌಡ ಎಚ್.ಜೆ., ಕರ್ನಾಟಕದ ಬುಡಕಟ್ಟುಗಳು, ಸಂಪುಟ ೧. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು, ೧೯೯೮.

೬. ಸೂರ್ಯನಾಥ ಯು. ಕಾಮತ್, ೧೯೮೪, ೪೫೭-೪೫೮.

೭. ಕರಿಶೆಟ್ಟಿ ರುದ್ರಪ್ಪ, ಮ್ಯಾಸಿನಾಯಕರು ಒಂದು ಜನಾಂಗೀಕ ಅಧ್ಯಯನ, ೧೯೮೨, ಅಧ್ಯಾಯ-೧, ಪು. ೧.

೮. ಮೈತ್ರಿ ಕೆ.ಎಂ., ಬೀದರ ಜಿಲ್ಲೆಯ ದರ್ಶನ, 1997, ಪು. ೧೧೮-೧೨೫.

೯. Social change among the Bedas, A sociological study, Dhruva Basavaraj Jyothi (Unpublished thesis), 2000.

೧೦. Social change among the Bedas, A sociological study, Dhruva Basavaraj Jyothi (Unpublished thesis), 2000.

೧೧. ರಂಗರಾಜ ವನದುರ್ಗ, ವಾಲ್ಮೀಕಿ ಕಿರಣ, ೧೯೯೮, ದಾವಣೆಗೆರೆ, ೧೯೯೮, ಪು. ೫೮-೬೧.

೧೨. ಅದೇ ಪು. ೫೮-೬೧.

೧೩. ಹರ್ತಿಕೋಟೆ ವಿರೇಂದ್ರಸಿಂಹ, ನಾಯಕ ಜನಾಂಗದ ಪರಂಪರೆ, op. cit., ವಾಲ್ಮೀಕಿ ಕಿರಣ, ೧೯೯೮, ದಾವಣಗೆರೆ.

೧೪. K. Abhishekar, Karnataka State Gazetter: Raichur District, Bangalore, Govt. Press, 1970 pp. 109.

೧೫. ಕೃಷ್ಣಮೂರ್ತಿ ಹನೂರು, ಮ್ಯಾಸಬೇಡರು, op. cit., ಪು.

೧೬. B. Shivashankarnarayan 'Tribes of South India', (೧೯೭೦: ೧೨೦) ಪು. ೧೨೦.

೧೭. M.V. Kishan Rao and G.S. Halappa: Valmiki Swarna Sanchike (1970) pp. 1-3.

೧೮. Edgar Thurston (1975: 001 II: 180).

೧೯. Suryanath U. Kamath, Nayaka's of Karnataka, (1982: 466).

೨೦. ಕೃಷ್ಣಮೂರ್ತಿ ಹನ್ನೂರು, op. cit., ಪು. ೭೮೭-೮೮.

21. Monier Monier Williams, A Sanskrit English Dictionary, 1986, p. 819.

೨೨. Tamil Lexicon, Vol. V, 1982, p. 3211.

೨೩. ಹೆಚ್. ದೇವೀಂದ್ರಪ್ಪ, (ಸಂ.) ರಾಮನಾಥ ಚರಿತೆ, ೧೯೬೪, ೮ನೇ ಸಂಧಿ, ೯೬ನೇ ಪದ್ಯ, ಪು. ೧೪೩.

೨೪. ಹರ್ತಿಕೋಟೆ ವೀರೇಂದ್ರ ಸಿಂಹ, ನಾಯಕ ಜನಾಂಗದ ಪರಂಪರೆ, ವಾಲ್ಮೀಕಿ ಕಿರಣ, ಪು. ೨೭-೩೨.

೨೫. ಕೃಷ್ಣಮೂರ್ತಿ ಹನೂರು, ಮ್ಯಾಸಬೇಡರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ೧೯೯೩, ಪು. ೩೨.

೨೬. ಅದೇ, ಪು. ೨೪-೨೫.

೨೭. Dhruva Basavaraj Jyothi, Social change among the Bedas, A sociological study, (Unpublished thesis), 1999, ಜೋಗನ ಶಂಕರ ಅವರ ವಿದ್ಯಾರ್ಥಿಯದು.

೨೮. ಎಂ. ಚಿದಾನಂದ ಮೂರ್ತಿ, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ-೧೯೬೬, ಪು. ೨೯೫-೨೯೬.

೨೯. ಪಿ.ಕೆ. ನಂಬಿಯಾರ್ ಅವರ Village Survey of Tamilnadu, Sirumali, ೧೯೬೪, ಪು. ೨೬-೨೭.

೩೦. ದೇಸಾಯಿ ಪಿ.ಬಿ., ಮದಗಜ ಮಲೆ, ೧೯೭೧, ಪು. ೧೯.

೩೧. ಕೃಷಮೂರ್ತಿ ಹನೂರು, ಮ್ಯಾಸಬೇಡರ ಸಂಸ್ಕೃತಿ, op. cit., ಪು. ೩೪-೩೫.

೩೨. ಹರ್ತಿಕೋಟೆ ವಿರೇಂದ್ರ ಸಿಂಹ, ನಾಯಕ ಜನಾಂಗದ ಪರಂಪರೆ, ವಾಲ್ಮೀಕಿ ಕಿರಣ, ೧೯೯೮, ಪು. ೨೭-೩೨.

೩೩. ಹರ್ತಿಕೋಟೆ ವಿರೇಂದ್ರ ಸಿಂಹ, ನಾಯಕ ಜನಾಂಗದ ಪರಂಪರೆ, ವಾಲ್ಮೀಕಿ ಕಿರಣ, ೧೯೯೮, ಪು. ೨೭-೩೨.

೩೪. ಎಂ. ಬಿ. ನೇಗಿನಹಾಳ, ಕನ್ನಡ ಸಾಹಿತ್ಯದಲ್ಲಿ ಬೇಡ ಜನಾಂಗ, ವಾಲ್ಮೀಕಿ ಕಿರಣ, ೧೯೯೮, ಪು. ೪೭-೫೦.

೩೫. ಕೃಷ್ಣಮೂರ್ತಿ ಹನೂರು, ಅದೇ, ಪು. ೮-೯.

೩೬. Social change among the Bedas, A sociological study, Dhruva Basavaraj Jyothi (Unpublished thesis), 2000.

೩೭. ಕೃಷ್ಣಮೂರ್ತಿ ಹನೂರು, ಮ್ಯಾಸಬೇಡರ ಸಂಸ್ಕೃತಿ, op. cit., ಪು. ೨೨-೨೩.

೩೮. ಜಿ. ಬಸವಂತಪ್ಪಾ, ವಾಲ್ಮೀಕಿ ಕಿರಣ, ೧೯೯೮, ಪು.೩೩-೩೬.

೩೯. L.G. Havanur, 1975, Report of the Second Backward classes Commission (1986) Vol. 2, Bangalore, Govt. of Karnataka.

೪೦. Report of the Second Backward classes Commission (1986) Vol. 2, Bangalore, Govt. of Karnataka.

೪೧. ಕರಿಶೆಟ್ಟಿ ರುದ್ರಪ್ಪ, ಮ್ಯಾಸ ನಾಯಕರು ಒಂದು ಜನಾಂಗಿಕ ಅಧ್ಯಯನ, ೧೯೯೫, ಪು. ೧೭.

೪೨. ಎಂ. ಬಿ. ನೇಗಿನಾಳ ಹರಿತಿಶ್ರೀ, ೧೯೯೬, ಪು. ೩೩೧.

೪೩. ಕೃಷ್ಣಮೂರ್ತಿ ಹನೂರು, op. cit., ಪು. ೬೦.

೪೪. ಕಪಟರಾಳ ಕೃಷ್ಣರಾವ, ಸುರಪುರ ಸಂಸ್ಥಾನದ ಇತಿಹಾಸ, ೧೯೭೭, ಪು. ೨೩೮.

೪೫. ಎಂ.ಎಸ್. ಪುಟ್ಟಣ್ಣ, ಚಿತ್ರದುರ್ಗ ಜಿಲ್ಲೆಯ ಪಾಳೆಯಗಾರರು, ೧೯೨೪.

೪೬. ಹರ್ತಿಕೋಟೆ ವೀರೇಂದ್ರ ಸಿಂಹ, ನಾಯಕ ಜನಾಂಗದ ಪರಂಪರೆ, ವಾಲ್ಮೀಕಿ ಕಿರಣ, ಪು. ೨೭-೩೨.

೪೭. ಕೃಷ್ಣಮೂರ್ತಿ ಹನೂರು, ಮ್ಯಾಸಬೇಡರ ಸಂಸ್ಕೃತಿ, op. cit., ಪು. ೨೭೮.

೪೮. ಕೃಷ್ಣಮೂರ್ತಿ ಹನೂರು, op. cit., ಪು. ೬೪-೭೫.

೪೯. ಕೃಷ್ಣಮೂರ್ತಿ ಹನೂರು, op. cit., ಪು. ೭೮೯-೯೦ (ಕರ್ನಾಟಕ ಬುಡಕಟ್ಟುಗಳು).

ಅಧ್ಯಾಯ - ೪

ಬೇಡರ ಜನಸಂಖ್ಯಾ ಲಕ್ಷಣಗಳು ಮತ್ತು ಸಾಮಾಜಿಕ ಚೌಕಟ್ಟು

(DEMOGRAPHIC FEATURES AND SOCIAL FRAMEWORK OF BEDA TRIBE)

೪.೧ ಬೇಡರ ಜನಸಂಖ್ಯಾ ವಿವರಣೆ

ಒಂದು ಜನಾಂಗದ ಆರ್ಥಿಕ ಚೌಕಟ್ಟನ್ನು ಸರಿಯಾಗಿ ತಿಳಿದುಕೊಳ್ಳಲು ಆ ಜನಾಂಗದ ಸಾಮಾಜಿಕ ರೂಪರೇಶಗಳನ್ನು ಅರಿಯುವುದು ಅತ್ಯಾವಶ್ಯಕ. ಆದುದರಿಂದ, ಬೇಡ ಸಮುದಾಯದ ಆರ್ಥಿಕ ಅಂಶಗಳನ್ನು ವಿಶ್ಲೇಷಿಸುವ ಮುನ್ನ, ಈ ಅಧ್ಯಾಯದಲ್ಲಿ ಅದರ ಸಾಮಾಜಿಕ ಚೌಕಟ್ಟನ್ನು ಈ ಕಳೆಗೆ ನೀಡಲಾಗಿದೆ. ಇದಲ್ಲದ, ಸಾಮಾಜಿಕ ಚೌಕಟ್ಟಿನ ಹಿನ್ನಲೆಯಾಗಿ ಅದರ ಜನಸಂಖ್ಯೆಯ ವಿವರಗಳನ್ನು ವಿವರಿಸಲಾಗಿದೆ.

ಭಾರತ ದೇಶ ಮತ್ತು ಕರ್ನಾಟಕ ರಾಜ್ಯ ಇವೆರಡು ಜನಸಂಖ್ಯೆ ಸ್ಥಿತ್ಯಂತರದ ಎರಡನೆಯ ಹಂತದಲ್ಲಿ (Second Phase of Demographical Transition) ಬರುತ್ತವೆ; ಅಂದರೆ, ಇವುಗಳ ಜನನ ಪ್ರಮಾಣ ದರ ಹೆಚ್ಚು (Birth rate is high) ಮತ್ತು ಮರಣ ಪ್ರಮಾಣ ದರ ಕಡಿಮೆ (Death rate is low). ಇಂತಹ ಸನ್ನಿವೇಶದಲ್ಲಿ ಕುಟುಂಬ ದೊಡ್ಡದಾಗಿರುವುದು ಸಹಜ. ಉದಾಹರಣೆಗೆ ೧೯೯೧ರಲ್ಲಿ ಜನನ ಪ್ರಮಾಣ (ಪ್ರತಿ ಸಾವಿರ ಸಂಖ್ಯೆಗೆ) ೨೯ ಇದ್ದರೆ ಮರಣ ಪ್ರಮಾಣ ಕೇವಲ ೧೦ ಇತ್ತು[೧]. ದೇಶ ಅಥವಾ ರಾಜ್ಯ ಮಟ್ಟದಲ್ಲಿ ಜನಸಂಖ್ಯೆ ಬೆಳವಣಿಗೆ ಪ್ರವೃತ್ತಿಯನ್ನು ಅದರ ಫಲವತ್ತತೆ (Fertility) ಮತ್ತು ಮರಣ ಪ್ರಮಾಣ (Mortality) ದರಗಳಿಂದ ಕಂಡುಕೊಳ್ಳಬಹುದು. ಆದರೆ, ಒಂದು ವೈಯಕ್ತಿಕ ಕುಟುಂಬದ ಸಂಖ್ಯೆಯನ್ನು ನಿರ್ಣಯಿಸಿಕೊಳ್ಳುವಲ್ಲಿ ಆ ಕುಟುಂಬದ ಸದಸ್ಯರ ಸಾಮಾಜಿಕ ಹಾಗೂ ಸಾಂಸ್ಕೃತಿಕ ಚೌಕಟ್ಟು ಮತ್ತು ಮಾನಸಿಕ ಪ್ರವೃತ್ತಿ ಅತಿ ಪ್ರಭಾವವನ್ನು ಬೀರುತ್ತದೆ. ಒಂದು ಕುಟುಂಬದಲ್ಲಿ ತಂದೆ-ತಾಯಿಯರಾದ ಹಿರಿಯರು ತಾವು ಈಗಾಗಲೇ ಹೊಂದಿರುವ ಒಂದೆರಡು ಅಥವಾ ಅದಕ್ಕಿಂತಲೂ ಹೆಚ್ಚಿನ ಸಂಖ್ಯೆಯಲ್ಲಿರುವ ಹೆಣ್ಣು ಮಕ್ಕಳ (Girl Child) ಜೊತೆಗೆ ಕನಿಷ್ಟ ಪಕ್ಷ ಒಂದಾದರು ಗಂಡು ಮಗು ಬೇಕೇ ಬೇಕು ಎಂಬ ಉತ್ಕಟ ಇಚ್ಛೆ (ಮಾನಸಿಕ ಪ್ರವೃತ್ತಿ) ಅವರನ್ನು ತಮ್ಮ ಕುಟುಂಬದ ವ್ಯಕ್ತಿಗಳ ಸಂಖ್ಯೆಯನ್ನು ಹೆಚ್ಚಾಗುವಂತೆ ಮಾಡುತ್ತದೆ. ಇಂಥಾ ಮಾನಸಿಕ ಪ್ರವೃತ್ತಿಯನ್ನು ಪರಿಶಿಷ್ಟ ವರ್ಗದಲ್ಲಿ ಬರುವ ಬೇಡರಲ್ಲದೆ, ಇತರ ಎಲ್ಲಾ ಜಾತಿಗಳವರು ಹೊಂದಿರುತ್ತಾರೆ. ಆದುದರಿಂದಲೇ ಏಷ್ಯಾ ಖಂಡದ ದೇಶಗಳಲ್ಲಿ ಕುಟುಂಬದ ಗಾತ್ರ ಯುರೋಪ ಖಂಡದ ದೇಶಗಳಿಗಿಂತ ಹೆಚ್ಚಾಗಿರುತ್ತದೆ. ಆದುದರಿಂದಲೆ ಸಂಶೋಧನಕಾರರು ಒಂದು ಜನಾಂಗದ ಸಾಮಾಜಿಕ-ಸಾಂಸ್ಕೃತಿಕ ಚೌಕಟ್ಟು ಮತ್ತು ಕುಟುಂಬದವರ ಮಾನಸಿಕ ಪ್ರವೃತ್ತಿಗಳನ್ನು ಅಭ್ಯಾಸ

ಮಾಡಬೇಕಾಗುತ್ತದೆ. ಇಂತಹ ಚೌಕಟ್ಟಿನಲ್ಲಿ ಬೇಡ ಸಮುದಾಯದ ಕುಟುಂಬದ ಪ್ರಮಾಣ ಮತ್ತು ರಚನೆಯ ಬಗ್ಗೆ ಈ ಕೆಳಗೆ ವಿವರಣೆ ನೀಡಲಾಗಿದೆ.

೪.೧.೧. ಬೇಡರ ಜನಸಂಖ್ಯೆಯ ವಿವರಣೆ (ತಾಲುಕುವಾರು)

ಒಟ್ಟು ಜನಸಂಖ್ಯೆ ೬೦೦೪ ಇದೆ ಎಂಬುದನ್ನು ಈಗಾಗಲೇ ಮೊದಲನೆಯ ಅಧ್ಯಾಯದಲ್ಲಿ ಕೋಷ್ಠಕ ೧.೧ ರಲ್ಲಿ ಹೇಳಿಯಾಗಿದೆ. ಈ ಬುಡಕಟ್ಟು ಜಿಲ್ಲೆಯ ಬಸವಕಲ್ಯಾಣ ತಾಲ್ಲೂಕಿನಲ್ಲಿ ಹೆಚ್ಚಾಗಿ ಕೇಂದ್ರಿಕೃತವಾಗಿದ ಇದಲ್ಲದೆ, ಹುಮನಾಬಾದ ಮತ್ತು ಭಾಲ್ಕಿ ತಾಲೂಕುಗಳಲ್ಲಿ ಬೇಡ ಜನ ಸ್ವಲ್ಪ ಮಟ್ಟಿಗೆ ಇದ್ದಾರೆ. ಬೇಡ ಬುಡಕಟ್ಟಿನ ಶೇಕಡಾವರು ವಾಸಿಸುವಿಕೆಯನ್ನು ಕೆಳಗಿನ ಕೋಷ್ಠಕ ತಿಳಿಯಪಡಿಸುತ್ತದೆ.

ಕೋಷ್ಠಕ ೪.೧ ತಾಲೂಕಾವಾರು ಬೇಡರ ಜನಸಂಖ್ಯೆ

ಕ್ರಮ ಸಂಖ್ಯೆ	ತಾಲೂಕುಗಳ ಹೆಸರು	ಪುರುಷರು	ಸ್ತ್ರೀಯರು	ಒಟ್ಟು	ಶೇಕಡಾವಾರು ಜನಸಂಖ್ಯೆ
೧.	ಬಸವಕಲ್ಯಾಣ	೨೯೯೫	೨೭೨೫	೫೭೨೦	೯೫.೦೪
೨.	ಹುಮನಾಬಾದ	೯೪	೯೧	೧೮೫	೩.೦೮
೩.	ಭಾಲ್ಕಿ	೫೪	೪೫	೯೯	೧.೬೫
ಬೀದರ ಜಿಲ್ಲೆ ಒಟ್ಟು		೩೧೪೩	೨೮೬೧	೬೦೦೪	೧೦೦.೦೦

ತಾಲೂಕುವಾರು ಬೇಡರ ಜನಸಂಖ್ಯೆಯು ಯಾವ ತಾಲೂಕಿನಲ್ಲಿ ವಾಸವಾಗಿದೆ ಎಂಬುದರ ಸ್ಪಷ್ಠ ಚಿತ್ರವನ್ನು ನೀಡುತ್ತದೆ. ಪ್ರಸ್ತುತ ಸಂಶೋಧನ ಅಂಕಿಗಳ ಪ್ರಕಾರ ಬೀದರ ಜಿಲ್ಲೆಯಲ್ಲಿ ಒಟ್ಟು ೬೦೦೪ ಬೇಡರಿದ್ದಾರೆ. ಅವರಲ್ಲಿ ೩೧೪೩ (೫೨.೩೫%) ಪುರುಷರು ಮತ್ತು ೨೮೬೧ (೪೭.೬೫%) ಸ್ತ್ರೀಯರಿದ್ದಾರೆ. ಜಿಲ್ಲೆಯ ಬಸವಕಲ್ಯಾಣ ತಾಲೂಕಿನಲ್ಲಿ ಇವರ ಸಂಖ್ಯೆ ಅತ್ಯಧಿಕವಾಗಿದ್ದರೆ, (೯೫.೦೪%) ಹುಮನಾಬಾದದಲ್ಲಿ (೩.೦೮%), ಭಾಲ್ಕಿಯ (೧.೬೫%) ಮತ್ತು ಬೀದರ ತಾಲ್ಲೂಕಿನಲ್ಲಿ ಅತ್ಯಂತ ಕಡಿಮೆ ಜನ (೧.೬೫%) ವಾಸಿಸುತ್ತಿದ್ದಾರೆ.

೪.೧.೨. ಬೇಡರ ಜನಸಾಂದ್ರತೆ

ಕೋಷ್ಠಕ ೪.೨ ಬೀದರ ಜಿಲ್ಲೆಯ ತಾಲೂಕಾವಾರು ಬೇಡರ ಜನಸಾಂದ್ರತೆ

ಕ್ರಮ ಸಂಖ್ಯೆ	ತಾಲೂಕಗಳ ಹೆಸರು	ಭೂ ವಿಸ್ತೀರ್ಣ ಚ.ಕಿ.ಮೀ.ಗಳಲ್ಲಿ	ಬೇಡರ ಜನಸಂಖ್ಯೆ	ಬೇಡರ ಜನಸಾಂದ್ರತೆ ಪ್ರತಿ ಚ.ಕಿ.ಮೀ.ಗಳ
೧.	ಬಸವಕಲ್ಯಾಣ	೧೨೦೬	೫೭೦೬	೦೫
೨.	ಹುಮನಾಬಾದ	೯೮೫	೧೮೫	೦೨
೩.	ಭಾಲ್ಕಿ	೧೧೧೭	೯೯	೦೧
೪.	ಬೀದರ	೯೨೬	೧೪	-
ಬೀದರ ಜಿಲ್ಲೆ ಒಟ್ಟು		೪೨೩೪	೬೦೦೪	೦೧

*ಮೂಲ: ಬೀದರ ಜಿಲ್ಲೆಯ ಅಂಕಿ ಸಂಖ್ಯೆಗಳು, ೧೯೯೮-೯೯.

ಬೀದರ ಜಿಲ್ಲೆಯ ಬೇಡರ ಸರಾಸರಿ ಜನಸಾಂದ್ರತೆ ೦೧ ಆಗಿದೆ ಅಂದರೆ ಜಿಲ್ಲೆಯ ಪ್ರತಿ ಚ.ಕಿ.ಮೀ. ಭೂಪ್ರದೇಶದಲ್ಲಿ ೦೧ ಜನ ಬೇಡರು ವಾಸಿಸುತ್ತಿದ್ದಾರೆ. ತಾಲ್ಲೂಕಾವಾರು ಬೇಡರ ಜನಸಾಂದ್ರತೆಯನ್ನು ಅವಲೋಕಿಸಿದಾಗ ಬಸವಕಲ್ಯಾಣದಲ್ಲಿ ಅತಿ ಹೆಚ್ಚಿನ ಜನಸಾಂದ್ರತೆ ಅಂದರೆ ಪ್ರತಿ ಚ.ಕಿ.ಮೀ. ೦೫ ಜನ ವಾಸಿಸುತ್ತಿರುವರು. ಮತ್ತು ಅತಿ ಕಡಿಮೆ ಜನಸಾಂದ್ರತೆ ಬೀದರ ಅಂದರೆ ಪ್ರತಿ ಚ.ಕಿ.ಮೀ. ೦೧ ಭಾಲ್ಕಿ ತಾಲ್ಲೂಕಿನಲ್ಲಿರುವದು. (ಕೋಷ್ಠಕ ೪.೨ ನೋಡಿ). ೧೯೯೧ ರ ಜನಗಣತಿಯ ಪ್ರಕಾರ ಜಿಲ್ಲೆಯ ಸರಾಸರಿ ಪರಿಶಿಷ್ಠ ಪಂಗಡದವರ ಜನಸಾಂದ್ರತೆ ೧೯ ಇದ್ದರೆ ಕರ್ನಾಟಕ ರಾಜ್ಯದಲ್ಲಿ ಕೇವಲ ೧೦ ಇತ್ತು. ಇದನ್ನು ಹೋಲಿಸಿದಾಗ ಬೇಡರ ಜನಸಾಂದ್ರತೆ, ಜಿಲ್ಲೆಯಲ್ಲಿ ಬಹಳಷ್ಟು ಕಡಿಮೆ ಪ್ರಮಾಣದಲ್ಲಿದೆ.

೪.೧.೩. ಬೇಡರ ಲಿಂಗ ಪ್ರಮಾಣ

ಲಿಂಗ ಪ್ರಮಾಣದ ವಿಶ್ಲೇಷಣೆಯು ೧೦೦೦ ಪುರುಷರಿಗೆ ಎಷ್ಟು ಜನ ಸ್ತ್ರೀಯರು ಇದ್ದಾರೆ ಎಂಬುದನ್ನು ಹೇಳುತ್ತದೆ. ಬುಡಕಟ್ಟಿನ ಸುರಕ್ಷತೆಗೆ ಸ್ತ್ರೀ-ಪುರುಷರ ಲಿಂಗ ಪ್ರಮಾಣದಲ್ಲಿ ಅಧಿಕ ವ್ಯತ್ಯಾಸ ಇರುವುದು ಸರಿಯಲ್ಲ. ಮೇಲಾಗಿ ಸಮ ಸಂಖ್ಯೆಯಲ್ಲಿದ್ದರೆ ಇನ್ನೂ ಒಳ್ಳೆಯದು, ಆದರೆ ಹಾಗಿರುವುದು ಅಪರೂಪ. ಕೋಷ್ಠಕ ೪.೩ ಲಿಂಗ ಪ್ರಮಾಣದ ವಿವರಗಳನ್ನು ನೀಡುತ್ತದೆ.

ಕೋಷ್ಠಕ ೪.೩ ಬೀದರ ಜಿಲ್ಲೆಯ ತಾಲೂಕುವಾರು ಬೇಡರ ಲಿಂಗ ಪ್ರಮಾಣ

ಕ್ರಮ ಸಂಖ್ಯೆ	ತಾಲೂಕುಗಳು	ಬೇಡರ ಜನಸಂಖ್ಯೆ		ಲಿಂಗ ಪ್ರಮಾಣ ಪ್ರತಿ ಸಾವಿರ ಪುರುಷರಿಗೆ
		ಪುರುಷರು	ಸ್ತ್ರೀಯರು	
೧.	ಬಸವಕಲ್ಯಾಣ	೨೯೯೫	೨೭೨೫	೯೧೦
೨.	ಹುಮನಾಬಾದ	೯೪	೯೧	೯೬೮
೩.	ಭಾಲ್ಕಿ	೫೪	೪೫	೮೩೩
ಬೀದರ ಜಿಲ್ಲೆ ಒಟ್ಟು		೩೧೪೩	೨೮೬೧	೯೧೦

ಬೀದರಿನ ಬೇಡರಲ್ಲಿ ಸರಾಸರಿ ಲಿಂಗ ಪ್ರಮಾಣ ೯೧೦ ಇರುವುದು. ಅಂದರೆ, ಒಂದು ಸಾವಿರ ಪುರುಷರಿಗೆ ೯೧೦ ಸ್ತ್ರೀಯರು ಲಭ್ಯವೆಂದರ್ಥ. ವಿಷಯ ಹೀಗಿದ್ದರೂ, ಇತ್ತೀಚಿಗೆ ವರಪಕ್ಷಿಣೆ ಸಮಸ್ಯೆ ಹೆಚ್ಚಾಗುತ್ತಿದೆ. ೧೯೯೧ರ ಜನಗಣತಿಯ ಪ್ರಕಾರ ಬೀದರ ಜಿಲ್ಲೆಯ ಸರಾಸರಿ ಲಿಂಗ ಪ್ರಮಾಣ ೯೫೪; ಕರ್ನಾಟಕ ರಾಜ್ಯ ೯೬೧; ಮತ್ತು ಭಾರತದಲ್ಲಿ ೯೨೯; ಆಗಿತ್ತು. ರಾಜ್ಯ ಮತ್ತು ರಾಷ್ಟ್ರದ ಲಿಂಗ ಪ್ರಮಾಣಕ್ಕೆ ಹೋಲಿಸಿದರೆ ಬೇಡರಲ್ಲಿ ಇದರ ಪ್ರಮಾಣ ಕಡಿಮೆ ಇರುತ್ತದೆ. ಜಿಲ್ಲೆಯ ಹುಮನಾಬಾದ ತಾಲೂಕಿನಲ್ಲಿ ೯೬೮ ಅತಿ ಹೆಚ್ಚಿನ ಲಿಂಗ ಪ್ರಮಾಣ ಇದ್ದು, ಬೀದರಿನಲ್ಲಿ ಅತಿ ಕಡಿಮೆ ಅಂದರೆ ೭೫೦ ಲಿಂಗ ಪ್ರಮಾಣ ಇರುತ್ತದೆ.

೪.೧.೪. ಬೇಡರ ಗ್ರಾಮೀಣ ಮತ್ತು ನಗರ ಜನಸಂಖ್ಯೆ

ಗಿರಿಜನರು ಸಾಮಾನ್ಯವಾಗಿ ನಗರ ಪ್ರದೇಶದಿಂದ ದೂರದ ಗಿರಿ ಪ್ರದೇಶಗಳಲ್ಲಿ ವಾಸಿಸುವರೆಂಬ ಸಂಗತಿ ಸಾರ್ವತ್ರಿಕವಾಗಿ ದಿಟ್ಟವಾಗಿರುವದು. ಇದು ಬೀದರ ಜಿಲ್ಲೆಯ ಬೇಡರಿಗೂ ಅನ್ವಯಿಸುವುದು. ಉದಾಹರಣೆಗೆ ಜಿಲ್ಲೆಯ ಬೇಡರಲ್ಲಿ ೫,೯೯೦ (೯೯.೭೭%)ರಷ್ಟು ಜನ ಹಳ್ಳಿಗಳಲ್ಲಿ ಮತ್ತು ಕೇವಲ ೧೪ (೦.೨೩%)ರಷ್ಟು ಜನ ನಗರದಲ್ಲಿ ವಾಸವಾಗಿರುತ್ತಾರೆ. ಆದರೆ, ಬೀದರ ಜಿಲ್ಲೆಯ ರಾಜಗೊಂಡ ಅಲೆಮಾರಿ ಆದಿವಾಸಿಗಳಿಗೆ ಇದು ಅನ್ವಯಿಸುವುದಿಲ್ಲ[೨].

ಬೇಡರ ಆಂತರಿಕ ರಚನೆ

ಇತರ ಆದಿವಾಸಿ ಜನರಂತೆ ಬೇಡರಲ್ಲಿಯೂ ಒಂದು ಆಂತರಿಕ ರಚನೆವುಂಟು. ಇದು ಇವರ ಸಾಮಾಜಿಕ ವ್ಯವಸ್ಥೆಯನ್ನು ಪ್ರತಿನಿಧಿಸುತ್ತದೆ.

ಬೀದರ ಜಿಲ್ಲೆಯ ಬೇಡರ ಹೊರಬಾಂಧವ್ಯದ ಬಳಿಗಳು ಹೀಗಿವೆ:

೧. ಜಂಪಲೆ

೨. ಮೊಮ್ಮಳೆ

೩. ಗುಜಲೆ

೪. ಗೊಸಲೆ

೫. ಬೊಗಲೆ (ಬೊಸಲೆ)
೬. ಕಲ್ಮಲೆ
೭. ಮಂಡಲೆ

೪.೧.೫. ಬೇಡರ ಕುಟುಂಬ

ಕುಟುಂಬ ಮಾನವನ ಪ್ರಾಥಮಿಕ ಸಮಾಜಿಕ ಸಂಸ್ಥೆ ಹಾಗೂ ಮಾನವ ಸಮಾಜದ ಅವಿಭಾಜ್ಯ ಅಂಗ. ವಿಶ್ವದ ಎಲ್ಲ ಜನತೆ ಕುಟುಂಬ ಎಂಬ ಸಾಮಾಜಿಕ ಘಟಕದಲ್ಲಿಯೇ ವಾಸಿಸುವರು. ಆದರೆ, ಕುಟುಂಬದ ರಚನೆ ಎಲ್ಲ ಕಡೆ ಏಕರೀತಿಯಾಗಿಲ್ಲ. ಅದು ಸಮಾಜದಿಂದ ಸಮಾಜಕ್ಕೂ, ಭಿನ್ನ ರೀತಿಯ ರಚನೆಯನ್ನು ಹೊಂದಿರುತ್ತದೆ ಎಂಬುದು ತಜ್ಞರ ಅಭಿಪ್ರಾಯ[೬].

ಬೀದರ ಜಿಲ್ಲೆಯ ತಾಲ್ಲೂಕುಗಳಾದ ಬಸವಕಲ್ಯಾಣ, ಹುಮನಾಬಾದ ಮತ್ತು ಭಾಲ್ಕಿಗಳಲ್ಲಿ ಬೇಡರ ಜೊತೆಗೆ ಇನ್ನಿತರ ಆದಿವಾಸಿಗಳಾದ, ಗೊಂಡ, ರಾಜಗೊಂಡ, ಟೋಕ್ರಿಕೋಳಿ, ಪಾಸಿ ಪಾರ್ಧಿ ಮೇದ ಮುಂತಾದವರು ವಾಸವಾಗಿರುತ್ತಾರೆ. ಬೇಡರ ಕುಟುಂಬದಲ್ಲಿ ಕಿರಿಯರು ತಂದೆ-ತಾಯಿ ಮತ್ತು ಹಿರಿಯರನ್ನು ಬಹಳ ಆದರದಿಂದ ನೋಡಿಕೊಳ್ಳುತ್ತಾರೆ. ಇದಲ್ಲದೆ, ಇವರಲ್ಲಿ ಪರಸ್ಪರ ಅವಲಂಬನ (Mutual depfendency) ಅತಿ ಹೆಚ್ಚು ಇದೆ. ಇದಕ್ಕೆ ಕಾರಣ ಇವರು ಆರ್ಥಿಕವಾಗಿ ತುಲನಾತ್ಮಕವಾಗಿ ಹಿಂದುಳಿದಿರುವದು. ಇಂದಿಗೂ ಬೇಡರು ವಾಸಿಸುವ ನೆಲೆಗಳಿಗೆ ಮೂಲಭೂತ ಸವಲತ್ತುಗಳಾದ ರಸ್ತೆ, ಪ್ರಾಥಮಿಕ ಶಾಲೆ, ಆಸ್ಪತ್ರೆ ಮುಂತಾದವುಗಳು ಇಲ್ಲವಾಗಿವೆ.

೪.೧.೬. ಕುಟುಂಬದ ಸರಾಸರಿಗಾತ್ರ

ಬೇಡರ ಕುಟುಂಬಗಳಲ್ಲಿ ಸರಾಸರಿ ಆರು ಜನರಿರುವರು. (ಕೋಷ್ಠಕ ೪.೪ ನೋಡಿ) ಉಳಿದ ಆದಿವಾಸಿ ಕುಟುಂಬಗಳಿಗೆ ಈ ಸಂಖ್ಯೆ ಸಮೀಪವಿರುತ್ತದೆ. ಉದಾಹರಣೆಗೆ ರಾಜಗೊಂಡರ ಕುಟುಂಬಗಳ ಸರಾಸರಿ ಗಾತ್ರ ಏಳು[೭]. ಬಸವಕಲ್ಯಾಣ, ಹುಮನಾಬಾದ ಮತ್ತು ಭಾಲ್ಕಿ ತಾಲೂಕುಗಳಲ್ಲಿ ೫ ರಿಂದ ೭ ಜನ ಹೊಂದಿರುವ ಕುಟುಂಬಗಳು ಅತಿ ಹೆಚ್ಚಿನ ಪ್ರಮಾಣದಲ್ಲಿವೆ. ಉದಾಹರಣೆಗೆ ಇಂತಹ ಕುಟುಂಬಗಳು ಶೇ. ೫೦ ಹುಮನಾಬಾದ ಮತ್ತು ಭಾಲ್ಕಿಗಳಲ್ಲಿ ಇದ್ದರೆ, ಬಸವಕಲ್ಯಾಣ ತಾಲ್ಲೂಕಿನಲ್ಲಿ ಇವುಗಳ ಪ್ರಮಾಣ ಶೇ. ೪೭.೮೧ ಇರುತ್ತದೆ. ಒಂದರ್ಥದಲ್ಲಿ ಐದರಿಂದ ಏಳು ಜನರ ಕುಟುಂಬಗಳೇ ಹೆಚ್ಚಿನ ಸಂಖ್ಯೆಯಲ್ಲಿರುತ್ತವೆ. ಈ ವಿಷಯ ಉಳಿದ ಆದಿವಾಸಿಗಳ ಬುಡಕಟ್ಟಿನವರಿಗೂ ಸಹ ಅನ್ವಯಿಸುತ್ತದೆ. ಉದಾಹರಣೆಗೆ ಬೀದರಿನ ಗೊಂಡ ಆದಿವಾಸಿಗಳಲ್ಲಿ ೫ ರಿಂದ ೭ ಜನರು ಇರುವ ಕುಟುಂಬಗಳ ಸಂಖ್ಯೆ ಶೇ. ೫೦.೦೦ ರಷ್ಟಿರುವುದು.

೧ ರಿಂದ ೪ ಜನ ಹೊಂದಿರುವ ಕುಟುಂಬಗಳು ಭಾಲ್ಕಿ ತಾಲ್ಲೂಕಿನಲ್ಲಿ ಶೇ. ೩೩.೩೩, ಬಸವಕಲ್ಯಾಣ ತಾಲ್ಲೂಕಿನಲ್ಲಿ ಶೇ. ೨೮.೦೨ ಮತ್ತು ಹುಮನಾಬಾದ ತಾಲ್ಲೂಕಿನಲ್ಲಿ ಶೇ. ೧೯.೨೩ ಇರುವವು.

೧೪ರ ಮೇಲ್ಪಟ್ಟು ಇರುವ ಜನಸಂಖ್ಯೆಯ ಕುಟುಂಬಗಳ ಪ್ರಮಾಣ ಅತ್ಯಲ್ಪವಾಗಿದೆ. ಬಸವಕಲ್ಯಾಣ ತಾಲ್ಲೂಕಿನ ಒಂದೇ ಒಂದು ಕುಟುಂಬದಲ್ಲಿ ಅತ್ಯಧಿಕ ಜನ ಅಂದರೆ ೧೯ ಜನರು ಇದ್ದಾರೆ. ಅತಿ ಕಡಿಮೆ ಅಂದರೆ ಒಬ್ಬ ವ್ಯಕ್ತಿಯಿದ್ದ ಕುಟುಂಬಗಳು ಬಸವಕಲ್ಯಾಣ ತಾಲ್ಲೂಕಿನಲ್ಲಿವೆ ಮತ್ತು ಇವುಗಳ ಸಂಖ್ಯೆ ಕೇವಲ ೪.

ಈ ಹಿಂದೆ ಹೇಳಿರುವಂತೆ, ಒಂದಾದರೂ ಗಂಡು ಮಗು ಬೇಕು ಎನ್ನುವ ಮಾನಸಿಕ ಪ್ರವೃತ್ತಿ ಬೇಡರ ಕುಟುಂಬದ ಗಾತ್ರವನ್ನು ತುಲನಾತ್ಮಕವಾಗಿ ಹೆಚ್ಚಿಸಿದೆ. ದೇಶದ ಇನ್ನಿತರ ಹಿಂದುಳಿದ ಮತ್ತು ಬಡ ಜನರಲ್ಲಿ ಇರುವಂತೆ ಬೇಡ ಜನರ ಮನದಲ್ಲಿಯೂ ಮಕ್ಕಳೂ ಸಹ ಹೊರಗಡೆ ಬಾಲ ಕಾರ್ಮಿಕರಾಗಿ ಮತ್ತು ಮನೆಯಲ್ಲಿ ಹಾಗೂ ಹೊಲದಲ್ಲಿ ತಮ್ಮ ಕೆಲಸದಲ್ಲಿ ಸಹಾಯಮಾಡುವರು. ಇವರು "ನಮಗೇನು ಹೊರೆಯಲ್ಲ" ಎನ್ನುವ ಭಾವನೆ ಇವರಲ್ಲಿ ಇದೆ. ಮೇಲಾಗಿ "ಗಂಡು ಹುಡುಗರು ಕುಲದ ಉದ್ಧಾರಕರು ಎಷ್ಟು ಜನ ಹೆಣ್ಣುಮಕ್ಕಳು ಇದ್ದರೇನು ಅವರು ಮದುವೆಯಾದ ನಂತರ ಬೇರೆಯವರ ಮನೆಗೆ ಹೋಗುವವರು - ಗಂಡು ಮಗು ಬೇಕೇ ಬೇಕು" ಎನ್ನುತ್ತಾರೆ. ಈ ಭಾವನೆ ಸಹ ಕುಟುಂಬ ಜನಸಂಖ್ಯೆಯನ್ನು ಹೆಚ್ಚಿಸಿದೆ.

ಕುಟುಂಬದ ಗಾತ್ರವನ್ನು ಹೆಚ್ಚಿಸುವ ಇನ್ನೊಂದು ಪ್ರಮುಖವಾದ ಅಂಶವೆಂದರೆ - ಅವಿಭಕ್ತ ಕುಟುಂಗಳ ಅಸ್ತಿತ್ವ ಇನ್ನೂ ಉಳಿದಿರುವುದು.

೪.೧.೭. ಅವಿಭಕ್ತ ಕುಟುಂಬ

ಬೇಡ ಬುಡಕಟ್ಟಿನ ಜನರಲ್ಲಿ ಶೇ. ೫೫.೩೫ ರಷ್ಟು ಅವಿಭಕ್ತ ಕುಟುಂಬಗಳು ಇವೆ. ಇವುಗಳು ಸ್ವಯಂ ಪರಿಪೂರ್ಣತೆಗೆ ಸಮೀಪವಾಗಿವೆ. ಈ ಕುಟುಂಬಗಳ ಸದಸ್ಯರಲ್ಲಿ ಒಂದು ತರಹದ ಶ್ರಮವಿಭಜನೆಯನ್ನು ಕಾಣುತ್ತೇವೆ. ಉದಾಹರಣೆಗೆ ಕೆಲವರು ಒಕ್ಕಲುತನ ಮಾಡಿದರೆ, ಇನ್ನೂ ಕೆಲವರು ಆಡು(ಮೇಕೆ)ಗಳನ್ನು ಮತ್ತು ದನಗಳನ್ನು ನೋಡಿಕೊಳ್ಳುವವರಾಗಿರುತ್ತಾರೆ. ಹೆಣ್ಣು ಮಕ್ಕಳು ಮನೆಕೆಲಸವನ್ನು ಮಾಡುವರು ಮತ್ತು ಮಕ್ಕಳು ತಂದೆ-ತಾಯಿಗಳಿಗೆ ಸಹಾಯಕಾರಿಯಾಗಿರುವರು. ಒಟ್ಟಿನಲ್ಲಿ ಅವಿಭಕ್ತ ಕುಟುಂಬ ಒಂದು ಸ್ವಯಂಚಾಲಿತ ಯಂತ್ರದಂತೆ ಕಾರ್ಯ ಮಾಡುತ್ತಿರುತ್ತದೆ.

೪.೧.೮. ವಿಭಕ್ತ ಕುಟುಂಬ

ತಂದೆಯ ಜೀವಿತಾವಧಿಯಲ್ಲಿಯೇ ಮಕ್ಕಳು ತಂದೆಯಿಂದ ಬೇರ್ಪಟ್ಟು ಸ್ವತಂತ್ರವಾಗಿ ಬೇರೆ ಪಟ್ಟಣಗಳಲ್ಲಿ ದುಡಿಯುತ್ತಿರುವುದನ್ನು ವಿಭಕ್ತ ಕುಟುಂಬಗಳಲ್ಲಿ ಕಾಣಸಿಗುತ್ತವೆ. ಶೇಕಡಾ ೪೪.೬೫ ಕುಟುಂಬಗಳು ಇಂತಹ ಕುಟುಂಬಗಳಾಗಿವೆ.

೪.೨ ಶಿಕ್ಷಣ

ಶಿಕ್ಷಣವು "ಮಾನವನ ದೈಹಿಕ ಬೌದ್ಧಿಕ ಮತ್ತು ನೈತಿಕ ಮಟ್ಟವನ್ನು ವೃದ್ಧಿಪಡಿಸುವ ಒಂದು ಸಾಧನ" ಎಂದು ಕಚ್ರೂ ವಿಜಯ ಹೇಳಿದ್ದಾರೆ[೮]. ಸಾಮಾನ್ಯವಾಗಿ ಆದಿವಾಸಿಗಳಲ್ಲಿ ಅಕ್ಷರ ಜ್ಞಾನವುಳ್ಳವರು ಕಡಿಮೆ. ಬೇಡ ಬುಡಕಟ್ಟು ಇದಕ್ಕೆ ಅಪವಾದವಾಗಿರುವುದಿಲ್ಲ. ಆದರೆ, ಈ ಬುಡಕಟ್ಟಿನ ಅಭಿವೃದ್ಧಿಯಲ್ಲಿ ಶಿಕ್ಷಣ ಅತಿ ಮಹತ್ವದ ಪಾತ್ರವನ್ನು ವಹಿಸುತ್ತದೆ ಎಂಬುದು ಎಲ್ಲರಿಗೂ ಮನದಟ್ಟಾಗಿರುವ ವಿಷಯವಾಗಿದೆ. ಒಂದು ಕಾಲದಲ್ಲಿ ದುನ-ಕುರಿ ಕಾಯುವ ನಮಗೆ ಅಕ್ಷರದ ಅವಶ್ಯಕತೆ ಏನು ಎಂದು ಬೇಡರು ಪ್ರಶ್ನಿಸುತ್ತಿದ್ದರು. ಆದರೆ, ಈಗ ಪರಿಸ್ಥಿತಿ ಬದಲಾಗತೊಡಗಿದೆ.

ಇಂದು ಬೇಡರು ಸುಧಾರಿತ ಬೇಸಾಯವನ್ನು ತಮ್ಮದಾಗಿಸಿಕೊಳ್ಳಬೇಕಾಗಿದೆ. ಇವರು ಔದ್ಯಮಿಕ ರಂಗದಲ್ಲಿ (Industrial Sector) ಮತ್ತು ಸೇವಾ ರಂಗದಲ್ಲಿ (Service Sector) ಹೆಚ್ಚಾಗಿ ಭಾಗವಹಿಸಿ ಈ ರಂಗಗಳು ನೀಡುವ ಹೆಚ್ಚಾಗುತ್ತಿರುವ ಕೊಳ್ಳುವ ಶಕ್ತಿಯನ್ನು (Increasing purchasing power) ಅನುಭವಿಸಿ ಬಡತನದ ರೇಖೆಯಿಂದ ಮೇಲೆ ಬರಬೇಕಾಗಿದೆ. ಇದಕ್ಕೆಲ್ಲಾ ಶಿಕ್ಷಣಬೇಕು. ಈ ಸಂದರ್ಭದಲ್ಲಿ ಇವರಿಗೆ ಕಾಲೇಜು ಶಿಕ್ಷಣ ಮತ್ತು ವಿಶ್ವವಿದ್ಯಾಲಯದಲ್ಲಿ ಶಿಕ್ಷಣ ಹಾಗೂ ವೈದ್ಯಕೀಯ ತಾಂತ್ರಿಕ ಶಿಕ್ಷಣದ ಸೌಲತ್ತುಗಳನ್ನು ತಕ್ಷಣ ಒದಗಿಸಬೇಕಾಗಿದೆ. ದ್ವಿತೀಯ ಹಾಗೂ ತೃತೀಯ ರಂಗಗಳಲ್ಲಿ ನೌಕರಿ ಮಾಡಲು ಅರ್ಹನ್ನಾಗಿಸುತ್ತದೆ.

ಬೇಡರ ಸಾಕ್ಷರತಾ ಪ್ರಮಾಣ

೪.೨.೧ ಬೀದರ ಜಿಲ್ಲೆಯ ಸಾರ್ವತ್ರಿಕ ಸಾಕ್ಷರತೆ ಪ್ರಮಾಣ ಮತ್ತು ಬೇಡರ ಸಾಕ್ಷರತೆ ಪ್ರಮಾಣ

ಶೈಕ್ಷಣಿಕವಾಗಿ ಕರ್ನಾಟಕದಲ್ಲಿ ಬೀದರ ಹಿಂದುಳಿದ ಜಿಲ್ಲೆ. ಜಿಲ್ಲೆಯ ಒಟ್ಟು ಸಾಕ್ಷರತೆ ೧೯೯೧ರ ಜನಗಣತಿಯ ಪ್ರಕಾರ ೪೫.೧೯ ಇದೆ, (ವಿವರಗಳಿಗೆ ಕೋಷ್ಠಕ ೪.೫ ನೋಡಿ) ಮುಂದುವರಿದು, ಹೆಂಗಸರ ಸಾಕ್ಷರತೆಯ ಪ್ರಮಾಣ ಇನ್ನೂ ಕಡಿಮೆ ಇರುತ್ತದೆ (೩೦.೫೩%). ಬೀದರ ಜಿಲ್ಲೆಯ ಬೇಡರ ಸಾಕ್ಷರತೆ ಇತರ ಸಮುದಾಯವರೊಂದಿಗೆ ಹೋಲಿಸಿದಾಗ ನಾವು ಒಂದು ನಿರಾಶದಾಯಕ ಚಿತ್ರಣವನ್ನು ಕಾಣುತ್ತೇವೆ.

ಬೇಡ ಜನರ ಒಟ್ಟು ಜನಸಂಖ್ಯೆ ೬೦೦೪. ಈ ಸಮುದಾಯದ ಸಾಕ್ಷರತೆ ಜಿಲ್ಲೆಯ ಸಾರ್ವತ್ರಿಕ ಸಾಕ್ಷರತೆಗಿಂತ ಬಹಳ ಕಡಿಮೆ ಪ್ರಮಾಣದಲ್ಲಿದೆ. ಉದಾಹಾರಣೆಗೆ ಸಾರ್ವತ್ರಿಕ ಸಾಕ್ಷರತೆ ೪೫.೧೯ ಇದ್ದರೆ ಬೇಡರ ಸಾಕ್ಷರತೆ ೨೬.೨೮% ಇದೆ. (ವಿವರಗಳಿಗೆ ಕೋಷ್ಠಕ ೪.೬ ನೋಡಿ) ಮುಂದುವರಿದು, ಬೇಡ ಬುಡಕಟ್ಟಿನ ಹೆಂಗಸರ ಸಾಕ್ಷರತೆ ಅತಿ ಕಡಿಮೆ ೧೪.೪೫% ಇದೆ. ಇದು ಪುರುಷರ ಸಾಕ್ಷರತೆಯ ಪ್ರಮಾಣಕ್ಕಿಂತ ಶೇ. ೩೩.೦೩ ಕ್ಕಿಂತ ಬಹಳಷ್ಟು ಕಡಿಮೆಯಿದೆ. ಒಟ್ಟು ಉನ್ನತ ಶಿಕ್ಷಣ ಪಡೆದ ೫೨ ಸ್ತ್ರೀಯರಲ್ಲಿ, ಹಾಗೂ ಮುಂದಿನ ೪೨ (೮೦.೭೭%) ಜನ ೧೦ನೇ ತರಗತಿ ಪಾಸಾದವರು; ಎಂಟು ಜನ (೧೫.೩೮%) ಪಿ.ಯು.ಸಿ. ಪಾಸಾದವರು; ಇಬ್ಬರು (೩.೮೫%) ಮಹಿಳೆಯರು ಪದವೀಧರರು. ವೃತ್ತಿಪರ ಶಿಕ್ಷಣದಲ್ಲಿ ಸ್ತ್ರೀಯರ ಪಾಲು ಇಲ್ಲವೇ ಇಲ್ಲ. ತಾಲ್ಲೂಕಾವಾರು ಸಾಕ್ಷರತೆಯ ವಿಶ್ಲೇಷಣೆಗೆ ಬಂದಾಗ ಹುಮನಾಬಾದ ತಾಲ್ಲೂಕಾ ತುಲನಾತ್ಮಕವಾಗಿ ಹೆಚ್ಚಿನ ಸ್ತ್ರೀ ಸಾಕ್ಷರರನ್ನು (೨೩.೦೮%) ಹೊಂದಿರುತ್ತದೆ. ನಂತರ ಭಾಲ್ಕಿ ತಾಲ್ಲೂಕಾ (೧೭.೭೮%), ಕೊನೆಯದಾಗಿ ಬಸವಕಲ್ಯಾಣ ತಾಲ್ಲೂಕಾ (೧೪.೦೫%) ಸ್ತ್ರೀ ಸಾಕ್ಷರರನ್ನು ಹೊಂದಿದೆ. ಹುಮನಾಬಾದ ತಾಲ್ಲೂಕ ಅತಿ ಹೆಚ್ಚಿನ ಪುರುಷ ಸಾಕ್ಷರರನ್ನು (೪೮.೯೪%) ಹೊಂದಿದೆ ಮತ್ತು ಭಾಲ್ಕಿ ತಾಲ್ಲೂಕಾ ಅತಿ ಕಡಿಮ ಪುರಷ ಸಾಕ್ಷರರನ್ನು (೪೨.೫೯%) ಹೊಂದಿದೆ. ೧೯೯೧ ರಿಂದ ಇತ್ತೀಚೆಗೆ ಕಡ್ಡಾಯ ಶಿಕ್ಷಣ ಹಾಗೂ ಹಲವಾರು ಗ್ರಾಮುಗಳಲ್ಲಿ ಸರಕಾರಿ ಶಾಲೆಗಳಿರುವುದರಿಂದ ಆ ಗ್ರಾಮುಗಳಲ್ಲಿ ಯಾವ ತರಗತಿಯವರೆಗ ಶಾಲೆಗಳಿವೆಯೋ ಆ ತರಗತಿಯವರೆಗೆ ತಕ್ಕಮಟ್ಟಿಗೆ ಹೆಣ್ಣು ಮಕ್ಕಳು ಮತ್ತು ಗಂಡು ಮಕ್ಕಳು ಶಾಲೆಗಳಿಗೆ ಹೋಗುತ್ತಿದ್ದಾರೆ. ಬೇಡ ಬುಡಕಟ್ಟಿನ ಹೆಣ್ಣು ಮಕ್ಕಳು ಇತರ ಆದಿವಾಸಿ ಜನಾಂಗದ ಹೆಣ್ಣು ಮಕ್ಕಳಂತೆ ೭ ವರ್ಷದ ವಯಸ್ಸಿನವರಿರುವಾಗ ಶಾಲೆಗೆ ಸೇರಿಸುವರು. ೭ನೇ ತರಗತಿಗೆ ತಲುಪುವಷ್ಟರಲ್ಲಿಯೇ ಋತುಮತಿಯರಾಗುವುದರಿಂದ ಅವರನ್ನು ವಿವಾಹ ಬಂಧನಕೊಳ್ಳಪಡಿಸುವವರು[೬].

ಕೋಷ್ಠಕ ೪.೪ ಬೀದರ ಜಿಲ್ಲೆಯ ಬೇಡ ಕುಟುಂಬಗಳ ಗಾತ್ರ ತಾಲ್ಲೂಕಾವಾರು

ಕ್ರಮ ಸಂಖ್ಯೆ	ಕುಟುಂಬಗಳ ಗಾತ್ರ	ಬಸವಕಲ್ಯಾಣ	ಹುಮನಾಬಾದ	ಭಾಲ್ಕಿ
೧	೧ ರಿಂದ ೪	೨೬೨ (೨೮.೦೨)	೦೫ (೧೯.೨೩)	೦೬ (೩೩.೩೩)
೨.	೫ ರಿಂದ ೭	೪೪೭ (೪೭.೮೧)	೧೩ (೫೦.೦೦)	೦೯ (೫೦.೦೦)
೩.	೮ ರಿಂದ ೧೦	೧೬೨ (೧೭.೩೩)	೦೫ (೧೯.೨೩)	೦೨ (೧೧.೧೧)
೪.	೧೧ ರಿಂದ ೧೩	೫೩ (೫.೬೭)	೦೧ (೩.೮೫)	೦೧ (೫.೫೬)
೫.	೧೪ ರ ಮೇಲ್ಪಟ್ಟು	೧೨ (೧.೧೭)	೦೨ (೭.೬೪)	೦೦ (೦೦.೦೦)
ತಾಲ್ಲೂಕಾವಾರು ಒಟ್ಟು		೯೩೫ (೧೦೦.೦೦)	೨೬ (೧೦೦.೦೦)	೧೮ (೧೦೦.೦೦)

[illegible]

ಕೋಷ್ಠಕ : ೪.೫ ಬೀದರ ಜಿಲ್ಲೆಯ ಸಾಕ್ಷರತೆಯ ಪ್ರಮಾಣ

ಗಂಡಸರು	ಹೆಂಗಸರು	ಒಟ್ಟು
೫೮.೯೭	೩೦.೫೩	೪೫.೧೧

ಮೂಲ: ಕರ್ನಾಟಕ ಅಂಕಿ-ಅಂಶಗಳ ನೋಟ, ಬೆಂಗಳೂರು, ೧೯೯೬-೯೭.

ಕೋಷ್ಠಕ : ೪.೬ ಬೀದರ ಜಿಲ್ಲೆಯ ಬೇಡರ ಸಾಕ್ಷರತೆ ಪ್ರಮಾಣ

ಗಂಡಸರು	ಹೆಂಗಸರು	ಒಟ್ಟು
೩೩.೦೩	೧೪.೫೪	೨೬.೨೮

ಕೋಷ್ಠಕ : ೪.೭ ತಾಲೂಕವಾರು ಸಾಕ್ಷರ-ನಿರಕ್ಷರ ವಿವರ

ಕ್ರಮ ಸಂಖ್ಯೆ	ತಾಲ್ಲೂಕುಗಳು	ಪುರುಷರ			ಸ್ತ್ರೀಯರು		
		ನಿರಕ್ಷರರು	ಸಾಕ್ಷರರು	ಒಟ್ಟು	ನೀರಕ್ಷರರು	ಸಾಕ್ಷರರು	ಒಟ್ಟು
೧.	ಬಸವಕಲ್ಯಾಣ	೨೦೨೬ (೬೭.೬೫)	೯೬೯ (೩೨.೩೫)	೨೯೯೫ (೧೦೦.೦೦)	೨೩೩೬ (೮೫.೯೫)	೩೮೯ (೧೪.೦೫)	೨೭೨೫ (೧೦೦.೦೦)
೨.	ಹುಮನಾಬಾದ	೪೮ (೫೧.೦೬)	೪೬ (೪೮.೯೪)	೯೪ (೧೦೦.೦೦)	೭೦ (೭೬.೯೨)	೨೧ (೨೩.೦೮)	೯೧ (೧೦೦.೦೦)
೩.	ಭಾಲ್ಕಿ	೩೧ (೫೭.೪೧)	೨೩ (೪೨.೫೯)	೫೪ (೧೦೦.೦೦)	೩೭ (೮೨.೨೨)	೮ (೧೭.೭೮)	೪೫ (೧೦೦.೦೦)
ಜಿಲ್ಲೆಯ ಒಟ್ಟು		೨೧೦೫ (೬೬.೯೭)	೧೦೩೮ (೩೩.೦೩)	೩೧೪೩ (೧೦೦.೦೦)	೨೪೪೫ (೮೫.೪೬)	೪೧೬ (೧೪.೫೪)	೨೮೬೧ (೧೦೦.೦೦)

ಕೋಷ್ಟಕ ೪.೭ ತಾಲುಕುವಾರು ಒಟ್ಟು ಅಕ್ಷರಸ್ತ/ಅನಕ್ಷರಸ್ತರ ಬಗ್ಗೆ ಮಾತ್ರ ಮಾಹಿತಿ ನೀಡುತ್ತದೆ. ಇದು ಯಾವ ಮಟ್ಟದ ಅಕ್ಷರ, ಜ್ಞಾನ, ಅಂದರೆ ಪ್ರಾಥಮಿಕ ಮಟ್ಟದ ಅಕ್ಷರ ಜ್ಞಾನವೋ ಅಥವಾ ಮಹಾವಿದ್ಯಾಲಯ ಮಟ್ಟದ ಅಕ್ಷರ ಜ್ಞಾನವೋ ಎಂಬುದನ್ನು ವಿವರಿಸುವುದಿಲ್ಲ. ಈ ಮಾಹಿತಿಯನ್ನು ಕೋಷ್ಠಕ ೪.೮ ರಲ್ಲಿ ನೀಡಲಾಗಿದೆ.

ಬೇಡರ ವಿವಿಧ ಮಟ್ಟದ ಸಾಕ್ಷರತೆ

ಬಸವಕಲ್ಯಾಣದ ತಾಲೂಕಿನಲ್ಲಿ ಪ್ರಾಥಮಿಕ, ಮಾಧ್ಯಮಿಕ ಮತ್ತು ಪ್ರೌಢ ಶಿಕ್ಷಣವು ಒಟ್ಟು ಶಿಕ್ಷಣದ ಶೇಕಡಾ ೯೨ ರಷ್ಟಿದೆ. ಉಳಿದ ಶೇಕಡಾ ೮ರಷ್ಟು ಪಿ.ಯು.ಸಿ., ಡಿಪ್ಲೊಮ, ಪದವಿ (ತಾಂತ್ರಿಕ/ತಾಂತ್ರಿಕವಲ್ಲದ)

ಮತ್ತು ಸ್ನಾತಕೋತ್ತರ ಶಿಕ್ಷಣ ಒಳಗೊಂಡಿದೆ. ಅತಿ ಹೆಚ್ಚಿನ ಪ್ರಾರ್ಥಮಿಕ ಶಿಕ್ಷಣವು ಶೇಕಡಾ ೩೮.೮೭ರಷ್ಟು ಜನ ಪಡೆದಿರುತ್ತಾರೆ. ಹುಮನಾಬಾದ ತಾಲೂಕಿನಲ್ಲಿ ಶೇಕಡಾ ೮೫ರಷ್ಟು ಸಾಕ್ಷರರು ಮೊದಲ ಮೂರು ಹಂತಗಳ ಶಿಕ್ಷಣವನ್ನು ಪಡೆದಿರುತ್ತಾರೆ ಮತ್ತು ಈ ಮೂರು ಹಂತಗಳಲ್ಲಿ ಮಾಧ್ಯಮಿಕ ಹಂತದಲ್ಲಿ ಅತಿ ಹೆಚ್ಚಿನ ಜನರಿದ್ದಾರೆ (ಶೇಕಡಾ ೩೭.೩೧) ಪಿ.ಯು.ಸಿ. ಮಟ್ಟದ ಶಿಕ್ಷಣವು ಸಹ ತುಲನಾತ್ಮಕವಾಗಿ ಹೆಚ್ಚಿನ ಪ್ರಮಾಣದಲ್ಲಿರುತ್ತದೆ (ಶೇಕಡಾ ೮.೯೫). ಭಾಲ್ಕಿ ತಾಲೂಕಿನ ಸನ್ನಿವೇಶ ಉಳಿದ ತಾಲೂಕಗಳಿಗಿಂತ ಭಿನ್ನವಾಗಿಲ್ಲ; ಆದರೆ, ಸ್ನಾತಕೋತ್ತರ ಪದವೀಧರರ ಸಂಖ್ಯೆ ತುಲನಾತ್ಮಕವಾಗಿ ಹೆಚ್ಚಿನದಾಗಿದೆ ಶೇಕಡಾ ೮೫ರಷ್ಟು ಸಾಕ್ಷರರು ಕೇವಲ ಪ್ರಾಥಮಿಕ, ಮಾಧ್ಯಮಿಕ ಮತ್ತು ಪ್ರೌಢ ಶಿಕ್ಷಣವನ್ನಷ್ಟೇ ಪಡೆದಿರುತ್ತಾರೆ. ಪಿ.ಯು.ಸಿ. ತಾಂತ್ರಿಕ ಶಿಕ್ಷಣ ಮತ್ತು ಮಹಾವಿದ್ಯಾಲಯ ಮತ್ತು ಸ್ನಾತಕೋತ್ತರ ಶಿಕ್ಷಣ ಸಾಕ್ಷರರಲ್ಲಿ ಕೇವಲ ಶೇಕಡಾ ೧೫ರಷ್ಟು ಜನರಿಗೆ ಮಾತ್ರ ದೊರೆತಿದೆ (ಕೋಷ್ಠಕ ೪.೮ ನೋಡಿ).

ಕೋಷ್ಟಕ ೪.೮ ಬೀದರ ಜಿಲ್ಲೆಯ ತಾಲೂಕಾವಾರು ಬೇಡರ ಶೈಕ್ಷಣಿಕ ಮಟ್ಟ

ಕ್ರಮ ಸಂಖ್ಯೆ	ಶೈಕ್ಷಣಿಕ ಮಟ್ಟ	ತಾಲ್ಲೂಕಾಗಳು			ಜಿಲ್ಲೆಯ ಒಟ್ಟು ಅಕ್ಷರಸ್ಥರು
		ಬಸವಕಲ್ಯಾಣ	ಹುಮನಾಬಾದ	ಭಾಲ್ಕಿ	
೧.	ಪ್ರಾಥಮಿಕ ಶಿಕ್ಷಣ	೫೨೭ (೩೮.೮೬)	೧೪ (೨೦.೮೯)	೧೧ (೩೫.೪೮)	೫೪೮
	ಪುರುಷರು	೩೧೭	೦೯	೦೮	೩೩೦
	ಸ್ತ್ರೀಯರು	೨೧೦	೦೫	೦೩	೨೧೮
೨.	ಮಾಧ್ಯಮಿಕ ಶಿಕ್ಷಣ	೪೨೦ (೩೦.೯೭)	೨೫ (೩೭.೩೧)	೦೮ (೨೫.೮೦)	೪೫೩
	ಪುರುಷರು	೨೯೮	೧೪	೦೫	೩೧೭
	ಸ್ತ್ರೀಯರು	೧೨೨	೧೧	೦೩	೧೩೬
೩.	ಪ್ರೌಢ ಶಿಕ್ಷಣ	೩೦೫ (೨೨.೪೯)	೧೮ (೨೬.೮೬)	೦೭ (೨೨.೫೮)	೩೩೦
	ಪುರುಷರು	೨೬೩	೧೩	೦೫	೨೮೧
	ಸ್ತ್ರೀಯರು	೪೨	೦೫	೦೨	೪೯
೪.	ಪಿ.ಯು.ಸಿ.	೭೯ (೫.೮೨)	೦೬ (೮.೯೫)	೦೨	೮೭
	ಪುರುಷರು	೭೧	೦೬	೦೨	೭೯
	ಸ್ತ್ರೀಯರು	೦೮	೦೦	೦೦	೦೮
೫.	ಡಿಪ್ಲೋಮಾ	೦೭ (೦.೫೨)	-	-	೦೭
	ಪುರುಷರು	೦೬	-	-	೦೬
	ಸ್ತ್ರೀಯರು	೦೧	-	-	೦೧
೬.	ಪದವಿ (ತಾಂತ್ರಿಕ)	೦೧ (೦.೦೭)	-	-	೦೧
	ಪುರುಷರು	೦೧	-	-	೦೧
	ಸ್ತ್ರೀಯರು	೦೦	-	-	-
೭.	ಪದವಿ ತಾಂತ್ರಿಕ ಹೊರತು	೦೬ (೦.೪೪)	.೦೪ (೫.೯೭)	-	೧೦
	ಪುರುಷರು	೦೫	೦೪	-	೦೯
	ಸ್ತ್ರೀಯರು	೦೧	೦೦	-	೦೧
೮.	ಸ್ನಾತಕೋತ್ತರ ಪದವಿ	೧೧ (೦.೮೧)	-	೦೩ (೯.೬೮)	೧೪
	ಪುರುಷರು	೧೧	-	೦೩	೧೪
	ಸ್ತ್ರೀಯರು	೦೦	-	-	-
	ಒಟ್ಟು ಸಾಕ್ಷರರು	೧೩೫೬	೬೭	೩೧	೧೪೫೪
	ಪುರುಷರು	೯೬೯	೪೬	೨೩	೧೦೯೮
	ಸ್ತ್ರೀಯರು	೩೮೭	೨೧	೦೮	೪೧೬
	ಒಟ್ಟು ನಿರೀಕ್ಷರರು	೪೩೬೪	೧೧೮	೬೮	೪೫೫೦
	ಪುರುಷರು	೨೦೨೬	೪೮	೩೧	೨೧೦೫
	ಸ್ತ್ರೀಯರು	೨೩೩೮	೭೦	೩೭	೨೪೪೫
	ಒಟ್ಟು ಜನಸಂಖ್ಯೆ	೫೭೨೦	೧೮೫	೯೯	೬೦೦೪
	ಪುರುಷರು	೨೯೯೫	೯೪	೫೪೩	೩೧೪೩
	ಸ್ತ್ರೀಯರು	೨೭೨೫	೯೧	೪೫	೨೮೬೧

ತುಲನಾತ್ಮಕವಾಗಿ ಬಸವಕಲ್ಯಾಣ ತಾಲ್ಲೂಕಾದಲ್ಲಿಯ ಹೆಚ್ಚು ಜನರು ವಿವಿಧ ಹಂತಗಳಲ್ಲಿ ಶಿಕ್ಷಣವನ್ನು ಪಡೆದಿರುವರು. ತದನಂತರ ಹುಮನಾಬಾದ ತಾಲ್ಲೂಕದಲ್ಲಿಯ ಬೇಡ ಬುಡಕಟ್ಟಿನವರ ಶಿಕ್ಷಣದ ಅಭಿವೃದ್ಧಿಯನ್ನು ಕಾಣಬಹುದು. ಇತ್ತೀಚೆಗೆ ಕಡ್ಡಾಯ ಶಿಕ್ಷಣ ಮತ್ತು ಹಲವಾರು ಗ್ರಾಮಗಳಲ್ಲಿ ಸರಕಾರಿ ಶಾಲೆಗಳಿರುವುದರಿಂದ ಆ ಗ್ರಾಮಗಳಲ್ಲಿ ಯಾವ ತರಗತಿಯವರೆಗೆ ಶಾಲೆಗಳಿವೆಯೋ ಆ ತರಗತಿಯವರೆಗೆ ಬೇಡ ಬುಡಕಟ್ಟಿನ ಗಂಡು-ಹೆಣ್ಣು ಮಕ್ಕಳು ಶಾಲೆಗೆ ಹೋಗಲು ಪ್ರಾರಂಭಿಸಿರುತ್ತಾರೆ. ಈ ಬುಡಕಟ್ಟಿನ ಹೆಣ್ಣುಮಕ್ಕಳ ಶಾಲೆಯ ಮಟ್ಟ ಹೆಚ್ಚಾಗಿ ಪ್ರಾಥಮಿಕ ಶಾಲೆಗೆ ಮುಕ್ತಾಯಗೊಳ್ಳುತ್ತದೆ. ಏಕೆಂದರೆ, ಏಳು ವರ್ಷ ವಯಸ್ಸಿನವರಿರುವಾಗ ಶಾಲೆಗೆ ಸೇರಿ, ಏಳನೆಯ ತರಗತಿ ತಲುಪುವಷ್ಟರಲ್ಲಿಯೇ ಹೆಣ್ಣುಮಕ್ಕಳು ಋತುಮತಿಯಾಗುವರು. ಆದುದರಿಂದ ಅವರನ್ನು ವಿವಾಹ ಬಂಧನಕ್ಕೆ ಒಳಪಡಿಸುವವರು. ಸಾಕ್ಷರ ಸ್ತ್ರೀಯರಲ್ಲಿ ಕೇವಲ ಶೇಕಡಾ ೧ ರಷ್ಟು ಪಿ.ಯು.ಸಿ. ಹಾಗೂ ಪದವಿಯ ಶಿಕ್ಷಣದವರೆಗೆ ತಲುಪಿರುವರು.

ಬೀದರ ಜಿಲ್ಲೆಯ ಬೇಡ ಬುಡಕಟ್ಟಿನ ಜನರ ಒಟ್ಟು ಮನೆಗಳು ೯೭೯ ಹಾಗೂ ಜನಸಂಖ್ಯೆ ೬೦೦೪. ಇದರಲ್ಲಿ ೯೩೩ (೯೫.೩೦%) ಮನೆಗಳು ಬಸವಕಲ್ಯಾಣ ತಾಲ್ಲೂಕಾದಲ್ಲಿಯೇ ಇವೆ. ಇಡೀ ಜಿಲ್ಲೆಯ ಬೇಡ ಬುಡಕಟ್ಟು ಅಧ್ಯಯನದ ವಸ್ತುವಾಗಿದ್ದರೂ, ಬಸವಕಲ್ಯಾಣ ತಾಲ್ಲೂಕಾದಲ್ಲಿ ಶೇಕಡಾ ೯೫.೩೦ರಷ್ಟು ಮನೆಗಳಿರುವುದರಿಂದ ಇವುಗಳಲ್ಲಿನ ಶೈಕ್ಷಣಿಕ ಮಾಹಿತಿಯೇ ಇಡೀ ಜಿಲ್ಲೆಯ ಮಾಹಿತಿ ಎಂದರೆ ಅಷ್ಟೇನೂ ತಪ್ಪಾಗಲಾರದು. ಈ ತಾಲ್ಲೂಕು ಕೋಹಿನೂರು, ಮಂಠಾಳ, ಮುಡಬಿ, ನಾರಾಯಣಪುರ ಮತ್ತು ರಾಜೇಶ್ವರ ಎಂಬ ಐದು ಹೋಬಳಿಗಳನ್ನು ಹೊಂದಿರುತ್ತದೆ. ಕೋಷ್ಠಕ ೪.೧೫ ರಲ್ಲಿ ಕೋಹಿನೂರ ಹೋಬಳಿಯೂ ಬೇಡರ ೭೩೪ (೪೧.೦೫%) ಕುಟುಂಬಗಳನ್ನು ಹೊಂದಿದೆ. ಇದರಡಿಯಲ್ಲಿ ಬರುವ ಹಳ್ಳಿಗಳು ೧೮. ಈ ಹದಿನೆಂಟರಲ್ಲಿ ಕೋಹಿನೂರವಾಡಿ ಎಂಬ ಊರಲ್ಲಿ ಅತ್ಯಧಿಕ ಸಂಖ್ಯೆಯ ಬೇಡರ ಕುಟುಂಬಗಳು ಅಂದರೆ ೧೧೨ ಇವೆ. ತದನಂತರ ಬಟಗೇರಾವಾಡಿ ಎಂಬೂರಲ್ಲಿ ೫೬ ಕುಟುಂಬಗಳಿವೆ. ಈ ಗ್ರಾಮಗಳಲ್ಲಿಯ ಬೇಡರ ಕುಟುಂಬಗಳ ಸಂಖ್ಯೆ ಮತ್ತು ಅಲ್ಲಿಯ ಪ್ರಾಥಮಿಕ, ಮಾಧ್ಯಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಓದುತ್ತಿರುವ ಮಕ್ಕಳ ಸಂಖ್ಯೆಯನ್ನು ಗಮನಿಸುವಾ ೩೦ ಕುಟುಂಬಗಳಿದ್ದ ಕೋಹಿನೂರ ಗ್ರಾಮದಲ್ಲಿ ೨೦ ಮಕ್ಕಳು ಪ್ರೌಢ ಶಾಲೆಯಲ್ಲಿ ಓದುತ್ತಿದ್ದರೆ, ೧೧೨ ಕುಟುಂಬಗಳಿದ್ದ ಕೋಹಿನೂರವಾಡಿಯಲ್ಲಿ ಕೇವಲ ೩೨ ಮಕ್ಕಳು ಪ್ರೌಢ ಶಾಲೆಯಲ್ಲಿ ವ್ಯಾಸಾಂಗ ಮಾಡಿದ್ದಾರೆ. ಲಾಡಮತಿ ಗ್ರಾಮದಲ್ಲಿ ೧೧ ಕುಟುಂಬಗಳಲ್ಲಿ ೫ ಹುಡುಗರು ಪ್ರೌಢ ಶಾಲೆಯಲ್ಲಿ ಓದಿದ್ದಾರೆ. ಕೋಹಿನೂರ ಗ್ರಾಮದಲ್ಲಿ ಪ್ರೌಢ ಶಾಲೆಯಿದೆ. ಈ ಶಾಲೆಯಲ್ಲಿ ಶಿಕ್ಷಕರ ಕೊರತೆಯಿಲ್ಲ. ಈ ಗ್ರಾಮಕ್ಕೆ ಬರಲು ರಸ್ತೆಯ ಸೌಕರ್ಯ ಉತ್ತಮ ಸ್ಥಿತಿಯಲ್ಲಿದೆ ಜೊತೆಗೆ ಬಸ್ಸುಗಳ ವ್ಯವಸ್ಥೆಯಿದೆ. ಆದರೆ, ಕೋಹಿನೂರ ವಾಡಿಯಲ್ಲಿ ಈ ಸೌಲಭ್ಯಗಳಿರುವುದಿಲ್ಲ.

ಕೋಷ್ಠಕ-೪.೯ ಬಸವಕಲ್ಯಾಣ ತಾಲ್ಲೂಕಿನ ಕೋಹಿನೂರು ಹೋಬಳಿಯ ಬೇಡ ಬುಡಕಟ್ಟಿನ ಶೈಕ್ಷಣಿಕ ಮಟ್ಟ

ಕ್ರಮ ಸಂಖ್ಯೆ	ಊರು	ಒಟ್ಟು ಕುಟುಂಬಗಳ ಸಂಖ್ಯೆ	ಶೈಕ್ಷಣಿಕ ಮಟ್ಟ								
			ಪ್ರಾಥಮಿಕ			ಮಾಧ್ಯಮಿಕ			ಪ್ರೌಢ		
			ಪು.	ಸ್ತ್ರೀ	ಒಟ್ಟು	ಪು.	ಸ್ತ್ರೀ.	ಒಟ್ಟು	ಪು.	ಸ್ತ್ರೀ.	ಒಟ್ಟು
೧.	ಆಟ್ಟೂರ	೨	೧	-	೧	-	೧	-	-	-	-
೨.	ಆಸ್ಗೂಡ	೮	೪	೩	೭	೫	೪	೯	೧	-	೧
೩.	ಬಕ್ಕನಾಳ	೧೪	೬	೩	೯	೮	೪	೧೨	೦೭	೦೭	
೪.	ಬಟಗೇರಾ	೧೫	೨	೧	೩	೩	೩	೬	೫	೧	೬
೫.	ಬಟಗೇರಾವಾಡಿ	೫೬	೨೨	೮	೩೦	೧೯	೧೦	೨೯	೨೫	೬	೩೧
೬.	ಬೇಡರವಾಡಿ	೪೫	೯	೧೨	೨೧	೧೬	೮	೨೪	೫	೧	೬
೭.	ಚಿಟಗೊಟ್ಟಾ	೨	೨	೩	೫	೧	-	೦೧	-	-	-
೮.	ಗದಲೇಗಾಂವ (ಕೆ)	೦೪	೧	೧	೨	೪	೧	೫	೫	-	೫
೯.	ಹತ್ತರಗಾ	೧	-	-	-	೧	-	೧	-	-	-
೧೦.	ಹೊನ್ನಳ್ಳಿ	೫	೩	೨	೫	೨	೨	೪	೩	-	೩
೧೧.	ಕೋಹಿನೂರ	೩೦	೮	೧೧	೧೯	೧೭	೪	೨೧	೧೪	೬	೨೦
೧೨.	ಕೋಹಿನೂರ ವಾಡಿ	೧೧೨	೪೨	೩೦	೭೨	೧೯	೮	೨೭	೩೧	೧	೩೨
೧೩.	ಲಾಡವಂತಿ	೧೧	೯	೩	೧೨	೪	೧	೫	೫	೧	೫
೧೪.	ಲಾಡವಂತಿವಾಡಿ	೪೧	೧೮	೧೭	೩೫	೧೭	೪	೨೧	೭	-	೭
೧೫.	ಮನ್ನಳ್ಳಿ	೨	-	-	-	-	-	-	-	-	-
೧೬.	ರಾಮತೀರ್ಥ (ಡಿ)	೬	೧	೨	೩	೬	೧	೭	೩	-	೩
೧೭.	ಶಿರಗಾಪುರ	೨೪	೫	೬	೧೧	೨	೭	೯	೧೨	೨	೧೪
೧೮.	ಸಿರೂರಿ	೫	೨	-	೨	-	೧	೧	೧	-	೧
		೩೮೩	೧೩೫	೧೦೨	೨೩೭	೧೨೪	೫೮	೧೮೨	೧೨೪	೧೭	೧೪೧

ಕೋಷ್ಠಕ ೪.೧೦ ಮಂಠಾಳ ಹೋಬಳಿಯ ಬೇಡ ಬುಡಕಟ್ಟಿನ ಮನೆಗಳ ಮತ್ತು ಅವರ ಶೈಕ್ಷಣಿಕ ಪ್ರಗತಿಯ-ನಡುವಿನ ಸಂಬಂಧವನ್ನು ವಿವರಿಸುತ್ತದೆ. ಕೋಹಿನೂರ ಹೋಬಳಿಯಲ್ಲಿರುವಂತೆ ಗ್ರಾಮದ ಒಟ್ಟು ಕುಟುಂಬಗಳ ಮತ್ತು ಪ್ರಾಥಮಿಕ, ಮಾಧ್ಯಮಿಕ ಮತ್ತು ಪ್ರೌಢ ಶಾಲಾ ಮಕ್ಕಳ ಶಿಕ್ಷಣದ ನಡುವೆ ತದ್ವಿರುದ್ಧ ಸಂಬಂಧವಿದೆ. ಉದಾಹರಣೆಗೆ ಚಂಡಕಾಪುರ ಗ್ರಾಮದಲ್ಲಿಯ ೪೮ ಕುಟುಂಗಳಲ್ಲಿ ೩೩ ಮಕ್ಕಳು ಪ್ರೌಢ ಶಾಲೆಯಲ್ಲಿ ಓದುತ್ತಿದ್ದರೆ, ಘೋಟ್ಟಾಳವಾಡಿ ಗ್ರಾಮದಲ್ಲಿಯ ೧೦೯ ಕುಟುಂಬಗಳಲ್ಲಿ ಕೇವಲ ೩೪ ಮಕ್ಕಳು ಪ್ರೌಢ ಶಾಲೆಯಲ್ಲಿ ವ್ಯಾಸಂಗ ಮಾಡಿದ್ದಾರೆ. ಹೀಗಿರಲು ಕಾರಣ, ಘೋಟ್ಟಾಳವಾಡಿ ಗ್ರಾಮಕ್ಕೆ ರಸ್ತೆ ಸೌಕರ್ಯ ಇಲ್ಲದಿರುವುದು. ಶಿಕ್ಷಕರ ಹಾಜರಾತಿ ಹಾಗೂ ಶಿಕ್ಷಣದ ಗುಣಮಟ್ಟ ಕಳಪೆ ಯಾಗಿರುವದಾಗಿದೆ. ಚಂಡಕಾಪುರ ಗ್ರಾಮವು ರಾಷ್ಟ್ರೀಯ ಹೆದ್ದಾರಿ ೯ರ ಮೇಲಿದೆ. ಪ್ರೌಢ ಶಾಲೆಯ ಶಿಕ್ಷಣ ಪಡೆಯಲು ಸೌಕರ್ಯ ಇದೆ ಅಲ್ಲದೆ ಇಲ್ಲಿನ ಶಿಕ್ಷಕರು ಆಸಕ್ತಿವಹಿಸಿ ದುಡಿಯುತ್ತಿದ್ದಾರೆ. ಇದಕ್ಕೆ ವ್ಯತಿರಿಕ್ತವಾಗಿ ಆನಂದವಾಡಿ ಗ್ರಾಮ

ಬಹಳ ಒಳಗಡೆ ಇದೆ. ರಸ್ತೆಯ ಸೌಕರ್ಯವಿಲ್ಲ. ೬೭ ಕುಟುಂಬಗಳಿದ್ದರೂ, ಈ ಗ್ರಾಮದ ಕೇವಲ ೧೩ ಮಕ್ಕಳು ಪ್ರೌಢ ಶಿಕ್ಷಣವನ್ನು ಪಡೆದಿದ್ದಾರೆ. ಈ ಗ್ರಾಮಕ್ಕೆ ರಸ್ತೆ ಮತ್ತು ಬಸ್ಸಿನ ಸೌಕರ್ಯ ಇಲ್ಲ.

ಕೋಷ್ಠಕ ೪.೧೧ ಮುಡಬಿ ಹೋಬಳಿಯಲ್ಲಿರುವ ಶೈಕ್ಷಣಿಕ ಮಟ್ಟದ ಬಗ್ಗೆ ತಿಳಿಸುತ್ತದೆ. ರಸ್ತೆಯಿಂದ ಸಂಪರ್ಕಿಸಲ್ಪಟ್ಟ ಕಲಖೋರಾ ಗ್ರಾಮದಲ್ಲಿ ಕುಟುಂಬದ ಸಂಖ್ಯೆ ೯೮ ಇದ್ದರೆ, ೨೯ ಮಕ್ಕಳು ಪ್ರೌಢ ಶಿಕ್ಷಣವನ್ನು ಹೊಂದಿರುತ್ತದೆ ಮತ್ತು ಇಡೀ ಹೋಬಳಿಯಲ್ಲಿಯೇ ಇದು ಅತಿ ಹೆಚ್ಚಿನ ಸಂಖ್ಯೆಯದಾಗಿದೆ. ಬೇಡರವಾಡಿ ಗ್ರಾಮಕ್ಕೆ ರಸ್ತೆ ಇರುವುದಿಲ್ಲ ಮತ್ತು ಮಾಧ್ಯಮಿಕ ಶಾಲೆಯೂ ಇಲ್ಲ. ಆದುದರಿಂದ ಕೇವಲ ಇವರು ಹುಡುಗರು ಮಾತ್ರ ೧೦ನೇ ತರಗತಿಯವರೆಗೆ ಶಿಕ್ಷಣ ಪಡೆದಿದ್ದಾರೆ.

ನಾರಾಯಣಪುರ ಕೋಷ್ಠಕ ೪.೧೨ ಮತ್ತು ರಾಜೇಶ್ವರ ಕೋಷ್ಠಕ ೪.೧೩ ಹೋಬಳಿಯಲ್ಲಿ ಬೇಡ ಬುಡಕಟ್ಟಿನ ಗ್ರಾಮಗಳು ಮತ್ತು ಮನೆಯ ಸಂಖ್ಯೆ ಕೂಡ ಕಡಿಮೆ ಇವೆ; ಆದರೂ ಇವುಗಳು ಬೇಡರ ಶೈಕ್ಷಣಿಕ ಪ್ರಗತಿಯನ್ನು ತಿಳಿಸುತ್ತವೆ.

ಮೇಲಿನ ಕೋಷ್ಠಕಗಳಿಂದ ನಮಗೆ ವ್ಯಕ್ತವಾಗುವ ಸಂಗತಿಗಳೆಂದರೆ, ಶಿಕ್ಷಣ ಮಟ್ಟವನ್ನು ಹೆಚ್ಚಿಸಲು ಒಂದು ಗ್ರಾಮದಲ್ಲಿ ಪ್ರೌಢ ಶಾಲೆಯ ಸವಲತ್ತು ಇರಬೇಕು. ಗ್ರಾಮ ಒಳ್ಳೆಯ ರಸ್ತೆಯನ್ನು ಹೊಂದಿರಬೇಕು ಮತ್ತು ಶಿಕ್ಷಕರು ಆಸಕ್ತಿ ವಹಿಸಿ ತಮ್ಮ ಕರ್ತವ್ಯವನ್ನು ನಿರ್ವಹಿಸಬೇಕು. ಬೇಡ ಬುಡಕಟ್ಟು ಈ ಮೂಲಭೂತ ಸೌಕರ್ಯಗಳಿಂದ ವಂಚಿತವಾಗಿದೆ. ಇಂದು ಸ್ವಾತಂತ್ರ್ಯ ಪಡೆದು ೫೦ ವರ್ಷಗಳು ಮುಗಿದಿವೆ. ೫೦ ವರ್ಷ ಮುಗಿಸಿದ ನಿಮಿತ್ಯ ದೇಶದಾದ್ಯಂತ ನಾವು ಮಾಡಿದ ಕೆಲವು ಕ್ಷೇತ್ರಗಳಲ್ಲಿನ ಸಾಧನೆಯನ್ನು ಹೊಗಳಿ ಸಂಭ್ರಮದಿಂದ ಈಗಾಗಲೇ ಆಚರಿಸಿದ್ದೇವೆ. ಈ ಹಿನ್ನೆಲೆಯಲ್ಲಿ ಉತ್ತರ ಕರ್ನಾಟಕದ ಮೂಲ ನಿವಾಸಿಗಳಾದ ಬೇಡ ಬುಡಕಟ್ಟಿನವರ ದುಃಸ್ಥಿತಿಯನ್ನು ನೋಡಿದಾಗ, ನಾವೇನು ಸಾಧಿಸಿಲ್ಲ ಎಂಬ ನಿರಾಶೆ ಮೂಡಿಬರುತ್ತದೆ. ಈ ಜನರಿಗೆ ನಾವು ಮೂಲಭೂತ ಸೌಲಭ್ಯಗಳಾದ ಶಿಕ್ಷಣ, ರಸ್ತೆ ಮುಂತಾದವುಗಳನ್ನು ಇನ್ನು ನೀಡುವುದು ಸಾಧ್ಯವಾಗಿಲ್ಲ, ರಾಷ್ಟ್ರಪಿತ ಮಹಾತ್ಮಗಾಂಧಿಯವರ ಮುಂದಾಳುತ್ವದಲ್ಲಿ ಪರಿಶಿಷ್ಟ ವರ್ಗಗಳ ಶೈಕ್ಷಣಿಕ ಸುಧಾರಣೆಗೆ ೧೯೩೭ ರಿಂದೂ ಪ್ರಯತ್ನ ಮಾಡುತ್ತಿದ್ದರೂ, ೨೦೦೦ ಇಸವಿಯಲ್ಲಿ ಇವರಿಗೆ ನಾವು ಪ್ರೌಢ ಶಿಕ್ಷಣದ ವ್ಯವಸ್ಥೆ ಕೂಡ ನೀಡುವುದಕ್ಕೆ ಆಗಿಲ್ಲ.

ಕೋಷ್ಟಕ ೪.೧೦ ಮಂಠಾಳ ಹೋಬಳಿಯ ಬೇಡರ ಶೈಕ್ಷಣಿಕ ಮಟ್ಟ

ಕ್ರಮ ಸಂಖ್ಯೆ	ಊರು	ಒಟ್ಟು ಕುಟುಂಬಗಳ ಸಂಖ್ಯೆ	ಪ್ರಾಥಮಿಕ			ಮಾಧ್ಯಮಿಕ			ಪ್ರೌಢ		
			ಪು.	ಸ್ತ್ರೀ	ಒಟ್ಟು	ಪು.	ಸ್ತ್ರೀ	ಒಟ್ಟು	ಪು.	ಸ್ತ್ರೀ	ಒಟ್ಟು
೧.	ಆನಂದವಾಡಿ	೬೭	೧೪	೧೦	೨೪	೨೧	೩	೨೪	೧೨	೦೧	೧೩
೨.	ಚಂಡಕಾಪುರ	೪೮	೭	೧೩	೨೦	೧೩	೭	೨೦	೨೩	೧೦	೩೩
೩.	ಗುಂಡೂರ	೧೫	೩	೫	೮	೫	೧	೬	೩	-	೩
೪.	ಘೊಟ್ಟಾಳ	೫೩	೨೨	೧೬	೩೮	೧೬	೭	೨೩	೮	೩	೧೧
೫.	ಘೊಟ್ಟಾಳವಾಡಿ	೧೦೯	೫೦	೨೧	೭೧	೩೯	೧೬	೫೫	೩೨	೨	೩೪
೬.	ಕಾಂಬಳೆವಾಡಿ	೩	೧	-	೧	೦೪	-	೦೪	೦೧	-	೦೧
೭.	ಮದ್ದಿನವಾಡಿ	೪	೨	೧	೩	-	೧	೧	೦೩	-	೦೩
೮.	ಉಮ್ಮಾಪೂರ	೪	-	-	-	-	-	-	೦೨	-	೦೨
	ಒಟ್ಟು	೩೦೩	೯೯	೬೬	೧೬೫	೯೮	೩೫	೧೩೩	೮೪	೧೬	೧೦೦

ಕೋಷ್ಟಕ ೪.೧೧ ಮುಡಬಿ ಹೋಬಳಿಯ ಬೇಡರ ಶೈಕ್ಷಣಿಕ ಮಟ್ಟ

೧.	ಗದಲೇಗಾಂವ	೩೦	೬	೪	೧೦	೬	೩	೯	೧೪	೨	೧೬
೨.	ಹತ್ಯಾಳ	೭	೬	೨	೮	೨	೨	೪	೧	-	೧
೩.	ಕಲಖೋರಾ	೯೮	೪೫	೨೦	೬೫	೪೧	೨೦	೬೧	೨೯	೩	೩೨
೪.	ಖೇರ್ಡವಾಡಿ	೫೦	೧೫	೧೨	೨೭	೧೮	೨	೨೦	೨	೩	೫
೫.	ಯಳವಂತಿಗಿ	೨೪	೨	೪	೬	೪	-	೪	೩	-	೩
	ಒಟ್ಟು	೨೦೯	೭೪	೪೨	೧೧೬	೭೧	೨೭	೯೮	೪೯	೮	೫೭

ಕೋಷ್ಟಕ ೪.೧೨ ನಾರಾಯಣಪುರ ಹೋಬಳಿಯ ಬೇಡರ ಶೈಕ್ಷಣಿಕ ಮಟ್ಟ

೧.	ಹುಲಗುತ್ತಿ	೧೧	೩	-	೩	೧	-	೧	೧	-	೧

ಕೋಷ್ಟಕ ೪.೧೩ ರಾಜೇಶ್ವರ ಹೋಬಳಿಯ ಬೇಡರ ಶೈಕ್ಷಣಿಕ ಮಟ್ಟ

೧.	ಇಸ್ಲಾಂಪುರ	೧	೧	-	೧	-	-	-	-	-	-
೨.	ಹಣಮಂತವಾಡಿ	೧೩	೧	-	೧	೧	೧	೨	೨	೧	೩
೩.	ಲಿಂಗದಳ್ಳಿ	೧೨	-	-	-	೨	-	೨	೩	-	೩
೪.	ತಡೋಳ	೧	-	-	-	-	-	-	-	-	-
		೨೭	೨	-	೨	೩	೧	೪	೫	೧	೬

ಬೇಡ ಶಾಲಾ ಮಕ್ಕಳು ಶಾಲೆಗೆ ಹೋಗದಿರುವ ವೃತ್ತಾಂತ

ಈ ವಿಷಯವನ್ನು ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಬೇಡ ಬುಡಕಟ್ಟಿನ ಮಕ್ಕಳ ಶಾಲಾ ದಾಖಲಾತಿ ಪ್ರಮಾಣ ಎಂದು ಸಹ ನಾವು ಅಭ್ಯಾಸ ಮಾಡಬಹುದು. ಇಂದು, ಸರಕಾರ ಪ್ರಾಥಮಿಕ ಶಿಕ್ಷಣವನ್ನು, (ಅಂದರೆ ೬ ರಿಂದ ೯ ರ ವಯಸ್ಸಿನ ಒಳಗಿನ ಹುಡುಗ-ಹುಡುಗಿಯರು ಶಾಲೆಗೆ ಸೇರುವುದು)

ಕಡ್ಡಾಯ ಎಂದು, ಸಾರಿದರೂ ಉಳಿದ ಮೇಲ್ಜಾತಿಯರ ಮಕ್ಕಳಂತೆ ಈ ವಯಸ್ಸಿನಲ್ಲಿ ಬರುವ ಎಲ್ಲ ಮಕ್ಕಳು ಹಲವಾರು ಕಾರಣಗಳಿಂದ ಶಾಲೆಗೆ ಸೇರುತ್ತಿಲ್ಲ. ಉದಾಹರಣೆಗೆ ೬ ರಿಂದ ೧೩ ವಯಸ್ಸಿನ ಬೇಡ ಜನಾಂಗದ ಗಂಡು ಹುಡುಗರ ಒಟ್ಟು ಸಂಖ್ಯೆ ೭೩೧ ಇದ್ದರೆ, ಶಾಲೆಯಲ್ಲಿ ದಾಖಲಾತಿ ಪಡೆದವರ ಸಂಖ್ಯೆ ೩೮೫ (ಶೇಕಡಾ ೫೨.೬೭) ಇದೆ (ಕೋಷ್ಠಕ ೪.೧೪ ನೋಡಿ). ಈ ವಯಸ್ಸಿನ ಹುಡುಗಿಯರ ಒಟ್ಟು ಸಂಖ್ಯೆ ೭೦೩ ಇದ್ದರೆ, ೨೬೬ (ಶೇಕಡಾ ೩೭.೮೪) ಶಾಲೆಯಲ್ಲಿ ದಾಖಲಾತಿ ಪಡೆದಿರುತ್ತಾರೆ. ಕರ್ನಾಟಕದ ಮುಂದುವರಿದ ಜಿಲ್ಲೆಯಾದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬುಡಕಟ್ಟಿನ ಹುಡುಗರ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣ ಶೇ. ೮೪ ಇದ್ದರೆ[೭], ಅತ್ಯಂತ ಹಿಂದುಳಿದ ಜಿಲ್ಲೆಯಾದ ಬೀದರಿನ ಬೇಡ ಬುಡಕಟ್ಟಿನ ಹುಡುಗರ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣ ಶೇಕಡಾ ೫೨.೬೭ ಇದೆ.

ಕೋಷ್ಠಕ ೪.೧೪ ಬಸವಕಲ್ಯಾಣ ತಾಲೂಕಿನ ಬೇಡರ ಮಕ್ಕಳ ಶಾಲಾ ದಾಖಲಾತಿ ಪ್ರಮಾಣ

ಕ್ರಮ ಸಂಖ್ಯೆ	ವಿವರಗಳು	ಒಟ್ಟು ಸಂಖ್ಯೆ	ಶಾಲೆಗೆ ಹೋಗುವವರ ಸಂಖ್ಯೆ	ಶೇಕಡಾ
೧.	ಗಂಡು ಹುಡುಗರು ೬ ರಿಂದ ೧೩	೭೩೧	೩೮೫	೫೨.೬೭
೨.	ಹೆಣ್ಣು ಹುಡುಗಿಯರು ೬ ರಿಂದ ೧೩	೭೦೩	೨೬೬	೩೭.೮೪
೩.	ಗಂಡು ಹುಡುಗರು ೧೪ ರಿಂದ ೧೭	೨೨೩	೧೫೨	೬೮.೧೬
೪.	ಹೆಣ್ಣು ಹುಡುಗಿಯರು ೧೪ ರಿಂದ ೧೭	೧೫೧	೩೮	೨೫.೬೦

೬ ರಿಂದ ೧೩ ವರ್ಷದ ಹುಡುಗರಲ್ಲಿ ಶಾಲೆಗೆ ಹೋಗಿ ಬಿಟ್ಟವರು (drop-outs) ೩೪೬ ಇದ್ದರೆ, ಹುಡುಗಿಯರ ಸಂಖ್ಯೆ ೪೩೭ ಇದೆ. ಹೆಚ್ಚಿನ ಪ್ರಮಾಣದಲ್ಲಿ ಹುಡುಗ ಮತ್ತು ಹುಡುಗಿಯರನ್ನು ಶಾಲೆಗೆ ಏಕೆ ಕಳಿಸುವುದಿಲ್ಲ ಎಂದು ಪಾಲಕರನ್ನು ಕೇಳಿದಾಗ, ಅವರು ಹಲವಾರು ಕಾರಣಗಳನ್ನು ನೀಡಿದ್ದಾರೆ. ಈ ಕಾರಣಗಳನ್ನು ಕೋಷ್ಠಕ ೪.೧೫ರಲ್ಲಿ ವಿವರಿಸಲಾಗಿದೆ.

ಕೋಷ್ಠಕ-೪.೧೫ ಮಕ್ಕಳನ್ನು ಶಾಲೆಗೆ ಕಳುಹಿಸದಿರಲು ಕಾರಣಗಳು

ಕ್ರಮ ಸಂಖ್ಯೆ	ಕಾರಣಗಳು	ಸಂಖ್ಯೆ	ಶೇಕಡಾ	
೧.	ಬಡತನ	೭೦೧	೭೨.೪೯	
೨.	ಮನೆ ಕೆಲಸಕ್ಕೆ ಬೇಕು	೧೦೦	೧೦.೩೪	
೩.	ಶಾಲೆ ಹತ್ತಿರದಲ್ಲಿ ಇಲ್ಲ	೮೦	೮.೨೭	
೪.	ಹುಡುಗಿ ಋತುಮತಿ ಯಾಗಿದ್ದಾಳೆ	೭೧	೭.೩೪	
೫.	ಆಸಕ್ತಿ ಇಲ್ಲ	೦೩	೦.೩೧	
೬.	ಕಳಪೆ	೦೫	೦.೫೩	
೭.	ಹಳ್ಳಿಯಲ್ಲಿ ಇರಲು ಇಚ್ಛಿಸುವುದಿಲ್ಲ	೦೪	೦.೪೧	
೮.	ಉತ್ತರ ನೀಡದಿರುವವುದು	೦೩	೦.೩೧	
	ಒಟ್ಟು	೯೬೭	೧೦೦.೦೦	

ಮೊದಲನೆಯ ಪ್ರಮುಖ ಕಾರಣವೇನೆಂದರೆ ಕಡುಬಡತನ (೭೨.೪೯) ಮತ್ತು ಕೇವಲ ಜೀವನೋಪಾಯ ಅರ್ಥವ್ಯವಸ್ಥೆಯಲ್ಲಿ ಸಿಲುಕಿ ತೊಂದರೆಗೆ ಒಳಗಾಗಿರುವ ಬೇಡ ಬುಡಕಟ್ಟಿನ ಒಂದು ಕುಟುಂಬಕ್ಕೆ "ಬೆಳೆಯುತ್ತಿರುವ ಗಂಡು ಅಥವಾ ಹೆಣ್ಣು ಮಕ್ಕಳನ್ನು ಶಾಲೆಗೆ ಕಳಿಸಿಕೊಡುವದು. ಮೂಲದಲ್ಲಿ ಅವರ ಅರ್ಥವ್ಯವಸ್ಥೆಗೆ ಮತ್ತು ಸಾಂಪ್ರದಾಯಿಕ ಶ್ರಮವಿಭಜನೆಗೆ ಅಡ್ಡ ಬರುತ್ತದೆ" ಎಂದು ವೆರಿಯರ್ ಎಲ್ವಿನ್ ಮಾರ್ಮಿಕವಾಗಿ ನುಡಿದಿದ್ದನ್ನು ನಾವು ಇಲ್ಲಿ ನೆನಸಬಹುದು[೮].

ಎರಡನೆಯ ಮಹತ್ವದ ಕಾರಣವೇನೆಂದರೆ, ಪಾಲಕರಿಗೆ ಮನೆಕೆಲಸದಲ್ಲಿ ನೆರವಾಗಲು ಮಕ್ಕಳು ಅವಶ್ಯಕವಾಗಿ ಬೇಕು. ಇದು ಮೊದಲನೆಯ ಕಾರಣವಾದ ಬಡತನಕ್ಕೆ ಪೂರಕವಾಗಿದೆ. ಇವೆರಡನ್ನು ಕೂಡಿಸಿದರೂ ಏನೂ ತಪ್ಪಿಲ್ಲ (೧೦.೩೪) ಮಕ್ಕಳನ್ನು ಶಾಲೆಗೆ ಕಳುಹಿಸದಿರಲು ಮೂರನೆಯ ಕಾರಣ, ಶಾಲೆ ಹತ್ತಿರದಲ್ಲಿಲ್ಲ (೮.೨೭)[೯]. (ಹೆಣ್ಣುಮಕ್ಕಳನ್ನು ಶಾಲೆಗೆ ಕಳುಹಿಸಲು ಅಡ್ಡ ಬರುವ ಮುಖ್ಯ ಅಂಶ ಇವರು ಋತುಮತಿಯಾಗುವುದು) (೭.೩೪) (ಆದಿವಾಸಿ ಜನರು ಇವರು ಊರು ಮತ್ತು ತಾಂಡಾಗಳಲ್ಲಿ ಅಷ್ಟೊಂದು ಶಾಲೆಗಳಿಲ್ಲ. ಆದುದರಿಂದ, ಶಾಲೆ ಹತ್ತಿರದಲ್ಲಿಲ್ಲ ಎಂಬ ನೆಪ (೬.೧೮) ಮಕ್ಕಳನ್ನು ಶಾಲೆಗೆ ಹೋಗದಂತೆ ಮಾಡಿರುತ್ತದೆ.

ರಾಜಕೀಯ ಪ್ರಜ್ಞೆ

ಬಡವರಾದ ಮತ್ತು ಅಲೆಮರಿಗಳಾದ ಬೇಡ ಬುಡಕಟ್ಟಿನವರಿಗೆ ರಾಜಕೀಯ ಪ್ರಜ್ಞೆ ಸಾಕಷ್ಟು ಇರುವುದಿಲ್ಲ. ಇತ್ತೀಚೆಗೆ ಶಿಕ್ಷಣದೊಂದಿಗೆ ರಾಜಕೀಯ ಪ್ರತಿನಿಧಿತ್ವ ಇದ್ದರೆ, ಬೇಡ ಸಮಾಜ ಮುಂದೆ ಬರುವುದು ಸುಲಭ ಎಂಬುದನ್ನು ಮನಗಂಡು ಈ ಬುಡಕಟ್ಟಿನ ಜನರು ಚುನಾವಣೆಗಳಲ್ಲಿ ಸಕ್ರೀಯವಾಗಿ ಭಾಗವಹಿಸಲು ಪ್ರಾರಂಭಿಸಿದ್ದಾರೆ. ಚುನಾವಣೆ ಬಂದಾಗ ಮತ ಚಲಾಯಿಸುವುದಲ್ಲದೆ, ಗ್ರಾಮ ಪಂಚಾಯತ ಚುನಾವಣೆ ಹಾಗೂ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಚುನಾವಣೆಗಳಲ್ಲಿ ಭಾಗವಹಿಸಿ ಕೆಲವರು ಚುನಾಯಿತರಾಗಿರುತ್ತಾರೆ.

ರಾಜಕೀಯದಲ್ಲಿ ಮುಂದೆ ಬರಲು ಮೊದಲನೆಯದಾಗಿ ಹಣ, ಎರಡನೆಯದಾಗಿ ಪಕ್ಷ ಮತ್ತು ಮೂರನೆಯದಾಗಿ ಮುಂದಾಳತ್ವ ಈ ಮೂರು ಅಂಶಗಳಲ್ಲಿ ಯಾವುದು ಪ್ರಮುಖವಾದುದು ಎಂಬ ಪ್ರಶ್ನೆಗೆ ಉತ್ತರ ದೊರಕಿರುವುದು ರಾಜಕೀಯ ಪಕ್ಷ ಮತ್ತು ಹಣ ಎಂಬ ಎರಡು ಅಂಶಗಳು ಮುಖ್ಯವಾದವು ಎಂದಿದ್ದಾರೆ ವಕ್ತೃಗಳು (ಕೋಷ್ಟಕ ೪.೧೬ ನೋಡಿ). ಶೇಕಡಾ ೮೦ ರಷ್ಟು ಜನರು ಚುನಾವಣೆಯಲ್ಲಿ ಮತ ಚಲಾಯಿಸುತ್ತಿರುವುದರಿಂದ ಬೇಡ ಬುಡಕಟ್ಟಿನ ಜನರಲ್ಲಿ ರಾಜಕೀಯ ಪ್ರಜ್ಞೆ ಹೆಚ್ಚಿನ ಮಟ್ಟದಾಗಿದೆ ಎಂದು

ಹೇಳಬಹುದು. ಇಷ್ಟಾದರೂ ನೆರೆಯ ಜಿಲ್ಲೆಯಾದ ಗುಲಬರ್ಗಾ ಜಿಲ್ಲೆಗೆ ಹೋಲಿಸಿ ನೋಡಿದರೆ ಬೀದರ ಜಿಲ್ಲೆಯ ಬೇಡ ಬುಡಕಟ್ಟಿನವರು ರಾಜಕೀಯವಾಗಿ ಮುಂದೆ ಬಂದಿರುವುದಿಲ್ಲ ಮತ್ತು ರಾಜಕೀಯ ಮೀಸಲಾತಿ ಉಪಯೋಗ ಮಾಡಿಕೊಂಡಿರುವುದಿಲ್ಲ. ಗುಲಬರ್ಗಾ ಜಿಲ್ಲೆಯ ಬೇಡ ಬುಡಕಟ್ಟಿನವರು ರಾಜಕೀಯವಾಗಿ ಬಹಳ ಮುಂದೆ ಬಂದಿರುತ್ತಾರೆ. ವಿಶೇಷವಾಗಿ, ಗುಲಬರ್ಗಾ ಜಿಲ್ಲೆಯ ಬೇಡ: ನಾಯಕರು ಉಳಿದ ಬುಡಕಟ್ಟಿನವರಿಗಿಂತ ರಾಜಕೀಯ ಲಾಭವನ್ನು (ಮೀಸಲಾತಿಯ ಉಪಯೋಗವನ್ನು) ಅಧಿಕವಾಗಿ ಪಡೆದಿರುತ್ತಾರೆ. ಮುಂಬರುವ ದಿನಗಳಲ್ಲಿ ಬೀದರ ಜಿಲ್ಲೆಯ ಬೇಡ ಬುಡಕಟ್ಟಿನವರೂ ರಾಜಕೀಯ ಶಕ್ತಿಯಾಗಿ ಮುಂಬರುವ ಹಲವಾರು ಸಾಧ್ಯತೆಗಳಿವೆ.

ಕೋಷ್ಠಕ ೪.೧೬ ಬೇಡರ ರಾಜಕೀಯದಲ್ಲಿ ಮುಂದೆ ಬರಲು ಕಾರಣಗಳು

ಕ್ರಮ ಸಂಖ್ಯೆ	ಕಾರಣಗಳು	ಸಂಖ್ಯೆ	ಶೇಕಡಾ
೧.	ಹಣ	೪೦೦	೪೩.೦೧
೨.	ರಾಜಕೀಯ ಪಕ್ಷ	೨೭೦	೨೯.೦೩
೩.	ಮುಂದಾಳತ್ವ	೨೬೦	೨೭.೯೬
	ಒಟ್ಟು	೯೩೦	೧೦೦

ಬೇಡರ ವ್ಯಕ್ತಿತ್ವ

ಬೇಡರು ಪ್ರಕೃತಿ ಪ್ರೀಯರು, ಸರಳ ಜೀವಿಗಳು ಮತ್ತು ಶ್ರಮಜೀವಿಗಳು. ಇವರಲ್ಲಿ ನಾಯಕತ್ವ (Leadership) ಗುಣವಿದೆ. ಆದುದರಿಂದಲೇ, ಬೀದರ ಜಿಲ್ಲೆಯಲ್ಲಿ ಬರುವ ಬೇಡ ಸಮುದಾಯದವರೆಲ್ಲ ಊರು ನಾಯಕರಾಗಿದ್ದಾರೆಂದು ಚಾರಿತ್ರಿಕ ಅಧ್ಯಯನಗಳು ಹೇಳುತ್ತವೆ[೧೦]. ಪುರಾಣಗಳಲ್ಲಿಯೂ ಹಲವಾರು ಬೇಡ ಬುಡಕಟ್ಟಿಗೆ ಸೇರಿದ ಪ್ರಸಿದ್ಧ ಜನಗಳ ಬಗ್ಗೆ ನಮಗೆ ಮಾಹಿತಿ ದೊರಕುತ್ತದೆ. ಶಿವನಿಗೆ ಕಣ್ಣು ನೀಡಿದ ಶೂರ ಬೇಡರ ಕಣ್ಣಪ್ಪ. ಜಗದ್ವಿಖ್ಯಾತ ರಾಮಾಯಣವನ್ನು ಬರೆದ ವಾಲ್ಮೀಕಿ ಬೇಡರವ. ಹೀಗೆ ಬೇಡ ಬುಡಕಟ್ಟಿನ ವೀರ ಪರಂಪರೆಯನ್ನು ಕಾಣಬಹುದು. (ಬೇಡ ಬುಡಕಟ್ಟಿನ ಇತಿಹಾಸ ವಿವರಿಸುವಲ್ಲಿ - ಈ ಅಂಶಗಳನ್ನು ಹೆಚ್ಚಾಗಿ ಚರ್ಚಿಸಲಾಗಿದೆ).

ವಕ್ತೃಗಳ ಜೀವನ ಮಟ್ಟವನ್ನು ಸೂಚಿಸುವ ಅಂಶಗಳು

ಬೇಡ ಸಮುದಾಯದವರಿಗಿರುವ ವಸತಿ ಸೌಕರ್ಯ, ಪಾತ್ರೆ ಪಡಗಗಳನ್ನು ಅವರ ಮನೆಗಳಿಗೆ ಲಭ್ಯವಿರುವ/ಲಭ್ಯವಿರದ ವಿದ್ಯುತ್ ಶಕ್ತಿಯ ಸೌಕರ್ಯನ್ನು ವೈದ್ಯಕೀಯ ಸೌಲಭ್ಯದ ಲಭ್ಯತೆ/ಲಭ್ಯವಿರದಿರುವುದು ಮುಂತಾದವುಗಳು ಇವರ ಆರ್ಥಿಕ ಜೀವನ ಮಟ್ಟ ಹೇಗಿದೆ ಎಂಬುದನ್ನು ವಿವರಿಸುತ್ತವೆ.

ವಸತಿ ಸೌಕರ್ಯಗಳು

ಬೇಡ ಬುಡಕಟ್ಟಿನ ಎಲ್ಲಾ ಕುಟುಂಬಗಳು ಒಂದೊಂದು ಮನೆಯನ್ನು ಹೊಂದಿವೆ ಮತ್ತು ವಸತಿ ರಹಿತ ಕುಟುಂಗಳು ಯಾವು ಇಲ್ಲ. ಆದರೆ, ೬೨೧ ಶೇಕಡಾ ೬೩.೪೩ ತಗಡಿನದಾಗಿವೆ ಇದು ಅವರ ಬಡತನವನ್ನು ಎತ್ತಿ ತೋರಿಸುತ್ತದೆ. ಶ್ರೀಮಂತರಲ್ಲಿರುವ ಆರ್.ಸಿ.ಸಿ. ಮನೆಗಳು ಕೇವಲ ೨೩ ಶೇ. ೨.೩೫ ಮಾತ್ರ ಇವೆ (ಕೋಷ್ಠಕ ೪.೧೭ ನೋಡಿ).

ಕೋಷ್ಠಕ ೪.೧೭ ವಸತಿಗಳ ಮಾದರಿ

ಕ್ರಮ ಸಂಖ್ಯೆ	ವಸತಿಗಳ ನಮೂನೆ	ಸಂಖ್ಯೆ	ಶೇಕಡಾ
೧.	ಗುಡಿಸಲು ಮನೆ	೧೯೨	೧೯.೬೧
೨.	ತಗಡಿನ ಮನೆ	೬೨೧	೬೩.೪೩
೩.	ಮಣ್ಣಿನ ಮನೆ	೧೪೧	೧೪.೪೦
೪.	ಆರ್.ಸಿ.ಸಿ. ಮನೆ	೨೩	೨.೩೫
೫.	ಬಾಡಿಗ ಮನೆ	೨	೦.೨೬
	ಒಟ್ಟು	೯೭೯	೧೦೦.೦೦

ಬೇಡರು ಮನೆಯಲ್ಲಿ ಹೊಂದಿರುವ ಪಾತ್ರೆ ಪಗಡಗಳು

ಬೇಡ ಬುಡಕಟ್ಟಿನ ಜನ ಬಡವರಿರುವುದರಿಂದ ಉಪಯೋಗ ಮಾಡುವ ಪಾತ್ರೆಗಳು ಹೆಚ್ಚಾಗಿ ಮಣ್ಣಿನ ಪಾತ್ರೆಗಳನ್ನೇ ಉಪಯೋಗಿಸುತ್ತಾರೆ. ಶೇಕಡಾ ೩೦ ರಷ್ಟು ಮನೆಗಳನ್ನು (ಅಲ್ಯೂಮಿನಿಯಮ್) ಹಿತ್ತಾಳೆ ಪಾತ್ರೆಗಳನ್ನೇ ಉಪಯೋಗಿಸುತ್ತಾರೆ. ಕೆಲವೇ ಕೆಲವು ಮನೆಗಳಲ್ಲಿ ಅಂದರೆ ಶೇಕಡಾ ೧೫ರಷ್ಟು ಮನೆಗಳಲ್ಲಿ ಸ್ಟೀಲಿನ ಪಾತ್ರೆಗಳನ್ನು ಬಳಸುತ್ತಾರೆ.

ಬೇಡ ಬುಡಕಟ್ಟಿನ ಜನ ಹೆಚ್ಚಾಗಿ ಕುಳ್ಳು, (cow dung) ಹೊಲದಲ್ಲಿ ಸಿಗುವ ತೊಗರಿ ಕಟ್ಟಿಗೆ, ಎಳ್ಳಿನ ದಂಟು ಮುಂತಾದ ಕೃಷಿಯ ಕಸ (Agriculture waste)ವನ್ನು ಅಡಿಗೆ ಇಂಧನವನ್ನಾಗಿ ಉಪಯೋಗಿಸುತ್ತಾರೆ. ಸೀಮೆ ಎಣ್ಣೆ, ವಿದ್ಯುತ್ ಒಲೆಗಳು (Heater) ಅಡಿಗೆ ಅನಿಲ ಮುಂತಾದವುಗಳನ್ನು ಇವರು ಉಪಯೋಗಿಸುವುದಿಲ್ಲ. ಇದಕ್ಕೆ ಅವರ ಬಡತನವೇ ಕಾರಣ.

ಮನೆಯಲ್ಲಿ ವಿದ್ಯುತ್ ಶಕ್ತಿಯ ಸೌಕರ್ಯ

ಬೇಡ ಬುಡಕಟ್ಟಿನ ಜನರ ಮನೆಗಳಿಗೆ ವಿದ್ಯುತ ಶಕ್ತಿಯ ಸವಲತ್ತು ಎಲ್ಲರಿಗೂ ದೊರೆತಿಲ್ಲ. ಬಡವರಾದ ಇವರು ತಾವೇ ಸ್ವತಃ ವಿದ್ಯುತ್ ಶಕ್ತಿಯ ಸೌಕರ್ಯನ್ನು ಹೊಂದಲು ಅವರಲ್ಲಿ ಹಣವಿಲ್ಲ. ಆದುದರಿಂದಲೇ, ಸರಕಾರ ಇವರಿಗೆ "ಭಾಗ್ಯ ಜ್ಯೋತಿ" ಯೋಜನೆಯ ಮೂಲಕ ವಿದ್ಯುತ್ತಿನ ಸೌಕರ್ಯವನ್ನು

ನೀಡಿದೆ. ಇವರಿಂದಾಗಿ ಕೆಲವು ವಸತಿ ಗೃಹಗಳಿಗೆ ಈ ಸೌಕರ್ಯ ದೊರೆತ್ತಿದೆ. ಕೋಷ್ಠಕ ೪.೧೮ ವಿದ್ಯುತ್ ಶಕ್ತಿಯ ಸೌಕರ್ಯದ ವಿವರ ನೀಡುತ್ತದೆ.

ಸರಕಾರ ಭಾಗ್ಯಜ್ಯೋತಿ ಯೋಜನೆಯ ಅನುಷ್ಠಾನದಲ್ಲಿ ತಂದಿರುವುದರಿಂದ ಕೇವಲ ೨೯೨ ಅಂದರೆ ಶೇಕಡಾ ೨೯.೮೩ ಮನೆಗಳಿಗೆ ವಿದ್ಯುತ್ ದೊರತಂತಾಗಿದೆ. ಇಷ್ಟಾದರೂ ಕೇವಲ ೩೮೮ ಅಂದರೆ ಶೇಕಡಾ ೩೬.೬೩ ಮನೆಗಳಿಗೆ ಮಾತ್ರ ವಿದ್ಯುತ್ ಸೌಕರ್ಯ ಲಭ್ಯವಾಗಿದೆ. ಉಳಿದ ಮನೆಗಳು ಅಂದರೆ ೬೮೭ ಶೇಕಡಾ ೬೬.೩೭ ಮನೆಗಳಲ್ಲಿ ಕೇವಲ ೯೬ ಮನೆಗಳಿಗೆ ವಿದ್ಯುತ್‌ನ್ನು ಸ್ವಂತ ಖರ್ಚಿನಿಂದ ಬೇಡ ಜಂಗಮ ಬುಡಕಟ್ಟಿನವರು ಪಡೆದಿದ್ದಾರೆ. ಇನ್ನೂ ಹೆಚ್ಚಿನ ಮನೆಗಳಿಗೆ ಈ ಸೌಕರ್ಯ ಲಭ್ಯವಾಗಿಲ್ಲ, ಇದಕ್ಕೆ ಕಾರಣ ಬುಡಕಟ್ಟಿನವರ ಬಡತನ.

ಕೋಷ್ಠಕ ೪.೧೮ ವಿದ್ಯುತ್ ಶಕ್ತಿಯ ಸೌಕರ್ಯ

ಕ್ರಮ ಸಂಖ್ಯೆ	ವಿವರಗಳು	ಮನೆಗಳ ಸಂಖ್ಯೆ	ಶೇಕಡಾ
೧.	ಒಟ್ಟು ಮನೆಗಳು	೯೭೯	೧೦೦.೦೦
೨.	ವಿದ್ಯುತ್ ಸೌಕರ್ಯವುಳ್ಳ ಮನೆಗಳು	೩೮೮	೩೬.೬೩
೩.	ಸ್ವಂತ ಖರ್ಚಿನಿಂದ ಪಡೆದ ಮನೆಗಳು	೯೬	೨೪.೭೪
೪.	ಸರಕಾರದಿಂದ ವಿದ್ಯುತ್ ಶಕ್ತಿ ಪಡೆದ ಮನೆಗಳು	೨೯೨	೭೫.೨೬

ಪ್ರಾಥಮಿಕ ವೈದ್ಯಕೀಯ ಸೌಲಭ್ಯಗಳು ಲಭ್ಯತೆ

(Availability of Primary Health facilities)

ಪ್ರಾಥಮಿಕ ವೈದ್ಯಕೀಯ ಸೌಲತ್ತು ಒಂದು ಮೂಲ ಸೌಲತ್ತು. ಇಂತಹ ಮೂಲ ಸೌಕರ್ಯ ಬೇಡ ಜಂಗಮ ಬುಡಕಟ್ಟಿನವರಿಗೆ ಸಾಕಷ್ಟು ಪ್ರಮಾಣದಲ್ಲಿ ಸಿಕ್ಕುತ್ತಿಲ್ಲ. ಉದಾಹರಣೆಗೆ ವೈದ್ಯಕೀಯ ಸೌಲಭ್ಯಕ್ಕಾಗಿ ಈ ಜನರು ೨ ರಿಂದ ೩೦ ಕಿ.ಮೀ. ದೂರದವರೆಗೆ ಹೋಗಬೇಕಾಗುತ್ತದೆ. ಕೋಷ್ಠಕ ೪.೧೯ ವೈದ್ಯಕೀಯ ಸೌಲಭ್ಯಗಳ ಲಭ್ಯತೆಯ ಬಗ್ಗೆ ವಿವರ ನೀಡುತ್ತದೆ. ಒಟ್ಟು ೪೦ ಗ್ರಾಮಗಳಲ್ಲಿನ ೩ ಗ್ರಾಮಗಳಲ್ಲಿ ಮಾತ್ರ ಶೇಕಡಾ ೭.೫ ಮಾತ್ರ ವೈದ್ಯಕೀಯ ಸೌಲಭ್ಯ ಲಭ್ಯವಿದೆ. ೧೬ ಗ್ರಾಮಗಳಲ್ಲಿ ಶೇಕಡಾ ೪೦ ಜನರು ವೈದ್ಯಕೀಯ ಸವಲತ್ತುಗಳಿಗೆ ೧೧ ರಿಂದ ೧೫ ಕಿ.ಮೀ. ದೂರ ಹೋಗಬೇಕಾಗುತ್ತದೆ. ಇದೊಂದು ಶೋಚನೀಯ ಸಂಗತಿಯಾಗಿದೆ.

ಕೋಷ್ಠಕ ೪.೧೯ ವೈದ್ಯಕೀಯ ಸೌಲಭ್ಯದ ಲಭ್ಯತೆ

ಕ್ರಮ ಸಂಖ್ಯೆ	ಕಿಲೋ ಮೀಟರಗಳ ಅಂತರ	ಗ್ರಾಮಗಳ ಸಂಖ್ಯೆ	ಶೇಕಡಾ
೧.	ಊರು ಒಳಗಡೆ	೦೩	೭.೫
೨.	೧ ರಿಂದ ೪ರ ವರೆಗೆ	೦೬	೧೫.೦೦
೩.	೫ ರಿಂದ ೧೦ರ ವರೆಗೆ	೧೧	೨೭.೦೫
೪.	೧೧ ರಿಂದ ೧೫ರ ವರೆಗೆ	೧೬	೪೦.೦೦
೫.	೧೬ರಿಂದ ಮುಂದೆ	೦೪	೧೬.೦೦
	ಒಟ್ಟು ಗ್ರಾಮಗಳು	೪೦	೧೦೦.೦೦

ಸರಕಾರದ ಅಭಿವೃದ್ಧಿ ಕಾರ್ಯಕ್ರಮದ ಬಗ್ಗೆ ಇರುವ ಬೇಡ ಬುಡಕಟ್ಟಿನವರ ತಿಳುವಳಿಕೆ

ರಾಜ್ಯ ಸರಕಾರ ಆರ್ಥಿಕ ಮತ್ತು ಸಾಮಾಜಿಕವಾಗಿ ಹಿಂದುಳಿದ ಬೇಡ (ಪರಿಶಿಷ್ಟ ಪಂಗಡ) ಬುಡಕಟ್ಟಿನ ಜನರ ಕಲ್ಯಾಣಕ್ಕಾಗಿ ಜಿಲ್ಲೆಯಲ್ಲಿ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುತ್ತಾರೆ. ಕುಟುಂಬ ಯೋಜನೆಗಳ ಕಾರ್ಯಕ್ರಮ, ವಿಧವಾ ವೇತನ, ಅಂಗವಿಕಲಗಿರುವ ಧನ ಸಹಾಯ, ಶಾಲಾ ಮಕ್ಕಳಿಗಾಗಿ ಇರುವ ಶಿಷ್ಯವೇತನ, ಭಾಗ್ಯಜ್ಯೋತಿ ವಿದ್ಯುತ್ ಯೋಜನೆ, ಇಂದಿರಾ ಆವಾಸ ಯೋಜನೆ, ರಾಜೀವಗಾಂಧಿ ಆವಾಸ ಯೋಜನೆ, ಅಂಬೇಡ್ಕರ ಆವಾಸ ಯೋಜನೆ ಇತ್ಯಾದಿ ಯೋಜನೆಗಳನ್ನು ಜಿಲ್ಲಾ ಆಡಳಿತ ಅನುಷ್ಠಾನದಲ್ಲಿ ತಂದಿರುತ್ತದೆ. ಆದರೆ, ಇವುಗಳಲ್ಲಿ ಹೇಳಿಕೊಳ್ಳುವಂತಹ ಪ್ರಗತಿ ಆಗಿಲ್ಲ. ಕೇವಲ ಸ್ವಲ್ಪ ಯಶಸ್ಸು ಕುಟುಂಬ ಯೋಜನೆಯ ಅನುಷ್ಠಾನದಲ್ಲಿ ದೊರೆತಿದೆ.

ಕುಟುಂಬ ಯೋಜನೆ

ಆಧುನಿಕ ಯುಗದಲ್ಲಿ ಮೇಲ್ಜಾತಿಯ ಕುಟುಂಬಗಳು ಹೆಚ್ಚಾಗಿ ಕುಟುಂಬ ಯೋಜನೆಯನ್ನು ಪಾಲಿಸಿ ಜನಸಂಖ್ಯೆಯನ್ನು ನಿಯಂತ್ರಿಸುತ್ತಾರೆ. ಶೈಕ್ಷಣಿಕವಾಗಿ ಅತ್ಯಂತ ಹಿಂದುಳಿದ ಬೇಡ ಬುಡಕಟ್ಟಿನ ಕುಟುಂಬಗಳು, ಜನಸಂಖ್ಯೆ ನಿಯಂತ್ರಿಸಲು ಕುಟುಂಬ ಯೋಜನೆಯನ್ನು ಹೇಳಿಕೊಳ್ಳುವಷ್ಟರ ಮಟ್ಟಿಗೆ ಅನುಸರಿಸುತ್ತಿಲ್ಲ. 'ಮಕ್ಕಳೇ ತಮ್ಮ ಆಸ್ತಿ' ಎಂದು ನಂಬಿರುವ ಇವರು, ಮಕ್ಕಳು ತಮ್ಮ ಮನೆಯ ಒಟ್ಟು ಆದಾಯ ಹೆಚ್ಚುವರಿಗೆ ಸಹಾಯಕವಾಗುತ್ತಾರೆ ಎಂದು ಕೊಂಡು, ಬೇಡ ಬುಡಕಟ್ಟಿನವರು ಕುಟುಂಬ ಯೋಜನೆಯನ್ನು ಪಾಲಿಸುತ್ತಿಲ್ಲ. (ಸುಮಾರು ೫೩೩ ವರ್ಷಗಳ ಹಿಂದೆ ಬೀದರ ಜಿಲ್ಲೆಗೆ ಬೇಡ ಬುಡಕಟ್ಟು ವಲಸೆ ಬಂದಾಗ ಅವರ ಜನಸಂಖ್ಯೆ ೧೦೦ ಇತ್ತು ಎಂದು ವೃದ್ಧನೊಬ್ಬ ತಿಳಿಸಿದ್ದಾನೆ). ಮೇಲಾಗಿ ಇತರ ಸಾಮಾನ್ಯ ಕುಟುಂಬಗಳಂತೆ ಬೇಡ ಕುಟುಂಬಗಳು ಸಹ ಸ್ಥಿತ್ಯಂತರ ಸಿದ್ಧಾಂತದ ಎರಡನೇ ಹಂತದಲ್ಲಿದ್ದಾರೆ. ಇವೆರಡು ಕಾರಣಗಳಿಂದ ಸಾಕಷ್ಟು ಕುಟುಂಬಗಳು ಕುಟುಂಬ ಯೋಜನೆಯನ್ನು ಅನುಸರಿಸಿಲ್ಲ. ವಾಸ್ತವದಲ್ಲಿ, ಕೇವಲ

ಶೇಕಡಾ ೪.೬೯ ಅಥವಾ ಶೇಕಡಾ ೫ ರಷ್ಟು ಕುಟುಂಬಗಳು ಕುಟುಂಬ ಯೋಜನೆಯನ್ನು ಅನುಸರಿಸಿವೆ ಎಂದು ಕೋಷ್ಠಕ ೪.೨೦ ನಮಗೆ ಮಾಹಿತಿ ನೀಡುತ್ತದೆ.

ಕೋಷ್ಠಕ ೪.೨೦ ಕುಟುಂಬ ಯೋಜನೆಯನ್ನು ಅನುಸರಿಸುವ ಕುಟುಂಬಗಳು ಜಿಲ್ಲೆ-ಒಟ್ಟು

ಕ್ರಮ ಸಂಖ್ಯೆ	ವೃತ್ತಗಳ ಹೆಸರು	ಒಟ್ಟು ಕುಟುಂಬಗಳ ಸಂಖ್ಯೆ	ಕುಟುಂಬ ಯೋಜನೆಗೆ ಒಳಗಾದ ಸಂಖ್ಯೆ
೧.	ಕೋಹಿನೂರು ಹೋಬಳಿ	೩೮೫	೨೩
೨.	ಮಂಠಾಳ ಹೋಬಳಿ	೩೦೩	೦೨
೩.	ಮುಡಬಿ ಹೋಬಳಿ	೨೦೯	೧೯
೪.	ನಾರಾಯಣಪುರ ಹೋಬಳಿ	೧೧	-
೫.	ರಾಜೇಶವರ ಹೋಬಳಿ	೨೭	೦೧
೬.	ಖಟಕ ಚಿಂಚೋಳಿ	೧೮	೦೧
೭.	ಹುಮನಾಬಾದ (ಬೋಮಳಖೇಡ)	೨೬	-
	ಒಟ್ಟು	೯೭೯	೪೬ (೪.೬೯)

ಬೇಡ ಬುಡಕಟ್ಟಿನ ಜನರ ಸರಕಾರಿ ಅಭಿವೃದ್ಧಿ ಕಾರ್ಯಕ್ರಮಗಳ ಬಗೆಗಿನ ಅರಿವು

ಬುಡಕಟ್ಟಿನ ಜನ ಹೆಚ್ಚಾಗಿ ನಿರೀಕ್ಷರಿಗಳಾಗಿರುವುದರಿಂದ ಸರಕಾರದ ಅಭಿವೃದ್ಧಿ ಕಾರ್ಯಕ್ರಮಗಳ ಬಗೆಗೆ ಇವರಿಗೆ ಅಷ್ಟೊಂದು ಅರಿವಿಲ್ಲ. ಆದರೂ, ಇತ್ತೀಚಿನ ವರ್ಷಗಳಲ್ಲಿ ಇವರು ಸರಕಾರದ ಯೋಜನೆಗಳಿಂದ ಪ್ರಯೋಜನ ಪಡೆಯಲು ಪ್ರಯತ್ನಿಸಿ ಅದರಲ್ಲಿ ಸ್ವಲ್ಪ ಮಟ್ಟಿಗೆ ಯಶಸ್ವಿಯಾಗಿದ್ದಾರೆ. ಯಾವುದೇ ಒಂದು ಸಮುದಾಯದ ವಾಸ ಸ್ಥಳ ಮತ್ತು ಮನೆಯಲ್ಲಿನ ಸೌಕರ್ಯಗಳಿಂದ ವಿದ್ಯುತ್ ಶಕ್ತಿ, ಸ್ನಾನದ ಕೋಣೆ, ಕೊಳವೆ ನೀರು ಸರಬರಾಜಿನ ಲಭ್ಯತೆ ಮುಂತಾದವುಗಳು ಅಲ್ಲಿನ ಜನರ ಉತ್ಪಾದಕತ್ವದ ಮೇಲೆ ಪರಿಣಾಮ ಬೀರುತ್ತದೆ. ಒಂದು ಸಣ್ಣ ಮನೆ ಅಥವಾ ಗುಡಿಸಲು ಇತರ ಸೌಲತ್ತುಗಳು ಇರದೇ ಇರುವುದು, ಜನರ ಬಡತನವನ್ನು ಎತ್ತಿ ತೋರಿಸುತ್ತದೆ. ಬೇಡ ಬುಡಕಟ್ಟಿನವರ ಈ ತೆರನಾದ ಪರಿಸ್ಥಿತಿಯನ್ನು ಈ ಕೆಳಗೆ ವಿವರಿಸಲಾಗಿದೆ.

ಮೇಲ್ಜಾತಿಯವರ ಜೊತೆ ಬೇಡ ಬುಡಕಟ್ಟಿನವರ ಸಾಮಾಜಿಕ ಸಂಬಂಧಗಳು

ಸಾಮಾಜಿಕ ವ್ಯವಸ್ಥೆಯ ಶ್ರೇಣಿಕೃತ ಜಾತಿಯಲ್ಲಿ ಬೇಡ ಬುಡಕಟ್ಟಿನವರು ಕೊನೆಯಲ್ಲಿದ್ದಾರೆ. ಇವರನ್ನು ಪ್ರತ್ಯೇಕವಾಗಿ ಅಂದರೆ ಗ್ರಾಮದಿಂದ ೨ ರಿಂದ ೩ ಕಿಲೋಮೀಟರ ದೂರ ಇಡಲಾಗಿದೆ. ಮೇಲ್ಜಾತಿಯ ಜನ ಇವರೊಂದಿಗೆ ವ್ಯವಹರಿಸಲು ಹಿಂದೆ ಮುಂದೆ ನೋಡುತ್ತಾರೆ. ಆದ್ದರಿಂದ ಇವರು ಸಾಮಾಜಿಕವಾಗಿ ಹಿಂದುಳಿದಿದ್ದಾರೆಂಬ ಸಂಗತಿ ನಿರ್ವಿವಾದ ವಿಷಯವಾಗಿದೆ[೧]. ಬೇಡ ಬುಡಕಟ್ಟಿನವರ ಗೋಳು ಇಲ್ಲಿಗೆ

ಮುಕ್ತಾಯಗೊಳ್ಳುವುದಿಲ್ಲ. ಬೀದರ ಜಿಲ್ಲೆಯಲ್ಲಿ ಅವರು ಜಿತ ಪದ್ಧತಿಯ ಹೀನಾಯದ ವ್ಯವಸ್ಥೆಗೆ ಮೊನ್ನೆವರೆಗೆ ಒಳಪಡಿಸಲಾಯಿತು. ಉದಾಹರಣೆಗೆ ಕೋಹಿನೂರ ಗ್ರಾಮದ ವಕ್ತೃನೊಬ್ಬನು ೧೯೭೦ರ ದಶಕದವರೆಗೆ ನಮ್ಮನ್ನು ಊರಿನ ಗೌಡರು ಮತ್ತು ಕುಲಕರ್ಣಿಯವರು ಜೀತದಾಳುಗಳಂತೆ ದುಡಿಸಿಕೊಂಡರು ಎಂದು ಬಹಳ ನೋವಿನಿಂದ ಹೇಳಿದ್ದಾನೆ[೧೪].

ಬೇಡ ಬುಡಕಟ್ಟಿನ ವಿದ್ಯಾರ್ಥಿಗಳು ಪದವಿ ಪೂರ್ವ ಮತ್ತು ಮಹಾವಿದ್ಯಾಲಯಗಳ ಶಿಕ್ಷಣದಲ್ಲಿ ವಿದ್ಯಾರ್ಥಿಗಳು ಕೆಲವು ತೊಂದರೆಗಳನ್ನು ಎದುರಿಸಿದ್ದಾರೆ. ಉದಾಹರಣೆಗೆ ಈ ಬುಡಕಟ್ಟು ೧೯೯೧ರ ವರೆಗೆ ಕರ್ನಾಟಕ ಸರಕಾರದ ಆದೇಶದ ಪ್ರಕಾರ 'ಎ' (A) ಗ್ರೂಪ್‌ನಲ್ಲಿ ಬರುತ್ತಿದ್ದರು. ತದನಂತರ ಇವರನ್ನು ಪರಿಶಿಷ್ಟ ವರ್ಗದಲ್ಲಿ ೧೯೯೧ರಲ್ಲಿ ಸೇರಿಸಲಾಯಿತು. ಇಷ್ಟಾದರೂ ಮೇಲ್ಜಾತಿಯ ಅಧಿಕಾರಿಗಳು ಇವರಿಗೆ ಜಾತಿ ಪ್ರಮಾಣ ಪತ್ರವನ್ನು ನೀಡುತ್ತಿರಲಿಲ್ಲ. ಇನ್ನೂ ಕೆಲವರಿಗೆ ಈ ಪ್ರಮಾಣ ಪತ್ರ ಪಡೆದರೂ, ಅದಕ್ಕಾಗಿ ಸಾಕಷ್ಟು ತೊಂದರೆಗಳನ್ನು ಅನುಭವಿಸಬೇಕಾಯಿತು. ನಾನು ಪ್ರಾಥಮಿಕ ಅಂಕಿ-ಸಂಖ್ಯೆಗಳನ್ನು ಸಂಗ್ರಹಿಸಲು ಕ್ಷೇತ್ರಕ್ಕೆ ೧೯೯೯ರಲ್ಲಿ ಹೋದಾಗಲು ಈ ಬುಡಕಟ್ಟಿನ ಜನರು "ನಮಗೆ ಇಂದು ಕೂಡ ಪರಿಶಿಷ್ಟ ವರ್ಗದ ಪ್ರಮಾಣ ಪತ್ರ ಕೊಡುತ್ತಿಲ್ಲ. ನೀವು ಏನಾದರೂ ಮಾಡಿ" ಎಂಬ ದೂರುಗಳನ್ನು ನನ್ನ ಮುಂದೆ ಹಲವಾರು ವಕ್ತೃಗಳು ಇಟ್ಟರು. ಕಾಯ್ದೆ ಅನುಷ್ಠಾನದಲ್ಲಿ ಬಂದು ೯ ವರ್ಷಗಳು ಆದರೂ ಈ ಬುಡಕಟ್ಟು ಜನರ ಸಂಕಷ್ಟಗಳು ಸಂಪೂರ್ಣವಾಗಿ ಪರಿಹಾರವಾಗಿಲ್ಲ. ಕರ್ನಾಟಕ ರಾಜ್ಯದಲ್ಲಿ ಮೇಲಿನ ಹಾಗೂ ಕೆಳಗಿನ ಶೈಕ್ಷಣಿಕ ಮಟ್ಟಗಳಲ್ಲಿ ಪರಿಶಿಷ್ಟ ವರ್ಗದವರಿಗೆ ಕೇವಲ ಶೇ. ೩ ರಷ್ಟು ಮೀಸಲಾತಿಯನ್ನು ನೀಡುತ್ತಿದೆ. ಸುಪ್ರೀಮ್ ಕೋರ್ಟ್ ಈ ಪ್ರಮಾಣವನ್ನು 7½ ವರೆಗೆ ಏರಿಸಬೇಕೆಂದು ಆದೇಶ ಇದ್ದರೂ, ರಾಜ್ಯ ಸರಕಾರ ಇನ್ನೂ ಅದನ್ನು ಅನುಷ್ಠಾನದಲ್ಲಿ ತಂದಿಲ್ಲ. ಮೇಲ್ಜಾತಿಯ ಜನರ ಮತಗಳನ್ನು ಪಡೆಯುವುದಕ್ಕಾಗಿ ರಾಜ್ಯ ಸರಕಾರ ಪರಿಶಿಷ್ಟ ವರ್ಗದ ಹಿತಾಸಕ್ತಿಗಳು ಕಡೆಗಣಿಸುತ್ತಿದ್ದಾರೆ ಎಂದರೆ ಅಷ್ಟೇನು ತಪ್ಪಾಗಲಾರದು. ವಿಧಾನ ಸಭೆ, ಪರಿಷತ್ತು, ಸಂಸತ್ತು ಸದಸ್ಯರು, ದರ್ಜೆ ೧ ಮತ್ತು ೨ರ ಅಧಿಕಾರಿಗಳು ಇವರೆಲ್ಲರೂ ಮೇಲ್ಜಾತಿಗೆ ಸಂಬಂಧಿಸಿದವರಿರುವುದರಿಂದ ಬುಡಕಟ್ಟಿನ ಜನಗಳ ಸಮಸ್ಯೆಗಳಿಗೆ ಇವರು ಸಾಕಷ್ಟು ಸ್ಪಂಧಿಸಿಲ್ಲ.

ಬಿ.ಈಡ್., ಟಿ.ಸಿ.ಎಚ್. ಮತ್ತು ಐ.ಟಿ.ಐ. ಮುಂತಾದ ವೃತ್ತಿಪರ ಕೋರ್ಸುಗಳನ್ನು ಖಾಸಗಿ ವಲಯದಲ್ಲಿನ ವಿದ್ಯಾ ಸಂಸ್ಥೆಗಳು ಹೊಂದಿರುವುದರಿಂದ ಮತ್ತು ಇವುಗಳ ವ್ಯವಸ್ಥಾಪಕರು ಮೇಲ್ಜಾತಿಯವರಾಗಿರುವುದರಿಂದ, ಪರಿಶಿಷ್ಟ ಪಂಗಡದವರಿಗೆ ಇವುಗಳಲ್ಲಿ ಪ್ರವೇಶ ಸರಿಯಾಗಿ ದೊರಕುತ್ತಿಲ್ಲ. ಕೇಂದ್ರ ಮತ್ತು ರಾಜ್ಯ ಸರಕಾರದಿಂದ ಅನುದಾನ ಪಡೆದರೂ, ಈ ವಿದ್ಯಾ ಸಂಸ್ಥೆಗಳು ವಿಶೇಷವಾಗಿ (ST) ಪರಿಶಿಷ್ಟ ಪಂಗಡದವರನ್ನು ಮೀಸಲಾತಿಗೆ ಅನುಗುಣವಾಗಿ ಖಾಲಿ ಹುದ್ದೆಗಳಲ್ಲಿ ನೇಮಕ ಮಾಡುತ್ತಿಲ್ಲ.

ಒಟ್ಟಿನಲ್ಲಿ ಬೇಡ ಬುಡಕಟ್ಟಿನವರ ಸಾಮಾಜಿಕ ಚೌಕಟ್ಟು ಅವರ ಬಡತನವನ್ನೇ ಪ್ರಮುಖವಾಗಿ ಮತ್ತು ಸ್ಪಷ್ಟವಾಗಿ ತೋರಿಸುತ್ತದೆ. ಅವರು ಬಡವರಿದ್ದ ಕಾರಣ ಶೈಕ್ಷಣಿಕ ಸೌಲಭ್ಯಗಳು ಸಾಕಷ್ಟು ದೊರೆತ್ತಿಲ್ಲ. ಬಡತನವು ಚಿಕ್ಕಮಕ್ಕಳನ್ನು ಶಾಲೆಗೆ ಹೋಗದಂತೆ ಮಾಡಿರುತ್ತದೆ. ಇವರು ವಾಸಿಸುವ ಊರುಗಳಲ್ಲಿ ಮೂಲಭೂತ ಸೌಲಭ್ಯಗಳಾದ ಸುರಕ್ಷಿತ ಕುಡಿಯುವ ನೀರು, ಪ್ರಾಥಮಿಕ ಆರೋಗ್ಯ ಘಟಕಗಳು, ರಸ್ತೆ, ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲೆಗಳ ಕೊರತೆ ಬಹಳಷ್ಟಿದೆ, ಇವರ ಶಿಕ್ಷಣ ಮಟ್ಟ ಹೆಚ್ಚಿಸಲು ಕಾಯ್ದೆ-ಕಾನೂನುಗಳು ರೂಪಿತವಾಗಿದ್ದರೂ, ಅವುಗಳ ಅನುಷ್ಟಾನ ತೃಪ್ತಿಕರವಾಗಿಲ್ಲ, ಇದರಿಂದಾಗಿ ಈ ಬುಡಕಟ್ಟು ಸಮಾಜಿಕವಾಗಿ ಹಿಂದುಳಿದಿದೆ.

ಉಪಸಂಹಾರ

ಜನರು ನಿರೀಕ್ಷರಿಗಳು ಮತ್ತು ಶೋಷಣೆಗೆ ಒಳಗಾದವರು. ಇವರು ಬಡವರಾಗಿರುವದರಿಂದ ದೊಡ್ಡ ಕುಟುಂಬವನ್ನು ಹೊಂದಿರುತ್ತಾರೆ. ವಾಸಿಸಲು ಸರಿಯಾದ ಮನೆಯನ್ನು ಹೊಂದದೆ ಇರುವುದು ಮತ್ತು ವೈದ್ಯಕೀಯ ಸೌಲಭ್ಯಗಳು ದೊರಕದೇ ಇರುವುದಕ್ಕೆ ಕಾರಣ ಇವರ ಬಡತನವಾಗಿದೆ. ಇತ್ತೀಚೆಗೆ ಇವರಲ್ಲಿ ಸ್ವಲ್ಪ ರಾಜಕೀಯ ಪ್ರಜ್ಞೆ ಕಂಡು ಬರುತ್ತದೆ. ಒಟ್ಟಿನಲ್ಲಿ ಇವರ ಸಾಮಾಜಿಕ, ಮತ್ತು ಶೈಕ್ಷಣಿಕ ಚೌಕಟ್ಟುಗಳು ಸಂಪ್ರದಾಯ ಬದ್ಧವಾಗಿವೆ.

ಆಧಾರ ಗ್ರಂಥಗಳು

1. Government of India, Planning Commission, Eighth Five year, 1992-97, Delhi, 1992 pp. 23.

೨. ಮೈತ್ರಿ ಕೆ.ಎಮ್. 'ಬೀದರ ಜಿಲ್ಲೆಯ ಗೊಂಡ ಆದಿವಾಸಿ ಸಮುದಾಯ: ಒಂದು ಸಮಾಜಶಾಸ್ತ್ರೀಯ ಅಧ್ಯಯನ' ೧೯೯೪, ಪು. ೨೦೯.

3. William J. Goode 1965, 'The Family Foundation of Modern Sociology Series' (Delhi: Prentice Hall of India Pvt. Ltd., 1965).

4. ಮೈತ್ರಿ ಕೆ.ಎಮ್. 'ಬೀದರ ಜಿಲ್ಲೆಯ ಗೊಂಡ ಆದಿವಾಸಿ ಸಮುದಾಯ: ಒಂದು ಸಮಾಜಶಾಸ್ತ್ರೀಯ ಅಧ್ಯಯನ' ೧೯೯೪ ಪು. ೨೩೧.

5. Kachroo Vijaya: Society of India, New Delhi, 1990.

6. ಮೈತ್ರಿ ಕೆ.ಎಮ್. 'ಬೀದರ ಜಿಲ್ಲೆಯ ಗೊಂಡ ಆದಿವಾಸಿ ಸಮುದಾಯ: ಒಂದು ಸಮಾಜಶಾಸ್ತ್ರೀಯ ಅಧ್ಯಯನ' ೧೯೯೪ ಪು. ೨೫೨.

7. Hanumantha Rajappa, P., 'Issues in Tribal Development', - A study of selected Tribes in Dakshina Kannada District of Karnataka, op. cit., pp. 123-144.

8. Elwin, V. (1963) A New Deal for Tribal India, New Delhi, Ministry of Home affairs.

9. ಮೈತ್ರಿ ಕೆ.ಎಮ್. 'ಬೀದರ ಜಿಲ್ಲೆಯ ಗೊಂಡ ಆದಿವಾಸಿ ಸಮುದಾಯ: ಒಂದು ಸಮಾಜಶಾಸ್ತ್ರೀಯ ಅಧ್ಯಯನ' ೧೯೯೪ ಪು. ------.

10. ವಿರೂಪಾಕ್ಷಿ, 'ಮಧ್ಯಕಾಲೀನ ಕನ್ನಡ ಕಾವ್ಯಗಳಲ್ಲಿ ನಿರೂಪಿತವಾಗಿರುವ ಬೇಟೆ ಮತ್ತು ಬೇಡರ ಸಂದರ್ಭಗಳು: ಒಂದು ಚಾರಿತ್ರಿಕ ಅಧ್ಯಯನ', ಚರಿತ್ರೆ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦.

11. ಕಲ್ಲೂರ ಎಮ್. ಎಸ್. ಮತ್ತು ದೇಗಾಂವಕರ್ ಸಿ.ಕೆ., op. cit., pp.

12. ವಕ್ತೃನೊಬ್ಬನ ಜೊತೆ ಮೌಖಿಕ ಸಂದರ್ಶನ - ಈ ವಿಷಯ ರಿಕಾರ್ಡಿಂಗ್ ಮಾಡಲಾಗಿದೆ.

[illegible]

ಅಧ್ಯಾಯ-೫
ಬೇಡ ಬುಡಕಟ್ಟಿನ ಆರ್ಥಿಕ ಚೌಕಟ್ಟು
(ECONOMIC FRAME-WORK OF BEDA TRIBE)

ಆರ್ಥಿಕ ಸಂಘಟನೆಯ ಹಂತಗಳು

ಇಂದಿನ ಆರ್ಥಿಕ ವ್ಯವಸ್ಥೆಯು ಜಟಿಲವಾದುದು. ಅದರ ಸ್ವರೂಪ ಅರಿಯಬೇಕಾದರೆ ಅದರ ಪೂರ್ವೇತಿಹಾಸದ ಲಘು ಪರಿಚಯ ಅತ್ಯಾವಶ್ಯಕ. ಮಾನವನು ಭೂಮಿಯಲ್ಲಿ ಜನ್ಮ ತಾಳಿದಾಗ ಹೆಚ್ಚು ಕಡಿಮೆ ಕಾಡು ಮೃಗಗಳಂತೆ ಜೀವಿಸುತ್ತಿದ್ದ, ನಂತರ ಆತನ ಆರ್ಥಿಕ ಜೀವನ ಕ್ರಮೇಣ ವಿಕಾಸವಾಗ ತೊಡಗಿತ್ತು. ಮಾನವನ ಆರ್ಥಿಕ ಜೀವನದ ವಿಕಾಸದಲ್ಲಿ ಹಲವಾರು ಹಂತಗಳನ್ನು ಕಾಣಬಹುದು. ಹಿರಿಯ ಅರ್ಥಶಾಸ್ತ್ರಜ್ಞರ ಸಂಪ್ರದಾಯವನ್ನು ಅನುಸರಿಸಿ, ಮಾನವನ ಆರ್ಥಿಕ ಬೆಳವಣಿಗೆಯನ್ನು ನಾಲ್ಕು ಹಂತಗಳಲ್ಲಿ ಅಂದರೆ;

೧. ಬೇಟೆ ಜೀವನ ಯುಗ (ಅಥವಾ ವನಚರ ಯುಗ) Hunting stage.

೨. ಪಶುಪಾಲನೆ ಯುಗ (Pastoral stage)

೩. ಕೃಷಿ ಯುಗ (Agricutural stage) ಮತ್ತು

೪. ಕೈಗಾರಿಕಾ ಯುಗ (Industrial stage) ಎಂಬುದಾಗಿ ವಿಭಾಗಿಸಬಹುದು[೧].

ಒಕ್ಕಲುತನ ಒಮ್ಮೆಲೆ ಎಲ್ಲೆಡೆ ಉಗಮ (Orgin)ವನ್ನು ಹೊಂದಿಲ್ಲ. ಅಂದರೆ ಬೇರೆ ಸ್ಥಳಗಳಲ್ಲಿ ಬೇರೆ ಬೇರೆ ವರ್ಷಗಳಲ್ಲಿ ಒಕ್ಕಲುತನ ಪ್ರಾರಂಭವಾಯಿತು. ೧೯ನೇ ಶತಮಾನದ ವಿದ್ವಾಂಸರು ಮಾನವನ ಬೆಳವಣಿಗೆಯನ್ನು ನಾಲ್ಕು ಹಂತಗಳಲ್ಲಿ ವಿವರಿಸುತ್ತಾರೆ. ಮೊದಲನೆಯದು, ಪ್ರಾಣಿಗಳನ್ನು ಬೇಟೆಯಾಡಿ ಮತ್ತು ಹಣ್ಣು-ಹಂಪಲುಗಳನ್ನು ತಿಂದು ಜೀವಿಸುವ ಹಂತ. ಕಾಡು ಪ್ರಾಣಿಗಳನ್ನೇ ಪಳಗಿಸಿ ಅವುಗಳಿಂದ ಉಪ ಜೀವನವನ್ನು ಸಾಗಿಸುವದು. ಎರಡನೇಯದು ಅಲೆಮಾರಿ ಹಂತ. ಒಂದೇ ಸ್ಥಳದಲ್ಲಿ ನೆಲೆಸಿ ಕೃಷಿಯಿಂದ ಉಪಜೀವನ ಸಾಗಿಸುವ ಕೃಷಿ ಹಂತ ಮೂರನೇಯ ಹಂತ ಹಾಗೂ ಕೊನೆಯದು. ನಾಗರೀಕತೆಯ ಹಂತ ಕ್ರಿ.ಪೂ. ನಾಲ್ಕು ಸಾವಿರ ವರ್ಷಗಳ ಹಿಂದೆಯೇ 'ಅಲಿಕೋಸ್' ಎಂಬಲ್ಲಿ A place in the Near East ಒಕ್ಕಲುತನ ಪ್ರಾರಂಭವಾಯಿತೆಂದು ಒಂದು ಮೂಲದಿಂದ ಗೊತ್ತಾಗುತ್ತದೆ. ಆದರೆ ಆಧುನಿಕ ಸಂಶೋಧನಕಾರರು ಈ ಸಂಗತಿಯನ್ನು ಒಪ್ಪದೆ ಕ್ರಿ.ಪೂ. ೭೦೦೦ ವರ್ಷಗಳ ಹಿಂದೆ ಇತ್ತೆಂದು ಅಭಿಪ್ರಾಯಪಡುತ್ತಾರೆ. ಮುಂದುವರೆದು, 'ಭತ್ತ' ಜಾಗತಿಕ ಕೃಷಿಗೆ ಭಾರತ ನೀಡಿದ ಕೊಡುಗೆ, ಕ್ರಿ.ಪೂ. ೩೦೦೦ ಇಸವಿಯಲ್ಲಿ ಮೊಹೆಂಜೋದಾರೋ ಮತ್ತು ಹರಪ್ಪಾ ನಗರಗಳಲ್ಲಿ. ಕೃಷಿ ಬೆಳವಣಿಗೆಯನ್ನು

[illegible]

ಸಾಧಿಸಲಾಯಿತು. (ಇಂದು ಈ ಎರಡು ನಗರಗಳು ಪಾಕಿಸ್ತಾನಕ್ಕೆ ಸೇರಿರುತ್ತವೆ). ಬಾರ್ಲಿ ಗೋಧಿ ಮುಂತಾದ ಬೆಳೆಗಳನ್ನು ಸಹಾ ಬಹಳ ಹಿಂದೆಯೇ ಅಭಿವೃದ್ಧಿಪಡಿಸಲಾಯಿತು[೨].

ಭಾರತವು ಕೃಷಿ ಪ್ರಧಾನ ಅರ್ಥವ್ಯವಸ್ಥೆಯಾಗಿದ್ದು, ದೇಶದ ಶೇ. ೭೦ ರಷ್ಟು ಮಂದಿ ಕೃಷಿಯಲ್ಲಿ ತಮ್ಮ ಬಾಳನ್ನು ಕಂಡುಕೊಂಡಿದ್ದಾರೆ. ಗ್ರಾಮೀಣ ಭಾರತವೇ ನೈಜ ಭಾರತ ಎಂದು "ಮಹಾತ್ಮಾ ಗಾಂಧೀಜ' ಹೇಳಿರುವರು. ಕೃಷಿಕರು ಭಾರತದ ಬೆನ್ನೆಲುಬು ಎಂದು ಅರ್ಥಶಾಸ್ತ್ರಜ್ಞರು ವರ್ಣಿಸಿರುವುದು 'ಕೃಷಿತೋನಾಸ್ತಿ ದುರ್ಭಿಕ್ಷಂ' ಎಂಬ ಲೋಕೋಕ್ತಿ 'ಬೇಸಾಯವನು ಬೇಗ ಸಾಯ', ಎಂಬ ಗಾದೆ ಮಾತು, ಭಾರತದಲ್ಲಿ ಕೃಷಿಯು ಎಷ್ಟು ಮಹತ್ವಪೂರ್ಣವಾದುದು ಎನ್ನುವುದನ್ನು ಸೂಚಿಸುತ್ತದೆ[೩].

ಭಾರತದಂತೆ, ಕರ್ನಾಟಕ ಸಹ ಕೃಷಿ ಪ್ರಧಾನ ರಾಜ್ಯ. ಇದು ೧.೯೫ ಲಕ್ಷ ಚ.ಕಿ.ಮೀ. ವಿಸ್ತೀರ್ಣದೊಂದಿಗೆ ರಾಷ್ಟ್ರದ ಎಂಟನೆಯ ಅತಿ ದೊಡ್ಡ ರಾಜ್ಯವಾಗಿದೆ. ಕರ್ನಾಟಕವು ಪ್ರಧಾನವಾಗಿ ಮಳೆಯಾಶ್ರಿತ ಬೇಸಾಯದ ರಾಜ್ಯ ಸಹ ಆಗಿದೆ[೪]. ರಾಜ್ಯದಂತೆ ಹೈದ್ರಾಬಾದ ಕರ್ನಾಟಕ ಪ್ರದೇಶ (ಬೀದರ, ಬಳ್ಳಾರಿ, ಗುಲಬರ್ಗಾ, ಕೊಪ್ಪಳ ಮತ್ತು ರಾಯಚೂರು ಈ ಐದು ಜಿಲ್ಲೆಗಳನ್ನು ಈ ಪ್ರದೇಶ ಹೊಂದಿದೆ). ಸಹ ಕೃಷಿ ಪ್ರಧಾನವಾಗಿದೆ. ಈ ಪ್ರದೇಶದ ಅಂಗವಾದ ಬೀದರ ಜಿಲ್ಲೆಯ ಪ್ರಗತಿ ಸಹ ಕೃಷಿಯನ್ನೇ ಅವಲಂಬಿಸಿದೆ[೫]. ಜಿಲ್ಲೆಯ ಎಲ್ಲ ಜಾತಿಗಳ ಮತ್ತು ಬುಡಕಟ್ಟುಗಳ ಜನರ ಜೀವಾಳ 'ಕೃಷಿ'.

ಯಾವುದೇ ಒಂದು ದೇಶದ, ಜನಾಂಗದ ಮತ್ತು ಬುಡಕಟ್ಟಿನ ಆರ್ಥಿಕ ಚೌಕಟ್ಟು, ಆ ದೇಶದ, ಜನಾಂಗದ ಮತ್ತು ಬುಡಕಟ್ಟಿನವರ ಮುಖ್ಯ ಕಸುಬು, ಉಪಕಸುಬು (ಕೆಲಸ ಅಥವಾ ವೃತ್ತಿ) ಮುಂತಾದವುಗಳ ಅಧ್ಯಯನವನ್ನು ಹೊಂದಿದೆ. ಔದ್ಯಮಿಕವಾಗಿ ಮುಂದುವರಿದ ದೇಶಗಳಲ್ಲಿ ಹೆಚ್ಚಿನ ಜನರು ಔದ್ಯಮಿಕ ರಂಗ ಮತ್ತು ಸೇವಾ ರಂಗಗಳಲ್ಲಿನ ತಮ್ಮ ಕಸುಬುಗಳಲ್ಲಿ ತೊಡಗಿರುತ್ತಾರೆ. ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರವಾದ ಭಾರತದಲ್ಲಿ ಇಂದಿಗೂ ಬೇಸಾಯವೇ ಬಹುಪಾಲು ಜನಸಂಖ್ಯೆಯ ಮುಖ್ಯ ಕಸುಬಾಗಿರುತ್ತದೆ. ಅಂದರೆ, ಭಾರತದಲ್ಲಿ ಜನರಿಗೆ ಕಸುಬನ್ನು ನೀಡುವಲ್ಲಿ ಔದ್ಯಮಿಕ ರಂಗ ಮತ್ತು ತೃತೀಯ ರಂಗ ಕೃಷಿಗಿಂತ ಹಿಂದುಳಿದಿರುತ್ತವೆ. ರಾಷ್ಟ್ರದ ಮತ್ತು ರಾಜ್ಯದ ಹಿಂದುಳಿದ ಪ್ರದೇಶಗಳಲ್ಲಿಯೇ ಬೇಸಾಯ ಅತಿ ಮುಖ್ಯವಾದ ಕಸುಬಾಗಿದೆ. ಹಿಂದುಳಿದ ಹೈದ್ರಾಬಾದ ಕರ್ನಾಟಕ ಪ್ರದೇಶದಲ್ಲಿನ ಅತ್ಯಂತ ಹಿಂದುಳಿದ ಜಿಲ್ಲೆ ಬೀದರ ಜಿಲ್ಲೆ ಆಗಿದೆ. ಎಲ್ಲ ಜಾತಿಯ ಜನ ಹೆಚ್ಚಾಗಿ ಕೃಷಿಯನ್ನೇ ಅವಲಂಬಿಸಿದ್ದಾರೆ. ಅದರಲ್ಲೂ ಶೈಕ್ಷಣಿಕವಾಗಿ ಹಿಂದುಳಿದ ಬೇಡ ಬುಡಕಟ್ಟಿನವರಿಗೆ ಕೃಷಿಯಲ್ಲಿ ಉದ್ಯೋಗ ದೊರಕುತ್ತದೆ ಹೊರತು ಬೇರೆ ರಂಗಗಳಲ್ಲಿ ಅಲ್ಲ. ಬೇಡ ಬುಡಕಟ್ಟಿನವರ ಆರ್ಥಿಕ ಚೌಕಟ್ಟನ್ನು ಈ ಕೆಳಗಿನ ಪರಿಚ್ಛೇದಗಳಲ್ಲಿ ನೀಡಲಾಗಿದೆ.

ಸಾಮಾನ್ಯವಾಗಿ ಆರ್ಥಿಕ ವ್ಯವಸ್ಥೆಯು ಒಂದು ಬುಡಕಟ್ಟಿನ ಸ್ಥಾನಮಾನವನ್ನು ನಿರ್ಧರಿಸುತ್ತದೆ. ತುಂಬಾ ಮುಂದುವರಿದ ಸಮಾಜದ ಆರ್ಥಿಕ ಜೀವನವು ಅವರ ಮುಂದುವರಿದ ಶಿಕ್ಷಣದ ತಾಂತ್ರಿಕಜ್ಞಾನ, ಕೈಗಾರಿಕಾ ಹಾಗೂ ಬೃಹತ್ ವಾಣಿಜ್ಯೋದ್ಯಮಗಳನ್ನು ಹೆಚ್ಚಾಗಿ ಅವಲಂಬಿಸಿ ಅದರಂತೆ ಅವರ ಕಾರ್ಯಕ್ಷೇತ್ರವೂ ವಿಶಾಲ ವ್ಯಾಪ್ತಿಯನ್ನು ಹೊಂದಿರುವಂತಹದಾಗಿರುತ್ತದೆ. ಆದರೆ, ಆದಿವಾಸಿಗಳ ಅವಶ್ಯಕತೆಗಳು ಸೀಮಿತವಾದುವು. ಆದುದರಿಂದ ಅವರ ಆರ್ಥಿಕ ಜೀವನವು ಅವರ ಅವಶ್ಯಕತೆ ಮತ್ತು ಅವುಗಳ ಪೂರೈಕೆಯನ್ನು ಅವಲಂಬಿಸಿದಂತೆ ರೂಪಿತಗೊಂಡಿರುತ್ತದೆ. ಆದಿವಾಸಿಗಳಿಗೆ ಇರುವ ಶಿಕ್ಷಣ ಮತ್ತು ತಾಂತ್ರಿಕ ಜ್ಞಾನ ಕಡಿಮೆ. ಅದರಲ್ಲಿಯೇ ಬಳಕೆಯಲ್ಲಿರುವ ಸ್ವಲ್ಪ ಮಟ್ಟಿನ ತಾಂತ್ರಿಕ ಜ್ಞಾನದ ನೆರವಿನಿಂದ ತಮಗೆ ಬೇಕಾದುದನ್ನು ತಾವೇ ಮಾಡಿಕೊಳ್ಳುತ್ತಾರೆ[1].

ಪುರಾತನ ಕಾಲದಲ್ಲಿ ಬುಡಕಟ್ಟಿನ ಜನರು ಸ್ಥಳಾಂತರ ಬೇಸಾಯಗಾರರು (Shiffting type of agriculturists) ಆಗಿದ್ದರು. ಇದನ್ನೇ ವಿದ್ವಾಂಸರು "ಕೊಚ್ಚು ಮತ್ತು ಸುಡುವ ವ್ಯವಸಾಯ" (Slash and Burn cultivation) ಎಂದು ಕರೆಯುತ್ತಾರೆ. ವಿಶ್ವದಾದ್ಯಂತ ಸ್ಥಳಾಂತರ ಬೇಸಾಯದ ಬುಡಕಟ್ಟುಗಳು ಕಂಡು ಬರುತ್ತವೆ. "ನಾಗಾಲ್ಯಾಂಡ್, ತ್ರಿಪುರ್, ಮಣಿಪುರ, ನೇಫಾ, ಮಿಜೋರಾಮ್ ಈ ಪ್ರದೇಶಗಳಲ್ಲಿ ವಾಸವಾಗಿರುವ ಎಲ್ಲ ಬುಡಕಟ್ಟುಗಳ ಜನರೂ ಬಿಹಾರ, ಒರಿಸ್ಸಾ, ಮಧ್ಯಪ್ರದೇಶಗಳಲ್ಲಿರುವ ಬಹುಪಾಲು ಬುಡಕಟ್ಟುಗಳ ಜನರೂ ಸ್ಥಳಾಂತರ ಬೇಸಾಯದಿಂದ ಜೀವಿಸುತ್ತಾರೆ[2]. ಈ ವಿಷಯ ಏನೇ ಇರಲಿ, ಬೀದರ ಜಿಲ್ಲೆಯ ಬೇಡರ 'ಕೃಷಿ'ಯನ್ನು ಕೂಲಂಕುಷವಾಗಿ ನೋಡುವ ಮುನ್ನ ಅವರ ಕಸುಬುಗಳನ್ನು ನೋಡೋಣ.

ಬೀದರ ಜಿಲ್ಲೆಯ ಬೇಡ ಬುಡಕಟ್ಟಿನ ವೃತ್ತಿಗಳು (ಕಸುಬುಗಳು)

ಒಂದು 'ಕಸುಬು' ಅಥವಾ 'ಕೆಲಸ' ಎಂದರೆ ಒಂದು ಆರ್ಥಿಕ ಚಟುವಟಿಕೆ. ಆರ್ಥಿಕ ಚಟುವಟಿಕೆಗಳು ಒಬ್ಬ ವ್ಯಕ್ತಿಯ ಶಿಕ್ಷಣದ ಮಟ್ಟಕ್ಕೆ ಸಂಬಂಧವನ್ನು ಹೊಂದಿರುತ್ತವೆ. ಉದಾಹರಣೆಗೆ ಹೆಚ್ಚು-ಕಡಿಮೆ ನಿರಕ್ಷರಿಗಳು (ಭಾರತದಂತಹ ಮುಂದುವರೆಯುತ್ತಿರುವ ದೇಶದಲ್ಲಿ) ಕೃಷಿ ಮತ್ತು ಒಕ್ಕಲುತನವನ್ನು ಅವಲಂಬಿಸಿರುತ್ತಾರೆ. ಇದಲ್ಲದೆ ಬೇಟೆಗಾರಿಕೆ, ಕುರಿ ಸಾಕಾಣಿಕೆ ಮುಂತಾದವುಗಳ ಮೇಲೆ ಅವಲಂಬಿಸಿರುತ್ತಾರೆ. ಇದಕ್ಕೆ ವ್ಯತಿರಿಕ್ತವಾಗಿ ಓದು ಬರಹ ಬಂದ ಮತ್ತು ವೃತ್ತಿ ನೈಪುಣ್ಯತೆಗಳನ್ನು (Occupational skills) ಹೊಂದಿದ ಜನ ಔದ್ಯಮಿಕ ರಂಗ ಮತ್ತು ಸೇವಾ ರಂಗ ಕಾರ್ಯದಲ್ಲಿ ತೊಡಗಿರುತ್ತಾರೆ. ಕೃಷಿಯ ಮೇಲೆ ಅವಲಂಬಿಸಿರುವವರ ಆದಾಯ ಮಟ್ಟ ಕಡಿಮೆ ಪ್ರಮಾಣದಾಗಿರುತ್ತದೆ. ಔದ್ಯಮಿಕ ಮತ್ತು ಸೇವಾ ರಂಗದ ಕಾರ್ಯದಲ್ಲಿ ತೊಡಗಿರುತ್ತಾರೆ. ಕೃಷಿಯ ಮೇಲೆ ಅವಲಂಬಿಸಿರುವವರ ಆದಾಯ ಮಟ್ಟ ಕಡಿಮೆ ಪ್ರಮಾಣದಾಗಿರುತ್ತದೆ. ಔದ್ಯಮಿಕ ಮತ್ತು ಸೇವಾ ರಂಗಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಜನರ ಆದಾಯ

ಮಟ್ಟ ಅಧಿಕ ಪ್ರಮಾಣದಲ್ಲಿರುತ್ತದೆ ಮುಂದುವರೆದು ಒಬ್ಬ ವ್ಯಕ್ತಿಯ ಸಾಮಾಜಿಕ ಅಂತಸ್ತನ್ನು ನಿರ್ಧರಿಸುವಲ್ಲಿ ಅವನ ವೃತ್ತಿ ಪ್ರಮುಖವಾಗಿರುತ್ತದೆ. ಬುಡಕಟ್ಟಿನ ಜನ ಕೃಷಿಯನ್ನೇ ಅವಲಂಬಿಸಿರುವುದರಿಂದ ಮತ್ತು ಅವರು ಶ್ರೀಮಂತರಲ್ಲದ್ದರಿಂದ ಅವರ ಸಾಮಾಜಿಕ ಅಂತಸ್ತು ಹೆಚ್ಚಿನ ಮಟ್ಟದಾಗಿರುವುದಿಲ್ಲವೆಂದು 'ಮವ್ವಾಜ ಅಲಿಬಾನ' ಅಭಿಪ್ರಾಯಪಟ್ಟಿದ್ದಾರೆ[೮].

ಬೇಡರ ಮೂಲ ವೃತ್ತಿ ಬೇಟೆಯಾಡುವುದು. ಆ ಬೇಟೆಯಿಂದಲೇ ತಮ್ಮ ಹೊಟ್ಟೆಯನ್ನು ತುಂಬಿಕೊಳ್ಳುತ್ತಿದ್ದರು. ಇಂದಿಗೂ ಸುಮಾರು ಜನರು ಮೊಲ ಮತ್ತು ಇತರ ಪ್ರಾಣಿಗಳನ್ನು ಬೇಟೆಯಾಡುತ್ತಾರೆ. ಆದರೆ ದಿನನಿತ್ಯ ಬದಲಾವಣೆಗೊಳ್ಳುವ ಸಮಾಜದಲ್ಲಿ ಕೇವಲ ಬೇಟೆಗಾರಿಕೆಯಿಂದ ಹೊಟ್ಟೆ ತುಂಬಿಕೊಳ್ಳಲಾಗದ ಪರಿಸ್ಥಿತಿ ಬಂದೊದಗಿದೆ. ಇದಲ್ಲದೆ, ಅರಣ್ಯಗಳ ನಾಶವಾಗುವಿಕೆಯ ಪ್ರಕ್ರಿಯೆ ಇನ್ನು ಮುಂದುವರೆದಿದೆ[೯]. ಇದರಿಂದಾಗಿ ಕಾಡೇ ಮುಖ್ಯ ಆಧಾರವಾಗಿರುವ ಬೇಡ ಬುಡಕಟ್ಟಿನವರಿಗೆ ಕಷ್ಟದ ಪರಿಸ್ಥಿತಿ ಬಂದಿದೆ. ಇವರು ಹೆಚ್ಚಾಗಿ ಕೃಷಿಯ ಮೇಲೆ ಅವಲಂಬಿಸಲು ತೊಡಗಿದ್ದಾರೆ. ಇಂದು ಕೃಷಿಯು ಪ್ರಧಾನ ಕಸುಬಾಗಿದೆ. ಇಂತಹ ಕಸುಬಿನಲ್ಲಿನ ಬದಲಾವಣೆ ಇತರ ಬುಡಕಟ್ಟಿನ ಜನರಲ್ಲಿಯೂ ನಾವು ಕಾಣುತ್ತೇವೆ. ಉದಾಹರಣೆಗೆ ಬೀದರ ಜಿಲ್ಲೆಯ ಗೊಂಡರ ಮೊದಲನೆ ಕಸುಬು ಪಶುಪಾಲನೆ. ಆದರೆ, ಕಾಲಕ್ಕೆ ಹೊಂದಿಕೊಂಡು ಹೋಗುವುದು ಗೊಂಡರಿಗೆ ಅನಿವಾರ್ಯವಾಗಿ ಪಶುಪಾಲನೆಯಿಂದ ಕೃಷಿಯತ್ತ ಒಲಿದಿದ್ದಾರೆ[೧೦].

ಬೇಡ ಬುಡಕಟ್ಟಿನವರ ಕಸುಬುಗಳು

ಬೀದರ ಜಿಲ್ಲೆಯ ಬೇಡರ ೯೭೯ ಕುಟುಂಬಗಳ ಕಸುಬುಗಳೆಂದರೆ ಬೇಸಾಯ, ಇನ್ನೊಬ್ಬರ ಹೊಲದಲ್ಲಿ ಕೃಷಿ ಕೂಲಿ ಮಾಡುವುದು, ಕುರಿ ಮತ್ತು ಆಡು(ಮೇಕೆ) ಕಾಯುವುದು ಮುಂತಾದವುಗಳು ಇವೆ. ಇಂದು ಮುಖ್ಯ ಕಸುಬು ಬೇಸಾಯವಾಗಿದೆ. ಬೇರೆ ಬುಡಕಟ್ಟಿನವರು ಸಹ ಇಂದು ಬೇಸಾಯವನ್ನೇ ತಮ್ಮ ಪ್ರಮುಖ ವೃತ್ತಿಯನ್ನಾಗಿ ಆರಿಸಿಕೊಂಡಿದ್ದಾರೆ. ಉದಾಹರಣೆಗೆ 'ಸೋಲಿಗರ' ಇಂದಿನ ಮುಖ್ಯ ವೃತ್ತಿ ಬೇಸಾಯವಾಗಿದೆ[೧೧].

ವಿವಿಧ ಬುಡಕಟ್ಟಿನ ಜನರು ಹೆಚ್ಚಾಗಿ ಸ್ಥಳಾಂತರ ಬೇಸಾಯ ಪದ್ಧತಿಗೆ (Shifting type of Agriculture) ಮಾರು ಹೋಗಿದ್ದಾರೆ[೧೨]. ಪೂರ್ವದಲ್ಲಿ ಅಂದರೆ, ದೇಶ ಸ್ವಾತಂತ್ರ್ಯ ಆಗುವುದಕ್ಕಿಂತ ಮುಂಚೆ ಕೆಲವು ಜನರು ಬೇಟೆಯನ್ನೇ ಮುಖ್ಯ ಕಸುಬನ್ನಾಗಿ ಮಾಡಿಕೊಂಡಿದ್ದರು. 'ನಿಮ್ಮ ತಂದೆ ಅಥವಾ ಅಜ್ಜ ಬೇಟೆಯಾಡುತ್ತಿದ್ದರೋ ಇಲ್ಲವೋ' ಎಂಬ ಪ್ರಶ್ನೆಗೆ ಉತ್ತರವಾಗಿ ಕೇವಲ ೩೭ ಜನರು ನಮ್ಮ ತಂದೆ ಅಥವಾ ಅಜ್ಜ ಕ್ರೂರ ಪ್ರಾಣಿಗಳನ್ನು ಬೇಟೆಯಾಡಿದರು ಎಂಬ ಉತ್ತರ ನೀಡಿದರು. ಅವರಿಗೆ ಬಂದೂಕಿನಿಂದ

ಬೇಟೆಯಾಡುವುದು ರೂಢಿಯಲ್ಲಿತ್ತು ಎಂದು ವಕ್ತೃಗಳು ತಿಳಿಸಿರುತ್ತಾರೆ. ಬಂದೂಕು 'ಢಿಗಾರಿ' (ಬಹಳಷ್ಟು) ಸಿಗುತ್ತಿದ್ದವು. ಬೀದರ ಜಿಲ್ಲೆಯ ಬೇಡರಲ್ಲಿ 'ಬೇಟೆ' ಒಂದು ಪ್ರಮುಖವಾದ ಕಸುಬಾಗಿಲ್ಲ ಮತ್ತು ಬಹಳಷ್ಟು ಜನರು ಭಾಗವಹಿಸುತ್ತಿದ್ದಿಲ್ಲ ಎಂದು ತಿಳಿದು ಬರುತ್ತದೆ.

ವಿವಿಧ ಕಸುಬುಗಳಲ್ಲಿ ಬೇಡ ಬುಡಕಟ್ಟಿನವರ ಭಾಗವಹಿಸುವಿಕೆ

ಇಂದು ಬೇಸಾಯವೇ ಇವರ ಮುಖ್ಯ ಕಸುಬಾಗಿದೆ (ಕೋಷ್ಠಕ ೫.೧ ನೋಡಿ) ಕೃಷಿ ಕ್ಷೇತ್ರದಲ್ಲಿ ಬೇಡರು ಹೆಚ್ಚಾಗಿ ದುಡಿಯುತ್ತಿದ್ದಾರೆ. ಶೇಕಡಾ ೪೭.೫೬ ರಷ್ಟು ಜನ ಬೇಸಾಯದ ಮೇಲೆ ಅವಲಂಬಿಸಿದ್ದಾರೆ. ಈ ಬುಡಕಟ್ಟಿನವರ ಹೊಲದ ಗಾತ್ರ (Farm size) ಚಿಕ್ಕದಿರುವುದರಿಂದ, ಇವರಲ್ಲಿ ಸಾಕಷ್ಟು ಜನ ಅತಿ ಸಣ್ಣ ರೈತರು (Marginal farmers) ಮತ್ತು ಸಣ್ಣ ರೈತರು (Small farmers) ಇದ್ದಾರೆ. ಇವರು ತಮ್ಮ ಹೊಲದಲ್ಲಿ ಕೆಲಸ ಮಾಡಿ ಬೇರೆಯವರ ಹೊಲಗಳಿಗೆ ಕಾರ್ಮಿಕರಂತೆ ಕೆಲಸ ಮಾಡಲು ಹೋಗುತ್ತಾರೆ. ಆದುದರಿಂದ ಎರಡನೆಯ ಮುಖ್ಯ ಕಸುಬು ಕೃಷಿ ಕೂಲಿಯಾಗಿದೆ, (ಶೇಕಡಾ ೩೬.೦೭) ಭೂ-ರಹಿತ ಬೇಡ ಬುಡಕಟ್ಟಿನವರು ಕೃಷಿಯೇತರ ಕಾರ್ಮಿಕರಾಗಿ, ಅಂದರೆ ರಿಕ್ಷಾ ಹೊಡೆಯುವುದು, ನೌಕರಿ ಮುಂತಾದವುಗಳ ಕೆಲಸಕ್ಕಾಗಿ ದುಡಿಯುತ್ತಿದ್ದಾರೆ, (ಶೇಕಡಾ ೦೭.೫೮) ಈ ಜನರ ಇನ್ನೊಂದು ಹೇಳಿಕೊಳ್ಳುವಂತಹ ಕಸುಬು ಕುರಿ ಮತ್ತು ಆಡು(ಮೇಕೆ)ಗಳು ಕಾಯುವುದು (ಶೇಕಡಾ ೪.೪೧). ಶೇಕಡಾ ೧.೫೩ ಜನರು ಲಾರಿ ಚಾಲಕರಾದರೆ, ಶೇ. ೧.೩೨ ಜನರು ಸರಕಾರಿ ನೌಕರರಾಗಿದ್ದಾರೆ. ಕೊನೆಯಲ್ಲಿ ಶೇ. ೦.೫೩ ಲಾರಿ ಸಹಾಯಕರಾಗಿ ಕೆಲಸ ಮಾಡುತ್ತಿದ್ದಾರೆ. ಬೇಡರು ಟ್ರಾಕ್ಟರ್ ಚಾಲಕರಾಗಿ, ಪೋಲಿಸರಾಗಿ, ಸೈನಿಕರಾಗಿ ಮತ್ತು ವ್ಯಾಪಾರಿಗಳಾಗಿ ಅತ್ಯಂತ ಕಡಿಮೆ ಪ್ರಮಾಣದಲ್ಲಿರುತ್ತಾರೆ.

ಕಸುಬುಗಳಲ್ಲಿ ಪುರುಷ-ಸ್ತ್ರೀಯರ ಪ್ರಮಾಣ

ಒಟ್ಟು ಕಸುಬುದಾರರ ಸಂಖ್ಯೆ ೨,೮೧೧ ಇದ್ದರೆ, ಇದರಲ್ಲಿ ಪುರುಷರ ಸಂಖ್ಯೆ ೧,೪೭೪ (ಶೇಕಡಾ ೫೨.೪೩) ಇದ್ದರೆ, ಸ್ತ್ರೀಯರ ಸಂಖ್ಯೆ ೧,೩೩೭ (ಶೇಕಡಾ ೪೭.೫೭) ಇರುತ್ತದೆ.

ಕೋಷ್ಠಕ-೫.೧ ವಿವಿಧ ಕಸುಬುಗಳಲ್ಲಿನ ಬೇಡರ ಭಾಗವಹಿಸುವಿಕೆ

ಕ್ರಮ ಸಂಖ್ಯೆ	ಕಸುಬಿನ ವಿವರಗಳು	ಜನಸಂಖ್ಯೆ	ಶೇಕಡಾ
೧.	ಬೇಸಾಯ	೧೩೩೭	೪೭.೫೬
೨.	ಕೃಷಿ ಕಾರ್ಮಿಕರು	೧೦೧೪	೩೬.೦೭
೩.	ಕೃಷಿಯೇತರ ಕಾರ್ಮಿಕರು	೨೧೩	೦೭.೫೮
೪.	ಕುರಿ ಮತ್ತು ಆಡು(ಮೇಕೆ) ಕಾಯುವುದು	೧೨೪	೦೪.೪೧
೫.	ಲಾರಿ ಚಾಲಕರು	೪೩	೦೧.೫೩

[illegible]

೬.	ಸರಕಾರಿ ನೌಕರರು	೩೭	೦೧.೩೨
೭.	ಲಾರಿ ಸಹಾಯಕರು	೧೫	೦.೫೩
೮.	ಸೈನಿಕರು	೦೬	೦.೨೧
೯.	ವ್ಯಾಪಾರಿಗಳು	೦೬	೦.೨೧
೧೦.	ಟ್ರಾಕ್ಟರ್ ಚಾಲಕರು	೦೩	೦.೧೧
೧೧.	ಪೋಲಿಸರು	೦೩	೦.೧೧

ಒಟ್ಟು ೧೧ ಕಸುಬುಗಳಲ್ಲಿನ ಪ್ರತಿಯೊಂದು ಕಸುಬಿನಲ್ಲಿಯೂ ಪುರುಷರು ಸಿಗುತ್ತಾರೆ (ಕೋಷ್ಠಕ ೫.೨ ನೋಡಿ) ಮತ್ತು ಇವುಗಳಲ್ಲಿನ ಕೆಲವು ಕಸುಬುಗಳಲ್ಲಿ ಮಾತ್ರ ಸ್ತ್ರೀಯರು ಕೆಲಸ ಮಾಡುತ್ತಿದ್ದಾರೆ. ಪುರುಷರಲ್ಲಿ ಶೇ. ೪೭.೭೨ ಜನ ಬೇಸಾಯಗಾರರಾಗಿ ಇದ್ದರೆ, ಇದಕ್ಕಿಂತ ಹೆಚ್ಚು ಅಂದರೆ, ಶೇ. ೫೨.೨೮ ಸ್ತ್ರೀಯರಿದ್ದಾರೆ[೧೩]. ಇದೇ ರೀತಿ ಕೃಷಿ ಕಾರ್ಮಿಕರಲ್ಲಿನ ಸ್ತ್ರೀಯರ ಸಂಖ್ಯೆ ೫೬೭ (ಶೇಕಡಾ ೫೫.೯೨) ಇದ್ದರೆ, ಪುರುಷರ ಸಂಖ್ಯೆ ೪೪೭ (ಶೇಕಡಾ ೪೪.೦೮) ಇರುತ್ತದೆ. ಕೃಷಿಯೇತರ ಕಾರ್ಮಿಕರಲ್ಲಿ ಶೇ. ೮೨.೬೩ ಪುರುಷರಿದ್ದರೆ, ಶೇ. ೧೭.೩೭ ಸ್ತ್ರೀಯರಿದ್ದಾರೆ. ಕುರಿ ಮತ್ತು ಆಡು (ಮೇಕೆ) ಕಾಯುವವರಲ್ಲಿ ಶೇ. ೮೭.೯೦ ಪುರುಷರಿದ್ದರೆ, ಕೇವಲ ಶೇ. ೧೨.೧೦ ಸ್ತ್ರೀಯರು ಇದ್ದಾರೆ. ಸರಕಾರಿ ನೌಕರರಲ್ಲಿ ಶೇ. ೭೮.೩೮ ಪುರುಷರಿದ್ದರೆ, ಸ್ತ್ರೀಯರು ಶೇ. ೨೧.೬೨ ಇದ್ದಾರೆ. ಲಾರಿ ಚಾಲಕರು, ಲಾರಿ ಕ್ಲಿನರ್ಸ್, ಟ್ರಾಕ್ಟರ್ ಚಾಲಕರು, ಸೈನಿಕರು ಮತ್ತು ಪೋಲಿಸರ ಹುದ್ದೆಗಳಲ್ಲಿ ಎಲ್ಲರೂ ಪುರುಷರಿದ್ದಾರೆ. ವ್ಯಾಪಾರಿಗಳಲ್ಲಿ ಒಬ್ಬ ಸ್ತ್ರೀಯೂ ಇದ್ದು (ಶೇಕಡಾ ೧೬.೬೬) ೫ ಜನ ಪುರುಷರಿದ್ದಾರೆ (ಶೇಕಡಾ ೮೩.೩೪).

ಕೋಷ್ಠಕ ೫.೨ ವಿವಿಧ ಕಸುಬುಗಳಲ್ಲಿ ಬೇಡರ ಪುರುಷ ಮತ್ತು ಸ್ತ್ರೀಯರ ಭಾಗವಹಿಸುವಿಕೆ

ಕ್ರಮ ಸಂಖ್ಯೆ	ಕಸುಬುಗಳ ವಿವರಗಳು	ಪುರುಷರು	ಶೇಕಡಾ	ಸ್ತ್ರೀಯರು	ಶೇಕಡಾ
೧.	ಬೇಸಾಯ	೬೩೮	೪೭.೭೨	೬೯೯	೫೨.೨೮
೨.	ಕೃಷಿ ಕಾರ್ಮಿಕರು	೪೪೭	೪೪.೦೮	೫೬೭	೫೫.೯೨
೩.	ಕೃಷಿಯೇತರ ಕಾರ್ಮಿಕರು	೧೭೬	೮೨.೬೩	೦೩೭	೧೭.೩೭
೪.	ಕುರಿ ಮತ್ತು ಮೇಕೆ ಕಾಯುವವರು	೧೦೯	೮೭.೯೦	೦೨೫	೧೨.೧೦
೫.	ಲಾರಿ ಚಾಲಕರು	೪೩	೧೦೦.೦೦	-	-
೬.	ಸರಕಾರಿ ನೌಕರರು	೨೯	೭೮.೩೮	೦೮	೨೧.೬೨
೭.	ಲಾರಿ ಸಹಾಯಕರು	೧೫	೧೦೦.೦೦	-	-
೮.	ಸೈನಿಕರು	೦೬	೧೦೦.೦೦	-	-
೯.	ವ್ಯಾಪಾರಿಗಳು	೦೫	೮೩.೩೪	೦೧	೧೬.೬೬
೧೦.	ಟ್ರಾಕ್ಟರ್ ಚಾಲಕರು	೦೩	೧೦೦.೦೦	-	-
೧೧.	ಪೋಲಿಸರು	೦೩	೧೦೦.೦೦	-	-

ಹೋಬಳಿವಾರು ಕಸುಬುಗಳು

೫.೨ ಕೋಷ್ಠಕವು ಬೇಡ ಬುಡಕಟ್ಟಿನವರು ವಿವಿಧ ಕಸುಬುಗಳಲ್ಲಿ ಭಾಗವಹಿಸುವುದನ್ನು ಜಿಲ್ಲೆಯ ಮಟ್ಟದಲ್ಲಿ ತೋರಿಸುತ್ತದೆ. ಆದರೆ, ಶೇಕಡಾ ೯೫.೦೦ರಷ್ಟು ಬೇಡರು ಬಸವಕಲ್ಯಾಣದಲ್ಲಿಯೇ ವಾಸವಾಗಿರುವುದರಿಂದ ನಾವು ಈ ತಾಲ್ಲೂಕಿನ ಇವರ ಕಸುಬುಗಳ ಬಗ್ಗೆ ಪ್ರತ್ಯೇಕವಾಗಿ ಹೇಳುವುದು ಅವಶ್ಯಕವಾಗಿದೆ. ಮುಂದುವರೆದು, ಈ ತಾಲ್ಲೂಕಿನ ಮೂರು ವೃತ್ತಗಳಾದ ಕೋಹಿನೂರ , ಮಂಠಾಳ ಮತ್ತು ಮುಡಬಿ ಹೋಬಳಿಗಳಲ್ಲಿ ಬೇಡರು ಹೆಚ್ಚಾಗಿ ವಾಸಿಸಿರುತ್ತಾರೆ. ಇವರ ಕಸುಬುಗಳ ವಿವರಗಗಳನ್ನು ೫.೩ ಕೋಷ್ಠಕವು ನೀಡುತ್ತದೆ.

ಕೋಷ್ಠಕ ೫.೩ ಬಸವಕಲ್ಯಾಣ ತಾಲ್ಲೂಕಿನ ಹೋಬಳಿವಾರು ಬೇಡರ ಕಸುಬುಗಳು

ಅ. ಕೋಹಿನೂರ ಹೋಬಳಿ

ಕ್ರಮ ಸಂಖ್ಯೆ	ಕಸುಬುಗಳ ವಿವರಗಳು	ಜನಸಂಖ್ಯೆ	ಶೇಕಡಾ
೧.	ಬೇಸಾಯ	೫೯೭	೫೨.೨೩
೨.	ಕೃಷಿ ಕಾರ್ಮಿಕರು	೪೧೦	೩೫.೮೭
೩.	ಕೃಷಿಯೇತರ ಕಾರ್ಮಿಕರು	೦೫೪	೦೪.೭೨
೪.	ಕುರಿ ಮತ್ತು ಮೇಕೆ ಕಾಯುವವರು	೦೩೮	೦೩.೩೨
೫.	ಲಾರಿ ಚಾಲಕರು	೦೧೨	೦೧.೦೫
೬.	ಸರಕಾರಿ ನೌಕರರು	೦೨೦	೦೧.೭೫
೭.	ಲಾರಿ ಸಹಾಯಕರು	೦೦೪	೦.೩೦
೮.	ಸೈನಿಕರು	೦೦೨	೦.೨೦
೯.	ವ್ಯಾಪಾರಿಗಳು	೦೦೫	೦.೪೨
೧೦.	ಟ್ರಾಕ್ಟರ್ ಚಾಲಕರು	-	-
೧೧.	ಪೋಲಿಸರು	೦೧	೦.೦೮
		೧೧೪೩ (೪೪.೩೧)	೧೦೦.೦೦

ಬ. ಮಂಠಾಳ ಹೋಬಳಿ

೧.	ಬೇಸಾಯ	೩೬೪	೪೪.೦೧
೨.	ಕೃಷಿ ಕಾರ್ಮಿಕರು	೩೪೯	೪೨.೨೦
೩.	ಕೃಷಿಯೇತರ ಕಾರ್ಮಿಕರು	೦೫೮	೦೭.೦೧
೪.	ಕುರಿ ಮತ್ತು ಮೇಕೆ ಕಾಯುವವರು	೦೧೨	೦೧.೪೫
೫.	ಲಾರಿ ಚಾಲಕರು	೦೨೬	೦೩.೧೪
೬.	ಸರಕಾರಿ ನೌಕರರು	೦೦೬	೦೦.೭೨
೭.	ಲಾರಿ ಸಹಾಯಕರು	೦೦೯	೦೧.೦೮
೮.	ಸೈನಿಕರು	೦೦೨	೦೦.೨೪
೯.	ವ್ಯಾಪಾರಿಗಳು	೦೦೧	೦೦.೧೨
೧೦.	ಟ್ರಾಕ್ಟರ್ ಚಾಲಕರು	-	-
೧೧.	ಪೋಲಿಸರು	-	-
		೮೨೭	೧೦೦.೦೦

ಕ. ಮುಡಬಿ ಹೋಬಳಿ

೧.	ಬೇಸಾಯ	೩೧೩	೫೧.೩೧
೨.	ಕೃಷಿ ಕಾರ್ಮಿಕರು	೨೩೧	೩೭.೮೭
೩.	ಕೃಷಿಯೇತರ ಕಾರ್ಮಿಕರು	೦೪೬	೦೭.೫೪
೪.	ಕುರಿ ಮತ್ತು ಮೇಕೆ ಕಾಯುವವರು	೦೧೨	೦೧.೯೭
೫.	ಲಾರಿ ಚಾಲಕರು	೦೦೨	೦೦.೩೩
೬.	ಸರಕಾರಿ ನೌಕರರು	೦೦೬	೦೦.೯೮
೭.	ಲಾರಿ ಸಹಾಯಕರು	-	-
೮.	ಸೈನಿಕರು	-	-
೯.	ವ್ಯಾಪಾರಿಗಳು	-	-
೧೦.	ಟ್ರಾಕ್ಟರ್ ಚಾಲಕರು	-	-
೧೧.	ಪೋಲಿಸರು	-	-
		೬೧೦	೧೦೦.೦೦

ಬಸವಕಲ್ಯಾಣ ತಾಲ್ಲೂಕಿನಲ್ಲಿ ಐದು ಹೋಬಳಿಗಳು ಇವೆ. ಇದರಲ್ಲಿ ಕೋಹಿನೂರ , ಮಂಠಾಳ ಮತ್ತು ಮುಡಬಿ ಹೋಬಳಿಗಳಲ್ಲಿಯೇ ಶೇ. ೯೭.೧೦ರಷ್ಟು ಬೇಡರು ವಾಸವಾಗಿರುತ್ತಾರೆ. ಮುಂದುವರೆದು, ಈ ಮೂರು ಹೋಬಳಿಗಳಲ್ಲಿ ಕೋಹಿನೂರ ಹೋಬಳಿಯು ಅತಿ ಹೆಚ್ಚಿನ ಬೇಡರನ್ನು (ಶೇ. ೪೪.೬೯) ಹೊಂದಿದೆ.

ಕೋಹಿನೂರ ಹೋಬಳಿಯಲ್ಲಿನ ಬೇಡರ ಬೇಸಾಯಗಳು ಇಂತಿವೆ. ವ್ಯವಸಾಯ (ಶೇ. ೫೨.೨೩); ಕೃಷಿ ಕಾರ್ಮಿಕರು (ಶೇ. ೩೫.೮೭); ಕೃಷಿಯೇತರ ಕಾರ್ಮಿಕರು (ಶೇ. ೪.೭೨); ಕುರಿ ಮತ್ತು ಮೇಕೆ ಕಾಯುವವರು (ಶೇ. ೩.೩೨) ಲಾರಿ ಚಾಲಕರು (ಶೇ. ೧.೫) ಮತ್ತು ಸರಕಾರಿ ನೌಕರರು (ಶೇ. ೧.೭೫) ಇದ್ದಾರೆ ಜಿಲ್ಲೆಯ ಒಟ್ಟು ಬೇಸಾಯದ ಜನಸಂಖ್ಯೆ ಶೇ. ೪೭.೫೬ ಇದ್ದರೆ, ಕೋಹಿನೂರ ಹೋಬಳಿಯ ಈ ಪ್ರಮಾಣ ೫೨.೨೩ರಷ್ಟು ಇರುತ್ತದೆ. ಕೋಹಿನೂರ ಹೋಬಳಿಯಲ್ಲಿ ಬೇಡರು ಪ್ರಮುಖವಾಗಿ ಬೇಸಾಯಗಾರರು ಎಂಬುದಕ್ಕೆ ಇದೊಂದು ನಿರ್ದೇಶನವಾಗಿದೆ. ಮುಡಬಿ ಹೋಬಳಿಯಲ್ಲಿ ಬೇಸಾಯ ಮಾಡುವ ಬೇಡರ ಜನಸಂಖ್ಯೆ, ಜಿಲ್ಲೆಯ ಬೇಸಾಯ ಮಾಡುವವರ ಜನಸಂಖ್ಯೆಗಿಂತಲೂ ಅಧಿಕವಾಗಿದೆ. (ಶೇ. ೫೧.೩೧) ಆದರೆ, ಮಂಠಾಳ ಹೋಬಳಿಯಲ್ಲಿ ಬೇಸಾಯ ಮಾಡುವವರ ಜನಸಂಖ್ಯೆ ೪೪.೦೧ ಇದ್ದು, ಇದು ಜಿಲ್ಲೆಯ ಪ್ರಮಾಣಕ್ಕಿಂತ ಕಡಿಮೆಯಾಗಿದೆ.

ಜಿಲ್ಲೆಯಲ್ಲಿ ಬೇಡರ ಕೃಷಿ ಕಾರ್ಮಿಕರು ಶೇ. ೩೬.೦೭ ಇದ್ದರೆ, ಬಸವಕಲ್ಯಾಣ ತಾಲೂಕಿನ ಮಂಠಾಳ ಮತ್ತು ಮುಡಬಿ ಹೋಬಳಿಗಳಲ್ಲಿ ಇದರ ಪ್ರಮಾಣ ಅನುಕ್ರಮವಾಗಿ ಶೇ. ೪೨.೨೦ ಮತ್ತು ಶೇ. ೩೭.೮೭

ಇವೆ. ಕೋಹಿನೂರ ಹೋಬಳಿಯಲ್ಲಿ ಶೇ. ೩೫.೮೭ ಕೃಷಿ ಕಾರ್ಮಿಕರಾಗಿದ್ದಾರೆ. ಜಿಲ್ಲೆಯ ಕುರಿ ಮತ್ತು ಮೇಕೆ ಸಾಕುವವರ ಸಂಖ್ಯೆ ಶೇ. ೪.೪೧ ಇದ್ದರೆ, ಕೋಯಿನೂರಿನಲ್ಲಿ ಇದು ಶೇ. ೪.೭೨ ಇರುತ್ತದೆ.

ಜಿಲ್ಲೆಯ ಬೇಡರ ಲಾರಿ ಚಾಲಕರ ಸಂಖ್ಯೆ ಶೇ. ೧.೫೩ ಇದ್ದರೆ, ಬಸವಕಲ್ಯಾಣ ತಾಲ್ಲೂಕಿನ ಮಂಠಾಳ ಹೋಬಳಿಯಲ್ಲಿ ಇದು ಶೇ. ೩.೧೪ ಇದೆ.

ಒಟ್ಟಿನಲ್ಲಿ, ಮೇಲೆ ನೀಡಿರುವ ೫.೩ ಕೋಷ್ಠಕದಲ್ಲಿನ ಅಂಕಿ-ಸಂಖ್ಯೆಗಳಿಂದ ಬಸವಕಲ್ಯಾಣ ತಾಲ್ಲೂಕಿನ ಹೋಬಳಿಗಳಲ್ಲಿ ಬೇಡರು ಯಾವ ರೀತಿ ಇಡೀ ಜಿಲ್ಲೆಗಿಂತ ವಿಭಿನ್ನವಾಗಿ ವಿವಿಧ ಉದ್ಯೋಗಗಳಲ್ಲಿ ಪ್ರಮುಖರಾಗಿದ್ದಾರೆಂಬುದನ್ನು ಗೊತ್ತಾಗುತ್ತದೆ.

ಮೇಲಿನ ವಿವರಣೆಯಲ್ಲಿ, ವಿವಿಧ ಕಸುಬಗಳಲ್ಲಿ ಜಿಲ್ಲೆಯ ಮತ್ತು ಬಸವಕಲ್ಯಾಣ ತಾಲ್ಲೂಕಿನ ಮೂರು ಹೋಬಳಿಗಳಲ್ಲಿ ಸಮಗ್ರ ಬೇಡರ ಭಾಗವಹಿಸುವಿಕೆಯನ್ನು ಮಾತ್ರ ಹೇಳಲಾಗಿದೆ. ಬುಡಕಟ್ಟಿನ ಸ್ತ್ರೀ-ಪುರುಷರು ತಮ್ಮದೇಯಾದ ವಿಭಿನ್ನ ರೀತಿಯಲ್ಲಿ ವಿವಿಧ ಕಸುಬುಗಳಲ್ಲಿ ಹೇಗೆ ಭಾಗವಹಿಸುತ್ತಾರೆಂಬುದನ್ನು ಕುರಿತು ನಾವು ಪ್ರತ್ಯೇಕವಾಗಿಯೇ ಅಭ್ಯಾಸ ಮಾಡಬೇಕಾಗುತ್ತದೆ. ಕೋಷ್ಠಕ ೫.೪ ಇಂತಹ ಚಿತ್ರಣವನ್ನು ನೀಡುತ್ತದೆ.

ಕೋಷ್ಠಕ ೫.೪ ಬಸವಕ್ಯಾಣ ತಾಲೂಕಿನ ಹೋಬಳಿವಾರು ಕಸುಬುಗಳಲ್ಲಿ ಬೇಡರ ಪುರುಷ-ಸ್ತ್ರೀಯರ

ಅ. ಕೋಹಿನೂರ ಹೋಬಳಿ

ಕ್ರಮ ಸಂಖ್ಯೆ	ವಿವರಗಳು	ಪುರುಷರು	ಶೇಕಡಾ	ಸ್ತ್ರೀಯರು	ಶೇಕಡಾ
೧.	ಬೇಸಾಯ	೨೯೩	೪೯.೦೮	೩೦೪	೫೦.೯೨
೨.	ಕೃಷಿ ಕಾರ್ಮಿಕರು	೨೦೦	೪೮.೭೮	೨೧೦	೫೧.೨೨
೩.	ಕೃಷಿಯೇತರ ಕಾರ್ಮಿಕರು	೦೫೦	೯೨.೬೦	೦೦೪	೦೭.೪೦
೪.	ಕುರಿ ಮತ್ತು ಮೇಕೆ ಕಾಯುವವರು	೦೩೫	೯೨.೧೦	೦೦೩	೦೭.೯೦
೫.	ಲಾರಿ ಚಾಲಕರು	೦೧೨	೧೦೦.೦೦	-	-
೬.	ಸರಕಾರಿ ನೌಕರರು	೦೧೭	೮೫.೦೦	೦೦೩	೧೫.೦೦
೭.	ಲಾರಿ ಸಹಾಯಕರು	೦೦೨	೧೦೦.೦೦	-	-
೮.	ಸೈನಿಕರು	೦೦೧	೧೦೦.೦೦	-	-
೯.	ವ್ಯಾಪಾರಿಗಳು	೦೦೪	೧೦೦.೦೦	-	-
೧೦.	ಟ್ರ್ಯಾಕ್ಟರ್ ಚಾಲಕರು	೦೦೪	೮೦.೦೦	೦೦೧	೨೦.೦೦
೧೧.	ಪೋಲಿಸರು	-	-	-	-

ಬ. ಮಂಠಾಳ ಹೋಬಳಿ

೧.	ಬೇಸಾಯ	೧೬೯	೪೬.೪೩	೧೯೫	೫೩.೫೭
೨.	ಕೃಷಿ ಕಾರ್ಮಿಕರು	೧೫೫	೪೪.೪೧	೧೯೪	೫೫.೫೯
೩.	ಕೃಷಿಯೇತರ ಕಾರ್ಮಿಕರು	೦೫೦	೮೬.೨೧	೦೦೮	೧೩.೭೯
೪.	ಕುರಿ ಮತ್ತು ಮೇಕೆ ಕಾಯುವವರು	೦೦೯	೭೫.೦೦	೦೦೩	೨೫.೦೦
೫.	ಲಾರಿ ಚಾಲಕರು	೦೨೬	೧೦೦.೦೦	-	-
೬.	ಸರಕಾರಿ ನೌಕರರು	೦೦೫	೫೫.೫೫	೦೪	೪೪.೪೫
೭.	ಲಾರಿ ಸಹಾಯಕರು	೦೦೬	೧೦೦.೦೦	-	-
೮.	ಸೈನಿಕರು	೦೦೨	೧೦೦.೦೦	-	-
೯.	ವ್ಯಾಪಾರಿಗಳು	-	-	-	-
೧೦.	ಟ್ರಾಕ್ಟರ್ ಚಾಲಕರು	-	-	-	-
೧೧.	ಪೋಲಿಸರು	೦೧	೧೦೦.೦೦	-	-

ಕ. ಮುಡಬಿ ಹೋಬಳಿ

೧.	ಬೇಸಾಯ	೧೫೧	೪೮.೨೪	೧೬೨	೫೧.೭೬
೨.	ಕೃಷಿ ಕಾರ್ಮಿಕರು	೧೦೬	೪೫.೮೯	೧೨೫	೫೪.೧೧
೩.	ಕೃಷಿಯೇತರ ಕಾರ್ಮಿಕರು	೪೦	೮೬.೯೬	೦೬	೧೩.೦೪
೪.	ಕುರಿ ಮತ್ತು ಮೇಕೆ ಕಾಯುವವರು	೧೦	೮೩.೩೪	೦೨	೧೬.೬೬
೫.	ಲಾರಿ ಚಾಲಕರು	೦೨	೧೦೦.೦೦	-	-
೬.	ಸರಕಾರಿ ನೌಕರರು	೦೬	೧೦೦.೦೦	-	-
೭.	ಲಾರಿ ಸಹಾಯಕರು	-	-	-	-
೮.	ಸೈನಿಕರು	-	-	-	-
೯.	ವ್ಯಾಪಾರಿಗಳು	-	-	-	-
೧೦.	ಟ್ರಾಕ್ಟರ್ ಚಾಲಕರು	-	-	-	-
೧೧.	ಪೋಲಿಸರು	-	-	-	-
		೩೧೫	೧೦೦.೦೦	೨೯೫	೧೦೦.೦೦

ಸ್ತ್ರೀ ಬೇಸಾಯಗರರ ಸಂಖ್ಯೆ ಮತ್ತು ಸ್ತ್ರೀ ಕಾರ್ಮಿಕರ ಸಂಖ್ಯೆ ಈ ಹೋಬಳಿಗಳಲ್ಲಿ ತುಲನಾತ್ಮಕವಾಗಿ ಕಡಿಮೆ ಪ್ರಮಾಣದಲ್ಲಿದೆ. ಮುಡಬಿ ಮತ್ತು ಮಂಠಾಳ ಹೋಬಳಿಗಳಲ್ಲಿ ಸೈನಿಕರು, ಟ್ರಾಕ್ಟರ್ ಚಾಲಕರು ಇರುವುದಿಲ್ಲ. ಕುರಿ ಕಾಯುವವರು ಕೋಹಿನೂರ , ಮಂಠಾಳ ಮತ್ತು ಮುಡಬಿ ವೃತ್ತಗಳಲ್ಲಿ ಜಿಲ್ಲೆಯ ಸರಾಸರಿಗಿಂತ ಹೆಚ್ಚಾಗಿದ್ದಾರೆ.

ವ್ಯವಸಾಯ

ಬೇಡರು ತಮ್ಮ ಪೂರ್ವಜರು ನೀಡಿದ ಅಥವಾ ಇತ್ತೀಚೆಗೆ ಖರೀದಿಸಿದ ಭೂಮಿಯಲ್ಲಿ ವ್ಯವಸಾಯ ಮಾಡುತ್ತಿದ್ದಾರೆ[೧೪]. ಜಿಲ್ಲೆಯಲ್ಲಿ ಇವರ ಸಂಖ್ಯೆ ೬೦೦೪ ಇದೆ. ಇವರು ಹೊಂದಿರುವ ಭೂಮಿಯ ಪ್ರಮಾಣ ೪,೩೭೩.೫೦ ಎಕರೆಯಾಗಿದೆ. ಇವರ ಒಟ್ಟು ಕುಟುಂಬಗಳ ಸಂಖ್ಯೆ ೯೭೯. ಅದರಲ್ಲಿ ೮೪೧ (ಶೇ. ೮೫.೯೦) ಕುಟುಂಬಗಳು ಭೂಮಿಯನ್ನು ಹೊಂದಿರುತ್ತವೆ ಮತ್ತು ಉಳಿದ ೧೩೮ (ಶೇ. ೧೪.೧೦) ಕುಟುಂಬಗಳಿಗೆ ಭೂಮಿ ಇರುವುದಿಲ್ಲ (೫.೫ ಕೋಷ್ಠಕ ನೋಡಿ).

ಕೋಷ್ಠಕ ೫.೫ ತಾಲೂಕಾವಾರು ಭೂಮಿ ಮತ್ತು ಭೂಮಿ ಇರದ ಬೇಡರ ಕುಟುಂಬಗಳು

ಅ. ಭೂ-ಹಿಡುವಳಿಗಳುಳ್ಳ ಕುಟುಂಬಗಳು

ಕ್ರಮ ಸಂಖ್ಯೆ	ತಾಲೂಕಾಗಳು	ಕುಟುಂಬಗಳು	ಶೇಕಡಾ
೧.	ಬಸವಕಲ್ಯಾಣ	೮೦೯	೯೬.೧೯
೨.	ಹುಮನಾಬಾದ	೨೪	೨.೮೫
೩.	ಭಾಲ್ಕಿ	೦೮	೦.೯೬
		೮೪೧	೧೦೦.೦೦

ಬ. ಭೂ-ರಹಿತ ಕುಟುಂಬಗಳು

೧.	ಬಸವಕಲ್ಯಾಣ	೧೨೬	೯೧.೩೦
೨.	ಹುಮನಾಬಾದ	೦೨	೧.೪೫
೩.	ಭಾಲ್ಕಿ	೧೦	೭.೨೫
		೧೩೮	೧೦೦.೦೦

ಜಿಲ್ಲೆಯ ಒಟ್ಟು ಜನಸಂಖ್ಯೆಯಲ್ಲಿ ಶೇ. ೦.೪೮ರಷ್ಟು ಬೇಡರಿದ್ದಾರೆ. ಜಿಲ್ಲೆಯ ಒಟ್ಟು ಭೂಮಿಯಲ್ಲಿ ಕೇವಲ ಶೇ. ೦.೩೭ರಷ್ಟು ಭೂಮಿ ಬೇಡರದಾಗಿದೆ. ಜಿಲ್ಲೆಯ ಪ್ರಮುಖ ಬುಡಕಟ್ಟು ಜನಸಂಖ್ಯೆಗೆ ಹೋಲಿಸಿದಾಗ ಬೇಡರ ಜನಸಂಖ್ಯೆಯು ಕಡಿಮೆ ಮತ್ತು ಜಿಲ್ಲೆಯ ಒಟ್ಟು ಭೂಮಿಯಲ್ಲಿ ಇವರ ಭೂಮಿಯ ಪ್ರಮಾಣವು ಕಡಿಮೆಯಾಗಿರುತ್ತದೆ. ಉದಾಹರಣೆಗೆ ಜಿಲ್ಲೆಯ ಒಟ್ಟು ಜನಸಂಖ್ಯೆಯಲ್ಲಿ ಶೇ. ೮ರಷ್ಟು ಗೊಂಡ ಬುಡಕಟ್ಟಿನವರಿದ್ದು[೧೫]. ಜಿಲ್ಲೆಯ ಒಟ್ಟು ಭೂಮಿಯಲ್ಲಿ ಶೇ. ೨ ರಷ್ಟು ಗೊಂಡರದಾಗಿದೆ. ಬೇಡರ ಒಟ್ಟು ಭೂಮಿಯನ್ನು ಅವರಲ್ಲಿ ಸರಾಸರಿಯಾಗಿ ಹಂಚಿದರೆ, ಅವರ ಪ್ರತಿ ಕುಟುಂಬಕ್ಕೆ ೫.೨೦ ಎಕರೆ ಭೂಮಿಯು ದೊರೆಯುವುದು. ಆದರೆ ಬೇಡರ ಪ್ರತಿಯೊಬ್ಬರಿಗೆ ಸಿಗುವ ಪಾಲು ಒಂದು ಎಕರೆಗಿಂತ (೦.೮೭ ಎಕರೆ) ಕಡಿಮೆಯೆಂಬುದನ್ನು ಗಮನಿಸಬೇಕು.

ಜಿಲ್ಲೆಯ ಬೇಡರ ಭೂ-ಹಿಡುವಳಿಗಳ ಗಾತ್ರ

ಬೇಡ ಸಮುದಾಯದವರ ಭೂಮಿಯ ಗಾತ್ರವನ್ನು ಆರ್ಥಿಕವಾಗಿ ಅರಿತುಕೊಳ್ಳಲು ಇವರ ಹಿಡುವಳಿಗಳನ್ನು ಐದು ಭಾಗಗಳಲ್ಲಿ ಅಂದರೆ, ಅತಿ ಸಣ್ಣ ಹಿಡುವಳಿಗಳು (೦.೦೧ ಎಕರೆಯಿಂದ ೨.೫೦

ಎಕರೆವರೆಗೆ); ಸಣ್ಣ ಭೂ-ಹಿಡುವಳಿಗಳು (೨.೫೧ ಎಕರೆಯಿಂದ ೫.೦೦ ಎಕರೆವರೆಗೆ; ಅರೆ ಮಧ್ಯಮ ಭೂ-ಹಿಡುವಳಿಗಳು (೫.೦೧ ಎಕರೆಯಿಂದ ೧೦.೦೦ ಎಕರೆಗಳವರೆಗೆ); ಮಧ್ಯಮ ಭೂ-ಹಿಡುವಳಿಗಳು (೧೦.೦೧ ಎಕರೆಯಿಂದ ೨೫.೦೦ ಎಕರೆವರೆಗೆ) ಮತ್ತು ದೊಡ್ಡ ಭೂ-ಹಿಡುವಳಿಗಳು (೨೫.೦೧ ಎಕರೆಯಿಂದ ಹೆಚ್ಚಿನ ಎಕರೆ) ಎಂದು ವಿಭಜಿಸಿದ್ದೇವೆ.

ಜಿಲ್ಲೆಯ ಒಟ್ಟು ಭೂ-ಹಿಡುವಳಿಯುಳ್ಳ ಬೇಡರ ಕುಟುಂಬಗಳ ಸಂಖ್ಯೆ ೮೪೧ ಇದೆ. ಇದರಲ್ಲಿ ಬಹುತೇಕ ಹಿಡುವಳಿಗಳು ಅತಿ ಸಣ್ಣ ಪ್ರಮಾಣದಾಗಿವೆ. ಉದಾಹರಣೆಗೆ, ಶೇ. ೨೬.೭೮ ಅತಿ ಸಣ್ಣ ಭೂ-ಹಿಡುವಳಿಗಳು; (ಶೇ. ೪೫.೯೦) ಸಣ್ಣ ಭೂ-ಹಿಡುವಳಿಗಳು ಶೇ. ೧೯.೬೨ ಅರೆ ಮಧ್ಯಮ ಭೂ-ಹಿಡುವಳಿಗಳು ಮತ್ತು ಶೇ. ೭.೨೫ ಮಧ್ಯಮ ಭೂ-ಹಿಡುವಳಿಗಳು ಇರುತ್ತವೆ. ದೊಡ್ಡ ಪ್ರಮಾಣದ ಭೂ-ಹಿಡುವಳಿಗಳ ಪ್ರಮಾಣ ಬಹಳ ಕಡಿಮೆಯಿರುತ್ತದೆ. (ಶೇ. ೦.೯೫) ಒಟ್ಟಾರೆ ಜಿಲ್ಲೆಯಲ್ಲಿನ ಅತಿ ಸಣ್ಣ, ಸಣ್ಣ ಗಾತ್ರದ ಮತ್ತು ಅರೆ-ಮಧ್ಯಮ ಗಾತ್ರದ ಭೂ-ಹಿಡುವಳಿಗಳೆಲ್ಲ ಕೂಡಿಸಿದರೆ ಅದು ಶೇ. ೯೧.೦೮ ಆಗುತ್ತದೆ. (ವಿವರಗಳಿಗಾಗಿ ಕೋಷ್ಠಕ ೫.೬ ನೋಡಿ) ಇದರಿಂದಾಗಿ ಬೇಡ ಸಮುದಾಯದ ರೈತರು ಬಡವರಾಗಿದ್ದಾರೆಂದರೆ ತಪ್ಪೇನಿಲ್ಲ.

ಕೋಷ್ಠಕ ೫.೬ ಬೀದರ ಜಿಲ್ಲೆಯ ಬೇಡರ ಭೂ-ಹಿಡುವಳಿಗಳು ವಿವರ

ಕ್ರಮ ಸಂಖ್ಯೆ	ಭೂ-ಹಿಡುವಳಿಗಳ ಗಾತ್ರ	ಕುಟುಂಬಗಳ ಸಂಖ್ಯೆ	ಶೇಕಡಾ
೧.	ಅತಿ ಸಣ್ಣ ಗಾತ್ರದ ಭೂ-ಹಿಡುವಳಿಗಳು (೦.೦೧ ರಿಂದ ೨.೫೦ ಎಕರೆ)	೨೨೧	೨೬.೨೮
೨.	ಸಣ್ಣ ಗಾತ್ರದ ಭೂ-ಹಿಡುವಳಿಗಳು (೨.೫೧ ರಿಂದ ೫.೦೦ ಎಕರೆ)	೩೮೬	೪೫.೯೦
೩.	ಅರೆ ಮಧ್ಯಮ ಗಾತ್ರದ ಭೂ-ಹಿಡುವಳಿಗಳು (೫.೦೧ ರಿಂದ ೧೦.೦೦ ಎಕರೆ)	೧೬೫	೧೯.೬೨
೪.	ಮಧ್ಯಮ ಗಾತ್ರದ ಭೂ-ಹಿಡುವಳಿಗಳು (೧೦.೧೧ ರಿಂದ ೨೫.೦೦ ಎಕರೆ)	೬೧	೭.೨೫
೫.	ದೊಡ್ಡ ಗಾತ್ರದ ಭೂ-ಹಿಡುವಳಿಗಳು (೨೫.೦೧ ರಿಂದ ಅಧಿಕ ಎಕರೆ)	೦೮	೦.೯೫
	ಒಟ್ಟು	೮೪೧	೧೦೦.೦೦

ಉತ್ಪಾದಕತ್ವದ (Productivity) ಸಿದ್ಧಾಂತದ ಪ್ರಕಾರ, ಸಣ್ಣ ಪ್ರಮಾಣದ ಮತ್ತು ಅತಿ ಸಣ್ಣ ಪ್ರಮಾಣದ ಭೂ-ಹಿಡುವಳಿಗಳು ಹೆಚ್ಚಿನ ಪ್ರಮಾಣದಲ್ಲಿ ಇರಬಾರದು ಮತ್ತು ದೊಡ್ಡ ಪ್ರಮಾಣದ ಹಾಗೂ ಮಧ್ಯಮ ಪ್ರಮಾಣದ ಭೂ-ಹಿಡುವಳಿಗಳು ಹೆಚ್ಚಿರಬೇಕು. ಬೇಡ ಸಮುದಾಯದವರ ಹೆಚ್ಚಿನ ಪ್ರಮಾಣದ

ಅತಿ ಸಣ್ಣ ಮತ್ತು ಸಣ್ಣ ಗಾತ್ರದ ಭೂ-ಹಿಡುವಳಿಗಳು ಇವರ ಕೃಷಿಯ ಕಡಿಮೆ ಉತ್ಪಾದಕತೆಯನ್ನು ತನ್ಮೂಲಕ ಇವರ ದಾರಿದ್ರ್ಯವನ್ನೇ ಎತ್ತಿ ತೋರಿಸುತ್ತದೆ.

ತಾಲೂಕಾವಾರು ಬೇಡ ಬುಡಕಟ್ಟಿನವರ ವಿವಿಧ ಗಾತ್ರದ ಭೂ-ಹಿಡುವಳಿಗಳು

ಬೇಡರ ಸಮಾಜದ ಜನಸಂಖ್ಯೆಯ ಸಿಂಹಪಾಲು ಬಸವಕಲ್ಯಾಣದಲ್ಲಿ ಇದ್ದುದರಿಂದ ಇವರ ಭೂ-ಹಿಡುವಳಿಗಳ ಶೇ. ೯೫.೯೬ ಇಲ್ಲಿಯೇ ಇರುತ್ತದೆ. ಹುಮನಾಬಾದ ತಾಲ್ಲೂಕನಲ್ಲಿ ಶೇ. ೨.೮೫ ಭೂ-ಹಿಡುವಳಿಗಳು ಇದ್ದರೆ ಉಳಿದ ಶೇ. ೧.೧೯ ಭೂ-ಹಿಡುವಳಿಗಳು ಭಾಲ್ಕಿ ತಾಲೂಕಿನಲ್ಲಿ ಇರುತ್ತವೆ (ಕೋಷ್ಠಕ ೫.೭ ನೋಡಿ). ಅತಿ ಸಣ್ಣ ಭೂ-ಹಿಡುವಳಿಗಳು ಹೆಚ್ಚಾಗಿ ಬಸವಕಲ್ಯಾಣದಲ್ಲಿವೆ. (ಶೇ. ೯೪.೧೨); ಹುಮನಾಬಾದದಲ್ಲಿ ಇವುಗಳ ಪ್ರಮಾಣ ಶೇ. ೫.೪೩ ಇದ್ದರೆ, ಭಾಲ್ಕಿಯಲ್ಲಿ ಕೇವಲ ಶೇ. ೦.೪೫ ಇದೆ. ಸಣ್ಣ ಭೂ-ಹಿಡುವಳಿಗಳು ಸಹ ಬಸವಕಲ್ಯಾಣದಲ್ಲಿಯೇ ಹೆಚ್ಚಾಗಿವೆ. (ಶೇ ೯೬.೪೪). ಬಸವಕಲ್ಯಾಣ ತಾಲೂಕವು ಶೇ. ೯೭.೫೮ ಅರೆ ಮಧ್ಯಮ ಭೂ-ಹಿಡುವಳಿಗಳನ್ನು ಶೇ. ೯೪.೫೪ ಮಧ್ಯಮ ಭೂ-ಹಿಡುವಳಿಗಳನ್ನು ಮತ್ತು ನೂರಕ್ಕೆ ನೂರು ದೊಡ್ಡ ಭೂ-ಹಿಡುವಳಿಗಳನ್ನು ಹೊಂದಿರುತ್ತದೆ.

ಕೋಷ್ಟಕ ೫.೭ ತಾಲೂಕಾವಾರು ಬೇಡರ ಭೂ-ಹಿಡುವಳಿಗಳ ವಿವರ

ಕ್ರಮ ಸಂಖ್ಯೆ	ತ್ಯಾೂಕಾದ ಹೆಸರು	ಅತಿ ಸಣ್ಣ	ಸಣ್ಣ	ಅರೆ ಮಧ್ಯಮ	ಮಧ್ಯಮ	ದೊಡ್ಡ	ಒಟ್ಟು
೧.	ಬಸವಕಲ್ಯಾಣ	೨೦೮ (೯೪.೧೨)	೩೭೮ (೯೬.೪೪)	೧೬೧ (೯೭.೫೮)	೫೨ (೯೪.೫೫)	೮ (೧೦೦.೦೦)	೮೦೭ (೯೫.೯೬)
೨.	ಹುಮನಾಬಾದ	೧೨ (೫.೪೩)	೭ (೧.೭೮)	೦೨ (೧.೨೧)	೦೩ (೫.೪೫)	-	೨೪ (೨.೮೫)
೩.	ಭಾಲ್ಕಿ	೧ (೦.೪೫)	೭ (೧.೭೮)	೦೨ (೧.೨೧)	-	-	೧೦ (೧.೯೧)
	ಒಟ್ಟು	೨೨೧ (೧೦೦.೦೦)	೩೯೨ (೧೦೦.೦೦)	೧೬೫ (೧೦೦.೦೦)	೫೫ (೧೦೦.೦೦)	೮ (೧೦೦.೦೦)	೮೪೧ (೧೦೦.೦೦)

ಮೂಲ: ಕಂಸದಲ್ಲಿ ಇರುವ ಸಂಖ್ಯೆಗಳು - 'ಶೇಕಡಾವಾರು'.

ತಾಲೂಕಾವಾರು ಭೂ-ಹಿಡುವಳಿಗಳ ವಿವರಣೆಯಿಂದ ನಮಗೆ ಗೊತ್ತಾಗುವುದೇನೆಂದರೆ, ಎಲ್ಲ ಬೇಡರ ರೀತಿಯ ಭೂ-ಹಿಡುವಳಿಗಳುಳ್ಳ ಕುಟುಂಬಗಳು ಅತ್ಯಧಿಕವಾಗಿ ಬಸವಕಲ್ಯಾಣ ತಾಲ್ಲೂಕಿನಲ್ಲಿ ಕೇಂದ್ರಿಕೃತವಾಗಿವೆ. ಉದಾಹರಣೆಗೆ, ಶೇ. ೯೪.೧೨ ಅತಿ ಸಣ್ಣ ಭೂ-ಹಿಡುವಳಿಗಳು, ಶೇ. ೯೬.೪೪ ಸಣ್ಣ ಭೂ-ಹಿಡುವಳಿಗಳು, ಶೇ. ೯೭.೫೮ ಅರೆ ಮಧ್ಯಮ ಭೂ-ಹಿಡುವಳಿಗಳು ಮತ್ತು ಶೇ. ೯೪.೫೫ ಮಧ್ಯಮ ಭೂ-ಹಿಡುವಳಿಗಳು ಬಸವಕಲ್ಯಾಣದಲ್ಲಿವೆ. ಎಲ್ಲಾ ದೊಡ್ಡ ಗಾತ್ರದ ಭೂ-ಹಿಡುವಳಿಗಳು ಬಸವಕಲ್ಯಾಣ ತಾಲೂಕದಲ್ಲಿವೆ. ಬಸವಕಲ್ಯಾಣ ಬಿಟ್ಟರೆ, ಹುಮನಾಬಾದ ತಾಲೂಕಿನಲ್ಲಿ ಕೆಲವು ಹಿಡುವಳಿಗಳು ಇವೆ. ೧೨

[illegible]

(ಶೇ. ೫.೪೭)ಅತಿ ಸಣ್ಣ ಭೂ-ಹಿಡುವಳಿಗಳು, ೭ (ಶೇ. ೧.೭೮) ಸಣ್ಣ ಭೂ-ಹಿಡುವಳಿಗಳು, ೨ (ಶೇ. ೧.೨೧) ಅರೇ ಮಧ್ಯಮ ಭೂ-ಹಿಡುವಳಿಗಳು ಮತ್ತು ೩ (ಶೇ. ೫.೪೫) ಮಧ್ಯಮ ಭೂ-ಹಿಡುವಳಿಗಳು ಇವೆ. ಈ ತಾಲೂಕಿನಲ್ಲಿ ಯಾವ ದೊಡ್ಡ ಭೂ-ಹಿಡುವಳಿ ಕುಟುಂಬಗಳು ಇರುವುದಿಲ್ಲ. ಕೊನೆಯದಾಗಿ ಭಾಲ್ಕಿ ತಾಲೂಕವು ಒಂದು ಅತಿ ಸಣ್ಣ ಭೂ-ಹಿಡುವಳಿ (ಶೇ. ೦.೪೫) ೭ (ಶೇ. ೪.೭೮) ಸಣ್ಣ ಭೂ-ಹಿಡುವಳಿಗಳ ಮತ್ತು ೨ (ಶೇ. ೧.೨೧) ಅರೆ-ಮಧ್ಯಮ ಭೂ-ಹಿಡುವಳನ್ನು ಹೊಂದಿರುತ್ತದೆ. ಈ ತಾಲ್ಲೂಕನಲ್ಲಿ, ಮಧ್ಯಮ ಮತ್ತು ದೊಡ್ಡ ಭೂ-ಹಿಡುವಳಿಗಳನ್ನು ಇಲ್ಲ.

೫.೭ ಕೋಷ್ಠಕವು ಬೇಡರ ಒಟ್ಟು ಭೂ-ಹಿಡುವಳಿಗಳು ಬಸವಕಲ್ಯಾಣದಲ್ಲಿಯೇ ಕೇಂದ್ರಿಕೃತವಾಗಿವೆ ಎಂಬ ನಿಜ ಸಂಗತಿಯನ್ನು ತೋರಿಸುತ್ತದೆ. ಜಿಲ್ಲೆಯ ಮೂರು ತಾಲ್ಲೂಕುಗಳಲ್ಲಿ ಜನವಾಸವಾಗಿದ್ದರೂ, ಬಸವಕಲ್ಯಾಣ ಒಂದು ಬಿಟ್ಟು ಬೇರೆ ಎರಡು ತಾಲ್ಲೂಕುಗಳಲ್ಲಿ ಬೇಡರ ಭೂ-ಹಿಡುವಳಿಗಳು ಸಾಕಷ್ಟು ಪ್ರಮಾಣದಲ್ಲಿ ಲಭ್ಯವಿಲ್ಲ. ಇದನ್ನು ೫.೮ ಕೋಷ್ಠಕವು ಬೇಡರ ಭೂ-ಹಿಡುವಳಿಗಳ ಸಂಖ್ಯೆಯ ವಿವರಣೆಯನ್ನು ಬಸವವಕಲ್ಯಾಣ ತಾಲ್ಲೂಕಿನ ಹೋಬಳಿವಾರು ವಿವರವಾಗಿ ತಿಳಿಸುತ್ತದೆ.

ಒಣ ಮತ್ತು ನೀರಾವರಿ ಬೇಸಾಯ

ಭಾರತದಲ್ಲಿ ಶೇಕಡಾ ೭೦ ರಷ್ಟು ಬೇಸಾಯವು ಒಣ ಬೇಸಾಯ ಆಗಿರುತ್ತದೆ. (Dry farming) ಆದುದರಿಂದ, ಭಾರತದ ಬೇಸಾಯ ಪ್ರಕೃತಿಯ ವಿರುದ್ಧದ ಒಂದು ಸೆಣಸಾಟವಾಗಿದೆ ಎಂದರೆ ಅತಿಶಯೋಕ್ತಿ ಇಲ್ಲ[೧೬]. ಸಮಶೀತೋಷ್ಣ ವಲಯದಲ್ಲಿ ಬರುವ ಯುರೋಪ್, ಪೂರ್ವ ಅಮೇರಿಕೆ ಮತ್ತು ಪ್ಯಾಸಿಪಿಕ್ ನಡುಗಡ್ಡೆಗಳಾದ ಜಪಾನ ಫಿಲಿಫೈನ್ಸ್ ಪ್ರದೇಶಗಳನ್ನು ಬಿಟ್ಟರೆ, ಜಗತ್ತಿನ ಇತರೆ ಪ್ರದೇಶಗಳಲ್ಲಿನ ದೇಶಗಳು ಬೇಸಾಯದ ಯಶಸ್ವಿಗಾಗಿ ಮಳೆಯನ್ನೇ ಅವಲಂಬಿಸಿವೆ. ಭಾರತವು ವರ್ಷದ ಬಹುಪಾಲು ಮಳೆ ಬಾರದಂತಿರುವ ದೇಶಗಳಲ್ಲಿ ಒಂದಾಗಿರುತ್ತದೆ[೧೭]. ಆದುದರಿಂದಲೇ ಭಾರತದಲ್ಲಿ 'ಕೃಷಿ'ಯು ಮಳೆಯೊಂದಿಗೆ ಜೂಜಾಟವೆಂದು ಕರೆಯಲಾಗುತ್ತದೆ[೧೮]. ಅದರಲ್ಲೂ ಬೀದರ ಜಿಲ್ಲೆ ಬರಗಾಲಕ್ಕೆ ಹೆಸರುವಾಸಿಯಾದ ಜಿಲ್ಲೆ[೧೯].

ಬೇಡ ರೈತರ ಒಣ ಮತ್ತು ನೀರಾವರಿ ಬೇಸಾಯ

ಇತರ ಮೇಲ್ಜಾತಿಯವರ ಸಾಗುವಳಿಗೆ ಹೋಲಿಸಿದಾಗ, ಬೇಡ ಸಮುದಾಯದ ಬಹುಪಾಲು ಸಾಗುವಳಿ ಖುಷ್ಕಿ ಜಮೀನಿನಲ್ಲಿ ಸಾಗುತ್ತದೆ. ಬೇಡ ಸಮುದಾಯದ ಕೇವಲ ಶೇ. ೮.೩೭ ರಷ್ಟು ನೀರಾವರಿ ಸೌಲಭ್ಯವನ್ನು (ಕೋಷ್ಠಕ ೫.೮ ನೋಡಿ) ಅರೆ ಮಧ್ಯಮ ಗಾತ್ರದ ಭೂ-ಹಿಡುವಳಿಗಳನ್ನುಳ್ಳ ರೈತರು ನೀರಾವರಿ ಸೌಲಭ್ಯ ಹೊಂದಿರುತ್ತಾರೆ. ಅತಿ ಸಣ್ಣ ಭೂ-ಹಿಡುವಳಿಗಳನ್ನು ಹೊಂದಿರುವ ರೈತರು ಅತಿ ಕಡಿಮೆ

ಪ್ರಮಾಣದಲ್ಲಿ ಅಂದರೆ ಶೇ. ೪.೨೪ ರಷ್ಟು ನೀರಾವರಿ ಸೌಲಭ್ಯವನ್ನು ಹೊಂದಿರುತ್ತಾರೆ. ನೀರಾವರಿ ಸೌಲಭ್ಯವಿಲ್ಲದೆ ಬೇಸಾಯವನ್ನು ಮಾಡುವುದು ಅತಿ ಕಷ್ಟಕರ ಸಂಗತಿ ಮತ್ತು ಬೇಸಾಯ ಅಷ್ಟೇನೂ ಫಲಪ್ರದವಾಗಿರಲಾರದು. ಮೇಲ್ಜಾತಿಯವರ ಭೂಮಿಯ ಫಲವತ್ತತೆಗೆ ಹೊಲಿಸಿದಾಗ ಈ ಸಮುದಾಯ ಸಾಗುವಳಿ ಮಾಡುತ್ತಿರುವ ಭೂಮಿಯ ಫಲವತ್ತತೆ ಬಹಳಷ್ಟು ಕಡಿಮೆ ಪ್ರಮಾಣದಾಗಿದೆ. ಇವರುಗಳು ಹೆಚ್ಚು-ಕಡಿಮೆ ಬಂಜರು ಭೂಮಿಯಲ್ಲಿ ಬೇಸಾಯ ಕಾರ್ಯವನ್ನು ಕೈಕೊಳ್ಳುತ್ತಿದ್ದಾರೆ ಎಂದರೆ ಏನು ಅತಿಶಯೋಕ್ತಿ ಆಗಲಾರದು. ಇವರಿಗೆ ನೀಡಿರುವ 'ಇನಾಂ' ಭೂಮಿಯು ಸಹ ಬಂಜರ ಭೂಮಿಯೇ ಆಗಿರುತ್ತದೆ. ಕೆಲವರಂತೂ ದನಕರುಗಳ ಮೇವಿಗಾಗಿಯೇ ಭೂಮಿಯನ್ನು ಬಳಸಿಕೊಳ್ಳುತ್ತಾರೆ. ಇಂತಹ ಪರಿಸ್ಥಿತಿ ಜಿಲ್ಲೆಯ ಇತರ ಬುಡಕಟ್ಟುಗಳಿಗೂ ಅನ್ವಯಿಸುತ್ತದೆ[೨೦].

ಕೋಷ್ಠಕ ೫.೮ ಬೇಡರ ಒಣ ಮತ್ತು ನೀರಾವರಿ ಬೇಸಾಯದ ವಿವರ

ಕ್ರಮ ಸಂಖ್ಯೆ	ಭೂ-ಹಿಡುವಳಿ ಗಾತ್ರಗಳು	ಒಣ	ನೀರಾವರಿ	ಒಟ್ಟು
೧.	ದೊಡ್ಡ ಗಾತ್ರದ ಹಿಡುವಳಿಗಳು	೨೨೯.೦೦ (೯೩.೮೫)	೧೫.೦೦ (೬.೧೫)	೨೪೪.೦೦ (೧೦೦.೦೦)
೨.	ಮಧ್ಯಮ ಗಾತ್ರದ ಹಿಡುವಳಿಗಳು	೭೬೪.೦೦ (೯೧.೧೭)	೭೪.೦೦ (೮.೮೩)	೮೩೮.೦೦ (೧೦೦.೦೦)
೩.	ಅರೆ-ಮಧ್ಯಮ ಗಾತ್ರದ ಹಿಡುವಳಿಗಳು	೧೧೨೪.೮೦ (೮೭.೭೪)	೧೫೭.೨೦ (೧೨.೨೬)	೧೨೮೨.೦೦ (೧೦೦.೦೦)
೪.	ಸಣ್ಣ ಗಾತ್ರದ ಹಿಡುವಳಿಗಳು	೧೪೯೪.೦೦ (೯೩.೫೮)	೧೦೨.೫೦ (೬.೪೨)	೧೫೯೭.೦೦ (೧೦೦.೦೦)
೫.	ಅತಿ ಸಣ್ಣ ಗಾತ್ರದ ಹಿಡುವಳಿಗಳು	೩೯೫ (೯೫.೭೬)	೧೭.೫೦ (೪.೨೪)	೪೧೨.೫೦ (೧೦೦.೦೦)
	ಒಟ್ಟು	೪೦೦೭.೩೦ (೯೧.೬೩)	೩೬೬.೨೦ (೦೮.೩೭)	೪೩೭೩.೫೦ (೧೦೦.೦೦)

ನೀರಾವರಿ ಸೌಲಭ್ಯಗಳ ಅಲಭ್ಯತೆ

ಭಾರತ ದೇಶದ ಶೇ. ೩೫ ರಷ್ಟು ಉಳ್ಳುವ ಭೂಮಿಗೆ ನೀರು ದೊರೆತಿದೆ. ಕರ್ನಾಟಕ ರಾಜ್ಯದಲ್ಲಿ ಇದರ ಪ್ರಮಾಣ ಶೇ. ೨೨ರಷ್ಟಿದೆ. ಬೀದರ ಜಿಲ್ಲೆಯಲ್ಲಿ ನೀರಾವರಿಯ ಪ್ರಮಾಣ ಶೇ. ೯.೪೬ ಇದೆ[೨೧]. ಆದರೆ, ಬೇಡ ಬುಡಕಟ್ಟಿನವರು ಇದಕ್ಕಿಂತ ಕಡಿಮೆ ಪ್ರಮಾಣ ನೀರಾವರಿ ಸೌಲಭ್ಯವನ್ನು (ಶೇ. ೮.೩೭) ಹೊಂದಿರುತ್ತಾರೆ. ನೀರಾವರಿ ಸೌಲಭ್ಯವು ಹಲವಾರು ಪ್ರತ್ಯಕ್ಷ ಮತ್ತು ಪರೋಕ್ಷ ಲಾಭಗಳನ್ನು ರೈತರಿಗೆ ತಂದು ಕೊಡುತ್ತದೆ. ಅವುಗಳಲ್ಲಿ ಕೆಲವು ಪ್ರಮುಖವಾದ ಲಾಭಗಳೆಂದರೆ:

೧. ರೈತರು ಒಂದಕ್ಕಿಂತಲೂ ಹೆಚ್ಚಿನ ಬೆಳೆಯನ್ನು ಒಂದೇ ವರ್ಷದಲ್ಲಿ ಬೆಳೆಯುವುದು ಇತ್ಯಾದಿ.

೨. ವಾಣಿಜ್ಯ ಬೆಳೆಗಳನ್ನು ಹೆಚ್ಚಾಗಿ ಬೆಳೆಯುವುದಾಗಿದೆ. 'ಗಾಡ್ಗಿಲ ಡಿ.ಆರ್.'ರವರು ಭಾರತ ದೇಶಕ್ಕೆ ಉಂಟಾಗುವ ನೀರಾವರಿಯ ಲಾಭಗಳನ್ನು ತಮ್ಮ ಗ್ರಂಥದಲ್ಲಿ ೧೯೪೮ರಲ್ಲಿಯೇ ವಿಸ್ತಾರವಾಗಿ ಹೇಳಿರುತ್ತಾರೆ. ಕರ್ನಾಟಕ ರಾಜ್ಯದ ತುಂಗಭದ್ರಾ, ನದಿ ಯೋಜನೆಯಿಂದ ಬಳ್ಳಾರಿ ಮತ್ತು ರಾಯಚೂರ ಜಿಲ್ಲೆಯ ರೈತರಿಗಾದ ನೀರಾವರಿ ಪ್ರಯೋಜನವನ್ನು 'ಕಲ್ಲೂರ ಎಂ. ಎಸ್.'[೨೩]ರವರು ತಮ್ಮ ಪುಸ್ತಕದಲ್ಲಿ ವಿಸ್ತಾರವಾಗಿ ವಿವರಿಸಿದ್ದಾರೆ. ಆದರೆ, ವಾಸ್ತವದಲ್ಲಿ ನೀರಾವರಿ ಸೌಲಭ್ಯಗಳಿಂದ ಬೀದರ ಜಿಲ್ಲೆಯಲ್ಲಿನ ಬೇಡ ಸಮುದಾಯ ವಂಚಿತವಾಗಿರುತ್ತದೆ.

ಬೇಡರ ಹೆಚ್ಚು ಇಳುವರಿ ನೀಡುವ ಬೆಳೆಗಳ ಪ್ರಮಾಣ

ಈ ಸಮುದಾಯ ಖುಷಿ ಜಮೀನನ್ನು ಮತ್ತು ಬಂಜರು ಜಮೀನನ್ನು ಊಳುತ್ತಿರುವುದರಿಂದ, ಇವರಲ್ಲಿ ಹೆಚ್ಚಿನ ಪಾಲು ರೈತರು ಸ್ಥಾನೀಯ ಬಗೆಯ ಬೆಳೆಗಳನ್ನು ಬೆಳೆಯುತ್ತಾರೆ. ಅಲ್ಲದೆ, ಹೆಚ್ಚು ಇಳುವರಿ ನೀಡುವ ಬೆಳೆಗಳಲ್ಲ. ದೊಡ್ಡ ಪ್ರಮಾಣದ ಭೂ-ಹಿಡುವಳಿಗಳನ್ನುಳ್ಳ ರೈತರು ತುಲನಾತ್ಮಕವಾಗಿ ಹೆಚ್ಚಿನ ಪ್ರಮಾಣದಲ್ಲಿ ಅಧಿಕ ಇಳುವರಿ ನೀಡುವ ಬೆಳೆಗಳನ್ನು ಬೆಳೆದರೂ, ಇವರ ಸಂಖ್ಯೆ ಕೇವಲ ೮ ಇರುತ್ತದೆ. ಇದಲ್ಲದೆ, ಶೇಕಡಾ ೮.೩೭ ನೀರಾವರಿ ಸೌಲಭ್ಯವಿರುವ ಭೂಮಿಯಲ್ಲಿ ಹೆಚ್ಚು ಇಳುವರಿ ನೀಡುವ ಬೀಜಗಳನ್ನು ಉಪಯೋಗಿಸಿ ಬೆಳೆಗಳನ್ನು ಬೆಳೆಯುತ್ತಾರೆ.

ಬೇಡ ರೈತರ ಸರಾಸರಿ ಭೂ-ಹಿಡುವಳಿಗಳ ಗಾತ್ರ

ಬೇಡ ಸಮುದಾಯದ ರೈತರು ಬೆಳೆಯುವ ವಾರ್ಷಿಕ, ಖರೀಫ್ ಮತ್ತು ರಭೀ ಬೆಳೆಗಳ ವಿಶ್ಲೇಷಣೆಯನ್ನು ಮಾಡಿದ ನಂತರ, ಇವರ ವಿವಿಧ ಭೂ-ಹಿಡುವಳಿಗಳ ಸರಾಸರಿ ಗಾತ್ರವನ್ನು ಕಂಡು ಕೊಳ್ಳುವುದು ತಾರ್ಕಿಕವಾಗಿದೆ. ಏಕೆಂದರೆ, ನೀರಾವರಿಯನ್ನು ಹೊರತುಪಡಿಸಿ, ಭೂಮಿಯ ಉತ್ಪಾದಕತೆಯನ್ನು ಅದರ ಗಾತ್ರ ನಿರ್ಧರಿಸುತ್ತದೆ. ಸ್ಥೂಲವಾಗಿ ಹೇಳುವುದಾದರೆ ಈ ಸಮಯುದಾಯದ ಜನರ ಭೂಮಿ ಫಲವತ್ತಾಗಿರದಿದ್ದರೂ ಸರಾಸರಿ ಗಾತ್ರದಲ್ಲಿ ಇದು ಸ್ವಲ್ಪ ಹೆಚ್ಚಿದೆ ಎನ್ನಬಹುದು. ತೀರಾ ಸಣ್ಣ ಗಾತ್ರದ ಕೃಷಿ ಭೂಮಿಯಲ್ಲಿ ರೈತನು ಲಭ್ಯವಿರುವ ಸಲಕರಣೆಗಳನ್ನು ಬಳಸುವಂತಿಲ್ಲ. ಮುಂದುವರೆದು, ತೀರಾ ಸಣ್ಣ ಗಾತ್ರದ ಕೃಷಿ ಭೂಮಿಯು ರೈತನ ಕುಟುಂಬಕ್ಕೆ ವರ್ಷವಿಡೀ ಉದ್ಯೋಗವನ್ನು ಒದಗಿಸುವುದಿಲ್ಲ. ಕೊನೆಯದಾಗಿ, ತೀರಾ ಸಣ್ಣ ರೈತನಿಗೆ ಸುಲಭವಾಗಿ ಸಾಲ ದೊರೆಯುವುದಿಲ್ಲ[೨೪]. ಹೈದ್ರಾಬಾದ ಕರ್ನಾಟಕ ಪ್ರದೇಶದಲ್ಲಿ, ರಾಜ್ಯದ ಉಳಿದ ಪ್ರದೇಶಗಳಿಗೆ ಹೋಲಿಸಿದಾಗ ಇಂದಿಗೂ ಕೆಲವು ದೊಡ್ಡ ಪ್ರಮಾಣದ ಭೂ-ಹಿಡುವಳಿಗಳು ಹೆಚ್ಚಿನ ಸಂಖ್ಯೆಯಲ್ಲಿವೆ. ಉದಾಹರಣೆಗೆ ಬೆಂಗಳೂರು ವಿಭಾಗದಲ್ಲಿ ೩೩೦ ಹೆಕ್ಟೇರು ಭೂಮಿ

ಹೊಂದಿರುವ ದೊಡ್ಡ ಪ್ರಮಾಣದ ಭೂ-ಹಿಡುವಳಿದಾರರು ಇದ್ದರೆ, ಗುಲಬರ್ಗಾ ವಿಭಾಗದಲ್ಲಿ ೭೦೭ ಹೆಕ್ಟೇರು ಭೂಮಿ ಹೊಂದಿರುವ ಭೂ-ಹಿಡುವಳಿದಾರರು ಇದ್ದಾರೆ[೨೫]. ಬೆಂಗಳೂರು ವಿಭಾಗದ ಅತಿ ಸಣ್ಣ ಭೂ-ಹಿಡುವಳಿಗಳು ೩೭೧ ಹೆಕ್ಟೇರು ಭೂಮಿಯನ್ನು ಹೊಂದಿದ್ದರೆ, ಗುಲಬರ್ಗಾ ವಿಭಾಗವು ಕೇವಲ ೧೨೯ ಹೆಕ್ಟೇರು ಭೂಮಿಯನ್ನು ಈ ಹಿಡುವಳಿಗಳಲ್ಲಿ ಹೊಂದಿದೆ. ಆದುದರಿಂದ, ಹೈದ್ರಾಬಾದ ಕರ್ನಾಟಕ ಪ್ರದೇಶದ ಬೀದರ ಜಿಲ್ಲೆಯಲ್ಲಿನ ಬೇಡ ರೈತರ ಭೂ-ಹಿಡುವಳಿಗಳ ಸರಾಸರಿ ಗಾತ್ರದ ಬಗ್ಗೆ ತಿಳಿದುಕೊಳ್ಳುವುದು ಅವಶ್ಯಕವಾಗಿದೆ. ಕೋಷ್ಠಕ ೫.೯ ಈ ವಿಷಯದ ಬಗೆಗೆ ನಮಗೆ ಮಾಹಿತಿಯನ್ನು ವಿವರವಾಗಿ ನೀಡುತ್ತದೆ. ದೊಡ್ಡ ಭೂ-ಹಿಡುವಳಿಗಳ ಸರಾಸರಿ ಗಾತ್ರ ೨೮.೨೫ ಎಕರೆ; ಮಧ್ಯಮ ಭೂ-ಹಿಡುವಳಿಗಳ ಗಾತ್ರದ ೧೫.೨೪ ಎಕರೆ; ಅರೆ-ಮಧ್ಯಮ ಭೂ-ಹಿಡುವಳಿಗಳ ಗಾತ್ರ ೭.೮೦; ಸಣ್ಣ ಭೂ-ಹಿಡುವಳಿಗಳ ಗಾತ್ರ ೪.೦೮; ಮತ್ತು ಅತಿ ಸಣ್ಣ ಭೂ-ಹಿಡುವಳಿಗಳು ೦೮ ಇವೆ. ಅದರಲ್ಲಿನ ಒಂದು ಹಿಡುವಳಿಯ ಗಾತ್ರ ೬೦ ಎಕರೆಯಿರುತ್ತದೆ. ಮಧ್ಯಮ, ಅರೆಮಧ್ಯಮ, ಸಣ್ಣ ಮತ್ತು ಅತಿ ಸಣ್ಣ ಭೂ-ಹಿಡುವಳಿಗಳ ಗಾತ್ರ ಭಾರತದ ದೇಶದ ಹಾಗೂ ಕರ್ನಾಟಕ ರಾಜ್ಯದ ಇತರ ಪ್ರದೇಶಗಳಿಗೆ ಹೋಲಿಸಿದಾಗ, ಸ್ವಲ್ಪ ಹೆಚ್ಚಾಗಿರುತ್ತದೆ. ಭೂ-ಹಿಡುವಳಿಗಳ ಸರಾಸರಿ ಗಾತ್ರ ತುಲನಾತ್ಮಕವಾಗಿ ಹೆಚ್ಚಿದೆ ಎಂಬ ಕಾರಣದಿಂದಾಗಿ, ನಾವು ಬೇಡ ರೈತರು ಶ್ರೀಮಂತರಿದ್ದಾರೆ ಎಂದರೆ ತಪ್ಪಾಗುತ್ತದೆ. ಏಕೆಂದರೆ, ಇವರ ಭೂಮಿಯ ಫಲವತ್ತತೆ ಬಹಳ ಕಡಿಮೆ ಮಟ್ಟದಲ್ಲಿದೆ. ನೀರಾವರಿಯ ಸೌಲಭ್ಯವು ಇವರುಗಳಿಗೆ ಸಾಕಷ್ಟು ಸಿಕ್ಕಿಲ್ಲ.

ಕೋಷ್ಠಕ ೫.೯ ಬೇಡರ ಸರಾಸರಿ ಭೂ-ಹಿಡುವಳಿಗಳ ಗಾತ್ರ

ಕ್ರಮ ಸಂಖ್ಯೆ	ಭೂ-ಹಿಡುವಳಿ ಗಾತ್ರಗಳು	ಒಟ್ಟು ಭೂಮಿ (ಎಕರೆಗಳಲ್ಲಿ)	ಸರಾಸರಿ ಗಾತ್ರ (ಎಕರೆಗಳಲ್ಲಿ)
೧.	ದೊಡ್ಡ ಗಾತ್ರದ ಹಿಡುವಳಿಗಳು	೨೨೬	೨೮.೨೫
೨.	ಮಧ್ಯಮ ಗಾತ್ರದ ಹಿಡುವಳಿಗಳು	೮೩೮.೧೦	೧೫.೨೪
೩.	ಅರೆ-ಮಧ್ಯಮ ಗಾತ್ರದ ಹಿಡುವಳಿಗಳು	೧೨೮೭	೭.೮೦
೪.	ಸಣ್ಣ ಗಾತ್ರದ ಹಿಡುವಳಿಗಳು	೧೬೦೦.೬೭	೪.೦೮
೫.	ಅತಿ ಸಣ್ಣ ಗಾತ್ರದ ಹಿಡುವಳಿಗಳು	೪೨೧.೭೦	೧.೯೧

ಬೆಳೆಯ ವಿಧಾನ (Cropping pattern)

ಒಂದು ಪ್ರದೇಶದ ಬೆಳೆಯ ವಿಧಾನವೆಂದರೆ, ಆ ಪ್ರದೇಶದಲ್ಲಿನ ಊಳ್ಳುವ ಭೂಮಿ ಹೊಂದಿರುವ ವಿಭಿನ ಬೆಳೆಗಳ ಪ್ರಮಾಣವಾಗಿದೆ ಎನ್ನಬಹುದು. ಜಾನ್. ಪಿ.ವಿ. 'ಒಬ್ಬ ರೈತ ತನ್ನ ಭೂಮಿಯಲ್ಲಿ ತೆಗೆಯುವ ಬೆಳೆಗಳ ಮಿಶ್ರಣವನ್ನು ಬೆಳೆಯುವ ವಿಧಾನ'ವೆಂದು ಕರೆದಿದ್ದಾರೆ[೨೬]. ಒಂದು ಪ್ರದೇಶದ ಪ್ರಮುಖ ಬೆಳೆಗಳನ್ನು ಗುರುತಿಸುವಲ್ಲಿ ಅಲ್ಲಿನ 'ಬೆಳೆಯ ವಿಧಾನ' ನಮಗೆ ನೆರವಾಗುತ್ತದೆ. ರೈತರು ಸಾಮಾನ್ಯವಾಗಿ ಎರಡು

ಬಗೆಯ ಬೆಳೆಗಳನ್ನು ತಮ್ಮ ಹೊಲಗಳಲ್ಲಿ ಬೆಳೆಯುತ್ತಾರೆ. ಅವುಗಳನ್ನು ಆಹಾರ ಬೆಳೆಗಳು ಮತ್ತು ಆಹಾರೇತರ ಬೆಳೆಗಳು ಅಥವಾ ವಾಣಿಜ್ಯ ಬೆಳೆಗಳು ಎಂದು ಕರೆಯುತ್ತಾರೆ ಅಥವಾ ವಾಣಿಜ್ಯ ಬೆಳೆಗಳು ಎಂದು ಕರೆಯುತ್ತಾರೆ. ಆಹಾರ ಮತ್ತು ಆಹಾರೇತರ ಬೆಳೆಗಳ ಅಧ್ಯಯನ ಒಂದು ಪ್ರದೇಶದ ಕೃಷಿಯ ಪ್ರಗತಿಯನ್ನು ಸಹ ಸೂಚಿಸುತ್ತದೆ. ಸಾಮಾನ್ಯವಾಗಿ, ದೊಡ್ಡ ಗಾತ್ರದ ಭೂ-ಹಿಡುವಳಿಗಳಲ್ಲಿ ವಾಣಿಜ್ಯ ಬೆಳೆಗಳನ್ನು ಹೆಚ್ಚಾಗಿ ಬೆಳೆಯಲಾಗುತ್ತದೆ. ಸಣ್ಣ ಮತ್ತು ಅತಿ ಸಣ್ಣ ಭೂ-ಹಿಡುವಳಿಗಳನ್ನು ಹೊಂದಿರುವ ರೈತರು ಅಧಿಕವಾಗಿ ಆಹಾರ ಬೆಳೆಗಳನ್ನೇ ಬೆಳೆಯುತ್ತಾರೆ. ಆದುದರಿಂದ ಒಂದು ಪರದೇಶದ ಕೃಷಿಯ ಪ್ರಗತಿ ಅದು ಹೊಂದಿರುವ ವಾಣಿಜ್ಯ ಬೆಳೆಗಳ ಮೇಲೆಯೇ ನಿಂತಿರುತ್ತದೆ[೨೭].

ಬೆಳೆಯ ವಿಧಾನವನ್ನು ಸಂಬಂಧಿಸಿದ ಅಂಶಗಳು

ಯಾವುದೇ ಒಂದು ವರ್ಷ ಅಥವಾ ಋತುವಿನಲ್ಲಿ ಒಂದು ಪ್ರದೇಶ ಹೊಂದಿರುವ ವಿವಿಧ ಬೆಳೆಗಳ ಪ್ರಮಾಣವನ್ನು 'ಬೆಳೆಯ ವಿಧಾನ' ಎಂದು ಈಗಾಗಲೇ ವ್ಯಾಖ್ಯಾನ ನೀಡಲಾಗಿದೆ. ಇಂತಹ ಬೆಳೆಯ ವಿಧಾನ ಕಾಲದಿಂದ ಕಾಲಕ್ಕೆ ಕೃಷಿ ಉತ್ಪನ್ನಗಳ ಬೆಲೆಗಳ ಬದಲಾವಣೆಯಿಂದಾಗಿ, ನೀರಾವರಿಯ ಪ್ರಮಾಣದಲ್ಲಿನ ಬದಲಾವಣೆಯಿಂದಾಗಿ, ಸರಕಾರದ ನೀತಿಯಲ್ಲಿನ ಬದಲಾವಣೆಯಿಂದಾಗ ಮತ್ತು ಇನ್ನಿತರ ಸಂಬಂಧಪಟ್ಟ ಅಂಶಗಳಿಂದಾಗಿ ಬದಲಾಗುತ್ತಾ ಹೋಗುತ್ತದೆ. ಕೃಷಿ ಉತ್ಪನ್ನ ಬೆಲೆಗಳು ಮತ್ತು ಅವುಗಳಲ್ಲಿನ ಬದಲಾವಣೆಗಳನ್ನು ಆರ್ಥಿಕ ಅಂಶಗಳೆಂದು ಅರ್ಥಶಾಸ್ತ್ರಜ್ಞರು ಕರೆಯುತ್ತಾರೆ. ಜಗತ್ತಿನಾದ್ಯಂತ ಹಲವಾರು ಕೃಷಿ ಅರ್ಥಶಾಸ್ತ್ರದಲ್ಲಿನ ಪರಿಣಿತರು ರೈತರ ಆರ್ಥಿಕ ಅಂಶಗಳಿಂದ ಉತ್ತೇಜಿತರಾಗಿ ತಮ್ಮ ಬೆಳೆ ವಿಧಾನಗಳನ್ನು ಆಗಾಗ್ಗೆ ಬದಲಾಯಿಸುತ್ತಿರುತ್ತಾರೆ ಎಂಬುದನ್ನು ತಮ್ಮ ಸಮೀಕ್ಷೆಗಳಿಂದ ಸಾಬೀತುಪಡಿಸಿದ್ದಾರೆ. 'ಮಜುಂದಾರ್ ಎನ್.ಎ' ಇವರು ಭಾರತದಲ್ಲಿ ಇಂತಹ ಅಧ್ಯಯನವನ್ನು ಕೈಗೊಂಡು, ರೈತರು ಆರ್ಥಿಕ ಅಂಶಗಳಿಗನುಗುಣವಾಗಿ ತಮ್ಮ ಬೆಳೆ ವಿಧಾನವನ್ನು ಬದಲಾಯಿಸುತ್ತಾ ಹೋಗುತ್ತಾರೆಂದು ಸಮೀಕ್ಷೆಯ ಮೂಲಕ ತಿಳಿಯಪಡಿಸಿದ್ದಾರೆ[೨೮]. ಈ ವಿಷಯ ಏನೇ ಇರಲಿ, ಬೆಳೆಯ ವಿಧಾನವನ್ನು ನಿರ್ಧರಿಸುವ ಅಂಶಗಳನ್ನು ಮುಖ್ಯವಾಗಿ ೧) ನೈಸರ್ಗಿಕ ಅಂಶಗಳು ೨) ತಾಂತ್ರಿಕ ಅಂಶಗಳು ೩) ಆರ್ಥಿಕ ಅಂಶಗಳು ೪) ರಾಜಕೀಯ ಅಂಶಗಳು ಮತ್ತು ೫) ಸಾಮಾಜಿಕ ಅಂಶಗಳೆಂದು ವಿಭಜಿಸಲಾಗಿದೆ[೨೯].

೧. ನೈಸರ್ಗಿಕ ಅಂಶಗಳು

ನೈಸರ್ಗಿಕ ಅಂಶಗಳಾದ (ಅ) ಮಣ್ಣು ಮತ್ತು (ಬ) ಹವಾಮಾನ ಇವೆರಡು ಬೆಳೆ ವಿಧಾನದ ಮೇಲೆ ಪ್ರಭಾವ ಬೀರುತ್ತವೆ. ಬೀದರ ಜಿಲ್ಲೆಯ ಮಣ್ಣು ಜೋಳ, ಸಜ್ಜೆ, ಕಬ್ಬು, ದ್ವಿದಳ ಧಾನ್ಯಗಳಾದ ತೊಗರಿ, ಹೆಸರು, ಉದ್ದು, ಮುಂತಾದವುಗಳನ್ನು ಬೆಳೆಯಲು ಸಹಾಯಕವಾಗಿದೆ. ಇಲ್ಲಿಯ ಹವೆ-ಒಣ ಹವೆ ಮತ್ತು

ಮಳೆ ಕಡಿಮೆ. ಆದುದರಿಂದ ಸಹ ಈ ಬೆಳೆಗಳನ್ನು ಬೆಳೆಯಲಾಗುತ್ತದೆ. ಬೇಡ ರೈತರು ಸಹ ಇವುಗಳನ್ನೇ ಬೆಳೆಯುತ್ತಾರೆ. ಆದರೆ, ಅವರ ಭೂ-ಹಿಡುವಳಿಗಳ ಮಣ್ಣು ಫಲವತ್ತಾಗಿ ಇಲ್ಲದಿರುವುದರಿಂದ ಬೆಳೆಗಳ ಪ್ರತಿ ಎಕರೆಯ ಉತ್ಪಾದಕತ್ವ ಬಹಳ ಕಡಿಮೆ ಮಟ್ಟದಾಗಿದೆ.

೨. ತಾಂತ್ರಿಕ ಅಂಶಗಳು

ಬೆಳೆಯ ವಿಧಾನವನ್ನು ಪ್ರಭಾವಿಸುವ ತಾಂತ್ರಿಕ ಅಂಶಗಳು ಅ) ನೀರಾವರಿ, ಬ) ಅಧಿಕ ಇಳುವರಿ ಬೀಜಗಳು, ಕ) ರಾಸಾಯನಿಕ ಗೊಬ್ಬರದ ಉಪಯೋಗ ಇತ್ಯಾದಿ. ಇದರಲ್ಲಿ ನೀರಾವರಿ ಅತಿ ಪ್ರಮುಖವಾದದ್ದು, ಬೇಡ ರೈತರಿಗೆ ಈ ಸವಲತ್ತು ಇಲ್ಲ. ಉಳಿದವುಗಳನ್ನು ಖರೀದಿಸಲು ರೈತರು ಸಂಪನ್ಮೂಲಗಳನ್ನು ಹೊಂದಿಲ್ಲ.

೩. ಆರ್ಥಿಕ ಅಂಶಗಳು

ಬೆಳೆಯ ವಿಧಾನವನ್ನು ನಿರ್ಧರಿಸುವ ಆರ್ಥಿಕ ಅಂಶಗಳಲ್ಲಿ ಪ್ರಮುಖವಾದುವುಗಳು ಅ) ಬೆಳೆಯ ಬೆಲೆ ಬ) ಹೊಲದ ಪ್ರಮಾಣ ಕ) ಸಾಧನಗಳ ಲಭ್ಯತೆ ಇವುಗಳಾಗಿವೆ. ಬೇಡ ರೈತರು, ತೊಗರಿ ಮುಂತಾದ ದ್ವಿದಳ ಧಾನ್ಯಗಳ ಬೆಲೆ ಇತ್ತೀಚೆಗೆ (ಅಂದರೆ ೧೯೯೫ ರಿಂದ ೧೯೯೯ರ ವರೆಗೆ) ಹೆಚ್ಚಿರುವುದರಿಂದ ಇವುಗಳನ್ನು ಹೆಚ್ಚಿನ ಪ್ರದೇಶದಲ್ಲಿ ಬೆಳೆದು ಲಾಭವನ್ನು ಪಡೆಯುವಲ್ಲಿ ಭಾಗಶಃ ಯಶಸ್ವಿಯಾಗಿರುತ್ತಾರೆ. ಸಣ್ಣ ಹೊಲಗಳನ್ನು ಆಹಾರ ಬೆಳೆಗಳಿಗೂ, ದೊಡ್ಡ ಪ್ರಮಾಣದ ಭೂಮಿಯನ್ನು ಆರ್ಥಿಕ ಬೆಳೆಗಳಿಗೂ ಉಪಯೋಗಿಸುವುದು ರೂಢಿ. ಬೇಡ ರೈತರು ಸಣ್ಣ ಮತ್ತು ಅತಿ ಸಣ್ಣ ಭೂ-ಹಿಡುವಳಿಗಳ ಸಂಖ್ಯೆ ಹೆಚ್ಚಿರುವುದರಿಂದ ಹೆಚ್ಚಾಗಿ ಇವರು ಆಹಾರ ಬೆಳೆಗಳನ್ನೇ ಬೆಳೆಯುತ್ತಿದ್ದಾರೆ. ಆದುದರಿಂದ, ಇವರ ಕೃಷಿ ಜೀವನೋಪಾಯವಾಗಿದೆ. ಇವರು ಕೃಷಿಯನ್ನು ವ್ಯಾಪಾರವಾಗಿ ಪರಿಗಣಿಸಿಲ್ಲ. ಆರ್ಥಿಕ ಬೆಳೆಗಳನ್ನು ಬೆಳೆಯುವಲ್ಲಿ ಕೃಷಿಯನ್ನು ವ್ಯಾಪಾರವಾಗಿ ಪರಿಗಣಿಸಿಲ್ಲ. ಆರ್ಥಿಕ ಬೆಳೆಗಳನ್ನು ಬೆಳೆಯುವಲ್ಲಿ ಕೃಷಿಯ ಸಾಧನಗಳಾದ ಹೆಚ್ಚು ಇಳುವರಿ ಬೀಜ, ರಸಾಯನಿಕ ಗೊಬ್ಬರ, ನೀರಾವರಿ ಸೌಲಭ್ಯ ಇತ್ಯಾದಿಗಳ ಲಭ್ಯತೆ ಬೇಕಾಗಿದ್ದರೂ ಪ್ರಮುಖವಾಗಿ ನೀರಾವರಿ ಸೌಲಭ್ಯ ಬೇಕೇ ಬೇಕು. ಬೇಡ ಸಮುದಾಯದ ರೈತರು ನೀರಾವರಿ ಸೌಲಭ್ಯದಿಂದ ವಂಚಿತರಾಗಿದ್ದಾರೆ.

೪) ರಾಜಕೀಯ ಅಂಶಗಳು

(ಅ) ಸರಕಾರದ ಬೆಳೆಯ ನೀತಿ (ಆ) ಬೆಂಬಲ ಬೆಲೆಯ ನೀತಿಯ ಅನುಷ್ಠಾನ (ಇ) ರೈತರಿಗೆ ನೀರಾವರಿ ಸೌಲಭ್ಯ ಮತ್ತು ಅವರು ಸುಧಾರಿತ ತಳಿಯ ಬೀಜ ಮತ್ತು ರಸಾಯನಿಕ ಗೊಬ್ಬರವನ್ನು ಕೊಳ್ಳಲು

ಧನ ಸಹಾಯ ನೀಡಿಕೆ ಮುಂತಾದವುಗಳು ಬೆಳೆ ವಿಧಾನವನ್ನು ನಿರ್ಧರಿಸುವ ರಾಜಕೀಯ ಅಂಶಗಳಾಗಿವೆ. ರಾಜ್ಯ ಸರಕಾರ ಬೇಡ ಬುಡಕಟ್ಟಿನವರ ಇಂತಹ ಅವಶ್ಯಕತೆಗಳನ್ನು ಪೂರೈಸದೆ ಇರುವುದರಿಂದ ಬೆಳೆಯ ವಿಧಾನ ಮಾದರಿ ಇನ್ನೂ ಹಳೆಯದಾಗಿಯೇ ಉಳಿದಿದೆ-ಇದೊಂದು ಸಾರ್ವತ್ರಿಕ ಅಂಶವಾಗಿದೆ.

೪) ಐತಿಹಾಸಿಕ ಅಂಶಗಳು

ಕೆಲವೊಮ್ಮೆ ಐತಿಹಾಸಿಕ ಅಂಶಗಳು ಬೆಳೆ ವಿಧಾನವನ್ನು ನಿರ್ಧರಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಉದಾಹರಣೆಗೆ ಸುಮಾರು ೧೦೦ ವರ್ಷಗಳ ಹಿಂದೆ ಬೀದರನಲ್ಲಿ ಮುಂಗಾರಿ ಜೋಳ ಬೆಳೆಯುತ್ತಿದ್ದರು. ಈ ಜೋಳವನ್ನು ನೀರಾವರಿ ಸೌಲಭ್ಯವಿಲ್ಲದೆ ಬೆಳೆಯಬಹುದಾಗಿರುವದರಿಂದ ಇಂದಿಗೂ ಇದನ್ನು ವ್ಯಾಪಕವಾಗಿ ಬೆಳೆಯಲಾಗುತ್ತದೆ.

ನೀರಾವರಿ ಪ್ರಾಮುಖ್ಯತೆ

ಒಂದು ಪ್ರದೇಶದ ಬೆಳೆ ವಿಧಾನವನ್ನು ನಿರ್ಧರಿಸುವಲ್ಲಿ ನೀರಾವರಿಯು ಅತ್ಯಂತ ಹೆಚ್ಚಿನ ಪ್ರಮಾಣದಲ್ಲಿ ಪ್ರಭಾವವನ್ನು ಬೀರುತ್ತದೆ. ಇಷ್ಟೆ ಅಲ್ಲದೆ, ಭೂಮಿಯ ಉತ್ಪಾದಕತ್ವ (Productivity)ವನ್ನು ಹೆಚ್ಚಿಸುವಲಲಿ ನೀರಾವರಿ ಅತಿ ಮುಖ್ಯವಾದ ಪಾತ್ರವನ್ನು ಸಹ ವಹಿಸುತ್ತದೆ. ಮುಂದುವರೆದು, ನೀರಾವರಿ ಸೌಲಭ್ಯದ ಲಭ್ಯತೆ ರೈತರನ್ನು ಹೆಚ್ಚು ಇಳುವರಿ ಕೊಡುವ ಬೀಜಗಳನ್ನು ಹೆಚ್ಚಾಗಿ ಉಪಯೋಗಿಸಿ ಅಧಿಕ ಮೌಲ್ಯದ ಬೆಳೆಗಳನ್ನು ಹೆಚ್ಚಾಗಿ ಬೆಳೆಯುವಂತೆ ಮಾಡುತ್ತದೆ. ಉದಾಹರಣೆಗೆ, ಭಾರತದಲ್ಲಿ ಮತ್ತು ಬೀದರ ಜಿಲ್ಲೆಯಲ್ಲಿ ನೀರಾವರಿಯಿಲ್ಲದ ಪ್ರದೇಶಗಳಲ್ಲಿ ಕಡಿಮೆ ಮೌಲ್ಯದ ಜೋಳವನ್ನು ಬೆಳೆದರೆ, ನೀರಾವರಿ ಇದ್ದ ಕಡೆ ಹೆಚ್ಚಿನ ಮೌಲ್ಯದ 'ಭತ್ತ' ಮತ್ತು ವಾಣಿಜ್ಯ ಬೆಳೆಗಳಾದ ಕಬ್ಬು, ಬಾಳೆ ಮುಂತಾದವುಗಳನ್ನು ಬೆಳೆಯಲಾಗುತ್ತದೆ. ಆದುದರಿಂದಲೇ, 'ಎಫ್. ಎ. ನಿಕೋಲಸನ್'ರ ರೋಮಿನಿಂದ ಸ್ಕಾಟ್ಲೆಂಡ್‌ವರೆಗಿನ ಕೃಷಿ ಚರಿತ್ರೆಯ ಕೃಷಿಯ ಜೀವಾಳ ಸಾಲವೆಂಬ ಪಾಠವನ್ನು ತಿಳಿಸುತ್ತದೆ. ರಾಷ್ಟ್ರದ ಸ್ಥಿತಿಗತಿ, ಗೇಣಿಯ ಸ್ವರೂಪ, ಕೃಷಿಯ ಸ್ವಭಾವ ಹೇಗಿದ್ದರೂ ಕೃಷಿಕ ಸಾಲ ಮಾಡಲೇಬೇಕಾಗುತ್ತದೆ" ಎಂದು ಹೇಳಿರುತ್ತಾರೆ[೪೦].

ಭಾರತೀಯ ಕೃಷಿ ಸಂಶೋಧನಾ ಮಂಡಳಿ (Indian Council of Agricultural Research ICAR)ಯು ಒಂದು ಕ್ಷೇತ್ರದ ಬೆಳೆಯ ವಿಧಾನ ಯಾವ ಅಂಶಗಳಿಂದ ಪ್ರಭಾವಿತವಾಗಿರುತ್ತದೆಯೆಂಬುದನ್ನು ಕಂಡು ಕೊಳ್ಳಲು ಕೆಲವು ರಾಜ್ಯಗಳಲ್ಲಿ ಒಂದು ಯೋಜನೆಯನ್ನು ತಯಾರಿಸಿ ಕ್ಷೇತ್ರ ಕಾರ್ಯಾಧಾರಿತ ಅಧ್ಯಯನವನ್ನು ನಡೆಸಿತ್ತು. ಈ ಅಧ್ಯಯನದಿಂದ ಗೊತ್ತಾದ ಪ್ರಮುಖ ಅಂಶಗಳೆಂದರೆ[೪೧]:

೧. ಕೆಲವು ಬೆಳೆಗಳನ್ನು ನೀರಾವರಿ ಕ್ಷೇತ್ರದಲ್ಲಿಯೇ ಬೆಳೆಯಲಾಗುತ್ತದೆ. ಕೆಲವು ಬೆಳೆಗಳು, ಅಂದರೆ ಸಜ್ಜೆ, ಕಡಲೆ ಇತ್ಯಾದಿ ಭತ್ತ ಹಾಗೂ ಕಬ್ಬಿಗಿಂತ ಕಡಿಮೆ ಪ್ರಮಾಣದ ನೀರನ್ನು ಉಪಯೋಗಿಸುತ್ತವೆ.

೨. ನೀರಾವರಿ ಇದ್ದ ಕ್ಷೇತ್ರದಲ್ಲಿ ಆಹಾರ ಬೆಳೆಗಳು ಬೆಳೆಯುವುದು ಕಡಿಮೆಯಾಗುತ್ತದೆ ಮತ್ತು ವಾಣಿಜ್ಯ ಬೆಳೆಗಳು ಬೆಳೆಯುವುದು ಹೆಚ್ಚಾಗುತ್ತದೆ.

೩. ದೊಡ್ಡ ಗಾತ್ರದ ಭೂ-ಹಿಡುವಳಿಗಳನ್ನು ಹೊಂದಿರುವ ರೈತರು ಅವರಿಗೆ ನೀರಾವರಿ ಸೌಲಭ್ಯ ದೊರಕಿದಾಗ, ಹೆಚ್ಚಾಗಿ ವಾಣಿಜ್ಯ ಬೆಳೆಗಳನ್ನು ಬೆಳೆಯುತ್ತಾರೆ.

ಬೆಳೆಯ ಕಾಲಗಳು

ನಮ್ಮ ದೇಶ ಮತ್ತು ರಾಜ್ಯ ಸಾಮಾನ್ಯವಾಗಿ ಎರಡು ಬೆಳೆಗಳನ್ನು ಹೊಂದಿರುತ್ತವೆ. ಇವುಗಳಿಗೆ ಕೃಷಿ ಕಾಲಗಳೆಂದು ಕರೆಯಲಾಗುತ್ತದೆ. ೧. ಖರೀಫ್ ಕಾಲ (ಬೇಸಿಗೆ ಮತ್ತು ಮಳೆಗಾಲ) ಮತ್ತು ರಬ್ಬಿಕಾಲ ಅಥವಾ ಚಳಿಗಾಲ. ಖರೀಫ್ ಕಾಲವು ಮುಂಗಾರು ಮಳೆ ಮಾರುತಗಳು ಹುಟ್ಟುವ ಕಾಲದಲ್ಲಿ ಆರಂಭಾಗುತ್ತವೆ. ಜೂನ್ ತಿಂಗಳಿನಿಂದ ಸೆಪ್ಟೆಂಬರ್ ಅಂತ್ಯದವರೆಗೆ ಅಥವಾ ಹೆಚ್ಚೆಂದರೆ ಅಕ್ಟೋಬರ್ ಆದಿಯವರೆಗೆ ಖರೀಫ್ ಕಾಲ ಇರುತ್ತದೆ. ಜೂನ್‌ನಲ್ಲಿ ಬೀಜ ಬಿತ್ತಿ ಅಕ್ಟೋಬರದ ಆದಿಯವರೆಗೆ ಸುಗ್ಗಿ ಮಾಡಲಾಗುತ್ತದೆ. ಈ ಕಾಲದ ಮುಖ್ಯ ಬೆಳೆಗಳು; ಭತ್ತ, ಕಬ್ಬು, ಮೆಕ್ಕೆಜೋಳ, ನೆಲಗಡಲೆ, ಎಳ್ಳು ಮುಂತಾದವುಗಳು. ರಬ್ಬಿ ಕಾಲವು ಹಿಂಗಾರು ಮಳೆಯೊಡನೆ ಆರಂಭವಾಗುತ್ತದೆ. ಅಕ್ಟೋಬರ್ ತಿಂಗಳ ಮಧ್ಯ ಭಾಗದಿಂದ ಮಾರ್ಚ್ ಅಂತ್ಯದವರೆಗೆ ಅಥವಾ ಎಪ್ರೀಲ್ ಆದಿ ಭಾಗದವರೆಗೆ ರಬ್ಬಿ ಕಾಲವಿರುತ್ತದೆ. ಅಕ್ಟೋಬರದಲ್ಲಿ ಬೀಜ ಬಿತ್ತಿ ಮಾರ್ಚ್ ಅಥವಾ ಎಪ್ರೀಲ್ ತಿಂಗಳಲ್ಲಿ ಬೆಳೆಯನ್ನು ಕಟಾವು ಮಾಡಲಾಗುತ್ತದೆ. ಈ ಕಾಲದ ಮುಖ್ಯ ಬೆಳೆಗಳು ಗೋದಿ, ಕಡಲೆ, ಬಾರ್ಲಿ ಮುಂತಾದವುಗಳಾಗಿವೆ[೨].

ಬೇಡ ರೈತ ಸಮುದಾಯದ ವರ್ಷದ, ಖರೀಫ್ ಮತ್ತು ರಬ್ಬಿ ಬೆಳೆಗಳು

ಬೇಡ ಸಮುದಾಯದವರು ಖರೀಫ್ ಕಾಲದಲ್ಲಿ ಮುಖ್ಯವಾಗಿ ಜೋಳ (ಹಸಿರು ಜೋಳ, ಅರಗಡಿ ಜೋಳ, ರಾಗಿ ಜೋಳ, ಕಣಮುಚಕ್ಯಾನ ಜೋಳ, ಬಿಳಿ ಜೋಳ, ಕೆಂಪು ಜೋಳ, ಹೈಬ್ರೀಡ್ ಜೋಳ ಇತ್ಯಾದಿಗಳು) ಸಜ್ಜೆ, ನೆಲಗಡಲೆ, ತೊಗರಿ, ಉದ್ದು, ಹೆಸರು, ಎಳ್ಳು, ನವಣೆ, ಶಾವಿ, ಭತ್ತ, ಅಲಸಂಧಿ, ಕಾರೋಳು, ಸೂರ್ಯಪಾನ, ಪುಂಡಿ, ಅಗಸಿ, ಖುಸುಬಿ ಮೊದಲಾದ ಬೆಳೆಗಳನ್ನು ಬೆಳೆಯುತ್ತಾರೆ. ರಬ್ಬಿ ಕಾಲದಲ್ಲಿ ಬಿಳಿ ಜೋಳ, ಗೋಧಿ, ಕಡಲೆ, ಸೂರ್ಯಪಾನ ಮುಂತಾದವುಗಳನ್ನು ಬೆಳೆಯುತ್ತಾರೆ. ತೊಗರಿ, ಕಬ್ಬು, ಸೂರ್ಯಪಾನ, ಭತ್ತ ಇವುಗಳು ಖರೀಫ್ ಮತ್ತು ರಬ್ಬಿ ಈ ಎರಡು ಕಾಲದಲ್ಲಿರುವ ಬೆಳೆಗಳಾಗಿವೆ.


ಇವರ ವಾರ್ಷಿಕ ಖರೀಫ್ ಮತ್ತು ರಬ್ಬಿ ಬೆಳೆಗಳಲ್ಲಿ ವಾರ್ಷಿಕ ಬೆಳೆಯಾದ ತೊಗರಿ ಅತಿ ಮಹತ್ವದಾಗಿದೆ. (ಕೋಷ್ಠಕ ೫.೧೦ ನೋಡಿ) ಮತ್ತು ಇದನ್ನು ೨,೬೮೦.೭೦ ಎಕರೆಗಳಲ್ಲಿ (ಶೇ. ೬೧.೨೯) ಬೆಳೆಯಲಾಗುತ್ತದೆ. ಎರಡನೆಯ ಸ್ಥಾನ ಖರೀಫ್ ಬೆಳೆಯಾದ ಹೈಬ್ರೀಡ್ ಜೋಳಕ್ಕೆ ದೊರೆತಿದೆ. ಈ ಬೆಳೆಯನ್ನು ೪೫೦.೭೫ ಎಕರೆಗಳಲ್ಲಿ (ಶೇ. ೧೦.೩೧) ಬೆಳೆಯಲಾಗುತ್ತದೆ. ಮೂರನೆಯ ಸ್ಥಾನ ಖರೀಫ್ ಬೆಳೆಯಾದ ಹೈಬ್ರೀಡ್ ಸಜ್ಜೆಗೆ ದೊರೆತಿದ್ದು ೩೦೦.೪೫ ಎಕರೆಗಳಲ್ಲಿ (ಶೇ. ೬.೮೭) ಬೆಳೆಯಲಾಗುತ್ತದೆ.

[illegible]

ನಾಲ್ಕನೆಯ ಸ್ಥಾನವನ್ನು ವರ್ಷದ ಬೆಳೆಯಾದ ಕಬ್ಬು ಗಿಟ್ಟಿಸಿಕೊಂಡಿದೆ ಮತ್ತು ಇದರ ವಿಸ್ತೀರ್ಣ ೨೮೦.೫೦ ಎಕರೆಗಳು (ಶೇ. ೬.೪೧), ೨೦೦.೫೦ (ಶೇ. ೪.೫೮) ಕ್ಷೇತ್ರದಲ್ಲಿ ಬೆಳೆಯಲಾದ ಹಸಿರು ಜೋಳಕ್ಕೆ ಐದನೆಯ ಸ್ಥಾನ ದೊರಕಿದೆ. ರಬ್ಬಿ ಕಾಲದ ಬೆಳೆಗಳು ಸೂರ್ಯಪಾನ, ಬಿಳಿಜೋಳ ಮತ್ತು ಕಡಲೆಯಾಗಿರುತ್ತದೆ. ಇವುಗಳ ಬಿತ್ತನೆ ಕ್ಷೇತ್ರ ತುಲನಾತ್ಮಕವಾಗಿ ಅತಿ ಕಡಿಮೆ ಪ್ರಮಾಣದ್ದಾಗಿದೆ. (ವಿವರಗಳಿಗಾಗಿ ಕೋಷ್ಠಕ ೫.೧೦ ನೋಡಿ).

ಕೋಷ್ಠಕ ೫.೧೦ ಬೇಡ ರೈತರ ವರ್ಷದ ಖರೀಫ್ ಮತ್ತು ರಬ್ಬಿ ಬೆಳೆಗಳು (ಎಕರೆಗಳಲ್ಲಿ)

ಕ್ರಮ ಸಂಖ್ಯೆ	ಒಂದು ವರ್ಷದ ಬೆಳೆಗಳು	ಎಕರೆಗಳಲ್ಲಿ	ಶೇಕಡಾ	ಖರೀಫ್ ಬೆಳೆಗಳು	ಎಕರೆಗಳಲ್ಲಿ	ಶೇಕಡಾ	ರಬ್ಬಿ ಬೆಳೆಗಳು	ಎಕರೆಗಳಲ್ಲಿ	ಶೇಕಡಾ
೧.	ತೊಗರಿ	೨೬೮೦.೭೦	(೯೦.೫೨)	ಭತ್ತ	೮೬.೫೦	(೬.೧೨)	ಬಿಳಿಜೋಳ	೧೫೨.೨೫	(೫೩.೫೭)
೨.	ಕಬ್ಬು	೨೮೦.೫೦	(೯.೪೭)	ಹೈಬ್ರೀಡ್ ಜೋಳ	೪೫೦.೭೫	(೩೧.೯೨)	ಸೂರ್ಯಪಾನ	೮೬.೫೦	(೩೩.೬೨)
				ಹಸಿರು ಜೋಳ	೨೦೦.೫೦	(೧೪.೨೦)	ಕಡಲೆ	೫೦.೫೦	(೧೭.೪೬)
				ಹೈಬ್ರೀಡ್ ಸಜ್ಜೆ	೩೦೦.೪೫	(೨೧.೨೭)			
				ಹೆಸರು	೧೫೨.೨೫	(೧೦.೭೮)			
				ಉದ್ದು	೫೦.೫೫	(೩.೫೮)			
				ಎಳ್ಳು	೭೫.೦೦	(೫.೩೧)			
				ನೆಲಗಡಲೆ	೯೬.೩೦	(೬.೮೨)			
		೨೯೬೧.೨೦	(೬೩.೫೧)		೪೧೧೨.೨೫	(೩೦.೨೯)		೨೮೯.೨೫	(೬.೨೦)



ಬೀದರ ಒಂದಕ್ಕಿಂತ ಹೆಚ್ಚಿನ ಬೆಳೆಯ ಕ್ಷೇತ್ರ

ಈ ಸಮಯುದಾಯದವರು ಒಟ್ಟು ೪,೩೭೩.೫೦ ಎಕರೆ ಭೂಮಿಯಲ್ಲಿ ಬೇಸಾಯ ಮಾಡುತ್ತಿದ್ದಾರೆ. ಕೇವಲ ೨೮೯.೨೫ ಎಕರೆ ಭೂಮಿಯಲ್ಲಿ ಒಂದಕ್ಕಿಂತ ಹೆಚ್ಚಿನ ಬೆಳೆ, ಅಂದರೆ ಎರಡನೆಯ ಬೆಳೆಯನ್ನು ತೆಗೆಯಲು ಸಮರ್ಥರಾಗಿದ್ದಾರೆ. (ಶೇ. ೬.೬೧) (ಕೋಷ್ಠಕ ೫.೧೧ ನೋಡಿ) ಇದಕ್ಕೆ ಪ್ರಮುಖ ಕಾರಣವೇನೆಂದರೆ, ಇವರಿಗೆ ನೀರಾವರಿ ಸೌಲಭ್ಯ ಸಾಕಷ್ಟು ದೊರೆತಿಲ್ಲ. ಜಿಲ್ಲೆಯು ಒಂದಕ್ಕಿಂತಲೂ ಹೆಚ್ಚು ಸಲ ಬಿತ್ತನೆಯ ಪ್ರದೇಶ ಶೇಕಡಾ ೨೩ ಇದೆ[೩೩]. ಆದುದರಿಂದ, ಈ ಸಮುದಾಯದವರು ಆರ್ಥಿಕವಾಗಿ ಹಿಂದುಳಿದಿದ್ದಾರೆಂದು ನಾವು ಸ್ಪಷ್ಟವಾಗಿ ಹೇಳಬಹುದು.

ಕೋಷ್ಠಕ ೫.೧೧ ವರ್ಷದಲ್ಲಿ ಒಂದಕ್ಕಿಂತಲೂ ಹೆಚ್ಚು ಬೆಳೆಯನ್ನು ಬೆಳೆಯುತ್ತಿರುವ ಭೂಮಿಯ ಪ್ರಮಾಣ

ಕ್ರಮ ಸಂಖ್ಯೆ	ಒಂದು ಬೆಳೆ ಬೆಳೆಯುವ ಭೂಮಿ (ಎಕರೆಗಳಲ್ಲಿ)	ಶೇಕಡಾ	ಎರಡು ಬೆಳೆ ಬೆಳೆಯುವ ಭೂಮಿ ಪ್ರಮಾಣ	ಶೇಕಡಾ
೧.	೪೩೭೩.೫೦	೧೦೦.೦೦	೨೮೯.೨೫	೬.೬೧

ಆಹಾರ ಬೆಳೆಗಳು ಮತ್ತು ವಾಣಿಜ್ಯ ಬೆಳೆಗಳು

ಭಾರತ ದೇಶ ಇನ್ನೊಬ್ಬರು ಆಶ್ಚರ್ಯಪಡುವಂತೆ ಹಲವಾರು ವಿಧದ ನಾನಾ ಬೆಳೆಗಳನ್ನು ಬೆಳೆಯುತ್ತದೆ[೩೪]. ಆದುದರಿಂದಲೇ ಭಾರತವನ್ನು 'ಬೆಳೆಗಳ ಸಂಗ್ರಹಾಲಯ' ಎಂದು ಕರೆಯಲಾಗುತ್ತದೆ[೩೫]. ನಮ್ಮ ದೇಶದಲ್ಲಿ ಸಮಶೀತೋಷ್ಣ ವಲಯದ ಹಲವಾರು ಬೆಳೆಗಳಲ್ಲದೆ, ಉಷ್ಣವಲಯದ ಹಲವಾರು ಬೆಳೆಗಳನ್ನು ಸಹ ಬೆಳೆಯುತ್ತದೆ. ಇದಲ್ಲದೆ, ಉಪ ಉಷ್ಣವಲಯದ ಬೆಳೆಗಳು ಸಹ ಭಾರತದಲ್ಲಿ ಬೆಳೆಯಲಾಗುತ್ತದೆ. ಸಮಶೀತೋಷ್ಣ ಹವಾಮಾನದಲ್ಲಿನ ಹಲವಾರು ಬೆಳೆಗಳಲ್ಲಿ ಭಾರತವು ಬೆಳೆಯುವ ಪ್ರಮುಖ ಬೆಳೆಗಳು ಗೋಧಿ, ಮೆಕ್ಕೆಜೋಳ, ಬಾರ್ಲಿ, ದ್ವಿದಳ ಧಾನ್ಯಗಳು (Pulpes) ಸಣ್ಣ ಕಾಳುಗಳುಳ್ಳ ತೆನೆಬಿಡುವ ಧಾನ್ಯಗಳು, (Millets) ಆಲೂಗಡ್ಡೆ, ಅಗಸೆನಾರು (Flax), ಪುಂಡಿ ಗೀಡ (Hemp) ಮತ್ತು ಹಲವಾರು ಬಗೆಯ ಹಣ್ಣುಗಳು (ನಿಂಬೆ, ಕಿತ್ತಳೆ, ನೇರಿಳೆ, ಗಟ್ಟಿಚಿಪ್ಪುವಿರುವ ಹಣ್ಣುಗಳು) ಇತ್ಯಾದಿ. ನಮ್ಮ ದೇಶದ ಬೆಳೆಯುವ ಹಲವಾರು ಉಷ್ಣವಲಯದ ಬೆಳೆಗಳಲ್ಲಿ ಪ್ರಮುಖವಾದ ಬೆಳೆಗಳೆಂದರೆ, ಭತ್ತ, ಕಾಫಿ, ಕಬ್ಬು, ಸೆಣಬು (Jute) ಮಸಾಲೆ ಪದಾರ್ಥಗಳು, ಸಿಂಕೋನ ಮರ, ಭಾರತೀಯ ರಬ್ಬರ ಪೈನಾಪಲ್, ಬಾಳೆಹಣ್ಣು ಮತ್ತಿತರ ಉಷ್ಣವಲಯದ ಹಣ್ಣುಗಳು ಇತ್ಯಾದಿ. ಪ್ರಧಾನ ಉಪ-ಉಷ್ಣವಲಯದ ಬೆಳೆಗಳೆಂದರೆ, ಹತ್ತಿ, ಚಹಾ ಮತ್ತು ಓಪಿಯಮ್ (Opium) ಇಷ್ಟಲ್ಲದೆ, ನಮ್ಮ ದೇಶ ಹಲವಾರು ಕಲಬೆರಕೆಯ ಅಥವಾ ನಾನಾ ಪ್ರಕಾರದ ಪದಾರ್ಥಗಳನ್ನು ಅಂದರೆ, ಹಲವಾರು ವಿವಿಧ ಎಣ್ಣೆ-ಕಾಳುಗಳನ್ನು, ಮರವನ್ನು ಅಂಟುಗಳನ್ನು (Gums) ಸಹ ಬೆಳೆಯುತ್ತದೆ. ಭಾರತದಂತೆ ಕರ್ನಾಟಕ ರಾಜ್ಯವು ಸಹ ಇನ್ನೊಬ್ಬರು ಆಶ್ಚರ್ಯಪಡುವಂತಹ ಹಲವಾರು ಬಗೆಯ ಬೆಳೆಗಳನ್ನು ಬೆಳೆಯುತ್ತದೆ. ಆದರೆ, ಬೀದರ ಜಿಲ್ಲೆ

ತುಲನಾತ್ಮಕವಾಗಿ (ಭಾರತದಂತೆ ಮತ್ತು ಕರ್ನಾಟಕ ರಾಜ್ಯದಂತೆ) ಹಲವಾರು ಬೆಳೆಗಳಿಗೆ ಅವಕಾಶ ನೀಡಿಲ್ಲ. ಇವರ ಮುಖ್ಯ ಬೆಳೆಗಳು, ಭತ್ತ, ಬಿಳಿ ಜೋಳ, ಸಜ್ಜೆ, ಗೋದಿ, ಮುಸುಕಿನ ಜೋಳ, ಕಡಲೆ, ತೊಗರಿ, ನೆಲಗಡಲೆ, ಕಬ್ಬು, ಹತ್ತಿ, ಎಳ್ಳು, ಕಾರೋಳು, ಫುಂಡಿ, ಬಿಳಿಜೋಳ ಅಲ್ಲದೆ ಇನ್ನಿತರ ಹಲವಾರು ಬಗೆಯ ಜೋಳಗಳಿಗೆ ಮಾತ್ರ ಎಡೆಮಾಡಿಕೊಟ್ಟಿದೆ. ಈ ಎಲ್ಲ ಬೆಳೆಗಳನ್ನು ಮೇಲ್ಜಾತಿಯ ಎಲ್ಲ ಜನ ಬೆಳೆಯುತ್ತಾರೆ. ಆದರೆ, ಬೇಡ ಬುಡಕಟ್ಟಿನವರು ಫಲವತ್ತಾದ ಭೂಮಿಯನ್ನು ಹೊಂದಿರದೇ ಇರುವುದರಿಂದ ಮತ್ತು ನೀರಾವರಿ ಸೌಲಭ್ಯವನ್ನು ಹೆಚ್ಚಾಗಿ ಹೊಂದದೆ ಇರುವುದರಿಂದ, ಕೆಲವು ಬೆಳೆಗಳನ್ನು ಮಾತ್ರ ಬೆಳೆಯುತ್ತಿದ್ದಾರೆ.

ಬೇಡ ಸಮುದಾಯದ ಆಹಾರ ಮತ್ತು ದ್ವಿದಳ ಧಾನ್ಯಗಳ (Pulses) ಬೆಳೆಗಳ ವಿವರ

ಬೇಡರ ಖರೀಫ್ ಬೆಳೆಗಳು ಭತ್ತ ೮೬.೫೦ ಎಕರೆ (ಶೇ. ೬.೧೨) ಹೈಬ್ರಿಡ್ ಜೋಳ ೪೫೦.೭೫ ಎಕರೆ (ಶೇ. ೧೦.೩೧); ಹಸಿರುಜೋಳ ೨೦೦.೫೦ ಎಕರೆ (ಶೇ. ೪.೫೮); ಹೈಬ್ರಿಡ್ ಸಜ್ಜೆ ೩೦೦.೪೫ ಎಕರೆ (ಶೇ. ೬.೮೭) ಮತ್ತು ಬಿಳಿಜೋಳ ೧೫೨.೨೫ ಎಕರೆ ಮಾತ್ರ. ಇವುಗಳೆಲ್ಲವೂ ಆಹಾರ ಬೆಳೆಗಳು. ಇವರು ಬೆಳೆಯುವ ದ್ವಿದಳ ಧಾನ್ಯಗಳು ತೊಗರಿ, ಹೆಸರು, ಉದ್ದು ಮತ್ತು ಕಡಲೆಯಾಗಿವೆ. ಕಬ್ಬು ನೆಲಗಡಲೆ, ಸೂರ್ಯಪಾನ ಮತ್ತು ಎಳ್ಳು ಇವರ ವಾಣಿಜ್ಯ ಬೆಳೆಗಳಾಗಿವೆ (ಹೆಚ್ಚಿನ ವಿವರಗಳಿಗಾಗಿ ಕೋಷ್ಠಕ ೫.೧೦ ನೋಡಿ).

ತಾಲೂಕಾವಾರು ಆಹಾರ, ದ್ವಿದಳ ಮತ್ತು ವಾಣಿಜ್ಯ ಬೆಳೆಗಳು

ತಾಲೂಕಾವಾರು ವಿವರಗಳನ್ನು ಅವಲೋಕಿಸಿದಾಗ, ಬೇಡರು ಭಾಲ್ಕಿಯಲ್ಲಿ ಸ್ವಲ್ಪ ಹೆಚ್ಚಾಗಿಯೇ ದ್ವಿದಳ ಧಾನ್ಯಗಳನ್ನು ಬೆಳೆದಿರುತ್ತಾರೆ. (ಶೇ. ೬೪.೧೯) (ವಿವರಗಳಿಗಾಗಿ ಕೋಷ್ಠಕ ೫.೧೨ ನೋಡಿ) ತುಲನಾತ್ಮಕವಾಗಿ ಬಸವಕಲ್ಯಾಣ ತಾಲೂಕವು ಆಹಾರ ಬೆಳೆಗಳನ್ನು ಬೆಳೆಯುವವಲ್ಲಿ ಇತರ ತಾಲೂಕುಗಳಿಗಿಂತ ಮುಂದಾಗಿದೆ. ಭಾಲ್ಕಿ ತಾಲೂಕವು ವಾಣಿಜ್ಯ ಬೆಳೆಗಳನ್ನು ಬೆಳೆಯುವಲ್ಲಿ ಇತರ ತಾಲೂಕಾಗಳಿಗಿಂತ ತುಲನಾತ್ಮಕವಾಗಿ ಮುಂದಿದೆ (ಶೇ. ೧೧.೩೨).

ಕೋಷ್ಠಕ- ೫.೧೨ ಬೀದರ ಜಿಲ್ಲೆಯ ಬೇಡರ ಬೆಳೆಯ ವಿಧಾನ (ತಾಲೂಕಾವಾರು)

ಕ್ರಮ ಸಂಖ್ಯೆ	ತಾಲೂಕಿನ ಹೆಸರು	ಆಹಾರ ಬೆಳೆಗಳು	ದ್ವಿದಳ ದಾನ್ಯಗಳು	ವಾಣಿಜ್ಯ ಬೆಳೆಗಳು	ಒಟ್ಟು
೧.	ಬಸವಕಲ್ಯಾಣ	೧೨೬೯ (೨೯.೯೯)	೨೭೫.೧೭ (೬೪.೧೯)	೨೪೬ (೫.೮೨)	೪೨೩೦.೧೭ (೯೬.೭೨)
೨.	ಹುಮನಾಬಾದ	೨೮.೩೩ (೨೯.೭೦)	೫೫ (೬೦.೮೯)	೦೭ (೯.೪೧)	೯೦.೩೩ (೨.೦೬)
೩.	ಭಾಲ್ಕಿ	೨೦ (೨೬.೪೨)	೩೩ (೬೨.೨೬)	-	೫೩ (೧.೨೬)
	ಒಟ್ಟು	೧೩೧೭.೩೩ (೩೦.೧೩)	೨೮೦೩.೧೭ (೬೪.೦೯)	೨೫೩ (೫.೭೮) (೫.೫೩)	೪೩೭೩.೫೦ (೧೦೦.೦೦)

ಆಹಾರ ಮತ್ತು ಆಹಾರೇತರ ಬೆಳೆಗಳ ಮೇಲಿನ ಪ್ರಾಧಾನ್ಯತೆ

ದ್ವಿದಳ ಧಾನ್ಯಗಳನ್ನು ಆಹಾರ ಬೆಳೆಗಳಲ್ಲಿಯೇ ಕೂಡಿಸಿಕೊಳ್ಳುವುದು ಒಂದು ರೂಢಿಯಾಗಿದೆ. ಕೆಲವೇ ಕೆಲವು ಬೆಳೆಗಳನ್ನು ಅಂದರೆ, ಹತ್ತಿ, ನೆಲಗಡಲೆ, ಇತರ ಎಣ್ಣೆ ಕಾಳುಗಳು, ತಂಬಾಕು, ಸೆಣಬು, ಸೂರ್ಯಪಾನ, ಎಳ್ಳು, ಕುಸಬೆ, ಮುಂತಾದವುಗಳನ್ನು ವಾಣಿಜ್ಯ ಬೆಳೆಗಳೆಂದು ಪ್ರತ್ಯೇಕವಾಗಿ ಹೇಳಲಾಗುತ್ತದೆ. ಒಂದು ದೇಶದ ಈ ತರಹದ ಬೆಳೆಯ ವಿಧಾನದ (Cropping pattern) ವರ್ಗೀಕರಣ, ಯಾವುದೇ ಒಂದು ಕಾಲದಲ್ಲಿ ಆಹಾರ ಬೆಳೆಗಳಿಗೆ ಹೆಚ್ಚು ಅವಕಾಶ ಮಾಡಿಕೊಡುತ್ತದೆ. ಆದುದರಿಂದಲೇ ಭಾರತದಲ್ಲಿ ಶೇ. ೭೫ರಷ್ಟು ಸಾಗುವಳಿ ಭೂಮಿ ಆಹಾರ ಧಾನ್ಯಗಳನ್ನು ಬೆಳೆಯುವುದಕ್ಕಾಗಿಯೆ ಇದೆಯೆಂದು ಸಾಧಿಸಲಾಗಿದೆ[೩೬]. ಬೇಡ ಸಮುದಾಯದ ಬೆಳೆಯ ಮಾದರಿ ಬಗೆಗೆ ಹೇಳುವುದಾದರೆ, ಆಹಾರ ಬೆಳೆಯ ಒಟ್ಟು ಪ್ರಮಾಣ ಭಾರತ ದೇಶಕ್ಕಿಂತಲೂ ಅಧಿಕವಾಗಿರುತ್ತದೆ. (ಶೇ. ೮೭.೬೧) ಮತ್ತು ವಾಣಿಜ್ಯ ಬೆಳೆಗಳ ಪ್ರಮಾಣ ಬಹಳ ಕಡಿಮೆಯಿದೆ (ಶೇ. ೧೨.೩೯)[೩೭].

ಬೇಡರ ಕಡಿಮೆ ಮತ್ತು ಹೆಚ್ಚು ಮೌಲ್ಯವಿರುವ ಆಹಾರ ಬೆಳೆಗಳು

ಯಾವುದೇ ಸಮುದಾಯದ ರೈತರು ಆರ್ಥಿಕವಾಗಿ ಮುಂದೆ ಬರುವಲ್ಲಿ ಅವರು ಬೆಳೆಯುವ ಹೆಚ್ಚು ಮೌಲ್ಯವಿರುವ ಆಹಾರ ಬೆಳೆಗಳ ಪ್ರಮಾಣ ಮಹತ್ವದ ಪಾತ್ರವನ್ನು ವಹಿಸುತ್ತದೆ. ವಾಣಿಜ್ಯ ಬೆಳೆಗಳಿಗೆ ಹೋಲಿಸಿದಾಗ, ಆಹಾರ ಬೆಳೆಗಳು ಸಾಮಾನ್ಯವಾಗಿ ಕಡಿಮೆ ಮೌಲ್ಯವನ್ನು ಹೊಂದಿದ್ದರೂ, ಒಂದು ವೇಳೆ ಹೆಚ್ಚು ಮೌಲ್ಯವಿರುವ ಆಹಾರ ಬೆಳೆಗಳ ಪ್ರಮಾಣ ಹೆಚ್ಚಿದ್ದಲ್ಲಿ ರೈತರು ಶ್ರೀಮಂತರಾಗುವಲ್ಲಿ ಯಾವ ಸಂದೇಹವೂ ಇಲ್ಲ. ಉದಾಹರಣೆಗೆ ಭತ್ತ ಬೆಳೆಯುವ ಆಂಧ್ರದ ರೈತರು, ಅವರು ಬೆಳೆಯುವ 'ಭತ್ತ' ಆಹಾರ ಬೆಳೆಯಾದರೂ, ಅದು ಹೆಚ್ಚಿನ ಮೌಲ್ಯವನ್ನು ಹೊಂದಿರುವುದರಿಂದ ಶ್ರಿಮಂತರಾಗಿರುತ್ತಾರೆ. ಪಂಜಾಬ ಮತ್ತು ಹರಿಯಾಣ ರಾಜ್ಯಗಳ ರೈತರ ಆಹಾರ ಬೆಳೆಯಾದ ಗೋದಿಯನ್ನು ಬೆಳೆದರೂ, ಆಂಧ್ರದ ರೈತರಂತೆ ಶ್ರೀಮಂತರಾಗಿರುತ್ತಾರೆ. ೧೯೬೭-೬೮ರಲ್ಲಿ 'ಹಸಿರು ಕ್ರಾಂತಿ' ಭಾರತದಲ್ಲಿ ಉಂಟಾಯಿತು. ಪ್ರಪ್ರಥಮದಲ್ಲಿ ಪಂಜಾಬ ಮತ್ತು ಹರಿಯಾಣ ರಾಜ್ಯಗಳ ರೈತರು ಸುಧಾರಿತ ತಳಿಯ ಗೋದಿ ಬೀಜಗಳನ್ನು ಹೆಚ್ಚಾಗಿ ಉಪಯೋಗಿಸಿ, ಗೋದಿಯ ಉತ್ಪಾದನೆಯನ್ನು ಅಧಿಕಗೊಳಿಸಿದರಲ್ಲದೆ, ಅದನ್ನು ಮಾರಿ ಹೆಚ್ಚಿನ ಆದಾಯವನ್ನು ಪಡೆದರು. ಈ ಹೈಬ್ರೀಡ್ ಗೋಧಿಯ ಪ್ರತಿ ಎಕರೆಯ ಉತ್ಪಾದನೆ ಅಧಿಕವಾದುದಲ್ಲದೆ, ಅದು ಹೆಚ್ಚಿನ ಮೌಲ್ಯವುಳ್ಳ ಆಹಾರ ಧಾನ್ಯವಾದುದರಿಂದ ರೈತರು ಶ್ರಿಮಂತರಾದರು, ಆ ನಂತರ ಭತ್ತದಲ್ಲಿಯೂ ಸಹ ಸುಧಾರಿತ ತಳಿಯ ಬೀಜಗಳು ಬಳಕೆಗೆ ಬಂದವು. ಇದು ಭತ್ತ ಬೆಳೆಯುವ ರೈತರನ್ನು ಶ್ರೀಮಂತರನ್ನಾಗಿಸಿತ್ತು. ೧೯೭೦ ಮತ್ತು ೧೯೮೦ರಲ್ಲಿ ಸಜ್ಜೆ, ಜೋಳ, ಕಬ್ಬು, ನೆಲಗಡಲೆ, ಹತ್ತಿ ಮುಂತಾದ

ಬೆಳೆಗಳಲ್ಲಿಯೂ ಸುಧಾರಿತ ತಳಿಯ ಬೀಜಗಳ ಬಳಕೆ ಹೆಚ್ಚಾಗಲಾರಂಭವಾಯಿತು. ಭಾರತ ದೇಶದಂತೆ, ಕರ್ನಾಟಕದಲ್ಲಿಯೂ ಭಾಗಶಃ ಹಸಿರು ಕ್ರಾಂತಿ ಉಂಟಾಗಿ ನೀರಾವರಿ ಕ್ಷೇತ್ರದಲ್ಲಿನ ರೈತರನ್ನು ಶ್ರೀಮಂತರನ್ನಾಗಿಸಿತ್ತು[೩೮].

ಹಸಿರು ಕ್ರಾಂತಿಯು, ಕರ್ನಾಟಕ ರಾಜ್ಯದ ಮತ್ತು ಬೀದರ ಜಿಲ್ಲೆಯ ಎಲ್ಲ ರೈತರಿಗೆ ಅನುಕೂಲ ಮಾಡಿಕೊಟ್ಟಿಲ್ಲ. 'ಹಸಿರು ಕ್ರಾಂತಿ'. ಪ್ರಮುಖವಾಗಿ, ನೀರಾವರಿ ಸೌಲಭ್ಯ ಇರುವ ಪ್ರದೇಶದಲ್ಲಿ ಹರಡಿದೆ. ಬೀದರ ಜಿಲ್ಲೆಯ ನೀರಾವರಿಯ ಕ್ಷೇತ್ರ ಶೇ. ೧೦ ಕ್ಕಿಂತಲೂ ಕಡಿಮೆಯಿದೆ. ಮುಂದುವರಿದು, ಈ ಅಲ್ಪ ಪ್ರಮಾಣದ ನೀರಾವರಿ ಮೇಲ್ಜಾತಿಯ ಜನರಿಗೆ ಹೆಚ್ಚಾಗಿ ಲಭ್ಯವಾಗಿದೆ. ಬುಡಕಟ್ಟಿನ ಜನರಾದ ಬೇಡರು ಇದರಿಂದ ವಂಚಿತರಾಗಿರುತ್ತಾರೆ. ಆದುದರಿಂದ, ಇವರು ಬೆಳೆಯುವ ಬೆಳೆಗಳು ಹೆಚ್ಚಾಗಿ ಕಡಿಮೆ ಮೌಲ್ಯದ ಬೆಳೆಗಳಾಗಿವೆ. ಇವರು ಬೆಳೆಯುವ ಆಹಾರ ಬೆಳೆಗಳಲ್ಲಿ ಭತ್ತವು ತುಲನಾತ್ಮಕವಾಗಿ ಹೆಚ್ಚಿನ ಮೌಲ್ಯವನ್ನು ಹೊಂದಿದ ಬೆಳೆ. ಆದರೆ, ಇದರ ಕ್ಷೇತ್ರ ಕೇವಲ ೮೬.೫೦ ಎಕರೆಗಳು (ಶೇ. ೧.೯೮) ಇವರ ಹಸಿರು ಜೋಳದ ಕ್ಷೇತ್ರ ೨೦೦.೫೦ ಎಕರೆಗಳು (ಶೇ. ೪.೫೮) ಮತ್ತು ಇದು ಕಡಿಮೆ ಮೌಲ್ಯದ ಆಹಾರ ಬೆಳೆಯಾಗಿದೆ. ಇತ್ತೀಚೆಗೆ ಇವರು ಹೈಬ್ರೀಡ್ ಜೋಳ ಮತ್ತು ಹೈಬ್ರೀಡ್ ಸಜ್ಜೆಗಳನ್ನು ಬೆಳೆಯುತ್ತಿದ್ದಾರೆ. ಇದೊಂದು ಒಳ್ಳೆಯ ಬೆಳವಣಿಗೆಯಾಗಿದೆ.

ಬೇಡರ ಆಹಾರ ಬೆಳೆಗಳ ಮತ್ತು ವಾಣಿಜ್ಯ ಬೆಳೆಗಳ ಪ್ರಮಾಣ

ಈಗಾಗಲೇ ಹೇಳಿರುವಂತೆ, ಇವರ ವಾಣಿಜ್ಯ ಬೆಳೆಯ ಕ್ಷೇತ್ರ ಶೇ. ೧೨.೩೯ ಆಗಿದೆ, (ಕಬ್ಬು, ನೆಲಗಡಲೆ, ಸೂರ್ಯಪಾನ ಮತ್ತು ಎಳ್ಳು) ಮತ್ತು ಇದು ಬಹಳ ಕಡಿಮೆ ಪ್ರಮಾಣದಾಗಿದೆ. ಜನಪ್ರೀಯ ವಾಣಿಜ್ಯ ಬೆಳೆಗಳಾದ ಕಬ್ಬು ಮತ್ತು ನೆಲಗಡಲೆಗಳನ್ನು ಅಷ್ಟಾಗಿ ಇವರು ಬೆಳೆಯುತ್ತಿಲ್ಲ. ಇದಕ್ಕೆ ಪ್ರಮುಖವಾದ ಕಾರಣ ನೀರಾವರಿಯ ಸೌಲಭ್ಯದ ಕೊರತೆಯಾಗಿದೆ. ಹೈದ್ರಾಬಾದ ಕರ್ನಾಟಕ ಪ್ರದೇಶದಲ್ಲಿನ ಜಿಲ್ಲೆಯಾದ ಬೀದರನಲ್ಲಿ ದ್ವಿದಳ ಧಾನ್ಯವಾದ ತೊಗರಿಯನ್ನು ಸಹ ಒಂದು ವಾಣಿಜ್ಯ ಬೆಳೆಯೆಂದೇ ಪರಿಗಣಿಸಲಾಗಿದೆ. ತೊಗರಿ ಬೆಳೆಯನ್ನು ಮಾರಿ ಸ್ವಲ್ಪ ಹಣವನ್ನು ಸಹ ರೈತರು ಪಡೆಯುತ್ತಿದ್ದಾರೆ. ಕಬ್ಬು ಇನ್ನೊಂದು ವಾಣಿಜ್ಯ ಬೆಳೆಯಾಗಿದೆ. ನೀರಾವರಿ ಭೂಮಿಯಲ್ಲಿ ಇದನ್ನು ಬೆಳೆಯಲಾಗುತ್ತದೆ. 'ಮಳ' ಎಂದು ಇದನ್ನು ಕರೆಯಲಾಗುತ್ತದೆ. ಕಬ್ಬಿನಿಂದ ಘಾಣಾ (ಕಬ್ಬು ಹಿಂಡಿ ಬೆಲ್ಲ ಮಾಡುವ ವಿಧಾನ)ವನ್ನು ಮಾಡಲಾಗುತ್ತದೆ. ಅಲ್ಲದೆ, ಕೆಲವು ರೈತರು ಸಕ್ಕರೆ ಕಾರ್ಖಾನೆಗೆ ಕಬ್ಬು ಮಾರಾಟ ಮಾಡುತ್ತಿರುತ್ತಾರೆ.

ಬೇಡರ ಭೂ-ಹಿಡುವಳಿ ಗಾತ್ರದ ಪ್ರಕಾರ ಬೆಳೆಗಳು

ಬೇಡ ರೈತರು ಬೆಳೆಯುವ ಪ್ರಮುಖ ಆಹಾರ ಬೆಳೆಗಳು ಹೈಬ್ರೀಡ್ ಸಜ್ಜೆ, ಹೈಬ್ರೀಡ್ ಜೋಳ, ಹಸಿರು ಜೋಳ, ಭತ್ತ ಮತ್ತು ಬಿಳಿಜೋಳ. ಇವರ ಪ್ರಮುಖ ದ್ವಿದಳ ಧಾನ್ಯಗಳು, ತೊಗರಿ, ಹೆಸರು ಮತ್ತು ವಾಣಿಜ್ಯ ಬೆಳೆಗಳು ಕಬ್ಬು, ನೆಲಗಡಲೆ ಮತ್ತು ಸೂರ್ಯಪಾನ್ಸ್.

ಅ. ಹೈಬ್ರೀಡ್ ಜೋಳ

ಬೇಡ ರೈತರ ಪ್ರಮುಖ ಆಹಾರ ಬೆಳೆಗಳಲ್ಲಿ ಹೈಬ್ರೀಡ್ ಜೋಳ ಒಂದಾಗಿದೆ. ಕರ್ನಾಟಕ ರಾಜ್ಯ ಮತ್ತು ಭಾರತದ ಪ್ರಮುಖ ಆಹಾರ ಬೆಳೆ ಸಹ ಹೈಬ್ರಿಡ್ ಜೋಳವಾಗಿರುತ್ತದೆ. ಧಾನ್ಯವನ್ನು ದಿನಾಂಕ ೨೬-೯-೨೦೦೧ ಎಲ್ಲ ಭೂ-ಹಿಡುವಳಿಯ ಗಾತ್ರದ ರೈತರು ಬೆಳೆಯುತ್ತಿದ್ದಾರೆ. ಉದಾಹರಣೆಗೆ ಈ ಬೆಳೆಯು ೨೦ ಎಕರೆ; ೮೦ ಎಕರೆ; ೯೦ ಎಕರೆ; ೧೪೦ ಎಕರೆ ಮತ್ತು ೧೨೦.೭೫ ಎಕರೆಯಂತೆ ಕ್ರಮವಾಗಿ ದೊಡ್ಡ, ಮಧ್ಯಮ, ಅರೆ-ಮಧ್ಯಮ, ಸಣ್ಣ ಮತ್ತು ಅತಿ ಸಣ್ಣ ರೈತರು ಬೆಳೆಯುತ್ತಿದ್ದಾರೆ. ಅರೆ ಮಧ್ಯಮ ಭೂ-ಹಿಡುವಳಿ ಹೊಂದಿರುವ ರೈತರ ಶೇ. ೩೧.೦೬ ಭೂಮಿಯಲ್ಲಿ ಹೈಬ್ರೀಡ್ ಜೋಳವನ್ನು ಬೆಳೆಯಲಾಗುತ್ತದೆ (ವಿವರಗಳಿಗಾಗಿ ೫.೧೩ ಕೋಷ್ಠಕ ನೋಡಿ)

ಕೋಷ್ಠಕ ೫.೧೩ ಹೈಬ್ರೀಡ್ ಜೋಳ ಬೆಳೆಯ ವಿವರ

ಕ್ರಮ ಸಂಖ್ಯೆ	ಭೂ-ಹಿಡುವಳಿ ಗಾತ್ರಗಳು	ಎಕರೆಗಳಲ್ಲಿ	ಶೇಕಡಾ
೧.	ದೊಡ್ಡ ಗಾತ್ರದ ಭೂ-ಹಿಡುವಳಿಗಳು	೨೦	೪.೪೩
೨.	ಮಧ್ಯಮ ಗಾತ್ರದ ಭೂ-ಹಿಡುವಳಿಗಳು	೮೦	೧೭.೭೫
೩.	ಅರೆ ಮಧ್ಯಮ ಗಾತ್ರದ ಭೂ-ಹಿಡುವಳಿಗಳು	೯೦	೧೯.೬೭
೪.	ಸಣ್ಣ ಗಾತ್ರದ ಭೂ-ಹಿಡುವಳಿಗಳು	೧೪೦	೩೧.೦೬
೫.	ಅತಿ ಸಣ್ಣ ಗಾತ್ರದ ಭೂ-ಹಿಡುವಳಿಗಳು	೧೨೦.೭೫	೨೬.೭೯
	ಒಟ್ಟು	೪೫೦.೭೫	೧೦೦.೦೦

ಹಸಿರು ಜೋಳ (ಹಜ್ಜೋಳ)

ಹಸಿರು ಜೋಳವು ಒಂದು ಕಡಿಮೆ ದರ್ಜೆಯ ಜೋಳವೆಂದು ಪರಿಗಣಿಸಿದ್ದರೂ ಊಟಕ್ಕೆ ಉತ್ತಮ ಜೋಳವಾಗಿದೆ. ಆದರೆ, ಇದು ಕಡಿಮೆ ಫಲವತ್ತತೆಯ ಭೂಮಿಯಲ್ಲಿ ಹೆಚ್ಚು-ಕಡಿಮೆ ಚೆನ್ನಾಗಿ ಬೆಳೆಯುತ್ತದೆ. ಹಸಿರು ಜೋಳದ ಒಟ್ಟು ಭೂ-ಪ್ರದೇಶ ೨೦೦.೫೦ ಆಗಿದೆ. ಈ ಬೆಳೆಯನ್ನು ಹೆಚ್ಚಾಗಿ ಸಣ್ಣ ರೈತರು ಮತ್ತು ಅತಿ ಸಣ್ಣ ರೈತರು ಬೆಳೆದಿದ್ದಾರೆ. ದೊಡ್ಡ ಭೂ-ಹಿಡುವಳಿದಾರರು ಅತ್ಯಂತ ಕಡಿಮೆ ಕ್ಷೇತ್ರದಲ್ಲಿ ಹಸಿರು ಜೋಳವನ್ನು ಬೆಳೆದಿದ್ದಾರೆ. (ವಿವರಗಳಿಗಾಗಿ ಕೋಷ್ಠಕ ೫.೧೪).

ಕೋಷ್ಟಕ ೫.೧೪ ಹಸಿರು ಜೋಳ ಬೆಳೆಯ ವಿವರ

ಕ್ರಮ ಸಂಖ್ಯೆ	ಭೂ-ಹಿಡುವಳಿ ಗಾತ್ರಗಳು	ಎಕರೆಗಳಲ್ಲಿ	ಶೇಕಡಾ
೧.	ದೊಡ್ಡ ಗಾತ್ರದ ಭೂ-ಹಿಡುವಳಿಗಳು	೨೦.೧೫	೧೦.೦೫
೨.	ಮಧ್ಯಮ ಗಾತ್ರದ ಭೂ-ಹಿಡುವಳಿಗಳು	೨೫.೦೦	೧೨.೪೭
೩.	ಅರೆ ಮಧ್ಯಮ ಗಾತ್ರದ ಭೂ-ಹಿಡುವಳಿಗಳು	೩೫.೫೦	೧೭.೭೦
೪.	ಸಣ್ಣ ಗಾತ್ರದ ಭೂ-ಹಿಡುವಳಿಗಳು	೮೩.೫೦	೪೧.೬೮
೫.	ಅತಿ ಸಣ್ಣ ಗಾತ್ರದ ಭೂ-ಹಿಡುವಳಿಗಳು	೩೬.೩೫	೧೮.೧೦
	ಒಟ್ಟು	೨೦೦.೫೦	೧೦೦.೦೦

ಬ. ಹೈಬ್ರೀಡ್ ಸಜ್ಜೆ

ಜೋಳದಂತೆ, ಸಜ್ಜೆಯನ್ನು ಸಹ ಎಲ್ಲಾ ತರಹದ ಭೂ-ಹಿಡುವಳಿಯುಳ್ಳ ರೈತರು ಬೆಳೆಯುತ್ತಾರೆ. ಸಜ್ಜೆಯು ಸಹ ಜೋಳದಂತೆ ಒಂದು ನಿಕೃಷ್ಠ ಧಾನ್ಯವಾಗಿರುತ್ತದೆ. ಕಡಿಮೆ ಫಲವತ್ತತೆಯ ಮತ್ತು ಕಡಿಮೆ ಮಳೆ ಬೀಳುವ ಪ್ರದೇಶವಾದ ಬೀದರ ಜಿಲ್ಲೆಯಲ್ಲಿ ಈ ಧಾನ್ಯವನ್ನು ಬೆಳೆಯುವುದು ಸುಲಭವಾಗಿದೆ. ಆದುದರಿಂದ, ೨೦೦.೫೦ ಎಕರೆ ಜಮೀನಿನಲ್ಲಿ ಇದನ್ನು ಬೆಳೆಯಲಾಗಿದೆ. ವಿವಿಧ ಭೂ-ಹಿಡುವಳಿಗಳಲ್ಲಿ, ಸಣ್ಣ ಭೂ-ಹಿಡುವಳಿಗಳ ರೈತರು ಸಜ್ಜೆಯನ್ನು ಅಧಿಕವಾಗಿ ಬೆಳೆದಿದ್ದಾರೆ (ಶೇ. ೩೦.೯೩) ಮತ್ತು ಇವರನ್ನು ಬಿಟ್ಟರೆ, ಅತಿ ಸಣ್ಣ ರೈತರು ಭೂಮಿಯಲ್ಲಿ ಶೇ. ೨೪.೯೩ ರಷ್ಟು ಪ್ರದೇಶದಲ್ಲಿ ಸಜ್ಜೆಯನ್ನು ಬೆಳೆಯಲಾಗುತ್ತದೆ. ಭೂಮಿಯ ಗಾತ್ರ ಹೆಚ್ಚಿದಂತೆ, ನಿಕೃಷ್ಠ ಬೆಳೆಯಾದ ಸಜ್ಜೆಯ ಪ್ರಾಮುಖ್ಯತೆ ಕಡಿಮೆಯಾಗುತ್ತಾ ಹೋಗುತ್ತದೆ. ಆದುದರಿಂದಲೇ ದೊಡ್ಡ ಪ್ರಮಾಣದ ಭೂ-ಹಿಡುವಳಿಗಳನ್ನುಳ್ಳ ರೈತರು ಕೇವಲ ಶೇ. ೧೦.೩೫ ಪ್ರದೇಶದಲ್ಲಿ ಸಜ್ಜೆಯನ್ನು ಬೆಳೆದಿದ್ದಾರೆ (ವಿವರಗಳಿಗಾಗಿ ಕೋಷ್ಠಕ ೫.೧೫ ನೋಡಿ).

ಕೋಷ್ಟಕ ೫.೧೫ ಹೈಬ್ರೀಡ್ ಸಜ್ಜೆ ಬೆಳೆಯ ವಿವರ

ಕ್ರಮ ಸಂಖ್ಯೆ	ಭೂ-ಹಿಡುವಳಿ ಗಾತ್ರಗಳು	ಎಕರೆಗಳಲ್ಲಿ	ಶೇಕಡಾ
೧.	ದೊಡ್ಡ ಗಾತ್ರದ ಭೂ-ಹಿಡುವಳಿಗಳು	೨೦.೨೫	೧೦.೩೫
೨.	ಮಧ್ಯಮ ಗಾತ್ರದ ಭೂ-ಹಿಡುವಳಿಗಳು	೨೭.೭೫	೧೩.೮೪
೩.	ಅರೆ ಮಧ್ಯಮ ಗಾತ್ರದ ಭೂ-ಹಿಡುವಳಿಗಳು	೪೦.೫೦	೨೦.೧೯
೪.	ಸಣ್ಣ ಗಾತ್ರದ ಭೂ-ಹಿಡುವಳಿಗಳು	೬೨.೦೦	೩೦.೯೩
೫.	ಅತಿ ಸಣ್ಣ ಗಾತ್ರದ ಭೂ-ಹಿಡುವಳಿಗಳು	೫೦.೦೦	೨೪.೯೩
	ಒಟ್ಟು	೨೦೦.೫೦	೧೦೦.೦೦

ಭತ್ತ (ಕಳವಿ)

ಕಳವಿಯು ಭಾರತದ ಮುಖ್ಯ ಬೆಳೆಯಾಗಿದ್ದು, ಭತ್ತದ ಬೆಳೆಯಲ್ಲಿ ಭಾರತ ಜಗತ್ತಿನಲ್ಲಿ ಎರಡನೆಯ ಸ್ಥಾನದಲ್ಲಿದೆ. ನೀರಾವರಿ ಪ್ರದೇಶದಲ್ಲಿ ಇದೊಂದು ಜನಪ್ರೀಯ ಬೆಳೆಯಾಗಿರುತ್ತದೆ. ಬೀದರ ಜಿಲ್ಲೆಯಲ್ಲಿ ನೀರಾವರಿ ಸೌಲಭ್ಯವು ತುಲನಾತ್ಮಕವಾಗಿ ಕಡಿಮೆ ಪ್ರಮಾಣದ್ದಾಗಿದೆ. ಅದರಲ್ಲೂ ಬೇಡ ಸಮುದಾಯದ ರೈತರು ಅತ್ಯಂತ ಕಡಿಮೆ ಪ್ರಮಾಣದ ನೀರಾವರಿ ಸೌಲಭ್ಯವನ್ನು ಪಡೆದಿರುತ್ತಾರೆ. ಆದುದರಿಂದ ಕೇವಲ ೮೬.೫೦ ಎಕರೆ ಜಮೀನಿನಲ್ಲಿ ಮಾತ್ರ ವಿವಿಧ ಭೂ-ಹಿಡುವಳಿಗಳಲ್ಲಿ ಸಣ್ಣ ಭೂ-ಹಿಡುವಳಿಗಳ ಮಾಲಿಕರು ತುಲನಾತ್ಮಕವಾಗಿ ಹೆಚ್ಚಿನ ಕ್ಷೇತ್ರದಲ್ಲಿ ೩೯.೫ ಎಕರೆಗಳಲ್ಲಿ (ಶೇ. ೪೫.೬೬) ಭತ್ತವನ್ನು ಬೆಳೆದಿದ್ದಾರೆ. ದೊಡ್ಡ ಭೂ-ಹಿಡುವಳಿಗಳ ರೈತರ ಭೂಮಿಗೆ ನೀರಾವರಿ ಸೌಲಭ್ಯ ಇಲ್ಲದಿರುವುದರಿಂದ ಕೇವಲ ೭ ಎಕರೆ ಭೂಮಿಯಲ್ಲಿ (ಶೇ. ೮.೦೮) ಭತ್ತವನ್ನು ಬೆಳೆದಿರುತ್ತಾರೆ (ವಿವರಗಳಿಗಾಗಿ ಕೋಷ್ಟಕ ೫.೧೬ ನೋಡಿ).

ಕೋಷ್ಟಕ ೫.೧೬ ಭತ್ತ ಬೆಳೆಯ ವಿವರ

ಕ್ರಮ ಸಂಖ್ಯೆ	ಭೂ-ಹಿಡುವಳಿ ಗಾತ್ರಗಳು	ಎಕರೆಗಳಲ್ಲಿ	ಶೇಕಡಾ
೧.	ದೊಡ್ಡ ಗಾತ್ರದ ಭೂ-ಹಿಡುವಳಿಗಳು	೭	೮.೦೯
೨.	ಮಧ್ಯಮ ಗಾತ್ರದ ಭೂ-ಹಿಡುವಳಿಗಳು	೧೨	೧೩.೮೭
೩.	ಅರೆ ಮಧ್ಯಮ ಗಾತ್ರದ ಭೂ-ಹಿಡುವಳಿಗಳು	೧೩	೧೫.೦೩
೪.	ಸಣ್ಣ ಗಾತ್ರದ ಭೂ-ಹಿಡುವಳಿಗಳು	೩೯.೫	೪೫.೬೬
೫.	ಅತಿ ಸಣ್ಣ ಗಾತ್ರದ ಭೂ-ಹಿಡುವಳಿಗಳು	೧೫	೧೭.೩೫
	ಒಟ್ಟು	೮೬.೫೦	೧೦೦.೦೦

ತೊಗರಿ

ತೊಗರಿಯೊಂದು ಅತೀ ಪ್ರಮುಖವಾದ ಬೇಳೆಕಾಳು ಮತ್ತು ಒಂದು ದ್ವಿದಳ ಧಾನ್ಯ. ಬೀದರ ಜಿಲ್ಲೆಯನ್ನು ಒಳಗೊಂಡ ಗುಲಬರ್ಗಾ ವಿಭಾಗ 'ತೊಗರಿಯ ಕಣಜ' ಎಂದು ಕರೆಯುತ್ತಾರೆ. ಆದುದರಿಂದ, ಈ ಬೆಳೆಯ ಒಟ್ಟು ಕ್ಷೇತ್ರ ೨೬೮೦.೭೦ ಎಕರೆಯಾಗಿದೆ.

ವಿವಿಧ ಗಾತ್ರದ ಭೂ-ಹಿಡುವಳಿಗಳಲ್ಲಿ, ತೊಗರಿಯು ಸಣ್ಣ ಗಾತ್ರದ ಭೂ-ಹಿಡುವಳಿಗಳಲ್ಲಿ ಅತಿ ಜನಪ್ರೀಯವಾಗಿರುತ್ತದೆ (ಶೇ. ೪೧.೦೦) ಎರಡನೆಯದಾಗಿ ಇದು ಅರೆ-ಮಧ್ಯಮ ರೈತರಲ್ಲಿಯೂ ಒಂದು ಜನಪ್ರಿಯ ಬೆಳೆಯಾಗಿದೆ (ಶೇ. ೨೯.೮೩) ಶೇಕಡಾ ೩.೭೫ ರಷ್ಟು ಭೂಮಿಯಲ್ಲಿ ದೊಡ್ಡ ಪ್ರಮಾಣದ ರೈತರು ಈ ಬೆಳೆಯನ್ನು ಬೆಳೆಯುತ್ತಾರೆ (ವಿವರಗಳಿಗಾಗಿ ಕೋಷ್ಟಕ ೫.೧೭ ನೋಡಿ).

ಕೋಷ್ಠಕ ೫.೧೭ ತೊಗರಿ ಬೆಳೆಯ ವಿವರ

ಕ್ರಮ ಸಂಖ್ಯೆ	ಭೂ-ಹಿಡುವಳಿ ಗಾತ್ರಗಳು	ಎಕರೆಗಳಲ್ಲಿ	ಶೇಕಡಾ
೧.	ದೊಡ್ಡ ಗಾತ್ರದ ಭೂ-ಹಿಡುವಳಿಗಳು	೧೦೦.೫೦	೩.೭೫
೨.	ಮಧ್ಯಮ ಗಾತ್ರದ ಭೂ-ಹಿಡುವಳಿಗಳು	೪೦೦.೦೦	೧೪.೯೨
೩.	ಅರೆ ಮಧ್ಯಮ ಗಾತ್ರದ ಭೂ-ಹಿಡುವಳಿಗಳು	೮೦೦.೦೦	೨೯.೮೩
೪.	ಸಣ್ಣ ಗಾತ್ರದ ಭೂ-ಹಿಡುವಳಿಗಳು	೧೧೦೦.೦೦	೪೧.೦೦
೫.	ಅತಿ ಸಣ್ಣ ಗಾತ್ರದ ಭೂ-ಹಿಡುವಳಿಗಳು	೨೮೦.೦೦	೧೦.೪೦
	ಒಟ್ಟು	೨೬೮೦.೭೦	೧೦೦.೦೦

ಹೆಸರು

ತೊಗರಿಯ ನಂತರ ಬೇಳೆಕಾಳುಗಳಲ್ಲಿ ಎರಡನೆಯ ಸ್ಥಾನ ಸಿಕ್ಕಿರುವುದು ಹೆಸರಿಗೆ ಮಾತ್ರ. ಒಟ್ಟು ೧೫೨.೨೫ ಎಕರೆ ಜಮೀನಿನಲ್ಲಿ ಹೆಸರನ್ನು ಬೆಳೆಯಲಾಗಿದೆ. ಸಣ್ಣ ಭೂ-ಹಿಡುವಳಿದಾರರು ಹೆಚ್ಚಿನ ಪ್ರಮಾಣದಲ್ಲಿ (ಶೇ. ೩೨.೯೪) ಹೆಸರನ್ನು ಬೆಳೆಯುತ್ತಾರೆ. ಅರೆ-ಮಧ್ಯಮ ರೈತರಲ್ಲಿ ಶೇ. ೨೨.೧೭ ಹೆಸರನ್ನು ಬೆಳೆಯಲಾಗುತ್ತಿದೆ. ತುಲನಾತ್ಮಕವಾಗಿ ಅತ್ಯಂತ ಕಡಿಮೆ ಪ್ರಮಾಣದಲ್ಲಿ ಅತಿ ಸಣ್ಣ ಗಾತ್ರದ ರೈತರು ಈ ಬೆಳೆಯನ್ನು ಬೆಳೆದಿರುತ್ತಾರೆ (ವಿವರಗಳಿಗಾಗಿ ಕೋಷ್ಠಕ ೫.೧೮ ನೋಡಿ).

ಕೋಷ್ಠಕ ೫.೧೮ ಹೆಸರು ಬೆಳೆಯ ವಿವರ

ಕ್ರಮ ಸಂಖ್ಯೆ	ಭೂ-ಹಿಡುವಳಿ ಗಾತ್ರಗಳು	ಎಕರೆಗಳಲ್ಲಿ	ಶೇಕಡಾ
೧.	ದೊಡ್ಡ ಗಾತ್ರದ ಭೂ-ಹಿಡುವಳಿಗಳು	೨೦.೨೫	೧೩.೩೦
೨.	ಮಧ್ಯಮ ಗಾತ್ರದ ಭೂ-ಹಿಡುವಳಿಗಳು	೩೦.೦೦	೧೯.೭೦
೩.	ಅರೆ ಮಧ್ಯಮ ಗಾತ್ರದ ಭೂ-ಹಿಡುವಳಿಗಳು	೩೩.೭೫	೨೨.೧೭
೪.	ಸಣ್ಣ ಗಾತ್ರದ ಭೂ-ಹಿಡುವಳಿಗಳು	೫೦.೧೫	೩೨.೯೪
೫.	ಅತಿ ಸಣ್ಣ ಗಾತ್ರದ ಭೂ-ಹಿಡುವಳಿಗಳು	೧೮.೧೦	೧೧.೮೯
	ಒಟ್ಟು	೧೫೨.೨೫	೧೦೦.೦೦

ಕಬ್ಬು

ನಮ್ಮ ದೇಶ ಸಕ್ಕರೆ ಮತ್ತು ಕಬ್ಬಿನ ಉತ್ಪಾದನೆಯಲ್ಲಿ ಜಗತ್ತಿನಲ್ಲಿಯೇ ಪ್ರಥಮ ಸ್ಥಾನ ಪಡೆದಿರುತ್ತದೆ. ಭತ್ತದಂತೆ, ಕಬ್ಬನ್ನು ನೀರಾವರಿ ಸೌಲಭ್ಯ ಇದ್ದಲ್ಲಿ ಮಾತ್ರ ಬೆಳೆಯಲಾಗುತ್ತದೆ. ಅರೆ-ಮಧ್ಯಮ ಭೂ-ಹಿಡುವಳಿಗಳುಳ್ಳ ರೈತರು ಅತಿ ಹೆಚ್ಚಿನ ಪ್ರಮಾಣದಲ್ಲಿ (೧೪೪.೩೦ ಎಕರೆಗಳಲ್ಲಿ) ಕಬ್ಬನ್ನು ಬೆಳೆದಿದ್ದಾರೆ. ಕಬ್ಬನ್ನು ಬೆಳೆಯುವಲ್ಲಿ ಎರಡನೆಯ ಸ್ಥಾನ ಸಣ್ಣ ಪ್ರಮಾಣದ ರೈತರಿಗೆ ದಕ್ಕಿದೆ (೬೩ ಎಕರೆಗಳು) ಅತ್ಯಂತ ಕಡಿಮೆ ಪ್ರಮಾಣದಲ್ಲಿ ಕಬ್ಬನ್ನು ಅತೀ ಸಣ್ಣ ರೈತರು ಬೆಳೆದಿದ್ದಾರೆ (ವಿವರಗಳಿಗಾಗಿ ಕೋಷ್ಠಕ ೫.೧೯ ನೋಡಿ).

ಕೋಷ್ಟಕ ೫.೧೯ ಕಬ್ಬು ಬೆಳೆ ವಿವರ

ಕ್ರಮ ಸಂಖ್ಯೆ	ಭೂ-ಹಿಡುವಳಿ ಗಾತ್ರಗಳು	ಎಕರೆಗಳಲ್ಲಿ	ಶೇಕಡಾ
೧.	ದೊಡ್ಡ ಗಾತ್ರದ ಭೂ-ಹಿಡುವಳಿಗಳು	೦೮	೨.೮೫
೨.	ಮಧ್ಯಮ ಗಾತ್ರದ ಭೂ-ಹಿಡುವಳಿಗಳು	೬೨	೨೨.೧೦
೩.	ಅರೆ ಮಧ್ಯಮ ಗಾತ್ರದ ಭೂ-ಹಿಡುವಳಿಗಳು	೧೪೪.೨೦	೫೧.೪೨
೪.	ಸಣ್ಣ ಗಾತ್ರದ ಭೂ-ಹಿಡುವಳಿಗಳು	೬೩.೦೦	೨೨.೪೬
೫.	ಅತಿ ಸಣ್ಣ ಗಾತ್ರದ ಭೂ-ಹಿಡುವಳಿಗಳು	೩.೩೦	೧.೧೭
	ಒಟ್ಟು	೨೮೦.೫೦	೧೦೦.೦೦

ಇನ್ನಿತರ ಬೆಳೆಗಳಾದ ಬಿಳಿ ಜೋಳ, ಸೂರ್ಯಪಾನ, ಕಡಲೆ, ನೆಲಗಡಲೆ, ಎಳ್ಳು ಮತ್ತು ಉದ್ದು ಇವುಗಳನ್ನು ಬೇಡರ ರೈತರು ಬೆಳೆದರೂ, ಎಲ್ಲ ಬಗೆಯ ಭೂ-ಹಿಡುವಳಿದಾರರು ಇವುಗಳನ್ನು ಬೆಳೆದಿರುವುದಿಲ್ಲ. ಉದಾಹರಣೆಗೆ ಉದ್ದನ್ನು ಮಧ್ಯಮ ಮತ್ತು ಅರೆ-ಮಧ್ಯಮ ಗಾತ್ರದ ರೈತರು ಮಾತ್ರ ಬೆಳೆಸಿದ್ದಾರೆ. ಆದುದರಿಂದ, ಇವುಗಳ ಹೆಚ್ಚಿನ ವಿವರಣೆಯನ್ನು ಇಲ್ಲಿ ನೀಡಲಾಗಿಲ್ಲ.

ಬೇಡ ಸಮುದಾಯದ ರೈತರು ಹಲವಾರು ಆಹಾರ ಧಾನ್ಯಗಳನ್ನು ದ್ವಿದಳ ಧಾನ್ಯಗಳನ್ನು ಮತ್ತು ವಾಣಿಜ್ಯ ಬೆಳೆಗಳನ್ನು ಬೆಳೆಸಿದ್ದರೂ, ಇವರ ಭೂಮಿಯ ಫಲವತ್ತತೆ ಅತ್ಯಂತ ಕಡಿಮೆ ಆಗಿರುವುದರಿಂದ ಮತ್ತು ನೀರಾವರಿಯ ಸೌಲಭ್ಯವನ್ನು ಅತ್ಯಂತ ಕಡಿಮೆ ಪ್ರಮಾಣದಲ್ಲಿ ಹೊಂದಿರುವುದರಿಂದ ವಿವಿಧ ಬೆಳೆಗಳ ಪ್ರತಿ ಎಕರೆಯ ಸರಾಸರಿಯ ಉತ್ಪನ್ನ ಇತರ ಮೇಲ್ಜಾತಿಯ ರೈತರಿಗೆ ಹೋಲಿಸಿದಾಗ ಶೇ. ೫೦ ರಷ್ಟು ಕಡಿಮೆಯಾಗಿದೆಯೆಂದು ಸ್ಥೂಲವಾಗಿ ನಾವು ಹೇಳಬಹುದು.

ನೀರಾವರಿ ಸೌಲಭ್ಯವಿರುವ ಬೇಡರ ರೈತರ ಆರ್ಥಿಕತೆ

ನೀರಾವರಿ ಸೌಲಭ್ಯ ಹೊಂದಿರುವ ರೈತರು ವಾರ್ಷಿಕ ಬೆಳೆಯಾದ ಕಬ್ಬನ್ನು ಮತ್ತು ಆರು ತಿಂಗಳಲ್ಲಿ ಬರುವ ಭತ್ತವನ್ನು ಬೆಳೆಯುತ್ತಾರೆ. ಕೆಲವು ರೈತರು ಗೋಧಿ ಮತ್ತು ಅಲ್ಲವನ್ನು ಬೆಳೆದರೂ ಅವರ ಸಂಖ್ಯೆ ಈ ಎರಡು ಬೆಳೆಗಳ ವಿಸ್ತೀರ್ಣ ಬಹಳ ಕಡಿಮೆಯಿರುತ್ತದೆ. ಉದಾಹರಣೆಗೆ, ರೈತರು ಕೇವಲ ೧೨ ಎಕರೆ ಅಲ್ಲವನ್ನು (Zinger) ಬೆಳೆದಿರುತ್ತಾರೆ ಮತ್ತು ೨೨ ಎಕರೆ ಗೋಧಿಯನ್ನು ಬೆಳೆದಿರುತ್ತಾರೆ. ಆದುದರಿಂದ, ನೀರಾವರಿ ಪ್ರಮುಖ ಬೆಳೆಗಳು ಕೇವಲ ಕಬ್ಬು ಮತ್ತು ಭತ್ತ ಇರುತ್ತವೆ. ಆದುದರಿಂದಲೇ ಇವರು ಬೆಳೆದ ಕಬ್ಬಿನ ಬೆಳೆಯ ವಿಸ್ತೀರ್ಣ ೨೬೬.೨೦ (ಶೇ. ೭೨.೬೯) ಇದ್ದರೆ, ಭತ್ತದ ಬೆಳೆಯ ವಿಸ್ತೀರ್ಣ ೬೬ (ಶೇ. ೧೮.೦೩) ಇರುತ್ತದೆ (ವಿವರಗಳಿಗಾಗಿ ಕೋಷ್ಟಕ ೫.೨೦ ನೋಡಿ).

ಕೋಷ್ಟಕ ೫.೨೦ ನೀರಾವರಿ ಬೆಳೆಗಳು

ಕ್ರಮ ಸಂಖ್ಯೆ	ಬೆಳೆಗಳು	ಎಕರೆ ಭೂಮಿ	ಶೇಕಡಾ
೧.	ಕಬ್ಬು	೨೬೬.೨೦	೭೨.೬೯
೨.	ಭತ್ತ	೬೬.೦೦	೧೮.೦೩
೩.	ಅಲ್ಲ (ginger)	೧೨.೦೦	೦೩.೨೮
೪.	ಗೋಧಿ	೨೨.೦೦	೦೬.೦೦
	ಒಟ್ಟು	೩೬೬.೨೦	೧೦೦.೦೦

ಕಬ್ಬು ಮತ್ತು ಭತ್ತ ಬೆಳೆಯುವ ರೈತರು ಹೆಚ್ಚುವರಿ ನೀಡುವ ಬೀಜ, ರಾಸಾಯನಿಕ ಗೊಬ್ಬರ ಇತ್ಯಾದಿ, ಆಧುನಿಕ ಉತ್ಪಾದನಾಂಗಗಳನ್ನು (Modern Inputs) ಬಳಸುವುದರಿಂದ ಈ ಎರಡು ಬೆಳೆಗಳ ಪ್ರತಿ ಎಕರೆಯ ಉತ್ಪಾದಕತ್ವ ಮತ್ತು ಇವುಗಳ ಒಟ್ಟು ಉತ್ಪಾದನೆಗಳ ವಿಶ್ಲೇಷಣೆಯನ್ನು ಮಾಡುವುದು ಅಗತ್ಯವಾಗಿದೆ.

ಕಬ್ಬು ಮತ್ತು ಭತ್ತದ ಒಟ್ಟು ಉತ್ಪಾದನೆ ಹಾಗೂ ಪ್ರತಿ ಎಕರೆಯ ಉತ್ಪಾದಕತೆ

ಬೇಡರ ರೈತರು ಉತ್ಪಾದಿಸಿದ ಪ್ರತಿ ಎಕರೆಯ ಕಬ್ಬಿನ ಪ್ರಮಾಣ ಉಳಿದ ಮೇಲ್ಜಾತಿಯ ರೈತರಿಗಿಂತ ಸುಮಾರು ಶೇ. ೧೦ರಷ್ಟು ಕಡಿಮೆ ಇದೆ. ಇದಕ್ಕೆ ಮುಖ್ಯ ಕಾರಣಗಳೆಂದರೆ (೧) ಇವರಿಗೆ ಇರುವ ಆಧುನಿಕ ಉತ್ಪಾದಾನಾಂಗಗಳ (Inputs) ಕೊರತೆ ಮತ್ತು (೨) ಭೂಮಿಯ ತುಲನಾತ್ಮಕ ಕಡಿಮೆ ಫಲವತ್ತತೆಯಾಗಿವೆ.

ಬೇಡ ಸಮುದಾಯದ ರೈತರ ಮಾರಾಟಕ್ಕಿರುವ ಮಿಗುತೆ (Marketable surplus)

ರೈತರು ಹೆಚ್ಚಾಗಿ ಖರಬ್ (ಖರಾಬ) ಅಂದರೆ 'ಬಂಜರು' ಭೂಮಿಯನ್ನು ಊಳುತ್ತಿರುವುದರಿಂದ ಮತ್ತು ಅವರ ನೀರಾವರಿ ಭೂಮಿ ಹೆಚ್ಚಾಗಿ ಇಲ್ಲದಿರುವುದರಿಂದ, ಭೂಮಿಯಿಂದ ಬಂದ ಉತ್ಪಾದನೆ ಅಂದರೆ, ಕಾಳುಕಡ್ಡಿ ಮನೆಯವರ ಉಪಭೋಗಕ್ಕೆ ಸಾಲುತ್ತದೆ ಮತ್ತು ಮಿಗುತೆ (Surplus) ಏನೂ ಉಳಿಯುವುದಿಲ್ಲ. ತೊಗರಿಯನ್ನು ಹೆಚ್ಚಾಗಿ ಬೆಳೆಯುತ್ತಿದ್ದರೂ, ನೀರಾವರಿಯಿಲ್ಲದ ಭೂಮಿಯಲ್ಲಿ ಮತ್ತು ಬಂಜರು ಭೂಮಿಯಲ್ಲಿ ಇದನ್ನು ಬೆಳೆಯುತ್ತಿರುವುದರಿಂದ, ಇದರ ಪ್ರತಿ ಎಕರೆ ಉತ್ಪಾದನೆ ಅತ್ಯಂತ ಕಡಿಮೆ ಪ್ರಮಾಣದಲ್ಲಿರುತ್ತದೆ ಮತ್ತು ಅನಿಶ್ಚಿತತೆ (Uncertainity)ಯಿಂದ ಕೂಡಿದೆ ಕೆಲವೊಮ್ಮೆ ಬೆಳೆ ಸಾಧಾರಣವಾಗಿ ಬಂದರೆ, ತೊಗರಿಯ ಬೆಲೆ ಗಮನಾರ್ಹವಾಗಿ ಕಡಿಮೆಯಾಗುತ್ತದೆ. ಆದುದರಿಂದ ತೊಗರಿಯನ್ನು ಮಾರಿದಾಗ ರೈತರಿಗ ಹೆಚ್ಚಿನ ಆದಾಯ ಬರುವುದಿಲ್ಲ. ಬೇಡ ಸಮುದಾಯದ ಕೃಷಿ ವಲಯದಲ್ಲಿ ಹಣದ ಬಳಕೆ

'ಕಡಿಮೆ'. ಕೃಷಿಕರು ಜೀವನ ನಿರ್ವಹಣೆಗಾಗಿ ಕೃಷಿ (Agriculture is a way of Life) ಎಂದು ತಿಳಿಯುತ್ತಾರಲ್ಲದೆ. ಇದೊಂದು ಲಾಭಕರ ಉದ್ದಿಮೆಯೆಂದು ಪರಿಗಣಿಸುತ್ತಿಲ್ಲ.

ಕಬ್ಬು ಮತ್ತು ಭತ್ತದ ಬೆಳೆಗಳನ್ನು ಹಣದ ಬೆಳೆಗಳು (Cash crops) ಎಂದು ಇತರರಂತೆ ಬೇಡ ರೈತರು ಪರಿಗಣಿಸುತ್ತಾರೆ. ಮುಂದುವರಿದು, ಇವೆರಡರಲ್ಲಿ ಬೆಳೆದ ಎಲ್ಲ ಕಬ್ಬನ್ನು ಸಕ್ಕರೆ ಕಾರ್ಖಾನೆಗೆ ಮಾರಾಟ ಮಾಡುತ್ತಾರೆ ಅಥವಾ ಬೆಲ್ಲಕ್ಕಾಗಿ ಉಪಯೋಗಿಸುತ್ತಾರೆ. ಕೋಷ್ಠಕ ೫.೨೧ ರೈತರ ಮಾರಾಟದ ಮಿಗುತೆಯನ್ನು (ಭತ್ತ ಮತ್ತು ಕಬ್ಬು) ಸೂಚಿಸುತ್ತದೆ. ಮಾರಾಟಕ್ಕಿರುವ ಮಿಗುತೆಯನ್ನು ಹೊಂದಿರುವ ಭತ್ತ ಬೆಳೆಯುವ ರೈತರ ಸಂಖ್ಯೆ ೧೦ (ಶೇ. ೪೩.೪೮) ಇದ್ದರೆ ೧೦೦ಕ್ಕೆ ನೂರು ಕಬ್ಬು ಬೆಳೆಯುವ ರೈತರು 'ಮಿಗತೆ'ಯನ್ನು ಹೊಂದಿರುತ್ತಾರೆ.

ಕೋಷ್ಠಕ ೫.೨೧ ಮಾರಾಟಕ್ಕಿರುವ ಮಿಗುತೆಯನ್ನು ಹೊಂದಿದ ರೈತರ ವಿವರ

ಕ್ರಮ ಸಂಖ್ಯೆ	ಬೆಳೆಗಳು	ಒಟ್ಟು ರೈತರು	ಮಿಗುತೆ ಹೊಂದಿರುವ ರೈತರು	ಶೇಕಡಾ
೧.	ಬತ್ತ	೨೩	೧೦	೪೩.೪೮
೨.	ಕಬ್ಬು	೧೦೭	೧೦೭	೧೦೦.೦೦

ಬೇಡ ರೈತರು ಹೊಂದಿರುವ ಪಶು ಸಂಪತ್ತು ಮತ್ತು ಆರ್ಥಿಕತೆ

ಬೇಡರ ಮುಖ್ಯ ವೃತ್ತಿ ಬೇಸಾಯವಾದುದರಿಂದ ಮತ್ತು ಇವರ ರೈತ ಸಮಾಜದಲ್ಲಿ ಹೆಚ್ಚಿನವರು ಅತಿ ಸಣ್ಣ ರೈತರು, ಸಣ್ಣ ರೈತರು ಮತ್ತು ಅರೆ ಮಧ್ಯಮ ರೈತರಾಗಿರುವುದರಿಂದ, ಇವರ ಪಶು ಸಂಪತ್ತನ್ನು ಅಭ್ಯಸಿಸುವುದು ಅತ್ಯಾವಶ್ಯಕ. ಕೋಷ್ಠಕ ೫.೨೨ದಲ್ಲಿನ ಅಂಕಿ ಸಂಖ್ಯೆಗಳು ಸೂಚಿಸಿರುವಂತೆ ದನಕರುಗಳ ಸಂಖ್ಯೆ ೬೫೪. ಕೋಳಿಗಳ ಸಂಖ್ಯೆ ಅತಿ ಹೆಚ್ಚಿನದು. ಅಂದರೆ, ೩,೯೬೧. ಅತ್ಯಂತ ಕಡಿಮೆ ಪ್ರಮಾಣದಲ್ಲಿರುವ ಪಶುಗಳು ಎಂದರೆ ಕುರಿಗಳು ೧,೭೧೫, ಮತ್ತು ಆಡು(ಮೇಕೆ)ಗಳು ೧೯೯, ಆಕಳುಗಳ ಸಂಖ್ಯೆ ೬೯೫ ಇದೆ; ಎಮ್ಮೆಗಳ ಸಂಖ್ಯೆ ೩೫೦ ಆಗಿದೆ. ಆಕಳುಗಳು ಮತ್ತು ಎಮ್ಮೆಗಳು ಸಾಕಷ್ಟು ಸಂಖ್ಯೆಯಲ್ಲಿದ್ದರೂ, ಬೇಡರು ಹೈನುಗಾರಿಕೆಯ ಗೋಜಿಗೆ ಹೋಗಿಲ್ಲ. ಆದರೆ, ಇವರು ಹಾಲನ್ನು, ಹಾಲು ಉತ್ಪಾದನೆಯ ಸಹಕಾರಿ ಸಂಘಕ್ಕೆ ಮಾರಿಕೊಳ್ಳುತ್ತಾರೆ. ಈ ಬುಡಕಟ್ಟಿನ ಮನೆಗಳಲ್ಲಿ 'ಕೋಳಿಯಿಲ್ಲದ ಮನೆಗಳೇ ಇಲ್ಲ' ಎಂದರೆ ಅತಿಶಯೋಕ್ತಿ ಆಗಲಾರದು. 'ನಿಮ್ಮಲ್ಲಿ ಒಂದೊಂದು ಮನೆಯಲ್ಲಿ ೫ ರಿಂದ ೧೫ರವರೆಗಗೆ ಕೋಳಿಗಳಿವೆ ಏಕೆ?' ಎಂಬ ಪ್ರಶ್ನೆಯನ್ನು ವಿವಿಧ ವಕ್ತೃಗಳಿಗೆ ಕೇಳಿದಾಗ, ಅದಕ್ಕೆ

ಹೆಣ್ಣುಮಕ್ಕಳಿಂದ ಬಂದ ಉತ್ತರ ಹೀಗಿದೆ "ಸಾಹೇಬುರೇ, ನಮ್ಮ ಹೊಟ್ಟೆ ತುಂಬಿಕೊಳ್ಳುವುದಕ್ಕೆ ಸಹಾಯಕವಾಗುತ್ತವೆ, ಕಷ್ಟದ ಕಾಲಕ್ಕೆ ಮಾರಿ ನಮ್ಮ ಕಷ್ಟ ದೂರು ಮಾಡಿಕೊಳ್ಳೊಕ್ಕೆ ಇದ್ದಾವರಿ ಸಾಬುರೇ".

ಕೋಷ್ಟಕ ೫.೨೨ ಬೇಡ ಸಮುದಾಯದ ಒಟ್ಟು ಪಶು ಸಂಪತ್ತು

ಕ್ರಮ ಸಂಖ್ಯೆ	ವಿವರಗಳು	Nos. District	ಸಂಖ್ಯೆ (ಪ್ರಮಾಣ)	ಶೇಕಡಾ
೧.	ದನಗಳು (ಎತ್ತುಗಳು)	೨,೭೭,೫೧೯	೬೫೪	೮.೬೩
೨.	ಎಮ್ಮೆಗಳು		೩೫೦	೪.೬೨
೩.	ಆಕಳುಗಳು		೬೯೫	೯.೧೮
೪.	ಕುರಿಗಳು		೧೭೧೫	೨೨.೬೪
೫.	ಆಡುಗಳು		೧೯೯	೨.೬೩
೬.	ಕೋಳಿಗಳು		೩೯೬೧	೫೨.೩೦

ಹೆಣ್ಣುಮಕ್ಕಳ ದೃಷ್ಟಿಯಲ್ಲಿ 'ಕಷ್ಟ'ವೆಂದರೆ, ಮನೆ ಸಾಮಾನುಗಳ ಖರೀದಿಗಾಗಿ ಕೈಯಲ್ಲಿ ಹಣವಿಲ್ಲದಿರುವುದು; ಮಕ್ಕಳಿಗೆ ಆಕಸ್ಮಿಕವಾಗಿ ಜ್ವರ ಬಂದಾಗ ಇವರಿಗೆ ಔಷಧ ಖರೀದಿಸಲು ಕೈಯಲ್ಲಿ ಹಣ ಇಲ್ಲದಿರುವುದು ಆಗಿದೆ.

ವಿವಿಧ ಭೂ-ಹಿಡುವಳಿಗಳ ಗಾತ್ರದ ಪ್ರಕಾರ ಎತ್ತುಗಳ ಸಂಖ್ಯೆ

ಬೇಡ ಸಮುದಾಯದ ರೈತರು ಕೃಷಿಯ ಹೊಸ ಕಾರ್ಯತಂತ್ರ (Modern Agricultural Technology)ವನ್ನು ಹೊಂದದೆ ಇರುವುದರಿಂದ, ತಮ್ಮ ವ್ಯವಸಾಯದಲ್ಲಿ ಯಂತ್ರಗಳ ಬಳಕೆಯನ್ನು ಮಾಡುತ್ತಿರುವುದಿಲ್ಲ. ಭೂಮಿಯನ್ನು ಹಸನು ಮಾಡಲು, ಬೀಜವನ್ನು ಬಿತ್ತಲು ಮತ್ತಿತರ ಕೃಷಿ ಕಾರ್ಯಾಚರಣೆಗಳನ್ನು ಎತ್ತುಗಳ ನೆರವಿನಿಂದಲೇ ಮಾಡುತ್ತಿದ್ದಾರೆ. ಆದಕಾರಣ, ಪ್ರತಿಯೊಬ್ಬ ರೈತ ಕೊನೆಯ ಪಕ್ಷ ಎರಡು ಎತ್ತುಗಳನ್ನು (ಒಂದು ಜೋಡಿ) ಹೊಂದಲೇ ಬೇಕಾಗುತ್ತದೆ. ಇಲ್ಲದಿದ್ದಲ್ಲಿ ಸಕಾಲದಲ್ಲಿ ಕೃಷಿ ಕಾರ್ಯಾಚರಣೆಗಳು ಪೂರ್ತಿಗೊಳ್ಳದೆ, ಪ್ರತಿ ಎಕರೆಯ ಉತ್ಪಾದಕತ್ವ ಕಡಿಮೆಯಾಗುತ್ತಾ ಹೋಗುತ್ತದೆ. ಕೋಷ್ಟಕ ೫.೨೩ ಬೇಡ ರೈತರು ಹೊಂದಿರುವ ಎತ್ತುಗಳ (ಜೋಡಿ) ಸಂಖ್ಯೆಯ ಬಗ್ಗೆ ವಿವರಣೆ ನೀಡುತ್ತದೆ. ದೊಡ್ಡ ಗಾತ್ರದ ಭೂ-ಹಿಡುವಳಿಗಳನ್ನು ಹೊಂದಿರುವ ಶೇ. ೭೫ ರೈತರು ಎತ್ತುಗಳನ್ನು ಹೊಂದಿರುತ್ತಾರೆ.

ಅತಿ ಸಣ್ಣ ಪ್ರಮಾಣದ ಭೂ-ಹಿಡುವಳಿಗಳನ್ನು ಹೊಂದಿರುವ ರೈತರ ಶೇ. ೨೦.೮೧ ರೈತರು ಮಾತ್ರ ಎತ್ತುಗಳನ್ನು ಹೊಂದಿರುತ್ತಾರೆ. ಭೂ-ಹಿಡುವಳಿಗಳ ಗಾತ್ರ ಹೆಚ್ಚಿದಂತೆ, ಎತ್ತುಗಳನ್ನು ಹೊಂದಿರುವ ರೈತ ಕುಟುಂಬಗಳ ಪ್ರಮಾಣ ಹೆಚ್ಚುತ್ತಾ ಹೋಗುತ್ತದೆ (ವಿವರಗಳಿಗಾಗಿ ಕೋಷ್ಟಕ ೫.೨೩ ನೋಡಿ).

ಕೋಷ್ಟಕ ೫.೨೩ ರೈತರು ಹೊಂದಿರುವ ಎತ್ತುಗಳ ವಿವರ

ಕ್ರಮ ಸಂಖ್ಯೆ	ಭೂ-ಹಿಡುವಳಿ ಗಾತ್ರಗಳು	ಒಟ್ಟು ರೈತರ ಸಂಖ್ಯೆ	ರೈತ ಕುಟುಂಬಗಳು ಹೊಂದಿದ ಎತ್ತು (ಜೋಡಿಗಳಲ್ಲಿ) ಗಳು	ಶೇಕಡಾ
೧.	ಅತಿ ಸಣ್ಣ ಗಾತ್ರದ ಭೂ-ಹಿಡುವಳಿ	೨೨೧	೪೬	೨೦.೮೧
೨.	ಸಣ್ಣ ಗಾತ್ರದ ಭೂ-ಹಿಡುವಳಿ	೩೮೬	೧೫೦	೩೮.೮೬
೩.	ಅರೆ ಮಧ್ಯಮ ಗಾತ್ರದ ಭೂ-ಹಿಡುವಳಿ	೧೬೫	೮೦	೪೮.೪೮
೪.	ಮಧ್ಯಮ ಗಾತ್ರದ ಭೂ-ಹಿಡುವಳಿ	೬೧	೪೫	೭೩.೭೭
೫.	ದೊಡ್ಡ ಗಾತ್ರದ ಭೂ-ಹಿಡುವಳಿ	೦೮	೦೬	೭೫.೦೦

ಒಂದು ಜೊತೆಗಿಂತ ಹೆಚ್ಚಿನ ಎತ್ತುಗಳನ್ನು ಹೊಂದಿರುವ ಬೇಡ ರೈತ ಕುಟುಂಬಗಳು

ದೊಡ್ಡ ಗಾತ್ರದ ಭೂ-ಹಿಡುವಳಿಗಳು ಉಳ್ಳ ರೈತರಲ್ಲಿ ಶೇ. ೨೫ ರಷ್ಟು ರೈತರು ಒಂದಕ್ಕಿಂತಲೂ ಹೆಚ್ಚು ಜೋಡಿ (Pair) ಎತ್ತುಗಳನ್ನು ಉಳ್ಳವರಾಗಿದ್ದಾರೆ. ಅರೆ ಮಧ್ಯಮ ರೈತರು ಯಾರು ಎತ್ತುಗಳನ್ನು ಹೊಂದಿರುವುದಿಲ್ಲ. ಅತಿ ಸಣ್ಣ ಗಾತ್ರದ ಭೂ-ಹಿಡುವಳಿಗಳನ್ನು ಹೊಂದಿರುವ ರೈತರು ಶೇ. ೦.೪೫ (ಅಥವಾ ಒಂದಕ್ಕಿಂತ ಕಡಿಮೆ) ಎತ್ತುಗಳನ್ನು ಪಡೆದಿದ್ದಾರೆ (ವಿವರಗಳಿಗಾಗಿ ಕೋಷ್ಟಕ ೫.೨೪ ನೋಡಿ). ಎತ್ತುಗಳಲ್ಲದೆ, ರೈತರು ಇನ್ನಿತರ ಅವಶ್ಯಕ ಉಪಕರಣಗಳನ್ನು ಹೊಂದಿದ್ದಾರೆ.

ಕೋಷ್ಟಕ ೫.೨೪ ಒಂದು ಜೋಡಿ ಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಎತ್ತುಗಳನ್ನು ಹೊಂದಿರುವ ರೈತರ ವಿವರ

ಕ್ರಮ ಸಂಖ್ಯೆ	ಭೂ-ಹಿಡುವಳಿ ಗಾತ್ರಗಳು	ಒಟ್ಟು ರೈತರ ಸಂಖ್ಯೆ	ರೈತ ಕುಟುಂಬಗಳು ಹೊಂದಿದ ಎತ್ತು ಜೋಡಿಗಳಲ್ಲಿ	ಶೇಕಡಾ
೧.	ಅತಿ ಸಣ್ಣ ಗಾತ್ರದ ಭೂ-ಹಿಡುವಳಿ	೨೨೧	೧	೦.೪೫
೨.	ಸಣ್ಣ ಗಾತ್ರದ ಭೂ-ಹಿಡುವಳಿ	೩೮೬	೫	೧.೨೯
೩.	ಅರೆ ಮಧ್ಯಮ ಗಾತ್ರದ ಭೂ-ಹಿಡುವಳಿ	೧೬೫	-	-
೪.	ಮಧ್ಯಮ ಗಾತ್ರದ ಭೂ-ಹಿಡುವಳಿ	೬೧	೫	೮.೨೦
೫.	ದೊಡ್ಡ ಗಾತ್ರದ ಭೂ-ಹಿಡುವಳಿ	೦೮	೦೨	೨೫.೦೦

ಬೇಡ ರೈತರ ಕೃಷಿಗೆ ಸಂಬಂಧಿಸಿದ ಉಪಕರಣಗಳು

ರೈತರ ಭೂಮಿಯಿಂದ ಬೆಳೆಯನ್ನು ತೆಗೆಯುವಲ್ಲಿ ಹಲವಾರು ಉಪಕರಣಗಳನ್ನು ಬಳಸಬೇಕಾಗುತ್ತದೆ. ಸಂಪ್ರದಾಯ ಕೃಷಿ ತಂತ್ರಜ್ಞಾನ ಮತ್ತು ಖುಷ್ಕಿ ವ್ಯವಸಾಯ, ಕೆಲವೇ ಕೆಲವು ಸರಳ ಉಪಕರಣಗಳನ್ನು ಉಪಯೋಗಿಸಿದರೆ, ಸುಧಾರಿತ ಬೇಸಾಯ ಮತ್ತು ನೀರಾವರಿ ವ್ಯವಸಾಯ ಹತ್ತು ಹಲವಾರು ಕ್ಲಿಷ್ಠ ಮತ್ತು ಬೆಲೆ ಬಾಳುವ ಉಪಕರಣಗಳನ್ನು ಉಪಯೋಗಿಸಲು ನೆರವಾಗುತ್ತದೆ. ಬೇಡರ ವ್ಯವಸಾಯದ ಶೇ ೫.೨೫ ಖುಷ್ಕಿ ವ್ಯವಸಾಯ ಪದ್ಧತಿಯವಾಗಿರುವುದರಿಂದ ಈ ರೈತರು ಹೊಂದಿರುವ ಕೃಷಿಯ ಉಪಕರಣಗಳು ಸರಳ ಮತ್ತು ಕಡಿಮೆ ಬೆಲೆಯುಳ್ಳದಾಗಿದೆ. ನೀರಾವರಿ ವ್ಯವಸಾಯ ಮಾಡುವ ರೈತರು ಪಂಪ್‌ಸೆಟ್‌ಗಳನ್ನು,

ಟ್ರಾಕ್ಟರನ್ನು, ಎತ್ತಿನ ಬಂಡಿಗಳನ್ನು ಬಿತ್ತನೆ ಉಪಕರಣಗಳನ್ನ ಮತ್ತು ಎಣ್ಣೆ ಹೊಡೆಯುವ ಯಂತ್ರಗಳನ್ನು ಉಪಯೋಗ ಮಾಡುತ್ತಾರೆ. ಈ ಉಪಕರಣಗಳ ಬೆಲೆ ಹೆಚ್ಚಿನದಾಗಿರುತ್ತದೆ.

ನೀರಾವರಿ ಮತ್ತು ಒಣ ಭೂಮಿಯನ್ನು ಉಳ್ಳುವವರು ಕೆಲವು ಸಾಮಾನ್ಯ (General) ಉಪಕರಣಗಳಾದ, ನೇಗಿಲು, ಕೊಡಲಿ, ಗುದ್ದಲಿ, ಕುರುಪಿ, ಕುಡಗೀಲ ಮತ್ತು ಹಗ್ಗಗಳನ್ನು ಹೆಚ್ಚಾಗಿ ಉಪಯೋಗಿಸುತ್ತಾರೆ. ಇವುಗಳು ಸರಳವಾಗಿರುವುದಲ್ಲದೆ, ಕಡಿಮೆ ಬೆಲೆಯುಳ್ಳದಾಗಿವೆ. ಕೋಷ್ಠಕ ೫.೨೫ರ ಪ್ರಕಾರ ಬೇಡರು ಉಪಯೋಗಿಸುತ್ತಿರುವ ನೇಗಿಲುಗಳು ೬೨೫ ಇವೆ, ಭಿತ್ತನೆಯ ಉಪಕರಣಗಳು ೨೧೦ ಇವೆ; ಡಸ್ಟರ್ಸ್‌ಗಳು ೨೦೧ ಇವೆ; ಕುರುಪಿ, ಹಗ್ಗ, ಗುದ್ದಲಿ ಮತ್ತು ಕುಡಗಿಲುಗಳ ಸಂಖ್ಯೆ ಕ್ರಮವಾಗಿ ೧೦೦೧, ೭೦೦, ೬೦೦ ಮತ್ತು ೪೯೧ ಇವೆ.

ಬೇಡ ರೈತರು ಶ್ರೀಮಂತ ರೈತರಿಲ್ಲದ ಕಾರಣ, ಅವರಲ್ಲಿ ಕೇವಲ ಒಂದೇ ಒಂದು ಟ್ರಾಕ್ಟರ್ ಇದೆ. ಈ ಉಪಕರಣ ಹೆಚ್ಚಿನ ಬೆಲೆಯ ಉಪಕರಣ, ಇದನ್ನು ಕೆಲವೇ ಕೆಲವು ದೊಡ್ಡ ಪ್ರಮಾಣದ ರೈತರು ಹೊಂದುವದು ಸಾಧ್ಯ. ಉದಾಹರಣೆಗೆ ಒಟ್ಟು ದೊಡ್ಡ ಪ್ರಮಾಣದ ರೈತರ ಸಂಖ್ಯೆ ಎಂಟಿದ್ದರೆ ಅವರಲ್ಲಿನ ಟ್ರಾಕ್ಟರ್ ಸಂಖ್ಯೆ ಒಂದಿದೆ. ಬ್ಯಾಂಕುಗಳು ಮತ್ತು ಸಹಕಾರಿ ಪತ್ತಿನ ಸಂಸ್ಥೆಗಳು ಪಂಪಸೆಟ್ ಖರೀದಿಗೆ ಸಹಾಯ ಮಾಡುತ್ತಿರುವುದರಿಂದ ಇವುಗಳ ಸಂಖ್ಯೆ ೧೫ ಆಗಿದೆ. (ವಿವರಗಳಿಗೆ ಕೋಷ್ಠಕ ೫.೨೫ ನೋಡಿ).

ಕೋಷ್ಠಕ ೫.೨೫ ಬೇಡ ರೈತರು ಹೊಂದಿರುವ ಕೃಷಿಯ ಉಪಕರಣಗಳು

ಕ್ರಮ ಸಂಖ್ಯೆ	ಕೃಷಿ ಉಪಕರಣಗಳು	ಸಂಖ್ಯೆಯಲ್ಲಿ
೦೧.	ನೇಗಿಲುಗಳು	೬೨೫
೦೨.	ಕೊಡಲಿ	೬೩೧
೦೩.	ಎತ್ತಿನ ಬಂಡಿ	೩೫
೦೪.	ಹಗ್ಗ	೭೦೦
೦೫.	ಗುದ್ದಲಿ	೬೦೦
೦೬.	ಕುರುಪಿ	೧೦೦೧
೦೭.	ಕುಡಿಗೀಲ್	೪೯೧
೦೮.	ಟ್ರಾಕ್ಟರ್	೦೧
೦೯.	ಎಣ್ಣೆ ಹೊಡೆಯುವುದು	೨೦೧
೧೦.	ಭಿತ್ತನೆ ಉಪಕರಣ	೨೧೦
೧೧.	ಪಂಪುಸೆಟ್	೧೫

ಒಟ್ಟಿನಲ್ಲಿ ಬೇಡ ರೈತರು ಹೊಂದಿರುವ ಕೃಷಿ ಉಪಕರಣಗಳ ಸಂಖ್ಯೆ ಕೃಷಿಯ ಮೇಲೆ ಅಷ್ಟೇನೂ ಪ್ರಭಾವ ಬೀರುವಂತಿಲ್ಲ.

ಬೇಡರ ಕೃಷಿಯೇತರ ಆಸ್ತಿಗಳು

ಇತರ ಮೇಲ್ಜಾತಿಯ ರೈತರಂತೆ, ಬೇಡ ರೈತರು ಶ್ರೀಮಂತರಾಗಿವುದಿಲ್ಲ. ಆದರೆ, ನಮ್ಮ ಅಧ್ಯಯನವು ರೈತರನಲ್ಲದೆ, ಸರಕಾರಿ ನೌಕರರು, ವ್ಯಾಪಾರಿಗಳು ಮುಂತಾದವರನ್ನು ಒಳಗೊಂಡಿರುವುದರಿಂದ ಇವರ ಮನೆಗಳಲ್ಲಿ ಗ್ರಾಹಕರ ಬಾಳಿಕೆ ಬರುವ ವಸ್ತುಗಳಾದ ಟಿ.ವಿ. ೭೬; ಟೇಪ ರಿಕಾರ್ಡರ್ ೧೧೮; ರೇಡಿಯೋ ೧೧೨; ಇವೆ. (ವಿವರಗಳಿಗೆ ಕೋಷ್ಠಕ ೫.೨೬ ನೋಡಿ). ಇದಲ್ಲದೆ, ವಿಲಾಸೀಕರ ವಸ್ತುಗಳಾದ ಶೀತಕಯಂತ್ರ ೨೧ ಮತ್ತು ವಾಸಿಂಗ್ ಮಸೀನ್ ಪ್ರವೇಶಗೊಂಡಿವೆ.

ಕೋಷ್ಠಕ ೫.೨೬ ಬೇಡರು ಹೊಂದಿರುವ ಬಾಳಿಕೆ ಬರುವ ಗ್ರಾಹಕರ ವಸ್ತುಗಳು

ಕ್ರಮ ಸಂಖ್ಯೆ	ಬಳಕೆಯ ಸಾಮಾನುಗಳು	ಸಂಖ್ಯೆಯಲ್ಲಿ
೦೧.	ಸೈಕಲ್	೧೪೨
೦೨.	ಸ್ಕೂಟರ್	೭
೦೩.	ಠ್ರಾಕ್ಟರ್	೧
೦೪.	ಲಾರಿ	೧೦
೦೫.	ರೇಡಿಯೋ	೧೧೨
೦೬.	ಟೇಪರೀಕಾರ್ಡರ್	೧೧೮
೦೭.	ಟಿ.ವ್ಹಿ.	೭೬
೦೮.	ದೂರವಾಣಿ	೦೩
೦೯.	ಫ್ರೀಜ್	೦೨
೧೦.	ವಾಸಿಂಗ್ ಮಸೀನ್	೦೧

ಬೇಡ ಯುವಕರು ನಿರುದ್ಯೋಗದಿಂದ ಬಳಲುತ್ತಿರುವುದರಿಂದ, ಕೆಲಸವನ್ನು ಹುಡುಕಿಕೊಂಡು ದೂರದ ನಗರಗಳಾದ ಪುಣೆ, ಬಾಂಬೆ ಮತ್ತು ಹೈದ್ರಾಬಾದ ಷಹರಗಳಿಗೆ ಹೋಗಿರುತ್ತಾರೆ. ಹಿಂತಿರುಗಿ ಬರುವಾಗ ಅಲ್ಲಿನ ನಾಗರಿಕತೆಯ ಥಳಕು ಬೆಳಿಕಿನ ಪ್ರಭಾವಕ್ಕೆ ಒಳಗಾಗಿ ಊರಿಗೆ ತಿರುಗಿ ಬರುವಾಗ ಟಿ.ವ್ಹಿ., ಟೇಪರಿಕಾರ್ಡರ್, ರೇಡಿಯೋ ಮುಂತಾದವುಗಳನ್ನು ತೆಗೆದುಕೊಂಡು ಬರುತ್ತಾರೆ. ಇದರಿಂದಾಗಿಯೇ ಐಷರಾಮದ ವಸ್ತುಗಳ ಸಂಖ್ಯೆ ತಕ್ಕ ಮಟ್ಟಗಿವೆ. ರೈತರ ಒಕ್ಕಲುತನ ವಸ್ತುಗಳು ತಕ್ಕಮಟ್ಟಗಿವೆ. ರೈತರು ತಾವು ಒಕ್ಕಲುತನ ವಸ್ತುಗಳನ್ನು ಮಾರಿ ಬಂದ ಹಣದಿಂದ ಈ ವಿಲಾಸೀಕರ ವಸ್ತುಗಳನ್ನು ಕೊಂಡ ಉದಾಹರಣೆಗಳಿಲ್ಲ.

ರೈತರ ಕೃಷಿ ಸಾಲದ ಮಾಹಿತಿ

ಕೃಷಿ ಒಂದು ಉತ್ಪಾದಕತ್ವ ಉದ್ದಿಮೆವಾದುದರಿಂದ ಅದಕ್ಕೆ ಬಂಡವಾಳ ಅತ್ಯಂತ ಅನಿವಾರ್ಯವಾಗಿ ಬೇಕಾಗಿರುತ್ತದೆ. ಭಾರತದಲ್ಲಿ ಬಹುತೇಕ ರೈತರು ಬಡವರಾಗಿರುವುದರಿಂದ ವ್ಯವಸಾಯಕ್ಕೆ ಹಣಕಾಸಿನ ಸೌಲಭ್ಯ ಅಗತ್ಯವಾಗಿದೆ. ಭಾರತದ ರೈತ ಸಾಲದಲ್ಲಿ ಹುಟ್ಟಿ, ಸಾಲದಲ್ಲಿ ಬೆಳೆದು, ಸಾಲದಲ್ಲಿ ಸತ್ತು ಮತ್ತು ಸಾಲವನ್ನೇ ತನ್ನ ಉತ್ತರಾಧಿಕಾರಿಗಳಿಗೆ (ಮಕ್ಕಳಿಗೆ) ಪಿತ್ರಾರ್ಜಿತ ಆಸ್ತಿಯಾಗಿ ನೀಡುತ್ತಾನೆ ಎನ್ನುವ ಮಾತು ಕೃಷಿಗೆ ಹಣಕಾಸು ಸೌಲಭ್ಯದ ಅಗತ್ಯವನ್ನು ಮತ್ತು ಗ್ರಾಮೀಣ ಋಣಭಾರವನ್ನು (Rural Indebtdness) ತಿಳಿಸುತ್ತದೆ. ನವೀನ್ ಬೇಸಾಯವನ್ನು ಅನುಸರಿಸುವುದಕ್ಕಾಗಿ ಮತ್ತು ಕುಟುಂಬದ ವೆಚ್ಚಕ್ಕಾಗಿ ರೈತರು ಸಾಹುಕಾರರಿಂದ ಚಕ್ರಬಡ್ಡಿಯ ಸಾಲವನ್ನು ಪಡೆಯುತ್ತಾರೆ. ಸಾಲವು, ಚಕ್ರಬಡ್ಡಿಯಿಂದಾಗಿ ಬೆಳೆದು ವಂಶ ಪಾರಂಪರೆಯಾಗಿ ಮುಂದುವರೆಯುತ್ತದೆ[೪೦]. ರೈತರಿಗೆ ಮೂರು ರೀತಿಯ ಸಾಲದ ಅಗತ್ಯವಿದೆ. ಅವರು ಹನ್ನೆರಡು ತಿಂಗಳುಗಳ ಅವಧಿಯ ಅಲ್ಪಾವಧಿಯ ಸಾಲವನ್ನು ಭೂಮಿಯ ಸಾಗುವಳಿಗಾಗಿ ಪಡೆಯುತ್ತಾರೆ. ಐದು ವರ್ಷಗಳವರೆಗಿನ ಮಧ್ಯವಧಿ ಸಾಲವನ್ನು ಕೃಷಿ ಸಾಮಗ್ರಿಗಳನ್ನು ಕೊಳ್ಳಲು, ಜಾನುವಾರುಗಳನ್ನು ಕೊಳ್ಳಲು ಮತ್ತು ಬಾವಿ, ಕೆರೆ, ಇತ್ಯಾದಿಗಳ ದುರಸ್ತಿ ಮಾಡಲು ಪಡೆಯುತ್ತಾರೆ. ಐದು ವರ್ಷಗಳಿಂದ ೩೦ ವರ್ಷಗಳ ಅವಧಿಯ ದೀರ್ಘಾವಧಿ ಸಾಲವನ್ನು ಕೃಷಿಕರು ತಮ್ಮ ಹೊಲದಲ್ಲಿ ಶಾಶ್ವತವಾದ ಸುಧಾರಣೆಯನ್ನು ಮಾಡಲು ಪಡೆಯುತ್ತಾರೆ. ಈ ಸಾಲದಿಂದ ಬಾವಿಯನ್ನು ತೋಡಿಸುವುದು ಪಂಪ ಸೆಟ್ಟನ್ನು ಕೊಳ್ಳುವುದು, ಟ್ರಾಕ್ಟರ್‌ನ್ನು ಕೊಳ್ಳುವುದು ಇತ್ಯಾದಿ ಕಾರ್ಯವನ್ನು ಮಾಡುತ್ತಾರೆ. ಬೇಡ ಸಮುದಾಯದ ರೈತರು ಹೆಚ್ಚಾಗಿ ಅಲ್ಪಾವಧಿ ಸಾಲವನ್ನು ಬ್ಯಾಂಕುಗಳಿಂದ ಪಡೆದಿರುತ್ತಾರೆ. ಕೆಲವೇ ಕೆಲವು ಜನ ದೀರ್ಘಾವಧಿ ಸಾಲ ಪಡೆದು ಬಾವಿಯನ್ನು ತೋಡಿಸಿದ್ದಾರೆ ಮತ್ತು ಪಂಪಸೆಟ್‌ಗಳನ್ನು ಕೊಂಡು ಬಾವಿಗೆ ಕೂಡಿಸಿದ್ದಾರೆ. ಒಂದಿಷ್ಟು ಜನ ರೈತರು ಅಲ್ಪಾವಧಿ ಸಾಲ ಪಡೆದು ಅದನ್ನು ಮನೆ ಖರ್ಚಿಗಾಗಿ ಸಹ ಉಪಯೋಗಿಸಿದ್ದಾರೆ.

ಬೇಡ ರೈತರು ಸಾಂಸ್ಥಿಕ (Institutional) ಮೂಲಗಳಿಂದ ಸಾಲವನ್ನು ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ. ಬಸವಕಲ್ಯಾಣ ತಾಲೂಕಿನ ಲಾಡವಂತಿ ಗ್ರಾಮದಲ್ಲಿ State Bank of India ಬ್ಯಾಂಕಿನ ಶಾಖೆಯಿದೆ ಮತ್ತು ಚಂಡಕಾಪುರ ಗ್ರಾಮದಲ್ಲಿ Syndicate Bank ಶಾಖೆಯಿದೆ. ಈ ಬ್ಯಾಂಕುಗಳಿಂದ ಎಲ್ಲ ಗಾತ್ರದ ರೈತರು ಸಾಲವನ್ನು ಪಡೆದಿರುತ್ತಾರೆ. ಉದಾಹರಣೆಗೆ ದೊಡ್ಡ ಗಾತ್ರದ ಭೂ-ಹಿಡುವಳಿಗಳ ರೈತರು ಶೇ. ೫೦ ರಷ್ಟು ಸಾಲ ಪಡೆದರೆ, ಅತಿ ಸಣ್ಣ ಗಾತ್ರದ ಭೂ-ಹಿಡುವಳಿಗಳನ್ನು ಹೊಂದಿರುವ ರೈತರು ಅತಿ ಕಡಿಮೆ ಪ್ರಮಾಣದಲ್ಲಿ (ಶೇ. ೨೦.೮೧) ಸಾಲ ಪಡೆದಿರುತ್ತಾರೆ. (ಕೋಷ್ಠಕ ೫.೨೭ ನೋಡಿ)

ಕೋಷ್ಟಕ ೫.೨೭ ಸಾಲ ಪಡೆದ ರೈತರ ವಿವರ

ಕ್ರಮ ಸಂಖ್ಯೆ	ಭೂ-ಹಿಡುವಳಿಯ ಗಾತ್ರಗಳು	ಒಟ್ಟು ಸಂಖ್ಯೆ	ಸಾಲ ಪಡೆದವರ ಸಂಖ್ಯೆ	ಶೇಕಡಾ
೧.	ಅತಿ ಸಣ್ಣ ಗಾತ್ರದ ರೈತರು	೨೨೧	೪೬	೨೦.೮೧
೨.	ಸಣ್ಣ ಗಾತ್ರದ ರೈತರು	೩೮೬	೧೧೫	೨೯.೭೯
೩.	ಅರೆ ಮಧ್ಯಮ ಗಾತ್ರದ ರೈತರು	೧೬೫	೫೨	೩೧.೫೧
೪.	ಮಧ್ಯಮ ಗಾತ್ರದ ರೈತರು	೬೧	೨೪	೩೯.೩೪
೫.	ದೊಡ್ಡ ಗಾತ್ರದ ರೈತರು	೮	೪	೫೦.೦೦

ಒಟ್ಟಿನಲ್ಲಿ ಹೇಳುವುದಾದರೆ, ಬೇಡ ರೈತರ ಕೃಷಿ ಅರ್ಥವ್ಯವಸ್ಥೆ ಆರ್ಥಿಕವಾಗಿ ಹಿಂದುಳಿದ ಅರ್ಥವ್ಯವಸ್ಥೆಯಾಗಿದೆ. ಇವರು ಹೊಂದಿರುವ ಭೂಮಿಯ ಫಲವತ್ತತೆ ಕಡಿಮೆಯಾಗಿರುವುದರಿಂದ ಇವರ ಭೂ-ಹಿಡುವಳಿಗಳು ಚಿಕ್ಕದಾಗಿರುವುದರಿಂದ, ನೀರಾವರಿ ಸೌಲಭ್ಯವನ್ನು ಅತ್ಯಧಿಕ ಕಡಿಮೆ ಪ್ರಮಾಣದಲ್ಲಿ ಹೊಂದಿರುವುದರಿಂದ ಇವರಿಗೆ ಕೃಷಿಯಿಂದ ತಕ್ಕ ಪ್ರತಿಫಲ ಸಿಗುತ್ತಿಲ್ಲ. ಅನಾವೃಷ್ಟಿಗೆ ಹೆಸರಾಗಿರುವ ಜಿಲ್ಲೆಯಲ್ಲಿ ಇವರು ಭೂಮಿಯನ್ನು ಸಾಗುವಳಿ ಮಾಡುತ್ತಿರುವುದರಿಂದ ಹಲವಾರು ಸಲ ಇವರು ಬಿತ್ತಿರುವ ಬೀಜವನ್ನು ಮರಳಿ ಪಡೆಯುವುದು ಕಷ್ಟಕರವಾಗಿದೆ.

ಕೃಷಿ ಕಾರ್ಮಿಕರು

ಕೂಲಿಗಾಗಿ ಬೇರೆಯವರ ತೋಟ, ಹೊಲಗದ್ದೆಗಳಲ್ಲಿ ದುಡಿಯುವ ವ್ಯಕ್ತಿ ಕೃಷಿ ಕಾರ್ಮಿಕನಾಗುತ್ತಾನೆ. ಇವರಲ್ಲಿ (ಅ) ಭೂ-ರಹಿತರು ಮತ್ತು (ಬ) ಸಣ್ಣ ಮತ್ತು ಅತಿ ಸಣ್ಣ ಗಾತ್ರದ ಭೂಮಿ ಇರುವವರು ಎಂದು ಎರಡು ವಿಧಗಳಿವೆ. ಭೂ-ರಹಿತ ಕೃಷಿ ಕಾರ್ಮಿಕರು ವರ್ಷದ ಎಲ್ಲ ಕಾಲದಲ್ಲಿ ಬೇರೆಯವರ ತೋಟ, ಹೊಲ ಮತ್ತು ಗದ್ದೆಗಳಲ್ಲಿ ಕೂಲಿಗಾಗಿ ದುಡಿಯುತ್ತಿದ್ದಾರೆ. ಇವರಿಗೆ ಪಿತ್ರಾರ್ಜಿತವಾದ ಅಥವಾ ಸ್ವಂತವಾದ ಭೂಮಿ ಇರುವುದಿಲ್ಲ. ಸ್ವಲ್ಪ ಭೂಮಿ ಹೊಂದಿರುವವರು ತಮ್ಮ ಭೂಮಿಯಿಂದ ಬರುವ ಆದಾಯ ಕುಟುಂಬದ ಪೋಷಣೆಗೆ ಸಾಕಾಗದೆ ಬೇರೆಯವರ ಭೂಮಿಯಲ್ಲಿ ಕೂಲಿಗಾಗಿ ದುಡಿಯುತ್ತಿರುತ್ತಾರೆ. ಭಾರತದಲ್ಲಿ ಸುಮಾರು ೭೦ ದಶಲಕ್ಷ ಜನ ಕೃಷಿ ಕಾರ್ಮಿಕರು ಇದ್ದಾರೆಂದು ಅಂದಾಜಿಸಲಾಗಿದೆ[೪೧].

ಬೇಡ ಸಮುದಾಯದ ಎಲ್ಲ ಕುಟುಂಬಗಳಿಗೆ ಸ್ವಂತವಾದ ಭೂಮಿ ಇರುವುದಿಲ್ಲ. ಉದಾಹರಣೆಗೆ ೧೩೮ (ಶೇ. ೧೪.೧೦) ಕುಟುಂಬಗಳು ಭೂ-ರಹಿತ ಕುಟುಂಬಗಳಾಗಿವೆ ಇದಲ್ಲದೆ, ಶೇ. ೭೭.೮೯ ರಷ್ಟು ಅತಿ ಸಣ್ಣ ರೈತರು ಮತ್ತು ಶೇ. ೪೨.೨೫ ಸಣ್ಣ ಗಾತ್ರದ ರೈತರು ಕೃಷಿ ಕಾರ್ಮಿಕರಾಗಿದ್ದಾರೆ[೪೨]. ಜಿಲ್ಲೆಯ ಇತರ ಗಿರಿಜನರಿಗೆ ಹೋಲಿಸಿದಾಗ ಹೆಚ್ಚಿನ ಪ್ರಮಾಣದಲ್ಲಿಯೇ ಮತ್ತು ಸಣ್ಣ ರೈತರು ಭಾಗಶಃ ಕೃಷಿ ಕಾರ್ಮಿಕರಾಗಿ

(Part time agricultural Labourers) ದುಡಿಯುತ್ತಿದ್ದಾರೆ. ಉದಾಹರಣೆಗೆ ಬೀದರ ಜಿಲ್ಲೆಯ ಗೊಂಡರಲ್ಲಿ ಶೇ. ೪೫ರಷ್ಟು ಚಿಕ್ಕ ಭೂ-ಹಿಡುವಳಿದಾರರು ಕೃಷಿ ಕಾರ್ಮಿಕರಾಗಿದ್ದಾರೆಂದು ಡಾ. ಮೈತ್ರಿಯವರು ತಮ್ಮ ಮಹಾಪ್ರಬಂಧದಲ್ಲಿ ಹೇಳಿದ್ದಾರೆ. ಭಾರತದ ಕೃಷಿ ಕಾರ್ಮಿಕರು ಬಹುತೇಕವಾಗಿ ಹರಿಜನ, ಗಿರಿಜನ ಮತ್ತು ಹಿಂದುಳಿದ ವರ್ಗಗಳಿಗೆ ಸೇರಿದವರಾಗಿರುತ್ತಾರೆ[೪೩]. ಕೃಷಿ ಕಾರ್ಮಿಕರಾದ ಬೇಡ ಜನಾಂಗದವರು ಆರ್ಥಿಕವಾಗಿ ಬಹಳ ಹಿಂದುಳಿದವರಾಗಿದ್ದಾರೆ. ಇವರಲ್ಲಿ ಸಂಘಟನೆ ಇಲ್ಲದಿರುವುದರಿಂದ ಇತರ ಜಾತಿಯ ಶ್ರೀಮಂತ ರೈತರು ಇವರಿಗೆ ಕಡಿಮೆ ಕೂಲಿ ನೀಡಿ ಶೋಷಣೆ ಮಾಡುತ್ತಿದ್ದಾರೆ. ಮೇಲ್ವರ್ಗದವರ ತುಳಿತಕ್ಕೆ ಮತ್ತು ಶೋಷಣೆಗೆ ಬಲಿಯಾದ ಈ ಬಡಪಾಯಿ ಕೃಷಿ ಕಾರ್ಮಿಕರು ತಮಗೆ ಉದ್ಯೋಗ ನೀಡುತ್ತಿರುವ ಜಮೀನ್ದಾರರುಗಳ ವಿರುದ್ಧ ಬಂಡಾಯ ಏಳುವ ಸ್ಥಿತಿಯಲ್ಲಿಲ್ಲ. ಕಡಿಮೆ ಕೂಲಿಯಿಂದಾಗಿ ಜೀವನ ನಿರ್ವಹಣೆಗೆ ಇವರು ಗಳಿಸುವ ಆದಾಯ ಸಾಕಾಗುತ್ತಿಲ್ಲ. ಇದಲ್ಲದೆ. ವಿಶ್ರಾಂತಿರಹಿತ ದುಡಿಮೆ ಮತ್ತು ಅಪೌಷ್ಟಿಕವಾದ ಅಲ್ಪ ಆಹಾರದಿಂದ ಇವರು ಅನಾರೋಗ್ಯದಿಂದ ಬಳಲುತ್ತಿದ್ದಾರೆ. ಆದುದರಿಂದ, ಜೀವನ ನಿರ್ವಹಣೆಗಾಗಿ ಶ್ರೀಮಂತರಿಂದ ಸಾಲವನ್ನು ಪಡೆದು ಕೃಷಿ ಕಾರ್ಮಿಕರು ಋಣಭಾರದಿಂದ ತತ್ತರಿಸುತ್ತಿದ್ದಾರೆ.

ಬೇಡ ಸಮುದಾಯದವರನ್ನು ಪಕ್ಕದ ರಾಯಚೂರ ಜಿಲ್ಲೆಯ ದೇವದುರ್ಗದಿಂದ ಬೀದರ ಜಿಲ್ಲೆಯ ಬಸವಕಲ್ಯಾಣ ತಾಲೂಕಿನಲ್ಲಿರುವ 'ಮದರಸಾಬ' ಸೀಮೆಯನ್ನು ಗೆದ್ದುಕೊಡಲು ಕೋಹಿನೂರ ಗೌಡರು ಇವರನ್ನು ಕರಿಸಿದರು; ಸೀಮೆಯನ್ನು ಗೆದ್ದು ಕೊಟ್ಟ ಇವರಿಗೆ ೪೦೦ ಎಕರೆ ಜಮೀನನ್ನು ನೀಡಲಾಯಿತು. ಆದರೂ, ಈ ೪೦೦ ಎಕರೆಯ ಭೂಮಿಯ ಮಾಲಕರಾಗಲು ಬೇಡರಿಗೆ ಅನುವು ಮಾಡಿಕೊಡದೆ, ಇತ್ತೀಚಿನವರೆಗೆ ಅಂದರೆ ೩೦ ವರ್ಷ ಹಿಂದಿನವರೆಗೆ ಇವರನ್ನು ಗುಲಾಮರಂತೆ ದುಡಿಸಿಕೊಳ್ಳಲಾಯಿತು[೪೪]. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಮೊನ್ನೆ ಮೊನ್ನೆಯವರೆಗೆ ಜೀತದಾಳು ಪದ್ಧತಿ ಜಾರಿಯಲ್ಲಿ ಇದ್ದುದರಿಂದ ಇವರನ್ನು ಸಂಪೂರ್ಣವಾಗಿ ಶೋಷಣೆ ಮಾಡಲಾಯಿತು ಎಂದರೆ ತಪ್ಪಾಗಲಾರದು.

ಕುರಿ ಮತ್ತು ಮೇಕೆ ಕಾಯುವ ಬೇಡರು

೧೨೪ ಬೇಡರು ಕುರಿ ಮತ್ತು ಮೇಕೆಗಳನ್ನು ಕಾಯುವುದನ್ನೇ ತಮ್ಮ ಮುಖ್ಯ ಕಸುಬನ್ನಾಗಿ ಹೊಂದಿರುವುದನ್ನು ನಾವು ಈಗಾಗಲೇ ತಿಳಿದುಕೊಂಡಿದ್ದೇವೆ. ಇವರುಗಳು ಕುರಿಗಳು ಅಲ್ಲದೆ, ಆಡುಗಳನ್ನು ಸಹ ಹೊಂದಿರುತ್ತಾರೆ. ಆದರೆ, ಇವರು ಹೊಂದಿರುವ ಆಡು(ಮೇಕೆ)ಗಳ ಸಂಖ್ಯೆ ಕೇವಲ ೧೯೯ (ಶೇ. ೧೦.೪೦) ಇದೆ (ವಿವರಗಳಿಗಾಗಿ ಕೋಷ್ಟಕ ೫.೨೮ ನೋಡಿ).


ಕೋಷ್ಟಕ ೫.೨೮ ಕುರಿಗಳು ಮತ್ತು ಆಡುಗಳ ಸಂಖ್ಯೆ

ಕ್ರಮ ಸಂಖ್ಯೆ	ಕುರಿಗಳು ಮತ್ತು ಆಡುಗಳ	ಸಂಖ್ಯೆಯಲ್ಲಿ	ಶೇಕಡಾ
೧.	ಕುರಿಗಳು	೧೭೧೫	೮೯.೬೦
೨.	ಆಡುಗಳು	೧೯೯	೧೦.೪೦
	ಒಟ್ಟು	೧೯೧೪	೧೦೦.೦೦

ಕುರಿ ಸಾಕಾಣಿಕೆಯಿಂದ ಬೇಡರು ಹಲವಾರು ರೀತಿಯಲ್ಲಿ ಆದಾಯವನ್ನು ಪಡೆದಿದ್ದಾರ ಮೊದಲನೆಯದಾಗಿ, ತಮ್ಮ ಕುರಿಗಳನ್ನು ಬೇರೆಯವರ ಹೊಲದ ಫಲವತ್ತತೆಯನ್ನು ಹೆಚ್ಚಿಸಲು ಗೊತ್ತು ಮಾಡಿದ ಹೊಲದಲ್ಲಿ ಸಂಜೆಯ ಹೊತ್ತಿಗೆ ಕುರಿಗಳನ್ನು ಕೂಡಿ ಹಾಕುತ್ತಾರೆ. ಈ ಕುರಿಗಳು ಒಂದು ರಾತ್ರಿ ಅಂತಹ ಹೊಲದಲ್ಲಿಯೇ ತಂಗಿಸುವರು. ಆ ಹೊಲದ ಮಾಲಿಕರಿಂದ ಸ್ವಲ್ಪ ಹಣವನ್ನು ಇವರು ಹಿಂದೆ ಪಡೆಯುತ್ತಿದ್ದರು, ಈಗ ಇದು ನಿಂತು ಹೋಗಿದೆ ಎರಡನೆಯದಾಗಿ ಸಾಕಿದ ಕುರಿಗಳ ಮಾರಾಟಗಳಿಂದ ಸ್ವಲ್ಪ ಆದಾಯ ಬರುತ್ತದೆ. ಈ ಆದಾಯದ ಮೊತ್ತದ ಬಗೆಗೆ ಅವರಲ್ಲಿ ಲಿಖಿತ (Records) ಮಾಹಿತಿ ಇಟ್ಟಿರುವುದಿಲ್ಲ. ಹಬ್ಬದ ಖರ್ಚನ್ನು ನಿಭಾಯಿಸಲು ಕೆಲವೊಮ್ಮೆ ಇವರು ತಮ್ಮ ಕುರಿಗಳನ್ನು ಮಾರುತ್ತಾರೆ. ಸಣ್ಣ ಮಕ್ಕಳ 'ಜವುಳ' ಕಾರ್ಯಕ್ರಮ ನೆರವೇರಿಸುವುದಕ್ಕಾಗಿ ಇವರು ಕುರಿಗಳನ್ನು ಮಾರುವುದಲ್ಲದೆ, ಈ ಕಾರ್ಯಕ್ರಮದಲ್ಲಿ ವಿಶೇಷ ಅಡಿಗೆಗಾಗಿ ಕುರಿ ಕೊಯ್ದು ಬಂಧುಗಳಿಗೆಲ್ಲ ಕರೆಸಿ ಊಟ ಬಡಿಸುತ್ತಾರೆ.

ಬೇಡರ ಆದಾಯದ ವರ್ಗೀಕರಣ

ಒಂದು ಬುಡಕಟ್ಟಿನ ಆದಾಯ ಮತ್ತು ಉಳಿತಾಯಗಳು ಹಾಗೂ ಅವರ ಆಸ್ತಿಗಳು ಮತ್ತು ಸಾಲಗಳು ಅವರ ಆರ್ಥಿಕ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳುವಲ್ಲಿ ನೆರವಾಗುತ್ತದೆ. ಮೇಲಾಗಿ ಬೇಡ ಬುಡಕಟ್ಟಿನವರಿಗೆ ಅವಶ್ಯಕವಾಗಿರುವ ಅಭಿವೃದ್ಧಿ ಕಾರ್ಯಕ್ರಮಗಳ ಒಂದು ಸಮಗ್ರ ಯೋಜನೆಯನ್ನು ಸಿದ್ಧಪಡಿಸಿ ಅದನ್ನು ಅನುಷ್ಠಾನಗೊಳಿಸುವಲ್ಲಿ ಸಹ ಇದು ಸಹಾಯಕವಾಗುತ್ತದೆ. ಭೂಮಿಯ ಆದಾಯ ಅದರ ಅತ್ಯುತ್ತಮ ಬಳಕೆಯ ಮೇಲೆ ಅವಲಂಬಿಸಿದೆ. ಬೇಡರು ಹೊಂದಿರುವ ಭೂಮಿ ಶೇಕಡಾ ೯೧.೬೩ ಒಣ ಭೂಮಿಯಾಗಿರುವುದರಿಂದ ಇದರಿಂದ ಬರುವ ಲಾಭ ಹೆಚ್ಚಿನ ಪ್ರಮಾಣದಲ್ಲಿರುವುದು ಸಾಧ್ಯವಿಲ್ಲ. ಈ ರೀತಿಯಲ್ಲಿ ಬೇಡ ಬುಡಕಟ್ಟಿನ ರೈತರ ಕಡಿಮೆ ಪ್ರಮಾಣದ ಆದಾಯ, ಕಡಿಮೆ ಪ್ರಮಾಣದ ಅಥವಾ ಸೊನ್ನೆಯ ಮೊತ್ತದ ಉಳಿತಾಯಕ್ಕೆ ಎಡೆ ಮಾಡಿಕೊಟ್ಟು ಬಡತನದ 'ವಿಷ ಚಕ್ರ'ದಲ್ಲಿ (Vicious circle of ಇವರನ್ನು ಸಿಕ್ಕಿಸಿದೆ ರ್‍ಯಾಗ್ನರ್ ನರ್ಕ್ಸ್‌ನೆಂಬ ಅಭಿವೃದ್ಧಿ ಸಿದ್ಧಾಂತಕಾರನು ಹೇಳುವಂತೆ, "ಬಡ ದೇಶಗಳು ಬಡವಾಗಿರುವ ಕಾರಣ ಅವುಗಳ ಬಡತನವೇ ಆಗಿದೆ"[೪೫] ಒಂದು ದೇಶದಂತೆ, ಒಂದು ಬುಡಕಟ್ಟು ಬಡವಾಗಿರುವ ಕಾರಣ ಅದರ ಬಡತನವೇ ಆಗಿದೆ. ಬೇಡ ಬುಡಕಟ್ಟು ಇದಕ್ಕೆ ಅಪವಾದವೇನು ಇಲ್ಲ.



ಬೇಡರ ಕುಟುಂಬಕ್ಕೆ ಮುಖ್ಯ ಕಸುಬಾದ ಒಕ್ಕಲುತನದಿಂದಾಗಲಿ ಅಥವಾ ಉಪಕಸುಬುಗಳಾದ ಹೈನುಗಾರಿಕೆ, ಕುರಿ ಸಾಕಾಣಿಕೆ ಮತ್ತು ಕೋಳಿ ಸಾಕಾಣಿಕೆ ಮುಂತಾದವುಗಳಿಂದ ಬರುವ ಆದಾಯ ಅಲ್ಪ, ಇದರಿಂದಾಗಿ ಅಲ್ಪ ಉಳಿತಾಯ ಇದು ಬಂಡವಾಳದ ಅಭಾವದ ಪರಿಸ್ಥಿತಿಯನ್ನು ಸೃಷ್ಟಿಸುತ್ತದೆ. ಇದರಿಂದಾಗಿ ಉತ್ಪಾದಕತೆ ಕೆಳಮಟ್ಟದಾಗಿದೆ. ಕೊನೆಯಲ್ಲಿ ಈ ಕೆಳಮಟ್ಟದ ಉತ್ಪಾದಕತೆ ಅಲ್ಪ ಆದಾಯಕ್ಕೆ ದಾರಿ ಮಾಡುತ್ತದೆ.

ಭಾರತದಂತಹ ಬಡರಾಷ್ಟ್ರದಲ್ಲಿ ಮತ್ತು ಕರ್ನಾಟಕದಂತಹ ಆರ್ಥಿಕವಾಗಿ ಅಷ್ಟೇನು ಮುಂದುವರೆಯದ ರಾಜ್ಯಗಳಲ್ಲಿ ವಿಷ ಚಕ್ರಗಳು ಇರುವುದು ಸಹಜ. ಆರ್ಥಿಕವಾಗಿ ಹಿಂದುಳಿದಿರುವ ಹೈದ್ರಾಬಾದ ಕರ್ನಾಟಕ ಪ್ರದೇಶದ ಜಿಲ್ಲೆಗಳಲ್ಲಿ ಒಂದಾದ ಬೀದರಿನಲ್ಲಿ ಎಲ್ಲ ಸಮುದಾಯದ ರೈತರು ಹೆಚ್ಚಾಗಿ ಅತಿ ಸಣ್ಣ (Marginal) ರೈತ ವರ್ಗಕ್ಕೆ ಸೇರಿದವರಾಗಿದ್ದಾರೆ. ಈ ಹಿಂದೆ ೧೯೯೪ರಲ್ಲಿ ಸಲ್ಲಿಸಲಾದ ಸಾಮಾಜಿಕ, ಆರ್ಥಿಕ ಮಟ್ಟದ ಗುರುತು (Bench Mark) ಸಮೀಕ್ಷೆ ವರದಿ ಸಹ, ತನ್ನ ವರದಿಯಲ್ಲಿ ಎಲ್ಲ ಅತೀ ಸಣ್ಣ ರೈತರು ವರ್ಷಕ್ಕೆ ರೂ. ೧೦೦ ದಿಂದ ರೂ. ೨೦,೦೦೦ ಆದಾಯದಲ್ಲಿಯೇ ಬರುತ್ತದೆ ಎಂದು ಹೇಳಿದೆ[೪೬].

ಬೇಡ ಕುಟುಂಬಗಳ ಆದಾಯ

ಬೇಡರು ಪ್ರಮುಖವಾಗಿ ಬೇಸಾಯದಿಂದ ಮತ್ತು ಸ್ವಲ್ಪ ಮಟ್ಟಿಗೆ ಉಪಕಸುಬುಗಳಾದ ಕುರಿ ಸಾಕಾಣಿಕೆ, ಹೈನುಗಾರಿಕೆ ಮತ್ತು ಕೋಳಿ ಸಾಕಾಣಿಕೆ ಮುಂತಾದವುಗಳಿಂದ ಆದಾಯವನ್ನು ಪಡೆಯುತ್ತಿದ್ದಾರೆ. ಇವರಲ್ಲಿ ೪೬ ಜನರಿಗೆ ಸರಕಾರಿ ನೌಕರಿ ಇರುತ್ತದೆ ಹಾಗೂ ಈ ೪೬ ಕುಟುಂಬಗಳಿಗೆ ಭೂಮಿಯೂ ಸಹ ಇದೆ. ರೈತರಲ್ಲಿ ನೀರಾವರಿ ಬೇಸಾಯ ಕಡಿಮೆ ಪ್ರಮಾಣದ್ದಾಗಿದೆ. ರೈತರ ಭೂಮಿಯ ಗುಣಮಟ್ಟ ಸಹ ಕಡಿಮೆ ದರ್ಜೆಯದಾಗಿದೆ. ಆದ್ದರಿಂದ ಮೊದಲು ಐದು ಆದಾಯ ಗುಂಪು ವರ್ಗೀಕರಣದಲ್ಲಿಯೇ ಶೇ.

೭೪.೩೬ ಜನ ರೈತರು, ಭೂಮಿಯಿಲ್ಲದ ಕೃಷಿ ಕಾರ್ಮಿಕರು ಇದ್ದಾರೆ. ರೈತರಲ್ಲಿ ಎಲ್ಲ ಅತಿ ಸಣ್ಣ ರೈತರು ಮತ್ತು ಸಣ್ಣ ಪ್ರಮಾಣದ ರೈತರೆಲ್ಲರು ಅಂದರೆ, ಕೃಷಿ ಕಾರ್ಮಿಕರೆಲ್ಲರೂ ಈ ಆದಾಯದ ಗುಂಪುಗಳಲ್ಲಿಯೇ ಬರುತ್ತಾರೆ (ವಿವರಗಳಿಗೆ ಕೋಷ್ಟಕ ೫.೨೯ ನೋಡಿ).

ಕೋಷ್ಟಕ ೫.೨೯ ಬೇಡ ಕುಟುಂಬಗಳ ಆದಾಯ ವಿವರ

ಕ್ರಮ ಸಂಖ್ಯೆ	ಆದಾಯದ ಗುಂಪುಗಳು	ಕುಟುಂಬಗಳ ಸಂಖ್ಯೆ	ಶೇಕಡಾ
೧.	ರೂ. ೧,೦೦೦ ರಿಂದ ಕಡಿಮೆ	೧೦೨	೧೦.೪೨
೨.	ರೂ. ೧,೦೦೧ ರಿಂದ ೨,೦೦೦	೯೦	೯.೧೯
೩.	ರೂ. ೨,೦೦೧ ರಿಂದ ೩,೫೦೦	೬೫	೬.೬೪
೪.	ರೂ. ೩,೫೦೧ ರಿಂದ ೫,೦೦೦	೭೫	೭.೬೬
೫.	ರೂ. ೫,೦೦೧ ರಿಂದ ೭,೦೦೦	೩೯೬	೪೦.೪೫
೬.	ರೂ. ೭,೦೦೧ ರಿಂದ ೧೦,೦೦೦	೧೦೫	೧೦.೭೩
೭.	ರೂ. ೧೦,೦೦೧ ರಿಂದ ೧೫,೦೦೦	೭೫	೦೭.೬೬
೮.	ರೂ. ೧೫,೦೦೧ ರಿಂದ ೨೦,೦೦೦	೧೦	೦೧.೦೨
೯.	ರೂ. ೨೦,೦೦೧ ರಿಂದ ೩೦,೦೦೦	೦೬	೦.೬೧
೧೦.	ರೂ. ೩೦,೦೦೧ ರಿಂದ ೪೦,೦೦೦	೦೪	೦.೪೧
೧೧.	ರೂ. ೪೦,೦೦೧ ರಿಂದ ೫೦,೦೦೦	೪೦	೪.೦೮
೧೨.	ರೂ. ೫೦,೦೦೧ ರಿಂದ ೭೫,೦೦೦	೦೩	೦.೩೧
೧೩.	ರೂ. ೭೫,೦೦೧ ರಿಂದ ೧,೦೦,೦೦೦	೦೪	೦.೪೨
೧೪.	ರೂ. ೧,೦೦,೦೦೧ ರಿಂದ ೧,೫೦,೦೦೦	೦೨	೦.೨೦
೧೫.	ರೂ. ೧,೫೦,೦೦೦೧ ರಿಂದ ೨,೦೦,೦೦೦	೦೨	೦.೨೦
	ಒಟ್ಟು	೯೭೯	೧೦೦.೦೦

ಮೇಲಿನ ಕೋಷ್ಟಕದ ಮೊದಲ ಐದು ಆದಾಯದ ಗುಂಪುಗಳು ಬಹಳ ಕಡಿಮೆ ಪ್ರಮಾಣದ ವಾರ್ಷಿಕ ಆದಾಯವನ್ನು ಹೊಂದಿರುತ್ತವೆ ಎಂಬುದನ್ನು ಬೇರೆ ಹೇಳಬೇಕಾಗಿಲ್ಲ. ಉದಾಹರಣೆಗೆ ಮೊದಲನೆಯ ಆದಾಯದ ಗುಂಪು ರೂ. ೧,೦೦೦ಕ್ಕಿಂತ ಕಡಿಮೆ ಆದಾಯವನ್ನು ಹೊಂದಿದ್ದರೆ, ಕೊನೆಯ (೭) ಆದಾಯದ ಗುಂಪು ರೂ. ೫,೦೦೧ ರಿಂದ ೭,೦೦೦ಕ್ಕೆ ಮಾತ್ರ ಮಿತಿಗೊಂಡಿದೆ. ಇನ್ನೊಂದು ಅರ್ಥದಲ್ಲಿ ಹೇಳುವುದಾದರೆ, ಶೇ. ೭೩.೯೧ ಭೂ-ರಹಿತ ಕೃಷಿ ಕಾರ್ಮಿಕರ ವಾರ್ಷಿಕ ಆದಾಯ ರೂ. ೧,೦೦೦ಕ್ಕಿಂತಲೂ ಕಡಿಮೆಯಿದೆ ಇನ್ನಿತರ ಉಳಿದ ಕೃಷಿ ಕಾರ್ಮಿಕರ ವಾರ್ಷಿಕ ಆದಾಯ ರೂ. ೧೦೦೧ ರಿಂದ ೨,೦೦೦ ರಷ್ಟು ಮಾತ್ರ ಇದೆ. ೨೭೧ ಅತಿ ಸಣ್ಣ ರೈತರ ವಾರ್ಷಿಕ ಆದಾಯ ರೂ. ೧೦೦೧ ರಿಂದ ೫,೦೦೦ದ ವರೆಗೆ ಮಾತ್ರ ಸೀಮಿತವಾಗಿದೆ. ಇವರು ಎರಡು, ಮೂರು ಮತ್ತು ನಾಲ್ಕನೆಯ ಆದಾಯದ

ಗುಂಪುಗಳಲ್ಲಿ ಬರುತ್ತಾರೆ. ಎಲ್ಲ ೩೮೬ ಸಣ್ಣ ರೈತರ ವಾರ್ಷಿಕ ಆದಾಯ ರೂ. ೫೦೦೧ ರಿಂದ ರೂ. ೭,೦೦೦ದ ವರೆಗಿನ ಐದನೆಯ ವರ್ಗೀಕರಣದ ಆದಾಯದಲ್ಲಿದೆ.

೧೬೫ ಅರೆ ಮಧ್ಯಮ ಗಾತ್ರ ಭೂಮಿಯುಳ್ಳ ರೈತರ ವಾರ್ಷಿಕ ಆದಾಯ ೬ನೇ ಮತ್ತು ೭ ಆದಾಯದ ಗುಂಪುಗಳಿಗೆ ಸೀಮಿತವಾಗಿದೆ. ೬೧ ಮಧ್ಯಮ ಗಾತ್ರದ ರೈತರ ವಾರ್ಷಿಕ ಆದಾಯ ಏಳರಿಂದ ೧೧ನೆಯ ಗುಂಪಿನ ವರ್ಗೀಕರಣಕ್ಕೆ ಅಂದರೆ, ರೂ. ೧೦,೦೦೧ ರಿಂದ ರೂ. ೫೦,೦೦೦ದ ವರೆಗಿನ ಆದಾಯಗಳಿಗೆ ಸೀಮಿತವಾಗಿದೆ. ೮ ದೊಡ್ಡ ಪ್ರಮಾಣದ ರೈತರ ವಾರ್ಷಿಕ ಆದಾಯ ೧೨ನೆಯ ಮತ್ತು ೧೩ನೆಯ ಗುಂಪಿನ ಆದಾಯಕ್ಕೆ ಸಮವಿದೆ. ಕೇವಲ ಒಬ್ಬ ದೊಡ್ಡ ಪ್ರಮಾಣದ ರೈತ ೧೪ನೆಯ ಆದಾಯದ ಗುಂಪಾದ ರೂ. ೧,೦೦,೦೦೧ ರಿಂದ ೧,೫೦,೦೦೦ದ ವರೆಗಿನ ಆದಾಯದಲ್ಲಿ ಬಂದಿದ್ದಾರೆ.

೪೬ ಸರಕಾರಿ ನೌಕರರು ಇದ್ದಾರೆ. ಇದರಲ್ಲಿ ಪೋಲಿಸರು-೬; ಬಿಎಸ್‌ಎಫ್-೫; ಹೈಸ್ಕೂಲ ಶಿಕ್ಷಕರು ೧; ಪ್ರಾಥಮಿಕ ಶಿಕ್ಷಕರು ೩; ಕಾಲೇಜು ಉಪನ್ಯಾಸಕ ೧; ಮೊದಲನೆ ದರ್ಜೆಯ ಅಧಿಕಾರಿ ೧; ಅಭಿಯಂತರ ೧; ಮತ್ತು ಆರೋಗ್ಯ ಆಸ್ಪತ್ರೆಯಲ್ಲಿ ಮೇಲ್ವಿಚಾರಕರಾಗಿ ಒಬ್ಬರು ಕೆಲಸ ಮಾಡುತ್ತಿದ್ದಾರೆ. ಇವರಲ್ಲಿನ ಪೋಲಿಸರು, ಪ್ರಾಥಮಿಕ ಶಿಕ್ಷಕರು ಐದನೆಯ ಆದಾಯದ ಗುಂಪಿಗೆ (ರೂ. ೫,೦೦೧ ರಿಂದ ೭,೦೦೦) ಸೇರಿದ್ದಾರೆ.

ಪ್ರೌಢ ಶಾಲೆಯ ಶಿಕ್ಷಕರು ವಾರ್ಷಿಕ ಆದಾಯ ೬ನೆಯ ಆದಾಯದ ಗುಂಪಿಗೆ ಸೀಮಿತವಾಗಿದೆ. ಕಾಲೇಜಿನ ಉಪನ್ಯಾಸಕ ವಾರ್ಷಿಕ ಆದಾಯ ೧೩ನೆಯ ಆದಾಯ ಗುಂಪಿನದಾಗಿದೆ. ಆರೋಗ್ಯ ಇಲಾಖೆಯ ಮೇಲ್ವಿಚಾರಕರು ಸಹ ಈ ಗುಂಪಿನಲ್ಲಿಯೇ ಬರುತ್ತಾರೆ. ಮೊದಲನೆಯ ದರ್ಜೆಯ ಸರಕಾರಿ ಅಧಿಕಾರಿ ೧೪ನೇಯ ಆದಾಯದ ಗುಂಪಿಗೆ ಸೇರಿದರೆ, ಇಂಜನೀಯರ್ ಒಬ್ಬ ವ್ಯಕ್ತಿಯ ವಾರ್ಷಿಕ ಆದಾಯ ಕೊನೆಯ ಹಾಗೂ ೧೫ನೆಯ ಗುಂಪಿನ ಆದಾಯಕ್ಕೆ ಸಮನಾಗಿದೆ.

ಮೇಲಿನ ಎಲ್ಲಾ ಆದಾಯದ ಗುಂಪುಗಳಿಂದ ಕೆಳಗಿನ ನಿರ್ಣಯಗಳನ್ನು ನೀಡಲಾಗಿದೆ.

೧. ಇಂಜನೀಯರ್ ಮತ್ತು ಪ್ರಥಮ ದರ್ಜೆಯ ನೌಕರರು ತಮಗೊಂದು ವಾಸಿಸಲು ಮನೆಯನ್ನು ಹೊಂದಿರುತ್ತಾರೆ. ಸುಖಕರ ಮತ್ತು ವಿಲಾಸಿ ವಸ್ತುಗಳಿಗಾಗಿ ಹಣವನ್ನು ಖರ್ಚು ಮಾಡುವ ಸಾಮರ್ಥ್ಯವನ್ನು ಹೊಂದಿರುತ್ತಾರೆ. ಅಂದ ಮೇಲೆ , ಬಹುತೇಕ ಇವರೆಲ್ಲರನ್ನು ಮೇಲಿನ ಮಧ್ಯಮ ವರ್ಗ (Upper Middle Income Category) ಕ್ಕೆ ಸೇರಿದವರಾಗಿದ್ದಾರೆ. ಇವರು ನಮಗೆ ಒಂದು ತರಹದಲ್ಲಿ ಮೊದಲನೆಯ ವರ್ಗದ ಜನ.

೨. ಎರಡನೆಯ ವರ್ಗದಲ್ಲಿ, ದ್ವಿತೀಯ ಮತ್ತು ತೃತೀಯ ದರ್ಜೆಯ ನೌಕರರು ಬರುತ್ತಾರೆ. ಇದರ ಜೊತೆಗೆ ಕೆಲವು ಮಧ್ಯಮ ಮತ್ತು ದೊಡ್ಡ ಗಾತ್ರದ ಭೂ-ಹಿಡುವಳಿಗಳ ಮಾಲಿಕರಾದ ಜನರು ಬರುತ್ತಾರೆ. ಇವರುಗಳಿಗೆ ನಾವು ಮಧ್ಯಮ ವರ್ಗದವರೆಂದು ಕರೆಯುತ್ತೇವೆ.

೩. ಮೂರನೆಯ ವರ್ಗದಲ್ಲಿ ನಾಲ್ಕನೆಯ ದರ್ಜೆಯ ನೌಕರರು ಸಣ್ಣ ರೈತರು ಮತ್ತು ಅತೀ ಸಣ್ಣ ರೈತರು ಬರುವರು, ಇವರನ್ನು ನಾವು ಕೆಳಮಧ್ಯಮ ವರ್ಗದವರೆಂದು ಕರೆಯುತ್ತೇವೆ.

೪. ಎಲ್ಲ ಭೂ-ರಹಿತ ಕೂಲಿ ಕಾರ್ಮಿಕರು, ನಿರ್ಗತಿಕರು, ವಸತಿಹೀನರು ಮುಂತಾದವರು ಕಡುಬಡವರಾದ ನಾಲ್ಕನೆಯ ವರ್ಗದಲ್ಲಿ ಬರುತ್ತಾರೆ. ಇವರುಗಳ ಆದಾಯ ಬಡತನದ ರೇಖೆಯ ಕೆಳಗಡೆಯದಾಗಿರುತ್ತದೆ.

ಈ ಮೇಲಿನ ವರ್ಗೀಕರಣ ತೀರಾ ಸರಳವೆನಿಸಬಹುದು. ಈ ವರ್ಗಗಳಲ್ಲಿಯೇ ಆಂತರಿಕವಾಗಿ ವೈರುಧ್ಯಗಳು ಇರುತ್ತವೆ. ಸಾಮಾಜಿಕ ವ್ಯವಸ್ಥೆ ತುಂಬಾ ಸಂಕೀರ್ಣವಾಗಿದ್ದು ಇದನ್ನು ಸೂಕ್ಷ್ಮವಾಗಿ ಬಿಡಿಸಿ ಹೇಳುವುದು ಸಂಶೋಧಕನೊಬ್ಬನಿಗೆ ಒಂದು ಸವಾಲು ಆಗಿದೆ.

ಕೃಷಿಯೇತರ ಕಾರ್ಮಿಕರು

ಈ ಅಧ್ಯಯನದಲ್ಲಿ ಕೃಷಿಯೇತರ ಕಾರ್ಮಿಕರೆಂದರೆ, ಹೋಟಲಿನಲ್ಲಿ ಕೆಲಸ ಮಾಡುವವರು, ಮನೆ ಕಟ್ಟುವ ಕೆಲಸ ಮಾಡುವವರ ಸಹಾಯಕರಾದ ಮೇಸ್ತ್ರಿ, ಗೌಂಡಿ ಇತ್ಯಾದಿ ಮತ್ತು ಆಟೋ ರಿಕ್ಷಾ ಚಾಲಕರು. ೫.೧ ಕೋಷ್ಠಕದಲ್ಲಿ ಸೂಚಿಸಿದಂತೆ ಇವರ ಒಟ್ಟು ಸಂಖ್ಯೆ ೨೧೩ ಮತ್ತು ಇವರಲ್ಲಿನ ಸ್ತ್ರೀ ಕಾರ್ಮಿಕರ ಸಂಖ್ಯೆ ೩೭ ಆಗಿದೆ. ಈ ಕೃಷಿಯೇತರ ಕಾರ್ಮಿಕರು ಬಡವರಾಗಿರುತ್ತಾರೆ. ಇದಕ್ಕೆ ಅವರ ಕಡಿಮೆ ಮಟ್ಟದ ಕೂಲಿ ಕಾರಣವಾಗಿರುತ್ತದೆ. ಹೀಗಾಗಿ ಇವರ ಜೀವನ ಮಟ್ಟ ನಿಕೃಷ್ಠವಾಗಿರುತ್ತದೆ. ಇದರಿಂದಾಗಿ ಇವರ ದಕ್ಷತೆ ತುಂಬಾ ಕಡಿಮೆ ಇರುತ್ತದೆ. ಇವರಲ್ಲಿ ಅನೇಕರು ಕುಡಿತ, ಜೂಜ ಮುಂತಾದ ದುರಾಭ್ಯಾಸಗಳ ದಾಸರಾಗಿದ್ದಾರೆ. ಹೀಗಾಗಿ ಇವರ ದಕ್ಷತೆ, ಉಳಿತಾಯ ಮತ್ತು ವಿವೇಕ ಬಹಳ ಕಡಿಮೆಯದಾಗಿರುತ್ತದೆ. ಇವರಲ್ಲಿ ಒಗ್ಗಟ್ಟು ಇರಲಾರದ ಕಾರಣ ಸುಲಭವಾಗಿ ಶೋಷಣೆಗೆ ಒಳಗಾಗುತ್ತಾರೆ.

ಸರಕಾರಿ ನೌಕರರು

ಬೇಡರ ಒಟ್ಟು ಜನಸಂಖ್ಯೆಯಲ್ಲಿ ಶೇ. ೧.೬೩ ರಷ್ಟು ಸರಕಾರಿ ಹುದ್ದೆಯಲ್ಲಿದ್ದಾರೆ. ಇವರ ಒಟ್ಟು ಸಂಖ್ಯೆ ೪೬ ಇದೆ. (ಆರು ಜನ ಸೈನಿಕರಿದ್ದಾರೆ) ಇವರಲ್ಲಿ ಶಿಕ್ಷಕರು, ಪೋಲಿಸರು, ಆಡಳಿತಗಾರರು, ಅಭಿಯಂತರರು ಮುಂತಾದ ಸರಕಾರಿ ಹುದ್ದೆಗಳಲ್ಲಿದ್ದಾರೆ.

ಬೇಡ ಜನರ ಉದ್ದಿಮೆಯಲ್ಲಿನ ಭಾಗವಹಿಸುವಿಕೆ

ಆರ್ಥಿಕಾಭಿವೃದ್ಧಿಗೆ ಕೈಗಾರಿಕೆಗಳ ಪ್ರಗತಿ ಅತ್ಯಂತ ಅವಶ್ಯಕವಾಗಿದೆ. ಆದುದರಿಂದಲೇ ಕೈಗಾರೀಕರಣವಾಗದಿದ್ದರೆ ವಿನಾಶ ಸಂಭವಿಸುತ್ತದೆ ಎಂದಿದ್ದಾರೆ ಭಾರತ ರತ್ನ ಡಾ. ಎಂ. ವಿಶ್ವೇಶ್ವರಯ್ಯನವರು. ಕೈಗಾರೀಕರಣವೆಂದರೆ ಕಾರ್ಖಾನೆ, ಗಿರಣಿ, ಗಣಿ, ಸಾರಿಗೆ ವ್ಯವಸ್ಥೆಗಳ ನಿರ್ಮಾಣ ಮತ್ತು ಅಭಿವೃದ್ಧಿ ಎಂದರ್ಥ. ಒಂದು ದೇಶದಲ್ಲಿ ಕೈಗಾರಿಕೆಗಳ ಸ್ಥಾಪನೆಗೆ ದೊಡ್ಡ ಮೊತ್ತದ ಬಂಡವಾಳ ಬೇಕಾಗುತ್ತದೆ. ಇಂತಹ ಬೃಹತ್ ಪ್ರಮಾಣದ ಹೂಟೆಯಿಂದ ಬೃಹತ್ ಪ್ರಮಾಣದ ಉತ್ಪಾದನೆಯಾಗುತ್ತದೆ. ಇದರ ಪರಿಣಾಮವಾಗಿ ಒಂದು ದೇಶದ ರಾಷ್ಟ್ರೀಯ ಆದಾಯ ಮತ್ತು ತಲಾ ಆದಾಯ ಹೆಚ್ಚಾಗುತ್ತದೆ. ಕೈಗಾರಿಕೆಗಳಿಂದಾಗಿ ಸಾಕಷ್ಟು ಉದ್ಯೋಗಾವಕಾಶಗಳು ಸೃಷ್ಠಿಯಾಗುತ್ತವೆ. ಕೈಗಾರೀಕರಣದಿಂದ ರಾಷ್ಟ್ರದ ಆದಾಯವಲ್ಲದೆ ತಲಾ ಆದಾಯದಲ್ಲೂ ಹೆಚ್ಚಳವಾಗುತ್ತದೆ. ಪರಿಣಾಮವಾಗಿ ಜನರ ಜೀವನ ಮಟ್ಟ ಅಧಿಕವಾಗುತ್ತದೆ. ಮೇಲಾಗಿ ಕೈಗಾರಿಕೆಗಳ ಲಾಭವನ್ನೇ ಪ್ರಧಾನ ಉದ್ದೇಶವಾಗಿಟ್ಟುಕೊಂಡಿರುವುದರಿಂದ ಉದ್ದಿಮೆಗಳು ಪ್ರತಿಭಾವಂತರಿಗೆ ಅವಕಾಶವನ್ನು ಕಲ್ಪಿಸಿಕೊಡುತ್ತದೆ[೪೨].

ಕೈಗಾರಿಕೆಗಳ ಸ್ಥಾಪನೆ ದೇಶದ ಆರ್ಥಿಕಾಭಿವೃದ್ಧಿಗೆ ಪೂರಕವಾಗಿರುವಂತೆಯೇ ಒಂದು ಸಮುದಾಯದ ವ್ಯಕ್ತಿಗಳ ತಲಾ ಆದಾಯ ಹೆಚ್ಚುವಲ್ಲಿ ಕೈಗಾರಿಕೆ ಮಹತ್ವದ ಪಾತ್ರವನ್ನು ವಹಿಸುತ್ತದೆ. ಉದಾಹರಣೆಗೆ ಭಾರತದಲ್ಲಿ ಸಿಂಧೀಯರು, ಪಾರಸಿಯರು ಇತ್ಯಾದಿ ಜನರು ಆರ್ಥಿಕವಾಗಿ ಮುಂದು ಬರುವುದಕ್ಕೆ ಅವರು ಉದ್ದಿಮೆ ರಂಗದಲ್ಲಿ ಹೆಚ್ಚಾಗಿ ದುಡಿಯುತ್ತಿರುವುದೇ ಕಾರಣ. ಇದಕ್ಕೆ ವ್ಯತಿರಿಕ್ತವಾಗಿ ಬೇಡ ಸಮುದಾಯದ ಜನರು, ಕೈಗಾರಿಕೆಯ ಕ್ಷೇತ್ರದಲ್ಲಿ ಯಾವ ಕಾರ್ಯಗಳನ್ನು ಕೈಕೊಳ್ಳದೇ ಆರ್ಥಿಕವಾಗಿ ಹಿಂದುಳಿದು ಬಿಟ್ಟಿದ್ದಾರೆ. ಬೇಡ ಸಮುದಾಯದಲ್ಲಿ ಯಾವ ವ್ಯಕ್ತಿಯೂ ಒಂದು ಚಿಕ್ಕ ಉದ್ದಿಮೆಯನ್ನು ಪ್ರಾರಂಭಿಸಿಲ್ಲ. ವಿಸ್ತೃತವಾಗಿ ಹೇಳುವುದಾದರೆ, ಜಿಲ್ಲೆಯಲ್ಲಿ ಎಣ್ಣೆ ಮಿಲ್ಲುಗಳು, ದಾಲ ಮಿಲ್ಲುಗಳು, ಇಂಜೀನಿಯರಿಂಗ್ ಕಾಮಗಾರಿಗಳಾದ ಸಣ್ಣ ಪ್ರಮಾಣದ ಕೈಗಾರಿಕೆಗಳು, ಹತ್ತಿ ಬೀಜ ಬೇರ್ಪಡಿಸುವ ಮಿಲ್‌ಗಳು, ಪ್ಲಾಸ್ಟಿಕ್ ಕೈಗಾರಿಕೆ, ಸಾಬೂನು ತಯಾರಿಕೆ, ಲೋಹದ ಪಾತ್ರೆಗಳ ತಯಾರಿಕೆ ಬಿದರಿ ಉದ್ದಿಮೆ, ಐಸಕ್ರಿಂ ತಯಾರಿಕೆ, ಸಕ್ಕರೆ ಕಾರ್ಖಾನೆಗಳು, ಇವೆ ಈ ಎಲ್ಲ ಘಟಕಗಳ ಮಾಲಿಕರು ಮೇಲ್ಜಾತಿಗೆ ಸೇರಿದವರಾಗಿದ್ದಾರೆ. ಇಲ್ಲಿನ ಕಾರ್ಮಿಕರಲ್ಲೂ ಸಹ ಬೇಡ ಸಮುದಾಯದವರಿಲ್ಲ. ಬೀದರ ಜಿಲ್ಲೆಯ ಬೇಡರು ವಿವಿಧ ಕಾರ್ಖಾನೆಗಳಲ್ಲಿ ಕಾರ್ಮಿಕರಾಗಿ ದುಡಿಯುತ್ತಿಲ್ಲ. ಕೃಷಿ ಮತ್ತು ಕೃಷಿಗೆ ಸಂಬಂಧಿಸಿದ ಕಸುಬುಗಳಲ್ಲಿ ಈ ಜನರು ದುಡಿದು ಕಡಿಮೆ ಆದಾಯ ಪಡೆಯುತ್ತಿದ್ದಾರೆ. ಇವರು ಶ್ರೀಮಂತರಾಗುವುದು ಕಷ್ಟ ಸಾಧ್ಯ.


ಬೇಡರು ತೃತೀಯ ರಂಗ

ಜಗತ್ತಿನಲ್ಲಿ ಕೈಗಾರಿಕೆಯ ಕ್ರಾಂತಿಯ ಜೊತೆಗೆ ಸಾರಿಗೆಯ ಕ್ರಾಂತಿಯು ಸಂಭವಿಸಿದೆ. ಅಮೇರಿಕ ಮತ್ತು ಐರೋಪ್ಯ ದೇಶಗಳ ಆರ್ಥಿಕ ವ್ಯವಸ್ಥೆಯಲ್ಲಿ ಕೈಗಾರಿಕೆ ಜೊತೆಗೆ ಸಾರಿಗೆ ಕ್ರಾಂತಿಯನ್ನು ಕಾಣಬಹುದು. ಉತ್ಪಾದಿಸಲ್ಪಡುವ ಸರಕುಗಳ ವಿತರಣೆ ಸರಿಯಾಗಿ ಇರುವಂತೆ ನೋಡಿಕೊಳ್ಳುವ ಗುರುತರ ಜವಾಬ್ದಾರಿ ಸಾರಿಗೆ ವ್ಯವಸ್ಥೆಯಾಗಿದೆ. ಒಂದು ದೇಶವನ್ನು ದೇಹಕ್ಕೆ ಹೋಲಿಸಿದರೆ ಸಾರಿಗೆ ವ್ಯವಸ್ಥೆಯನ್ನು ನರಮಂಡಲಕ್ಕೆ ಹೋಲಿಸಲಾಗುತ್ತದೆ. ಕೃಷಿಯನ್ನು ಎಲುಬುಗಳೆಂದು, ಕೈಗಾರಿಕೆಯನ್ನು ಮಾಂಸಖಂಡಗಳೆಂದು ವರ್ಣಸಲಾಗಿದೆ. ಸಾರಿಗೆಯನ್ನು ನರಮಂಡಲವೆಂದು ವರ್ಣಿಸುವುದು ಸಾರಿಗೆ ವ್ಯವಸ್ಥೆಯ ಮಹತ್ವವನ್ನು ತಿಳಿಸುತ್ತದೆ. ಸಾರಿಗೆ ವ್ಯವಸ್ಥೆ ಜೊತೆಗೆ, ತೃತೀಯ ರಂಗದಲ್ಲಿ ಅಳವಡಿಸಿಕೊಳ್ಳಲಾಗಿದೆ. ಒಬ್ಬ ವ್ಯಕ್ತಿ ಓದಿ ಡಾಕ್ಟರ್‌ರಾದರೆ, ಇಂಜನಿಯರಾದರೆ, ಮತ್ತು ಮಹಾವಿದ್ಯಾಲಯಗಳಲ್ಲಿ ಪ್ರಾಧ್ಯಾಪಕರಾದರೆ, ಅವನ ಮಾಸಿಕ ಆದಾಯ ಮತ್ತು ವೇತನ ಇವುಗಳಲ್ಲಿ ಗಮನಾರ್ಹವಾದ ಹೆಚ್ಚಳ ಕಂಡು ಬರುವುದು ಸಹಜ. ಮುಂದುವರೆದು ಒಬ್ಬ ವ್ಯಕ್ತಿ ಖಾಸಗಿ ರಂಗದಲ್ಲಿ ಬಸ್ಸುಗಳ ಮತ್ತು ಲಾರಿ ಯಜಮಾನನಾದರೆ, ಅವನು ಶ್ರೀಮಂತನೆನಿಸಿಕೊಳ್ಳುವುದು ಸಹಜ. ಉದ್ದಿಮೆಯಂತೆ, ತೃತೀಯ ರಂಗದಲ್ಲಿ ವ್ಯಕ್ತಿಗಳು (ಶಿಕ್ಷಣ ಮತ್ತು ನೈಪುಣ್ಯತೆಯನ್ನು ಹೊಂದಿ) ಭಾಗವಹಿಸಿದಾಗ, ಅವರ ತಲಾ ಆದಾಯ ಬಹಳಷ್ಟು ಅಧಿಕವಾಗುತ್ತದೆ. ಬೇಡ ಸಮುದಾಯದ ವ್ಯಕ್ತಿಗಳು ತೃತೀಯ ರಂಗದಲ್ಲಿ ಭಾಗವಹಿಸಲಾರದೇ ಬಡವರಾಗಿ ಉಳಿದಿದ್ದಾರೆ.

ಬೇಡರ ಅನುಭೋಗದ ಕ್ರಿಯೆ

ಒಂದು ಅರ್ಥವ್ಯವಸ್ಥೆಯಲ್ಲಿರುವ ಜನರನ್ನು ಸ್ಥೂಲವಾಗಿ ಅನುಭೋಗಿಗಳು ಮತ್ತು ಉತ್ಪಾದಕರು ಎಂದು ವರ್ಗೀಕರಿಸಲಾಗುತ್ತದೆ. ಜನರು ತಮ್ಮ ಆಶೆಗಳನ್ನು ತೃಪ್ತಿಪಡಿಸಲು ಸರಕು ಮತ್ತು ಸೇವೆಗಳನ್ನು ಉಪಯೋಗಿಸಿಕೊಳ್ಳುವರು. ಈ ಪ್ರಕ್ರಿಯೆಗೆ ಅರ್ಥಶಾಸ್ತ್ರದಲ್ಲಿ 'ಅನುಭೋಗ' ಅಥವಾ 'ಉಪಬೋಗ' ಎಂದು ಕರೆಯುತ್ತಾರೆ. ಸರಕು-ಸೇವೆಗಳನ್ನು ಉತ್ಪಾದಿಸುವವರು ಉತ್ಪಾದಕರು ಮಹತ್ವದ ಸ್ಥಾನವನ್ನು ಪಡೆದಿದ್ದರೂ, ಅಂತಿಮವಾಗಿ ಅರ್ಥವ್ಯವಸ್ಥೆಯಲ್ಲಿ ಅನುಭೋಗಿಗಳದ್ದೇ ಮೇಲುಗೈ, ಉತ್ಪಾದಕರ ಮತ್ತು ಅನುಭೋಗಿಗಳ ನಡುವೆ ಪರಸ್ಪರ ಸಂಬಂಧವಿರುತ್ತದೆ. ಉತ್ಪಾದನೆ ಪೂರೈಕೆಯಾದರೆ (Supply) ಉಪಬೋಗ ಒಂದು ರೀತಿಯಲ್ಲಿ ಬೇಡಿಕೆ (Demand) ಯಾಗಿದೆ. ಒಂದು ಅರ್ಥವ್ಯವಸ್ಥೆಯಲ್ಲಿ ಅನುಭೋಗಿಗಳು ತಮಗೆ ಬೇಕಾದಾಗ ಸರಕು-ಸೇವೆಗಳನ್ನು ಬೆಲೆ ಕೊಟ್ಟು ಸರಕು ಮಾರುಕಟ್ಟೆಯಿಂದ ಪಡೆದುಕೊಳ್ಳುತ್ತಾರೆ. ಅನುಭೋಗಿಗಳು ಮಾಡುವ ಖರ್ಚಿಗೆ ಅನುಭೋಗಿ ವೆಚ್ಚವೆಂದು (Consumption expenditure) ಹೆಸರು. ವೆಚ್ಚ ಮಾಡಲು ಆದಾಯ (ವರಮಾನ) ಬೇಕು. ಅನುಭೋಗಿಗಳಿಗೆ ಆದಾಯ ಎಲ್ಲಿಂದ ಹೇಗೆ ದೊರೆಯುತ್ತದೆ. ಅನುಭೋಗಿಗಳು ಘಟಕಗಳ ವಸ್ತುಗಳನ್ನು ಅಥವಾ ಘಟಕವನ್ನು ಮಾರಾಟ

ಮಾಡಿ ಅವರು ಪ್ರತಿಫಲ ರೂಪವಾಗಿ ಗೇಣಿ, ಕೂಲಿ (ಸಂಬಳ) ಮತ್ತು ಬಡ್ಡಿಯನ್ನು ಪಡೆಯುತ್ತಾರೆ. ಘಟಕಗಳು ಲಭ್ಯವಾಗುವ ಮಾರುಕಟ್ಟೆಗೆ ಘಟಕ ಮಾರುಕಟ್ಟೆ ಎಂದು ಹೆಸರು. ಸರಕುಗಳು ಸಿಗುವ ಮಾರುಕಟ್ಟೆಗೆ ಸರಕು ಮಾರುಕಟ್ಟೆ ಎಂದು ಹೆಸರು. ಮುಂದುವರೆದು, ಘಟಕಗಳ ಮಾರುಕಟ್ಟೆಯಲ್ಲಿ ಅನುಭೋಗಿಗಳು ಮಾರಾಟಗಾರರು ಅಥವಾ ಪೂರೈಕೆದಾರರು ಆಗುತ್ತಾರೆ. ಸರಕುಗಳ ಮಾರುಕಟ್ಟೆಯಲ್ಲಿ ಇವರು ಗ್ರಾಹಕರು ಅಥವಾ ಬೇಡಿಕೆದಾರರಾಗಿರುತ್ತಾರೆ. ಹೀಗೆ ಒಂದು ಅರ್ಥವ್ಯವಸ್ಥೆಯಲ್ಲಿ ಅನುಭೋಗಿಗಳ ಮತ್ತು ಉತ್ಪಾದಕರ ನಡುವೆ ಪರಸ್ಪರ ಅವಲಂಬನವಿದೆ ಮತ್ತು ಇದನ್ನು ಈ ಕೆಳಗೆ ತೋರಿಸಲಾಗಿದೆ.



ಅನುಭೋಗ-ಆದಾಯದ ನಡುವಿನ ಸಂಬಂಧ

ಅನುಭೋಗವು ವ್ಯಕ್ತಿಯ ಆದಾಯದ ಮೇಲೆ ಅವಲಂಬಿಸಿದೆ. ಆದಾಯದ ಬೇರೆ ಬೇರೆ ಹಂತಗಳಲ್ಲಿ ಸರಕು ಮತ್ತು ಸೇವೆಗಳಿಗಾಗಿ ಮಾಡುವ ಅನುಭೋಗದ ವೆಚ್ಚವನ್ನು ಅನುಭೋಗದ ಕ್ರಿಯೇ (Consumption activity) ಎಂದು ಕರೆಯಲಾಗುತ್ತದೆ. ಮಹಾನ್ ಅರ್ಥಶಾಸ್ತ್ರಜ್ಞ 'ಕ್ರೇನ್ಸ್'ರ ಪ್ರಕಾರ 'ಒಟ್ಟು ಆದಾಯ ಅಧಿಕವಾದಾಗ ಅನುಭೋಗದ ಮೇಲಿನ ವೆಚ್ಚ ಸಹ ಅಧಿಕವಾಗುತ್ತದೆ. ಸ್ಥೂಲವಾಗಿ ಕೇನ್ಸ್‌ರ ಅನುಭೋಗದ ನಿಯಮವನ್ನು ಈ ಕೆಳಗಿನ ಮೂರು ಹೇಳಿಕೆಗಳ ಮೂಲಕ ಸುಲಭವಾಗಿ ವಿವರಿಸಬಹುದು[೪೮].

೧. ಒಟ್ಟು ಆದಾಯ ಹೆಚ್ಚಾಗುವಾಗ ಅನುಭೋಗ ವೆಚ್ಚ ಕೂಡ ಹೆಚ್ಚಾಗುತ್ತದೆ. ಆದರೆ, ಆದಾಯದ ಹೆಚ್ಚಳದ ನಿಷ್ಪತ್ತಿಯು ಅನುಭೋಗದ ವೆಚ್ಚದ ಹೆಚ್ಚಳದ ನಿಷ್ಪತ್ತಿಗಿಂತ ಅಧಿಕವಾಗಿರುತ್ತದೆ.
೨. ಆದಾಯದ ಅಧಿಕ್ಯವು ಅನುಭೋಗದ ವೆಚ್ಚ ಮತ್ತು ಉಳಿತಾಯಗಳ ನಡುವೆ ಹಂಚಿ ಹೋಗಿರುತ್ತದೆ.
೩. ಆದಾಯ ಅಧಿಕವಾಗುವಾಗ ಅನುಭೋಗ ವೆಚ್ಚ ಮತ್ತು ಉಳಿತಾಯಗಳೆರಡೂ ಅಧಿಕವಾಗಿರುತ್ತವೆ.

ಒಟ್ಟಿನಲ್ಲಿ, ಆದಾಯ ಕಡಿಮೆಯಿದ್ದಾಗ ಉಳಿತಾಯ ಇರುವುದಿಲ್ಲ. ಇದ್ದ ಆದಾಯವನ್ನೆಲ್ಲವನ್ನು ಸರಕು ಮತ್ತು ಸೇವೆಗಳನ್ನು ಕೊಳ್ಳುವುದಕ್ಕಾಗಿ ವಿನಿಯೋಗಿಸಲಾಗುತ್ತದೆ. ಆದಾಯ ಅಧಿಕವಾದಾಗ, ಉಳಿತಾಯಕ್ಕೆ ಆಸ್ಪದ ಇರುತ್ತದೆ.

ಬೇಡ ರೈತರ ಮಾಸಿಕ ಆದಾಯ ಮತ್ತು ಖರ್ಚು

ದೊಡ್ಡ ಗಾತ್ರದ ಭೂ-ಹಿಡುವಳಿಗಳನ್ನುಳ್ಳ ರೈತರು: ಬೇಡರ ಎಂಟು ಕುಟುಂಬಗಳು ದೊಡ್ಡ ಗಾತ್ರದ ಭೂ-ಹಿಡುವಳಿಗಳನ್ನು ಹೊಂದಿರುತ್ತವೆ. ಇದರಲ್ಲಿ ಶೇ. ೬೨.೫೦ ರಷ್ಟು ರೈತರು ತಿಂಗಳಿಗೆ ೨,೮೦೧ ರಿಂದ ೩,೦೦೦ ರೂಪಾಯಿವರೆಗೆ ಆದಾಯವನ್ನು ಹೊಂದಿರುತ್ತಾರೆ. ಉಳಿದ ಶೇ. ೩೭.೫೦ ರೈತರ ಆದಾಯ ೨,೨೫೦ ರಿಂದ ೨,೮೦೦ ರೂಪಾಯಿವರೆಗೆ ಇದೆ. (ವಿವರಗಳಿಗಾಗಿ ಕೋಷ್ಟಕ ೫.೩೦ ನೋಡಿ).

ಕೋಷ್ಟಕ ೫.೩೦ ಬೀದರ ಜಿಲ್ಲೆಯ ಬೇಡ ರೈತರ ವಾರ್ಷಿಕ ಸರಸಾರಿ ಆದಾಯ ಮತ್ತು ಖರ್ಚಿನ ವಿವರ

ಕ್ರಮ ಸಂಖ್ಯೆ	ಆದಾಯ ರೂಪಾಯಿಗಳಲ್ಲಿ	ಸಂಖ್ಯೆ	ಶೇಕಡಾ
ದೊಡ್ಡ ಗಾತ್ರದ ಭೂ-ಹಿಡುವಳಿಗಳ ರೈತರು			
೧.	೨೨೫೦ ರಿಂದ ೨೮೦೦	೩	೩೭.೫೦
೨.	೨೮೦೧ ರಿಂದ ೩೦೦೦	೫	೬೨.೫೦
	ಒಟ್ಟು	೮	೧೦೦.೦೦
ಮಧ್ಯಮ ಗಾತ್ರದ ಭೂ-ಹಿಡುವಳಿಗಳ ರೈತರು			
೧.	೧೦೦೧ ರಿಂದ ೧೧೫೦	೨೯	೪೭.೫೪
೨.	೧೧೫೧ ರಿಂದ ೧೩೦೦	೧೮	೨೯.೫೧
೩.	೧೩೦೧ ರಿಂದ ೧೬೫೦	೧೪	೨೨.೯೩
		೬೧	೧೦೦.೦೦
ಅರೆ-ಮಧ್ಯಮ ಗಾತ್ರದ ಭೂ-ಹಿಡುವಳಿಗಳ ರೈತರು			
೧.	೫೦೦ ರಿಂದ ೫೫೦	೮೦	೪೮.೪೮
೨.	೫೫೧ ರಿಂದ ೬೦೦	೫೮	೩೫.೧೬
೩.	೬೦೧ ರಿಂದ ೬೫೦	೨೭	೧೬.೩೬
	ಒಟ್ಟು	೧೬೫	೧೦೦.೦೦
ಸಣ್ಣ ಗಾತ್ರದ ಭೂ-ಹಿಡುವಳಿಗಳ ರೈತರು			
೧.	೩೫೦ ರಿಂದ ೪೦೦	೧೬೯	೪೩.೭೮
೨.	೪೦೧ ರಿಂದ ೪೫೦	೮೭	೨೨.೫೩
೩.	೪೫೦ ರಿಂದ ೫೦೦	೧೦೧	೨೬.೧೭
೪.	೫೦೧ ರಿಂದ ಹೆಚ್ಚು	೨೯	೭.೩೨
	ಒಟ್ಟು	೩೮೬	೧೦೦.೦೦

ಅತಿ ಸಣ್ಣ ಗಾತ್ರದ ಭೂ-ಹಿಡುವಳಿಗಳ ರೈತರು			
೧.	೮೦ ರಿಂದ ೧೩೦	೧೪೨	೬೪.೨೬
೨.	೧೩೧ ರಿಂದ ೨೮೧	೬೦	೨೭.೧೫
೩.	೨೮೨ ರಿಂದ ಹೆಚ್ಚು	೧೯	೦೮.೫೯
	ಒಟ್ಟು	೨೨೧	೧೦೦.೦೦

ಭೂಮಿಯ ಗಾತ್ರ ಕಡಿಮೆಯಾದಂತೆ ರೈತರ ಆದಾಯವು ಕಡಿಮೆಯಾಗುತ್ತಾ ಹೋಗುತ್ತದೆ. ಮೇಲಾಗಿ ಸಾಗುವಳಿ ಭೂಮಿಗೆ ನೀರಾವರಿಯ ಸೌಲಭ್ಯ ಅಲ್ಪಪ್ರಮಾಣದಲ್ಲಿ ಇರುವುದರಿಂದ, ಭೂಮಿಯ ಗಾತ್ರ ಚಿಕ್ಕದಿದ್ದರೂ, ಹೆಚ್ಚಿನ ಆದಾಯವನ್ನು ಪಡೆಯಲು ರೈತರಿಗೆ ಸಾಧ್ಯವಾಗಿಲ್ಲ. ೧೦೦ಕ್ಕೆ ೧೦೦ರಷ್ಟು ಅತಿ ಸಣ್ಣ ಭೂ-ಹಿಡುವಳಿಗಳುಳ್ಳ ರೈತರು ಮತ್ತು ಸಣ್ಣ ಗಾತ್ರದ ಭೂ-ಹಿಡುವಳಿಗಳ ಯಜಮಾನರಾದ ರೈತರು ಬಡತನದ ರೇಖೆಯ ಕೆಳಗಡೆಯೇ ಇದ್ದಾರೆ. ಅಂದರೆ, ಅವರ ಆದಾಯ ವರ್ಷಕ್ಕೆ ೧೦,೦೦೦ ರೂ.ಕ್ಕಿಂತಲೂ ಕಡಿಮೆಯಿದೆ. ಮಧ್ಯಮ ಗಾತ್ರದ ಭೂ-ಹಿಡುವಳಿಗಳನ್ನುಳ್ಳ ರೈತರು ಬಡತನದ ರೇಖೆಯ ಕೆಳಗಡೆ ಇರವಿದ್ದರೂ, ಅವರ ವಾರ್ಷಿಕ ಆದಾಯ ರೂ. ೨೦,೦೦೦ ಕ್ಕಿಂತಲೂ ಕಡಿಮೆಯಿದೆ. ದೊಡ್ಡ ಗಾತ್ರದ ಭೂ-ಹಿಡುವಳಿಗಳ ಯಜಮಾನರು ಕಡಿಮೆ ಮಧ್ಯಮ ಆದಾಯದ ಗುಂಪಿನಲ್ಲಿ ಬರುತ್ತಾರೆ. ಉಳಿದ ಎಲ್ಲ ಬಗೆಯ ಎಲ್ಲ ರೈತರಿಗಿಂತ ಇವರ ಆರ್ಥಿಕ ಸ್ಥಿತಿ ಉತ್ತಮವಾಗಿದ್ದರೂ ಈ ಗಾತ್ರದ ರೈತರ ಕುಟುಂಬಗಳು ಕೇವಲ ೮ ಇವೆ. ಬೇಡ ರೈತರ ಭೂ 'ಬಂಜರು' ಭೂಮಿಯಾಗಿರುವುದರಿಂದ, ಇವರಿಗೆ ನೀರಾವರಿ ಸೌಲಭ್ಯ ಇಲ್ಲದಿರುವುದರಿಂದ, ಇವರು ಹೆಚ್ಚು-ಕಡಿಮೆ ಬಡವರಾಗಿದ್ದಾರೆ ಎಂದರೆ ತಪ್ಪೇನಿಲ್ಲ. ಭಾರತದ ಕೃಷಿ ಕ್ಷೇತ್ರದಲ್ಲಿ ಹೆಸರುವಾಸಿಯಾಗಿರುವ ಪಂಜಾಬ ಮತ್ತು ಹರಿಯಾಣ ರಾಜ್ಯಗಳಲ್ಲಿ ಸಣ್ಣ ಗಾತ್ರದ ಭೂ-ಹಿಡುವಳಿಗಳನ್ನುಳ್ಳ ರೈತರು ಸಹ ಶ್ರೀಮಂತರಾಗಿದ್ದಾರೆ. ಇದಕ್ಕೆ ವ್ಯತಿರಿಕ್ತವಾಗಿ ಇಂತಹ ಭಾಗ್ಯ ಬೀದರ ಜಿಲ್ಲೆಯ ದೊಡ್ಡ ಗಾತ್ರದ ಭೂ-ಹಿಡುವಳಿಗಳನ್ನುಳ್ಳ ಬೇಡ ರೈತರಿಗೆ ಲಭ್ಯವಾಗಿಲ್ಲ.

ವಿವಿಧ ಗಾತ್ರದ ಭೂ-ಹಿಡುವಳಿಗಳ ಬೇಡ ರೈತರ ಮಾಸಿಕ ಖರ್ಚಿನ ವಿವರ

ಅತಿ ಸಣ್ಣ ಮತ್ತು ಸಣ್ಣ ಗಾತ್ರದ ರೈತರು ತಮ್ಮ ಆದಾಯದ ಸಿಂಹಪಾಲನ್ನು ಅಂದರೆ, (ಶೇ. ೮೧ ರಿಂದ ಶೇ. ೭೮) ಆಹಾರದ ಮೇಲೆ ಖರ್ಚು ಮಾಡುತ್ತಾರೆ. ಕಡಿಮೆ ಆದಾಯವಿದ್ದಾಗ ಈ ರೀತಿ ಮಾಡುವುದು ಸಹಜ ಮತ್ತು ಇದೊಂದು ಅವರ ಬಡತನದ ಲಕ್ಷಣವಾಗಿದೆ. ಮಾಸಿಕ ಆದಾಯ ಹೆಚ್ಚಿದಂತೆಲ್ಲ ಆಹಾರದ ಮೇಲಿನ ಶೇಕಡಾವಾರು ಖರ್ಚು ಕಡಿಮೆಯಾಗುತ್ತಾ ಹೋಗುತ್ತದೆ. (ವಿವರಗಳಿಗಾಗಿ ಕೋಷ್ಟಕ ೫.೩೧ ನೋಡಿ) ಕಡುಬಡವರಾಗಿದ್ದರೂ ಬೇಡ ರೈತರು ಕುಡಿತದ ಮೇಲಿನ ದುಂದು ವೆಚ್ಚವನ್ನು ತುಲನಾತ್ಮಕವಾಗಿ ಕಡಿಮೆ ಮಾಡಿರುವುದಿಲ್ಲ. ಉದಾಹರಣೆಗೆ, ಆದಾಯದ ಹೆಚ್ಚಳಕ್ಕೆ ಮತ್ತು ಕುಡಿತದ

ಮೇಲಿನ ಶೇಕಡಾವಾರು ವೆಚ್ಚಕ್ಕೆ ವಿರುದ್ಧದ ಸಂಬಂಧವಿರುತ್ತದೆ. ಅತಿ ಸಣ್ಣ ಮತ್ತು ಅರೆ ಮಧ್ಯಮ ವರ್ಗದ ರೈತರು ಉಳಿತಾಯವನ್ನು ಮಾಡಿರುವುದಿಲ್ಲ. ಅವರ ಮಾಸಿಕ ಆದಾಯ ಕಡಿಮೆಯಾಗಿರುವುದೇ ಇದಕ್ಕೆ ಪ್ರಮುಖ ಕಾರಣವಾಗಿದೆ. ಮಧ್ಯಮ ವರ್ಗದ ರೈತರಲ್ಲಿ ಉಳಿತಾಯದ ಪ್ರಮಾಣ ಕೇವಲ ಶೇ. ೨ ಇದ್ದರೆ, ಇದರ ಪ್ರಮಾಣ ದ್ವಿಗುಣವಾಗಿರುತ್ತದೆ. ದೊಡ್ಡ ಗಾತ್ರದ ವರ್ಗದಲ್ಲಿ ಬಡತನವು ಶಿಕ್ಷಣವನ್ನು ಅಲಕ್ಷ್ಯ ಮಾಡಲು ಒಂದು ಬಲವಾದ ಕಾರಣವಾದುದರಿಂದ, ದೊಡ್ಡ ವರ್ಗದ ರೈತರನ್ನು ಬಿಟ್ಟರೆ ಇತರ ವರ್ಗದವರೆಲ್ಲರೂ ಶೇ. ೫ ಮತ್ತು ಅದಕ್ಕಿಂತಲೂ ಕಡಿಮೆ ಹಣವನ್ನು ಶಿಕ್ಷಣಕ್ಕಾಗಿ ವೆಚ್ಚ ಮಾಡಿರುತ್ತಾರೆ. ಮೊದಲು ಆಹಾರ ಆಮೇಲೆ ಬಟ್ಟೆ ಎನ್ನುವುದೊಂದು ಸಹಜವಾದ ಮಾತು. ಆದುದರಿಂದ, ಆಹಾರದ ಮೇಲಿನ ಶೇಕಡಾವಾರು ವೆಚ್ಚ ಕಡಿಮೆಯಾದಂತೆ ಬಟ್ಟೆ ಮೇಲಿನ ಶೇಕಡಾವಾರು ವೆಚ್ಚ ಎಲ್ಲ ವರ್ಗದ ರೈತರಲ್ಲಿ ಹೆಚ್ಚಾಗುತ್ತಾ ಹೋಗಿದೆ.

ಕೋಷ್ಟಕ ೫.೩೧ ವಿವಿಧ ಗಾತ್ರದ ಭೂ-ಹಿಡುವಳಿಗಳುಳ್ಳ ರೈತರ ಮಾಸಿಕ ಖರ್ಚಿನ ವಿವರ (ಶೇಕಡಾ)

ಕ್ರಮ ಸಂಖ್ಯೆ	ಖರ್ಚಿನ ವಿವರ	೧	೨	೩	೪	೫
೧.	ಆಹಾರ	೬೦	೬೫	೭೨	೭೮	೮೧
೨.	ಬಟ್ಟೆ	೨೨	೧೬	೧೪	೦೯	೦೭
೩.	ಶಿಕ್ಷಣ	೦೮	೦೫	೦೪	೦೩	೦೩
೪.	ಕುಡಿತದ ಮೇಲಿನ ದುಂದುವೆಚ್ಚ	೦೨	೦೬	೦೬	೦೮	೦೮
೫.	ಉಳಿತಾಯ	೦೪	೦೨	–	–	–
೬.	ಇತರೆ	೦೪	೦೬	೦೪	೦೨	೦೧
	ಒಟ್ಟು	೧೦೦.೦೦	೧೦೦.೦೦	೧೦೦.೦೦	೧೦೦.೦೦	೧೦೦.೦೦

ಕೃಷಿ ಮತ್ತು ಕೃಷಿಯೇತರ ಕಾರ್ಮಿಕರ ಆದಾಯ ಮತ್ತು ಖರ್ಚು

ಬೇಡರ ಕೃಷಿ ಕಾರ್ಮಿಕರು ಮತ್ತು ಕೃಷಿಯೇತರ ಕಾರ್ಮಿಕರು ಬಡತನದ ರೇಖೆಯ ಕೆಳಗಡೆಯೇ ಇರುತ್ತಾರೆ. ಒಂದು ದೃಷ್ಟಿಯಲ್ಲಿ, ರೈತರಿಗಿಂತ ಇವರ ಆರ್ಥಿಕ ಪರಿಸ್ಥಿತಿ ಕೀಳು ಮಟ್ಟದ್ದಾಗಿದೆ. ಇವರ ಕಠಿಣ ಪರಿಶ್ರಮಕ್ಕೆ ತಕ್ಕ ಪ್ರತಿಫಲ ಕೂಲಿಯ ಮೊತ್ತದಲ್ಲಿ ಇರುವುದಿಲ್ಲ, ಕಠಿಣ ಪರಿಶ್ರಮದಿಂದುಂಟಾದ ಮೈ ನೋವನ್ನು ಸ್ವಲ್ಪ ಕಾಲ ಮರೆಯಲು ಕುಡಿತದ ಮೊರೆ ಹೋಗುವುದು ಒಂದು ಸಹಜವಾದ ಚಟವಾಗಿದೆ.

ಸರಕಾರಿ ನೌಕರರು

ಇತರರಿಗೆ ಹೋಲಿಸಿದಾಗ, ಸರಕಾರಿ ನೌಕರರ ವಾರ್ಷಿಕ ಆದಾಯ ಹೆಚ್ಚಿನ ಮಟ್ಟದಾಗಿರುವುದಲ್ಲದೆ, ಖಚಿತವಾದುದಾಗಿದೆ. ಶಾಲಾ ಶಿಕ್ಷಕರು, ಎರಡನೆ ದರ್ಜೆಯ ಗುಮಾಸ್ತರೂ ಸಹ ಬಡತನದ ರೇಖೆಯ ಮೇಲಿನ ಆದಾಯವನ್ನು ಹೊಂದಿರುತ್ತಾರೆ. ಇವರೆಲ್ಲರೂ ಆಹಾರ ಮತ್ತು ಬಟ್ಟೆಯ ಮೇಲೆ ಹೆಚ್ಚಿನ ಮೊತ್ತದ ಹಣ ಖರ್ಚು ಮಾಡುವುದಲ್ಲದೆ, ತಮ್ಮ ತಮ್ಮ ಕಚೇರಿಗೆ ಹೋಗಲು ಕನಿಷ್ಟ ಪಕ್ಷ ಬೈಸಿಕಲನ್ನು ಸಹ ಹೊಂದಿರುತ್ತಾರೆ. ಇವರೆಲ್ಲರೂ ಕಡ್ಡಾಯವಾಗಿ ಉಳಿತಾಯವನ್ನು ಸಹ ಜೀವ ವಿಮೆ, ಅಂಚೆ ಕಚೇರಿಯ ಆರ್‌ಡಿ ಮುಂತಾದವುಗಳ ರೂಪದಲ್ಲಿ ಮಾಡುತ್ತಿದ್ದಾರೆ. ಇವರ ಉಳಿತಾಯದ ಮೊತ್ತ ಕಡಿಮೆಯಾಗಿದುದರಿಂದ ಮತ್ತು ಈ ಉಳಿತಾಯವನ್ನು ಮನೆ ಕಟ್ಟಲು, ಮಕ್ಕಳ ಮದುವೆ ನೆರವೇರಿಸಲು ವಿನಿಯೋಗ ಮಾಡುತ್ತಾರೆ. ಆದುದರಿಂದ ಇವರ ಉಳಿತಾಯ ಹೂಟೆ (Investment)ಯಲ್ಲಿ ಪರಿವರ್ತಿತವಾಗಿಲ್ಲ.

ಬೇಡ ರೈತರು ಸಾಲ ಉಪಯೋಗಿಸಿದ ರೀತಿ

ಬೇಡ ರೈತರು ಹೆಚ್ಚಾಗಿ ಬೆಳೆ ಸಾಲವನ್ನು (Crop Loan) ತೆಗೆದುಕೊಂಡಿದ್ದಾರೆ. ಉದಾಹರಣೆಗೆ ದೊಡ್ಡ ಗಾತ್ರದ ರೈತರನ್ನು ಬಿಟ್ಟು ಇತರ ಎಲ್ಲ ಬಗೆಯ ರೈತರು ಶೇ. ೩೮.೪೬ ದಿಂದ ಶೇ. ೬೯.೫೬ ವರೆಗೆ ತೆಗೆದುಕೊಂಡ ಸಾಲವನ್ನು ಬೆಳೆಗಳನ್ನು ಬೆಳೆಸುವಲ್ಲಿ ಅವಶ್ಯಕವಿರುವ ಬೀಜ, ರಸಗೊಬ್ಬರ ಇತ್ಯಾದಿಗಳನ್ನು ಕೊಳ್ಳಲು ಉಪಯೋಗಿಸಿರುತ್ತಾರೆ. ಅತಿಸಣ್ಣ ಮತ್ತು ಸಣ್ಣ ರೈತರು ಪಡೆದ ಸಾಲವನ್ನು ಮನೆ ಖರ್ಚಿಗಾಗಿ ಉಪಯೋಗಿಸಿದ್ದಾರೆ. ಉದಾಹರಣೆಗೆ ಶೇ. ೨೧.೭೪ರಷ್ಟು ಅತಿ ಸಣ್ಣ ರೈತರು ಮತ್ತು ಶೇ. ೧೭.೨೯ರಷ್ಟು ಸಣ್ಣ ರೈತರು ಸಾಲವನ್ನು ಮನೆ ಖರ್ಚಿಗಾಗಿ ಉಪಯೋಗಿಸಿದ್ದಾರೆ. ಮಧ್ಯಮಾವಧಿಯ ಸುಧಾರಣೆಯಾದ ಬಾವಿಯನ್ನು ತೋಡಿಸುವುದಕ್ಕಾಗಿ ಅರೆ-ಮಧ್ಯಮ ರೈತರು ಶೇ. ೪೨.೩೧ ರಷ್ಟು ಸಾಲವನ್ನು ಉಪಯೋಗಿಸಿದ್ದಾರೆ. ಆದರೆ, ಇವರಂತೆ ಅತಿ ಸಣ್ಣ ರೈತರು, ಸಣ್ಣ ರೈತರು, ಮಧ್ಯಮ ಗಾತ್ರದ ರೈತರು ಈ ಸದುಪಯೋಗವನ್ನು ಪಡೆದಿಲ್ಲ. ನಮ್ಮೆಲ್ಲರ ಅನಿಸಿಕೆಗೆ ಅನುಗುಣವಾಗಿ ದೊಡ್ಡ ಗಾತ್ರದ ರೈತರು ಶೇ. ೫೦.೦೦ ರಷ್ಟು ಸಾಲವನ್ನು ಬಾವಿಯನ್ನು ತೋಡಿಸುವುದಕ್ಕಾಗಿ ಉಪಯೋಗಿಸಿದ್ದಾರೆ. ಬೇಡ ರೈತರೆಲ್ಲರೂ ದೊಡ್ಡ ಗಾತ್ರದ ರೈತರನ್ನು ಬಿಟ್ಟು, ಸಾಲವನ್ನು ಮಕ್ಕಳ ಮದುವೆಗೋಸ್ಕರ ಉಪಯೋಗಿಸಿದ್ದಾರೆ. ಆದರೆ, ಈ ಸಾಲ ಶೇ. ೧೦.೦೦ರ ಒಳಗಿದೆ ಎಂಬುದೊಂದು ಸಮಾಧಾನಕರ ಸಂಗತಿ. ಬೇಡ ರೈತರು ಯಾರೂ ಸಾಲವನ್ನು ಭೂಮಿಯನ್ನು ಕೊಳ್ಳುವುದಕ್ಕಾಗಿ ಉಪಯೋಗಿಸಿಲ್ಲ. ಕೇವಲ ಒಬ್ಬ ದೊಡ್ಡ ಗಾತ್ರದ ರೈತ ತಾನು

ಪಡೆದ ಸಾಲವನ್ನು ಮನೆ ಕಟ್ಟಲು ಉಪಯೋಗಿಸಿಕೊಂಡಿದ್ದಾನೆ. ಒಟ್ಟಿನಲ್ಲಿ, ಸಾಲವನ್ನು ಉಪಯುಕ್ತವಾಗಿಯೇ ಬಳಸಲಾಗಿದೆ (ವಿವರಗಳಿಗಾಗಿ ಕೋಷ್ಟಕ ೫.೩೨ ನೋಡಿ).

ಕೋಷ್ಟಕ ೫.೩೨ ಬೇಡ ರೈತರು ಸಾಲ ಉಪಯೋಗಿಸಿದ ಬಗೆ

ಕ್ರಮ ಸಂಖ್ಯೆ	ಸಾಲ ಬಳಕೆ ವಿವರ	೧	೨	೩	೪	೫
೧.	ಮನೆಯನ್ನು ಕಟ್ಟಲು	೦೧ (೨೫.೦೦)	-	-	-	-
೨.	ಬಾವಿಯನ್ನು ತೋಡಿಸಲು	೦೨ (೫೦.೦೦)	೦೪ (೧೬.೬೭)	೩೨ (೪೨.೩೧)	೧೦ (೮.೬೯)	೦೧ (೨.೧೮)
೩.	ಬೀಜ, ರಸಗೊಬ್ಬರ ಇತ್ಯಾದಿಗಳನ್ನು ಕೊಳ್ಳಲು	೦೧ (೨೫.೦೦)	೧೫ (೬೨.೫೦)	೨೦ (೩೮.೪೬)	೮೦ (೬೯.೫೬)	೩೨ (೬೯.೫೬)
೪.	ಮದುವೆಯನ್ನು ಮಾಡಲು	-	೦೨ (೮.೩೩)	೦೩ (೫.೭೭)	೦೫ (೪.೩೫)	೦೩ (೬.೫೨)
೫.	ಮನೆ ಖರ್ಚಿಗಾಗಿ ಸಾಲ	-	೦೩ (೧೨.೫೦)	೦೭ (೧೩.೪೬)	೩೦ (೧೭.೩೯)	೧೦ (೨೧.೭೪)
೬.	ಇತರೆ	-	-	-	-	-
	ಒಟ್ಟು	೦೪ (೧೦೦.೦೦)	೨೪ (೧೦೦.೦೦)	೫೨ (೧೦೦.೦೦)	೧೧೫ (೧೦೦.೦೦)	೪೬ (೧೦೦.೦೦)

ಸಮಸ್ಯೆಗಳು ಮತ್ತು ಪರಿಹಾರಗಳು

೧. ಕೃಷಿಗೆ ಸಂಬಂಧಿಸಿದ ಸಮಸ್ಯೆಗಳು

ರಾಜ್ಯ ಸರಕಾರ ಪರಿಶಿಷ್ಟ ಪಂಗಡದ ರೈತರಿಗೆ ಅವರ ಕೃಷಿಯ ಅಭಿವೃದ್ಧಿಗಾಗಿ ಹೆಚ್ಚು ಇಳುವರಿಗಾಗಿ ಬೀಜ, ರಸಾಯನಿಕ ಗೊಬ್ಬರ, ಕೃಷಿ ಉಪಕರಣಗಳು, ಸಸ್ಯ ಸಂರಕ್ಷಣ ಉಪಕರಣಗಳು, ಎತ್ತು ಗಾಡಿಗಳು, ನೀರಾವರಿ ಸೌಲಭ್ಯಕ್ಕಾಗಿ ತುಂತುರು ನೀರಾವರಿ ಘಟಕಗಳು ಮತ್ತು ಹನಿ ನೀರಾವರಿ ಸೆಟ್ಗಳು ನೀಡುವ ಯೋಜನೆಯನ್ನು ಹಾಕಿಕೊಂಡಿದೆ. ಈ ಯೋಜನೆಗಳನ್ನು ರಾಜ್ಯದ ಕೆಲವು ಜಿಲ್ಲೆಗಳಲ್ಲಿ ಅನುಷ್ಠಾನದಲ್ಲಿಯೂ ತಂದಿರುತ್ತದೆ. ಆದರೆ, ವಕ್ತೃಗಳ ಹೇಳಿಕೆಯ ಪ್ರಕಾರ, ಈ ಯೋಜನೆ ಬೀದರ ಜಿಲ್ಲೆಯಲ್ಲಿ ಅನುಷ್ಠಾನದಲ್ಲಿ ತಂದಿರುವುದಿಲ್ಲ.

ಬೇಡ ರೈತರ ಹೊಲಗಳು ಕಡಿಮೆ ಫಲವತ್ತತೆಯ ಭೂಮಿಗಳು. ಆದುದರಿಂದ, ಪ್ರತಿ ಎಕರೆಯ ಉತ್ಪಾದನೆ ಕಡಿಮೆ ಪ್ರಮಾಣದಾಗಿರುತ್ತದೆ. ಸರಕಾರ ಹೆಚ್ಚಿಗೆ ಆಸಕ್ತಿವಹಿಸಿ ಕೃಷಿ ಅಭಿವೃದ್ಧಿಗಾಗಿ ಹಲವಾರು

ವಿಧವಲ್ಲಿ ಸಹಾಯ ಮಾಡಿದರೆ ಮಾತ್ರ, ಇವರ ಬೇಸಾಯ ಆರ್ಥಿಕವಾಗಿ ಒಳ್ಳೆಯ ಗುಣಮಟ್ಟದಾಗುತ್ತದೆ. ವಾಸ್ತವದಲ್ಲಿ, ಸರಕಾರ, ರೈತರನ್ನು ಕಾಳಜಿಯಿಂದ ನೋಡಿಕೊಳ್ಳುತ್ತಿಲ್ಲ.

ಬೇಡ ರೈತರು ಭೂಮಿಯ ಸಾಗುವಳಿ ಅಲ್ಲದೆ, ಪಶುಸಂಗೋಪನೆಯಲ್ಲಿಯೂ ಆಸಕ್ತಿಯನ್ನು ಇಟ್ಟುಕೊಂಡಿರುತ್ತಾರೆ. ಹೈನುಗಾರಿಕೆಯಲ್ಲಿ ಆಸಕ್ತಿ ಹೊಂದಿರುವ ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಪಶು ಸಂಗೋಪನೆ ಇಲಾಖೆಯ ವತಿಯಿಂದ ಹಾಲು ಕರೆಯುವ ಹಸು ಅಥವಾ ಎಮ್ಮೆ ಘಟಕ, ಕುರಿ ಘಟಕ ಇತ್ಯಾದಿಗಳ ಯೋಜನೆಗಳು ಇದ್ದರೂ, ಇವುಗಳಿಂದ ಇವರಿಗೆ ಯಾವ ಅನುಕೂಲವಾಗಿಲ್ಲ. ನಾವೆಲ್ಲರೂ ಬಹಳ ಮಂದಿ ಈ ರೀತಿಯ ನೆರವನ್ನು ನೀಡಲು ಸರಕಾರಕ್ಕೆ ಕೇಳಿದೆವು ಆದರೆ, ನಮ್ಮಲ್ಲಿ ಕೇವಲ ೩೧ ಕುಟುಂಬಗಳಿಗೆ ಇಂತಹ ನೆರವನ್ನು ಒದಗಿಸಲಾಗಿದೆ ಎಂದು ವಕ್ತೃ ಶ್ರೀ ಅಮರನಾಥ ಅವರು ತಿಳಿಸಿದ್ದಾರೆ.

ಕೃಷಿಯ ಸಾಲ ಸಿಗುತ್ತಿಲ್ಲ

ಈಗಾಗಲೇ ಎಷ್ಟು ದೊಡ್ಡ ಗಾತ್ರದ ಭೂ-ಹಿಡುವಳಿದಾರರು, ಮಧ್ಯಮ ಗಾತ್ರದ ಭೂ-ಹಿಡುವಳಿದಾರರು, ಅರೆ-ಮಧ್ಯಮ ಗಾತ್ರದ ಭೂ-ಹಿಡುವಳಿದಾರರು, ಸಣ್ಣ ಗಾತ್ರದ ಭೂ-ಹಿಡುವಳಿದಾರರು ಮತ್ತು ಅತಿ ಸಣ್ಣ ಗಾತ್ರದ ಭೂ-ಹಿಡುವಳಿದಾರರು ವಾಣಿಜ್ಯ ಬ್ಯಾಂಕುಗಳಿಂದ ಮತ್ತು ಸಹಕಾರಿ ಸಂಸ್ಥೆಗಳಿಂದ ಸಾಲವನ್ನು ಪಡೆದಿದ್ದಾರೆಂದು ಹೇಳಿದ್ದೇವೆ ಆದರೆ, ಸಾಲ ಬೇಡುವವರ ಸಂಖ್ಯೆ ಹೆಚ್ಚಿದೆ ಮತ್ತು ಅವರೆಲ್ಲರ ಸಾಲದ ಅವಶ್ಯಕತೆಗೆ ಈ ಸಂಸ್ಥೆಗಳು ಸ್ಪಂದಿಸಿಲ್ಲ. ಅದರಲ್ಲೂ ಅತಿ ಸಣ್ಣ ರೈತರಿಗೆ ಮತ್ತು ಸಣ್ಣ ರೈತರಿಗೆ ಸಾಂಘಿಕ ಮೂಲಗಳು ಸಾಲವನ್ನು ಹೆಚ್ಚಾಗಿ ಕೊಡುತ್ತಿಲ್ಲ. ನಾನು, ರೈತರನ್ನು ಸಂದರ್ಶಿಸಿದಾಗ, ಪ್ರಶ್ನೆಗಳಿಗೆ ಉತ್ತರ ನೀಡುವ ಮುನ್ನ ಅವರು "ಬ್ಯಾಂಕಿನಿಂದ ಸಾಲ ಕೊಡಿಸಿ ಹೋಗಿ ಸಾಹೇಬುರೆ" ಎಂದರು.

ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳ ಕೊರತೆ

ರಾಜ್ಯ ಸರಕಾರ ಹಳ್ಳಿಗಳಲ್ಲಿ ಇಂತಹ ಶಾಲೆಗಳನ್ನು ಹೆಚ್ಚಾಗಿ ಆರಂಭಿಸುತ್ತಿದ್ದರೂ, ಬೇಡ ಸಮುದಾಯ ವಾಸವಾಗಿರುವ ಊರುಗಳಲ್ಲಿ/ಹಳ್ಳಿಗಳಲ್ಲಿ ಇವುಗಳ ಕೊರತೆಯಿದೆ. ಕೆಲವೊಂದು ಕಡೆ ಶಾಲೆಗಳು ಇವೆ. ಆದರೆ, ಬೋಧನೆ ಮಾಡಲು ಅರ್ಹ ಶಿಕ್ಷಕರಿಲ್ಲ. ಉಳಿದೆಡೆಗಳಲ್ಲಿ ಶಾಲೆಗಳಿವೆ. ಆದರೆ ಆ ಶಾಲೆಗೆ ಹೋಗಲು ಒಳ್ಳೆಯ ರಸ್ತೆಗಳಿಲ್ಲ. ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲೆ ಮತ್ತು ಹಳ್ಳಿಗಳಿಗೆ ಸಂಪರ್ಕವನ್ನು ಏರ್ಪಡಿಸುವ ರಸ್ತೆ ಇವೆರಡು ಮೂಲಭೂತ ಸೌಲಭ್ಯಗಳು. ಇಂತಹ ಸೌಲಭ್ಯಗಳಿಂದ ಬೇಡ ಬುಡಕಟ್ಟಿನವರು ವಂಚಿತರಾಗಿದ್ದಾರೆ.

ವಸತಿಯ ಕೊರತೆ

ಕರ್ನಾಟಕ ರಾಜ್ಯದ ವಸತಿ ಇಲಾಖೆ ಬೇಡ ಜನರಿಗೆ ಆಶ್ರಯ ನಿವೇಶನ ವಿತರಣೆ, ಆಶ್ರಯ ವಸತಿ ಯೋಜನೆ, ಮತ್ತು 'ನೆರಳಿನ ಭಾಗ್ಯ' ಯೋಜನೆಯಡಿ ಹುಲ್ಲಿನ ಛಾವಣಿಗಳನ್ನು ಬದಲಾಯಿಸಿ ಹೆಂಚಿನ ಛಾವಣಿಗಳನ್ನು ಒದಗಿಸುವುದು ಮತ್ತು ಡಾ. ಅಂಬೇಡ್ಕರ ವಸತಿ ಯೋಜನೆಯಲ್ಲಿ ಮನೆಗಳು ನಿರ್ಮಿಸಿ ಕೊಡುವುದು ಇತ್ಯಾದಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವುದೇನೋ ನಿಜ. ಆದರೆ, ವಾಸ್ತವದಲ್ಲಿ, ಅಧಿಕಾರಿಗಳ ನಿರ್ಲಕ್ಷದಿಂದ ಬಹಳ ಕುಟುಂಬಗಳಿಗೆ ಈ ಯೋಜನೆಗಳಿಂದ ಲಾಭವಾಗಿಲ್ಲ. ಇನ್ನು ಮುಂದಾದರೂ, ಇವುಗಳ ಅಡಿಯಲ್ಲಿ ಹೆಚ್ಚು ಸೌಲಭ್ಯಗಳು ಬೇಡ ಕುಟುಂಬಗಳಿಗೆ ಸಿಗುವಂತಾಗಬೇಕು.

ವಿದ್ಯುಧ್ಧೀಕರಣದ ಅವಶ್ಯಕತೆ

ಕೆಲವು ಮನೆಗಳಿಗೆ ಅಂದರೆ ಶೇ. ೨೯.೦೨ ವಿದ್ಯುತ್ ಸೌಕರ್ಯವನ್ನು ಒದಗಿಸಿ ಕೊಡಲಾಗಿದೆ. ಆದರೆ, ಇದು ಅತಿ ಕಡಿಮೆ ಪ್ರಮಾಣದಲ್ಲಿರುವುದರಿಂದ, ಸರಕಾರ ಹೆಚ್ಚಿಗೆ ಕಾಳಜಿ ವಹಿಸಿ ಹೆಚ್ಚು ಹೆಚ್ಚು ಮನೆಗಳಿಗಗೆ ವಿದ್ಯುತ್ ಸೌಲಭ್ಯ ಆದಷ್ಟು ಬೇಗನೆ ಒದಗಿಸಬೇಕು. ದೇಶಕ್ಕೆ ಸ್ವಾತಂತ್ರ್ಯ ಬಂದು ೫೪ ವರ್ಷಗಳು ಆದವು; ಆದರೂ ಈ ಸಮುದಾಯದವರ ಹೆಚ್ಚಿನ ಕುಟುಂಬಗಳಲ್ಲಿ ಇನ್ನೂ ಕತ್ತಲು ಇದೆ, ಬೆಳಕ್ಕಿಲ್ಲ.

ಓದುವ ಮಕ್ಕಳಿಗೆ ಶಿಷ್ಯವೇತನ

ಸರಕಾರವು ಶಿಷ್ಯವೇತನದ ಸೌಲಭ್ಯವನ್ನು ಒದಗಿಸಿದರೂ, ಮೇಲ್ಜಾತಿಯ ಶಾಲಾ ಶಿಕ್ಷಕರು, ಬೇಡರ ಶಾಲಾ ಮಕ್ಕಳಿಗೆ ಶಿಷ್ಯವೇತನ ಬಾರದಂತೆ ನೋಡಿಕೊಳ್ಳುತ್ತಿದ್ದಾರೆ. ಇದೊಂದು ಅಪರಾಧ, ಇದನ್ನು ಕೂಡಲೇ ತಡೆಗಟ್ಟಬೇಕಾಗಿದೆ. ತುಲನಾತ್ಮಕವಾಗಿ ಮಹಾವಿದ್ಯಾಲಯಗಳಲ್ಲಿ ಓದುತ್ತಿರುವ ಮಕ್ಕಳಿಗೆ ಹೆಚ್ಚು ಶಿಷ್ಯವೇತನ ದೊರಕಿದೆ. ಆದರೂ, ಇದು ಶೇ. ೧೦೦ರಷ್ಟು ಇಲ್ಲ. ಕೆಲವು ಮೇಲ್ಜಾತಿಯ ಅಧಿಕಾರಿಗಳು ಜಾತಿ ಪ್ರಮಾಣ ಪತ್ರವನ್ನು ಕೊಡುತ್ತಿರುವುದಿಲ್ಲ ಎಂಬ ವಿಷಯ ವಕ್ತೃಗಳಿಂದ ವ್ಯಕ್ತವಾಗಿದೆ.

ವೈದ್ಯಕೀಯ ಸೌಲಭ್ಯದ ಕೊರತೆ

ಬೇಡ ಬುಡಕಟ್ಟಿನವರಿಗೆ ತಮ್ಮ ಊರಲ್ಲಿಯೇ ವೈದ್ಯಕೀಯ ಸೌಲಭ್ಯ ಸಿಗುತ್ತಿಲ್ಲ. ಈ ಸೌಲಭ್ಯಕ್ಕಾಗಿ ಇವರು ಹತ್ತಾರು ಕಿಲೋಮೀಟರ್ ದೂರವಿರುವ ಹಳ್ಳಿಗಳಿಗೆ ಹೋಗಬೇಕಾಗುತ್ತದೆ. ವೈದ್ಯಕೀಯ ಸೌಲಭ್ಯ ಮೂಲಭೂತ ಸೌಲಭ್ಯಗಳಲ್ಲಿ ಒಂದಾಗಿದೆಯಾದರೂ ಇದು ಈ ಬುಡಕಟ್ಟಿನವರಿಗೆ ಲಭ್ಯವಾಗದೆ ಇರುವುದು

ಒಂದು ಶೋಚನೀಯ ಸಂಗತಿಯಾಗಿದೆ. ಕೋಷ್ಠಕ ೫.೩೩ ವೈದ್ಯಕೀಯ ಸೌಲಭ್ಯ ಇರುವ ಮಾಹಿತಿಯನ್ನು ನೀಡುತ್ತದೆ.

ಕೋಷ್ಠಕ ೫.೩೩ ವೈದ್ಯಕೀಯ ಸೌಲಭ್ಯದ ಅಲಭ್ಯತೆ (ಕೊರತೆ)

ಕ್ರಮ ಸಂಖ್ಯೆ	ವೈದಕೀಯ ಸೌಲಭ್ಯದ ಅಂತರ (ಕಿ.ಮೀ.ಗಳಲ್ಲಿ)	ಗ್ರಾಮಗಳು ಸಂಖ್ಯೆ	ಶೇಕಡಾ
೧.	ಗ್ರಾಮದೊಳಗೆ	೦೩	೭.೫
೨.	೧ ರಿಂದ ೪ ಕಿ.ಮೀ.ವರೆಗೆ	೦೬	೧೫.೦೦
೩.	೫ ರಿಂದ ೧೦ ಕಿ.ಮಿವರೆಗೆ	೧೧	೨೭.೫
೪.	೧೧ ರಿಂದ ೧೫ ಕಿ.ಮೀವರೆಗೆ	೧೬	೪೦.೦೦
೫.	೧೬ ರಿಂದ ಮುಂದೆ	೦೪	೧೦.೦೦
	ಒಟ್ಟು	೪೦	೧೦೦.೦೦

ಭೂ-ಒಡೆತನ ಯೋಜನೆ

ಬೇಡರಲ್ಲಿ ಸಾಗುವಳಿ ಮಾಡಲು ಭೂಮಿಯಿರುವುದಿಲ್ಲ. ಇವರೆಲ್ಲರೂ ಕೃಷಿ ಮತ್ತು ಕೃಷಿಯೇತರ ಕಾರ್ಮಿಕರಾಗಿ ತಮ್ಮ ಜೀವನವನ್ನು ನಡೆಸುತ್ತಿದ್ದಾರೆ. ಆದರೆ, ಇವರಿಗೆ ತಮ್ಮದೆಯಾದ ಜಮೀನನ್ನು ಹೊಂದಿ ವ್ಯವಸಾಯ ಮಾಡುವ ಉತ್ಕಟ ಇಚ್ಛೆಯಿದೆ. ಕರ್ನಾಟಕ ಸರಕಾರ ೧೯೭೫ರಲ್ಲಿ ಕರ್ನಾಟಕ ಪರಿಶಿಷ್ಟ ಜಾತಿ; ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮವನ್ನು ಸ್ಥಾಪಿಸಿ ನಿಗಮದ ವತಿಯಿಂದ ರಾಜ್ಯದ ಕೆಲವೊಂದು ಜಿಲ್ಲೆಗಳಲ್ಲಿ ಪರಿಶಿಷ್ಟ ವರ್ಗಕ್ಕೆ ಸೇರಿಲ್ಲದ ಜನರಿಂದ ಭೂಮಿ ಖರೀದಿಸಿ, ಪರಿಶಿಷ್ಟ ವರ್ಗದ ಅರ್ಹ ಫಲಾನುಭವಿಗಳಿಗೆ ಅದನ್ನು ಹಂಚಿದೆ. ಆದರೆ, ಈ ಯೋಜನೆ ಬೀದರ ಜಿಲ್ಲೆಯಲ್ಲಿ ಅನುಷ್ಠಾನದಲ್ಲಿ ಬಂದಿರುವುದಿಲ್ಲ. ಅದರಲ್ಲೂ ಬೇಡ ಸಮುದಾಯದವರು ಇದರಿಂದ ಎಳ್ಳಷ್ಟು ಪ್ರಯೋಜನ ಪಡೆದಿಲ್ಲ. ಇದಕ್ಕೆ ಹಲವಾರು ಕಾರಣಗಳಿವೆ. ಇವುಗಳಲ್ಲಿ ಒಂದು ಮುಖ್ಯ ಕಾರಣವೇನೆಂದರೆ, ಬೇಡರು ೧೯೯೧ರವರೆಗೆ ಮೀಸಲಾತಿಯ ಗ್ರೂಪ್ 'ಎ' ಯಲ್ಲಿದ್ದರು. ೧೯೯೧ರಲ್ಲಿ ಬೇಡರನ್ನು ಪರಿಶಿಷ್ಟ ವರ್ಗದಲ್ಲಿ ಸೇರಿಸಲಾಯಿತು. ಆದುದರಿಂದ ಇವರಿಗೆ ಈ ಯೋಜನೆಯಡಿಯಲ್ಲಿ ಲಾಭವಾಗಿಲ್ಲ.

ಗ್ರಾಮೀಣ ನೀರು ಪೂರೈಕೆ

ಗ್ರಾಮಂತರ ಪ್ರದೇಶಗಳಲ್ಲಿ ಪರಿಶಿಷ್ಟ ಪಂಗಡದ ಕಾಲೋನಿಗಳಿಗೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಸರಕಾರ 'ಗ್ರಾಮೀಣ ನೀರು ಪೂರೈಕೆ ಯೋಜನೆ' ಹಲವಾರು ಊರುಗಳಲ್ಲಿ ಅನುಷ್ಠಾನ ಗೊಳಿಸಿದೆ. ಆದರೆ ಘೊಟ್ಟಾಳವಾಡಿ, ಯಳವಂತಿಗಿ, ಬಕ್ಕನಾಳ, ಗುಂಡೂರು ಮುಂತಾದ ಬೇಡರ ಹಳ್ಳಿಗಳಿಗೆ ನೀರು ಪೂರೈಸುವ

ಯೋಜನೆ ಸಮರ್ಪಕವಾಗಿ ಅನುಷ್ಠಾನಕ್ಕೆ ಬಂದಿಲ್ಲ. ಆದಷ್ಟು ತೀವ್ರ ನೀರಿನ ಸೌಲಭ್ಯವನ್ನು ಒದಗಿಸಿ ಕೊಡುವುದು ಅತ್ಯಾವಶ್ಯಕವಾಗಿದೆ.

ಬೇಡ ಯುವಕರು ಗ್ರಾಮೀಣ ಮತ್ತು ಸಣ್ಣ ಕೈಗಾರಿಕೆಯಲ್ಲಿ ಭಾಗವಹಿಸದಿರುವದು

ಬೇಡರ ಆರ್ಥಿಕ ವ್ಯವಸ್ಥೆ ಹೆಚ್ಚು-ಕಡಿಮೆ ಕೃಷಿ ಆರ್ಥಿಕ ವ್ಯವಸ್ಥೆ ಆಗಿದೆಯೆಂದು ಈಗಾಗಲೇ ಹೇಳಿಯಾಗಿದೆ ಆದರೆ, ಪ್ರೌಢ ಶಾಲೆ ಅಥವಾ ಕಾಲೇಜು ಶಿಕ್ಷಣವನ್ನು ಮುಗಿಸಿ ಉದ್ಯೋಗ ಇರಲಾರದೆ ಕಾಲಹರಣ ಮಾಡುತ್ತಿರುವ ಪರಿಶಿಷ್ಟ ಪಂಗಡದ ಯುವಕರಿಗೆ ಸ್ವಯಂ ಉದ್ಯೋಗ ಕೈಕೊಳ್ಳಲು ಸಹಕಾರಿಯಾಗುವಂತೆ ರಾಜ್ಯ ಸರಕಾರ ಬಡಿಗತನ, ಬದಿರು, ಬೆತ್ತದ ವೃತ್ತಿಗಳಲ್ಲಿ ತರಬೇತಿ ನೀಡುತ್ತಿದೆ. ಕೊಡಗು ಜಿಲ್ಲೆಯಲ್ಲಿ ಜೇನು ಕೃಷಿಗಾಗಿ ಯುವಕರಿಗೆ ತರಬೇತಿಯನ್ನು ನೀಡಲಾಗುತ್ತಿದೆ. ಮುಂದುವರೆದು, ಕರ್ನಾಟಕ ಸರಕಾರ "ವಿಶ್ವ" ಕಾರ್ಯಕ್ರಮದ ಅಡಿಯಲ್ಲಿ ಗ್ರಾಮೀಣ ಪರಿಶಿಷ್ಟ ಪಂಗಡದ ನಿರುದ್ಯೋಗಿ ಯುವಕರಿಗೆ ವಿವಿಧ ವೃತ್ತಿಗಳನ್ನು ನಿರ್ವಹಿಸಲು ಧನ ಸಹಾಯ ನೀಡಲಾಗುತ್ತಿದೆ. ವಾಸ್ತವದಲ್ಲಿ ಬೀದರ ಜಿಲ್ಲೆಯಲ್ಲಿನ ಬೇಡ ಸಮುದಾಯದ ನಿರುದ್ಯೋಗಿ ಯುವಕರಿಗೆ ಇಂತಹ ಯೋಜನೆಗಳು ಅನುಷ್ಠಾನದಲ್ಲಿ ಇಲ್ಲಿಯವರೆಗೆ ಬಂದಿರುವುದಿಲ್ಲ. ಇನ್ನು ಮುಂದಾದರೂ ಬರಲೇಬೇಕಾಗಿದೆ.

ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶನಾಲಯ ಸ್ಥಾಪನೆಯಾಗಿ ಕೇವಲ ಒಂದು ವರ್ಷ ಕಳೆದಿದೆ ಇದರ ಕಚೇರಿ ಬೆಂಗಳೂರಿನಲ್ಲಿದೆ. ಬೆಂಗಳೂರಿನಿಂದ ೭೦೦ ಕಿಲೋ ಮೀಟರಿಗಿಂತ ಹೆಚ್ಚು ದೂರವಿರುವ ಬೀದರ ಜಿಲ್ಲೆಯಲ್ಲಿ ಸಣ್ಣ ಗ್ರಾಮಗಳಲ್ಲಿ ವಾಸವಾಗಿರುವ ಬೇಡ ಸಮುದಾಯಕ್ಕೆ ಈ ಯೋಜನೆಗಳು ಇನ್ನೂ ಬಂದಿಲ್ಲ.

ಸರ್ಕಾರದ ಯೋಜನೆಗಳ ಬಗ್ಗೆ ಅರಿವು

ಸರಕಾರಿ ಯೋಜನೆಗಳ ಬಗೆಗೆ ಬೇಡರಿಗೆ ಯಾವ ಪರಿಜ್ಞಾನವು ಇಲ್ಲ. ಬೀದರ ಜಿಲ್ಲೆಯಲ್ಲಿ ಸಣ್ಣ ಉದ್ದಿಮೆಗಳನ್ನು ಸ್ಥಾಪಿಸಲು ಕೇಂದ್ರ ಮತ್ತು ರಾಜ್ಯ ಸರಕಾರಗಳು ಹಲವಾರು ರೀತಿಯ ಧನ ಸಹಾಯ, ಇನ್ನಿತರ ಉತ್ತೇಜಕಗಳನ್ನು ನೀಡುತ್ತಿವೆ. ಈ ರಿಯಾಯತಿ ಮತ್ತು ಉತ್ತೇಜಕಗಳ ಮಾಹಿತಿ ಸಮುದಾಯದವರಿಗೆ ಎಳ್ಳಷ್ಟು ಇರುವುದಿಲ್ಲ. ರಾಜ್ಯ ಸರಕಾರ ಮತ್ತು ಸ್ವಯಂ ಸೇವಾ ಸಂಸ್ಥೆಗಳು ಜಿಲ್ಲೆಯ ಬೇಡ ಯುವಕರಿಗೆ ಈ ಎಲ್ಲ ವಿಷಯಗಳ ಬಗೆಗೆ ಅರಿವು ಮೂಡಿಸುವುದು ಅತ್ಯಗತ್ಯ. ರಾಜ್ಯದ ಇತರ ಜಿಲ್ಲೆಗಳಲ್ಲಿ ಕೆಲವು ಸ್ವಯಂ ಸೇವಾ ಸಂಸ್ಥೆಗಳು ಈಗಾಗಲೇ ಅಸ್ತಿತ್ವದಲ್ಲಿ ಬಂದಿವೆ ಇವುಗಳಿಂದ ಗಿರಿಜನರಿಗೆ ಹಲವಾರು ರೀತಿಯಲ್ಲಿ ಪ್ರಯೋಜನವಾಗುತ್ತಿದೆ. ಉದಾಹರಣೆಗೆ ಚಾಮರಾಜ ನಗರ ಜಿಲ್ಲೆ, ಯಳಂದೂರು ತಾಲ್ಲೂಕಿನ ವಿವೇಕಾನಂದ ಗಿರಿಜನ ಕಲ್ಯಾಣ ಕೇಂದ್ರ ಮತ್ತು ಮೈಸೂರು ಜಿಲ್ಲೆ ಹೆಗ್ಗಡದೇವನ ಕೋಟೆ

ತಾಲ್ಲೂಕಿನ ಸ್ವಾಮಿ ವಿವೇಕಾನಂದ ಯುತ್ ಮೂವ್‌ಮೆಂಟ್ ಸಂಸ್ಥೆ ಹಾಗೂ ಉಡುಪಿ ಜಿಲ್ಲೆಯ ಸ್ಫೂರ್ತಿ ಗ್ರಾಮೀಣ ಅಭಿವೃದ್ಧಿ ಮತ್ತು ತರಬೇತಿ ಸಂಸ್ಥೆ ಇತ್ಯಾದಿ ಸಂಸ್ಥೆಗಳು ಪರಿಶಿಷ್ಠ ವರ್ಗದವರಿಗೆ ಸರಕಾರದ ಅಭಿವೃದ್ಧಿ ಕಾರ್ಯಕ್ರಮಗಳ ಬಗೆಗೆ ಮಾಹಿತಿಯನ್ನು ನೀಡುತ್ತಿದೆ. ಆ ಜಿಲ್ಲೆಗಳಲ್ಲಿನ ಯುವಕರು ತಮಗೆ ದೊರತ ಇಂತಹ ಮಾಹಿತಿಯಿಂದ ಹಲವಾರು ಆರ್ಥಿಕ ಚಟುವಟಿಕೆಗಳನ್ನು ಪ್ರಾರಂಭಿಸಿದ್ದಾರೆ. ಬೀದರ ಜಿಲ್ಲೆಯಲ್ಲಿ ಇಂತಹ ಕಾರ್ಯ ಅತೀ ತೀವ್ರವಾಗಿ ಆಗಬೇಕು. ಈ ಬುಡಕಟ್ಟಿನ ಕೆಲವು ಯುವಕರಿಗೆ, "ಸರಕಾರಿ ನೌಕರಿ ನಿಮಗೆ ಸಿಗುವುದಿಲ್ಲ, ಬೀದರ ಜಿಲ್ಲೆಯಲ್ಲಿ ಸಣ್ಣ ಉದ್ದಿಮೆಯನ್ನು ತೆಗೆಯಲು ಕೇಂದ್ರ ಮತ್ತು ರಾಜ್ಯ ಸರಕಾರ ಸಾಕಷ್ಟು ಸವಲತ್ತು ನೀಡುತ್ತಿದೆ. ನೀವೇಕೇ ಈ ನಿಟ್ಟಿನಲ್ಲಿ ಮುಂದೆ ಬಂದಿಲ್ಲ"? ಎಂದು ಕೇಳಿದ ಪ್ರಶ್ನೆಗೆ ಅವರಿಂದ ಬಂದ ಉತ್ತರ ಬಹಳ ನಿರಾಶದಾಯಕವಾಗಿತ್ತು.

ಮುಂದುವರೆಯುತ್ತಿರುವ ದೇಶವಾದ ಭಾರತದಲ್ಲಿ ಸರಕಾರ ಕೇವಲ ಯೋಜನೆಗಳನ್ನು ಮಾಡಿದರೆ ಸಾಲದು, ಅದು ಜನರಲ್ಲಿ ಆರ್ಥಿಕ ಪ್ರಗತಿಯ ಅವಶ್ಯಕತೆಯ ಅರಿವನ್ನು ಮೂಡಿಸುವುದು, ಅವರಲ್ಲಿ ವೈಜ್ಞಾನಿಕ ಮನೋಭಾವನೆಯನ್ನು ನಿರ್ಮಿಸುವುದು, ಅವರಿಗೆ ಶಿಕ್ಷಣ ಕೊಡುವುದು, ಸರಕಾರ ನೀಡುತ್ತಿರುವ ಸೌಲತ್ತುಗಳ ಬಗೆಗ ಅರಿವು ಮೂಡಿಸುವುದು ಹೀಗೆ ಅನೇಕಾನೇಕ ಕೆಲಸಗಳನ್ನು ಮಾಡಬೇಕಾಗುತ್ತದೆ. ಅದರಲ್ಲೂ ಕರ್ನಾಟಕದಲ್ಲಿ ಹಿಂದುಳಿದ ಜಿಲ್ಲೆಯಾದ ಬೀದರನಲ್ಲಿ ಮತ್ತು ವಿಶೇಷವಾಗಿ, ಶೈಕ್ಷಣಿಕವಾಗಿ, ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಆಡಳಿತ ವರ್ಗ ಸರಕಾರಿ ಯೋಜನೆಗಳ ಬಗೆಗೆ ಅರಿವು ಮೂಡಿಸುವ ಸುದೀರ್ಘ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು. ಉದಾಹರೆಣೆಗೆ, 'ಗಂಗಾ ಕಲ್ಯಾಣ ಯೋಜನೆ'ಯಡಿಯಲ್ಲಿ ಕಡುಬಡವರಿಗೆ ಸಹಾಯಕವಾಗುವಂತೆ ಈ ಹಿಂದೆ ಕೊಳವೆ ಬಾವಿ ಯೋಜನೆಯಡಿಯಿದ್ದ ಬಾವಿಗಳ ಮಧ್ಯ ಇರಬೇಕಾದ ಅ) ಕನಿಷ್ಠ ಅಂತರ ಮತ್ತು ಬ) ಕಪ್ಪು ಕ) ಗ್ರೇ ಎಂಬ ಪ್ರದೇಶದ ಬಗೆಗಿನ ನಿಯಮವನ್ನು ಸಡಿಲಿಸಿರುವುದು, ಈ ಯೋಜನೆಯಡಿ ನೀಡಲಾಗುವ ಕೇಸಿಂಗ್ ಪೈಪು, ಪಂಪುಸೆಟ್, ಪೈಪಲೈನ್ ಮತ್ತು ಇತರೆ ಸಾಮಗ್ರಿಗಳ ಗುಣಮಟ್ಟ ಕಾಯ್ದುಕೊಳ್ಳಲಾಗುವುದು ಇತ್ಯಾದಿ ವಿವರಗಳ ಬಗೆಗೆ ಈ ಬುಡಕಟ್ಟಿನವರಿಗೆ ಮಾಹಿತಿಯೇ ಇಲ್ಲ.

ಬೇಡ ಬುಡಕಟ್ಟಿನವರ ಆಶೋತ್ತರಗಳು

೧. ಜಾತಿ ಪ್ರಮಾಣ ಪತ್ರವನ್ನು ನೀಡುವ ವಿಧಾನವನ್ನು ಸರಳೀಕರಿಸುವುದು.

೨. ಮೇಲ್ಜಾತಿ ಸರಕಾರಿ ಅಧಿಕಾರಿಗಳು ಕೆಲವೊಮ್ಮೆ ಕಾಯ್ದೆ-ಕಾನೂನುಗಳನ್ನು ತಪ್ಪಾಗಿ ಅರ್ಥೈಸುತ್ತಾರೆ; ಇದು ಕೂಡಲೇ ನಿಲ್ಲಬೇಕು.

೩. ರಾಜ್ಯದ ಉಳಿದ ಜಿಲ್ಲೆಯಲ್ಲಿ ಈಗಾಗಲೇ ನೀಡಿರುವಂತೆ ಬೀದರ ಜಿಲ್ಲೆಯ ಬೇಡ ಸಮುದಾಯಕ್ಕೆ ಖುಷ್ಕಿ ಮತ್ತು ತರಿ (ನೀರಾವರಿ) ಜಮೀನನ್ನು ಖರೀದಿಸಿ ವ್ಯವಸಾಯ ಮಾಡಲು ನೀಡಬೇಕು. ಈ ಸಮುದಾಯ ಜನರು ವ್ಯವಸಾಯ ಮಾಡುವ ಉತ್ಕಟೇಚ್ಛೆ ಹೊಂದಿರುವುದರಿಂದ ತಡಮಾಡದೆ ಈ ನಿಟ್ಟಿನಲ್ಲಿ ಪ್ರಗತಿಯನ್ನು ಸಾಧಿಸಬೇಕು.

೪. ನಿರುದ್ಯೋಗ ಯುವಕರಿಗೆ ಸರಕಾರಿ ಸ್ವಾಮ್ಯದ ಸಾರ್ವಜನಿಕ ಉದ್ದಿಮೆಗಳಲ್ಲಿ ವಿವಿಧ ಟ್ರೇಡ್‌ಗಳಲ್ಲಿ ತರಬೇತಿ ನೀಡಿ ಉದ್ಯೋಗಾವಕಾಶ ಒದಗಿಸಬೇಕು.

೫. ಹಲವಾರು ಬೇಡ ಯುವಕರು ಎಸ್.ಎಸ್.ಎಲ್.ಸಿ. ಮತ್ತು ಬಿ.ಎ. ತೇರ್ಗಡೆ ಹೊಂದಿ ನೌಕರಿಯಿಲ್ಲದೆ ಖಾಲಿ ಕುಳಿತ್ತಿರುತ್ತಾರೆ. ಇವರಿಗೆ ಬೆರಳಚ್ಚು ಹಾಗೂ ಶೀಘ್ರಲಿಪಿಯಲ್ಲಿ ತರಬೇತಿ ಕೊಡಬೇಕು. ಹೀಗೆ ಮಾಡುವುದರಿಂದ ಅವರಿಗೆ ನೌಕರಿ ಸಿಗುತ್ತದೆ.

೬. ವೈದ್ಯಕೀಯ ಹಾಗೂ ತಾಂತ್ರಿಕ ಕಾಲೇಜುಗಳಲ್ಲಿ ಕಡ್ಡಾಯವಾಗಿ ಇಂತಿಷ್ಟು ಬೇಡ ಪಂಗಡದವರನ್ನು ತೆಗೆದುಕೊಳ್ಳಲೇಬೇಕೆಂಬ ಕಾಯ್ದೆ ಸರಕಾರ ಮಾಡಬೇಕು. ಕಾಯ್ದೆ ಇದ್ದರು ಇದನ್ನು ಅನುಷ್ಠಾನದಲ್ಲಿ ತಂದಿರುವುದಿಲ್ಲ. ಇನ್ನು ಮುಂದೆ ವಿಳಂಬವಾಗುವುದಕ್ಕೆ ಅವಕಾಶ ಕೊಡಬಾರದು.

೭. ಅನುದಾನ ಪಡೆಯುತ್ತಿರುವ ಖಾಸಗಿ ಕಾಲೇಜು ಮತ್ತು ಮಹಾವಿದ್ಯಾಲಯಗಳಲ್ಲಿ 'ಎಸ್.ಟಿ.' ಬ್ಯಾಕ್‌ಲಾಗನ್ನು ವಿಳಂಬ ಮಾಡದೆ ತುಂಬಬೇಕು.

೮. ಇವರಿಗೆ ಅನುಕೂಲವಾಗುವಂತೆ ವಿವಿದೋದ್ದೇಶ ಸಹಕಾರಿ ಸಂಘಗಳು ಜಿಲ್ಲೆಯಲ್ಲಿ ಪ್ರಾರಂಭಿಸಬೇಕು. ಈಗಾಗಲೇ ಸಮಗ್ರ ಗಿರಿಜನ ಅಭಿವೃದ್ಧಿ ಯೋಜನಾ ಪ್ರದೇಶಗಳಾದ ಮೈಸೂರು, ಚಾಮರಾಜ ನಗರ, ಕೊಡಗು, ದಕ್ಷಿಣ ಕನ್ನಡ, ಉಡುಪಿ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಸಹಕಾರಿ ತತ್ವದ ಆಧಾರದ ಮೇಲೆ ೧೯ ಗಿರಿಜನ ದೊಡ್ಡ ಪ್ರಮಾಣದ ವಿವಿದೋದ್ದೇಶ ಸಹಕಾರಿ ಸಂಘಗಳು (Lamps) ಕಾರ್ಯ ನಿರ್ವಹಿಸುತ್ತಿವೆ.

೯. ಸಾಮಾಜಿಕ ಭದ್ರತಾ ಯೋಜನೆಯನ್ನು ಅನುಷ್ಠಾನದಲ್ಲಿ ತರಬೇಕು.

ಬೇಡ ಸಮುದಾಯದ ಮುಖ್ಯ ಕಸುಬು 'ವ್ಯವಸಾಯ' ಆಗಿದೆ ಎಂಬುದನ್ನು ಸವಿಸ್ತಾರವಾಗಿ ತಿಳಿದುಬಂದಿದೆ. ಭೂಮಿಯ ಫಲವತ್ತತೆ ಕಡಿಮೆಯಿರುವುದರಿಂದ ಭೂ-ಹಿಡುವಳಿಗಳು ಚಿಕ್ಕದಾಗಿರುವುದರಿಂದ ಮತ್ತು ಒಣ ಭೂಮಿಯೇ ಅಧಿಕವಾಗಿರುವುದರಿಂದ, ರೈತರಿಗೆ ಕೃಷಿಯಿಂದ ಜೀವನ ಸಾಗಿಸುವುದು ಕಷ್ಟವಾಗಿದೆ. ಕೃಷಿಯೇತರ ಕಾರ್ಮಿಕರ ಕುರಿ ಮತ್ತು ಮೇಕೆ ಕಾಯುವುದನ್ನೇ ಮುಖ್ಯ ಕಸುಬು ಆಗಿಸಿಕೊಂಡಿರುವವರ ಆರ್ಥಿಕ ಪರಿಸ್ಥಿತಿಗಿಂತಲೂ ಹದಗಟ್ಟಿರುತ್ತದೆ. ವೃತ್ತಿಗಳ ಆದಾಯ ಕಡಿಮೆ

ಇರುವುದರಿಂದ ಉಳಿತಾಯವಾಗುತ್ತಿಲ್ಲ. ಜೀವನ ಮಟ್ಟ ಕಡಿಮೆಯಿದ್ದರು, ಕೆಲವರು ಕುಡಿತದ ಮೇಲೆ ತುಲನಾತ್ಮಕವಾಗಿ ಹಣವನ್ನು ಹೆಚ್ಚಿಗೆ ಖರ್ಚು ಮಾಡಿರುತ್ತಾರೆ.

ದ್ವಿತೀಯ ಹಾಗೂ ತೃತೀಯ ರಂಗಗಳಲ್ಲಿ ಬೇಡರ ಭಾಗವಹಿಸುವಿಕೆ ಇಲ್ಲವೇ ಇಲ್ಲ. ಸರಕಾರದ ಸೌಲತ್ತುಗಳ ಬಗೆಗೂ ಅವರಿಗೆ ಮಾಹಿತಿ ಇರುವುದಿಲ್ಲ. ಇದಲ್ಲದೆ, ಜಿಲ್ಲೆಯ ಆಡಳಿತ ಸಹ ಬೇಡ ಸಮುದಾಯದವರಿಗೆ ಸಿಗುವ ಸೌಲತ್ತುಗಳನ್ನು ಸಮರ್ಪಕವಾಗಿ ಹಂಚಿರುವುದಿಲ್ಲ. ಒಟ್ಟಿನಲ್ಲಿ ಆರ್ಥಿಕವಾಗಿ ಈ ಸಮುದಾಯದವರು ಬಹಳ ಹಿಂದೆ ಉಳಿದಿರುತ್ತಾರೆ.

ಇನ್ನೂ ಮುಂದಾದರೂ ಸರಕಾರ ಈ ಸಮುದಾಯದವರಿಗೆ ಸಿಗುವ ಸೌಲತ್ತುಗಳನ್ನು ವಿಳಂಬ ಮಾಡದೆ ದೊರಕಿಸಿಕೊಡಬೇಕು. ಇಲ್ಲದಿದ್ದಲ್ಲಿ, ಇವರುಗಳು ಆರ್ಥಿಕವಾಗಿ ಮುಂದೆ ಬರುವುದು ಕಷ್ಟಸಾಧ್ಯ.

ಆಧಾರ ಗ್ರಂಥಗಳು

೧. ಹುಚ್ಚಪ್ಪ, ಜಿ.ಟಿ. "ಆರ್ಥಿಕ ರಚನೆ" ಅಧ್ಯಯ-೨.

೨. ಕಲ್ಲೂರು ಎಮ್.ಎಸ್. "ಒಣ ಬೇಸಾಯ", ಪ್ರಸಾರಂಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, ೧೯.

೩. ಕಲ್ಲೂರ ಎಂ. ಎಸ್. ಮತ್ತು ಪ್ರಭಾರ ಶಶೀಲ, ಕೃಷಿ ಅರ್ಥಶಾಸ್ತ್ರ, ಕಲಾ ಪ್ರಕಾಶನ, ಬೆಂಗಳೂರು, ೨೦೦೦, ಪು. ೩೩.

೪. ಕೃಷಿ ಉತ್ಪಾದನೆ, ೧೯೯೪-೯೫, ಕೃಷಿ ನಿರ್ದೇಶನಾಲಯ, ಬೆಂಗಳೂರು, ೧೯೯೫, ಪು. ೧.

೫. Kallur, M.S. and Degeonkar C.K., A Development Plant for Hyderabad Karnataka Region, Dept. of Economics, 2001, pp. 66.

೬. ಚಂದ್ರು ಕಾಳೇನಹಳ್ಳಿ, ಕರ್ನಾಟಕದ ಬುಡಕಟ್ಟುಗಳು, ಸಂಪುಟ-೧, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು, ೧೯೯೮, ಪು. ೩೨೨-೩೪೫.

೭. ತೀ. ನಂ. ಶಂಕರನಾರಾಯಣ, ಕಾಡುಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆಗಳು ಒಂದು ವಿವರಣಾತ್ಮಕ ಅಧ್ಯಯನ, (ಅ ಪ್ರಕಟಿತ ಪಿಎಚ್.ಡಿ. ಪ್ರಬಂಧ, ಪು. ೬೭).

೮. Khan, Mumtaz Ali (1980) Schedule castes and their states in India: New Delhi; Uppal Publishing House.

೯. Kabra, Govinda Das (1987) Tribal workers in an Industrial setting, Allahabad, Vohra Publications.

೧೦.ಡಿ. ಕೃಷ್ಣ ಅಯ್ಯಂಗರ್ ಪ್ರಬುದ್ಧ ಕರ್ನಾಟಕ ಸಂಪುಟ ೨೬, ಸಂಚಿಕೆ ೨, ಪು. ೪೨.

೧೧.ಮೇತ್ರಿ ಕೆ.ಎಂ. op. cit., ಪು. ೨೬೧.

೧೨.ಉದಾಹರಣೆಗೆ 'ನಾಗಲ್ಯಾಂಡ, ತ್ರಿಪುರ, ಮಣಿಪುರ, ನೇಫಾಳ, ಮೀಜೋರಾಂ ಈ ಪ್ರದೇಶಗಳಲ್ಲಿ ವಾಸವಾಗಿರುವ ಎಲ್ಲ ಬುಡಕಟ್ಟುಗಳ ಜನರೂ, ಬಿಹಾರ, ಓರಿಸ್ಸಾ, ಮಧ್ಯ ಪ್ರದೇಶಗಳಲ್ಲಿರುವ ಬಹುಪಾಲು ಬುಡಕಟ್ಟುಗಳ ಜನರೂ ಸ್ಥಳಾಂತರ ಬೇಸಾಯದಿಂದ ಜೀವಿಸುತ್ತಾರೆ' - ತೀ. ನಂ. ಶಂಕರಣನಾರಾಯಣ, ಕಾಡುಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆಗಳು ಒಂದು ವಿವರಣಾತ್ಮಕ ಅಧ್ಯಯನ (ಅಪ್ರಕಟಿತ ಪಿಎಚ್.ಡಿ. ಪ್ರಬಂಧ ಪು. ೬೭).

೧೩.ಇತರ ಆದಿವಾಸಿಗಳು ಸಹ ಈ ರೀತಿ ತಮ್ಮ ಪೂರ್ವಜರ ಅಥವಾ ಇತ್ತೀಚೆಗೆ ಖರೀದಿಸಿದ ಭೂಮಿಯಲ್ಲಿ ವ್ಯವಸಾಯವನ್ನು ಮಾಡುತ್ತಿದ್ದಾರೆ. ವಿವರಗಳಿಗೆ ಕೆ.ಎಂ. ಮೈತ್ರಿ, ಪು. ೨೬೧.

೧೪.ಮೈತ್ರಿ ಕಾಮಣ್ಣಾ, op. cit., ಪು. ೨೬೧.

15. Sching, L.D., "Agricultural Problems of Middle East", Journal of Farm Economy, Vol. 35, 1935, pp. 582.

೧೬.Government of India, Ministry of Agriculture, Indian Agriculture in Blief, New Delhi, 1976, pp. 27.

೧೭.For details refer Nanavati, M.B., Anjaria, J.J. The Indian Rural Problem, Indian Society of Agriculture Economics, Bombay, 1944, pp.5.

೧೮.Degeonkar, C.K. and Kallur, M.S., A Development Plan for Hyderabad Karnataka Region, 2001.

೧೯.ಮೈತ್ರಿ ಕೆ.ಎಂ. op. cit., ಪು. ೨೬೩.

೨೦.Degeonkar C.K. and Kallur, M.S., A Development plant for Hyderabad Karnataka Region, op. cit., p. 98.

೨೧.Gadgil, D.R., Economics effects of Irrigation - Report of survey of the Director and Indirect, Benefits and Godavari and Prwara conds, Ghokale Institute of Politics and Economics, Pune, 1948, pp. 1-135.

೨೨.Kallur, M.S., Irrigation and Economics, Development, Chugh Publications, Allahabad, 1998, pp. 1-296.

೨೩.ಕಲ್ಲೂರ ಎಂ. ಎಸ್. ಮತ್ತು ಪ್ರಭಾಕರ ಶಶೀಲ, 'ಕೃಷಿ ಅರ್ಥಶಾಸ್ತ್ರ' op. cit., ಪು. ೨೦೦-೨೦೦೧.

೨೪.ಕರ್ನಾಟಕ ಸರಕಾರ, ಕರ್ನಾಟಕ ಅಂಕಿ-ಅಂಶಗಳ ನೋಟ, ಬೆಂಗಳೂರು, ೧೯೯೬-೯೭.

೨೫.Quoted in Singh and Sadhu, Agricultural Problems in India, Himalaya Publishing House, 1986,

೨೬.Singh and Sadhu, Ibid., pp. 38-39.

೨೭.Singh and Sadhu, Ibid., pp. 39.

೨೮.ಕಲ್ಲೂರ ಎಂ.ಎಸ್. ಮತ್ತು ಪ್ರಭಾಕರ ಶಶೀಲ, ಕೃಷಿ ಅರ್ಥಶಾಸ್ತ್ರ, op. cit., ಪು. ೨೩೧-೨೩೨.

೨೯.ಕಲ್ಲೂರ ಎಂ. ಎಸ್. ಮತ್ತು ಪ್ರಭಾಕರ ಶಶೀಲ, ಕೃಷಿ ಅರ್ಥಶಾಸ್ತ್ರ, ಕಲಾ ಪ್ರಕಾಶನ, ಬೆಂಗಳೂರು, ೨೦೦೦, ಪು. ೩೬೫.

೩೦.Memoria, C.B., Agricultural Problems of India, 1995, pp. 84.

೩೧.ಕಲ್ಲೂರ ಎಂ. ಎಸ್. ಮತ್ತು ಪ್ರಭಾಕರ ಶಶೀಲ, Ibid., ಪು. ೨೨೮-೨೨೯.

೩೨.ಬೀದರ ಜಿಲ್ಲೆಯ ಅಂಕಿ-ಅಂಶಗಳ ನೋಟ, ೧೯೯೮-೯೯.

೩೩.Memoria, C.B., Agricultural Problems of India, Ibid., pp. 84-85.

೩೪.Kallur, M.S. and Prabhakar Sheshil, op. cit., pp. 230.

೩೫.Govt. of India, Indian Agriculture in Brief, 1986, pp. 73.

೩೬.ಕಲ್ಲೂರ ಎಂ.ಎಸ್. ಮತ್ತು ಪ್ರಭಾಕರ ಶಶೀಲ, ಕೃಷಿಯ ಅರ್ಥಶಾಸ್ತ್ರ, op. cit., ಪು. ೩೦೨-೩೦೩.

೩೭.ಕಲ್ಲೂರ ಎಂ. ಎಸ್. ಮತ್ತು ಪ್ರಭಾಕರ ಶಶೀಲ, ಕೃಷಿ ಅರ್ಥಶಾಸ್ತ್ರ., op. cit., ಪು. ೩೭೫.

೩೮.Ibid., pp. 122.

೩೯.ಮೈತ್ರಿ ಕಾಮಣ್ಣ op. cit., ಪು.

೪೦.Ibid., pp. 129.

೪೧.ವಕ್ತೃ ಕೋಹಿನೂರು ಗ್ರಾಮದವನು.

೪೨.ಶರಣಪ್ಪ ಎಸ್., ವಸಂತ ಗುಮಾಸ್ತ, "ಅಭಿವೃದ್ಧಿ ಅರ್ಥಶಾಸ್ತ್ರ", ನರೇಂದ್ರ ಪ್ರಕಾಶನ, ದಾವಣಗೆರೆ, ೧೯೯೭, ೧೨೫.

೪೩.Kallur, M.S. and Degeonkar C.K., "Socio-economic Bench Mack Survey of Karanja Irrigatino Project" op. cit., Vol. III.

೪೪.ಮೈತ್ರಿ ಕೆ. ಎಂ., op. cit., pp. ೨೮೨.

೪೫.ಪ್ರಭಾಕರ ಶಶೀಲ ಮತ್ತು ಕುಮಾರ ಸ್ವಾಮಿ: ಭಾರತೀಯ ಆರ್ಥಿಕತೆಯ ಅಧ್ಯಯನ, ಕಲಾ ಪ್ರಕಾಶನ, ಬೆಂಗಳೂರು, ೧೯೯೯, ಪು. ೧೩೨-೧೩೫.

೪೬.ಪ್ರಭಾಕರ ಶಶೀಲ, ಅರ್ಥಶಾಸ್ತ್ರ ತತ್ವಗಳು, ಕಲಾ ಪ್ರಕಾಶನ, ಬೆಂಗಳೂರು, ೧೯೯೭, ಪು. ೫೩೨-೫೩೫.

ಅಧ್ಯಾಯ-೬

ಉಪಸಂಹಾರ (CONCLUSION)

ಬುಡಕಟ್ಟಿನ ಜನಾಂಗ ಒಂದು ಪ್ರದೇಶದಲ್ಲಿರುವ ಜನಾಂಗ; ಒಂದೇ ತೆರನಾದ ಪರಂಪರೆಗಳು, ನಂಬಿಕೆಗಳು ಹಾಗೂ ಪದ್ಧತಿಗಳನ್ನು ಅನುಸರಿಸುವ ಗುಂಪು ಇದು. ಒಟ್ಟಿನಲ್ಲಿ ನಿಸರ್ಗದ ಮಡಿಲಲ್ಲಿ ಇರುವವರು, ಪ್ರಕೃತಿಜನ್ಯ ಉತ್ಪನ್ನಗಳನ್ನೂ ಭಕ್ಷಿಸುವವರು ಮತ್ತು ತಮ್ಮದೆ ಆದ ಒಂದು ವಿಶಿಷ್ಠ ರೀತಿಯ ಸಾಮಾಜಿಕ ಜೀವನ ವಿಧಾನದಿಂದ ಬದುಕನ್ನು ಸಾಗಿಸುವವರು ಹಾಗೂ ಒಂದು ಸಾರ್ವತ್ರಿಕ ಉದ್ದೇಶವನ್ನು ಸಾಧಿಸಲು ಕೂಡಿ ಕೆಲಸ ಮಾಡುವ ಒಂದು ಜನಾಂಗಕ್ಕೆ ಬುಡಕಟ್ಟು ಜನಾಂಗ ಎನ್ನಬಹುದು.

ಕ್ರಿ. ಪೂ. ೫೦೦ ರಿಂದ ಪ್ರಸ್ತುತದವರೆಗಿನ ಕಾಲವನ್ನು ಆಧುನಿಕ ಕಾಲವೆಂದು ಕರೆಯಲಾಗುತ್ತದೆ. ಈ ಕಾಲದಲ್ಲಿಯೇ ಮಾನವ ಆರ್ಥಿಕವಾಗಿ ವಿಕಾಸಗೊಳ್ಳಲು ಪ್ರಯತ್ನ ಮಾಡಿದ್ದಾನೆ. ಕೃಷಿ, ಕೈಗಾರಿಕೆ ಮತ್ತು ಸಾರಿಗೆ ವ್ಯವಸ್ಥೆಗಳು ಜಗತಿನಾದ್ಯಂತ ಬೆಳೆಯುತ್ತಲಿವೆ. ಮೊಟ್ಟಮೊದಲು ಗ್ರೇಟ್ ಬ್ರಿಟನಿನಲ್ಲಿ ಕೈಗಾರಿಕಾ ಕ್ರಾಂತಿ ಉಂಟಾಯಿತು. ತದನಂತರ ಐರೋಪ್ಯ ಖಂಡದ ಇತರ ದೇಶಗಳು ಉದ್ದಿಮೆ ಕ್ರಾಂತಿಯನ್ನು ಅನುಭವಿಸಿದವು. ಈ ದೇಶಗಳ ಔದ್ಯೋಗಿಕ ಕ್ರಾಂತಿ ಅಲ್ಲಿನ ಜನರ ಉದ್ಯೋಗಾವಕಾಶಗಳನ್ನು ಗಮನಾರ್ಹವಾಗಿ ಹೆಚ್ಚಿಸಿ ಅವರ ತಲಾ ಆದಾಯವನ್ನು ಕ್ರಮೇಣವಾಗಿ ಗಮನಾರ್ಹವಾಗಿ ವೃದ್ಧಿಪಡಿಸಿದವು. ಹೀಗಾಗಿ ಈ ದೇಶಗಳ ಜನರು ಆರ್ಥಿಕವಾಗಿ ಮುಂದೆ ಬಂದರು ಅಥವಾ ಶ್ರೀಮಂತರಾದರು.

ಭಾರತವು ಆಗಸ್ಟ್ ೧೯೪೭ರಲ್ಲಿ ಸ್ವಾತಂತ್ರ್ಯವನ್ನು ಪಡೆಯಿತು. ದೇಶದ ಆರ್ಥಿಕಾಭಿವೃದ್ಧಿಗಾಗಿ ಪಂಚವಾರ್ಷಿಕ ಯೋಜನೆಗಳು ೧೯೫೧ರಲ್ಲಿ ಪ್ರಾರಂಭಗೊಂಡವು. ಭಾರತವು ವಿವಿಧ ಧರ್ಮ, ಜಾತಿ ಮತ್ತು ಬುಡಕಟ್ಟು ಸಮುದಾಯಗಳನ್ನುಳ್ಳ ಒಂದು ದೊಡ್ಡ ದೇಶ. ಮೇಲಾಗಿ ಈ ದೇಶ ಬುಡಕಟ್ಟು ಜನಾಂಗಗಳ ಒಂದು ನಿಸರ್ಗದತ್ತ ವಾಸಸ್ಥಳವಾಗಿದೆ. ಆದುದರಿಂದಲೇ ಭಾರತದಲ್ಲಿ ೪೨೭ ಬುಡಕಟ್ಟುಗಳನ್ನು ಗುರುತಿಸಲ್ಪಟ್ಟಿವೆ. ಪಂಚವಾರ್ಷಿಕ ಯೋಜನೆಗಳು ಈ ಬುಡಕಟ್ಟು ಜನಾಂಗದ ಜನರಿಗೆ ಆರ್ಥಿಕವಾಗಿ ನೆರವು ನೀಡುವಲ್ಲಿ ಇಂದಿಗೂ ಸಂಪೂರ್ಣ ಯಶಸ್ವಿಯಾಗಿಲ್ಲ. ವಿವಿಧ ಪಂಚವಾರ್ಷಿಕ ಯೋಜನೆಗಳಿಂದ ಮುಂದುವರಿದ ಜಾತಿ (Forward caste) ಜನ ಸಾಕಷ್ಟು ಆರ್ಥಿಕ ಪ್ರಯೋಜನ ಪಡೆದುಕೊಂಡು ಶ್ರೀಮಂತರಾಗಿದ್ದಾರೆ. ಇದಲ್ಲದೆ ಇವರೆಲ್ಲರೂ ಹಿಂದುಳಿದ ಮತ್ತು ಬುಡಕಟ್ಟು ಸಮುದಾಯಕ್ಕೆ

ಒದಗಬೇಕಾಗಿದ್ದ ಸವಲತ್ತುಗಳನ್ನು ಸಹ ಅವರಿಗೆ ಹೋಗಗೊಡದೇ ತಾವೇ ಅನುಭವಿಸಿದ್ದಾರೆ ಮತ್ತು ಇಂದಿಗೂ ಅನುಭವಿಸುತ್ತಿದ್ದಾರೆ. ಆದುದರಿಂದ, ಈ ಜನರು ಆರ್ಥಿಕವಾಗಿ ಇನ್ನೂ ಹಿಂದುಳಿದಿರುತ್ತಾರೆ.

ಕರ್ನಾಟಕವು ಭಾರತದಂತೆ ಹಲವಾರು ಬುಡಕಟ್ಟು ಸಮುದಾಯಗಳನ್ನು ಹೊಂದಿದೆ ಈ ಸಮುದಾಯಗಳ ಜನರು ರಾಜ್ಯದ ಹಲವಾರು ಜಿಲ್ಲೆಗಳಲ್ಲಿ ಅಂದರೆ ಮೈಸೂರು, ಕೊಡಗು, ರಾಯಚೂರ, ಚಿಕ್ಕಮಂಗಳೂರು, ಬಳ್ಳಾರಿ, ದಕ್ಷಿಣ ಕನ್ನಡ, ಚಿತ್ರದುರ್ಗ, ಗುಲಬರ್ಗಾ, ಬೀದರ ಮುಂತಾದ ಜಿಲ್ಲೆಗಳಲ್ಲಿ ವಾಸಿಸಿರುತ್ತಾರೆ. ಬೀದರ ಜಿಲ್ಲೆಯಲ್ಲಿ ಬುಡಕಟ್ಟು ಸಮುದಾಯಗಳು ಹಲವಾರು ಇವೆ ಇವುಗಳಲ್ಲಿ ಬೇಡ ಸಮುದಾಯ ಒಂದಾಗಿರುತ್ತದೆ. ಬೀದರ ಜಿಲ್ಲೆಯ ಬಸವಕಲ್ಯಾಣ, ಹುಮನಾಬಾದ, ಭಾಲ್ಕಿ ಮತ್ತು ಬೀದರ ಇವುಗಳಲ್ಲಿ ಬೇಡ ಬುಡಕಟ್ಟಿನವರು ವಾಸವಾಗಿರುತ್ತಾರೆ. ಇವರ ಬಗೆಗೆ ಇಲ್ಲಿಯವರೆಗೆ ಇತ್ತ ಸಾಮಾಜಿಕ, ಸಾಂಸ್ಕೃತಿಕವಾಗಿಯಾಗಲಿ ಅಥವಾ ಅತ್ತ ಆರ್ಥಿಕವಾಗಿಯಾಗಲಿ ಯಾರು ಅಧ್ಯಯನ ಕೈಕೊಂಡಿಲ್ಲ. ೨೧ನೇ ಶತಮಾನದಲ್ಲಿ ಮಾನವನ ಆರ್ಥಿಕ ಪ್ರಗತಿಗೆ ತುಲಾನಾತ್ಮಕವಾಗಿ ಅಧ್ಯಯನಿಸಲು ಹೆಚ್ಚು ಒತ್ತು ಕೊಡಬೇಕಾಗಿದೆ. ಅರ್ಥಶಾಸ್ತ್ರೀಯ ವಿದ್ಯಾರ್ಥಿಯಾದ ನಾನು ಈ ಸಮುದಾಯದ ಆರ್ಥಿಕ ಪರಿಸ್ಥಿತಿ ಮತ್ತು ಪ್ರಗತಿ ಇದರ ಬಗ್ಗೆ ಸವಿಸ್ತಾರವಾಗಿ ಅಧ್ಯಯನ ಕೈಕೊಳ್ಳಲು ಇಲ್ಲಿ ಶ್ರಮಿಸಿದ್ದೇನೆ.

ಇಂದಿನ ಪರಿಸ್ಥಿತಿಯಲ್ಲಿ ಒಂದು ಸಮುದಾಯಕ್ಕೆ ಸ್ಥಾನಮಾನ ಬರುವುದು ಅದರ ಆರ್ಥಿಕಾಭಿವೃದ್ಧಿಯಿಂದ ಮಾತ್ರ ಎಂದರೆ ತಪ್ಪಾಗಲಾರದು. ಶ್ರೀಮಂತರಿಗೆ ಸಮಾಜದಲ್ಲಿ ಸ್ಥಾನಮಾನ, ಬಡವರಿಗಲ್ಲ, ಅದಕ್ಕೊಸ್ಕರವೇ ಕಡಿಮೆ ಸರಾಸರಿ ಆದಾಯ, ಆದಾಯದ ಅಸಮಾನತೆ ಹಂಚುವಿಕೆ ಮತ್ತು ಮೇಲು ಕೀಳೆಂಬ ಸಾಮಾಜಿಕ ವಿಭಜನೆ ಇವೆಲ್ಲವುಗಳು ಒಂದಕ್ಕೊಂದು ಪರಸ್ಪರ ಸಂಬಂಧವನ್ನು ಹೊಂದಿರುತ್ತವೆ. ಕಡಿಮೆ ಆದಾಯಗಳ ಮಟ್ಟಗಳನ್ನು ಹೊಂದಿರುವ ಜನ ಸಾಮಾಜಿಕವಾಗಿ ಮೇಲಿನ ದರ್ಜೆಯನ್ನು ಪಡೆಯುವುದು ಸಾಧ್ಯವಿಲ್ಲ. ಬೇಡ ಸಮುದಾಯದವರು ಆರ್ಥಿಕವಾಗಿ ಹಿಂದುಳಿದಿರುವುದರಿಂದ ಇವರಿಗೆ ಸಮಾಜದಲ್ಲಿನ ಸ್ಥಾನ ಕಡಿಮೆಯಾಗಿದೆ. ಮೇಲಾಗಿ ಒಬ್ಬ ವ್ಯಕ್ತಿ ಅಥವಾ ಒಂದು ಸಮುದಾಯ ತನ್ನಲ್ಲಿ ಹುದುಗಿರುವ ಎಲ್ಲ ಸಾಮರ್ಥ್ಯಗಳನ್ನು ಸರಿಯಾಗಿ ಉಪಯೋಗಿಸಿಕೊಳ್ಳಲು ಒಬ್ಬ ವ್ಯಕ್ತಿ ಮತ್ತು ಆ ಸಮುದಾಯ ಹಸಿವಿನಿಂದ ನರಳಬಾರದು. ಆಹಾರದ ಜೊತೆಗೆ ವ್ಯಕ್ತಿಗಳಿಗೆ ಸುಖಕರ ವಸ್ತುಗಳ (Comforts) ಮತ್ತು ವಿಲಾಸೀಕರ ವಸ್ತುಗಳು (Luxuries) ಸಹ ಬೇಕು.

ಬೇಡ ಸಮುದಾಯದ ಜನರು ಪಂಚವಾರ್ಷಿಕ ಯೋಜನೆಗಳಲ್ಲಿನ ಹಲವಾರು ಬಡತನ ನಿರ್ಮೂಲನಾ ಮತ್ತು ಉದ್ಯೋಗ ನೀಡಿಕೆಯ ಕಾರ್ಯಕ್ರಮಗಳಿಂದ ಎಷ್ಟರಮಟ್ಟಿಗೆ ಉಪಯೋಗವನ್ನು

ಹೊಂದಿರುತ್ತಾರೆ ಎನ್ನುವ ಸತ್ಯವನ್ನು ಹೊರತಂದು ಮುಂದೆ ಕೈಕೊಳ್ಳಬೇಕಾದಂತಹ ಪ್ರಯತ್ನಗಳನ್ನು ಸಹ ಇಲ್ಲಿ ವಿವರಿಸುವುದು ಅವಶ್ಯಕವಾಗಿದೆ. ಇವರ ಆರ್ಥಿಕ ಆಶೋತ್ತರಗಳನ್ನು (expectations) ಕಂಡುಕೊಂಡು ಇವರ ಆರ್ಥಿಕಾಭಿವೃದ್ಧಿಗೆ ಮಾರ್ಗಸೂಚಿಗಳನ್ನು ನೀಡುವುದು ಅತ್ಯವಶ್ಯಕವಾದುದರಿಂದ ಇಂತಹ ಪ್ರಯಾಸವನ್ನು ಸಹ ಕೈಕೊಳ್ಳಲಾಗಿದೆ.

ರಾಷ್ಟ್ರ ಮತ್ತು ರಾಜ್ಯ ಮಟ್ಟದಲ್ಲಿ ಹಲವಾರು ಅಧ್ಯಯನಗಳು ಈಗಾಗಲೇ ನಡೆದಿವೆ. ಇವು ಪರಿಶಿಷ್ಠ ಪಂಗಡದ ಸಾಮಾಜಿಕ ಮತ್ತು ಸಾಂಸ್ಕೃತಿಕ ಅಧ್ಯಯನಗಳಾವೆ. ಈ ಅಧ್ಯಯನಗಳನ್ನು ಕೈಕೊಂಡ ವಿದೇಶಿಯರು ಈ ಬುಡಕಟ್ಟುಗಳ ಮೂಲ ಸಾಮಾಜಿಕ ಹಾಗೂ ಸಾಂಸ್ಕೃತಿಕ ಹಿನ್ನೆಲೆಯ ಬಗ್ಗೆ ಹೆಚ್ಚಾಗಿ ಅಭ್ಯಸಿಸಿದ್ದಾರೆ. ಸ್ವಾತಂತ್ರ್ಯದ ನಂತರ ಭಾರತೀಯ ಸಂಶೋಧನಕಾರರು ಇವರ ಬಗ್ಗೆ ಅಭ್ಯಸಿಸಿದರೂ ಇವರು ಸಹ ವಿದೇಶಿಯರನ್ನೇ ಅನುಸರಿಸಿ ಅವರ ಮೂಲ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಹಿನ್ನೆಲೆಯ ಬಗ್ಗೆ ಹೆಚ್ಚಾಗಿ ಅಭ್ಯಸಿಸಿ ಲೇಖನಗಳನ್ನು, ಗ್ರಂಥಗಳನ್ನು ಮತ್ತು ಮಹಾಪ್ರಬಂಧಗಳನ್ನು ಪ್ರಕಟಮಾಡಿದ್ದಾರೆ.

ಹಲವಾರು ವಿದ್ವಾಂಸರು ಬುಡಕಟ್ಟು ಸಮುದಾಯಗಳ ಆರ್ಥಿಕ ಜೀವನದ ಬಗ್ಗೆ ಏಕೆ ಬರೆಯಲಿಲ್ಲ ಎಂಬುದಕ್ಕೆ ಒಂದು ಬಲವಾದ ಕಾರಣವಿದೆ. ಭಾರತದಲ್ಲಿ ಬುಡಕಟ್ಟುಗಳ ಆರ್ಥಿಕ ಪರಿಸ್ಥಿತಿ ಬ್ರಿಟಿಷರ ಆಳ್ವಿಕೆಗೆ ಮೊದಲು ಸರಿಯಾಗಿಯೇ ಇತ್ತು. ಏಕೆಂದರೆ, ಈ ಬುಡಕಟ್ಟುಗಳು ಸ್ವತಂತ್ರವಾಗಿದ್ದವು, ವಿಶೇಷತ: ಮುಸ್ಲಿಂರ ಹಲವಾರು ಶತಮಾನಗಳ ಆಳ್ವಿಕೆಯ ಕಾಲದಲ್ಲಿ ಬುಡಕಟ್ಟುಗಳು ಸ್ವತಂತ್ರವಾಗಿದ್ದನ್ನು ನಾವು ಇಲ್ಲಿ ಸ್ಮರಿಸಬಹುದು. ಬ್ರಿಟಿಷರು ಬಂದನಂತರ ಭಾರತದಾದ್ಯಂತ ಏಕರೀತಿಯ ಆಳ್ವಿಕೆಯ ಕ್ರಮ ಜಾರಿಗೆ ಬಂತು. ಕಾಲಕ್ರಮೇಣ ಕೈಗಾರಿಕಾ ಕ್ರಾಂತಿಯಿಂದಾಗಿ ಬ್ರಿಟಿಷರು ಭಾರತದಾದ್ಯಂತ ರೈಲ್ವೆ ಸಂಪರ್ಕ ಏರ್ಪಡಿಸಲು ರಸ್ತೆಗಳನ್ನು ಮಾಡಿಸಲು ಆರಂಭಿಸಿದರು. ಇದರಿಂದಾಗಿ ಕಾಡುಗಳನ್ನು ಕಡಿಯಬೇಕಾಯಿತು. ಸಂಪರ್ಕ ಸಾಧನಗಳು ಹೆಚ್ಚಾದಂತೆಲ್ಲಾ ಪರ್ವತಾರಣ್ಯಗಳಲ್ಲಿ ವಾಸವಾಗಿದ್ದ ಬುಡಕಟ್ಟುಗಳ ಜನ ಅನಿವಾರ್ಯವಾಗಿ ಇತರ ಜನಗಳ ಸಂಪರ್ಕಕ್ಕೆ ಬರಬೇಕಾಯಿತು. ಈ ಮಧ್ಯೆ ಕ್ರಿಶ್ಚಿಯನ್ ಪಾದ್ರಿಗಳು ಬುಡಕಟ್ಟು ಜನರಿಗೆ ಕ್ರೈಸ್ತ ಧರ್ಮದ ಬೋಧನಯನ್ನು ಮಾಡುವುದರ ಮೂಲಕ ಅವರನ್ನು ತಮ್ಮ ಧರ್ಮಕ್ಕೆ ಪರಿವರ್ತಿಸಲು ಯತ್ನಿಸಿದರು. ಬುಡಕಟ್ಟುಗಳ ಕೆಲವು ಜನ ಕ್ರಿಶ್ಚಿಯನ್ನರಾಗಿ ಪರಿವರ್ತಿತರಾದುದು ಉಂಟು. ಆದರೆ ಭಾರತದ ಬುಡಕಟ್ಟುಗಳ ಮೇಲೆ ತೀವ್ರ ಪರಿಣಾಮ ಉಂಟಾಗಲು ಬ್ರಿಟಿಷರು ಈ ಬುಡಕಟ್ಟು ಜನರಿಗೆ ಸೇರಿದ ಪರ್ವತಾರಣ್ಯ ಪ್ರದೇಶಗಳನ್ನು ಇವರಿಂದ ಕಿತ್ತುಕೊಂಡಿದ್ದು ಕಾರಣವಾಯಿತು. ಇದರಿಂದಾಗಿ ಸ್ಥಳಾಂತರ ಬೇಸಾಯ ಮಾಡುತ್ತಿದ್ದ ಹಲವಾರು ಬುಡಕಟ್ಟುಗಳಿಗೆ ಭೂಮಿಯಿಲ್ಲದಂತಾಯಿತು, ಹೀಗಾಗಿ ಇವರು ಬಡವರಾದರು ಎನ್ನಬಹುದು.

ಬೀದರ ಜಿಲ್ಲೆಯ ಬೇಡ ಸಮುದಾಯದವರ ಆರ್ಥಿಕತೆಯ ಸಮಗ್ರ ಚಿತ್ರಣವನ್ನು ಇಲ್ಲಿಯವರೆಗೆ ಯಾವ ಅಧ್ಯಯನಗಳು ನಡೆದಿಲ್ಲ. ಇದೊಂದು 'ಸಂಶೋಧನೆ ಕೊರತೆ' (Research Gap). ಈ ಕೊರತೆಯನ್ನು ನೀಗಿಸಲು ಬೀದರ ಜಿಲ್ಲೆಯ ಬೇಡ ಸಮುದಾಯದ ಆರ್ಥಿಕ ವಿಶ್ಲೇಷಣೆಯನ್ನು ಮಾಡಲು ಪ್ರಮಾಣಿಕವಾಗಿ ಪ್ರಯತ್ನಿಸಲಾಗಿದೆ.

ಅಧ್ಯಯನದ ಮೂರು ಪ್ರಮುಖ ಉದ್ದೇಶಗಳು ಇಂತಿವೆ:

೧. ಬೀದರ ಜಿಲ್ಲೆಯ ಬೇಡ ಬುಡಕಟ್ಟಿನ ಆರ್ಥಿಕ ಪರಿಸ್ಥಿತಿಯನ್ನು ಅರ್ಥಶಾಸ್ತ್ರೀಯ ಹಿನ್ನೆಲೆಯಲ್ಲಿ ವಿಶ್ಲೇಷಣೆ ಮಾಡುವುದು.

೨. ಆರ್ಥಿಕ ಕುಂದುಕೊರತೆಗಳ ನಿರೂಪಣೆ.

೩. ಆರ್ಥಿಕವಾಗಿ ಈ ಸಮುದಾಯವನ್ನು ಮುಂದೆ ತರಲು ಯೋಗ್ಯ ಸಲಹೆಗಳನ್ನು ನೀಡುವುದು.

ಆರ್ಥಿಕ ಪರಿಸ್ಥಿತಿ ಅಧ್ಯಯನದ ಹಿನ್ನೆಲೆಯಾಗಿ ಇಲ್ಲಿ ಬೇಡ ಸಮುದಾಯದ ಸಾಮಾನ್ಯ ಲಕ್ಷಣಗಳ (General Features) ವಿವರಣೆಯನ್ನು ನೀಡಲಾಗಿದೆ. ಮೊದಲನೆಯ ಉದ್ದೇಶವನ್ನು ಸುದೀರ್ಘವಾಗಿ ನಿರೂಪಿಸಲು ಹಲವಾರು ಉಪ-ಉದ್ದೇಶಗಳಲ್ಲಿ (Sub-objectives or Goals) ವಿಂಗಡಿಸಲಾಗಿದೆ. ಇವುಗಳು ಈ ಕೆಳಗಿನಂತಿವೆ.

೧. ಬುಡಕಟ್ಟಿನ ಕೃಷಿ ಅರ್ಥವ್ಯವಸ್ಥೆ

೨. ಬುಡಕಟ್ಟಿನ ಉದ್ದಿಮೆ ಹಾಗೂ ಸೇವಾ ಕ್ಷೇತ್ರದಲ್ಲಿನ ಭಾಗವಹಿಸುವಿಕೆ.

೩. ಬುಡಕಟ್ಟಿನ ಉಪಕಸುಬುಗಳ ಆರ್ಥಿಕತೆ

೪. ಬುಡಕಟ್ಟಿನ ಆದಾಯದ ಬಗೆಗಿನ ವಿವರಣೆ

೫. ಬುಡಕಟ್ಟಿನ ಉಪಭೋಗ ಬಗೆಗಿನ ವಿವರಣೆ

೬. ಬುಡಕಟ್ಟಿನ ಉಳಿತಾಯ ಬಗೆಗಿನ ವಿವರಣೆ

೭. ಬುಡಕಟ್ಟಿನವರಿಗೆ ಸರಕಾರಿ ಯೋಜನೆಗಳಿಂದಾದ ಪ್ರಯೋಜನಗಳು

೮. ಸರಕಾರದಿಂದ ಇಟ್ಟುಕೊಂಡಿರುವ ಆಶೋತ್ತರಗಳು.

ಊಹೆಗಳು

೧. ವಿವಿಧ ಗಾತ್ರಗಳ ಭೂ-ಹಿಡುವಳಿಗಳನ್ನುಳ್ಳ ರೈತರಲ್ಲಿ, ದೊಡ್ಡ ಗಾತ್ರದ ಭೂ-ಹಿಡುವಳಿಗಳ ರೈತರನ್ನು ಹೊರತು ಪಡಿಸಿ, ಉಳಿದ ಭೂ-ಹಿಡುವಳಿಗಳ ರೈತರೆಲ್ಲರ ಆರ್ಥಿಕ ಪರಿಸ್ಥಿತಿ ಸರಿಯಾಗಿಲ್ಲ.

೨. ಅರ್ಥವ್ಯವಸ್ಥೆಯ ಔದ್ಯಮಿಕ ಮತ್ತು ತೃತೀಯ ರಂಗಗಳಲ್ಲಿ ಬೇಡ ಬುಡಕಟ್ಟಿನವರು ಭಾಗವಹಿಸುತ್ತಿಲ್ಲ.

೩. ಸರಕಾರದ ನೆರವಿನ ಯೋಜನೆಗಳಿಂದ ಬೇಡರಿಗೆ ಅಷ್ಟೊಂದು ಪ್ರಯೋಜನವಾಗಿಲ್ಲ.

ನಮ್ಮ ಅಧ್ಯಯನ ಬೀದರ ಜಲ್ಲೆಯ ಬೇಡ ಬುಡಕಟ್ಟಿಗೆ ಮಾತ್ರ ಸಿಮೀತಗೊಂಡಿದೆ ಇವರ ಆರ್ಥಿಕ ಪರಿಸ್ಥಿತಿ, ಸಮಸ್ಯೆಗಳು ಮತ್ತು ಪರಿಹಾರೋಪಾಯಗಳನ್ನು ಸವಿಸ್ತಾರವಾಗಿ ಅಧ್ಯಯನಿಸುವುದು ಈ ಅಧ್ಯಯನದ ವ್ಯಾಪ್ತಿಗೆ ಒಳಪಟ್ಟಿದೆ. ಬೇಡ ಸಮುದಾಯದ ಆರ್ಥಿಕ ಪರಿಸ್ಥಿತಿಯನ್ನು ವಿಶ್ಲೇಷಿಸಲು "ವಿಷಯ ಅಧ್ಯಯನ ವಿಧಾನ" (Case study method)ವನ್ನು ಅನುಸರಿಸಲಾಗಿದೆ. ಬೀದರ ಜಲ್ಲೆಯ ಬೇಡ ಸಮುದಾಯದ ಸಮಗ್ರ ಆರ್ಥಿಕ ಅಧ್ಯಯನಕ್ಕಾಗಿ ಸಮೀಕ್ಷಾ ಪದ್ಧತಿಯ ವಿಧಾನ (Survey method)ವನ್ನು ಅಳವಡಿಸಿಕೊಳ್ಳಲಾಗಿದೆ. ಇವರ ಆರ್ಥಿಕ ಸಂಶೋಧನೆಗೆ ಸಂಬಂಧಿಸಿದಂತೆ ಒಂದು ಸವಿಸ್ತಾರವಾದ ಪ್ರಶ್ನಾವಳಿಗಳನ್ನು ತಯಾರಿಸಿ ಜಲ್ಲಾದ್ಯಂತ ಸಮೀಕ್ಷೆ ಮಾಡಲಾಗಿದೆ.

ಕ್ಷೇತ್ರ ಕಾರ್ಯದಲ್ಲಿ ಮಾಹಿತಿ ಸಂಗ್ರಹಿಸಲಾಗಿದೆ. ಮಾಹಿತಿಯನ್ನು ಸಂಗ್ರಹಿಸುವಲ್ಲಿ 'ಸಹಭಾಗಿ' ಮತ್ತು ಅವಲೋಕನ ವಿಧಾನವನ್ನು ಬಳಸಲಾಗಿದೆ. ಸಂದರ್ಭೋಚಿತ ಧ್ವನಿ ಮುದ್ರಣ ಮತ್ತು ಛಾಯಾ ಚಿತ್ರಗಳನ್ನು ಸೆರೆ ಹಿಡಿಯಲಾಗಿದೆ. ಸಂಶೋಧನೆಯ ಪ್ರಾರಂಭದ ೬ ತಿಂಗಳು ಸಾಹಿತ್ಯದ ಪರಿವೀಕ್ಷಣೆಗೆ ಹಿಡಿದರೆ, ನಂತರದ ಮೂರು ತಿಂಗಳು ಪರೀಕ್ಷಾರ್ಥವಾಗಿ ಪ್ರಶ್ನಾವಳಿಯ ತಯಾರಿಕೆಗೆ ತಗುಲಿದೆ ೩ ತಿಂಗಳ ಕಾಲವನ್ನು ಕ್ಷೇತ್ರ ಕಾರ್ಯದಲ್ಲಿ ತೊಡಗಿಸಲಾಗಿದೆ.

ಕ್ಷೇತ್ರದಲ್ಲಿ ಸಂಗ್ರಹಿಸಿದ ಅಂಕಿ-ಸಂಖ್ಯೆಗಳನ್ನು ವರ್ಗೀಕರಣ ಮಾಡಿ ಅನೇಕ ಕೋಷ್ಟಕಗಳನ್ನು ಗಣಕ ಯಂತ್ರದ ನೆರವಿನಿಂದ ತಯಾರಿಸಲಾಗಿದೆ. ಸರಳ ಸಂಖ್ಯಾಶಾಸ್ತ್ರದ ವಿಧಾನಗಳಾದ ಶೇಕಡಾವಾರು (Percentage) ಇತ್ಯಾದಿಗಳಿಂದ ಮಾಹಿತಿಯನ್ನು ಸಂಸ್ಕರಣ ಮಾಡಲಾಗಿದೆ. ಅವಶ್ಯಕತೆಗೆ ತಕ್ಕಂತೆ ರೇಖಾಚಿತ್ರಗಳನ್ನು (Diagrams) ರಚಿಸಿಕೊಳ್ಳಲಾಗಿದೆ ಮತ್ತು ನಕಾಶೆಗಳನ್ನು ಉಪಯೋಗಿಸಲಾಗಿದೆ.

ಹಲವಾರು ಲೇಖನ, ಗ್ರಂಥ ಮತ್ತು ಮಹಾಪ್ರಬಂಧಗಳಿಂದ ಅಂಕಿ-ಸಂಖ್ಯೆಗಳನ್ನು ಆರಿಸಿಕೊಂಡು ಉಪಯೋಗ ಮಾಡಿದ್ದಲ್ಲದೆ, ಪ್ರಾಥಮಿಕ ಅಂಕಿ-ಸಂಖ್ಯೆಗಳನ್ನು (Primary Data) ವಿಫುಲವಾಗಿ ಉಪಯೋಗಿಸಿಕೊಳ್ಳಲಾಗಿದೆ. ಈ ಮಹಾಪ್ರಬಂಧದ ಪ್ರಮುಖ ಅಂಕಿ-ಸಂಖ್ಯೆಗಳ ಮೂಲ, ಪ್ರಾಥಮಿಕ ಮೂಲವಾಗಿದೆ. ಇಂಗ್ಲೀಷ್‌ನಲ್ಲಿ ಒಂದು ಗಾದೆ ಇದೆ i.e., 'seeing is believing' ಅಂದರೆ 'ನೋಡಿದಾಗ ಮಾತ್ರ ನಂಬುವದು ಸಾಧ್ಯ'. ಸ್ವತಃ ಅವರ ಕೃಷಿ ಕಸುಬನ್ನು ಮತ್ತು ಇನ್ನಿತರ ಉಪ-ಕಸುಬನ್ನು ಸಹಭಾಗಿತ್ವ ವಿಧಾನದಿಂದ ಅರಿಯಲಾಗಿದೆ.

ಬೀದರ ಜಿಲ್ಲೆಯು ೧೭° ೩೫' ಹಾಗೂ ೧೮°೨೫' ಉತ್ತರ ಅಕ್ಷಾಂಶ ಮತ್ತು ೭೬° ೪೨' ಹಾಗೂ ೭೭° ೩೯' ಪೂರ್ವ ರೇಖಾಂಶಗಳ ನಡುವೆ ಗುರುತಿಸಲಾಗುತ್ತದೆ. ಈ ಜಿಲ್ಲೆಯ ಉದ್ದ ಪೂರ್ವದಿಂದ ಪಶ್ಚಿಮದ ಕಡೆ ೯೩.೪ ಕಿಲೋಮೀಟರ ಇದ್ದರೆ, ಈಶಾನ್ಯದಿಂದ ನೈಋತ್ಯದ ಕಡೆಗೆ ೧೧೫.೨ ಕಿಲೋಮೀಟರ ಉದ್ದವಿದೆ. ಈ ಜಿಲ್ಲೆಯು ಕರ್ನಾಟಕದ ಒಂದು ತುದಿಯಲ್ಲಿದ್ದು ಪೂರ್ವಕ್ಕೆ ಈ ಹೈದ್ರಾಬಾದ ಕರ್ನಾಟಕ ಪ್ರದೇಶವನ್ನು ರಾಜ್ಯದ ಇತರ ಪ್ರದೇಶಗಳಿಗೆ ಹೋಲಿಸಿದಾಗ, ಶೈಕ್ಷಣಿಕವಾಗಿ ಮತ್ತು ಆರ್ಥಿಕವಾಗಿ ಬಹಳಷ್ಟು ಹಿಂದುಳಿದಿರುತ್ತದೆ. ಪ್ರಾದೇಶಿಕ ಅಭಿವೃದ್ಧಿಯಲ್ಲಿನ ಅಸಮಾನತೆಯನ್ನು ತೊಡೆದುಹಾಕಲು ರಾಜ್ಯ ಸರಕಾರ ೨೦೦೧ರಲ್ಲಿ ಡಾ. ನಂಜುಂಡಪ್ಪನವರ ನೇತೃತ್ವದಲ್ಲಿ ಒಂದು ಸಮಿತಿಯನ್ನು ಸ್ಥಾಪಿಸಿದೆ. ಆಂಧ್ರಪ್ರದೇಶದ ನಿಜಾಮಬಾದ ಮತ್ತು ಮೇಧಕ ಜಿಲ್ಲೆಗಳನ್ನು ಹೊಂದಿಕೊಂಡಿದೆ. ಉತ್ತರ ಮತ್ತು ಪಶ್ಚಿಮ ಭಾಗಗಳಲ್ಲಿ ಮಹಾರಾಷ್ಟ್ರದ ನಾಂದೇಡ ಮತ್ತು ಉಸ್ಮಾನಾಬಾದ ಜಿಲ್ಲೆಗಳಿವೆ. ದಕ್ಷಿಣಕ್ಕೆ ಕರ್ನಾಟಕದ ಗುಲಬರ್ಗಾ ಜಿಲ್ಲೆಯ ಆಳಂದ, ಗುಲಬರ್ಗಾ ಮತ್ತು ಚಿಂಚೋಳಿ ತಾಲುಕುಗಳಿವೆ. ಇದು ಕರ್ನಾಟಕ ಉತ್ತರ ದಿಕ್ಕಿನ ಕೊನೆಯ ಜಿಲ್ಲೆ. ಬೀದರ ಜಿಲ್ಲೆಯು ಹೈದ್ರಾಬಾದ ಕರ್ನಾಟಕ ಪ್ರದೇಶ (Hyderabad Karṇataka Region)ದ ಐದು ಜಿಲ್ಲೆಗಳಲ್ಲಿ ಒಂದಾಗಿರುತ್ತದೆ. ಈ ಪ್ರದೇಶದ ಇತರ ಜಿಲ್ಲೆಗಳು ಗುಲಬರ್ಗಾ, ರಾಯಚೂರು, ಬಳ್ಳಾರಿ ಮತ್ತು ಕೊಪ್ಪಳಗಳಾಗಿವೆ. ಇದೊಂದು ಆರ್ಥಿಕವಾಗಿ ಹಿಂದುಳಿದ ಪ್ರದೇಶ, ಮೇಲಾಗಿ ಈ ಪ್ರದೇಶದ ಇತರ ಜಿಲ್ಲೆಗಳ, ಪ್ರಗತಿಯನ್ನು ನೋಡಿದಾಗ, ಬೀದರ ಜಿಲ್ಲೆ ತುಲನಾತ್ಮಕವಾಗಿ ಅಭಿವೃದ್ಧಿಯಲ್ಲಿ ಕೊನೆಯ ಜಿಲ್ಲೆಯಾಗಿದೆ.

ಬೀದರ ಜಿಲ್ಲೆಯು ವರ್ಷಂಪ್ರತಿ ಒಣ ಹವೆಯನ್ನು ಹೊಂದಿರುತ್ತದೆ. ಜಿಲ್ಲೆಯಲ್ಲಿ ಬೇಸಿಗೆಯು ಪೆಬ್ರುವರಿ ಮಧ್ಯದಿಂದ ಪ್ರಾರಂಭವಾಗಿ ಜೂನ್ ತಿಂಗಳ ಮೊದಲನೆಯ ವಾರದವರೆಗೆ ಮುಂದುವರೆಯುತ್ತದೆ. ಇದಾದ ಮೇಲೆ ನೈಋತ್ಯ ಮಳೆಗಾಳಿ ಪ್ರಾರಂಭವಾಗಿ ಸೆಪ್ಟೆಂಬರ್ ತಿಂಗಳ ಕೊನೆಯವರೆಗೆ ಮಳೆ ಬರುತ್ತಿರುತ್ತದೆ. ಚಳಿಗಾಲ ಡಿಸೆಂಬರ್ ತಿಂಗಳಿನಿಂದ ಪ್ರಾರಂಭವಾಗಿ ಪೆಬ್ರುವರಿ ತಿಂಗಳ ಮಧ್ಯಕ್ಕೆ ಮುಗಿಯುತ್ತದೆ.

ಬೀದರ ಜಿಲ್ಲೆಯು ಪ್ರಮುಖವಾಗಿ ಕೃಷಿ ಜಿಲ್ಲೆ. ಇಲ್ಲಿ ಬಹುಸಂಖ್ಯಾತರು ಕೃಷಿಯನ್ನೇ ಅವಲಂಬಿಸಿರುತ್ತಾರೆ. ಜಿಲ್ಲೆಯ ಔದ್ಯಮಿಕ ಪ್ರಗತಿ ಹೇಳಿಕೊಳ್ಳುವಂತಹದೇನಿಲ್ಲ. ಆದುದರಿಂದ ಜಿಲ್ಲೆಯ ಕೃಷಿಯ ಬಗ್ಗೆ ವಿಸ್ತಾರವಾಗಿ ಹೇಳುವುದು ಸಾಂಪ್ರದಾಯಿಕವಾಗಿದ್ದು, ರೈತರು ಹಳೆಯ ಕೃಷಿಯ ಉಪಕರಣಗಳನ್ನು ಉಪಯೋಗಿಸುತ್ತಾರೆ.

ಜಿಲ್ಲೆಯ ನೀರಾವರಿ ಪ್ರಮಾಣ ಕೇವಲ ೯.೮೦ ಇರುತ್ತದೆ. ಜಿಲ್ಲೆಯ ಭೂ ಹಿಡುವಳಿಗಳು ೧೯೯೦-೯೧ರ ಗಣತಿಯ ಪ್ರಕಾರ ಹೆಚ್ಚಾಗಿ ಸಣ್ಣ ಮತ್ತು ಅತಿಸಣ್ಣ ಪ್ರಮಾಣದಾಗಿರುತ್ತವೆ. ಜಿಲ್ಲೆಯು ಕೃಷಿಯಲ್ಲಿ ಹಿಂದುಳಿದಿರಲು ಇದೊಂದು ಪ್ರಬಲವಾದ ಕಾರಣವಾಗಿರುತ್ತದೆ. ಭತ್ತ, ಜೋಳ, ಸಜ್ಜೆ, ಗೋದಿ, ಕಡಲೆ, ತೊಗರಿ, ಹೆಸರು, ಉದ್ದು, ನೆಲಗಡಲೆ, ಬೆಳೆಗಳು. ಜೋಳ ಜಿಲ್ಲೆಯ ಮುಖ್ಯ ಆಹಾರ ಬೆಳೆಯಾಗಿದೆ. ಇತ್ತೀಚಿನ ವರ್ಷಗಳಲ್ಲಿ ತರಕಾರಿ ಬೆಳೆಗಳಾದ ಇರುಳ್ಳಿ, ಬೆಳ್ಳುಳಿ, ಗಜ್ಜರಿ, ಮೆಣಸಿನಕಾಯಿ, ಮುಳ್ಳ (ಜವಾರಿ)ಬದನೆಕಾಯಿ, ಸರಕಾರಿ ಬದನೆಕಾಯಿ, ಬೆಂಡಿಕಾಯಿ, ಮೂಲಂಗಿ, ಆಲೂಗಡ್ಡೆ, ಟಮಾಟೊ, ತರಕಾರಿ, ಸೊಪ್ಪು ಇತ್ಯಾದಿಗಳನ್ನು ಜಿಲ್ಲೆಯಲ್ಲಿ ತುಂಬಾ ಬೆಳೆಯಲಾಗುತ್ತದೆ.

ಜಿಲ್ಲೆಯ ಮುಖ್ಯ ಜಾನುವಾರುಗಳು, ದನ-ಕರುಗಳು, ಎಮ್ಮೆಗಳು, ಕುರಿ, ಆಡು(ಮೇಕೆ)ಗಳು, ಕೋಳಿಗಳು, ಹಂದಿಗಳು ಮತ್ತು ನಾಯಿಗಳು ಇವೆ. ಜಿಲ್ಲೆಯಲ್ಲಿ ಹೆಚ್ಚಾಗಿ ಕಂಡುಬರುವ ಮತ್ತು ಜನಪ್ರೀಯವಾಗಿರುವ ದನಗಳ ತಳಿಯೇ 'ದೇವಣಿ' ತಳಿ. ಈ ತಳಿಯ ಎತ್ತುಗಳು ಹೆಚ್ಚಾಗಿ ಔರಾದ ತಾಲೂಕಿನಲ್ಲಿವೆ. ದೇವಣಿ ತಳಿಯ ಹಸುಗಳು ನೀಡುವ ಹಾಲಿನ ಪ್ರಮಾಣ ಇತರ ತಳಿಗಳಿಗಿಂತ ಅಧಿಕವಾಗಿರುತ್ತದೆ. ಕೋಳಿಗಳಲ್ಲಿ ದೇಶಿಯ ತಳಿಯ ಕೋಳಿಗಳೇ ಹೆಚ್ಚಾಗಿವೆ ಮತ್ತು ಉತ್ತಮ ತಳಿಯ ಕೋಳಿಗಳು ಹುಮನಾಬಾದ ಕೈಗಾರಿಕಾ ಕ್ಷೇತ್ರದಲ್ಲಿ ಮಾತ್ರ ಕಂಡುಬರುತ್ತವೆ. ಒಟ್ಟಿನಲ್ಲಿ ಸ್ಥಳೀಯ ದನಕರುಗಳು ಮತ್ತು ಇನ್ನಿತರ ಪ್ರಾಣಿಗಳು ಹೆಚ್ಚಾಗಿವೆ ಹೊರತು ಮಿಶ್ರ ತಳಿಯ ದನಕರುಗಳು ಮತ್ತು ಪ್ರಾಣಿಗಳು ಅಲ್ಲ.

ಜಿಲ್ಲೆಯಲ್ಲಿ ಪಶು ವೈದ್ಯ ಸೇವಾ ಸಂಸ್ಥೆಗಳು ಅಸ್ತಿತ್ವದಲ್ಲಿವೆ. ಜಿಲ್ಲೆಯ ಪಶು ಸಂಪತ್ತಿಗೆ ಹೋಲಿಸಿದಾಗ ಪಶು ವೈದ್ಯ ಸೇವಾ ಕೇಂದ್ರಗಳು ಕಡಿಮೆ ಪ್ರಮಾಣದಲ್ಲಿವೆ ಎಂದು ಹೇಳಬಹುದು. ಇತ್ತೀಚಿನ ವರ್ಷಗಳಲ್ಲಿ ಹೈನುಗಾರಿಕೆ ಅಭಿವೃದ್ಧಿಯಾಗುತ್ತಿದೆ. ಹಾಲಿನ ಉತ್ಪಾದಕ ಸಹಕಾರ ಸಂಘಗಳು ಅಷ್ಟೊಂದು ತೃಪ್ತಿಕರವಾಗಿ ಕಾರ್ಯವನ್ನು ಮಾಡುತ್ತಿಲ್ಲ.

೧೯೮೦ರಲ್ಲಿ ಬೀದರ ಜಿಲ್ಲೆಯು ಕೈಗಾರಿಕೆರಹಿತ (zero Industry) ಕ್ಷೇತ್ರವಾಗಿತ್ತು. ಆದುದರಿಂದಲೇ ಕೇಂದ್ರ ಸರಕಾರ ೧೯೮೨ರಲ್ಲಿ ಜಿಲ್ಲೆಯನ್ನು ಕೈಗಾರಿಕಾರಹಿತ ಜಿಲ್ಲೆಯೆಂದು ಘೋಷಿಸಿತ್ತು. ಇದರಿಂದಾಗಿ ಸರಕಾರವು ಜಿಲ್ಲೆಯಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸುವವರಿಗೆ ವಿಶೇಷ ಧನ ಸಹಾಯ ನೀಡಲು ತೊಡಗಿತ್ತು. ತತ್ಪರಿಣಾಮವಾಗಿ ಜಿಲ್ಲೆಯಲ್ಲಿ ೧೯೮೦ ಹಾಗೂ ೯೦ರ ದಶಕಗಳಲ್ಲಿ ಹಲವಾರು ಕೈಗಾರಿಕೆಗಳು ಸ್ಥಾಪಿಸಲ್ಪಟ್ಟವು. ಇಷ್ಟಾದರೂ, ಇಂದಿಗೂ ಉದ್ದಿಮೆಯ ಕ್ಷೇತ್ರದಲ್ಲಿ ಇತರ ಜಿಲ್ಲೆಗಳಿಗಿಂತ ಹಿಂದುಳಿದೆ.

ಬೀದರ ಜಿಲ್ಲೆಯು ಒಂದು ಆರ್ಥಿಕವಾಗಿ ಹಿಂದುಳಿದ ಜಿಲ್ಲೆ. ಇದರಿಂದಾಗಿ ಈ ಜಿಲ್ಲೆಯಲ್ಲಿ ಬ್ಯಾಂಕುಗಳು ಮತ್ತಿತರ ಹಣದ ನೆರವು ನೀಡುವ ಸಂಸ್ಥೆಗಳು ಸಾಕಷ್ಟು ಪ್ರಮಾಣದಲ್ಲಿರುವುದಿಲ್ಲ. ರೈತಾಪಿ ಜನರಿಗೆ ನೆರವು ನೀಡುವಲ್ಲಿ ಸಹಕಾರಿ ಬ್ಯಾಂಕುಗಳ ಕಾರ್ಯ ಅಷ್ಟೊಂದು ಸಮರ್ಪಕವಾಗಿರುವುದಿಲ್ಲ. ಜಿಲ್ಲೆಯಲ್ಲಿ ಮುಂದುವರಿದ ಜಾತಿಗಳ ಜನರು ಬೆಳೆ ಸಾಲಗಳನ್ನು ಪಡೆಯುವಲ್ಲಿ ಪರದಾಡುತ್ತಿರುವಾಗ, ಆರ್ಥಿಕವಾಗಿ ಅತ್ಯಂತ ಹಿಂದುಳಿದ ಬೇಡ ಸಮುದಾಯದ ರೈತರ ಸ್ಥಿತಿ ಶೋಚನೀಯವಾಗಿರುವದು ಸಹಜ. ಆದರೂ, ಜಿಲ್ಲೆಯಲ್ಲಿ ೫೭ ವಾಣಿಜ್ಯ ಬ್ಯಾಂಕುಗಳು ಮತ್ತು ೩೫ ಗ್ರಾಮೀಣ ಬ್ಯಾಂಕುಗಳು ಕಾರ್ಯ ನಿರ್ವಹಿಸುತ್ತಿವೆ.

ಅಕ್ಷರ ಜ್ಞಾನ ಹೊಂದಿರುವ ವಿಷಯದಲ್ಲಿ ಬೀದರ ಜಿಲ್ಲೆ ಇಡೀ ರಾಜ್ಯದಲ್ಲಿಯೇ ಅತ್ಯಂತ ಹಿಂದುಳಿದ ಜಿಲ್ಲೆಯಾಗಿರುತ್ತದೆ. ೧೯೯೧ರ ಜನಗಣತಿಯ ಪ್ರಕಾರ ಜಿಲ್ಲೆಯಲ್ಲಿ ಶೇಕಡಾ ೩೬.೪೪ ಜನಸಂಖ್ಯೆ ಅಕ್ಷರ ಜ್ಞಾನವುಳ್ಳವರಾಗಿದ್ದರು; ಶೇಕಡಾ ೪೭.೬೦ ಪುರುಷರು ಮತ್ತು ೨೪.೭೬ ಸ್ತ್ರೀಯರು ಅಕ್ಷರ ಜ್ಞಾನ ಹೊಂದಿದ್ದರು. ಇತ್ತೀಚಿನ ವರ್ಷಗಳಲ್ಲಿ ಪ್ರಾಥಮಿಕ ಶಾಲೆ ಮತ್ತು ಪ್ರೌಢ ಶಾಲೆಗಳ ಸಂಖ್ಯೆ ಮತ್ತು ಇವುಗಳಲ್ಲಿ ಅಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚುತ್ತಿದೆ. ಇಷ್ಟಾದರೂ, ಹೈದ್ರಾಬಾದ ಕರ್ನಾಟಕದ ಇತರ ಜಿಲ್ಲೆಗಳಿಗೆ ಹೋಲಿಸಿದಾಗ ಬೀದರ ಜಿಲ್ಲೆಯ ಪ್ರಾಥಮಿಕ ಶಾಲೆ ಮತ್ತು ಪ್ರೌಢ ಶಾಲೆಗಳ ಸಂಖ್ಯೆ ಕಡಿಮೆ ಪ್ರಮಾಣದಲ್ಲಿದೆ. ಜಿಲ್ಲೆಯ ಶಿಕ್ಷಣದ ಗುಣಮಟ್ಟವು ಸಹ ಕಡಿಮೆಯದಾಗಿದೆ.

ಸಾರಿಗೆ ಸಂಪರ್ಕ ವ್ಯವಸ್ಥೆಯನ್ನು ಹೊಂದುವುದರಲ್ಲಿ, ರಾಜ್ಯದ ಒಂದು ಅತಿ ಹಿಂದುಳಿದ ಜಿಲ್ಲೆಯೇ ಬೀದರ. ಉತ್ತಮವಾದ ರಸ್ತೆಗಳನ್ನು ಈ ಜಿಲ್ಲೆ ಅಷ್ಟಾಗಿ ಹೊಂದಿರುವುದಿಲ್ಲ. ಒಂದೇ ಒಂದು ಉತ್ತಮವಾದ ರಸ್ತೆಯೆಂದರೆ ರಾಷ್ಟ್ರೀಯ ಹೆದ್ದಾರಿ ೯ ಮತ್ತು ಅದರ ಉದ್ದ ೭೫ ಕಿಲೋಮೀಟರಗಳು. ಜಿಲ್ಲಾ ಪರಿಷತ್ತು ಆಡಳಿತ ವ್ಯವಸ್ಥೆ ಜಾರಿಗೆ ಬಂದ ಮೇಲೆ, ಜಿಲ್ಲೆಯ ವಿವಿಧ ತಾಲೂಕುಗಳನ್ನು ಸಂಪರ್ಕಿಸುವ ಪ್ರಮುಖ ರಸ್ತೆಗಳು ನಿರ್ಮಾಣವಾಗಿವೆ ಮತ್ತು ಅನೇಕ ಸೇತುವೆಗಳನ್ನು ನಿರ್ಮಿಸಿ ಸಾರಿಗೆ ವ್ಯವಸ್ಥೆಯನ್ನು ತಕ್ಕಮಟ್ಟಿಗೆ ಸುಗಮಗೊಳಿಸಲಾಗಿದೆ. ಇತ್ತೀಚೆಗೆ ಅಸ್ತಿತ್ವದಲ್ಲಿ ಬಂದ ಕರ್ನಾಟಕ ಸರಕಾರದ 'ಹೈದ್ರಾಬಾದ ಕರ್ನಾಟಕ ಅಭಿವೃದ್ಧಿ ಮಂಡಳಿ' ಸಹ ರಸ್ತೆ ನಿರ್ಮಾಣ ಕಾರ್ಯ ಕೈಕೊಂಡಿದೆ.

ರಾಜ್ಯ ಸರಕಾರ ಜಿಲ್ಲೆಯಲ್ಲಿ ಐದು ಸರಕಾರಿ ಆಸ್ಪತ್ರೆಗಳು ೩೦ ಪ್ರಾಥಮಿಕ ಆರೋಗ್ಯ ಘಟಕಗಳು, ಮುಂತಾದವುಗಳ ಉಸ್ತುವಾರಿಯನ್ನು ನೋಡಿಕೊಳ್ಳುತ್ತಿದೆ. ಈ ಎಲ್ಲ ತರಹದ ಆಸ್ಪತ್ರೆಗಳು ಮತ್ತು ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿದ್ದರೂ ಆರೋಗ್ಯ ಇಲಾಖೆ ಜನರಿಗೆ ಆರೋಗ್ಯಕ್ಕೆ ಸಂಬಂಧಿಸಿದ ಸೇವೆಗಳನ್ನು (Health

Service) ಕೊಡುವಲ್ಲಿ ಯಶಸ್ವಿಯಾಗಿಲ್ಲ. ಬೇಡ ಸಮುದಾಯದ ಸುಮಾರು ಜನರಿಗೆ ಸರಕಾರದ ಆರೋಗ್ಯದ ಸವಲತ್ತುಗಳು (Health facilities) ಸುಮಾರು ಶೇಕಡಾ ೮೦ರಷ್ಟು ಜನರಿಗೆ ಸಿಗುತ್ತಿಲ್ಲ.

ಒಟ್ಟಿನಲ್ಲಿ ಆರ್ಥಿಕವಾಗಿ ಹಿಂದುಳಿದ ಜಿಲ್ಲೆಯಾದ ಬೀದರ ಜಿಲ್ಲೆ ಜನ ಸಮುದಾಯಕ್ಕೆ ನೆರವಾಗುವಲ್ಲಿ ತುಲನಾತ್ಮಕವಾಗಿ ಹಿಂದುಳಿದಿದೆ ವಿಷಯ ಹೀಗಿರುವಾಗ, ಬೇಡ ಸಮುದಾಯವನ್ನು ಸರಕಾರ ಮತ್ತು ಖಾಸಗಿ ಸಂಘ ಸಂಸ್ಥೆಗಳು ನಿರ್ಲಕ್ಷಿಸಿವೆ ಎಂದರೆ ಅತಿಶಯೋಕ್ತಿ ಏನಲ್ಲ.

ಕರ್ನಾಟಕದ ಹಲವಾರು ಬುಡಕಟ್ಟಿನ ಜನರಲ್ಲಿ 'ಬೇಡರು' ಪ್ರಮುಖರಾಗಿರುತ್ತಾರೆ. ಇವರು ರಾಜ್ಯದ ಎಲ್ಲ ಜಿಲ್ಲೆಗಳಲ್ಲಿಯೂ ವಾಸವಾಗಿದ್ದರೂ, ಗುಲಬರ್ಗಾ, ಧಾರವಾಡ, ಬಳ್ಳಾರಿ, ವಿಜಾಪೂರ, ಬೆಳಗಾಂವ, ಕೋಲಾರ, ರಾಯಚೂರು ಮತ್ತು ಬೀದರದಲ್ಲಿ ವಾಸವಾಗಿದ್ದಾರೆ. ರಾಜ್ಯದಲ್ಲಿ ಅಲ್ಲದೆ, ಇತರ ರಾಜ್ಯಗಳಾದ ಆಂಧ್ರಪ್ರದೇಶ, ಮಹಾರಾಷ್ಟ್ರ, ರಾಜಸ್ತಾನ, ಗುಜರಾತ, ತಮಿಳುನಾಡು ಇತ್ಯಾದಿ ರಾಜ್ಯಗಳಲ್ಲಿ ಬೇಡರು ವಾಸವಾಗಿದ್ದಾರೆಂಬುದನ್ನು ತಿಳಿದುಬಂದಿದೆ. ಕರ್ನಾಟಕ ರಾಜ್ಯದಲ್ಲಿ ಇವರ ಜನಸಂಖ್ಯೆ ಸುಮಾರು ೬೦ ಲಕ್ಷ ಇರುತ್ತದೆ. ಬೀದರ ಜಿಲ್ಲೆಯಲ್ಲಿ ೧೯ ಬುಡಕಟ್ಟಿನ ಸಮುದಾಯದವರು ವಾಸ ಮಾಡುತ್ತಿದ್ದಾರೆ. ಗೊಂಡರು, ಕೋಯ (ಭಿನೆಕೋಯ, ರಾಜಕೋಯ ಸೇರಿ) ಕೋಳಿಢೋರ, ಕಾಡುಕುರುಬ, ಬಾರ್ಧಾ, ಮೇದ, ಕೊರಗ, ಪಾರ್ಧಿ (ಅಡವಿ ಚಿಂಚೇರ, ಫಾನ್ಸೆ ಪಾರ್ಧಿ ಸೇರಿ) ಯರವ, ಗೌಡಲು, ಜೇನುಕುರುಬ, ಇರುಳಿಗ, ಚೆಂಚು-ಚೆಂಚವಾರ, ನಾಯಕ್ಡ-ನಾಯಕ, ಪಳ್ಳಿಯಾನ್, ಕಥೋಡಿ, ಬಾವತ-ಬಾಮ್ಯೆ, ಚೋಧರಾ ಮತ್ತು ಕುರುಮನ್ಸ್ ಬುಡಕಟ್ಟುಗಳು ವಾಸಿಸುತ್ತವೆ.

'ಬೇಡ' ಎನ್ನುವ ಶಬ್ದ "ವ್ಯಾಧ" ಎನ್ನುವ ಸಂಸ್ಕೃತ ಶಬ್ದದಿಂದ ಬಂದಿರುವುದೆಂದು ಮತ್ತು ಇದರರ್ಥ 'ಬೇಟೆ'ಯಾಡುವುದೆಂದು ಯಜುರ್ವೇದ ಹೇಳಲಾಗಿದೆ. ಸಾಮಾನ್ಯವಾಗಿ ಎಲ್ಲ ಬುಡಕಟ್ಟುಗಳಲ್ಲಿಯೂ ಪ್ರಪಂಚದ ಹುಟ್ಟನ್ನೂ ಕುರಿತು ಸ್ವಾರಸ್ಯಕರ ಕಥೆಗಳಿದ್ದು, ಆ ಪ್ರಪಂಚದ ಹುಟ್ಟಿನ ಆರಂಭಕ್ಕೆ ತಮ್ಮ ಬುಡಕಟ್ಟಿನ ಮೂಲ ಪುರುಷನೇ ಇದ್ದ ಎಂದು ಹೇಳಿಕೊಳ್ಳುತ್ತವೆ. ಅಂತೆಯೇ ಮ್ಯಾಸಬೇಡ ಬುಡಕಟ್ಟಿನ ಮೂಲಪುರುಷನ ಹುಟ್ಟು ಬ್ರಹ್ಮ, ವಿಷ್ಣು, ಮಹೇಶ್ವರರಿಂದಲೇ ಆಯಿತು ಎನ್ನುತ್ತಾರೆ.

ಬೇಡ ನಾಯಕರು ಶೂರರಲ್ಲದೆ, ಸಮಾಜ ಸುಧಾರಕರು, ಸಂಗೀತಗಾರರು ಮತ್ತು ಹಾಡುಗಾರರು ಹೌದು. ಶ್ರೀ. ಪೆರಿಯರ್. E.V. ರಾಮಸ್ವಾಮಿ (Periar E.V. Ramaswami) ತಮಿಳುನಾಡಿನಲ್ಲಿ ಹಿಂದು ಧರ್ಮದ ಕೆಟ್ಟ ಸಂಪ್ರದಾಯಗಳ ವಿರುದ್ಧ ಸಿಡಿದೆದ್ದು ದ್ರಾವಿಡ ಮುನೇತ್ರ ಕಜಗಮ (Dravida munnetra Kazhagam) ಎಂಬ ಪಾರ್ಟಿಯೊಂದನ್ನು ಸಮಾಜದ ಕೆಳವರ್ಗದವರಿಗಾಗಿ ರಚಿಸಿ ಅವರನ್ನು ಮೇಲೆ ಎತ್ತುವಲ್ಲಿ ಸಫಲತೆಯನ್ನು ಕಂಡಿದ್ದಾರೆ. ಇವರು ಕೂಡ ನಾಯಕ ಸಮುದಾಯದವರಾಗಿದ್ದರು ಎನ್ನುವುದು

ಗಮನಾರ್ಹ ಅಂಶವಾಗಿದೆ. ತಮ್ಮದೇ ಆದ ಭವ್ಯ ಇತಿಹಾಸವನ್ನು ಹೊಂದಿರುವ ಬೇಡರು, ಸ್ವಾತಂತ್ರ್ಯ ಬಂದ ನಂತರ ಆದಿವಾಸಿಗಳಿಂದ ಡಿ-ನೋಟಿಫೈಡ (Denotified), ಬುಡಕಟ್ಟಿನವರಾದರು. ಈ ಪರಿವರ್ತನೆ ಬಾಂಬೆ ಸ್ಟೇಟ್‌ದಲ್ಲಿ (Bombay State) ಆಯಿತು. ೧೯೫೬ ರಲ್ಲಿ ರಾಜ್ಯ ಪುನರ್ ರಚನಾ ಮಂಡಳಿ (States, Reorganization Commission)ಯ ಪ್ರಕಾರ, ಭಾಷಾವಾರು ರಾಜ್ಯಗಳು ಉಗಮವಾದವು. ಮೈಸೂರು ರಾಜ್ಯವು ಹುಟ್ಟಿತ್ತು. ಆ ನಂತರ ಮೈಸೂರು ರಾಜ್ಯ ೧೯೭೩ರಲ್ಲಿ 'ಕರ್ನಾಟಕ ರಾಜ್ಯ' ಆಯಿತು. ಕರ್ನಾಟಕದ ಬೇಡ ಬುಡಕಟ್ಟಿನ ಜನರು ೧೯೯೧ ರ ವರೆಗೆ 'ಎ'(A) ಗುಂಪಿಗೆ ಸೇರಿದವರಾಗಿದರು. ನಂತರ ಇವರನ್ನು ಪರಿಶಿಷ್ಟ ಪಂಗಡದಲ್ಲಿ ಸೇರಿಸಲಾಯಿತು.

ಬೇಡರ ಜಾನಪದ ಸಾಹಿತ್ಯ ಪ್ರಚಲಿತವಿರುವುದು ಕನ್ನಡದಲ್ಲಿಯೇ ಇವರು ಆಡುವ ಭಾಷೆಯಲ್ಲಿ ವೈವಿಧ್ಯತೆಗಾಗಿ ಹಟ್ಟಿಯ ಜನರು ಬಳಸಬಹುದಾದ ಗಾದೆ, ಒಗ್ಗಟ್ಟುಗಳು ಈ ಜನರಿಗೆ ಪ್ರತ್ಯೇಕವಾಗಿಯೇನು ಇರುವುದಿಲ್ಲ. ಆದರೆ, ಅಪರೂಪಕೆಂಬಂತೆ ನಾಲ್ಕರು ಗಾದೆಗಳು ಬೇಡ ನಾಯಕರನ್ನು ಕುರಿತು ಪ್ರಯೋಗದಲ್ಲಿವೆ.

ಜಿಲ್ಲೆಯ ಬಸವಕಲ್ಯಾಣ ತಾಲ್ಲೂಕಿನಲ್ಲಿ ಹೆಚ್ಚಾಗಿ ಕೇಂದ್ರಿಕೃತವಾಗಿದೆ ಇದಲ್ಲದೆ, ಹುಮನಾಬಾದ ಮತ್ತು ಭಾಲ್ಕಿ ತಾಲೂಕುಗಳಲ್ಲಿ ಬೇಡ ಜನ ಸ್ವಲ್ಪ ಮಟ್ಟಿಗೆ ಇದ್ದಾರೆ. ಬೀದರಿನ ಬೇಡರಲ್ಲಿ ಸರಾಸರಿ ಲಿಂಗ ಪ್ರಮಾಣ ೯೧೦ ಇರುವುದು. ಅಂದರೆ, ಒಂದು ಸಾವಿರ ಪುರುಷರಿಗೆ ೯೧೦ ಸ್ತ್ರೀಯರು ಲಭ್ಯವೆಂದರ್ಥ. ವಿಷಯ ಹೀಗಿದ್ದರೂ, ಇತ್ತೀಚಿಗೆ ವರದಕ್ಷಿಣೆ ಸಮಸ್ಯೆ ಹೆಚ್ಚಾಗುತ್ತಿದೆ. ಗಿರಿಜನರು ಸಾಮಾನ್ಯವಾಗಿ ನಗರ ಪ್ರದೇಶದಿಂದ ದೂರದ ಗಿರಿ ಪ್ರದೇಶಗಳಲ್ಲಿ ವಾಸಿಸುವರೆಂಬ ಸಂಗತಿ ಸಾರ್ವತ್ರಿಕವಾಗಿ ದಿಟ್ಟವಾಗಿರುವದು. ನಾವು ಅಧ್ಯಯನ ಮಾಡಲಿರುವ ಬುಡಕಟ್ಟಿನವರಿಗೆ ಸಹ ಇದು ಬಹಳಷ್ಟು ನಿಜ. ಉದಾಹರಣೆಗೆ ಜಿಲ್ಲೆಯ ಬೇಡ ಜನಾಂಗ ೫,೯೯೦ (೯೯.೭೭%) ಹಳ್ಳಿಗಳಲ್ಲಿ ಮತ್ತು ಕೇವಲ ೧೪ (೦.೨೩%) ಜನ ನಗರದಲ್ಲಿ ವಾಸವಾಗಿರುತ್ತಾರೆ.

ಒಂದಾದರೂ ಗಂಡು ಮಗು ಬೇಕು ಎನ್ನುವ ಮಾನಸಿಕ ಪ್ರವೃತ್ತಿ ಬೇಡ ಜನರ ಕುಟುಂಬದ ಗಾತ್ರವನ್ನು ತುಲನಾತ್ಮಕವಾಗಿ ಹೆಚ್ಚಿಸಿದೆ. ಬೇಡ ಬುಡಕಟ್ಟಿನ ಜನರಲ್ಲಿ ಶೇ. ೫೫.೩೫ ರಷ್ಟು ಅವಿಭಕ್ತ ಕುಟುಂಬಗಳು ಇವೆ. ಇವುಗಳು ಸ್ವಯಂ ಪರಿಪೂರ್ಣತೆಗೆ ಸಮೀಪವಾಗಿವೆ.

ಬೇಡ ಸಮುದಾಯದ ಸಾಕ್ಷರತೆ ಜಿಲ್ಲೆಯ ಸಾರ್ವತ್ರಿಕ ಸಾಕ್ಷರತೆಗಿಂತ ಬಹಳ ಕಡಿಮೆ ಪ್ರಮಾಣದಲ್ಲಿದೆ. ಉದಾಹಾರಣೆಗೆ ಸಾರ್ವತ್ರಿಕ ಸಾಕ್ಷರತೆ ४५.೧೯ ಇದ್ದರೆ ಬೇಡರ ಸಾಕ್ಷರತೆ ೨೬.೨೮% ಇದೆ. ಮುಂದುವರಿದು, ಬೇಡ ಬುಡಕಟ್ಟಿನ ಹೆಂಗಸರ ಸಾಕ್ಷರತೆ ಅತಿ ಕಡಿಮೆ ಅಂದರೆ ೧४.४೫% ಇದೆ.

೬ ರಿಂದ ೧೩ ವರ್ಷದ ಹುಡುಗರಲ್ಲಿ ಶಾಲೆಗೆ ಹೋಗಿ ಬಿಟ್ಟವರು (drop-outs) ೩೪೬ ಇದ್ದರೆ, ಹುಡುಗಿಯರ ಸಂಖ್ಯೆ ೪೩೭ ಇದೆ. ಹೆಚ್ಚಿನ ಪ್ರಮಾಣದಲ್ಲಿ ಹುಡುಗ ಮತ್ತು ಹುಡುಗಿಯರನ್ನು ಶಾಲೆಗೆ ಏಕೆ ಕಳಿಸುವುದಿಲ್ಲ ಎಂದು ಪಾಲಕರನ್ನು ಕೇಳಿದಾಗ, ಅವರು ಹಲವಾರು ಕಾರಣಗಳನ್ನು ನೀಡಿದ್ದಾರೆ.

ಬಡವರಾದ ಮತ್ತು ಅಲೆಮರಿಗಳಾದ ಬೇಡ ಬುಡಕಟ್ಟಿನ ಜನರಿಗೆ ರಾಜಕೀಯ ಪ್ರಜ್ಞೆ ಸಾಕಷ್ಟು ಇರುವುದಿಲ್ಲ. ಇತ್ತೀಚೆಗೆ ಶಿಕ್ಷಣದೊಂದಿಗೆ ರಾಜಕೀಯ ಪ್ರತಿನಿಧಿತ್ವ ಇದ್ದರೆ, ಬೇಡ ಸಮಾಜ ಮುಂದೆ ಬರುವುದು ಸುಲಭ ಎಂಬುದನ್ನು ಮನಗಂಡು ಈ ಬುಡಕಟ್ಟಿನ ಜನರು ಚುನಾವಣೆಗಳಲ್ಲಿ ಸಕ್ರೀಯವಾಗಿ ಭಾಗವಹಿಸಲು ಪ್ರಾರಂಭಿಸಿದ್ದಾರೆ. ಚುನಾವಣೆ ಬಂದಾಗ ಮತ ಚಲಾಯಿಸುವುದಲ್ಲದೆ, ಗ್ರಾಮ ಪಂಚಾಯತ ಚುನಾವಣೆ ಹಾಗೂ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಚುನಾವಣೆಗಳಲ್ಲಿ ಭಾಗವಹಿಸಿ ಕೆಲವರು ಚುನಾಯಿತರಾಗಿರುತ್ತಾರೆ.

ಬೇಡ ಬುಡಕಟ್ಟಿನ ಎಲ್ಲಾ ಕುಟುಂಬಗಳು ಒಂದೊಂದು ಮನೆಯನ್ನು ಹೊಂದಿವೆ ಮತ್ತು ವಸತಿ ರಹಿತ ಕುಟುಂಬಗಳು ಯಾವು ಇಲ್ಲ. ಆದರೆ, ೬೨೧ ಕುಟುಂಬಗಳು ಅಂದರೆ ಶೇಕಡಾ ೬೩.೪೩ ತಗಡಿನದಾಗಿವೆ ಇದು ಅವರ ಬಡತನವನ್ನು ಎತ್ತಿ ತೋರಿಸುತ್ತದೆ. ಶ್ರೀಮಂತರಲ್ಲಿರುವ ಆರ್.ಸಿ.ಸಿ. ಮನೆಗಳು ಕೇವಲ ೨೩ ಅಂದರೆ ಶೇ. ೨.೩೫ ಮಾತ್ರ ಇವೆ.

ಬೇಡ ಬುಡಕಟ್ಟಿನ ಜನ ಬಡವರಿರುವುದರಿಂದ ಉಪಯೋಗ ಮಾಡುವ ಪಾತ್ರೆಗಳು ಹೆಚ್ಚಾಗಿ ಮಣ್ಣಿನ ಪಾತ್ರೆಗಳನ್ನೇ ಉಪಯೋಗಿಸುತ್ತಾರೆ. ಕೆಲವೇ ಕೆಲವು ಮನೆಗಳಲ್ಲಿ ಅಂದರೆ ಶೇಕಡಾ ೧೫ರಷ್ಟು ಕುಟುಂಬಗಳಲ್ಲಿ ಸ್ಟೀಲಿನ ಪಾತ್ರೆಗಳನ್ನು ಬಳಸುತ್ತಾರೆ. ಬೇಡ ಬುಡಕಟ್ಟಿನ ಜನರ ಮನೆಗಳಿಗೆ ವಿದ್ಯುತ್ ಶಕ್ತಿಯ ಸವಲತ್ತು ಎಲ್ಲರಿಗೂ ದೊರೆತಿಲ್ಲ. ಬಡವರಾದ ಇವರು ತಾವೇ ಸ್ವತಃ ವಿದ್ಯುತ್ ಶಕ್ತಿಯ ಸೌಕರ್ಯನ್ನು ಹೊಂದಲು ಅವರಲ್ಲಿ ಹಣವಿಲ್ಲ. ಆದುದರಿಂದಲೇ, ಸರಕಾರ ಇವರಿಗೆ "ಭಾಗ್ಯ ಜ್ಯೋತಿ" ಯೋಜನೆಯ ಮೂಲಕ ವಿದ್ಯುತ್ತಿನ ಸೌಕರ್ಯವನ್ನು ನೀಡಿದೆ. ಸರಕಾರ ಭಾಗ್ಯಜ್ಯೋತಿ ಯೋಜನೆಯ ಅನುಷ್ಠಾನದಲ್ಲಿ ತಂದಿರುವುದರಿಂದ ಕೇವಲ ೨೯೨ ಕುಟುಂಬಗಳಿಗೆ ಅಂದರೆ ಶೇಕಡಾ ೨೯.೮೩ ಮನೆಗಳಿಗೆ ವಿದ್ಯುತ್ ದೊರತಂತಾಗಿದೆ . ಪ್ರಾಥಮಿಕ ವೈದ್ಯಕೀಯ ಸೌಲತ್ತು ಬೇಡ ಬುಡಕಟ್ಟಿನವರಿಗೆ ಸಾಕಷ್ಟು ಪ್ರಮಾಣದಲ್ಲಿ ಸಿಕ್ಕುತ್ತಿಲ್ಲ. ಉದಾಹರಣೆಗೆ ವೈದ್ಯಕೀಯ ಸೌಲಭ್ಯಕ್ಕಾಗಿ ಈ ಜನರು ೧ ರಿಂದ ೩೦ ಕಿ.ಮೀ. ದೂರದವರೆಗೆ ಹೋಗಬೇಕಾಗುತ್ತದೆ. ರಾಜ್ಯ ಸರಕಾರ ಆರ್ಥಿಕ ಮತ್ತು ಸಾಮಾಜಿಕವಾಗಿ ಹಿಂದುಳಿದ ಪರಿಶಿಷ್ಟ ವರ್ಗದ ಬೇಡ ಬುಡಕಟ್ಟಿನ ಜನರ ಕಲ್ಯಾಣಕ್ಕಾಗಿ ಜಿಲ್ಲೆಯಲ್ಲಿ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುತ್ತಾರೆ. ಕುಟುಂಬ ಯೋಜನೆಗಳ ಕಾರ್ಯಕ್ರಮ, ವಿಧವಾ ವೇತನ, ಅಂಗವಿಕಲಗಿರುವ ಧನ

ಸಹಾಯ, ಶಾಲಾ ಮಕ್ಕಳಿಗಾಗಿ ಇರುವ ಶಿಷ್ಯವೇತನ, ಭಾಗ್ಯಜ್ಯೋತಿ ವಿದ್ಯುತ್ ಯೋಜನೆ, ಇಂದಿರಾ ಆವಾಸ ಯೋಜನೆ, ರಾಜೀವಗಾಂಧಿ ಆವಾಸ ಯೋಜನೆ, ಅಂಬೇಡ್ಕರ ಆವಾಸ ಯೋಜನೆ ಇತ್ಯಾದಿ ಯೋಜನೆಗಳನ್ನು ಜಿಲ್ಲಾ ಆಡಳಿತ ಅನುಷ್ಠಾನದಲ್ಲಿ ತಂದಿರುತ್ತದೆ. ಆದರೆ, ಇವುಗಳಿಂದ ಸಮುದಾಯದವರಿಗೆ ಹೇಳಿಕೊಳ್ಳುವಂತಹ ಅನುಕೂಲ ಆಗಿಲ್ಲ. ಕೇವಲ ಸ್ವಲ್ಪ ಯಶಸ್ಸು ಕುಟುಂಬ ಯೋಜನೆಯ ಅನುಷ್ಠಾನದಲ್ಲಿ ದೊರೆತಿದೆ. ಬುಡಕಟ್ಟಿನ ಜನ ಹೆಚ್ಚಾಗಿ ನಿರಕ್ಷರಿಗಳಾಗಿರುವುದರಿಂದ ಸರಕಾರದ ಅಭಿವೃದ್ಧಿ ಕಾರ್ಯಕ್ರಮಗಳ ಬಗೆಗೆ ಇವರಿಗೆ ಅಷ್ಟೊಂದು ಅರಿವಿಲ್ಲ.

ಸಾಮಾಜಿಕ ವ್ಯವಸ್ಥೆಯ ಶ್ರೇಣೀಕೃತ ಜಾತಿಯಲ್ಲಿ ಬೇಡ ಬುಡಕಟ್ಟಿನವರು ಕೊನೆಯಲ್ಲಿದ್ದಾರೆ. ಇವರನ್ನು ಪ್ರತ್ಯೇಕವಾಗಿ ಅಂದರೆ ಗ್ರಾಮದಿಂದ ೨ ರಿಂದ ೩ ಕಿಲೋಮೀಟರ ದೂರ ಇಡಲಾಗಿದೆ. ಮೇಲ್ಜಾತಿಯ ಜನ ಇವರೊಂದಿಗೆ ವ್ಯವಹರಿಸಲು ಹಿಂದೆ ಮುಂದೆ ನೋಡುತ್ತಾರೆ. ಆದ್ದರಿಂದ ಇವರು ಸಾಮಾಜಿಕವಾಗಿ ಹಿಂದುಳಿದಿದ್ದಾರೆಂಬ ಸಂಗತಿ ನಿರ್ವಿವಾದ ವಿಷಯವಾಗಿದೆ.

ನಾವು ಅಭ್ಯಸಿಸಿರುವ ೯೭೯ ಕುಟುಂಬಗಳ ಕಸುಬು ಬೇಸಾಯ, ಇನ್ನೊಬ್ಬರ ಹೊಲದಲ್ಲಿ ಕೆಲಸ ಮಾಡುವುದು, ಕೂಲಿ ಮಾಡುವುದು, ಕುರಿ ಮತ್ತು ಮೇಕೆ ಕಾಯುವುದು ಮುಂತಾದವುಗಳು ಇವೆ. ಇಂದಿನ ಬೇಡ ಬುಡಕಟ್ಟಿನ ಪ್ರಸ್ತುತ ಮುಖ್ಯ ಕಸುಬು ಬೇಸಾಯವಾಗಿದೆ. ಇಂದು ಬೇಸಾಯವೇ ಅವರ ಮುಖ್ಯ ಕಸುಬಾಗಿದೆ ಕೃಷಿ ಕ್ಷೇತ್ರದಲ್ಲಿ ಬೇಡರು ಹೆಚ್ಚಾಗಿ ದುಡಿಯುತ್ತಿದ್ದಾರೆ. ಶೇಕಡಾ ೪೭.೫೬ ರಷ್ಟು ಜನ ಬೇಸಾಯದ ಮೇಲೆ ಅವಲಂಬಿಸಿದ್ದಾರೆ. ಈ ಬುಡಕಟ್ಟಿನವರ ಹೊಲದ ಗಾತ್ರ (Farm size) ಚಿಕ್ಕದಿರುವುದರಿಂದ, ಇವರಲ್ಲಿ ಸಾಕಷ್ಟು ಜನ ಅತಿ ಸಣ್ಣ ರೈತರು (Marginal farmers) ಮತ್ತು ಸಣ್ಣ ರೈತರು (Small farmers) ಇದ್ದಾರೆ. ಇವರು ತಮ್ಮ ಹೊಲದಲ್ಲಿ ಕೆಲಸ ಮಾಡಿ ಬೇರೆಯವರ ಹೊಲಗಳಿಗೆ ಕಾರ್ಮಿಕರಂತೆ ಕೆಲಸ ಮಾಡಲು ಹೋಗುತ್ತಾರೆ. ಆದುದರಿಂದ ಎರಡನೆಯ ಮುಖ್ಯ ಕಸುಬು ಕೃಷಿ ಕಾರ್ಮಿಕವಾಗಿದೆ, (ಶೇಕಡಾ ೩೬.೦೭) ಭೂ-ರಹಿತ ಬೇಡ ಬುಡಕಟ್ಟಿನವರು ಕೃಷಿಯೇತರ ಕಾರ್ಮಿಕರಾಗಿ, ಅಂದರೆ ರಿಕ್ಷಾ ಹೊಡೆಯುವುದು, ನೌಕರಿ ಮುಂತಾದವುಗಳ ಕೆಲಸಕ್ಕಾಗಿ ದುಡಿಯುತ್ತಿದ್ದಾರೆ, (ಶೇಕಡಾ ೦೭.೫೮) ಈ ಜನರ ಇನ್ನೊಂದು ಹೇಳಿಕೊಳ್ಳುವಂತಹ ಕಸುಬು ಕುರಿ ಮತ್ತು ಮೇಕೆ ಸಾಕುವುದು (ಶೇಕಡಾ ೪.೪೧). ಶೇಕಡಾ ೧.೫೩ ಜನರು ಲಾರಿ ಚಾಲಕರಾದರೆ, ಶೇ. ೧.೩೨ ಜನರು ಸರಕಾರಿ ನೌಕರರಾಗಿದ್ದಾರೆ. ಕೊನೆಯಲ್ಲಿ ಶೇ. ೦.೫೩ ಲಾರಿ ಸಹಾಯಕರಾಗಿ ಕೆಲಸ ಮಾಡುತ್ತಿದ್ದಾರೆ. ಬೇಡರು ಟ್ರಾಕ್ಟರ್ ಚಾಲಕರಾಗಿ, ಪೋಲಿಸರಾಗಿ, ಸೈನಿಕರಾಗಿ ಮತ್ತು ವ್ಯಾಪಾರಿಗಳಾಗಿ ಅತ್ಯಂತ ಕಡಿಮೆ ಪ್ರಮಾಣದಲ್ಲಿರುತ್ತಾರೆ.

[illegible]

ಒಟ್ಟು ೧೧ ಕಸುಬುಗಳಲ್ಲಿ ಪ್ರತಿಯೊಂದು ಕಸುಬಿನಲ್ಲಿಯೂ ಪುರುಷರು ಸಿಗುತ್ತಾರೆ ಮತ್ತು ಇವುಗಳಲ್ಲಿನ ಕೆಲವು ಕಸುಬುಗಳಲ್ಲಿ ಮಾತ್ರ ಸ್ತ್ರೀಯರು ಕೆಲಸ ಮಾಡುತ್ತಿದ್ದಾರೆ. ಪುರುಷರಲ್ಲಿ ಶೇ. ೪೭.೭೨ ಜನ ಬೇಸಾಯಗಾರರಾಗಿದ್ದರೆ, ಇದಕ್ಕಿಂತ ಹೆಚ್ಚು ಅಂದರೆ, ಶೇ. ೫೨.೨೮ ಸ್ತ್ರೀಯರಿದ್ದಾರೆ. ಇದೇ ರೀತಿ ಕೃಷಿ ಕಾರ್ಮಿಕರಲ್ಲಿನ ಸ್ತ್ರೀಯರ ಸಂಖ್ಯೆ ೫೬೭ (ಶೇಕಡಾ ೫೫.೯೨) ಇದ್ದರೆ, ಪುರುಷರ ಸಂಖ್ಯೆ ೪೪೭ (ಶೇಕಡಾ ೪೪.೦೮) ಇರುತ್ತದೆ. ಕೃಷಿಯೇತರ ಕಾರ್ಮಿಕರಲ್ಲಿ ಶೇ. ೮೨.೬೩ ಪುರುಷರಿದ್ದರೆ, ಶೇ. ೧೭.೩೭ ಸ್ತ್ರೀಯರಿದ್ದಾರೆ. ಕುರಿ ಮತ್ತು ಮೇಕೆ ಕಾಯುವವರಲ್ಲಿ ಶೇ. ೮೭.೯೦ ಪುರುಷರಿದ್ದರೆ, ಕೇವಲ ಶೇ. ೧೨.೧೦ ಸ್ತ್ರೀಯರು ಇದ್ದಾರೆ. ಸರಕಾರಿ ನೌಕರರಲ್ಲಿ ಶೇ. ೭೮.೩೮ ಪುರುಷರಿದ್ದರೆ. ಸ್ತ್ರೀಯರು ಶೇ. ೨೧.೬೨ ಇದ್ದಾರೆ. ಲಾರಿ ಚಾಲಕರು, ಲಾರಿ ಕ್ಲಿನರ್ಸ್, ಟ್ರಾಕ್ಟರ್ ಚಾಲಕರು, ಸೈನಿಕರು ಮತ್ತು ಪೋಲಿಸರ ಹುದ್ದೆಗಳಲ್ಲಿ ಎಲ್ಲರೂ ಪುರುಷರಾಗಿದ್ದಾರೆ. ವ್ಯಾಪಾರಿಗಳಲ್ಲಿ ಒಬ್ಬ ಸ್ತ್ರೀಯು ಇದ್ದು (ಶೇಕಡಾ ೧೬.೬೬) ಮತ್ತು ೫ ಜನ ಪುರುಷರಿದ್ದಾರೆ (ಶೇಕಡಾ ೮೩.೩೪).

ಜಿಲ್ಲೆಯಲ್ಲಿ ಕೃಷಿ ಕಾರ್ಮಿಕರು ಶೇ. ೩೬.೦೭ ಇದ್ದರೆ, ಬಸವಕಲ್ಯಾಣ ತಾಲೂಕಿನ ಮಂಠಾಳ ಮತ್ತು ಮುಡಬಿ ಹೋಬಳಿಗಳಲ್ಲಿ ಇದರ ಪ್ರಮಾಣ ಅನುಕ್ರಮವಾಗಿ ಶೇ. ೪೨.೨೦ ಮತ್ತು ಶೇ. ೩೭.೮೭ ಇದೆ. ಕೋಹಿನೂರ ಹೋಬಳಿಯಲ್ಲಿ ಶೇ. ೩೫.೮೭ ಕೃಷಿ ಕಾರ್ಮಿಕರಾಗಿದ್ದಾರೆ. ಜಿಲ್ಲೆಯ ಕುರಿ ಮತ್ತು ಮೇಕೆ ಸಾಕುವವರ ಸಂಖ್ಯೆ ಶೇ. ೪.೪೧ ಇದ್ದರೆ, ಕೋಯಿನೂರಿನಲ್ಲಿ ಇದು ಶೇ. ೪.೭೨ ಇರುತ್ತದೆ.

ಬೇಡರು ತಮ್ಮ ಪೂರ್ವಜರು ನೀಡಿದ ಅಥವಾ ಇತ್ತೀಚೆಗೆ ಖರೀದಿಸಿದ ಭೂಮಿಯಲ್ಲಿ ವ್ಯವಸಾಯ ಮಾಡುತ್ತಿದ್ದಾರೆ. ಜಿಲ್ಲೆಯಲ್ಲಿ ಇವರ ಸಂಖ್ಯೆ ೬೦೦೪ ಇದೆ. ಇವರು ಹೊಂದಿರುವ ಭೂಮಿಯ ಪ್ರಮಾಣ ೪,೩೭೩.೫೦ ಎಕರೆಯಾಗಿದೆ. ಇವರ ಒಟ್ಟು ಕುಟುಂಬಗಳ ಸಂಖ್ಯೆ ೯೭೯ ಇವೆ. ಅದರಲ್ಲಿ ೮೪೧ (ಶೇ. ೮೫.೯೦) ಕುಟುಂಬಗಳು ಭೂಮಿಯನ್ನು ಹೊಂದಿರುತ್ತವೆ ಮತ್ತು ಉಳಿದ ೧೩೮ (ಶೇ. ೧೪.೧೦) ಕುಟುಂಬಗಳಿಗೆ ಭೂಮಿ ಇರುವುದಿಲ್ಲ.

ಜಿಲ್ಲೆಯ ಒಟ್ಟು ಭೂ-ಹಿಡುವಳಿಗಳ ಸಂಖ್ಯೆ ೮೪೧ ಇದೆ. ಇದರಲ್ಲಿ ಬಹುತೇಕ ಹಿಡುವಳಿಗಳು ಅತಿ ಸಣ್ಣ ಪ್ರಮಾಣದಾಗಿವೆ. ಉದಾಹರಣೆಗೆ, ಶೇ. ೨೬.೬೮ ಅತಿ ಸಣ್ಣ ಭೂ-ಹಿಡುವಳಿಗಳು; ಶೇ. ೪೫.೯೦ ಸಣ್ಣ ಭೂ-ಹಿಡುವಳಿಗಳು, ಶೇ. ೧೯.೬೨ ಅರೆ ಮಧ್ಯಮ ಭೂ-ಹಿಡುವಳಿಗಳು ಮತ್ತು ಶೇ. ೭.೨೫ ಮಧ್ಯಮ ಭೂ-ಹಿಡುವಳಿಗಳು ಇರುತ್ತವೆ. ದೊಡ್ಡ ಪ್ರಮಾಣದ ಭೂ-ಹಿಡುವಳಿಗಳ ಪ್ರಮಾಣ ಬಹಳ ಕಡಿಮೆಯಿರುತ್ತದೆ. (ಶೇ. ೦.೯೫) ಒಟ್ಟಾರೆ ಜಿಲ್ಲೆಯಲ್ಲಿನ ಅತಿ ಸಣ್ಣ, ಸಣ್ಣ ಗಾತ್ರದ ಮತ್ತು ಅರೆ-ಮಧ್ಯಮ

ಗಾತ್ರದ ಭೂ-ಹಿಡುವಳಿಗಳೆಲ್ಲ ಕೂಡಿಸಿದರೆ ಅದು ಶೇ. ೯೧.೦೮ ಆಗುತ್ತದೆ. ಇದರಿಂದಾಗಿ ಬೇಡ ಸಮುದಾಯದ ರೈತರು ಬಡವರಾಗಿದ್ದಾರೆ.

ಬೇಡ ಸಮಾಜದ ಜನಸಂಖ್ಯೆಯ ಸಿಂಹಪಾಲು ಬಸವಕಲ್ಯಾಣದಲ್ಲಿ ಇದ್ದುದರಿಂದ ಅವರ ಭೂ-ಹಿಡುವಳಿಗಳ ಶೇ. ೯೫.೯೬ ಇಲ್ಲಿಯೇ ಇರುತ್ತದೆ. ಹುಮನಾಬಾದ ತಾಲ್ಲೂಕನಲ್ಲಿ ಶೇ. ೨.೮೫ ಭೂ-ಹಿಡುವಳಿಗಳು ಇದ್ದರೆ ಉಳಿದ ಶೇ. ೧.೧೯ ಭೂ-ಹಿಡುವಳಿಗಳು ಭಾಲ್ಕಿ ತಾಲೂಕಿನಲ್ಲಿ ಇರುತ್ತವೆ. ಅತಿ ಸಣ್ಣ ಭೂ-ಹಿಡುವಳಿಗಳು ಹೆಚ್ಚಾಗಿ ಬಸವಕಲ್ಯಾಣದಲ್ಲಿವೆ. ಅಂದರೆ ಶೇ. ೯೪.೧೨; ಹುಮನಾಬಾದದಲ್ಲಿ ಇವುಗಳ ಪ್ರಮಾಣ ಶೇ. ೫.೪೩ ಇದ್ದರೆ, ಭಾಲ್ಕಿಯಲ್ಲಿ ಕೇವಲ ಶೇ. ೦.೪೫ ಇದೆ. ಸಣ್ಣ ಭೂ-ಹಿಡುವಳಿಗಳು ಸಹ ಬಸವಕಲ್ಯಾಣದಲ್ಲಿಯೇ ಹೆಚ್ಚಾಗಿವೆ. (ಶೇ ೯೬.೪೪). ಬಸವಕಲ್ಯಾಣ ತಾಲೂಕವು ಶೇ. ೯೭.೫೮ ಅರೆ ಮಧ್ಯಮ ಭೂ-ಹಿಡುವಳಿಗಳನ್ನು ಶೇ. ೯೪.೫೪ ಮಧ್ಯಮ ಭೂ-ಹಿಡುವಳಿಗಳನ್ನು ಮತ್ತು ನೂರಕ್ಕೆ ನೂರು ದೊಡ್ಡ ಭೂ-ಹಿಡುವಳಿಗಳನ್ನು ಹೊಂದಿರುತ್ತದೆ.

ತಾಲೂಕಾವಾರು ಭೂ-ಹಿಡುವಳಿಗಳ ವಿವರಣೆಯಿಂದ ನಮಗೆ ಗೊತ್ತಾಗುವುದೇನೆಂದರೆ, ಎಲ್ಲ ರೀತಿಯ ಭೂ-ಹಿಡುವಳಿಗಳು ಅತ್ಯಧಿಕವಾಗಿ ಬಸವಕಲ್ಯಾಣ ತಾಲ್ಲೂಕಿನಲ್ಲಿ ಕೇಂದ್ರಿಕೃತವಾಗಿವೆ. ಉದಾಹರಣೆಗೆ, ಶೇ. ೯೪.೧೨ ಅತಿ ಸಣ್ಣ ಭೂ-ಹಿಡುವಳಿಗಳು, ಶೇ. ೯೬.೪೪ ಸಣ್ಣ ಭೂ-ಹಿಡುವಳಿಗಳು, ಶೇ. ೯೭.೫೮ ಅರೆ ಮಧ್ಯಮ ಭೂ-ಹಿಡುವಳಿಗಳು ಮತ್ತು ಶೇ. ೯೪.೫೫ ಮಧ್ಯಮ ಭೂ-ಹಿಡುವಳಿಗಳು ಬಸವಕಲ್ಯಾಣದಲ್ಲಿವೆ. ಎಲ್ಲಾ ದೊಡ್ಡ ಗಾತ್ರದ ಭೂ-ಹಿಡುವಳಿಗಳು ಬಸವಕಲ್ಯಾಣ ತಾಲೂಕದಲ್ಲಿವೆ. ಬಸವಕಲ್ಯಾಣ ಬಿಟ್ಟರೆ, ಹುಮನಾಬಾದ ತಾಲೂಕಿನಲ್ಲಿ ಕೆಲವು ಹಿಡುವಳಿಗಳು ಇವೆ. ೧೨ (ಶೇ. ೫.೪೭)ಅತಿ ಸಣ್ಣ ಭೂ-ಹಿಡುವಳಿಗಳು, ೭ (ಶೇ. ೧.೭೮) ಸಣ್ಣ ಭೂ-ಹಿಡುವಳಿಗಳು, ೨ (ಶೇ. ೧.೨೧) ಅರೇ ಮಧ್ಯಮ ಭೂ-ಹಿಡುವಳಿಗಳು ಮತ್ತು ೩ (ಶೇ. ೫.೪೫) ಮಧ್ಯಮ ಭೂ-ಹಿಡುವಳಿಗಳು ಇವೆ. ಈ ತಾಲೂಕಿನಲ್ಲಿ ಯಾವ ದೊಡ್ಡ ಭೂ-ಹಿಡುವಳಿಗಳು ಇರುವುದಿಲ್ಲ. ಕೊನೆಯದಾಗಿ ಭಾಲ್ಕಿ ತಾಲೂಕವು ೧ ಅತಿ ಸಣ್ಣ ಭೂ-ಹಿಡುವಳಿ, (ಶೇ. ೦.೪೫) ೭ (ಶೇ. ೪.೭೮) ಸಣ್ಣ ಭೂ-ಹಿಡುವಳಿಗಳ, ಮತ್ತು ೨ (ಶೇ. ೧.೨೧) ಅರೆ-ಮಧ್ಯಮ ಭೂ-ಹಿಡುವಳನ್ನು ಹೊಂದಿರುತ್ತದೆ. ಈ ತಾಲ್ಲೂಕನಲ್ಲಿ, ಮಧ್ಯಮ ಮತ್ತು ದೊಡ್ಡ ಭೂ-ಹಿಡುವಳಿಗಳು ಇಲ್ಲ.

ಇತರ ಮೇಲ್ಜಾತಿಯವರ ಸಾಗುವಳಿಗೆ ಹೋಲಿಸಿದಾಗ, ಬೇಡ ಸಮುದಾಯದ ಬಹುಪಾಲು ಸಾಗುವಳಿ ಖುಷ್ಕಿ ಜಮೀನಿನಲ್ಲಿ ಸಾಗುತ್ತದೆ. ಉದಾಹರಣೆಗೆ ಬೇಡ ಸಮುದಾಯದ ಕೇವಲ ಶೇ. ೮.೩೭ ರಷ್ಟು ನೀರಾವರಿ ಸೌಲಭ್ಯವನ್ನು ಹೊಂದಿರುತ್ತಾರೆ. ವಿವಿಧ ಗಾತ್ರದ ಭೂ-ಹಿಡುವಳಿಗಳ ರೈತರಲ್ಲಿ ಅರೆ

ಮಧ್ಯಮ ಗಾತ್ರದ ಭೂ-ಹಿಡುವಳಿಗಳನ್ನುಳ್ಳ ರೈತರು ತುಲನಾತ್ಮಕವಾಗಿ ಹೆಚ್ಚಿನ ಪ್ರಮಾಣದಲ್ಲಿ ನೀರಾವರಿ ಸೌಲಭ್ಯ ಹೊಂದಿರುತ್ತಾರೆ. ಅತಿ ಸಣ್ಣ ಭೂ-ಹಿಡುವಳಿಗಳನ್ನು ಹೊಂದಿರುವ ರೈತರು ಅತಿ ಕಡಿಮೆ ಪ್ರಮಾಣದಲ್ಲಿ ಅಂದರೆ ಶೇ. ೪.೨೪ ರಷ್ಟು ನೀರಾವರಿ ಸೌಲಭ್ಯವನ್ನು ಹೊಂದಿರುತ್ತಾರೆ. ನೀರಾವರಿ ಸೌಲಭ್ಯವಿಲ್ಲದೆ ಬೇಸಾಯವನ್ನು ಮಾಡುವುದು ಅತಿ ಕಷ್ಟಕರ ಸಂಗತಿ ಮತ್ತು ಬೇಸಾಯ ಅಷ್ಟೇನೂ ಫಲಪ್ರದವಾಗಿರಲಾರದು. ಮೇಲ್ಜಾತಿಯವರ ಭೂಮಿಯ ಫಲವತ್ತತೆಗೆ ಹೋಲಿಸಿದಾಗ ಈ ಸಮುದಾಯ ಸಾಗುವಳಿ ಮಾಡುತ್ತಿರುವ ಭೂಮಿಯ ಫಲವತ್ತತೆ ಬಹಳಷ್ಟು ಕಡಿಮೆ ಪ್ರಮಾಣದಾಗಿದೆ. ಇವರುಗಳು ಹೆಚ್ಚು-ಕಡಿಮೆ ಬಂಜರು ಭೂಮಿಯಲ್ಲಿ ಬೇಸಾಯ ಕಾರ್ಯವನ್ನು ಕೈಕೊಂಡಿದ್ದಾರೆ.

ಈ ಸಮುದಾಯ ಖುಷ್ಕಿ ಜಮೀನನ್ನು ಮತ್ತು ಬಂಜರು ಜಮೀನನ್ನು ಉಳುತ್ತಿರುವುದರಿಂದ, ಇವರಲ್ಲಿ ಹೆಚ್ಚಿನ ರೈತರು ಸ್ಥಾನೀಯ ಬಗೆಯ ಬೆಳೆಗಳನ್ನು ಬೆಳೆಯುತ್ತಾರೆ. ಅಲ್ಲದೆ, ಹೆಚ್ಚು ಇಳುವರಿ ನೀಡುವ ಬೆಳೆಗಳನ್ನಲ್ಲ. ದೊಡ್ಡ ಪ್ರಮಾಣದ ಭೂ-ಹಿಡುವಳಿಗಳನ್ನುಳ್ಳ ರೈತರು ತುಲನಾತ್ಮಕವಾಗಿ ಹೆಚ್ಚಿನ ಪ್ರಮಾಣದಲ್ಲಿ ಅಧಿಕ ಇಳುವರಿ ನೀಡುವ ಬೆಳೆಗಳನ್ನು ಬೆಳೆದರೂ, ಇವರ ಸಂಖ್ಯೆ ಕೇವಲ ೮ ಇರುತ್ತದೆ. ಇದಲ್ಲದೆ, ಶೇಕಡಾ ೮.೩೭ ನೀರಾವರಿ ಸೌಲಭ್ಯವಿರುವ ಭೂಮಿಯಲ್ಲಿ ಹೆಚ್ಚು ಇಳುವರಿ ನೀಡುವ ಬೀಜಗಳನ್ನು ಉಪಯೋಗಿಸಿ ಬೆಳೆಗಳನ್ನು ಬೆಳೆದಿದ್ದಾರೆ.

ಬೇಡ ಸಮುದಾಯದವರು ಖರೀಫ್ ಕಾಲದಲ್ಲಿ ಮುಖ್ಯವಾಗಿ ಜೋಳ (ಹಸಿರು ಜೋಳ, ಅರಗಡಿ ಜೋಳ, ರಾಗಿ ಜೋಳ, ಕಣಮುಚರ‍್ಯಾನ ಜೋಳ, ಬಿಳಿ ಜೋಳ, ಕೆಂಪು ಜೋಳ, ಹೈಬ್ರೀಡ್ ಜೋಳ ಇತ್ಯಾದಿಗಳು) ಸಜ್ಜೆ, ನೆಲಗಡಲೆ, ತೊಗರಿ, ಉದ್ದು, ಹೆಸರು, ಎಳ್ಳು, ನವಣೆ, ಶಾಹಿ, ಭತ್ತ, ಅಲಸಂಧಿ, ಕಾರೋಳು, ಸೂರ್ಯಪಾನ, ಫುಂಡಿ, ಅಗಸಿ, ಖುಸುಬಿ ಮೊದಲಾದ ಬೆಳೆಗಳನ್ನು ಬೆಳೆಯುತ್ತಾರೆ. ರಭೀ ಕಾಲದಲ್ಲಿ ಬಿಳಿ ಜೋಳ, ಗೋಧಿ, ಕಡಲೆ, ಅಲ್ಲ, ಸೂರ್ಯಪಾನ ಮುಂತಾದವುಗಳನ್ನು ಬೆಳೆಯುತ್ತಾರೆ. ತೊಗರಿ, ಕಬ್ಬು, ಸೂರ್ಯಪಾನ, ಭತ್ತ ಇವುಗಳು ಖರೀಫ್ ಮತ್ತು ರಭೀ ಈ ಎರಡು ಕಾಲದಲ್ಲಿ ಬರುವ ಬೆಳೆಗಳಾಗಿವೆ.

ಇವರ ವಾರ್ಷಿಕ ಖರೀಫ್ ಮತ್ತು ರಭೀ ಬೆಳೆಗಳಲ್ಲಿ ವಾರ್ಷಿಕ ಬೆಳೆಯಾದ ತೊಗರಿ ಅತಿ ಮಹತ್ವದಾಗಿದೆ ಮತ್ತು ಇದನ್ನು ೨,೬೮೦.೭೦ ಎಕರೆಗಳಲ್ಲಿ (ಶೇ. ೬೧.೨೯) ಬೆಳೆಯಲಾಗುತ್ತದೆ. ಎರಡನೆಯ ಸ್ಥಾನ ಖರೀಫ್ ಬೆಳೆಯಾದ ಹೈಬ್ರೀಡ್ ಜೋಳಕ್ಕೆ ದೊರೆತಿದೆ. ಈ ಬೆಳೆಯನ್ನು ೪೫೧.೭೫ ಎಕರೆಗಳಲ್ಲಿ (ಶೇ. ೧೦.೩೧) ಬೆಳೆಯಲಾಗುತ್ತದೆ. ಮೂರನೆಯ ಸ್ಥಾನ ಖರೀಫ್ ಬೆಳೆಯಾದ ಹೈಬ್ರೀಡ್ ಸಜ್ಜೆಗೆ ದೊರೆತಿದ್ದು ೩೦೦.೪೫ ಎಕರೆಗಳಲ್ಲಿ (ಶೇ. ೬.೮೭) ಬೆಳೆಯಲಾಗುತ್ತದೆ. ನಾಲ್ಕನೆಯ ಸ್ಥಾನವನ್ನು

ವರ್ಷದ ಬೆಳೆಯಾದ ಕಬ್ಬು ಗಿಟ್ಟಿಸಿಕೊಂಡಿದೆ ಮತ್ತು ಇದರ ವಿಸ್ತೀರ್ಣ ೨೮೦.೫೦ ಎಕರೆಗಳು (ಶೇ. ೬.೪೧), ೨೦೦.೫೦ (ಶೇ. ೪.೫೮) ಕ್ಷೇತ್ರದಲ್ಲಿ ಬೆಳೆಯಲಾದ ಹಸಿರು ಜೋಳಕ್ಕೆ ಐದನೆಯ ಸ್ಥಾನ ದೊರಕಿದೆ. ರಭಿ ಕಾಲದ ಬೆಳೆಗಳು ಸೂರ್ಯಪಾನ, ಬಿಳಿಜೋಳ ಮತ್ತು ಕಡಲೆಯಾಗಿರುತ್ತದೆ. ಇವುಗಳ ಬಿತ್ತನೆ ಕ್ಷೇತ್ರ ತುಲನಾತ್ಮಕವಾಗಿ ಅತಿ ಕಡಿಮೆ ಪ್ರಮಾಣದಾಗಿದೆ.

ಈ ಸಮಯುದಾಯದವರು ಒಟ್ಟು ೪,೩೭೩.೫೦ ಎಕರೆ ಭೂಮಿಯಲ್ಲಿ ಬೇಸಾಯ ಮಾಡುತ್ತಿದ್ದಾರೆ. ಕೇವಲ ೨೮೯.೨೫ ಎಕರೆ ಭೂಮಿಯಲ್ಲಿ ಒಂದಕ್ಕಿಂತ ಹೆಚ್ಚಿನ ಬೆಳೆ, ಅಂದರೆ ಎರಡನೆಯ ಬೆಳೆಯನ್ನು ತೆಗೆಯಲು ಸಮರ್ಥರಾಗಿದ್ದಾರೆ. (ಶೇ. ೬.೬೧) ಇದಕ್ಕೆ ಪ್ರಮುಖ ಕಾರಣವೇನೆಂದರೆ, ಇವರಿಗೆ ನೀರಾವರಿ ಸೌಲಭ್ಯ ಸಾಕಷ್ಟು ದೊರೆತ್ತಿಲ್ಲ. ಜಿಲ್ಲೆಯು ಒಂದಕ್ಕಿಂತಲೂ ಹೆಚ್ಚು ಸಲ ಭಿತ್ತನೆಯ ಪ್ರದೇಶ ಶೇಕಡಾ ೨೩ ಇದೆ. ಆದುದರಿಂದ, ಈ ಸಮುದಾಯದವರು ಆರ್ಥಿಕವಾಗಿ ಹಿಂದುಳಿದ್ದಾರೆ.

ತಾಲೂಕಾವಾರು ವಿವರಗಳಿಗೆ ಬಂದಾಗ, ಬೇಡರು ಭಾಲ್ಕಿಯಲ್ಲಿ ಸ್ವಲ್ಪ ಹೆಚ್ಚಾಗಿಯೇ ದ್ವಿದಳ ಧಾನ್ಯಗಳನ್ನು ಬೆಳೆದಿರುತ್ತಾರೆ. (ಶೇ. ೬೪.೧೯) ತುಲನಾತ್ಮಕವಾಗಿ ಬಸವಕಲ್ಯಾಣ ತಾಲೂಕವು ಆಹಾರ ಬೆಳೆಗಳನ್ನು ಬೆಳೆಯುವವಲ್ಲಿ ಇತರ ತಾಲೂಕುಗಳಿಗಿಂತ ಮುಂದಾಗಿದ. ಭಾಲ್ಕಿ ತಾಲೂಕವು ವಾಣಿಜ್ಯ ಬೆಳೆಗಳನ್ನು ಬೆಳೆಯುವಲ್ಲಿ ಇತರ ತಾಲೂಕಾಗಳಿಗಿಂತ ತುಲನಾತ್ಮಕವಾಗಿ ಮುಂದಿದೆ (ಶೇ. ೧೧.೩೨). ಇವರ ವಾಣಿಜ್ಯ ಬೆಳೆಯ ಕ್ಷೇತ್ರ ಶೇ. ೧೨.೩೯ ಆಗಿದೆ, (ಕಬ್ಬು, ನೆಲಗಡಲೆ, ಸೂರ್ಯಪಾನ ಮತ್ತು ಎಳ್ಳು) ಮತ್ತು ಇದು ಬಹಳ ಕಡಿಮೆ ಪ್ರಮಾಣದಾಗಿದೆ. ಜನಪ್ರೀಯ ವಾಣಿಜ್ಯ ಬೆಳೆಗಳಾದ ಕಬ್ಬು ಮತ್ತು ನೆಲಗಡಲೆಗಳನ್ನು ಅಷ್ಟಾಗಿ ಇವರು ಬೆಳೆಯುತ್ತಿಲ್ಲ. ಇದಕ್ಕೆ ಪ್ರಮುಖವಾದ ಕಾರಣ ನೀರಾವರಿಯ ಸೌಲಭ್ಯದ ಕೊರತೆಯಾಗಿದೆ. ಹೈದ್ರಾಬಾದ ಕರ್ನಾಟಕ ಪ್ರದೇಶದಲ್ಲಿನ ಜಿಲ್ಲೆಯಾದ ಬೀದರನಲ್ಲಿ ದ್ವಿದಳ ಧಾನ್ಯವಾದ ತೊಗರಿಯನ್ನು ಸಹ ಒಂದು ವಾಣಿಜ್ಯ ಬೆಳೆಯೆಂದೇ ಪರಿಗಣಿಸಲಾಗಿದೆ. ತೊಗರಿಯನ್ನು ಮಾರಿ ಸ್ವಲ್ಪ ಹಣವನ್ನು ಸಹ ರೈತರು ಪಡೆಯುತ್ತಿದ್ದಾರೆ.

ಬೇಡ ಸಮುದಾಯದ ರೈತರು ಹಲವಾರು ಆಹಾರ ಧಾನ್ಯಗಳನ್ನು ದ್ವಿದಳ ಧಾನ್ಯಗಳನ್ನು ಮತ್ತು ವಾಣಿಜ್ಯ ಬೆಳೆಗಳನ್ನು ಬೆಳೆಸಿದ್ದರೂ, ಇವರ ಭೂಮಿಯ ಫಲವತ್ತತೆ ಅತ್ಯಂತ ಕಡಿಮೆ ಆಗಿರುವುದರಿಂದ ಮತ್ತು ನೀರಾವರಿಯ ಸೌಲಭ್ಯವನ್ನು ಅತ್ಯಂತ ಕಡಿಮೆ ಪ್ರಮಾಣ ಹೊಂದಿರುವುದರಿಂದ ವಿವಿಧ ಬೆಳೆಗಳ ಪ್ರತಿ ಎಕರೆಯ ಸರಾಸರಿಯ ಉತ್ಪನ್ನ ಇತರ ಮೇಲ್ಜಾತಿಯ ರೈತರಿಗೆ ಹೋಲಿಸಿದಾಗ ಶೇ. ೫೦ ರಷ್ಟು ಕಡಿಮೆಯಾಗಿದೆ.

ನೀರಾವರಿ ಸೌಲಭ್ಯ ಹೊಂದಿರುವ ರೈತರು ವಾರ್ಷಿಕ ಬೆಳೆಯಾದ ಅಥವಾ ೧೨ ತಿಂಗಳ ಬೆಳೆಯಾದ ಕಬ್ಬನ್ನು ಮತ್ತು ಆರು ತಿಂಗಳಲ್ಲಿ ಬರುವ ಭತ್ತವನ್ನು ಬೆಳೆಯುತ್ತಾರೆ. ಕೆಲವು ರೈತರು ಗೋಧಿಯ ಮತ್ತು ಅಲ್ಲವನ್ನು ಬೆಳೆದರೂ ಇವರ ಸಂಖ್ಯೆ ಈ ಎರಡು ಬೆಳೆಗಳ ವಿಸ್ತೀರ್ಣ ಬಹಳ ಕಡಿಮೆಯಿರುತ್ತದೆ. ಉದಾಹರಣೆಗೆ, ರೈತರು ಕೇವಲ ೧೨ ಎಕರೆ ಅಲ್ಲವನ್ನು (Zinger) ಬೆಳೆದಿರುತ್ತಾರೆ ಮತ್ತು ೨೨ ಎಕರೆ ಗೋಧಿಯನ್ನು ಬೆಳೆದಿರುತ್ತಾರೆ. ಆದುದರಿಂದ, ನೀರಾವರಿ ಪ್ರಮುಖ ಬೆಳೆಗಳು ಕೇವಲ ಕಬ್ಬು ಮತ್ತು ಭತ್ತ ಇರುತ್ತವೆ. ಆದುದರಿಂದಲೇ ಅವರು ಬೆಳೆದ ಕಬ್ಬಿನ ಬೆಳೆಯ ವಿಸ್ತೀರ್ಣ ೨೬೬.೨೦ (ಶೇ. ೬೨.೬೯) ಇದ್ದರೆ, ಭತ್ತದ ಬೆಳೆಯ ವಿಸ್ತೀರ್ಣ ೬೬ (ಶೇ. ೧೮.೦೫) ಇರುತ್ತದೆ. ಬೇಡ ರೈತರು ಉತ್ಪಾದಿಸಿದ ಪ್ರತಿ ಎಕರೆಯ ಕಬ್ಬಿನ ಉತ್ಪಾದನೆಯ ಪ್ರಮಾಣ ಉಳಿದ ಮೇಲ್ಜಾತಿಯ ರೈತರಿಗಿಂತ ಸುಮಾರು ಶೇ. ೧೦ರಷ್ಟು ಕಡಿಮೆ ಇದೆ. ಇದಕ್ಕೆ ಮುಖ್ಯ ಕಾರಣಗಳೆಂದರೆ (೧) ಇವರಿಗೆ ಇರುವ ಆಧುನಿಕ ಉತ್ಪಾದಾನಾಂಗಗಳ (Inputs) ಕೊರತೆ ಮತ್ತು (೨) ಭೂಮಿಯ ತುಲನಾತ್ಮಕ ಕಡಿಮೆ ಫಲವತ್ತತೆ ಯಾಗಿವೆ.

ರೈತರು ಹೆಚ್ಚಾಗಿ ಖರಬ್ (ಖರಾಬ) ಅಂದರೆ 'ಬಂಜರು' ಭೂಮಿಯನ್ನು ಊಳುತ್ತಿರುವುದರಿಂದ ಮತ್ತು ಅವರ ನೀರಾವರಿ ಭೂಮಿ ಹೆಚ್ಚಾಗಿ ಇಲ್ಲದಿರುವುದರಿಂದ, ಭೂಮಿಯಿಂದ ಬಂದ ಉತ್ಪಾದನೆ ಅಂದರೆ, ಕಾಳುಕಡ್ಡಿ ಮನೆಯವರ ಉಪಭೋಗಕ್ಕೆ ಸಾಲುತ್ತದೆ ಮತ್ತು ಮಿಗುತೆ (Surplus) ಏನೂ ಉಳಿಯುವುದಿಲ್ಲ. ತೊಗರಿಯನ್ನು ಹೆಚ್ಚಾಗಿ ಬೆಳೆಯುತ್ತಿದ್ದರೂ, ನೀರಾವರಿಯಿಲ್ಲದ ಮತ್ತು ಬಂಜರು ಭೂಮಿಯಲ್ಲಿ ಇದನ್ನು ಬೆಳೆಯುತ್ತಿರುವುದರಿಂದ, ಇದರ ಪ್ರತಿ ಎಕರೆ ಉತ್ಪಾದನೆ ಅತ್ಯಂತ ಕಡಿಮೆ ಪ್ರಮಾಣದಲ್ಲಿರುತ್ತದೆ ಅನಿಶ್ಚಿತತೆ (Uncertainity)ಯಿಂದ ಕೂಡಿದೆ ಕೆಲವೊಮ್ಮೆ ಬೆಳೆ ಸಾಧಾರಣವಾಗಿ ಬಂದರೆ, ತೊಗರಿಯ ಬೆಲೆ ಗಮನಾರ್ಹವಾಗಿ ಕಡಿಮೆಯಾಗುತ್ತದೆ. ಆದುದರಿಂದ ತೊಗರಿಯನ್ನು ಮಾರಿದಾಗ ರೈತರಿಗೆ ಹೆಚ್ಚಿನ ಆದಾಯ ಬರುವುದಿಲ್ಲ. ಬೇಡ ಸಮುದಾಯ ಕೃಷಿ ವಲಯದಲ್ಲಿನ ಹಣದ ಬಳಕೆ 'ಕಡಿಮೆ'. ಕೃಷಿಕರು ಜೀವನ ನಿರ್ವಹಣೆಗಾಗಿ ಕೃಷಿ (Agriculture is a way of Life) ಎಂದು ತಿಳಿಯುತ್ತಾರಲ್ಲದೆ. ಇದೊಂದು ಲಾಭಕರ ಉದ್ದಿಮೆಯೆಂದು ಪರಿಗಣಿಸುತ್ತಿಲ್ಲ.

ಕಬ್ಬು ಮತ್ತು ಭತ್ತ ಬೆಳೆಗಳನ್ನು ಹಣದ ಬೆಳೆಗಳು (Cash crops) ಎಂದು ಇತರರಂತೆ ಬೇಡ ರೈತರು ಪರಿಗಣಿಸುತ್ತಾರೆ. ಮುಂದುವರಿದು, ಇವೆರಡರಲ್ಲಿ ಬೆಳೆದ ಎಲ್ಲ ಕಬ್ಬನ್ನು ಸಕ್ಕರೆ ಕಾರ್ಖಾನೆಗೆ ಮಾರಾಟ ಮಾಡುತ್ತಾರೆ ಅಥವಾ ಬೆಲ್ಲಕ್ಕಾಗಿ ಉಪಯೋಗಿಸುತ್ತಾರೆ. ಕೋಷ್ಟಕ ೫.೨೧ ರೈತರ ಮಾರಾಟದ ಮಿಗುತೆಯನ್ನು (ಭತ್ತ ಮತ್ತು ಕಬ್ಬು) ಸೂಚಿಸುತ್ತದೆ. ಮಾರಾಟಕ್ಕಿರುವ ಮಿಗುತೆಯನ್ನು ಹೊಂದಿರುವ ಭತ್ತ

ಬೆಳೆಯುವ ರೈತರ ಸಂಖ್ಯೆ ೧೦ (ಶೇ. ೪೩.೪೮) ಇದ್ದರೆ ೧೦೦ಕ್ಕೆ ನೂರು ಕಬ್ಬು ಬೆಳೆಯುವ ರೈತರು 'ಮಿಗತೆ'ಯನ್ನು ಹೊಂದಿರುತ್ತಾರೆ.

ಬೇಡ ಸಮುದಾಯದ ರೈತರು ಕೃಷಿಯ ಹೊಸ ಕಾರ್ಯತಂತ್ರ (Modern Agricultural Technology)ವನ್ನು ಹೊಂದದೆ ಇರುವುದರಿಂದ, ತಮ್ಮ ವ್ಯವಸಾಯದಲ್ಲಿ ಯಂತ್ರಗಳ ಬಳಕೆಯನ್ನು ಮಾಡುತ್ತಿರುವುದಿಲ್ಲ. ಭೂಮಿಯನ್ನು ಹಸನು ಮಾಡಲು, ಬೀಜವನ್ನು ಭಿತ್ತಲು ಮತ್ತಿತ್ತರ ಕೃಷಿ ಕಾರ್ಯಾಚರಣೆಗಳನ್ನು ಎತ್ತುಗಳ ನೆರವಿನಿಂದಲೇ ಮಾಡುತ್ತಿದ್ದಾರೆ. ಆದಕಾರಣ, ಪ್ರತಿಯೊಬ್ಬ ರೈತ ಕೊನೆಯ ಪಕ್ಷ ಎರಡು ಎತ್ತುಗಳನ್ನು (ಒಂದು ಜೋಡಿ) ಹೊಂದಲೇ ಬೇಕಾಗುತ್ತದೆ. ಇಲ್ಲದಿದ್ದಲ್ಲಿ ಸಕಾಲದಲ್ಲಿ ಕೃಷಿ ಕಾರ್ಯಾಚರಣೆಗಳು ಪೂರ್ತಿಗೊಳ್ಳದೆ, ಪ್ರತಿ ಎಕರೆಯ ಉತ್ಪಾದಕತ್ವ ಕಡಿಮೆಯಾಗುತ್ತಾ ಹೋಗುತ್ತದೆ. ಅತಿ ಸಣ್ಣ ಪ್ರಮಾಣದ ಭೂ-ಹಿಡುವಳಿಗಳನ್ನು ಹೊಂದಿರುವ ರೈತರು ಶೇ. ೨೦.೮೧ರಷ್ಟು ಮಾತ್ರ ಎತ್ತುಗಳನ್ನು ಹೊಂದಿರುತ್ತಾರೆ. ಭೂ-ಹಿಡುವಳಿಗಳ ಗಾತ್ರ ಹೆಚ್ಚಿದಂತೆ, ಎತ್ತುಗಳನ್ನು ಹೊಂದಿರುವ ರೈತ ಕುಟುಂಬಗಳ ಪ್ರಮಾಣ ಹೆಚ್ಚುತ್ತಾ ಹೋಗುತ್ತದೆ. ದೊಡ್ಡ ಗಾತ್ರದ ಭೂ-ಹಿಡುವಳಿಗಳು ಉಳ್ಳ ರೈತರಲ್ಲಿ ಶೇ. ೨೫ ರಷ್ಟು ರೈತರು ಒಂದಕ್ಕಿಂತಲೂ ಹೆಚ್ಚು ಜೋಡಿ (Pair) ಎತ್ತುಗಳನ್ನು ಉಳ್ಳವರಾಗಿದ್ದಾರೆ. ಅರೆ ಮಧ್ಯಮ ರೈತರು ಯಾರು ಎತ್ತುಗಳನ್ನು ಹೊಂದಿರುವುದಿಲ್ಲ. ಅತಿ ಸಣ್ಣ ಗಾತ್ರದ ಭೂ-ಹಿಡುವಳಿಗಳನ್ನು ಹೊಂದಿರುವ ರೈತರು ಶೇ. ೦.೪೫ (ಅಥವಾ ಒಂದಕ್ಕಿಂತ ಕಡಿಮೆ) ಎತ್ತುಗಳನ್ನು ಪಡೆದಿದ್ದಾರೆ. ಎತ್ತುಗಳಲ್ಲದೆ, ರೈತರು ಇನ್ನಿತರ ಅವಶ್ಯಕ ಉಪಕರಣಗಳನ್ನು ಹೊಂದಿದ್ದಾರೆ.

ರೈತರು ಭೂಮಿಯಿಂದ ಬೆಳೆಯನ್ನು ತೆಗೆಯುವಲ್ಲಿ ಹಲವಾರು ಉಪಕರಣಗಳನ್ನು ಬಳಸಬೇಕಾಗುತ್ತದೆ. ಬೇಡರ ವ್ಯವಸಾಯವು ಖುಷ್ಕಿ ವ್ಯವಸಾಯ ಪದ್ಧತಿಯವಾಗಿರುವುದರಿಂದ ಈ ರೈತರು ಹೊಂದಿರುವ ಕೃಷಿಯ ಉಪಕರಣಗಳು ಸರಳ ಮತ್ತು ಕಡಿಮೆ ಬೆಳೆಯುಳ್ಳದಾಗಿದೆ. ನೀರಾವರಿ ವ್ಯವಸಾಯ ಮಾಡುವ ರೈತರು ಪಂಪ್‌ಸೆಟ್‌ಗಳನ್ನು, ಟ್ರಾಕ್ಟರನ್ನು, ಎತ್ತಿನ ಬಂಡಿಗಳನ್ನು ಬಿತ್ತನೆ ಉಪಕರಣಗಳನ್ನ ಮತ್ತು ಎಣ್ಣೆ ಹೊಡೆಯುವ ಯಂತ್ರಗಳನ್ನು ಉಪಯೋಗ ಮಾಡುತ್ತಾರೆ. ಈ ಉಪಕರಣಗಳ ಬೆಲೆ ಹೆಚ್ಚಿನದಾಗಿರುತ್ತದೆ.

ನೀರಾವರಿ ಮತ್ತು ಒಣ ಭೂಮಿಯನ್ನು ಉಳ್ಳುವವರು ಕೆಲವು ಸಾಮಾನ್ಯ (General) ಉಪಕರಣಗಳಾದ, ನೇಗಿಲು, ಕೊಡಲಿ, ಗುದ್ದಲಿ, ಕುರುಪಿ, ಕುಡಗೀಲ ಮತ್ತು ಹಗ್ಗಗಳನ್ನು ಹೆಚ್ಚಾಗಿ ಉಪಯೋಗಿಸುತ್ತಾರೆ. ಇವುಗಳು ಸರಳವಾಗಿರುವುದಲ್ಲದೆ, ಕಡಿಮೆ ಬೆಳೆಲೆಯುಳ್ಳದಾಗಿವೆ. ಬೇಡರು ಉಪಯೋಗಿಸುತ್ತಿರುವ ನೇಗಿಲುಗಳು ೬೨೫ ಇವೆ, ಭಿತ್ತನೆಯ ಉಪಕರಣಗಳು ೨೦೦ ಇವೆ; ಡಸ್ಟರ್ಸ್‌ಗಳು ೨೦೧ ಇವೆ; ಕುರುಪಿ, ಹಗ್ಗ, ಗುದ್ದಿಲಿ ಮತ್ತು ಕುಡಗಿಲುಗಳ ಸಂಖ್ಯೆ ಕ್ರಮವಾಗಿ ೧೦೧, ೭೦೦, ೬೦೦ ಮತ್ತು

೪೯೧ ಇವೆ. ಬೇಡ ರೈತರು ಶ್ರೀಮಂತ ರೈತರಿಲ್ಲದ ಕಾರಣ, ಅವರಲ್ಲಿ ಕೇವಲ ಒಂದೇ ಒಂದು ಟ್ರಾಕ್ಟರ್ ಇದೆ. ಈ ಉಪಕರಣ ಹೆಚ್ಚಿನ ಬೆಲೆಯದು, ಇದನ್ನು ಕೆಲವೇ ಕೆಲವು ದೊಡ್ಡ ಪ್ರಮಾಣದ ರೈತರು ಹೊಂದುವದು ಸಾಧ್ಯ. ಉದಾಹರಣೆಗೆ ಒಟ್ಟು ದೊಡ್ಡ ಪ್ರಮಾಣದ ರೈತರ ಸಂಖ್ಯೆ ಎಂಟಿದ್ದರೆ ಅವರಲ್ಲಿನ ಟ್ರಾಕ್ಟರ್ ಸಂಖ್ಯೆ ಒಂದಿದೆ. ಬ್ಯಾಂಕುಗಳು ಮತ್ತು ಸಹಕಾರಿ ಪತ್ತಿನ ಸಂಸ್ಥೆಗಳು ಪಂಪಸೆಟ್ ಖರೀದಿಗೆ ಸಹಾಯ ಮಾಡುತ್ತಿರುವುದರಿಂದ ಇವುಗಳ ಸಂಖ್ಯೆ ೧೫ ಆಗಿದೆ.

ಇತರ ಮೇಲ್ಜಾತಿಯ ರೈತರಂತೆ, ಬೇಡ ರೈತರು ಶ್ರೀಮಂತರಾಗಿವುದಿಲ್ಲ. ಆದರೆ, ನಮ್ಮ ಅಧ್ಯಯನವು ರೈತರನಲ್ಲದೆ, ಸರಕಾರಿ ನೌಕರರು, ವ್ಯಾಪಾರಿಗಳು ಮುಂತಾದವರನ್ನು ಒಳಗೊಂಡಿರುವುದರಿಂದ ಇವರ ಮನೆಗಳಲ್ಲಿ ಗ್ರಾಹಕರ ಬಾಳಿಕೆ ಬರುವ ವಸ್ತುಗಳಾದ ಟಿ.ವಿ. ೭೬; ಟೇಪ ರಿಕಾರ್ಡರ್ ೧೧೮; ರೇಡಿಯೋ ೧೧೨; ಇವೇ ಮುಂತಾದವುಗಳನ್ನು ಉಪಯೋಗಿಸಲಾಗುತ್ತದೆ. ಇದಲ್ಲದೆ, ವಿಲಾಸೀಕರ ವಸ್ತುಗಳಾದ ಶೀತಕಯಂತ್ರ ೨೧ ಮತ್ತು ವಾಸಿಂಗ್ ಮಸೀನ್ ಒಂದಿರುತ್ತದೆ.

ರೈತರು ಸಾಹುಕಾರರಿಂದ ಚಕ್ರಬಡ್ಡಿಯ ಸಾಲವನ್ನು ಪಡೆಯುತ್ತಾರೆ. ಸಾಲವು, ಚಕ್ರಬಡ್ಡಿಯ ಪ್ರಮಾಣ ಹೆಚ್ಚಾಗಿ ವಂಶ ಪಾರಂಪರೆಯಾಗಿ ಮುಂದುವರೆಯುತ್ತದೆ. ಕೆಲವು ಬೇಡ ರೈತರು ಸಾಂಸ್ಥಿಕ (Institutional) ಮೂಲಗಳಿಂದ ಸಾಲವನ್ನು ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ. ಬ್ಯಾಂಕುಗಳಿಂದ ಎಲ್ಲ ಗಾತ್ರದ ರೈತರು ಸಾಲವನ್ನು ಪಡೆದಿರುತ್ತಾರೆ. ಉದಾಹರಣೆಗೆ ದೊಡ್ಡ ಗಾತ್ರದ ಭೂ-ಹಿಡುವಳಿಗಳ ರೈತರು ಶೇ. ೫೦ ರಷ್ಟು ಸಾಲ ಪಡೆದರೆ, ಅತಿ ಸಣ್ಣ ಗಾತ್ರದ ಭೂ-ಹಿಡುವಳಿಗಳನ್ನು ಹೊಂದಿರುವ ರೈತರು ಅತಿ ಕಡಿಮೆ ಪ್ರಮಾಣದಲ್ಲಿ (ಶೇ. ೨೦.೮೧) ಸಾಲ ಪಡೆದಿರುತ್ತಾರೆ. ಒಟ್ಟಿನಲ್ಲಿ ಹೇಳುವುದಾದರೆ, ಬೇಡ ರೈತರ ಕೃಷಿ ಅರ್ಥವ್ಯವಸ್ಥೆ (ಖಳ್ಢಟ ಉಭ್ಟಟಿಟಣ) ಒಂದು ಆರ್ಥಿಕವಾಗಿ ಹಿಂದುಳಿದ ಅರ್ಥವ್ಯವಸ್ಥೆಯಾಗಿದೆ.

ಕಡಿಮೆ ಕೂಲಿಯಿಂದಾಗಿ ಕೃಷಿ ಕಾರ್ಮಿಕರ ಜೀವನ ನಿರ್ವಹಣೆಗೆ ಇವರು ಗಳಿಸುವ ಆದಾಯ ಸಾಕಾಗುತ್ತಿಲ್ಲ. ಇದಲ್ಲದೆ. ವಿಶ್ರಾಂತಿರಹಿತ ದುಡಿಮೆ ಮತ್ತು ಅಪೌಷ್ಠಿಕವಾದ ಅಲ್ಪ ಆಹಾರದಿಂದ ಇವರು ಅನಾರೋಗ್ಯದಿಂದ ಬಳಲುತ್ತಿದ್ದಾರೆ. ಆದುದರಿಂದ, ಜೀವನ ನಿರ್ವಹಣೆಗಾಗಿ ಶ್ರೀಮಂತರಿಂದ ಸಾಲವನ್ನು ಪಡೆದು ಕೃಷಿ ಕಾರ್ಮಿಕರು ಋಣಭಾರದಿಂದ ತತ್ತರಿಸುತ್ತಿದ್ದಾರೆ.

ಕುರಿ ಮತ್ತು ಮೇಕೆ ಸಾಕಾಣಿಕೆಯಿಂದ ಬೇಡರು ಹಲವಾರು ರೀತಿಯಲ್ಲಿ ಆದಾಯವನ್ನು ಪಡೆದಿದ್ದಾರೆ ಮೊದಲನೆಯದಾಗಿ, ತಮ್ಮ ಕುರಿ ಮತ್ತು ಮೇಕೆಗಳನ್ನು ಬೇರೆಯವರ ಹೊಲದ ಫಲವತ್ತತೆಯನ್ನು ಹೆಚ್ಚಿಸಲು ಗೊತ್ತು ಮಾಡಿದ ಹೊಲದಲ್ಲಿ ಸಂಜೆಯ ಹೊತ್ತಿಗೆ ಕುರಿ ಮತ್ತು ಮೇಕೆಗಳನ್ನು ಕೂಡಿ ಹಾಕುತ್ತಾರೆ. ಈ ಕುರಿ ಮತ್ತು ಮೇಕೆಗಳು ಒಂದು ರಾತ್ರಿ ಅಂತಹ ಹೊಲದಲ್ಲಿಯೇ ತಂಗಿಸುವದರಿಂದ, ಆ ಹೊಲದ ಮಾಲಿಕರಿಂದ

ಸ್ವಲ್ಪ ಹಣವನ್ನು ಅವರು ಹಿಂದೆ ಪಡೆಯುತ್ತಿದ್ದರು. ಈಗ ಇದು ನಿಂತು ಹೋಗಿದೆ ಎರಡನೆಯ ದಾರಿ ಸಾಕಿದ ಕುರಿ ಮತ್ತು ಮೇಕೆಗಳ ಮಾರಾಟಗಳಿಂದ ಸ್ವಲ್ಪ ಆದಾಯ ಬರುತ್ತದೆ. ಈ ಆದಾಯದ ಮೊತ್ತದ ಬಗೆಗೆ ಅವರಲ್ಲಿ ಲಿಖಿತ (Records) ಮಾಹಿತಿ ಇಟ್ಟಿರುವುದಿಲ್ಲ.

ಬೇಡರು ಪ್ರಮುಖವಾಗಿ ಬೇಸಾಯದಿಂದ ಮತ್ತು ಸ್ವಲ್ಪ ಮಟ್ಟಿಗೆ ಉಪಕಸುಬುಗಳಾದ ಕುರಿ ಸಾಕಾಣಿಕೆ, ಹೈನುಗಾರಿಕೆ ಮತ್ತು ಕೋಳಿ ಸಾಕಾಣಿಕೆ ಮುಂತಾದವುಗಳಿಂದ ಆದಾಯವನ್ನು ಪಡೆಯುತ್ತಿದ್ದಾರೆ. ಇವರಲ್ಲಿ ೪೬ ಜನರಿಗೆ ಸರಕಾರಿ ನೌಕರಿ ಇರುತ್ತದೆ ಹಾಗೂ ಈ ೪೬ ಕುಟುಂಬಗಳಿಗೆ ಭೂಮಿಯೂ ಸಹ ಇದೆ. ರೈತರಲ್ಲಿ ನೀರಾವರಿ ಬೇಸಾಯ ಕಡಿಮೆ ಪ್ರಮಾಣದಾಗಿದೆ. ರೈತರ ಭೂಮಿಯ ಗುಣಮಟ್ಟ ಸಹ ಕಡಿಮೆ ದರ್ಜೆಯದಾಗಿದೆ. ಆದ್ದರಿಂದ ಮೊದಲೂ ಐದು ಆದಾಯ ಗುಂಪು ವರ್ಗೀಕರಣದಲ್ಲಿಯೇ ಶೇ. ೭೪.೩೬ ಜನ ರೈತರು, ಭೂಮಿಯಿಲ್ಲದ ಕೃಷಿ ಕಾರ್ಮಿಕರು ಇದ್ದಾರೆ. ರೈತರಲ್ಲಿ ಎಲ್ಲ ಅತಿ ಸಣ್ಣ ರೈತರು ಮತ್ತು ಸಣ್ಣ ಪ್ರಮಾಣದ ರೈತರೆಲ್ಲರು ಅಂದರೆ, ಕೃಷಿ ಕಾರ್ಮಿಕರೆಲ್ಲರೂ ಈ ಆದಾಯದ ಗುಂಪುಗಳಲ್ಲಿಯೇ ಬರುತ್ತಾರೆ.

ಮೊದಲ ಐದು ಆದಾಯದ ಗುಂಪುಗಳು ಬಹಳ ಕಡಿಮೆ ಪ್ರಮಾಣದ ವಾರ್ಷಿಕ ಆದಾಯವನ್ನು ಹೊಂದಿರುತ್ತವೆ ಎಂಬುದನ್ನು ಬೇರೆ ಹೇಳಬೇಕಾಗಿಲ್ಲ. ಉದಾಹರಣೆಗೆ ಮೊದಲನೆಯ ಆದಾಯದ ಗುಂಪು ರೂ. ೧,೦೦೦ಕ್ಕಿಂತ ಕಡಿಮೆ ಆದಾಯವನ್ನು ಹೊಂದಿದ್ದರೆ, ಕೊನೆಯ ಐದನೆಯ ಆದಾಯದ ಗುಂಪು ರೂ. ೫,೦೦೧ ರಿಂದ ೭,೦೦೦ಕ್ಕೆ ಮಾತ್ರ ಮಿತಿಗೊಂಡಿದೆ. ಇನ್ನೊಂದು ಅರ್ಥದಲ್ಲಿ ಹೇಳುವುದಾದರೆ, ಶೇ. ೭೩.೯೧ ಭೂ-ರಹಿತ ಕೃಷಿ ಕಾರ್ಮಿಕರ ವಾರ್ಷಿಕ ಆದಾಯ ರೂ. ೧,೦೦೦ಕ್ಕಿಂತಲೂ ಕಡಿಮೆಯಿದೆ ಇನ್ನಿತರ ಉಳಿದ ಕೃಷಿ ಕಾರ್ಮಿಕರ ವಾರ್ಷಿಕ ಆದಾಯ ರೂ. ೧೦೦೧ ರಿಂದ ೨,೦೦೦ ರಷ್ಟು ಮಾತ್ರ ಇದೆ. ೨೭೧ ಅತಿ ಸಣ್ಣ ರೈತರ ವಾರ್ಷಿಕ ಆದಾಯ ರೂ. ೧೦೦೧ ರಿಂದ ೫,೦೦೦ದ ವರೆಗೆ ಮಾತ್ರ ಸೀಮಿತವಾಗಿದೆ. ಇವರು ಎರಡು, ಮೂರು ಮತ್ತು ನಾಲ್ಕನೆಯ ಆದಾಯದ ಗುಂಪುಗಳಲ್ಲಿ ಬರುತ್ತಾರೆ. ಎಲ್ಲ ೩೮೬ ಸಣ್ಣ ರೈತರ ವಾರ್ಷಿಕ ಆದಾಯ ರೂ. ೫೦೦೧ ರಿಂದ ರೂ. ೭,೦೦೦ದ ವರೆಗಿನ ಐದನೆಯ ವರ್ಗೀಕರಣದ ಆದಾಯದಲ್ಲಿದೆ.

೧೬೫ ಅರೆ ಮಧ್ಯಮ ಗಾತ್ರ ಭೂಮಿಯುಳ್ಳ ರೈತರ ವಾರ್ಷಿಕ ಆದಾಯ ೬ ಮತ್ತು ೭ನೇ ಆದಾಯದ ಗುಂಪುಗಳಿಗೆ ಸೀಮಿತವಾಗಿದೆ. ೬೧ ಮಧ್ಯಮ ಗಾತ್ರದ ರೈತರ ವಾರ್ಷಿಕ ಆದಾಯ ಏಳರಿಂದ ೧೧ನೆಯ ಗುಂಪಿನ ವರ್ಗಿಕರಣಕ್ಕೆ ಅಂದರೆ, ರೂ. ೧೦,೦೦೧ ರಿಂದ ರೂ. ೫೦,೦೦೦ದ ವರೆಗಿನ ಆದಾಯಗಳಿಗೆ ಸೀಮಿತವಾಗಿದೆ. ೮ ದೊಡ್ಡ ಪ್ರಮಾಣದ ರೈತರ ವಾರ್ಷಿಕ ಆದಾಯ ೧೨ ಮತ್ತು ೧೩ನೆಯ

ಗುಂಪಿನ ಆದಾಯಕ್ಕೆ ಸಮವಿದೆ. ಕೇವಲ ಒಬ್ಬ ದೊಡ್ಡ ಪ್ರಮಾಣದ ರೈತ ೧೪ನೆಯ ಆದಾಯದ ಗುಂಪಾದ ರೂ. ೧,೦೦,೦೦೧ ರಿಂದ ೧,೫೦,೦೦೦ದ ವರೆಗಿನ ಆದಾಯದಲ್ಲಿ ಬಂದಿದ್ದಾರೆ.

೪೬ ಸರಕಾರಿ ನೌಕರರು ಇದ್ದಾರೆ. ಇದರಲ್ಲಿ ಪೋಲಿಸರು-೬; ಬಿಎಸ್‌ಎಫ್-೫; ಹೈಸ್ಕೂಲ ಶಿಕ್ಷಕರು ೧; ಪ್ರಾಥಮಿಕ ಶಿಕ್ಷಕರು ೩; ಕಾಲೇಜು ಉಪನ್ಯಾಸಕ ೧; ಮೊದಲನೆ ದರ್ಜೆಯ ಅಧಿಕಾರಿ ೧; ಅಭಿಯಂತರ ೧; ಮತ್ತು ಆರೋಗ್ಯ ಆಸ್ಪತ್ರೆಯಲ್ಲಿ ಮೇಲ್ವಿಚಾರಕರಾಗಿ ಒಬ್ಬರು ಕೆಲಸ ಮಾಡುತ್ತಿದ್ದಾರೆ. ಇವರಲ್ಲಿನ ಪೋಲಿಸರು, ಪ್ರಾಥಮಿಕ ಶಿಕ್ಷಕರು ಐದನೆಯ ಆದಾಯದ ಗುಂಪಿಗೆ (ರೂ. ೫,೦೦೧ ರಿಂದ ೭,೦೦೦) ಸೇರಿದ್ದಾರೆ.

ಇಂಜನೀಯರ ಮತ್ತು ಪ್ರಥಮ ದರ್ಜೆಯ ನೌಕರರು ವಾಸಿಸಲು ಮನೆಯನ್ನು ಹೊಂದಿರುತ್ತಾರೆ. ಸುಖಕರ ಮತ್ತು ವಿಲಾಸಿ ವಸ್ತುಗಳಿಗಾಗಿ ಹಣವನ್ನು ಖರ್ಚು ಮಾಡುವ ಸಾಮರ್ಥ್ಯವನ್ನು ಹೊಂದಿರುತ್ತಾರೆ. ಅಂದ ಮೇಲೆ , ಬಹುತೇಕ ಇವರೆಲ್ಲರನ್ನು ಮೇಲಿನ ಮಧ್ಯಮ ವರ್ಗ (Upper Middle Income Category) ಕ್ಕೆ ಸೇರಿದವರಾಗಿದ್ದಾರೆ. ಇವರು ನಮಗೆ ಒಂದು ತರಹದಲ್ಲಿ ಮೊದಲನೆಯ ವರ್ಗದ ಜನ.

ಎರಡನೆಯ ವರ್ಗದಲ್ಲಿ, ದ್ವಿತೀಯ ಮತ್ತು ತೃತೀಯ ದರ್ಜೆಯ ನೌಕರರು ಬರುತ್ತಾರೆ. ಇದರ ಜೊತೆಗೆ ಕೆಲವು ಮಧ್ಯಮ ಮತ್ತು ದೊಡ್ಡ ಗಾತ್ರದ ಹಿಡುವಳಿಗಳ ಮಾಲಿಕರಾದ ಜನರು ಬರುತ್ತಾರೆ. ಇವರುಗಳಿಗೆ ನಾವು ಮಧ್ಯಮ ವರ್ಗದವರೆಂದು ಕರೆಯುತ್ತೇವೆ.

ಮೂರನೆಯ ವರ್ಗದಲ್ಲಿ ನಾಲ್ಕನೆಯ ದರ್ಜೆಯ ನೌಕರರು ಸಣ್ಣ ರೈತರು ಮತ್ತು ಅತೀ ಸಣ್ಣ ರೈತರು ಬರುವರು, ಇವರನ್ನು ನಾವು ಕೆಳಮಧ್ಯಮ ವರ್ಗದವರೆಂದು ಕರೆಯುತ್ತೇವೆ.

ಎಲ್ಲ ಭೂ-ರಹಿತ ಕೂಲಿ ಕಾರ್ಮಿಕರು, ನಿರ್ಗತಿಕರು, ವಸತಿ ಹೀನರು ಮುಂತಾದವರು ಕಡುಬಡವರಾದ ನಾಲ್ಕನೆಯ ವರ್ಗದಲ್ಲಿ ಬರುತ್ತಾರೆ. ಇವರುಗಳು ಆದಾಯ ಬಡತನದ ರೇಖೆಯ ಕೆಳಗಡೆಯದಾಗಿರುತ್ತದೆ. "ವಿವಿಧ ಗಾತ್ರಗಳ ಭೂ-ಹಿಡುವಳಿಗಳನ್ನುಳ್ಳ ರೈತರಲ್ಲಿ ದೊಡ್ಡ ಗಾತ್ರದ ಭೂ-ಹಿಡುವಳಿಗಳ ರೈತರನ್ನು ಹೊರತುಪಡಿಸಿ, ಉಳಿದ ಭೂ-ಹಿಡುವಳಿಗಳ ರೈತರೆಲ್ಲರ ಆರ್ಥಿಕ ಪರಿಸ್ಥಿತಿ ಸರಿಯಾಗಿಲ್ಲ" ಎಂಬ ನಮ್ಮ ಊಹೆಯನ್ನು ನಾವು ಇಲ್ಲಿ ರುಜುವಾತು ಮಾಡಿದ್ದೇವೆ.

ಬೇಡ ಸಮುದಾಯದಲ್ಲಿ ಯಾವ ವ್ಯಕ್ತಿಯು ಒಂದು ಚಿಕ್ಕ ಉದ್ದಿಮೆಯನ್ನು ಪ್ರಾರಂಭಿಸಿಲ್ಲ. ವಿಸ್ತೃತವಾಗಿ ಹೇಳುವುದಾದರೆ, ಜಿಲ್ಲೆಯಲ್ಲಿ ಎಣ್ಣೆ ಮಿಲ್‌ಗಳು, ದಾಲ್ ಮಿಲ್‌ಗಳು, ಇಂಜೀನಿಯರಿಂಗ್ ಕಾಮಗಾರಿಗಳಾದ ಸಣ್ಣ ಪ್ರಮಾಣದ ಕೈಗಾರಿಕೆಗಳು, ಹತ್ತಿ ಬೀಜ ಬೇರ್ಪಡಿಸುವ ಮಿಲ್‌ಗಳು, ಪ್ಲಾಸ್ಟಿಕ್ ಕೈಗಾರಿಕೆ, ಸಾಬೂನು ತಯಾರಿಕೆ, ಲೋಹದ ಪಾತ್ರೆಗಳ ತಯಾರಿಕೆ ಬಿದರಿ ಉದ್ದಿಮೆ, ಐಸಕ್ರಿಂ ತಯಾರಿಕೆ,

ಸಕ್ಕರೆ ಕಾರ್ಖಾನೆಗಳು ಇವೆ, ಈ ಎಲ್ಲ ಘಟಕಗಳ ಮಾಲಿಕರು ಮೇಲ್ಜಾತಿಗೆ ಸೇರಿದವರಾಗಿದ್ದಾರೆ. ಇಲ್ಲಿನ ಕಾರ್ಮಿಕರೂ ಸಹ ಬೇಡ ಸಮುದಾಯದವರಿಲ್ಲ. ಬೀದರ ಜಿಲ್ಲೆಯ ಬೇಡರು ವಿವಿಧ ಕಾರ್ಖಾನೆಗಳಲ್ಲಿ ಕಾರ್ಮಿಕರಾಗಿ ದುಡಿಯುತ್ತಿಲ್ಲ. ಕೃಷಿ ಮತ್ತು ಕೃಷಿಗೆ ಸಂಬಂಧಿಸಿದ ಕಸುಬುಗಳಲ್ಲಿ ಈ ಜನರು ದುಡಿದು ಕಡಿಮೆ ಆದಾಯ ಪಡೆಯುತ್ತಿದ್ದಾರೆ. ಇವರು ಶ್ರೀಮಂತರಾಗುವುದು ಸಾಧ್ಯವಿಲ್ಲ. ಒಟ್ಟಿನಲ್ಲಿ ಬೇಡರಿಗೆ ಮತ್ತು ಉದ್ದಿಮೈ ರಂಗಕ್ಕೆ ಎಣ್ಣೆ-ಸಿಗೆಕಾಯಿ ಸಂಬಂಧವಿದೆಯೆಂದರೆ ಅತಿಶಯೋಕ್ತಿಯಾಗಲಾರದು.

ಉದ್ದಿಮೆಯಂತೆ, ತೃತೀಯ ರಂಗದಲ್ಲಿ ವ್ಯಕ್ತಿಗಳು (ಶಿಕ್ಷಣ ಮತ್ತು ನೈಪುಣ್ಯತೆಯನ್ನು ಹೊಂದಿ) ಭಾಗವಹಿಸಿದಾಗ, ಅವರ ತಲಾ ಆದಾಯ ಬಹಳಷ್ಟು ಅಧಿಕವಾಗುತ್ತದೆ. ಬೇಡ ಸಮುದಾಯದ ವ್ಯಕ್ತಿಗಳು ತೃತೀಯ ರಂಗದಲ್ಲಿ ಭಾಗವಹಿಸುವುದು ಇವರಿಂದ ಸಾಧ್ಯವಾಗಿಲ್ಲ. ನಮ್ಮ ಎರಡನೆಯ ಊಹೆಯಾದ 'ಅರ್ಥವ್ಯವಸ್ಥೆಯ ಔದ್ಯಮಿಕ ಮತ್ತು ತೃತೀಯ ರಂಗಗಳಲ್ಲಿ ಬೇಡರು ಭಾಗವಹಿಸುತ್ತಿಲ್ಲ' ಎಂಬುದನ್ನು ರುಜುವಾತು ಪಡಿಸಲಾಗಿದೆ.

ಭೂಮಿಯ ಗಾತ್ರ ಕಡಿಮೆಯಾದಂತೆ ರೈತರ ಆದಾಯವು ಕಡಿಮೆಯಾಗುತ್ತಾ ಹೋಗುತ್ತದೆ. ಮೇಲಾಗಿ ಸಾಗುವಳಿ ಭೂಮಿಗೆ ನೀರಾವರಿಯ ಸೌಲಭ್ಯ ಅಲ್ಪಪ್ರಮಾಣದಲ್ಲಿ ಇರುವುದರಿಂದ, ಭೂಮಿಯ ಗಾತ್ರ ಚಿಕ್ಕದಿದ್ದರೂ, ಹೆಚ್ಚಿನ ಆದಾಯವನ್ನು ಪಡೆಯಲು ರೈತರಿಗೆ ಸಾಧ್ಯವಾಗಿಲ್ಲ. ೧೦೦ಕ್ಕೆ ೧೦೦ರಷ್ಟು ಅತಿ ಸಣ್ಣ ಭೂ-ಹಿಡುವಳಿಗಳುಳ್ಳ ರೈತರು ಮತ್ತು ಸಣ್ಣ ಗಾತ್ರದ ಭೂ-ಹಿಡುವಳಿಗಳ ಯಜಮಾನರಾದ ರೈತರು ಬಡತನದ ರೇಖೆಯ ಕೆಳಗಡೆಯೇ ಇದ್ದಾರೆ. ಅಂದರೆ, ಇವರ ಆದಾಯ ವರ್ಷಕ್ಕೆ ೧,೦೦೦ ರೂ. ಕ್ಕಿಂತಲೂ ಕಡಿಮೆಯಿದೆ. ಮಧ್ಯಮ ಗಾತ್ರದ ಭೂ-ಹಿಡುವಳಿಗಳನ್ನುಳ್ಳ ರೈತರು ಬಡತನದ ರೇಖೆಯ ಕೆಳಗಡೆ ಇರದಿದ್ದರೂ, ಅವರ ವಾರ್ಷಿಕ ಆದಾಯ ರೂ. ೨೦,೦೦೦ ಕ್ಕಿಂತಲೂ ಕಡಿಮೆಯಿದೆ. ದೊಡ್ಡ ಗಾತ್ರದ ಭೂ-ಹಿಡುವಳಿಗಳ ಯಜಮಾನರು ಕಡಿಮೆ ಮಧ್ಯಮ ಆದಾಯದ ಗುಂಪಿನಲ್ಲಿ (Low Middle Income Group) ಬರುತ್ತಾರೆ. ಉಳಿದ ಎಲ್ಲ ಬಗೆಯ ರೈತರಿಗಿಂತ ಇವರ ಆರ್ಥಿಕ ಸ್ಥಿತಿ ಉತ್ತಮವಾಗಿದ್ದರೂ ಈ ಗಾತ್ರದ ರೈತರ ಕುಟುಂಬಗಳು ೮ ಇವೆ. ಬೇಡ ರೈತರ ಭೂಮಿ 'ಬಂಜರು' ಆಗಿರುವುದರಿಂದ, ಅವರಿಗೆ ನೀರಾವರಿ ಸೌಲಭ್ಯ ಇಲ್ಲದಿರುವುದರಿಂದ, ಅವರು ಹೆಚ್ಚು-ಕಡಿಮೆ ಬಡವರಾಗಿದ್ದರೆ ಎಂದರೆ ತಪ್ಪೆನ್ನಿಲ್ಲ. ಭಾರತದ ಕೃಷಿ ಕ್ಷೇತ್ರದಲ್ಲಿ ಹೆಸರುವಾಸಿಯಾಗಿರುವ ಪಂಜಾಬ ಮತ್ತು ಹರಿಯಾಣ ರಾಜ್ಯಗಳಲ್ಲಿ ಸಣ್ಣ ಗಾತ್ರದ ಭೂ-ಹಿಡುವಳಿಗಳುಳ್ಳ ರೈತರು ಸಹ ಶ್ರೀಮಂತರಾಗಿದ್ದಾರೆ. ಇದಕ್ಕೆ ವ್ಯತಿರಿಕ್ತವಾಗಿ ಇಂತಹ ಭಾಗ್ಯ ಬೀದರ ಜಿಲ್ಲೆಯ ದೊಡ್ಡ ಗಾತ್ರದ ಭೂ-ಹಿಡುವಳಿಗಳುಳ್ಳ ಬೇಡ ರೈತರಿಗೆ ಲಭ್ಯವಾಗಿಲ್ಲ.

ಅತಿ ಸಣ್ಣ ಮತ್ತು ಸಣ್ಣ ಗಾತ್ರದ ರೈತರು ತಮ್ಮ ಆದಾಯದ ಸಿಂಹಪಾಲನ್ನು ಅಂದರೆ, (ಶೇ. ೮೧ ರಿಂದ ಶೇ. ೭೮) ಆಹಾರದ ಮೇಲೆ ಖರ್ಚು ಮಾಡುತ್ತಾರೆ. ಕಡಿಮೆ ಆದಾಯವಿದ್ದಾಗ ಈ ರೀತಿ ಮಾಡುವುದು ಸಹಜ ಮತ್ತು ಇದು ಇವರ ಬಡತನದ ಲಕ್ಷಣವಾಗಿದೆ. ಮಾಸಿಕ ಆದಾಯ ಹೆಚ್ಚಿದಂತೆಲ್ಲ ಆಹಾರದ ಮೇಲಿನ ಶೇಕಡಾವಾರು ಖರ್ಚು ಕಡಿಮೆಯಾಗುತ್ತಾ ಹೋಗುತ್ತದೆ. ಕಡುಬಡವರಾಗಿದ್ದರೂ ಬೇಡ ರೈತರು ಕುಡಿತದ ಮೇಲಿನ ದುಂದು ವೆಚ್ಚವನ್ನು ತುಲನಾತ್ಮಕವಾಗಿ ಕಡಿಮೆ ಮಾಡಿರುವುದಿಲ್ಲ. ಉದಾಹರಣೆಗೆ, ಆದಾಯದ ಹೆಚ್ಚಳಕ್ಕೆ ಮತ್ತು ಕುಡಿತದ ಮೇಲಿನ ಶೇಕಡಾವಾರು ವೆಚ್ಚಕ್ಕೆ ವಿರುದ್ಧದ (Inverse) ಸಂಬಂಧವಿರುತ್ತದೆ. ಅತಿ ಸಣ್ಣ ಮತ್ತು ಅರೆ ಮಧ್ಯಮ ಭೂ-ಹಿಡುವಳಿಗಳನ್ನುಳ್ಳ ರೈತರು ಉಳಿತಾಯವನ್ನು ಮಾಡಿರುವುದಿಲ್ಲ. ಅವರ ಮಾಸಿಕ ಆದಾಯ ಕಡಿಮೆಯಾಗಿರುವುದೇ ಇದಕ್ಕೆ ಪ್ರಮುಖ ಕಾರಣವಾಗಿದೆ. ಮಧ್ಯಮ ಗಾತ್ರದ ಭೂ-ಹಿಡುವಳಿವು ರೈತರಲ್ಲಿ ಉಳಿತಾಯದ ಪ್ರಮಾಣ ಕೇವಲ ಶೇ. ೨ ಇದ್ದರೆ, ಇದರ ಪ್ರಮಾಣ ದ್ವಿಗುಣವಾಗಿರುತ್ತದೆ. ದೊಡ್ಡ ಗಾತ್ರದ ವರ್ಗದಲ್ಲಿ ಬಡತನವು ಶಿಕ್ಷಣವನ್ನು ಅಲಕ್ಷ್ಯ ಮಾಡಲು ಒಂದು ಬಲವಾದ ಕಾರಣವಾದುದರಿಂದ, ದೊಡ್ಡ ವರ್ಗದ ರೈತರನ್ನು ಬಿಟ್ಟರೆ ಇತರ ವರ್ಗದವರೆಲ್ಲರೂ ಶೇ. ೫ ಮತ್ತು ಅದಕ್ಕಿಂತಲೂ ಕಡಿಮೆ ಹಣವನ್ನು ಶಿಕ್ಷಣಕ್ಕಾಗಿ ವೆಚ್ಚ ಮಾಡಿರುತ್ತಾರೆ. ಮೊದಲು ಆಹಾರ ಆ ಮೇಲೆ ಬಟ್ಟೆ ಎನ್ನುವುದೊಂದು ಸಹಜವಾದ ಮಾತು. ಆದುದರಿಂದ, ಆಹಾರದ ಮೇಲಿನ ಶೇಕಡಾವಾರು ವೆಚ್ಚ ಕಡಿಮೆಯಾದಂತೆ ಬಟ್ಟೆ ಮೇಲಿನ ಶೇಕಡಾವಾರು ವೆಚ್ಚ ಎಲ್ಲ ವರ್ಗದ ರೈತರಲ್ಲಿ ಹೆಚ್ಚಾಗುತ್ತಾ ಹೋಗಿದೆ.

ಬೇಡ ಕೃಷಿ ಮತ್ತು ಕೃಷಿಯೇತರು ಕಾರ್ಮಿಕರು ಬಡತನದ ರೇಖೆಯ ಕೆಳಗಡೆಯೇ ಬರುತ್ತಾರೆ. ಒಂದು ದೃಷ್ಟಿಯಲ್ಲಿ, ರೈತರಿಗಿಂತ ಇವರ ಆರ್ಥಿಕ ಪರಿಸ್ಥಿತಿ ಕೀಳು ಮಟ್ಟದಾಗಿದೆ. ಇವರ ಕಠಿಣ ಪರಿಶ್ರಮಕ್ಕೆ ತಕ್ಕ ಪ್ರತಿಫಲ ಕೂಲಿಯ ಮೊತ್ತದಲ್ಲಿ ಇರುವುದಿಲ್ಲ, ಕಠಿಣ ಪರಿಶ್ರಮದಿಂದುಂಟಾದ ಮೈ ನೋವನ್ನು ಸ್ವಲ್ಪ ಕಾಲ ಮರೆಯಲು ಕುಡಿತದ ಮೊರೆ ಹೋಗುವುದು ಒಂದು ಸಹಜವಾದ ಚಟವಾಗಿದೆ.

ಇತರರಿಗೆ ಹೋಲಿಸಿದಾಗ, ಸರಕಾರಿ ನೌಕರರ ವಾರ್ಷಿಕ ಆದಾಯ ಹೆಚ್ಚಿನ ಮಟ್ಟದಾಗಿರುವುದಲ್ಲದೆ, ಖಚಿತವಾದುದಾಗಿದೆ. ಶಾಲಾ ಶಿಕ್ಷಕರು, ಎರಡನೆ ದರ್ಜೆಯ ಗುಮಾಸ್ತರೂ ಸಹ ಬಡತನದ ರೇಖೆಯ ಮೇಲಿನ ಆದಾಯವನ್ನು ಹೊಂದಿರುತ್ತಾರೆ. ಇವರೆಲ್ಲರೂ ಆಹಾರ ಮತ್ತು ಬಟ್ಟೆಯ ಮೇಲೆ ಹೆಚ್ಚಿನ ಮೊತ್ತದ ಹಣ ಖರ್ಚು ಮಾಡುವುದಲ್ಲದೆ, ತಮ್ಮ ತಮ್ಮ ಕಚೇರಿಗೆ ಹೋಗಲು ಕನಿಷ್ಟ ಪಕ್ಷ ಬೈಸಿಕಲನ್ನು ಸಹ ಹೊಂದಿರುತ್ತಾರೆ. ಇವರೆಲ್ಲರೂ ಕಡ್ಡಾಯವಾಗಿ ಉಳಿತಾಯವನ್ನು ಸಹ ಜೀವ ವಿಮೆ, ಅಂಚೆ ಕಚೇರಿಯ ಆರ್‌ಡಿ ಮುಂತಾದವುಗಳ ರೂಪದಲ್ಲಿ ಮಾಡುತ್ತಿದ್ದಾರೆ. ಇವರ ಉಳಿತಾಯದ ಮೊತ್ತ

[illegible]

ಕಡಿಮೆಯಾಗಿದುದರಿಂದ ಮತ್ತು ಈ ಉಳಿತಾಯವನ್ನು ಮನೆ ಕಟ್ಟಲು, ಮಕ್ಕಳ ಮದುವೆ ನೆರವೇರಿಸಲು ವಿನಿಯೋಗ ಮಾಡುತ್ತಾರೆ. ಆದುದರಿಂದ ಇವರ ಉಳಿತಾಯ ಹೂಟಿ (Investment)ಯಲ್ಲಿ ಪರಿವರ್ತಿತವಾಗಿಲ್ಲ.

ಬೇಡ ರೈತರು ಹೆಚ್ಚಾಗಿ ಬೆಳೆ ಸಾಲವನ್ನು (Crop Loan) ತೆಗೆದುಕೊಂಡಿದ್ದಾರೆ. ಉದಾಹರಣೆಗೆ ದೊಡ್ಡ ಗಾತ್ರದ ರೈತರನ್ನು ಬಿಟ್ಟು ಇತರ ಎಲ್ಲ ಬಗೆಯ ರೈತರು ಶೇ. ೩೮.೪೬ ದಿಂದ ಶೇ. ೬೯.೫೬ ವರೆಗೆ ತೆಗೆದುಕೊಂಡ ಸಾಲವನ್ನು, ಬೆಳೆಗಳನ್ನು ಬೆಳೆಸುವಲ್ಲಿ ಅವಶ್ಯಕವಿರುವ ಬೀಜ, ರಸಗೊಬ್ಬರ ಇತ್ಯಾದಿಗಳನ್ನು ಕೊಳ್ಳಲು ಉಪಯೋಗಿಸಿರುತ್ತಾರೆ. ಅತಿಸಣ್ಣ ಮತ್ತು ಸಣ್ಣ ರೈತರು ಪಡೆದ ಸಾಲವನ್ನು ಮನೆ ಖರ್ಚಿಗಾಗಿ ಉಪಯೋಗಿಸಿದ್ದಾರೆ. ಬೇಡ ರೈತರ್ಯಾರೂ ಸಾಲವನ್ನು ಭೂಮಿಯನ್ನು ಕೊಳ್ಳುವುದಕ್ಕಾಗಿ ಉಪಯೋಗಿಸಿಲ್ಲ. ಕೇವಲ ಒಬ್ಬ ದೊಡ್ಡ ಗಾತ್ರದ ರೈತ ತಾನು ಪಡೆದ ಸಾಲವನ್ನು ಮನೆ ಕಟ್ಟಲು ಉಪಯೋಗಿಸಿಕೊಂಡಿದ್ದಾನೆ. ಒಟ್ಟಿನಲ್ಲಿ, ಸಾಲವನ್ನು ಉಪಯುಕ್ತವಾಗಿಯೇ ಬಳಸಲಾಗಿದೆ.

ರಾಜ್ಯ ಸರಕಾರ ಪರಿಶಿಷ್ಟ ಪಂಗಡದ ರೈತರ ಕೃಷಿಯ ಅಭಿವೃದ್ಧಿಗಾಗಿ ಹೆಚ್ಚು ಇಳುವರಿಗಾಗಿ ಬೀಜ, ರಸಾಯನಿಕ ಗೊಬ್ಬರ, ಕೃಷಿ ಉಪಕರಣಗಳು, ಸಸ್ಯ ಸಂರಕ್ಷಣ ಉಪಕರಣಗಳು, ಎತ್ತು ಗಾಡಿಗಳು, ನೀರಾವರಿ ಸೌಲಭ್ಯಕ್ಕಾಗಿ ತುಂತುರು ನೀರಾವರಿ ಘಟಕಗಳು ಮತ್ತು ಹನಿ ನೀರಾವರಿ ಸೆಟ್‌ಗಳು ನೀಡುವ ಯೋಜನೆಯನ್ನು ಹಾಕಿಕೊಂಡಿದೆ. ಈ ಯೋಜನೆಗಳನ್ನು ರಾಜ್ಯದ ಕೆಲವು ಜಿಲ್ಲೆಗಳಲ್ಲಿ ಅನುಷ್ಠಾನದಲ್ಲಿಯೂ ತಂದಿರುತ್ತದೆ. ಆದರೆ, ನಮ್ಮ ವಕ್ತೃಗಳ ಹೇಳಿಕೆಯ ಪ್ರಕಾರ, ಬೀದರ ಜಿಲ್ಲೆಯಲ್ಲಿ ಅನುಷ್ಠಾನದಲ್ಲಿ ತಂದಿರುವುದಿಲ್ಲ.

ಬೇಡ ರೈತರ ಹೊಲಗಳು ಕಡಿಮೆ ಫಲವತ್ತತೆಯ ಭೂಮಿ. ಆದುದರಿಂದ, ಪ್ರತಿ ಎಕರೆಯ ಉತ್ಪಾದನೆ ಕಡಿಮೆ ಪ್ರಮಾಣದಾಗಿರುತ್ತದೆ. ಸರಕಾರ ಹೆಚ್ಚಿಗೆ ಆಸಕ್ತಿವಹಿಸಿ ಕೃಷಿ ಅಭಿವೃದ್ಧಿಗಾಗಿ ಹಲವಾರು ವಿಧದಲ್ಲಿ ಸಹಾಯ ಮಾಡಿದರೆ ಮಾತ್ರ, ಇವರ ಬೇಸಾಯ ಆರ್ಥಿಕವಾಗಿ ಒಳ್ಳೆಯ ಗುಣಮಟ್ಟದಾಗುತ್ತದೆ. ವಾಸ್ತವದಲ್ಲಿ, ಸರಕಾರ ರೈತರನ್ನು ಕಾಳಜಿಯಿಂದ ನೋಡಿಕೊಳ್ಳುತ್ತಿಲ್ಲ.

ಬೇಡ ರೈತರು ಭೂಮಿಯ ಸಾಗುವಳಿ ಅಲ್ಲದೆ, ಪಶುಸಂಗೋಪನೆಯಲ್ಲಿಯೂ ಆಸಕ್ತಿಯನ್ನು ಇಟ್ಟುಕೊಂಡಿರುತ್ತಾರೆ. ಹೈನುಗಾರಿಕೆಯಲ್ಲಿ ಆಸಕ್ತಿ ಹೊಂದಿರುವ ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಪಶು ಸಂಗೋಪನೆ ಇಲಾಖೆಯ ವತಿಯಿಂದ ಹಾಲು ಕರೆಯುವ ಹಸು ಅಥವಾ ಎಮ್ಮೆ ಘಟಕ, ಕುರಿ ಮತ್ತು ಮೇಕೆ ಘಟಕ ಇತ್ಯಾದಿಗಳ ಯೋಜನೆಗಳು ಇದ್ದರೂ, ಇವುಗಳಿಂದ ಇವರಿಗೆ ಯಾವ ಅನುಕೂಲವಾಗಿಲ್ಲ.

ಸಾಲ ಬೇಡುವವರ ಸಂಖ್ಯೆ ಹೆಚ್ಚಿದೆ ಮತ್ತು ಅವರೆಲ್ಲರ ಸಾಲದ ಅವಶ್ಯಕತೆಗೆ ಈ ಸಂಸ್ಥೆಗಳು ಸ್ಪಂದಿಸಿಲ್ಲ. ಆದರಲ್ಲೂ ಅತಿ ಸಣ್ಣ ರೈತರಿಗೆ ಮತ್ತು ಸಣ್ಣ ರೈತರಿಗೆ ಸಾಂಘಿಕ ಮೂಲಗಳು ಸಾಲವನ್ನು ಹೆಚ್ಚಾಗಿ ಕೊಡುತ್ತಿಲ್ಲ.

ರಾಜ್ಯ ಸರಕಾರ ಹಳ್ಳಿಗಳಲ್ಲಿ ಇಂತಹ ಶಾಲೆಗಳನ್ನು ಹೆಚ್ಚಾಗಿ ತೆಗೆಯುತ್ತಿದ್ದರೂ, ಬೇಡ ಸಮುದಾಯ ವಾಸವಾಗಿರುವ ಊರುಗಳಲ್ಲಿ/ಹಳ್ಳಿಗಳಲ್ಲಿ ಇವುಗಳ ಕೊರತೆಯಿದೆ. ಕೆಲವೊಂದು ಕಡೆ ಶಾಲೆಗಳು ಇವೆ. ಆದರೆ, ಭೋದನೆ ಮಾಡಲು ಅರ್ಹ ಶಿಕ್ಷಕರಿಲ್ಲ. ಉಳಿದೆಡೆಗಳಲ್ಲಿ ಶಾಲೆಗಳಿವೆ, ಆದರೆ ಆ ಶಾಲೆಯನ್ನು ಮುಟ್ಟಲು ಒಳ್ಳೆಯ ರಸ್ತೆಗಳಿಲ್ಲ. ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲೆ ಮತ್ತು ಹಳ್ಳಿಗಳಿಗೆ ಸಂಪರ್ಕವನ್ನು ಏರ್ಪಡಿಸುವ ರಸ್ತೆ ಇವೆರಡು ಮೂಲಭೂತ ಸೌಲಭ್ಯಗಳು. ಇಂತಹ ಸೌಲಭ್ಯಗಳಿಂದ ಬೇಡ ಬುಡಕಟ್ಟಿನವರು ವಂಚಿತರಾಗಿದ್ದಾರೆ.

ಅಧಿಕಾರಿಗಳ ನಿರ್ಲಕ್ಷ್ಯದಿಂದ ಹಲವು ಕುಟುಂಬಗಳಿಗೆ ಈ ಯೋಜನೆಗಳಿಂದ ಲಾಭವಾಗಿಲ್ಲ. ಇನ್ನು ಮುಂದಾದರೂ, ಇವುಗಳ ಅಡಿಯಲ್ಲಿ ಹೆಚ್ಚು ಸೌಲಭ್ಯಗಳು ಬೇಡ ಕುಟುಂಬಗಳಿಗೆ ಸಿಗುವಂತಾಗಬೇಕು.
ಕೆಲವರ ಮನೆಗಳಿಗೆ ವಿದ್ಯುತ್ ಸೌಕರ್ಯವನ್ನು ಒದಗಿಸಿ ಕೊಡಲಾಗಿದೆ. ಆದರೆ, ಇದು ಅತಿ ಕಡಿಮ ಪ್ರಮಾಣದಲ್ಲಿರುವುದರಿಂದ, ಸರಕಾರ ಹೆಚ್ಚಿಗೆ ಕಾಳಜಿ ವಹಿಸಿ ಹೆಚ್ಚು ಹೆಚ್ಚು ಮನೆಗಳಿಗೆ ವಿದ್ಯುತ್ ಸೌಲಭ್ಯ ಆದಷ್ಟು ಬೇಗನೆ ಒದಗಿಸಬೇಕು.

ಸರಕಾರವು ಶಿಷ್ಯವೇತನದ ಸೌಲಭ್ಯವನ್ನು ಒದಗಿಸಿದರೂ, ಮೇಲ್ಜಾತಿಯ ಶಾಲಾ ಶಿಕ್ಷಕರು, ಬೇಡರ ಶಾಲಾ ಮಕ್ಕಳಿಗೆ ಶಿಷ್ಯವೇತನ ಬಾರದಂತೆ ನೋಡಿಕೊಳ್ಳುತ್ತಿದ್ದಾರೆ. ಇದೊಂದು ಅಪರಾಧ, ಇದನ್ನು ಕೂಡಲೇ ತಡೆಗಟ್ಟಬೇಕಾಗಿದೆ. ತುಲನಾತ್ಮಕವಾಗಿ ಮಹಾವಿದ್ಯಾಲಯಗಳಲ್ಲಿ ಓದುತ್ತಿರುವ ಮಕ್ಕಳಿಗೆ ಹೆಚ್ಚು ಶಿಷ್ಯವೇತನ ದೊರಕಿದೆ. ಆದರೂ, ಇದು ಶೇ. ೧೦೦ರಷ್ಟು ಇಲ್ಲ.

ಬೇಡ ಬುಡಕಟ್ಟಿನವರಿಗೆ ತಮ್ಮ ಊರಲ್ಲಿಯೇ ವೈದ್ಯಕೀಯ ಸೌಲಭ್ಯ ಸಿಗುತ್ತಿಲ್ಲ. ಈ ಸೌಲಭ್ಯಕ್ಕಾಗಿ ಅವರು ಹತ್ತಾರು ಕಿಲೋಮೀಟರ್ ದೂರವಿರುವ ಹಳ್ಳಿಗಳಿಗೆ ಹೋಗಬೇಕಾಗುತ್ತದೆ. ವೈದ್ಯಕೀಯ ಸೌಲಭ್ಯ ಮೂಲಭೂತ ಸೌಲಭ್ಯಗಳಲ್ಲಿ ಒಂದಾಗಿದೆಯಾದರೂ ಇದು ಈ ಬುಡಕಟ್ಟಿನವರಿಗೆ ಲಭ್ಯವಾಗದೆ ಇರುವುದು ಒಂದು ಶೋಜನೀಯ ಸಂಗತಿಯಾಗಿದೆ.

ನಮ್ಮ ಬೇಡ ಬುಡಕಟ್ಟಿನವರ ಈ ಕುಟುಂಬಗಳಿಗೆ ಸಾಗುವಳಿ ಮಾಡಲು ಭೂಮಿಯಿರುವುದಿಲ್ಲ. ಇವರೆಲ್ಲರೂ ಕೃಷಿ ಮತ್ತು ಕೃಷಿಯೇತರ ಕಾರ್ಮಿಕರಾಗಿ ತಮ್ಮ ಜೀವನವನ್ನು ನಡೆಸುತ್ತಿದ್ದಾರೆ. ಆದರೆ, ಇವರಿಗೆ ತಮ್ಮದೆಯಾದ ಜಮೀನನ್ನು ಹೊಂದಿ ವ್ಯವಸಾಯ ಮಾಡುವ ಉತ್ಕಟ ಇಚ್ಛೆಯಿದೆ. ಕರ್ನಾಟಕ

ಸರಕಾರ ೧೯೭೫ರಲ್ಲಿ ಕರ್ನಾಟಕ ಪರಿಶಿಷ್ಟ ಜಾತಿ; ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮವನ್ನು ಸ್ಥಾಪಿಸಿ ನಿಗಮದ ವತಿಯಿಂದ ರಾಜ್ಯದ ಕೆಲವೊಂದು ಜಿಲ್ಲೆಗಳಲ್ಲಿ ಪರಿಶಿಷ್ಟ ವರ್ಗಕ್ಕೆ ಸೇರಿಲ್ಲದ ಜನರಿಂದ ಭೂಮಿ ಖರೀದಿಸಿ, ಪರಿಶಿಷ್ಟ ವರ್ಗದ ಅರ್ಹ ಫಲಾನುಭವಿಗಳಿಗೆ ಅದನ್ನು ಹಂಚಿದೆ. ಆದರೆ, ಈ ಯೋಜನೆ ಬೀದರ ಜಿಲ್ಲೆಯಲ್ಲಿ ಅನುಷ್ಠಾನಕ್ಕೆ ಬಂದಿರುವುದಿಲ್ಲ.

ಗ್ರಾಮಂತರ ಪ್ರದೇಶಗಳಲ್ಲಿ ಪರಿಶಿಷ್ಟ ಪಂಗಡದ ಕಾಲೋನಿಗಳಿಗೆ ಕುಡಿಯುವ ನೀರಿನ ವ್ಯವಸ್ಥೆಗಾಗಿ ಸರಕಾರ 'ಗ್ರಾಮೀಣ ನೀರು ಪೂರೈಕೆ ಯೋಜನೆ'ಯು ಹಲವಾರು ಊರುಗಳಲ್ಲಿ ಇಂತಹ ಒಂದು ವ್ಯವಸ್ಥೆಯನ್ನು ನೋಡಿರುವೆ. ಆದರೂ, ಘೊಟ್ಟಾಳವಾಡಿ, ಯಳವಂತಿಗಿ, ಬಕ್ಕನಾಳ, ಗುಂಡೂರು ಮುಂತಾದ ಹಳ್ಳಿಗಳಿಗೆ ಈ ನೀರು ಪೂರೈಸುವ ಯೋಜನೆ ಸಮರ್ಪಕವಾಗಿ ಅನುಷ್ಟಾನಕ್ಕೆ ಬಂದಿಲ್ಲ. ಆದಷ್ಟು ತೀವ್ರ ನೀರಿನ ಸೌಲಭ್ಯವನ್ನು ಒದಗಿಸಿ ಕೊಡುವುದು ಅತ್ಯಾವಶ್ಯಕವಾಗಿದೆ. ನಮ್ಮ ಮೂರನೆಯ ಊಹೆಯಾದ 'ಸರಕಾರದ ನೆರವಿನ ಯೋಜನೆಗಳಿಂದ ಬೇಡರಿಗೆ ಅಷ್ಟೊಂದು ಪ್ರಯೋಜನವಾಗಿಲ್ಲ' ಎಂಬುದನ್ನು ರುಜುವಾತು ಪಡಿಸಲಾಗಿದೆ.

ಪ್ರೌಢ ಶಾಲೆ ಅಥವಾ ಕಾಲೇಜು ಶಿಕ್ಷಣವನ್ನು ಮುಗಿಸಿ ಉದ್ಯೋಗ ಇರಲಾರದೆ ಸುಮ್ಮನೆ ಕಾಲಹರಣ ಮಾಡುತ್ತಿರುವ ಪರಿಶಿಷ್ಟ ಪಂಗಡದ ಯುವಕರಿಗೆ ಸ್ವಯಂ ಉದ್ಯೋಗ ಕೈಕೊಳ್ಳಲು ಸಹಕಾರಿಯಾಗುವಂತೆ ರಾಜ್ಯ ಸರಕಾರ ಬಡಿಗತನ, ಬಿದಿರು, ಬೆತ್ತದ ವೃತ್ತಿಗಳಲ್ಲಿ ತರಬೇತಿ ನೀಡುತ್ತಿದೆ. ವಾಸ್ತವದಲ್ಲಿ ಬೀದರ ಜಿಲ್ಲೆಯಲ್ಲಿನ ಬೇಡ ಸಮುದಾಯದ ನಿರುದ್ಯೋಗಿ ಯುವಕರಿಗೆ ಇಂತಹ ಯೋಜನೆಗಳು ಅನುಷ್ಠಾದಲ್ಲಿ ಇಲ್ಲಿಯವರೆಗೆ ಬಂದಿರುವುದಿಲ್ಲ. ಇನ್ನು ಮುಂದಾದರೂ ಬರಲೇಬೇಕಾಗಿದೆ.

ಕರ್ನಾಟಕದಲ್ಲಿ ಹಿಂದುಳಿದ ಜಿಲ್ಲೆಯಾದ ಬೀದರನಲ್ಲಿ ಮತ್ತು ವಿಶೇಷವಾಗಿ, ಶೈಕ್ಷಣಿಕವಾಗಿ, ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಆಡಳಿತ ವರ್ಗ ಸರಕಾರಿ ಯೋಜನೆಗಳ ಬಗೆಗೆ ಅರಿವು ಮೂಡಿಸುವ ಸುದೀರ್ಘ ಕಾರ್ಯಕ್ರಮಗಳು ಹಾಕಿಕೊಳ್ಳಬೇಕಾಗಿದೆ. ಉದಾಹರಣೆಗೆ, 'ಗಂಗಾಕಲ್ಯಾಣ ಯೋಜನೆ'ಯಡಿಯಲ್ಲಿ ಕಡುಬಡವರಿಗೆ ಸಹಾಯಕವಾಗುವಂತೆ ಈ ಹಿಂದೆ ಕೊಳವೆ ಬಾವಿ ಯೋಜನೆಯಡಿಯಿದ್ದ ಬಾವಿಗಳ ಮಧ್ಯ ಇರಬೇಕಾದ ಅ) ಕನಿಷ್ಠ ಅಂತರ ಮತ್ತು ಬ) ಕಪ್ಪು ಕ) ಗ್ರೇ ಎಂಬ ಪ್ರದೇಶದ ಬಗೆಗಿನ ನಿಯಮವನ್ನು ಸಡಿಲಿಸಿರುವುದು, ಈ ಯೋಜನೆಯಡಿ ನೀಡಲಾಗುವ ಕೇಸಿಂಗ್ ಪೈಪು, ಪಂಪುಸೆಟ್, ಪೈಪಲೈನ್ ಮತ್ತು ಇತರೆ ಸಾಮಗ್ರಿಗಳ ಗುಣಮಟ್ಟ ಕಾಯ್ದುಕೊಳ್ಳಲಾಗುವುದು ಇತ್ಯಾದಿ ವಿವರಗಳ ಬಗೆಗೆ ಈ ಬುಡಕಟ್ಟಿನವರಿಗೆ ಮಾಹಿತಿಯೇ ಇಲ್ಲ.

ಬೇಡ ಸಮುದಾಯದವರನ್ನು ಆರ್ಥಿಕವಾಗಿ ಮುಂದೆ ತರಲು ನೀಡಲಾದ ಸಲಹೆಗಳು

೧. ಜಾತಿ ಪ್ರಮಾಣ ಪತ್ರವನ್ನು ನೀಡುವ ವಿಧಾನವನ್ನು ಸರಳೀಕರಿಸುವುದು.

೨. ಮೇಲ್ಜಾತಿ ಸರಕಾರಿ ಅಧಿಕಾರಿಗಳು ಕೆಲವೊಮ್ಮೆ ಕಾಯ್ದೆ-ಕಾನೂನುಗಳನ್ನು ತಪ್ಪಾಗಿ ಅರ್ಥೈಸುತ್ತಾರೆ; ಇದು ಕೂಡಲೇ ನಿಲ್ಲಬೇಕು.

೩. ರಾಜ್ಯದ ಉಳಿದ ಜಿಲ್ಲೆಯಲ್ಲಿ ಈಗಾಗಲೇ ನೀಡಿರುವಂತೆ ಬೀದರ ಜಿಲ್ಲೆಯ ಬೇಡ ಸಮುದಾಯಕ್ಕೆ ಖುಷ್ಕಿ ಮತ್ತು ತರಿ (ನೀರಾವರಿ) ಜಮೀನನ್ನು ಖರೀದಿಸಿ ವ್ಯವಸಾಯ ಮಾಡಲು ನೀಡಬೇಕು. ಈ ಸಮುದಾಯ ಜನರು ವ್ಯವಸಾಯ ಮಾಡುವ ಉತ್ಕಟೇಚ್ಛೆ ಹೊಂದಿರುವುದರಿಂದ ತಡಮಾಡದೆ ಈ ಒಂದು ನಿಟ್ಟಿನಲ್ಲಿ ಪ್ರಗತಿಯನ್ನು ಸಾಧಿಸಬೇಕು.

೪. ನಿರುದ್ಯೋಗ ಯುವಕರಿಗೆ ಸರಕಾರಿ ಸ್ವಾಮ್ಯದ ಸಾರ್ವಜನಿಕ ಉದ್ದಿಮೆಗಳಲ್ಲಿ ವಿವಿಧ ಟ್ರೇಡ್‌ಗಳಲ್ಲಿ ತರಬೇತಿ ನೀಡಿ ಉದ್ಯೋಗಾವಕಾಶ ಒದಗಿಸಬೇಕು.

೫. ಹಲವಾರು ಬೇಡ ಯುವಕರು ಎಸ್.ಎಸ್.ಎಲ್.ಸಿ. ಮತ್ತು ಬಿ.ಎ. ತೇರ್ಗಡೆ ಹೊಂದಿ ನೌಕರಿಯಿಲ್ಲದೆ ಖಾಲಿ ಕುಳಿತ್ತಿರುತ್ತಾರೆ. ಇವರಿಗೆ ಬೆರಳಚ್ಚು ಹಾಗೂ ಶೀಘ್ರಲಿಪಿಯಲ್ಲಿ ತರಬೇತಿ ಕೊಡಬೇಕು. ಹೀಗೆ ಮಾಡುವುದರಿಂದ ಅವರಿಗೆ ನೌಕರಿ ತೀವ್ರವಾಗಿ ಸಿಗುತ್ತವೆ.

೬. ವೈದ್ಯಕೀಯ ಹಾಗೂ ತಾಂತ್ರಿಕ ಕಾಲೇಜುಗಳಲ್ಲಿ ಕಡ್ಡಾಯವಾಗಿ ಇಂತಿಷ್ಟು ಬೇಡ ಪಂಗಡದವರನ್ನು ತೆಗೆದುಕೊಳ್ಳಲೇಬೇಕೆಂಬ ಕಾಯ್ದೆ ಸರಕಾರ ಮಾಡಬೇಕು. ಕಾಯ್ದೆ ಇದ್ದರು ಇದನ್ನು ಅನುಷ್ಠಾನದಲ್ಲಿ ತಂದಿರುವುದಿಲ್ಲ. ಇನ್ನು ಮುಂದೆ ವಿಳಂಬವಾಗುವುದಕ್ಕೆ ಅವಕಾಶ ಕೊಡಬಾರದು.

೭. ಅನುದಾನ ಪಡೆಯುತ್ತಿರುವ ಖಾಸಗಿ ಕಾಲೇಜು ಮತ್ತು ಮಹಾವಿದ್ಯಾಲಯಗಳಲ್ಲಿ 'ಎಸ್.ಟಿ.' ಬ್ಯಾಕ್‌ಲಾಗನ್ನು ವಿಳಂಬ ಮಾಡದೆ ತುಂಬಬೇಕು.

೮. ಇವರಿಗೆ ಅನುಕೂಲವಾಗುವಂತೆ ವಿವಿದೋದ್ದೇಶ ಸಹಕಾರಿ ಸಂಘಗಳು ಜಿಲ್ಲೆಯಲ್ಲಿ ಪ್ರಾರಂಭಿಸಬೇಕು. ಈಗಾಗಲೇ ಸಮಗ್ರ ಗಿರಿಜನ ಅಭಿವೃದ್ಧಿ ಯೋಜನಾ ಪ್ರದೇಶಗಳಾದ ಮೈಸೂರು, ಚಾಮರಾಜ ನಗರ, ಕೊಡಗು, ದಕ್ಷಿಣ ಕನ್ನಡ, ಉಡುಪಿ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಸಹಕಾರಿ ತತ್ವದ ಆಧಾರದ ಮೇಲೆ ೧೯ ಗಿರಿಜನ ದೊಡ್ಡ ಪ್ರಮಾಣದ ವಿವಿದೋದ್ದೇಶ ಸಹಕಾರಿ ಸಂಘಗಳು (Lamps) ಕಾರ್ಯ ನಿರ್ವಹಿಸುತ್ತಿವೆ.

೯. ಸಾಮಾಜಿಕ ಭದ್ರತಾ ಯೋಜನೆಯನ್ನು ಅನುಷ್ಠಾನದಲ್ಲಿ ತರಬೇಕು.

ಆಧಾರ ಗ್ರಂಥಗಳು

ಭಾಗ ೧: ಕನ್ನಡ ಗ್ರಂಥಗಳು:

೧. ಮೇತ್ರಿ ಕೆ.ಎಂ. (೧೯೯೭) 'ಬೀದರ ಜಿಲ್ಲಾ ದರ್ಶನ' ಕನ್ನಡ ಸಾಹಿತ್ಯ ಪರಿಷತ್ತು, ಬೀದರ, ಪು. ೧೧೮-೧೨೫.

೨. ಮೇತ್ರಿ ಕೆ.ಎಂ. (೧೯೯೭) 'ಬೀದರ ಜಿಲ್ಲಾ ದರ್ಶನ' ಕನ್ನಡ ಸಾಹಿತ್ಯ ಪರಿಷತ್ತು, ಬೀದರ, ಪು. ೧೧೮-೧೧೮-೧೨೫.

೩. ಲಕ್ಕಪ್ಪ ಗೌಡ ಎಚ್.ಜೆ. (ಸಂಪಾದನೆ) ಕರ್ನಾಟಕದ ಬುಡಕಟ್ಟುಗಳು (ಸಂಪುಟ ೧) ಕರ್ನಾಟಕ ಜನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು, ೧೯೯೮.

೪. ಮೈತ್ರಿ ಕೆ.ಎಮ್. 'ಬೀದರ ಜಿಲ್ಲೆಯ ಗೊಂಡ ಆದಿವಾಸಿ ಸಮುದಾಯ: ಒಂದು ಸಮಾಜಶಾಸ್ತ್ರೀಯ ಅಧ್ಯಯನ' ೧೯೯೪, ಮೈಸೂರ ವಿಶ್ವವಿದ್ಯಾಲಯ ಮೈಸೂರು.

೫. ಮೈತ್ರಿ ಕೆ.ಎಮ್. 'ಬೀದರ ಜಿಲ್ಲೆಯ ಗೊಂಡ ಆದಿವಾಸಿ ಸಮುದಾಯ: ಒಂದು ಸಮಾಜಶಾಸ್ತ್ರೀಯ ಅಧ್ಯಯನ' ೧೯೯೪, ಮೈಸೂರ ವಿಶ್ವವಿದ್ಯಾಲಯ ಮೈಸೂರು.

೬. ಶಂಕರ ನಾರಾಯಣ ತೀ. ನಂ. 'ಕಾಡುಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆಗಳು'(ಮೈಸೂರು: ಮೈಸೂರು ವಿಶ್ವವಿದ್ಯಾಲಯ, ಪ್ರಸಾರಾಂಗ, ೧೯೮೨).

೭. ಹರ್ತಿಕೋಟೆ ವೀರೇಂದ್ರ, 'ನಾಯಕ ಜನಾಂಗದ ಪರಂಪರೆ', ವಾಲ್ಮೀಕ ಕಿರಣ, ಪು. ೨೭-೩೨.

೮. ಕೃಷ್ಣಮೂರ್ತಿ ಹನೂರು, ಮ್ಯಾಸ ಬೇಡರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೩, ಪು. ೭೮೫-೮೧೫.

೯. ಕರಿಶೆಟ್ಟಿ ರುದ್ರಪ್ಪ, ಮ್ಯಾಸಿನಾಯಕರು ಒಂದು ಜನಾಂಗೀಕ ಅಧ್ಯಯನ, ೧೯೮೨, ಅಧ್ಯಾಯ-೧, ಪು. ೧.

೧೦. ಕರಿಶೆಟ್ಟಿ ರುದ್ರಪ್ಪ, ಮ್ಯಾಸನಾಯಕರು ಒಂದು ಜನಾಂಗಿಕ ಅಧ್ಯಯನ, ೧೯೮೨, ಅಧ್ಯಾಯ-೧, ಪು. ೭-೮.

೧೧. ಲಕ್ಕಪ್ಪಗೌಡ ಎಚ್.ಜೆ., ಕರ್ನಾಟಕದ ಬುಡಕಟ್ಟುಗಳು, ಸಂಪುಟ ೧. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು, ೧೯೯೮.

೧೨. ಸೂರ್ಯನಾಥ ಯು. ಕಾಮತ್, ೧೯೮೮೪, ೪೫೭-೪೫೮.

೧೩. ಕರಿಶೆಟ್ಟಿ ರುದ್ರಪ್ಪ, ಮ್ಯಾಸಿನಾಯಕರು ಒಂದು ಜನಾಂಗೀಕ ಅಧ್ಯಯನ, ೧೯೮೨, ಅಧ್ಯಾಯ-೧, ಪು. ೧.

೧೪. ಮೈತ್ರಿ ಕೆ.ಎಂ., ಬೀದರ ಜಿಲ್ಲೆಯ ದರ್ಶನ, ೧೯೯೭, ಪು. ೧೧೮-೧೨೫.

೧೫. ರಂಗರಾಜ ವನದುರ್ಗ, ವಾಲ್ಮೀಕಿ ಕಿರಣ, ೧೯೯೮, ದಾವಣಗೆರೆ, ೧೯೯೮, ಪು. ೫೮-೬೧.

೧೬. ರಂಗರಾಜ ವನದುರ್ಗ, ವಾಲ್ಮೀಕಿ ಕಿರಣ, ೧೯೯೮, ದಾವಣಗೆರೆ, ೧೯೯೮, ಪು. ೫೮-೬೧.

೧೭.ಹರ್ತಿಕೋಟೆ ವಿರೇಂದ್ರಸಿಂಹ, ನಾಯಕ ಜನಾಂಗದ ಪರಂಪರೆ, ವಾಲ್ಮೀಕಿ ಕಿರಣ, ೧೯೯೮, ದಾವಣಗೆರೆ.

೧೮.ಕೃಷ್ಣಮೂರ್ತಿ ಹನೂರು, ಮ್ಯಾಸ ಬೇಡರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೩.

೧೯.ಕೃಷ್ಣಮೂರ್ತಿ ಹನ್ನೂರು, ಮ್ಯಾಸ ಬೇಡರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೩, ಪು. ೭೮೭-೮೮.

೨೦.ಹರ್ತಿಕೋಟೆ ವೀರೇಂದ್ರ ಸಿಂಹ, ನಾಯಕ ಜನಾಂಗದ ಪರಂಪರೆ, ವಾಲ್ಮೀಕಿ ಕಿರಣ, ೧೯೯೮, ಪು. ೨೭-೩೨.

೨೧.ಕೃಷ್ಣಮೂರ್ತಿ ಹನೂರು, ಮ್ಯಾಸಬೇಡರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ೧೯೯೩, ಪು. ೩೨.

೨೨.ಕೃಷ್ಣಮೂರ್ತಿ ಹನೂರು, ಮ್ಯಾಸಬೇಡರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ೧೯೯೩, ಪು. ೨೪-೨೫.

೨೩.ಎಂ. ಚಿದಾನಂದ ಮೂರ್ತಿ, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ-೧೯೬೬, ಪು. ೨೯೫-೨೯೬.

೨೪.ದೇಸಾಯಿ ಪಿ.ಬಿ., ಮದಗಜ ಮಲೆ, ೧೯೭೧, ಪು. ೧೯.

೨೫.ಕೃಷಮೂರ್ತಿ ಹನೂರು, ಮ್ಯಾಸ ಬೇಡರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೩, ಪು. ೩೪-೩೫.

೨೬.ಹರ್ತಿಕೋಟೆ ವಿರೇಂದ್ರ ಸಿಂಹ, ನಾಯಕ ಜನಾಂಗದ ಪರಂಪರೆ, ವಾಲ್ಮೀಕಿ ಕಿರಣ, ೧೯೯೮, ಪು. ೨೭-೩೨.

೨೭.ಹರ್ತಿಕೋಟೆ ವಿರೇಂದ್ರ ಸಿಂಹ, ನಾಯಕ ಜನಾಂಗದ ಪರಂಪರೆ, ವಾಲ್ಮೀಕಿ ಕಿರಣ, ೧೯೯೮, ಪು.೨೭-೩೨.

೨೮.ಎಂ. ಬಿ. ನೇಗಿನಹಾಳ, ಕನ್ನಡ ಸಾಹಿತ್ಯದಲ್ಲಿ ಬೇಡ ಜನಾಂಗ, ವಾಲ್ಮೀಕಿ ಕಿರಣ, ೧೯೯೮, ಪು.೪೭-೫೦.

೨೯.ಕೃಷ್ಣಮೂರ್ತಿ ಹನೂರು, ಮ್ಯಾಸ ಬೇಡರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೩, ಪು. ೮-೯.

೩೦.ಕೃಷ್ಣಮೂರ್ತಿ ಹನೂರು, ಮ್ಯಾಸ ಬೇಡರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೩, ಪು. ೨೨-೨೩.

೩೧.ಜಿ. ಬಸವಂತಪ್ಪಾ, ವಾಲ್ಮೀಕಿ ಕಿರಣ, ೧೯೯೮, ಪು.೩೩-೩೬.

೩೨.ಕರಿಶೆಟ್ಟ ರುದ್ರಪ್ಪ, ಮ್ಯಾಸ ನಾಯಕರು ಒಂದು ಜನಾಂಗಿಕ ಅಧ್ಯಯನ, ೧೯೯೫, ಪು. ೧೭.

೩೩.ಎಂ. ಬಿ. ನೇಗಿನಾಳ ಹರಿತಿಶ್ರೀ, ೧೯೯೬, ಪು. ೩೩೧.

೩೪.ಕೃಷ್ಣಮೂರ್ತಿ ಹನೂರು, ಮ್ಯಾಸ ಬೇಡರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೩, ಪು. ೬೦.

೩೫.ಕಪಟರಾಳ ಕೃಷ್ಣರಾವ, ಸುರಪುರ ಸಂಸ್ಥಾನದ ಇತಿಹಾಸ, ೧೯೭೭, ಪು. ೨೩೮.

೩೬.ಎಂ.ಎಸ್. ಪುಟ್ಟಣ, ಚಿತ್ರದುರ್ಗ ಜಿಲ್ಲೆಯ ಪಾಳೆಯಗಾರರು, ೧೯೨೪.

೩೭.ಹರ್ತಿಕೋಟೆ ವೀರೇಂದ್ರ ಸಿಂಹ, ನಾಯಕ ಜನಾಂಗದ ಪರಂಪರೆ, ವಾಲ್ಮೀಕಿ ಕಿರಣ, ಪು. ೨೭-೩೨.

೩೮.ಕೃಷ್ಣಮೂರ್ತಿ ಹನೂರು, ಮ್ಯಾಸ ಬೇಡರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೩, ಪು. ೨೭೮.

೩೯.ಕೃಷ್ಣಮೂರ್ತಿ ಹನೂರು, ಮ್ಯಾಸ ಬೇಡರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೩, ಪು. ೬೪-೭೫.

೪೦.ಕೃಷ್ಣಮೂರ್ತಿ ಹನೂರು, ಕರ್ನಾಟಕದ ಬುಡಕಟ್ಟುಗಳು, ಸಂಪುಟ ೧. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು, ೧೯೯೮, ಪು. ೭೮೯-೯೦.

೪೧.ಮೈತ್ರಿ ಕೆ.ಎಮ್. 'ಬೀದರ ಜಿಲ್ಲೆಯ ಗೊಂಡ ಆದಿವಾಸಿ ಸಮುದಾಯ: ಒಂದು ಸಮಾಜಶಾಸ್ತ್ರೀಯ ಅಧ್ಯಯನ' ೧೯೯೪, ಪು. ೨೦೯.

೪೨.ಮೈತ್ರಿ ಕೆ.ಎಮ್. 'ಬೀದರ ಜಿಲ್ಲೆಯ ಗೊಂಡ ಆದಿವಾಸಿ ಸಮುದಾಯ: ಒಂದು ಸಮಾಜಶಾಸ್ತ್ರೀಯ ಅಧ್ಯಯನ' ೧೯೯೪ ಪು. ೨೩೧.

೪೩.ಮೈತ್ರಿ ಕೆ.ಎಮ್. 'ಬೀದರ ಜಿಲ್ಲೆಯ ಗೊಂಡ ಆದಿವಾಸಿ ಸಮುದಾಯ: ಒಂದು ಸಮಾಜಶಾಸ್ತ್ರೀಯ ಅಧ್ಯಯನ' ೧೯೯೪ ಪು. ೨೫೨.

೪೪.ಮೈತ್ರಿ ಕೆ.ಎಮ್. 'ಬೀದರ ಜಿಲ್ಲೆಯ ಗೊಂಡ ಆದಿವಾಸಿ ಸಮುದಾಯ: ಒಂದು ಸಮಾಜಶಾಸ್ತ್ರೀಯ ಅಧ್ಯಯನ' ೧೯೯೪.

೪೫.ವಿರೂಪಾಕ್ಷಿ, 'ಮಧ್ಯಕಾಲೀನ ಕನ್ನಡ ಕಾವ್ಯಗಳಲ್ಲಿ ನಿರೂಪಿತವಾಗಿರುವ ಬೇಟೆ ಮತ್ತು ಬೇಡರ ಸಂದರ್ಭಗಳು: ಒಂದು ಚಾರಿತ್ರಿಕ ಅಧ್ಯಯನ', ಚರಿತ್ರೆ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦.

೪೬.ವಕ್ತೃನೊಬ್ಬನ ಜೊತೆ ಮೌಖಿಕ ಸಂದರ್ಶನ - ಈ ವಿಷಯ ರಿರ್ಕಾಡಿಂಗ್ ಮಾಡಲಾಗಿದೆ.

೪೭.ಹುಚ್ಚಪ್ಪ, ಜಿ.ಟಿ. "ಆರ್ಥಿಕ ರಚನೆ" ಅಧ್ಯಯ-೨.

೪೮.ಕಲ್ಲೂರು ಎಮ್.ಎಸ್. "ಒಣ ಬೇಸಾಯ", ಪ್ರಸಾರಂಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, ೧೯.

೪೯.ಕಲ್ಲೂರ ಎಂ. ಎಸ್. ಮತ್ತು ಪ್ರಭಾರ ಶಶೀಲ, ಕೃಷಿ ಅರ್ಥಶಾಸ್ತ್ರ, ಕಲಾ ಪ್ರಕಾಶನ, ಬೆಂಗಳೂರು, ೨೦೦೦, ಪು. ೩೩.

೫೦.ಕೃಷಿ ಉತ್ಪಾದನೆ, ೧೯೯೪-೯೫, ಕೃಷಿ ನಿರ್ದೇಶನಾಲಯ, ಬೆಂಗಳೂರು, ೧೯೯೫, ಪು. ೧.

೫೧.ಚಂದ್ರು ಕಾಳೇನಹಳ್ಳಿ, ಕರ್ನಾಟಕದ ಬುಡಕಟ್ಟುಗಳು, ಸಂಪುಟ-೧, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು, ೧೯೯೮, ಪು. ೩೨೨-೩೮೫.

೫೨.ತೀ. ನಂ. ಶಂಕರನಾರಾಯಣ, ಕಾಡುಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆಗಳು ಒಂದು ವಿವರಣಾತ್ಮಕ ಅಧ್ಯಯನ, (ಅ ಪ್ರಕಟಿತ ಪಿಎಚ್.ಡಿ. ಪ್ರಬಂಧ, ಪು. ೬೭).

೫೩.ಡಿ. ಕೃಷ್ಣ ಅಯ್ಯಂಗರ್ ಪ್ರಬುದ್ಧ ಕರ್ನಾಟಕ ಸಂಪುಟ ೨೬, ಸಂಚಿಕೆ ೨, ಪು. ೪೨.

೫೪.ಮೇತ್ರಿ ಕೆ.ಎಂ. 'ಬೀದರ ಜಿಲ್ಲೆಯ ಗೊಂಡ ಆದಿವಾಸಿ ಸಮುದಾಯ: ಒಂದು ಸಮಾಜಶಾಸ್ತ್ರೀಯ ಅಧ್ಯಯನ' ೧೯೯೪, ಪು. ೨೬೧.

೫೫.ಉದಾಹರಣೆಗೆ 'ನಾಗಲ್ಯಾಂಡ, ತ್ರಿಪುರ, ಮಣಿಪುರ, ನೇಫಾಳ, ಮೀಜೋರಾಂ ಈ ಪ್ರದೇಶಗಳಲ್ಲಿ ವಾಸವಾಗಿರುವ ಎಲ್ಲ ಬುಡಕಟ್ಟುಗಳ ಜನರೂ, ಬಿಹಾರ, ಒರಿಸ್ಸಾ, ಮಧ್ಯ ಪ್ರದೇಶಗಳಲ್ಲಿರುವ ಬಹುಪಾಲು ಬುಡಕಟ್ಟುಗಳ ಜನರೂ ಸ್ಥಳಾಂತರ ಬೇಸಾಯದಿಂದ ಜೀವಿಸುತ್ತಾರೆ' - ತೀ. ನಂ. ಶಂಕರಣನಾರಾಯಣ, ಕಾಡುಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆಗಳು ಒಂದು ವಿವರಣಾತ್ಮಕ ಅಧ್ಯಯನ (ಅಪ್ರಕಟಿತ ಪಿಎಚ್.ಡಿ. ಪ್ರಬಂಧ ಪು. ೬೭).

೫೬.ಇತರ ಆದಿವಾಸಿಗಳು ಸಹ ಈ ರೀತಿ ತಮ್ಮ ಪೂರ್ವಜರ ಅಥವಾ ಇತ್ತೀಚೆಗೆ ಖರೀದಿಸಿದ ಭೂಮಿಯಲ್ಲಿ ವ್ಯವಸಾಯವನ್ನು ಮಾಡುತ್ತಿದ್ದಾರೆ. ವಿವರಗಳಿಗೆ ಕೆ.ಎಂ. ಮೈತ್ರಿ, ಪು. ೨೬೧.

೫೭.ಮೈತ್ರಿ ಕಾಮಣ್ಣಾ, 'ಬೀದರ ಜಿಲ್ಲೆಯ ಗೊಂಡ ಆದಿವಾಸಿ ಸಮುದಾಯ: ಒಂದು ಸಮಾಜಶಾಸ್ತ್ರೀಯ ಅಧ್ಯಯನ' ೧೯೯೪, ಪು. ೨೬೧.

೫೮.ಮೈತ್ರಿ ಕೆ.ಎಂ. 'ಬೀದರ ಜಿಲ್ಲೆಯ ಗೊಂಡ ಆದಿವಾಸಿ ಸಮುದಾಯ: ಒಂದು ಸಮಾಜಶಾಸ್ತ್ರೀಯ ಅಧ್ಯಯನ' ೧೯೯೪, ಪು. ೨೬೩.

೫೯.ಕಲ್ಲೂರ ಎಂ. ಎಸ್. ಮತ್ತು ಪ್ರಭಾಕರ ಶಶೀಲ, 'ಕೃಷಿ ಅರ್ಥಶಾಸ್ತ್ರ', ೨೦೦೦, ಪು. ೨೦೦-೨೦೦೧.

೬೦.ಕರ್ನಾಟಕ ಸರಕಾರ, ಕರ್ನಾಟಕ ಅಂಕಿ-ಅಂಶಗಳ ನೋಟ, ಬೆಂಗಳೂರು, ೧೯೯೬-೯೭.

೬೧.ಕಲ್ಲೂರ ಎಂ.ಎಸ್. ಮತ್ತು ಪ್ರಭಾಕರ ಶಶೀಲ, ಕೃಷಿ ಅರ್ಥಶಾಸ್ತ್ರ, ೨೦೦೦, ಪು. ೨೩೧-೨೩೨.

೬೨.ಕಲ್ಲೂರ ಎಂ. ಎಸ್. ಮತ್ತು ಪ್ರಭಾಕರ ಶಶೀಲ, ಕೃಷಿ ಅರ್ಥಶಾಸ್ತ್ರ, ಕಲಾ ಪ್ರಕಾಶನ, ಬೆಂಗಳೂರು, ೨೦೦೦, ಪು. ೩೬೫.

೬೩.ಕಲ್ಲೂರ ಎಂ. ಎಸ್. ಮತ್ತು ಪ್ರಭಾಕರ ಶಶೀಲ, ೨೦೦೦, ಪು. ೨೨೮-೨೨೯.

೬೪.ಬೀದರ ಜಿಲ್ಲೆಯ ಅಂಕಿ-ಅಂಶಗಳ ನೋಟ, ೧೯೯೮-೯೯.

೬೫.ಕಲ್ಲೂರ ಎಂ.ಎಸ್. ಮತ್ತು ಪ್ರಭಾಕರ ಶಶೀಲ, ಕೃಷಿಯ ಅರ್ಥಶಾಸ್ತ್ರ, ೨೦೦೦, ಪು. ೩೦೨-೩೦೩.

೬೬.ಕಲ್ಲೂರ ಎಂ. ಎಸ್. ಮತ್ತು ಪ್ರಭಾಕರ ಶಶೀಲ, ಕೃಷಿ ಅರ್ಥಶಾಸ್ತ್ರ., ೨೦೦೦, ಪು. ೩೭೫.

೬೭.ಕಲ್ಲೂರ ಎಂ. ಎಸ್. ಮತ್ತು ಪ್ರಭಾಕರ ಶಶೀಲ, ಕೃಷಿ ಅರ್ಥಶಾಸ್ತ್ರ., ೨೦೦೦, ಪು. ೩೭೫.

೬೮.ಮೈತ್ರಿ ಕಾಮಣ್ಣ 'ಬೀದರ ಜಿಲ್ಲೆಯ ಗೊಂಡ ಆದಿವಾಸಿ ಸಮುದಾಯ: ಒಂದು ಸಮಾಜಶಾಸ್ತ್ರೀಯ ಅಧ್ಯಯನ' ೧೯೯೪.

೬೯.ಮೈತ್ರಿ ಕಾಮಣ್ಣ, 'ಬೀದರ ಜಿಲ್ಲೆಯ ಗೊಂಡ ಆದಿವಾಸಿ ಸಮುದಾಯ: ಒಂದು ಸಮಾಜಶಾಸ್ತ್ರೀಯ ಅಧ್ಯಯನ' ೧೯೯೪

೭೦.ವಕ್ತೃ ಕೋಹಿನೂರು ಗ್ರಾಮದವನು.

೭೧.ಶರಣಪ್ಪ ಎಸ್., ವಸಂತ ಗುಮಾಸ್ತ, "ಅಭಿವೃದ್ಧಿ ಅರ್ಥಶಾಸ್ತ್ರ", ನರೇಂದ್ರ ಪ್ರಕಾಶನ, ದಾವಣಗೆರೆ, ೧೯೯೭, ೧೨೫.

೭೨.ಮೈತ್ರಿ ಕೆ. 'ಬೀದರ ಜಿಲ್ಲೆಯ ಗೊಂಡ ಆದಿವಾಸಿ ಸಮುದಾಯ: ಒಂದು ಸಮಾಜಶಾಸ್ತ್ರೀಯ ಅಧ್ಯಯನ' ೧೯೯೪, ಪು. ೨೮೨.

೭೩.ಪ್ರಭಾಕರ ಶಶೀಲ ಮತ್ತು ಕುಮಾರ ಸ್ವಾಮಿ: ಭಾರತೀಯ ಆರ್ಥಿಕತೆಯ ಅಧ್ಯಯನ, ಕಲಾ ಪ್ರಕಾಶನ, ಬೆಂಗಳೂರು, ೧೯೯೯, ಪು. ೧೩೨-೧೩೫.

೭೪.ಪ್ರಭಾಕರ ಶಶೀಲ, ಅರ್ಥಶಾಸ್ತ್ರ ತತ್ವಗಳು, ಕಲಾ ಪ್ರಕಾಶನ, ಬೆಂಗಳೂರು, ೧೯೯೭, ಪು. ೫೩೨-೫೩೫.

೭೫.ಲಕ್ಕಪ್ಪ ಗೌಡ ಎಚ್.ಜೆ. (ಸಂಪಾದನೆ) ಕರ್ನಾಟಕದ ಬುಡಕಟ್ಟುಗಳು (ಸಂಪುಟ ೧) ಕರ್ನಾಟಕ ಜನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು, ೧೯೯೮.

೭೬.ಮೈತ್ರಿ ಕೆ.ಎಮ್. 'ಬೀದರ ಜಿಲ್ಲೆಯ ಗೊಂಡ ಆದಿವಾಸಿ ಸಮುದಾಯ: ಒಂದು ಸಮಾಜಶಾಸ್ತ್ರೀಯ ಅಧ್ಯಯನ' ೧೯೯೪, ಮೈಸೂರ ವಿಶ್ವವಿದ್ಯಾಲಯ ಮೈಸೂರು.

೭೭.ಮೈತ್ರಿ ಕೆ.ಎಮ್. 'ಬೀದರ ಜಿಲ್ಲೆಯ ಗೊಂಡ ಆದಿವಾಸಿ ಸಮುದಾಯ: ಒಂದು ಸಮಾಜಶಾಸ್ತ್ರೀಯ ಅಧ್ಯಯನ' ೧೯೯೪, ಮೈಸೂರ ವಿಶ್ವವಿದ್ಯಾಲಯ ಮೈಸೂರು.

೭೮.ಮೇತ್ರಿ ಕೆ.ಎಂ. (೧೯೯೭) 'ಬೀದರ ಜಿಲ್ಲಾ ದರ್ಶನ' ಕನ್ನಡ ಸಾಹಿತ್ಯ ಪರಿಷತ್ತು, ಬೀದರ, ಪು. ೧೧೮-೧೨೫.

೭೯.ಶಂಕರ ನಾರಾಯಣ ತೀ. ನಂ. 'ಕಾಡುಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆಗಳು'(ಮೈಸೂರು: ಮೈಸೂರು ವಿಶ್ವವಿದ್ಯಾಲಯ, ಪ್ರಸಾರಾಂಗ, ೧೯೮೨).

೮೦.ಹೆಚ್. ದೇವಿಂದ್ರಪ್ಪ, (ಸಂ.) ರಾಮನಾಥ ಚರಿತೆ, ೧೯೬೪, ೮ನೇ ಸಂಧಿ, ೯೬ನೇ ಪದ್ಯ, ಪು. ೧೪೩.

ಭಾಗ ೨: ಇಂಗ್ಲೀಷ ಗ್ರಂಥಗಳು:

1. A.V. Nabadi, "Koregaru", in *Karnataka Budakattugalu. A Collection of research articles pertaining to the tribes of Karnataka*, Chief Editor: Prof. H.J. Lakkappa Gowda, Karnataka Janapada and Yakshagana, Academy, Bangalore, 1998, pp. 268-321.

2. Ambewadikar R.M. (1993) Integrated Rural Deveopment by Disintegrated and inequable society" "Developmental Problems of Schedule Tribes in Karnataka" A paper presented at the *Ist Annual Conference Indian Association for Research and Action on Social Justice*, 24th to 26th Marh, 1993 Organised by Department of Economics, Marathwada University, Aurangabad, *Proceedings of the Conference*.

3. Ananthkrishna Iyer, *The Mysore Tribes and Caste*, Vol. 1, 1935.

4. B.H. Mehta: *Gonds of the Central Indian Highlouds*, Vol. II, Concept Publishing Company, New Delhi, 1984.

5. Bhadur, K.P., *Casts, Tribes and culture of India: Karnataka, Kerala; and Tamil Nadu*, New Delhi: Ess and Ess Publication, 1978.

6. Bicsay and Biesay: quoted in Bajpai, S.R. *Methods of social survey and Research*, Kitob Bhar, Kanpur, Seventh Books.

7. Bose Nirmal Kumar, Fifty years of Science in Indian Progress of Anthropology and Archaeology (Calcutta: Indian Science Congress Association, 1963).

8. D.K. Mohan Rao, *Tribal Development in Andhra Pradesh Problems, Performance and Prospects* (Hyderabad Book Links Corporation 1999) pp. 1.

9. Degeonkar C.K. and Kallur, M.S., A Development plant for Hyderabad Karnataka Region, op. cit., p. 98.

10. Degeonkar, C.K. and Kallur, M.S., A Development Plan for Hyderabad Karnataka Region, 2001.

11. Devayani (1993) "Tribals Educational Constraints" "Developmental Problems of Schedule Tribes in Karnataka" A paper presented at the *Ist Annual Conference Indian Association for Research and Action on Social Justice*, 24th to 26th Marh, 1993 Organised by Department of Economics, Marathwada University, Aurangabad, *Proceedings of the Conference*.

12. Dhruva Basavaraj Jyothi, Social change among the Bedas, A sociological study, (Unpublished thesis), 1999, ಜೋಗನ ಶಂಕರ ಅವರ ವಿದ್ಯಾರ್ಥಿಯದು.

13. Dubey S.C., Indian village, London: Routledge and Kegan Paul, 1959.

14. Edgar Thurston (1975: 001 II: 180).

15. Edward Gorce Man, *The Nicobar Islands and Their People,* 1923.

16. Elwin, V. (1963) A New Deal for Tribal India, New Delhi, Ministry of Home affairs.

17. For details refer Nanavati, M.B., Anjaria, J.J. The Indian Rural Problem, Indian Society of Agriculture Economics, Bombay, 1944, pp.5.

18. Gadgil, D.R., Economics effects of Irrigation - Report of survey of the Director and Indirect, Benefits and Godavari and Prwara conds, Ghokale Institute of Politics and Economics, Pune, 1948, pp. 1-135.

19. Ganghadar K.N. (1994) "Role of voluntary organisation in Tribal Development", M.Phil. Thesis (unpublished), Bangalore University, Bangalore.

20. Government of India, Ministry of Agriculture, Indian Agriculture in Blief, New Delhi, 1976, pp. 27.

21. Government of India, Planning Commission, Eighth Five year, 1992-97, Delhi, 1992 pp. 23.

22. Govt. of India, Indian Agriculture in Brief, 1986, pp. 73.

23. Gunnar Myrdal, *Asian Drama – An Enquiry into the poverty of nations*, Penguin Publishers, 1968, pp. 1702.

24. Hanumantha Rajappa, P., 'Issues in Tribal Development', - A study of selected Tribes in Dakshina Kannada District of Karnataka, op. cit., pp. 123-144.

25. Hanumantha Rayappa (1993) "Issues in Tribal Development" Journal of Rural Development, Vo. 12(2), pp. 123-144.

26. Heggade L.K. *Songs of Gonda Tribe*, 1977.

27. Ibid, , pp. 118-125.

28. Iyer, L.K. A. *The Mysore Tribes and Caste*, Delhi, Mittal Publications, 1988.

29. K. Abhishekar, Karnataka State Gazetter: Raichur District, Bangalore, Govt. Press, 1970 pp. 109.

30. Kabra, Govinda Das (1987) Tribal workers in an Industrial setting, Allahabad, Vohra Publications.

31. Kachroo Vijaya: Society of India, New Delhi, 1990.

32. Kallur, M.S. and Dagaonkar C.K. (1993) "Developmental Problems of Schedule Tribes in Karnataka" A paper presented at the *Ist Annual Conference Indian Association for Research and Action on Social Justice*, 24^{th} to 26^{th} Marh, 1993

Organised by Department of Economics, Marathwada University, Aurangabad, *Proceedings of the Conference*.

33. Kallur, M.S. and Degeonkar C.K., "Socio-economic Bench Mack Survey of Karanja Irrigation Project" op. cit., Vol. III.

34. Kallur, M.S. and Degeonkar C.K., A Development Plant for Hyderabad Karnataka Region, Dept. of Economics, 2001, pp. 66.

35. Kallur, M.S. and Degeonkar C.K., A Development Plant for Hyderabad Karnataka Region, Dept. of Economics, 2001, pp. 68.

36. Kallur, M.S. and Prabhakar Sheshil, op. cit., pp. 230.

37. Kallur, M.S., Irrigation and Economics; Development, Chugh Publications, Allahabad, 1998, pp. 1-296.

38. Khan, Mumtaz Ali (1980) Schedule castes and their states in India: New Delhi; Uppal Publishing House.

39. Krishnyya S.A. *Holi Festival of Kudubis*, Prasanga, RRC No. 14, April, Udti., 1987.

40. L.G. Havanur, 1975, Report of the Second Backward classes Commission (1986) Vol. 2, Bangalore, Govt. of Karnataka.

41. M.V. Kishan Rao and G.S. Halappa: Valmiki Swarna Sanchike (1970) pp. 1-3.

42. Majumdar D.N., 'A Tribe in Transition: A study in culture pattern (London: Longmans Green and Co., 1937).

43. Majumdar, D.N., The Affirs of a Tribes: A study in Tribal Dynamics (Lucknow: Universal Publishers Ltd., 1950).

44. Memoria, C.B., Agricultural Problems of India, 1995, pp. 84.

45. Memoria, C.B., Agricultural Problems of India, Ibid., pp. 84-85.

46. Monier Monier Williams, A Sanskrit English Dictionary, 1986, p. 819.

47. Nambiyar, B.K.Village Survey of Tamilnadu, Sirumali, 1964, pp. 26-27.

48. New Encyclopedia Britanic (Vol. X, 115).

49. Punelekar (1993) "Towards understanding class structure and its linkage with educational situation: A case study of landless Tribals From South Gujarat Region" "Developmental Problems of Schedule Tribes in Karnataka" A paper presented at the *Ist Annual Conference Indian Association for Research and Action on Social Justice*, 24th to 26th Marh, 1993 Organised by Department of Economics, Marathwada University, Aurangabad, *Proceedings of the Conference*.

50. Quoted in Singh and Sadhu, Agricultural Problems in India, Himalaya Publishing House, 1986,

51. Rao, Ravindranath, Y. Social Change Among the Tribals: A case study of Kuduris of Dakshina Kannda Dept. of Sociology, Mangalore University, 1995, (Unpublished Ph.D. Thesis).

52. Report of the Second Backward classes Commission (1986) Vol. 2, Bangalore, Govt. of Karnataka.

53. Robert H. Lowie, *Primitive Society*, 1953.

54. Roy, S.C. 'The Munda their country' (Calcutta: City Bar Agency, 1912).

55. Royal Anthropoligical Institute '*Notes and quaries on Anthropology*' 1954, Page. 66.

56. Sachidananda, *The Changing Munda*, New Delhi; Concept Publishing Co., 1979.

57. Sching, L.D., "Agricultural Problems of Middle East", Journal of Farm Economy, Vol. 35, 1935, pp. 582.

58. Shivashankarnarayan, B. 'Tribes of South India', (೧೯೭೦: ೧೨೦) ಪು. ೧೨೦.

59. Singh and Sadhu, Ibid., pp. 38-39.

60. Singh and Sadhu, Ibid., pp. 39.

61. Sinha, Tribes of India, 1968.

62. Social change among the Bedas, A sociological study, Dhruva Basavaraj Jyothi (Unpublished thesis), 2000.

63. Social change among the Bedas, A sociological study, Dhruva Basavaraj Jyothi (Unpublished thesis), 2000.

64. Social change among the Bedas, A sociological study, Dhruva Basavaraj Jyothi (Unpublished thesis), 2000.

65. Srinivas, M.N. (1962) (Re-Printed) Religion and Society among coorgs of South India, London; J.K. Publishers.

66. Sumitra (1993) "Special Issues in Development of Women SC/ST/OBC", "Developmental Problems of Schedule Tribes in Karnataka" A paper presented at the *Ist Annual Conference Indian Association for Research and Action on Social Justice*, 24th to 26th Marh, 1993 Organised by Department of Economics, Marathwada University, Aurangabad, *Proceedings of the Conference*.

67. Suryanath U. Kamath, Nayaka's of Karnataka, (1982: 466).

68. Tamil Lexicon, Vol. V, 1982, p. 3211.

69. Thurston S.C., Edgar and Rangachari, K. *Castes and Tribes of South India*, Vol. VII (Madras: Government Press, 1909).

70. Vasant (1993) "Synonyms of sub-castes and conditions of Burud" "Developmental Problems of Schedule Tribes in Karnataka" A paper presented at the *Ist Annual Conference Indian Association for Research and Action on Social Justice*, 24th to 26th March, 1993 Organised by Department of Economics, Marathwada University, Aurangabad, *Proceedings of the Conference*.

71. Vidyarthi L.P. Appied Anthropology in India, Allahabad; Kitab Mohal, 1968.

72. W.H. Perry, D.K. Mohan Rao 'Tribal Development in Andhra Pradesh, Problem, performance and prospects (Hydrabad Book Unique, 1999) p. 1.

73. William J. Goode 1965, 'The Family Foundation of Modern Sociology Series' (Delhi: Prentice Hall of India Pvt. Ltd., 1965).

ಬೀದರ ಜಿಲ್ಲೆಯ ಬೇಡ ಬುಡಕಟ್ಟು: ಒಂದು ಅರ್ಥಶಾಸ್ತ್ರೀಯ ಅಧ್ಯಯನ

(INTERVIEW SCHEDULE)

ಸಂದರ್ಶನ ಪಟ್ಟಿ

ಸಮೀಕ್ಷೆಯ ದಿನಾಂಕ ________________

ಸಾಮಾನ್ಯ ಮಾಹಿತಿ

೧. ಹೆಸರು

ಮನೆತನದ ಹೆಸರು ಮನೆ ದೇವರು

೨. ವಿಳಾಸ

೩. ವಯಸ್ಸು

೪. ಲಿಂಗ

೫. ವೈವಾಹಿಕ ಸ್ಥಿತಿ

ಅ. ವಿವಾಹಿತ ಆ. ಅವಿವಾಹಿತ ಇ. ವಿಧುರ ಈ. ವಿಧವೆ

೬. ಶಿಕ್ಷಣ

ಅ. ನಿರಕ್ಷರಿ ಆ. ಪ್ರಾಥಮಿಕ ಇ. ಮಾಧ್ಯಮಿಕ ಈ. ಪ್ರೌಢಶಾಲೆ

ಉ. ಪದವಿ ಪೂರ್ವ ಊ. ಮಹಾವಿದ್ಯಾಲಯ ಊ. ಸ್ನಾತಕೋತ್ತರ

ಋ. ತಾಂತ್ರಿಕ ೠ. ವೈದ್ಯಕೀಯ ಎ. ಇತರೆ

೭. ಜನ್ಮ ಸ್ಥಳ

ಅ. ಹಳ್ಳಿ ಆ. ತಾಲೂಕು ಇ. ಹೊಬಳಿ

೮. ನೀವು ವಲಸೆ ಬಂದಿರುವಿರೊ? ಹೌದು/ಇಲ್ಲ

ಅ. ಒಂದು ವೇಳೆ ಬಂದಿದ್ದರೆ ಎಲ್ಲಿಂದ ಬಂದಿರಿ?

ಆ. ಯಾವಾಗ ಬಂದಿರಿ?

ವಸತಿ ಸೌಕರ್ಯಗಳು

೯. ಮನೆಯ ಮಾದರಿ

ಅ. ಗುಡಾರ ಆ. ಗುಡಿಸಲು ಇ. ಟಿನ್ ಮನೆ ಈ. ಧಾಬಾ (ಮಾಳಿಗೆ)

ಉ. ಆರ್.ಸಿ.ಸಿ. ಮನೆ ಊ. ಹೆಂಚಿನ ಮನೆ

೧೦. ಕುಟುಂಬದ ವಿಧ

ಅ. ಅವಿಭಕ್ತ ಕುಟುಂಬ   ಆ. ವಿಭಕ್ತ ಕುಟುಂಬ

ಕಸುಬುಗಳ-ವ್ಯವಸಾಯ ಇತ್ಯಾದಿ

೧೧. ಉದ್ಯೋಗ

ಅ. ಕೃಷಿ   ಆ. ಕೃಷಿ ಕಾರ್ಮಿಕ   ಇ. ಕೃಷಿಯೇತರ ಕಾರ್ಮಿಕ   ಈ. ವ್ಯಾಪಾರಿ

ಉ. ಶಿಕ್ಷಕ   ಊ. ಸರಕಾರಿ ಸೇವಕ   ಋ. ಸೈನಿಕರು

ೠ. ಪೋಲಿಸರು   ಎ. ಕುರಿ ಆಡು (ಮೇಕೆ) ಸಾಕಾಣಿಕೆ   ಏ. ಇತರೆ

ಬೀದರ ಜಿಲ್ಲೆ ಪಕ್ಷಿ ನೋಟ

೧೨. ಕುಟುಂಬದ ಸದಸ್ಯರ ವಿವರಗಳು

ಹೆಸರು	ಸಂಬಂಧ	ಲಿಂಗ	ವೈವಾಹಿಕ ಸ್ಥಾನಮಾನ	ಶಿಕ್ಷಣಿಕ ಮಟ್ಟ

೧೩. ನೀವು ಬೇಟೆಯಾಡುವವರೆ? ಹೌದು/ಇಲ್ಲ

ಕುಟುಂಬ ಯೋಜನೆಯ ಬಗ್ಗೆ ಅರಿವು

೧೪. ಕುಟುಂಬದ ಯೋಜನೆಯ ಬಗ್ಗೆ ನಿಮಗೆ ತಿಳಿದಿದೆಯೇ? ಹೌದು/ಇಲ್ಲ

೧೫. ಯಾವ ತರಹದ ಕುಟುಂಬದ ಯೋಜನೆಯ ಪದ್ಧತಿಯನ್ನು ನೀವು ಅನುಸರಿಸುತ್ತೀರಿ?

೧೬. ನಿಮಗೆ ಕುಟುಂಬ ಯೋಜನೆಯ ಬಗ್ಗೆ ತಿಳುವಳಿಕೆ ನೀಡಿದವರು ಯಾರು?

ಅ. ಗೆಳೆಯರು   ಆ. ಸಂಬಂಧಿಕರು   ಇ. ಸರಕಾರಿ ಮೂಲಗಳು

ಈ. ದಿನ ಪತ್ರಿಕೆ/ರೇಡಿಯೋ   ಉ. ಇಲ್ಲ

೧೭. ನಿಮಗೆ ಗಂಡು ಮಗು ಬೇಕೇ ಬೇಕು ಎನ್ನುತ್ತೀರೇ? ಹೌದು/ಇಲ್ಲ

ಮಕ್ಕಳ ಶಿಕ್ಷಣ

೧೮. ಮಕ್ಕಳನ್ನು ಶಾಲೆಗೆ ಕಳುಹಿಸುತ್ತಿರೋ ಅಥವಾ ಇಲ್ಲವೋ?

೧೯. ಶಾಲೆಗೆ ಕಳುಹಿಸದಿರುವ ಕಾರಣಗಳೇನು?

೧. ಬಡತನ
೨. ಮನೆ ಕೆಲಸಕ್ಕೆ ಬೇಕು
೩. ಶಾಲೆ ಹತ್ತಿರದಲ್ಲಿ ಇಲ್ಲ
೪. ಹುಡುಗಿ ಋತುಮತಿ ಯಾಗಿದ್ದಾಳೆ
೫. ಆಸಕ್ತಿ ಇಲ್ಲ
೬. ಕಳಪೆ
೭. ಹಳ್ಳಿಯಲ್ಲಿ ಇರಲು ಇಚ್ಚಿಸುವುದಿಲ್ಲ
೮. ಉತ್ತರ ನೀಡದಿರುವವುದು

೨೦. ಶಾಲಾ ಮಕ್ಕಳಿಗೆ ವಿವಿಧ ರೀತಿಯಲ್ಲಿ ಶಿಕ್ಷಣದ ಸೌಲತ್ತನ್ನು ಕೊಡುತ್ತಾರೆ ಎನ್ನುವುದನ್ನು ನಿಮಗೆ ಗೊತ್ತಿದೆಯೋ ಅಥವಾ ಇಲ್ಲವೋ?

೨೧. ಜಾತಿ ಪ್ರಮಾಣ ಪತ್ರ ಸರಳವಾಗಿ ಸಿಗುತ್ತದೆಯೋ ಅಥವಾ ಇಲ್ಲವೋ?

೨೨. ಮೇಲಿನ ಪ್ರಮಾಣ ಪತ್ರ ಸಿಗದಿರಲೂ ಕಾರಣಗಳೇನು

೨೩. ಬೇಡ ಸಮುದಾಯವನ್ನು ಪರಿಶಿಷ್ಟ ಪಂಗಡದಲ್ಲಿ ಒಂದೆಂದು ಪರಿಗಣಿಸಲಾಗಿದೆಯೋ - ಈ ವಿಷಯ ಗುರುತ್ತಿದೆಯೋ ಅಥವಾ ಇಲ್ಲವೋ?

ರಾಜಕೀಯ ಪ್ರಜ್ಞೆ

೨೪. ನೀವು ಯಾವುದಾದರೂ ರಾಜಕೀಯ ಪಕ್ಷದ ಸದಸ್ಯರಾಗಿರೋ ಅಥವಾ ಇಲ್ಲವೋ?

೨೫. ಒಂದು ವೇಳೆ ಪಕ್ಷವನ್ನು ಸೇರಿದರೆ ಆ ಪಕ್ಷದ ಹೆಸರೇನು?

೨೬. ಹಿಂದಿನ ಸಾರ್ವತ್ರಿಕ ಅಥವಾ ಸ್ಥಾನೀಯ ಚುನಾವಣೆಯಲ್ಲಿ ಮತವನ್ನು ಚಲಾಯಿಸುವಿರೋ ಅಥವಾ ಇಲ್ಲವೋ?

೨೭. ಯಾವ ಪಕ್ಷಕ್ಕೆ ನಿಮ್ಮ ಮತವನ್ನು ನೀಡಿದ್ದೀರಿ?

೨೮. ಏತಕ್ಕಾಗಿ ಆ ಪಕ್ಷಕ್ಕೆ ಮತವನ್ನು ನೀಡಿದ್ದೀರಿ?

೨೯. ರಾಜಕೀಯವನ್ನು ಸೇರಿ ಯಶಸ್ವಿಯಾಗುವಲ್ಲಿ ಈ ಕೆಳಗೆ ನೀಡಿದ ಯಾವುದಾದರೂ ಒಂದಕ್ಕೆ ಗುರುತು ಹಾಕಿರಿ

ಅ. ಬಲಿಷ್ಠ ಪಕ್ಷ ಆ. ಹಣದ ಉಪಯೋಗ ಇ. ಇತರೆ

೩೦. ನೀವು ಜಿಲ್ಲೆಯ/ತಾಲೂಕು/ಹಳ್ಳಿಯ ಪಂಚಾಯತ ಸದಸ್ಯರ ಇರುವಿರೋ ಅಥವಾ ಇಲ್ಲವೋ?

೩೧. ಒಂದು ವೇಳೆ ಇದ್ದರೆ, ಯಾವ ವರ್ಷದಲ್ಲಿ ಇದ್ದೀರಿ? ಯಾವ ಮಟ್ಟದಲ್ಲಿ ನೀವು ಅಧಿಕಾರವನ್ನು ಹೊಂದಿದ್ದಿರಿ?

ಸರ್ಕಾರದ ಯೋಜನೆಗಳ ಬಗೆಗಿನ ತಿಳುವಳಿಕೆ

೩೨. ಪರಿಶಿಷ್ಠ ಪಂಗಡದವರಿಗೆ ಹಲವಾರು ರೀತಿಯ ನೆರವು ನೀಡಲು ವಿವಿಧ ಸರಕಾರದ ಯೋಜನೆಗಳಿವೆ ಇವುಗಳನ್ನು ನೀವು ಬಲ್ಲಿರಾ?

೩೩. ರಾಜ್ಯದ ಇತರ ಜಿಲ್ಲೆಗಳಿಗೆ ಹೋಲಿಸಿದಾಗ, ನಮ್ಮ ಜಿಲ್ಲೆಯಲ್ಲಿ ಸರಕಾರ ನಿಮಗೆ ನೆರವಾಗುವ ಹಲವಾರು ಯೋಜನೆಗಳನ್ನು ಅನುಷ್ಠಾನದಲ್ಲಿ ತಂದಿಲ್ಲ. ಈ ವಿಷಯವನ್ನು ನೀವು ಬಲ್ಲಿರಾ?

ಅ. ಹೌದು ಆ. ಇಲ್ಲ

೩೪. ನಿಮಗೆ ಈ ಕೆಳಗಿನ ಸರಕಾರಿ ಸೌಲಭ್ಯಗಳಲ್ಲಿ ಯಾವುದು ದೊರೆತಿದೆ

ಅ. ವಿಧವಾ ಪಿಂಚಣಿ ಆ. ಅಂಗವಿಕಲ ಇ. ವೃದ್ಧಾಪ್ಯ ಈ. ಶಿಷ್ಯವೇತನ

ಉ. ಪಡಿತರ ಚೀಟಿ ಊ. ಮನೆ ಊ. ವಿದ್ಯುತ್ ಸೌಕರ್ಯ

೩೫. ನೀವು ವರದಕ್ಷಿಣೆ ತೆಗೆದುಕೊಳ್ಳುವುದನ್ನು ಸಮರ್ಥಿಸುವಿರಾ?

ಅ. ಹೌದು ಆ. ಇಲ್ಲ

ವ್ಯವಸಾಯ (ಬೆಳೆಗಳು)

೩೬. ನೀವು ಯಾವ ಬೆಳೆಗಳನ್ನು ಬೆಳೆಯುತ್ತೀರಿ?

ಅ. ಹೈಬ್ರಿಡ್ ಜೋಳ ಆ. ಸಜ್ಜೆ ಇ. ಕಣಮುಕ್ಟಾನ ಜೋಳ ಈ. ಹೆಸರು

ಉ. ಉದ್ದು ಊ. ತೊಗರಿ ಋ. ಭತ್ತ ೠ. ಕಬ್ಬು

ಎ. ಸೂರ್ಯಪಾನ ಏ. ಎಳ್ಳು ಐ. ಅಲ್ಲ ಒ. ಬಿಳಿ ಜೋಳ

ಓ. ನೆಲಗಡಲೆ ಔ. ಕಾಯಿಪಲ್ಲೆ ಅಂ. ಕುಸುಬೆ

೩೭. ಕೃಷಿ ಉದ್ದೇಶಕ್ಕಾಗಿ ಸಾಲವನ್ನು ನೀವು ತೆಗೆದುಕೊಂಡಿರುವಿರಾ?

ಅ. ಹೌದು ಆ. ಇಲ್ಲ

೩೮. ಒಂದು ವೇಳೆ ತೆಗೆದುಕೊಂಡರೆ ಸಾಂಘಿಕ ಮೂಲವನ್ನು ಹೇಳಿ?

ಅ. ವಾಣಿಜ್ಯ ಬ್ಯಾಂಕಗಳು

ಆ. ಸರಕಾರಿ ಬ್ಯಾಂಕುಗಳು

ಇ. ಸಾಹಕಾರರು

ಈ. ವ್ಯಾಪಾರಿಗಳು

ಉ. ಸಂಬಂಧಿಕರು

ಊ. ಗೆಳೆಯರು

೩೯. ಕೆಳಗಿನ ಯಾವ ಉದ್ದೇಶಕ್ಕಾಗಿ ನೀವು ಸಾಲ ಪಡೆದಿರುವಿರಿ?

ಅ. ಭೂಮಿಯನ್ನು ಕೊಳ್ಳಲು

ಆ. ಬೀಜ/ಗೊಬ್ಬರ ಇತ್ಯಾದಿಗಳನ್ನು ಕೊಳ್ಳಲು

ಇ. ಬಾವಿ ತೋಡಿಸಲು

ಈ. ಪಂಪಸೆಟ್‌ನ್ನು ಕೊಳ್ಳಲು

ಉ. ಮನೆಯ ವೆಚ್ಚಕ್ಕಾಗಿ

ಊ. ಇತರೆ

೪೦. ನೀವು ಬೆಳೆದ ಪದಾರ್ಥಗಳನ್ನು ಮಾರಾಟ ಮಾಡುವಿರೋ ಅಥವಾ ಇಲ್ಲವೋ?

ಆದಾಯ-ಉಪಭೋಗ

೪೧. ನಿಮ್ಮ ವಾರ್ಷಿಕ ಆದಾಯ ಎಷ್ಟು

೪೨. ಒಟ್ಟು ಆದಾಯವನ್ನು ನೀವು ಹೇಗೆ ವೆಚ್ಚ ಮಾಡುವಿರಿ?

ಅ. ಆಹಾರದ

ಆ. ಬಟ್ಟೆಗಳ

ಇ. ಮಕ್ಕಳ ಶಿಕ್ಷಣದ

ಈ. ಕುಡಿತದ

ಉ. ಹಬ್ಬ ಹರಿದಿನಗಳ ಆಚರಣೆ

ಊ. ಇತರೆ

೪೩. ನೀವು ಉಳಿತಾಯ ಮಾಡುವಿರೋ ಅಥವಾ ಇಲ್ಲವೋ?

೪೪. ನಿಮ್ಮ ಹಳ್ಳಿಗೆ ಒಳ್ಳೆಯ ರಸ್ತೆ ಇದೆಯೋ?

೪೫. ನಿಮ್ಮ ಹಳ್ಳಿಯಲ್ಲಿ ವೈದ್ಯಕೀಯ ಸೌಲಭ್ಯವಿದೆಯೋ ಅಥವಾ ಇಲ್ಲವೋ?

೪೬. ವೈದ್ಯಕೀಯ ಸೌಲಭ್ಯವನ್ನು ಪಡೆಯಲು ಎಷ್ಟು ದೂರ ಪ್ರಯಾಣ ಮಾಡಬೇಕು?

೪೭. ಸರಕಾರದಿಂದ ನೀವು ಯಾವ ಸೌಲತ್ತುಗಳನ್ನು ಬಯಸುವಿರಿ?

೪೮. ನೀವೇನಾದರೂ ಶಿಕ್ಷಣ ಸಂಸ್ಥೆಗಳನ್ನು ನಡೆಸುವಿರಾ? ಹೌದು/ಇಲ್ಲ

೪೯. ಕೃಷಿಯ ಕೆಳಗೆ ನಮೂದಿಸದ ಉಪಕರಣಗಳಲ್ಲಿ ಯಾವ ಉಪಕರಣಗಳು ನಿಮ್ಮಲ್ಲಿ ಇವೆ?

ಅ. ಬಂಡಿ ಆ. ಟ್ರಾಕ್ಟರ್ ಇ. Duster ಈ. Harvester ಉ. ಹಗ್ಗಗಳು ಊ. ನೇಗಿಲು

ಋ. ಕುರುಪಿ ೠ. ಮಡಿಕೆ ಎ. ಕುರುಪಿ ಏ. ಕೊಡ್ಲಿ ಐ. ಇತರೆ

೫೦. ಕೆಳಗೆ ನೀಡಿದ ಗ್ರಾಹಕರ ಬಾಳಿಕೆ ವಸ್ತುಗಳಲ್ಲಿ ಯಾವ ವಸ್ತುಗಳು ನಿಮ್ಮಲ್ಲಿ ಇವೆ

ಅ. ಸೈಕಲ್ ಆ. ಸ್ಕೂಟರ್ ಇ. ಜೀಪ ಈ. ಕಾರು ಉ. ರೇಡಿಯೋ ಊ. ಟೇಪ ರಿಕಾರ್ಡರ್

ಋ. ದೂರದರ್ಶನ ೠ. ವ್ಹಿ.ಸಿ.ಆರ್. ಎ. ವ್ಹಿ.ಸಿ.ಪಿ. ಏ. ಟೆಲಿಫೋನ್ ಐ. ಫ್ರಿಝ್

ಒ. ವಾಷಿಂಗ ಮಷಿನ್ ಓ. ಲಾರಿ ಔ. ಇತರೆ

೫೧. ನಿಮ್ಮ ಮನೆಯಲ್ಲಿ ಯಾವ ತರಹದ ಪಾತ್ರೆಗಳನ್ನು ಉಪಯೋಗಿಸುತ್ತೀರಿ ?

ಅ. ಮಣ್ಣಿನ ಆ. ಅಲುಮಿನಿಯಂ ಇ. ಸ್ಟೀಲ್

ದ್ವೀತಿಯ ರಂಗದಲ್ಲಿ ಭಾಗವಹಿಸುವಿಕೆ

೫೨. ನೀವೇನಾದರೂ ಸಣ್ಣ ಕಾರ್ಖಾನೆ ತೆಗೆದಿರುವಿರಾ? ಹೌದು/ಇಲ್ಲ

ತೃತೀಯ ರಂಗದಲ್ಲಿ ಭಾಗವಹಿಸುವಿಕೆ

೫೩. ನೀವು ಯಾವುದಾದರೂ ಸಾರಿಗೆ ಸಂಸ್ಥೆಯನ್ನು ಹೊಂದಿರುವಿರಾ?

ಅ. ಹೌದು ಆ. ಇಲ್ಲ



ಬಸವಕಲ್ಯಾಣ ತಾಲೂಕಿನ ಕೋಹಿನೂರ ಗ್ರಾಮದಲ್ಲಿನ ದಳಪತಿ ಕಾಶಿನಾಥ ಬಸವಣಪ್ಪಾ ಅವರ ಪುತ್ರನ ವಿವಾಹ ಚಿತ್ರ.



ಕೋಹಿನೂರ ವಾಡಿಯ ಗ್ರಾಮದಲ್ಲಿ ವಕ್ತೃನೊಬ್ಬನ ಜೊತೆ ಸಂದರ್ಶನ.



ಆನಂದವಾಡಿ (ಜಾಜನಮುಗಳಿ ವಾಡಿ) ಗ್ರಾಮದಲ್ಲಿನ ಕೋಳಿ ತಂಗುವ ಗುಡಾರಿನ ಚಿತ್ರ.



ಆನಂದವಾಡಿ (ಜಾಜನಮುಗಳಿ ವಾಡಿ) ಗ್ರಾಮದಲ್ಲಿನ ಮೊಲ ಸಾಕಾಣಿಕೆದಾರನ ಮತ್ತು ಮೊಲ ತಂಗುವ ಬುಟ್ಟಿಯ ಚಿತ್ರ.







ಆನಂದವಾಡಿ (ಜಾಜನಮುಗಳಿ ವಾಡಿ) ಗ್ರಾಮದಲ್ಲಿನ ಆಡು (ಮೇಕೆ) ಕಾಯುವ ಹುಡುಗನ ಚಿತ್ರ.



ಬಸವಕಲ್ಯಾಣ ತಾಲೂಕಿನ ಬಟಗೇರಾ ವಾಡಿ ಗ್ರಾಮದಲ್ಲಿನ ಹಿರಿಯ ವಕ್ತೃನೊಬ್ಬನ ಜೊತೆ ಸಂದರ್ಶನ ಮತ್ತು ರಿಕಾರ್ಡಿಂಗ್ ಒಂದು ಚಿತ್ರ.



ಘೋಟ್ಟಾಳ ಗ್ರಾಮದ ಆಡು (ಮೇಕೆ) ಸಾಕುವವರ ಕೊಟ್ಟಿಗೆಯ ಚಿತ್ರ.



ಬಸವಕಲ್ಯಾಣ ತಾಲೂಕಿನ ಲಾಡವಂತಿ ಗ್ರಾಮದಲ್ಲಿನ ಬೇಡರ ಕಣ್ಣಪ್ಪನ ಮೂರ್ತಿಯ ಚಿತ್ರ.